# ರಾಮಾಯಣಮ್

## ಅಯೋಧ್ಯಾಕಾಂಡಃ

## ಪೂರ್ವಾರ್ಧಃ

(ಕನ್ನಡ ಅನುವಾದ ಸಹಿತ)

ನಾಲ್ಕನೇ ಮುದ್ರಣ - ೧೯೯೭

ಹಕ್ಕುಗಳನ್ನು ಕಾದಿರಿಸಲಾಗಿದೆ
All rights reserved

ರೂ. 60/-
(ಅರವತ್ತು ರೂಪಾಯಿಗಳು)

ಮುದ್ರಣಕಾರರು
ಆದಿತ್ಯ ಪ್ರಿಂಟರ್ಸ್
29, 1ನೇ 'ಬಿ' ಮುಖ್ಯರಸ್ತೆ, ಲಾಲ್‌ಬಾಗ್ ರಸ್ತೆ, ಸುದಾಮನಗರ
ಬೆಂಗಳೂರು-560 027 ✱ ದೂರವಾಣಿ : 22 75 712

# ಅರಿಕೆ

ಬೆಂಗಳೂರು ನರಸಿಂಹರಾಜ ಕಾಲೋನಿಯಲ್ಲಿರುವ ಶ್ರೀನರಸಿಂಹರಾಜ ಕಾಲೋನಿ ಅಸೋಸಿಯೇಷನ್‌ನವರು ಶ್ರೀಮದ್ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಅನುವಾದಿಸಿ, ಮೂಲ ಸಹಿತವಾಗಿ ಪ್ರಕಟಿಸಬೇಕೆಂದು ನಿರ್ಧರಿಸಿದರು. ಇದೊಂದು ಶ್ರೀರಾಮನ ಸೇವೆಯೆಂದು ಭಾವಿಸಿ, ಈ ಉದ್ದೇಶದಿಂದ ರಾಮಾಯಣ ಪ್ರಕಾಶನ ಸಮಿತಿಯೊಂದನ್ನು ರಚಿಸಿದರು. ಸಮಿತಿಯವರ ಪ್ರಾರ್ಥನೆಯಂತೆ ವಿದ್ವಾನ್ ಎನ್. ರಂಗನಾಥ ಶರ್ಮಾ ಅವರು ಶ್ರೀಮದ್ರಾಮಾಯಣದ ಎಲ್ಲ ಕಾಂಡಗಳನ್ನೂ ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ. ಈ ಅನುವಾದ ಶೈಲಿಯನ್ನು ಮೆಚ್ಚಿ ಸುಪ್ರಸಿದ್ಧ ಸಾಹಿತಿಗಳಾದ ಡಾ| ಡಿ. ವಿ. ಗುಂಡಪ್ಪನವರು ಎಲ್ಲ ಕಾಂಡಗಳಿಗೂ ಪ್ರತ್ಯೇಕವಾದ ಮುನ್ನುಡಿಗಳನ್ನು ಕೃಪೆಯಿಂದ ಬರೆದುಕೊಟ್ಟಿದ್ದಾರೆ. ಈ ಎಲ್ಲ ಕಾಂಡಗಳೂ ಕನ್ನಡ ನಾಡಿನಲ್ಲಿ ಜನರೆಲ್ಲರ ಪ್ರಶಂಸೆಯನ್ನು ಗಳಿಸಿದ್ದರಿಂದ, ಇವೆಲ್ಲವೂ ಹಲವಾರು ಮುದ್ರಣಗಳನ್ನು ಕಂಡವೆಂದು ತಿಳಿಸಲು ಸಂತೋಷವಾಗುತ್ತದೆ.

ಮುದ್ರಣ ಕಾರ್ಯವನ್ನು ಶೀಘ್ರವಾಗಿ ಹಾಗೂ ದೋಷಗಳಿಲ್ಲದೆ, ಅಂದವಾಗಿ ಮುದ್ರಿಸಿದ ಆದಿತ್ಯ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಕೆ. ಸಿ. ಪ್ರಕಾಶ್ ಇವರಿಗೆ ಸಮಿತಿಯು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಕಾಗದ ಮತ್ತು ಮುದ್ರಣಗಳ ವೆಚ್ಚವು ಅಧಿಕವಾದ್ದರಿಂದ ಅನಿವಾರ್ಯವಾಗಿ ಪುಸ್ತಕಗಳ ಬೆಲೆಯನ್ನು ಹೆಚ್ಚಿಸಬೇಕಾಯಿತು. ಸಹೃದಯರಾದ ಶ್ರೀರಾಮಭಕ್ತರು ಎಂದಿನಂತೆ ನಮ್ಮನ್ನು ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇವೆ.

ಬೆಂಗಳೂರು.
22-10-1996

## ಸಮಿತಿ ಸದಸ್ಯರುಗಳು

ಶ್ರೀ ಬಿ. ಕೆ. ಅನಂತರಾಮಯ್ಯ
ಶ್ರೀ ಎಸ್. ಎನ್. ಮೂರ್ತಿ
ಶ್ರೀ ಎಚ್. ಸುಬ್ರಹ್ಮಣ್ಯ ಜೋಯಿಸ್
ಶ್ರೀ ಡಿ. ಬಿ. ನಾರಾಯಣರಾವ್
ಶ್ರೀ ಕೆ. ಎನ್. ವೆಂಕಟನಾರಾಯಣ
ಶ್ರೀ ಎಚ್. ಎಸ್. ಶಿವಶಂಕರ
ಶ್ರೀ ಎಚ್. ಎಸ್. ಶಂಕರನಾರಾಯಣ್

# ಮುನ್ನುರಿಕೆ

ಶ್ರೀ ಸೀತಾರಾಮರ ಕೃಪಾಬಲದಿಂದ ನಮ್ಮ ಸ್ನೇಹಿತರು ಸಂಕಲ್ಪಿಸಿದ ಶ್ರೀಮದ್ರಾಮಾಯಣ ಪ್ರಕಟನಕಾರ್ಯವು ಈವರೆಗೆ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ :

(೧) ಮೊದಲು ಸುಂದರಕಾಂಡವು ಜನವರಿ ೧೯೬೫ರಲ್ಲಿ ಪ್ರಕಟವಾಯಿತು.

(೨) ಎರಡನೆಯದಾಗಿ ಬಾಲಕಾಂಡವು ಮಾರ್ಚಿ ೧೯೬೬ರಲ್ಲಿ ಪ್ರಕಟವಾಯಿತು

(೩) ಅಯೋಧ್ಯಾಕಾಂಡದ ಪೂರ್ವಾರ್ಧ ಈಗ ಪ್ರಕಟವಾಗುತ್ತಿದೆ.

(೪). ಅಯೋಧ್ಯಾಕಾಂಡದ ಉತ್ತರಾರ್ಧ ಕೆಲವು ತಿಂಗಳೊಳಗಾಗಿ ಪ್ರಕಟವಾಗುವ ಭರವಸೆಯಿದೆ.

ರಾಮಾಯಣದ ಏಳು ಕಾಂಡಗಳಲ್ಲಿ ಯುದ್ಧಕಾಂಡವನ್ನು ಬಿಟ್ಟರೆ ಅಯೋಧ್ಯಾಕಾಂಡವೇ ಬಹಳ ದೊಡ್ಡದು. ಪುಸ್ತಕ ಬೇಕೆಂದು ಕೇಳುವವರು ಅವಸರಪಡಿಸುತ್ತಿರುವುದರಿಂದಲೂ ಕೈ ಹಿಡಿತದ ಸೌಕರ್ಯವನ್ನು ಯೋಚಿಸಿಯೂ ಈ ಕಾಂಡವನ್ನು ಎರಡು ಸಂಪುಟಗಳಾಗಿ ಪ್ರಕಟಗೊಳಿಸುವುದು ಉಚಿತವೆಂದು ತೋರಿತು.

ಪ್ರಕಟನಾಕಾರ್ಯ ಉಪಕ್ರಮವಾದಂದಿನಿಂದ ಈವರೆಗೆ ದೇಶದ ಆರ್ಥಿಕ ಸ್ಥಿತಿ ಮತ್ತಷ್ಟು ಕೆಟ್ಟಿದೆ. ಒಂದು ಕಡೆ ಕಾಗದದ ಬೆಲೆಯೂ ಮುದ್ರಣದ ವೆಚ್ಚವೂ ಹೆಚ್ಚಿ ಹಣದ ಜವಾಬ್ದಾರಿ ಪ್ರಕಾಶಕರಿಗೆ ಇಮ್ಮಡಿಯಾಗಿದೆ. ಇನ್ನೊಂದು ಕಡೆ ಗ್ರಾಹಕರ ಸ್ಥಿತಿಯೂ ದುರ್ಬಲವಾಗಿದೆ. ಆಹಾರವಸ್ತುಗಳ ಬೆಲೆಗಳು, ಇತರ ಜೀವನಸಾಮಗ್ರಿಯ ವೆಚ್ಚ - ಇವು ಒಂದಕ್ಕೆ ನಾಲ್ಕಾಗಿವೆ. ಹೀಗೆ ಉಭಯತ್ರ ಕಷ್ಟವಾಗಿದೆ.

ಆದರೂ, ದೇಹಜೀವನಕ್ಕೆ ಅನ್ನವಸ್ತ್ರಗಳು ಹೇಗೋ ಆತ್ಮದ ಜೀವನಕ್ಕೆ ರಾಮಾಯಣ ಭಾರತಗಳು ಹಾಗೆ ಅವಶ್ಯ ಸಾಮಗ್ರಿಗಳಾಗಿರುತ್ತವೆ. ಈ

ನಂಬಿಕೆಯಿಂದ ಪ್ರಕಾಶಕರು ಮುಂದುವರಿಯುತ್ತಿದ್ದಾರೆ. ಅವರ ಉತ್ಸಾಹವನ್ನು ಸಫಲಗೊಳಿಸುವುದು ಮಹಾಜನರ ಮೇಲಿರುವ ಕರ್ತವ್ಯಭಾರ.

ಅಯೋಧ್ಯಾಕಾಂಡವನ್ನು ಶ್ರೀಮದ್ರಾಮಾಯಣದ ಹೃದಯಾಂಗಣ ವೆನ್ನಬಹುದು. ಇಲ್ಲಿ ಶ್ರೀರಾಮನ ಯೌವರಾಜ್ಯಕ್ಕೆ ವಿಘ್ನ ಬಂದದ್ದು ಮೊದಲು ಶ್ರೀರಾಮನ ಅರಣ್ಯವಾಸದ ಪ್ರಾರಂಭದವರೆಗಿನ ಕಥೆಯಿರುತ್ತದೆ. ಈ ಕಥಾಭಾಗದಲ್ಲಿ ಹೃದಯವಿದ್ರಾವಕವಾದ ಘಟನೆಗಳು ನಾಲ್ಕಾರು ನಡೆಯುತ್ತವೆ. ಈ ಘಟನೆಗಳು ಶ್ರೀರಾಮನಿಗೂ ಸೀತಾದೇವಿಗೂ ಭರತ ಲಕ್ಷ್ಮಣರಿಗೂ ದಶರಥ ಕೌಸಲ್ಯೆ ಸುಮಿತ್ರೆಯರಿಗೂ ಸಹ ಒದಗಿದ ಧರ್ಮಪರೀಕ್ಷೆಗಳನ್ನು ನಮ್ಮ ಕಣ್ಣಮುಂದೆ ತರುತ್ತವೆ. ಗ್ರಂಥವನ್ನೋದುತ್ತ ಆಯಾ ಸಂದರ್ಭಪಾತ್ರಗಳಲ್ಲಿ ತನ್ಮಯರಾದರೆ ದುಃಖಾವೇಗದಿಂದ ಎದೆಯುಕ್ಕಿ ಕಣ್ಣೀರು ಬರುವುದನ್ನು ಯಾವ ಸಾಮಾನ್ಯ ಮನುಷ್ಯರೂ ತಡೆಯಲಾಗದು.

ವಾಲ್ಮೀಕಿಗಳ ಕಾವ್ಯವನ್ನು ನೋಡಹೊರಡುವವರಿಗೆ ಒಂದು ಎಚ್ಚರಿಕೆ ಅವಶ್ಯವಾಗಿದೆ. ವಾಲ್ಮೀಕಿಗಳು ಹೇಳುವುದು ಕಥೆಯನ್ನಲ್ಲ, ಕಾವ್ಯವನ್ನು. ಕಥೆಯ ಸಂಗತಿಗಳಿಗಿಂತ ಬೇರೆಯಾದ, ಅದಕ್ಕಿಂತ ಹೆಚ್ಚಿನ ಒಂದು ಸೂಕ್ಷ್ಮದ್ರವ್ಯ ಕಾವ್ಯದಲ್ಲಿರುತ್ತದೆ. ಅದನ್ನು ಒಟ್ಟಿನಲ್ಲಿ ರಸ ಎಂದು ಹೇಳಬಹುದು. ಇನ್ನೂ ವಿಶದಪಡಿಸಬೇಕಾದರೆ ಭಾವ ಎನ್ನಬಹುದು; ಭಾವಧ್ವನಿ ಎನ್ನಬಹುದು. ಇಂಗ್ಲಿಷಿನಲ್ಲಿ "Reading between the lines" ಎಂದು ಹೇಳುವುದುಂಟು ಧ್ವನಿತಾರ್ಥವನ್ನು. ಬರೆಹದ ಅಥವಾ ಅಚ್ಚಾದ ಪದಪಂಕ್ತಿಗಳಲ್ಲಿ ಇರುವುದಕ್ಕಿಂತ ಆ ಪಂಕ್ತಿಗಳ ಒಂದು ಸಾಲಿಗೂ ಇನ್ನೊಂದಕ್ಕೂ ನಡುವೆ ಹುದುಗಿಕೊಂಡಿರುತ್ತದೆ ಒಂದು ವಿಶೇಷ ಭಾವಶಕ್ತಿ. ಅದನ್ನು ನಾವು ಜಾಗರೂಕತೆಯಿಂದ ಕಂಡುಕೊಂಡು ಗ್ರಹಿಸಿದಾಗ ನಮ್ಮ ಕಾವ್ಯಪಾಠ ಸಾರ್ಥಕವಾಗುತ್ತದೆ.

ವಾಲ್ಮೀಕಿಗಳ ಬರವಣಿಗೆ ಮೇಲ್ನೋಟಕ್ಕೆ ಸುಲಭವೆನಿಸುತ್ತದೆ. ಅವರ ಮಾತುಗಳು ಸಾಮಾನ್ಯ ಬಳಕೆಯವು ಅವರ ವಾಕ್ಯರಚನೆ ಸರಳವಾದದ್ದು. ಅದರ ಓಟ ಸುಂದರವಾದದ್ದು. ಹೀಗೆ ಕಷ್ಟ ಕೊಡದೆ ಲಲಿತವಾದ ಧಾಟಿಯಲ್ಲಿ ಓಡುತ್ತದೆ ಅವರ ಕಾವ್ಯ. ಆದದ್ದರಿಂದ ನಾವು ಮೇಲ್ಮೇಲೆ ಸುಲಭವಾದದ್ದನ್ನು ಮಾತ್ರ ಕಂಡು

ತೃಪ್ತರಾಗಿ ಆಳವಾಗಿರುವುದನ್ನು ಮರೆಯುವ ಅಪಾಯವುಂಟು. ಈ ವಿಷಯದಲ್ಲಿ ನಾವು ಜಾಗರೂಕರಾಗಿರಬೇಕು. ಅಗ್ಗದ ಕಥೆ ಕಾದಂಬರಿಗಳನ್ನು ಓದುವ ಲಘುಮನೋಭಾವದಿಂದ ವಾಲ್ಮೀಕಿಗಳ ಕಾವ್ಯವನ್ನು ನೋಡತಕ್ಕದಲ್ಲ. ವಾಲ್ಮೀಕಿಗಳ ಮಾತಿನ ಅಕ್ಷರಸೌಂದರ್ಯದಲ್ಲಿ ಅರ್ಥದ ಆಳವಿದೆ. ನಾವು ಸುಂದರವಾದ ಮೇಲ್ಮುಖವನ್ನು ನೋಡಿ ಗಂಭೀರವಾದ ಅರ್ಥಸತ್ತ್ವವನ್ನು ಮರೆತರೆ ತೆಂಗಿನಕಾಯ ಹಸಿರುತೊಗಟೆಯ ಮೇಲ್ನುಣುಪಿಗೆ ಮನಸೋತು ಒಳಗಿನ ಕೊಬರಿಯನ್ನು ಬಿಟ್ಟಂತೆ ಆಗುತ್ತದೆ.

ಅಯೋಧ್ಯಾಕಾಂಡದ ಪಟ್ಟಾಭಿಷೇಕವಿಘ್ನದ ಪ್ರಕರಣದಲ್ಲಿ (ಸರ್ಗ ೮, ೯) ಮಂಥರೆ-ಕೈಕೇಯಿಯರ ಸಂವಾದವು ನೋಡತಕ್ಕದ್ದಾಗಿದೆ. ವಾಲ್ಮೀಕಿಗಳು ಅಲ್ಲಿ ನಮ್ಮನ್ನು ಬಾಯಾರ ನಗಿಸುತ್ತಾರೆ. ಕೈಕೇಯಿಗೆ ಮಂಥರೆ ಮೊದಮೊದಲು ಇಷ್ಟವಾಗಲಿಲ್ಲ. ಮಂಥರೆ ಕೈಕೇಯಿಯ ಸ್ವಾರ್ಥವನ್ನು ಕೆರಳಿಸುತ್ತಾಳೆ. ಆಗ ಹುಟ್ಟಿ ಹರಿಯುತ್ತದೆ ನೋಡಿ ಮಂಥರೆಯ ವಿಷಯದಲ್ಲಿ ಶ್ಲಾಘನೆ ತರಂಗತರಂಗವಾಗಿ ಕೈಕೇಯಿಯ ಬಾಯಿಂದ (ಪುಟ ೭೦-೭೩). ಅನಂತರ ದಾರುಣವಾದ ಪ್ರಸಂಗಗಳು : ದಶರಥ-ರಾಮರ ಮಾತುಕಥೆ, ಕೌಸಲ್ಯೆ-ಸುಮಿತ್ರೆಯರ ಶೋಕಸಾಂತ್ವನಗಳು, ಲಕ್ಷ್ಮಣನ ಆವೇಶ, ಶ್ರೀರಾಮನ ಸಮಚಿತ್ತತೆ, ಸೀತಾದೇವಿಯ ವೀರವ್ರತನಿಷ್ಠೆ - ಈ ವೀಚೀಪರಂಪರೆ.

ವಾಲ್ಮೀಕಿಗಳ ಭಾವಗರ್ಭಿತವಾದ ವಾಕ್ಪ್ರಕಾರಕ್ಕೆ ಒಂದು ಉದಾಹರಣೆ : ದಶರಥನು ರಾಮವನವಾಸದ ಪ್ರಸ್ತಾವವನ್ನು ಶ್ರೀರಾಮನಿಗೆ ತಿಳಿಸಬೇಕಾಗಿ ಬಂದಾಗ ಶ್ರೀರಾಮನನ್ನು ಕರೆಯಿಸಿಕೊಂಡ. ರಾಮಚಂದ್ರನು ತಂದೆಯ ದರ್ಶನ ಮಾಡಿದಾಗ ಏನಾಯಿತು? (ಪುಟ ೧೫೨-೩).

ರಾಮೇತ್ಯುಕ್ತ್ವಾ ಚ ವಚನಂ ಬಾಷ್ಪಪರ್ಯಾಕುಲೇಕ್ಷಣಃ ।
ಶಶಾಕ ನೃಪತಿರ್ದೀನೋ ನೇಕ್ಷಿತುಂ ನಾಭಿಭಾಷಿತುಮ್ ॥

(ಸ. ೧೮-ಶ್ಲೋ. ೩)

ದಶರಥನ ಬಾಯಿಂದ 'ರಾಮ' ಎಂಬ ಎರಡಕ್ಷರ ಮಾತ್ರ ಹೊರಟಿತು. ಹೆಚ್ಚು ಮಾತಿಗೆ ಗಂಟಲು ಕಟ್ಟಿತು. ಆಗ ಶ್ರೀರಾಮಮೂರ್ತಿ, ಸಂದರ್ಭವು ತನ್ನ ತಂದೆಗೆ ದುಃಖಕರವಾದದ್ದಿರಬೇಕೆಂದು ಊಹಿಸಿಕೊಂಡು ತನ್ನ ಮನಸ್ಸಿನಲ್ಲಿ ಹೇಗೆ ಹೇಗೆ ನೊಂದುಕೊಂಡ. ಇದನ್ನು ಗಮನಿಸಿ ನೋಡಬೇಕು. ಅದನ್ನು ವಿಸ್ತರಿಸಿ ಇಪ್ಪತ್ತು ಪುಟ ಬೇಕಾದರೂ ಬರೆಯಬಹುದು.

ಇಂಥಾದ್ದು ವಾಲ್ಮೀಕಿಗಳ ಸಂದರ್ಭ ರಚನೆ, ಮತ್ತು ನಿರೂಪಣಕೌಶಲ.

ಇನ್ನೊಂದು ಉದಾಹರಣೆ (ಪುಟ ೧೬೫) :

**ಲೋಕಕಾಂತಸ್ಯ ಕಾಂತತ್ವಾಚ್ಛೀತರಶ್ಮೇರಿವ ಕ್ಷಪಾ ||**

**(ಸ. ೧೯-ಶ್ಲೋ. ೩೨)**

ಶ್ರೀರಾಮನು ರಾಜ್ಯವನ್ನು ತೊರೆದುಹೋಗುವುದರಿಂದ ಆತನ ಕಾಂತಿ ಕುಂದುತ್ತದೆಯೆ? ಪ್ರಪಂಚಕ್ಕೆ ಇಂಪಾದ ಬೆಳದಿಂಗಳನ್ನು ಕೊಡುವ ಚಂದ್ರನು ಆಕಾಶದಲ್ಲಿ ಸೂರ್ಯನಿರುವಾಗ ಕಾಣಿಸಿಕೊಳ್ಳುತ್ತಾನೆ. ಆದರೆ ಸೂರ್ಯನು ಮುಳುಗಿ ಚಂದ್ರನನ್ನು ಕತ್ತಲೆ ಆವರಿಸಿದಾಗ ಚಂದ್ರನ ಕಾಂತಿ ತಗ್ಗುತ್ತದೆಯೆ? ಇಲ್ಲ; ತಗ್ಗುವುದು ಹೋಗಿ ಇನ್ನೂ ಹೆಚ್ಚಾಗುತ್ತದೆ.

ಇಂಥವು ವಾಲ್ಮೀಕಿಗಳ ವಾಕ್ಕೃಯೋಗಗಳು. ಓದುಗರು ಪದಪದದ ಮೇಲೂ, ಅಕ್ಷರಕ್ಷರದ ಮೇಲೂ ಒಂದೊಂದು ಕ್ಷಣ ನಿಂತು ಸ್ವಾರಸ್ಯವನ್ನುಂಡು ಮುಂದಕ್ಕೆ ಹೋಗಬೇಕು. ಗಬಗಬನೆ ನುಂಗಬಾರದು. ಸಾವಕಾಶವಾಗಿ ಚಪ್ಪರಿಸಿ ಸವಿಯಬೇಕು.

ನಮ್ಮ ವ್ಯಾಪಾರಗಳು ಫಲದೃಷ್ಟಿಯಿಂದ ಎರಡು ಬಗೆಯಾಗಿರುತ್ತವೆ: ಕೆಲವು ಸದ್ಯಃಫಲಿತಗಳು; ಕೆಲವು ಕಾಲಾಂತರಫಲದವು. ಬೆಳಗ್ಗೆ ಯಾರಾದರೂ ಬಂದು ಸಹಾಯ ಬೇಡುತ್ತಾರೆ. "ಸಂಜೆಗೆ ಬನ್ನಿ" ಎನ್ನುತ್ತೇವೆ. ವಾಗ್ದಾನ ಬೇರೆ; ವಸ್ತುದಾನ ಬೇರೆ. ಬೆಳಗ್ಗೆ ಅಡಿಗೆಯಾಗುತ್ತದೆ; ಮಧ್ಯಾಹ್ನ ಊಟ. ಪಾಕ ಬೇರೆ; ಭೋಜನ ಬೇರೆ. ಇವು ಕಾಲಾಂತರಫಲಿತ ವ್ಯಾಪಾರಗಳು. ಪಾಯಸವನ್ನು

ನಾಲಿಗೆಯ ಮೇಲಿಡುತ್ತೇವೆ; ಆ ಕ್ಷಣವೇ ಅದರ ಸವಿಯನ್ನನುಭವಿಸುತ್ತೇವೆ. ಇದು ಸದ್ಯಃಫಲ. ಕಾರ್ಯಕ್ಕೂ ತತ್ಫಲಕ್ಕೂ ನಡುವೆ ಬಿಡುವಿಲ್ಲ. ಶ್ರೀಮತಿ ಸುಬ್ಬಲಕ್ಷ್ಮಮ್ಮನ ಹಾಡನ್ನು ಕೇಳುತ್ತೇವೆ; ಆ ಧ್ವನಿ ಕಿವಿಸೋಕಿದ ಒಡನೆಯೇ ಮೈಮರೆಯುತ್ತೇವೆ. ಒಂದು ಸುಂದರಾಕಾರವನ್ನು ಕಾಣುತ್ತೇವೆ; ಕಾಣುತ್ತಿದ್ದಂತೆಯೇ ಮೋಹಕ್ಕೋ ಉದ್ರೇಕಕ್ಕೋ ಸಿಕ್ಕಿಕೊಳ್ಳುತ್ತೇವೆ. ನಡೆದ ಘಟನೆಗಳು ಕಾರ್ಯಕಾರಣದೃಷ್ಟಿಯಿಂದ ಎರಡು; ಸ್ವಾನುಭವದಲ್ಲಿ ಏಕಮಾತ್ರ. ಬ್ರಹ್ಮಾನುಭವವೂ ಹಾಗೆಂದು ವೇದಾಂತಿಗಳು ಹೇಳುವುದುಂಟು. ಬ್ರಹ್ಮವನ್ನು ತಿಳಿದುಕೊಳ್ಳುವುದು ಬೇರೆ, ಅನುಭವಿಸುವುದು ಬೇರೆ ಅಲ್ಲ. ಎರಡೂ ಒಂದೇ. ತಿಳಿವಳಿಕೆಯೇ ಅನುಭವ; ಅನುಭವವೇ ತಿಳಿವಳಿಕೆ. ಕಾವ್ಯವ್ಯಾಸಂಗದಲ್ಲಂತೂ ಈ ಮಾತು ನಿಜ. ರಾಮಾಯಣವನ್ನು ಓದುವುದು ಬೇರೆ ಅಲ್ಲ, ಭಾವಪರವಶನಾಗುವುದು ಬೇರೆ ಅಲ್ಲ. ಓದೋಣವೇ ಭಾವಾನುಭವ. ಓದು ಎಂದರೆಯೇ "ಗಂಗಾತೀರ್ಥದಲ್ಲಿ ಓಲಾಡು, ಅಂತರಂಗವನ್ನು ಜಾಲಾಡು" - ಎಂದರ್ಥ. ಶ್ಲೋಕಕ್ಕೂ ಶೋಕಕ್ಕೂ ನಡುವೆ ಅಂತರವಿರದು - ಅವಧಾನವಿಟ್ಟು ಓದುವ ಸಹೃದಯನ ಪಾಲಿಗೆ.

ಅಂಥ ಜಾಗರೂಕರಾದ ಓದುಗರಿಗೆ ತೃಪ್ತಿ ಕೊಡುವಂಥಾದ್ದು ವಿದ್ವಾನ್ ಶ್ರೀ ರಂಗನಾಥಶರ್ಮರವರ ಕನ್ನಡ ಅನುವಾದ. ಅವರು ಮೂಲದ ಸ್ವಾರಸ್ಯವನ್ನು ಪೂರ್ತಿಯಾಗಿ ಹಿಡಿದು ಕನ್ನಡಕ್ಕೆ ಭಟ್ಟಿ ಇಳಿಸುವುದರಲ್ಲಿ ನಿಪುಣರಾಗಿದ್ದಾರೆ. ಅವರು ಎಷ್ಟು ಶ್ರಮಪಟ್ಟಿದ್ದಾರೆಂಬುದನ್ನು ನಾನು ಸ್ವತಃ ಕಂಡಿದ್ದೇನೆ. ಕನ್ನಡ ವಾಚಕರ ಪರವಾಗಿ ನನ್ನ ವಂದನೆಗಳನ್ನು ಅವರಲ್ಲರ್ಪಿಸುತ್ತೇನೆ. ಶ್ರೀ ಸೀತಾರಾಮರು ಅವರಲ್ಲಿ ಸರ್ವದಾ ಅನುಗ್ರಹ ಮಾಡಲಿ.

ನಮ್ಮ ವಿದ್ವಾಂಸರು ತಮ್ಮ ಅನುವಾದಕಾರ್ಯವನ್ನು ಕುರಿತು ಹೇಳುವಲ್ಲಿ ಕ್ಷಮೆ ಬೇಡುವ ಧ್ವನಿಯಿಂದ ನುಡಿದಿದ್ದಾರೆ. ಅದು ತೀರಾ ಅನವಶ್ಯವೆಂದು ನನಗನ್ನಿಸುತ್ತದೆ. ಪ್ರತಿಯೊಬ್ಬ ಪ್ರಾಮಾಣಿಕ ಲೇಖಕನಿಗೂ ಇಂಥಾ ಆತ್ಮವಿಶ್ವಾಸಶೈಥಿಲ್ಯ ತಪ್ಪಿದ್ದಲ್ಲ. ಕಾಳಿದಾಸನೇ -

ಆತ್ಮನ್ಯಪ್ರತ್ಯಯಂ ಚೇತಃ ||

ಎಂದಿದ್ದಾನಲ್ಲವೆ? ಒಂದಾನೊಂದು ಹೃದಯಭಾವವನ್ನೋ ಬುದ್ಧಿವಿಚಾರವನ್ನೋ ತಿಳಿಯಪಡಿಸಹೊರಟಾಗ ಲೇಖಕನಿಗೆ ಒಂದಲ್ಲ, ಎರಡು ಮೂರು ನಾಲ್ಕು ವಾಕ್ಪ್ರಕಾರಗಳು ಆ ಕ್ಷಣದಲ್ಲಿ ತೋರಿಬರುತ್ತವೆ. ವಿಮರ್ಶಿಸಿ ನೋಡಿದರೆ ಒಂದೊಂದು ವಾಕ್ಪ್ರಕಾರದಲ್ಲಿ ಒಂದೊಂದು ಬಗೆಯ ಗುಣ ಕಾಣಬರುತ್ತದೆ. ಆ ಘಳಿಗೆಯಲ್ಲಿ ಯಾವ ಒಂದು ವಾಕ್ಯರೀತಿ ಅವನ ಮನಸ್ಸಿಗೆ ಹೆಚ್ಚು ರುಚಿಸುತ್ತದೆಯೋ ಆ ವಾಗ್ರಚನೆಯನ್ನು ಅವನು ಬಳಸಿ ಕೊಳ್ಳುತ್ತಾನೆ. ಬಳಿಕ ಇನ್ನೊಂದು ವೇಳೆ ನೋಡಿದಾಗ ತಾನು ಕೈಬಿಟ್ಟಿದ್ದ ವಾಕ್ಪ್ರಯೋಗವೇ ಇನ್ನೂ ಸೊಗಸಿನದೆಂದು ಅವನ ಮನಸ್ಸಿಗೆ ತೋರಬಹುದು. ಈ ಬಗೆಯ ಅದೃಢತೆ ಲೇಖನ ಕರ್ಮದಲ್ಲಿ- ಎಲ್ಲ ಕಲಾಕರ್ಮದಲ್ಲಿಯೂ-ಅನಿವಾರ್ಯವಾದದ್ದು. ಇದು ಚೆನ್ನೆ, ಅದು ಚೆನ್ನೆ? ಇಂಥ ಸಂದೇಹ ಬಂದಾಗ ಲೇಖಕನಿಗೆ ವಾಚಕನ ಯೋಗ್ಯತೆಯೇ ಶರಣಸ್ಥಾನ. ವಾಚಕನು ದಕ್ಷನೂ ಸಹಾನುಭೂತಿವಂತನೂ ಆಗಿದ್ದಲ್ಲಿ ಅವನು ಲೇಖಕನ ಆಶಯವನ್ನು ತಾನೇ ಗ್ರಹಿಸಿಯಾನು. ವಾಚಕನ ಸಹಕಾರದಿಂದ ಲೇಖಕನಲ್ಲಿ ಅನಿವಾರ್ಯವಾಗಿ ನಿಂತುಹೋದ ಲೋಪಗಳು ತಿದ್ದಿಕೆ ಪಡೆದು ಸರಿಯಾಗುತ್ತವೆ. ಆದದ್ದರಿಂದ ನಮ್ಮ ವಿದ್ವನ್ಮಿತ್ರರೂ ನಾನೂ ವಾಚಕರನ್ನು ಶರಣುಹೋಗೋಣ.

ಶ್ರೀ ರಂಗನಾಥಶರ್ಮರವರಲ್ಲಿ ನನಗೆ ಕಾಣುವ ಒಂದು ವಿಶೇಷ ಗುಣವೆಂದರೆ ಅವರ ಋಜ್ವರ್ಥಗ್ರಹಣ. ರಾಮಾಯಣ ವ್ಯಾಖ್ಯಾನಕರ್ತರೂ ಇತರ ಕಾವ್ಯವ್ಯಾಖ್ಯಾತರೂ ಎಷ್ಟೋ ವೇಳೆ ಅತಿಯುಕ್ತಿಗೆ ಹೋಗಿದ್ದಾರೆ. ಅಕ್ಷರವನ್ನು ಹಿಗ್ಗಾಮುಗ್ಗಾ ಎಳೆದಾಡಿ ಅಪೂರ್ವ ಸ್ವಾರಸ್ಯ, ವಿಚಿತ್ರ ರಹಸ್ಯಗಳನ್ನು ಹೊರಕ್ಕೆ ತರಲು ಯತ್ನಿಸಿದ್ದಾರೆ. ಈ ಪ್ರಯತ್ನದಲ್ಲಿ ಅವಶ್ಯವಾದ ಶಬ್ದಪಾಂಡಿತ್ಯವೂ ತರ್ಕಚಮತ್ಕಾರವೂ ಮೂಲಗ್ರಂಥದ ಸರಳವೂ ಅಕೃತಕವೂ ಆದ ಭಾವವನ್ನು ಮುಳುಗಿಸಿ ಕೈಗೆ ದೊರೆಯದಂತೆ ಮಾಡುತ್ತವೆ. ಶರ್ಮಾ ಅವರ ವಿದ್ವತ್ತಿಗೆ ಇಂಥಾ ಕೃತಕ ವ್ಯಾಖ್ಯಾನ ಅಸಾಧ್ಯವಾದದ್ದಲ್ಲ. ಆದರೆ ಅವರ ಸ್ವಭಾವದ ಒಲವು ಋಜುತೆಯ ಕಡೆಗೆ. ಅವರು ಒಣ ವಿದ್ವಾಂಸರಲ್ಲ; ವಿದ್ವದ್ರಸಿಕರು, ಆರ್ದ್ರಹೃದಯರು, ಅಳಬಲ್ಲವರು, ನಗಬಲ್ಲವರು, ಕನಿಕರಿಸಬಲ್ಲವರು,

ಮತ್ತೊಬ್ಬರ ಹೃದ್ಭಾವವನ್ನು ಊಹಿಸಿ ಅನುಭವಿಸಬಲ್ಲವರು. ಇಂಥವರು ಮಾಡಿದ ವಾಲ್ಮೀಕಿ ಕಾವ್ಯಾನುವಾದವು ಭಾವವೈಶದ್ಯದಿಂದಲೂ ರಸಪುಷ್ಟಿಯಿಂದಲೂ ಆದರಣೀಯವಾಗುವುದು ಸ್ವಾಭಾವಿಕವೇ ಆಗಿದೆ. ಇದು ನನ್ನ ನಂಬಿಕೆ.

ಪ್ರಭಾ ಮುದ್ರಣಾಲಯದ ಶ್ರೀ ಡಿ. ಎಸ್. ಕೃಷ್ಣಾಚಾರ್ಯರವರು ಸ್ವಯಂ ವಿದ್ವಾಂಸರು, ಮಹಾವಿದ್ವತ್ ಕುಲಪ್ರಸೂತರು, ಸದಾಚಾರ ಶೀಲರು. ಇಷ್ಟನ್ನು ಹೇಳಿದ ಮೇಲೆ ಅವರು ಈ ಕಾರ್ಯವನ್ನು ಶ್ರದ್ಧಾಸಕ್ತಿಗಳಿಂದ ನಿರ್ವಹಿಸಿದ್ದಾರೆಂದು ಹೇಳುವುದು ಪುನರುಕ್ತಿಯಾದೀತು.

ಇಂತು ಸರ್ವಂ ಶಿವಂ.

ಡಿ. ವಿ. ಜಿ.

# ನಿವೇದನೆ

ಶ್ರೀರಾಮಚಂದ್ರನ ಅನುಗ್ರಹದಿಂದ ಅಯೋಧ್ಯಾಕಾಂಡದ ಅನುವಾದವು ಪ್ರಕಟವಾಗುತ್ತಿದೆ. ರಾಮಾಯಣ ಪ್ರಕಾಶನ ಸಮಿತಿಯವರ ಸದುದ್ದೇಶ ಪ್ರೋತ್ಸಾಹಗಳು ಈ ಕಾರ್ಯವನ್ನು ನಡೆಸಲು ನನಗೆ ಪ್ರೇರಣೆಯನ್ನುಂಟು ಮಾಡಿವೆ. ಸಮ್ಮಾನ್ಯರಾದ ಡಾ|| ಡಿ. ವಿ. ಗುಂಡಪ್ಪನವರ ಆಶೀರ್ಹಸ್ತ ಎಂದಿನಂತೆ ನನಗೆ ಬೆಂಬಲವಾಗಿ ನಿಂತಿರುವುದು ನನ್ನ ಭಾಗ್ಯ. ಅವರು ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವಾಗಲೂ ಈ ಗ್ರಂಥವನ್ನು ಪರಿಶೀಲಿಸಿ ಮುನ್ನುರಿಕೆಯನ್ನು ಬರೆದುಕೊಡುವ ಕೃಪೆ ಮಾಡಿದ್ದಾರೆ. ಈ ಮಹನೀಯರಿಗೆ ಆರೋಗ್ಯವನ್ನು ಕರುಣಿಸಬೇಕೆಂದು ಶ್ರೀರಾಮನನ್ನು ಪ್ರಾರ್ಥಿಸುತ್ತಿದ್ದೇನೆ.

ಸುಂದರಕಾಂಡ ಮತ್ತು ಬಾಲಕಾಂಡಗಳ ಅನುವಾದವು ಕನ್ನಡಿಗರ ಮೆಚ್ಚುಗೆಯನ್ನು ಗಳಿಸಿದೆಯೆಂದು ನನಗೆ ವಿಶ್ವಾಸವಿದೆ. ಆದರೆ ಅಯೋಧ್ಯಾಕಾಂಡದ ಅನುವಾದ ಏನನ್ನು ಗಳಿಸುವುದೋ ತಿಳಿಯದು. ಅಯೋಧ್ಯಾಕಾಂಡ ನನ್ನ ಸತ್ತ್ವಪರೀಕ್ಷೆಯ ಸ್ಥಳ. ವಾಲ್ಮೀಕಿ ಮುನಿಗಳ ತಪಸ್ಸಿನ ಪರಾಕಾಷ್ಠೆ ಇದು. ರಸಭಾವಗಳ-ವಿವಿಧಮನೋಹರಧ್ವನಿಗಳ ಉದ್ಗಮಸ್ಥಾನ ಈ ಅಯೋಧ್ಯಾಕಾಂಡ. ಕರುಣರಸದ ಹೊಳೆ ಇಲ್ಲಿ ಪ್ರವಹಿಸಿದೆ.

ವ್ಯಾಖ್ಯಾನಕಾರರು ಕೆಲವು ಸ್ಥಳಗಳಲ್ಲಿ ಹೀಗೆ ಬರೆದಿದ್ದಾರೆ : "ಈ ಸಂದರ್ಭದಲ್ಲಿ ವಾಲ್ಮೀಕಿಮುನಿಗಳೂ ಶೋಕಾವಿಷ್ಟರಾಗಿ ರಸತನ್ಮಯೀಭಾವ ದಿಂದ ಕಾವ್ಯವನ್ನು ರಚಿಸಿದ್ದಾರೆ. ಆದ್ದರಿಂದ ಪದಗಳ ಜೋಡಣೆ ಹಿಂದೆಮುಂದಾಗಿದೆ-ಇಲ್ಲಿ ವಾಕ್ಯ ಅಪೂರ್ಣವಾಗಿದೆ-ಇಲ್ಲಿ ಪುನರುಕ್ತಿ ಬಂದಿದೆ" ಇತ್ಯಾದಿ. ಹೀಗಿರುವಾಗ ನನ್ನ ಪಾಡೇನು?

ಮೂಲದ ಆಶಯವನ್ನು ನನ್ನ ಮಾತನಲ್ಲಿ ಹೇಳಲು ಕೈಲಾದ ಮಟ್ಟಿಗೆ ಪ್ರಯತ್ನಿಸಿದ್ದೇನೆ. ವಾಕ್ಯಗಳನ್ನು ಹೆಣೆದಿದ್ದೇನೆ. ಬರೆದು ಅಳಿಸಿ ಪುನಃ ಬರೆದಿದ್ದೇನೆ. ಆದರೂ ನನಗೆ ತೃಪ್ತಿಯಾಗಿಲ್ಲ. ವಾಕ್ಯರಚನೆಯನ್ನು ಅಲ್ಲಲ್ಲಿ ಮಾರ್ಪಡಿಸಬೇಕಾಗಿತ್ತೆಂದು ಈಗಲೂ ಅನ್ನಿಸುತ್ತದೆ.

ತಿಲಕ, ಗೋವಿಂದರಾಜೀಯ, ಮಹೇಶ್ವರತೀರ್ಥೀಯ ಮುಂತಾದ ವ್ಯಾಖ್ಯಾನಗಳಿಂದ ನನಗೆ ಅತ್ಯಂತ ಉಪಕಾರವಾಗಿದೆ. ಕೆಲವು ಕಡೆಗಳಲ್ಲಿ ಮಾತ್ರ ವ್ಯಾಖ್ಯಾನಕಾರರು ಹೇಳುವ ಶ್ಲೋಕ ತಾತ್ಪರ್ಯ ನನಗೆ ಅಷ್ಟಾಗಿ ಹಿಡಿಸಲಿಲ್ಲ. ಕಾವ್ಯದೃಷ್ಟಿಯಲ್ಲಿ ಹೆಚ್ಚಿನ ಚಮತ್ಕಾರವುಂಟೆಂದು ನಾನು ಭಾವಿಸಿದ ತಾತ್ಪರ್ಯವನ್ನು ಅನುವಾದದಲ್ಲಿ ತಂದಿದ್ದೇನೆ. ಉದಾಹರಣೆಗೆ, ಅಯೋಧ್ಯಾಕಾಂಡದಲ್ಲಿ ಈ ಶ್ಲೋಕಗಳನ್ನು ಪರಿಶೀಲಿಸಬಹುದು :- ಸರ್ಗ ೪-ಶ್ಲೋಕ ೨೭; ೧೩-೬, ೭, ೨೧; ೨೧-೫೭; ೨೨-೧೪; ೩೧-೭; ೫೨-೭೫, ೭೬.

ಈ ಶ್ಲೋಕಕ್ಕೆ ಹೀಗೆಯೇ ಅರ್ಥಮಾಡಬೇಕೆಂದು ನಿಯಮಿಸಲು ಇದೇನೂ ಶಾಸ್ತ್ರಪಂಕ್ತಿಯಲ್ಲವಷ್ಟೆ? ಯಾವ ಬಗೆಯ ಅರ್ಥವು ಸಂದರ್ಭಕ್ಕೆ ಅನುಗುಣವಾಗಿ ಸುಂದರತರವಾಗುವುದೋ ಅದನ್ನು ಗ್ರಹಿಸುವುದು ಯುಕ್ತವೆಂದು ನನ್ನ ಭಾವನೆ. ಇದನ್ನು ಸಹೃದಯರು ಒಪ್ಪುವರೆಂದು ನನ್ನ ನಂಬಿಕೆ.

ಹೃದಯಂ ಹಿ ವಿದಗ್ಧಾನಾಂ ಪರೀಕ್ಷಾನಿಕಷೋಪಲಃ

ಬೆಂಗಳೂರು
೨೨-೨-೧೯೬೭

ಎನ್. ರಂಗನಾಥ ಶರ್ಮಾ

# ಅನುಕ್ರಮಣಿಕೆ


| ಸರ್ಗ | ವಿಷಯ | ಪುಟ |
|---|---|---|
| ೧ | ರಾಮಾಭಿಷೇಕವ್ಯವಸಾಯಃ (ಶ್ರೀರಾಮನ ಗುಣಗಳ ವರ್ಣನೆ; ಅವನಿಗೆ ಪಟ್ಟಾಭಿಷೇಕ ಮಾಡಬೇಕೆಂದು ದಶರಥನ ಆಲೋಚನೆ) | ೧ |
| ೨ | ಪರಿಷದನುಮೋದನಮ್ (ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂಬ ಉದ್ದೇಶವನ್ನು ದಶರಥನು ಪ್ರಜೆಗಳಿಗೆ ತಿಳಿಸುವುದು; ಪ್ರಜೆಗಳ ಸಮ್ಮತಿ) | ೧೨ |
| ೩ | ಪುತ್ರಾನುಶಾಸನಮ್ (ಪಟ್ಟಾಭಿಷೇಕಕ್ಕೆ ಸಿದ್ಧತೆ; ದಶರಥನು ಶ್ರೀರಾಮನಿಗೆ ಹೇಳಿದ ಹಿತೋಪದೇಶ) | ೨೨ |
| ೪ | ಮಾತ್ರಾಶೀಃಪರಿಗ್ರಹಃ (ದಶರಥನು ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಲು ಕಾರಣವನ್ನು ತಿಳಿಸುವುದು; ಶ್ರೀರಾಮನಿಗೆ ತಾಯಿಯ ಆಶೀರ್ವಾದ) | ೩೧ |
| ೫ | ವ್ರತಚರ್ಯಾವಿಧಾನಮ್ (ಶ್ರೀರಾಮನು ವ್ರತನಿಷ್ಠನಾಗಿರುವಂತೆ ವಸಿಷ್ಠರು ನಿಯಮಿಸುವುದು) | ೩೯ |
| ೬ | ಪೌರೋತ್ಸೇಕಃ (ಪಟ್ಟಾಭಿಷೇಕವು ನಡೆಯುವುದೆಂದು ಪ್ರಜೆಗಳ ಉತ್ಸಾ[illegible]) | ೪೪ |
| ೭ | ಮಂಥರಾಪರಿದೇವನಮ್ (ಮಂಥರೆಯ ದುರಾಲೋಚನೆ) | ೪೯ |
| ೮ | ಮಂಥರೋಪಜಾಪಃ (ಕೈಕೇಯಿಗೆ ಮಂಥರೆಯ ದುರ್ಬೋಧನೆ) | ೫೬ |
| ೯ | ರಾಮಪ್ರವಾಸನೋಪಾಯಚಿಂತಾ (ಕೈಕೇಯಿಯು ಮಂಥರೆಯ ದುರ್ಬೋಧನೆಗೆ ಒಳಗಾಗುವುದು. ಶ್ರೀರಾಮನನ್ನು ವನಕ್ಕೆ ಕಳುಹಿಸಿ ಭರತನಿಗೆ ಪಟ್ಟವಾಗುವಂತೆ ಮಾಡಲು ಉಪಾಯ ಚಿಂತನೆ ) | ೬೪ |
| ೧೦ | ಕೈಕೇಯ್ಯನುನಯಃ (ದಶರಥನು ಕೋಪಗೃಹಕ್ಕೆ ಬಂದು ಕೈಕೇಯಿಯನ್ನು ಸಮಾಧಾನ ಗೊಳಿಸಲು ಪ್ರಯತ್ನಿಸುವುದು) | ೭೬ |
| ೧೧ | ವರದ್ವಯನಿರ್ಬಂಧಃ (ಎರಡು ವರಗಳನ್ನು ಸಲ್ಲಿಸಬೇಕೆಂದು ಕೈಕೇಯಿಯು ದಶರಥನನ್ನು ಒತ್ತಾಯಪಡಿಸುವುದು) | ೮೪ |
| ೧೨ | ಕೈಕೇಯೀನಿವರ್ತನಪ್ರಯಾಸಃ (ದಶರಥನು ಶ್ರೀರಾಮನ ಗುಣಗಳನ್ನು ವರ್ಣಿಸಿ ಕೈಕೇಯಿಗೆ ಸಮಾಧಾನ ಹೇಳುವುದು; ಕೈಕೇಯಿಯ ಹಠ; ದಶರಥನ ದುಃಖ) | ೯೦ |

| | | |
|---|---|---|
| ೧೩ | ದಶರಥವಿಲಾಪಃ (ದಶರಥನು ಕೈಕೇಯಿಯನ್ನು ಸಮಾಧಾನಪಡಿಸಲು ಪುನಃ ಪ್ರಯತ್ನಿಸುವುದು) | ೧೧೨ |
| ೧೪ | ಕೈಕೇಯ್ಯುಪಾಲಂಭಃ (ತನ್ನ ಕೋರಿಕೆಯನ್ನು ಸಲ್ಲಿಸುವಂತೆ ಕೈಕೇಯಿಯ ಒತ್ತಾಯ; ದಶರಥನು ಶ್ರೀರಾಮನನ್ನು ನೋಡಲು ಬಯಸುವುದು; ಸುಮಂತ್ರನು ಶ್ರೀರಾಮನನ್ನು ಕರೆತರಲು ಹೊರಡುವುದು) | ೧೧೭ |
| ೧೫ | ಸುಮಂತ್ರಪ್ರೇಷಣಮ್ (ಸುಮಂತ್ರನು ದಶರಥನ ಆಜ್ಞೆಯಂತೆ ಶ್ರೀರಾಮನನ್ನು ಕರೆತರಲು ಹೋಗುವುದು) | ೧೨೯ |
| ೧೬ | ರಾಮಪ್ರಸ್ಥಾನಮ್ (ಸುಮಂತ್ರನು ದಶರಥನ ಆಜ್ಞೆಯನ್ನು ಶ್ರೀರಾಮನಿಗೆ ತಿಳಿಸುವುದು; ಶ್ರೀರಾಮನು ದಶರಥನನ್ನು ನೋಡಲು ಹೊರಡುವುದು) | ೧೩೯ |
| ೧೭ | ರಾಮಾಗಮನಮ್ (ಶ್ರೀರಾಮನು ದಶರಥನ ಬಳಿಗೆ ಹೋಗುವುದು) | ೧೪೮ |
| ೧೮ | ವನವಾಸನಿದೇಶಃ (ದಶರಥನು ಶೋಕಿಸುವ ಕಾರಣವೇನೆಂದು ಶ್ರೀರಾಮನು ಕೈಕೇಯಿಯನ್ನು ಕೇಳುವುದು, ಅವಳು ತನ್ನ ವರಗಳ ವೃತ್ತಾಂತವನ್ನು ಶ್ರೀರಾಮನಿಗೆ ಹೇಳುವುದು) | ೧೫೨ |
| ೧೯ | ರಾಮಪ್ರತಿಜ್ಞಾ (ಶ್ರೀರಾಮನು ಕಾಡಿಗೆ ಹೋಗಲು ಒಪ್ಪಿ ಆ ವಿಷಯವನ್ನು ತನ್ನ ತಾಯಿಗೆ ತಿಳಿಸಲು ಹೋಗುವುದು) | ೧೬೦ |
| ೨೦ | ಕೌಸಲ್ಯಾಕ್ರಂದಃ (ಶ್ರೀರಾಮನು ಕೌಸಲ್ಯೆಗೆ ತನ್ನ ವನವಾಸ ವೃತ್ತಾಂತವನ್ನು ಹೇಳುವುದು; ಕೌಸಲ್ಯೆಯ ವಿಲಾಪ) | ೧೬೭ |
| ೨೧ | ಕೌಸಲ್ಯಾಲಕ್ಷ್ಮಣಪ್ರತಿಬೋಧನಮ್ (ಲಕ್ಷ್ಮಣನು ಕೌಸಲ್ಯೆಗೆ ಸಮಾಧಾನವನ್ನು ಹೇಳುವುದು; ಶ್ರೀರಾಮನು ತಂದೆಯ ಮಾತನ್ನು ಮೀರುವುದು ಅಧರ್ಮವೆಂದು ಹೇಳಿ ವನಗಮನಕ್ಕೆ ಅನುಮತಿಯನ್ನು ಕೇಳುವುದು) | ೧೭೮ |
| ೨೨ | ದೈವಪ್ರಾಬಲ್ಯಮ್ (ಶ್ರೀರಾಮನು ಲಕ್ಷ್ಮಣನಿಗೆ ದೈವಪ್ರಾಬಲ್ಯವನ್ನು ನಿರೂಪಿಸುವುದು) | ೧೯೧ |
| ೨೩ | ಲಕ್ಷ್ಮಣಕ್ರೋಧಃ (ಲಕ್ಷ್ಮಣನು ಕ್ರುದ್ಧನಾಗಿ ದೈವಬಲಕ್ಕಿಂತ ಪೌರುಷವೇ ಪ್ರಬಲವೆಂದು ವಾದಿಸುವುದು) | ೧೯೭ |
| ೨೪ | ಕೌಸಲ್ಯಾರ್ತಿಸಮಾಶ್ವಾಸನಮ್ (ಶ್ರೀರಾಮನು ಕೌಸಲ್ಯೆಯನ್ನು ಸಂತೈಸಿ ವನವಾಸಕ್ಕೆ ಹೋಗಲು ಅವಳ ಅನುಜ್ಞೆಯನ್ನು ಪಡೆಯುವುದು) | ೨೦೫ |
| ೨೫ | ಮಾತೃಸ್ವಸ್ತ್ಯಯನಮ್ (ಕೌಸಲ್ಯೆಯು ಶ್ರೀರಾಮನಿಗೆ ಮಂಗಳಾರ್ಶೀರ್ವಾದವನ್ನು ಮಾಡುವುದು) | ೨೧೨ |

| | | |
|---|---|---|
| ೨೬ | ಸೀತಾಪ್ರತ್ಯವಸ್ಥಾಪನಮ್ (ಶ್ರೀರಾಮನು ಸೀತೆಗೆ ತನ್ನ ವನವಾಸ ವೃತ್ತಾಂತವನ್ನು ಹೇಳಿ ಅವಳನ್ನು ಸಮಾಧಾನ ಪಡಿಸುವುದು) | ೨೨೧ |
| ೨೭ | ಪತಿವ್ರತಾಧ್ಯವಸಾಯಃ (ಸೀತೆಯೂ ತಾನೂ ವನಕ್ಕೆ ಹೋಗಬೇಕೆಂದು ನಿಶ್ಚಯಿಸಿ ಶ್ರೀರಾಮನೊಡನೆ ಹೇಳುವುದು) | ೨೨೮ |
| ೨೮ | ವನದುಃಖಪ್ರತಿಬೋಧನಮ್ (ಶ್ರೀರಾಮನು ವನವಾಸದ ಕಷ್ಟಗಳನ್ನು ಸೀತೆಗೆ ವಿವರಿಸಿ ಹೇಳುವುದು) | ೨೩೩ |
| ೨೯ | ವನಾನುಗಮನಯಾಚ್ಞಾನಿರ್ಬಂಧಃ (ಸೀತೆಯು ತನ್ನನ್ನು ವನವಾಸಕ್ಕೆ ಕರೆದುಕೊಂಡು ಹೋಗಬೇಕೆಂದು ಶ್ರೀರಾಮನನ್ನು ನಿರ್ಬಂಧಿಸುವುದು) | ೨೩೮ |
| ೩೦ | ವನಗಮನಾಭ್ಯುಪಪತ್ತಿಃ (ಸೀತೆಯು ಕಾಡಿಗೆ ಬರುವುದಕ್ಕೆ ಶ್ರೀರಾಮನು ಗತ್ಯಂತರವಿಲ್ಲದೆ ಸಮ್ಮತಿಸುವುದು) | ೨೪೩ |
| ೩೧ | ಲಕ್ಷ್ಮಣವನಾನುಗಮನಾಭ್ಯನುಜ್ಞಾ (ಶ್ರೀರಾಮನು ಲಕ್ಷ್ಮಣನ ಪ್ರಾರ್ಥನೆಯನ್ನು ಮನ್ನಿಸಿ ಅವನು ವನಕ್ಕೆ ಬರಲು ಸಮ್ಮತಿಸುವುದು) | ೨೫೨ |
| ೩೨ | ವಿತ್ತವಿಶ್ರಾಣನಮ್ (ವನವಾಸಕ್ಕೆ ಹೊರಡುವ ಮೊದಲು ಶ್ರೀರಾಮನು ದಾನಧರ್ಮಗಳನ್ನು ಮಾಡುವುದು) | ೨೫೯ |
| ೩೩ | ಪೌರವಾಕ್ಯಮ್ (ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಶರಥನ ಬಳಿಗೆ ಹೋಗುವುದು; ಅವರನ್ನು ನೋಡಿ ಶೋಕಸಂತಪ್ತರಾದ ಪೌರರ ವಿಲಾಪ) | ೨೬೮ |
| ೩೪ | ದಶರಥಸಮಾಶ್ವಾಸನಮ್ (ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಶರಥನನ್ನು ಕಾಣುವುದು; ದಶರಥನ ವಿಲಾಪ) | ೨೭೪ |
| ೩೫ | ಸುಮಂತ್ರಗರ್ಹಣಮ್ (ಸುಮಂತ್ರನು ಕೈಕೇಯಿಯನ್ನು ನಿಂದಿಸುವುದು) | ೨೮೭ |
| ೩೬ | ಸಿದ್ಧಾರ್ಥಪ್ರತಿಬೋಧನಮ್ (ಶ್ರೀರಾಮನೊಡನೆ ಸುಖಸಾಮಗ್ರಿಗಳನ್ನು ಕಳಿಸಬೇಕೆಂದು ದಶರಥನ ಆಜ್ಞೆ; ಕೈಕೇಯಿಯ ಆಕ್ಷೇಪಣೆ; ಸಿದ್ಧಾರ್ಥನ ಬುದ್ಧಿವಾದ) | ೨೯೨ |
| ೩೭ | ಚೀರಪ್ರತಿಗ್ರಹನಿಮಿತ್ತವಸಿಷ್ಠಕ್ರೋಧಃ (ಕೈಕೇಯಿಯು ತಂದುಕೊಟ್ಟ ನಾರುಬಟ್ಟೆಗಳನ್ನು ರಾಮಲಕ್ಷ್ಮಣರೂ ಸೀತೆಯೂ ಧರಿಸುವುದು; ವಸಿಷ್ಠರ ಕೋಪ) | ೨೯೯ |
| ೩೮ | ಜನಾಕ್ರೋಶಃ (ಜನರು ದಶರಥನನ್ನು ನಿಂದಿಸುವುದು; ದಶರಥನ ಸಂತಾಪ; ಕೌಸಲ್ಯೆಯನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ತಂದೆಗೆ ಶ್ರೀರಾಮನ ಪ್ರಾರ್ಥನೆ) | ೩೦೬ |

| | | |
|---|---|---|
| ೩೯ | ವನಗಮನಾಪೃಚ್ಛಾ (ಶ್ರೀರಾಮನನ್ನು ವನಕ್ಕೆ ಕಳಿಸಲು ಸುಮಂತ್ರನು ರಥವನ್ನು ಸಿದ್ಧಪಡಿಸುವುದು; ಸೀತೆಗೆ ಕೌಸಲ್ಯೆಯ ಹಿತೋಪದೇಶ; ರಾಮನು ತಾಯಂದಿರನ್ನು ಬೀಳ್ಕೊಡುವುದು) | ೩೧೦ |
| ೪೦ | ಪೌರಾದ್ಯನುವ್ರಜ್ಯಾ (ಶ್ರೀರಾಮನು ಸೀತಾಲಕ್ಷ್ಮಣರೊಡನೆ ವನಕ್ಕೆ ಪ್ರಯಾಣ ಮಾಡುವುದು; ದಶರಥ ಕೌಸಲ್ಯೆ ಮತ್ತು ಪ್ರಜೆಗಳ ವಿಲಾಪ) | ೩೧೮ |
| ೪೧ | ನಗರಸಂಕ್ಷೋಭಃ (ಅಂತಃಪುರಸ್ತ್ರೀಯರ ವಿಲಾಪ; ದುಃಶಕುನಗಳು) | ೩೨೭ |
| ೪೨ | ದಶರಥಾಕ್ರಂದಃ (ಶ್ರೀರಾಮನು ವನಕ್ಕೆ ಹೋದಮೇಲೆ ದಶರಥನ ವಿಲಾಪ) | ೩೩೨ |
| ೪೩ | ಕೌಸಲ್ಯಾಪರಿದೇವಿತಮ್ (ಕೌಸಲ್ಯೆಯು ದಶರಥನೊಡನೆ ತನ್ನ ದುಃಖವನ್ನು ತೋಡಿಕೊಳ್ಳುವುದು) | ೩೩೮ |
| ೪೪ | ಸುಮಿತ್ರಾಶ್ವಾಸನಮ್ (ಸುಮಿತ್ರೆಯು ಕೌಸಲ್ಯೆಗೆ ಸಮಾಧಾನ ಹೇಳುವುದು) | ೩೪೩ |
| ೪೫ | ಪೌರಯಾಚನಮ್ (ಶ್ರೀರಾಮನು ಹಿಂದಿರುಗಬೇಕೆಂದು ಪೌರರು ಪ್ರಾರ್ಥಿಸುವುದು; ಆಗ ಶ್ರೀರಾಮನು ಅವರಿಗೆ ಸಮಾಧಾನ ಹೇಳುವುದು) | ೩೪೯ |
| ೪೬ | ಪೌರಮೋಹನಮ್ (ಶ್ರೀರಾಮನು ತಮಸಾನದೀತೀರದಲ್ಲಿ ವಿಶ್ರಮಿಸಿಕೊಂಡು ಪೌರರಿಗೆ ಗೊತ್ತಾಗದಂತೆ ಮುಂದಕ್ಕೆ ಪ್ರಯಾಣಮಾಡುವುದು) | ೩೫೫ |
| ೪೭ | ಪೌರನಿವೃತ್ತಿಃ (ಪ್ರಜೆಗಳು ದುಃಖಿಸುತ್ತ ಅಯೋಧ್ಯೆಗೆ ಹಿಂದಿರುಗುವುದು) | ೩೬೨ |
| ೪೮ | ಪೌರಾಂಗನಾವಿಲಾಪಃ (ಪೌರಾಂಗನೆಯರ ವಿಲಾಪ) | ೩೬೬ |
| ೪೯ | ಜಾನಪದಾಕ್ರೋಶಃ (ಶ್ರೀರಾಮನು ತ್ವರೆಯಿಂದ ಪ್ರಯಾಣ ಮಾಡುವುದು; ಗ್ರಾಮವಾಸಿಗಳ ದುಃಖ; ಸುಮಂತ್ರನೊಡನೆ ಸಂಭಾಷಣೆ) | ೩೭೩ |
| ೫೦ | ಗುಹಸಂಗತಮ್ (ಶ್ರೀರಾಮನು ಸೀತಾಲಕ್ಷ್ಮಣರೊಡನೆ ಗಂಗಾತೀರವನ್ನು ಸೇರುವುದು; ಗಂಗಾನದಿಯ ವರ್ಣನೆ; ಗುಹಸಮಾಗಮ) | ೩೭೬ |
| ೫೧ | ಗುಹಲಕ್ಷ್ಮಣಜಾಗರಣಮ್ (ಗುಹಲಕ್ಷ್ಮಣರು ನಿದ್ರೆಮಾಡದೆ ಸಂಭಾಷಿಸುವುದು) | ೩೮೬ |
| ೫೨ | ಗಂಗಾವತರಣಮ್ (ಶ್ರೀರಾಮನು ಸೀತಾಲಕ್ಷ್ಮಣರೊಡನೆ ಗಂಗಾನದಿಯನ್ನು ದಾಟುವುದು) | ೩೯೧ |
| ೫೩ | ರಾಮಸಂಕ್ಷೋಭಃ (ಶ್ರೀರಾಮನ ಮನೋವ್ಯಥೆ; ಲಕ್ಷ್ಮಣನ ಸಮಾಧಾನ) | ೪೦೯ |
| ೫೪ | ಭಾರದ್ವಾಜಾಶ್ರಮಾಭಿಗಮನಮ್ (ಭರದ್ವಾಜಮುನಿಗಳ ಸಂದರ್ಶನ) | ೪೧೬ |

| | | |
|---|---|---|
| ೫೫ | ಯಮುನಾತರಣಮ್ (ಶ್ರೀರಾಮನು ಯಮುನಾನದಿಯನ್ನು ದಾಟುವುದು) | ೪೨೪ |
| ೫೬ | ಚಿತ್ರಕೂಟನಿವಾಸಃ (ಚಿತ್ರಕೂಟದಲ್ಲಿ ಪರ್ಣಶಾಲೆಯನ್ನು ನಿರ್ಮಿಸಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ವಾಸವಾಗಿರುವುದು) | ೪೩೦ |
| | ಅನುಬಂಧ | ೪೩೮ |




॥ ಶ್ರೀಃ ॥

# ॥ ಶ್ರೀಮದ್ವಾಲ್ಮೀಕಿರಾಮಾಯಣಮ್ ॥

## ಅಯೋಧ್ಯಾಕಾಂಡಃ

### ಪ್ರಥಮಃ ಸರ್ಗಃ

ರಾಮಾಭಿಷೇಕವ್ಯವಸಾಯಃ

ಗಚ್ಛತಾ ಮಾತುಲಕುಲಂ ಭರತೇನ ತದಾನಘಃ ।
ಶತ್ರುಘ್ನೋ ನಿತ್ಯಶತ್ರುಘ್ನೋ ನೀತಃ ಪ್ರೀತಿಪುರಸ್ಕೃತಃ ॥ ೧

ಸ ತತ್ರ ನ್ಯವಸದ್ಭ್ರಾತ್ರಾ ಸಹ ಸತ್ಕಾರಸತ್ಕೃತಃ ।
ಮಾತುಲೇನಾಶ್ವಪತಿನಾ ಪುತ್ರ ಸ್ನೇಹೇನ ಲಾಲಿತಃ ॥ ೨

ತತ್ರಾಪಿ ನಿವಸಂತೌ ತೌ ತರ್ಪ್ಯಮಾಣೌ ಚ ಕಾಮತಃ ।
ಭ್ರಾತರೌ ಸ್ಮರತಾಂ ವೀರೌ ವೃದ್ಧಂ ದಶರಥಂ ನೃಪಮ್ ॥ ೩

## ಅಯೋಧ್ಯಾಕಾಂಡ

### ಸರ್ಗ ೧

**ಶ್ರೀರಾಮನ ಗುಣಗಳ ವರ್ಣನೆ. ಅವನಿಗೆ ಪಟ್ಟಾಭಿಷೇಕ ಮಾಡಬೇಕೆಂದು ದಶರಥನ ಆಲೋಚನೆ.**

ಭರತನು ಸೋದರಮಾವನ ಮನೆಗೆ ಹೋಗುವಾಗ ಗುಣವಂತನೂ ಪರಾಕ್ರಮಿಯೂ ಆದ ಶತ್ರುಘ್ನನನ್ನು ಪ್ರೀತಿಯಿಂದ ತನ್ನೊಡನೆ ಕರೆದು ಕೊಂಡು ಹೋದನು (೧). ಅಲ್ಲಿ ಸೋದರಮಾವನಾದ ಯುಧಾಜಿತನೂ ಮಾತಾಮಹನಾದ ಅಶ್ವಪತಿಯೂ ಪುತ್ರವಾತ್ಸಲ್ಯದಿಂದ ಮಾಡುತ್ತಿದ್ದ ಸತ್ಕಾರಲಾಲನೆಗಳನ್ನು ಅನುಭವಿಸುತ್ತ ತಮ್ಮನಾದ ಶತ್ರುಘ್ನನೊಡನೆ ಸುಖದಿಂದಿದ್ದನು (೨). ಅವರಿಗೆ ಇಷ್ಟಾನುಸಾರವಾಗಿ ಸಕಲಸೌಖ್ಯವೂ ಅಲ್ಲಿ ದೊರಕುತ್ತಿತ್ತು. ಆದರೂ ವೀರರಾದ ಆ ಅಣ್ಣತಮ್ಮಂದಿರು ವೃದ್ಧನಾದ

ರಾಜಾಪಿ ತೌ ಮಹಾತೇಜಾಃ ಸಸ್ಮಾರ ಪ್ರೋಷಿತೌ ಸುತೌ ।
ಉಭೌ ಭರತಶತ್ರುಘ್ನೌ ಮಹೇಂದ್ರವರುಣೋಪಮೌ ॥ ೪

ಸರ್ವ ಏವ ತು ತಸ್ಯೇಷ್ಟಾಶ್ಚತ್ವಾರಃ ಪುರುಷರ್ಷಭಾಃ ।
ಸ್ವಶರೀರಾದ್ವಿನಿರ್ವೃತ್ತಾಶ್ಚತ್ವಾರ ಇವ ಬಾಹವಃ ॥ ೫

ತೇಷಾಮಪಿ ಮಹಾತೇಜಾ ರಾಮೋ ರತಿಕರಃ ಪಿತುಃ ।
ಸ್ವಯಂಭೂರಿವ ಭೂತಾನಾಂ ಬಭೂವ ಗುಣವತ್ತರಃ ॥ ೬

ಸ ಹಿ ದೇವೈರುದೀರ್ಣಸ್ಯ ರಾವಣಸ್ಯ ವಧಾರ್ಥಿಭಿಃ ।
ಅರ್ಥಿತೋ ಮಾನುಷೇ ಲೋಕೇ ಜಜ್ಞೇ ವಿಷ್ಣುಃ ಸನಾತನಃ ॥ ೭

ಕೌಸಲ್ಯಾ ಶುಶುಭೇ ತೇನ ಪುತ್ರೇಣಾಮಿತತೇಜಸಾ ।
ಯಥಾ ವರೇಣ ದೇವಾನಾಮದಿತಿರ್ವಜ್ರಪಾಣಿನಾ ॥ ೮

ಸ ಹಿ ವೀರ್ಯೋಪಪನ್ನಶ್ಚ ರೂಪವಾನನಸೂಯಕಃ ।
ಭೂಮಾವನುಪಮಃ ಸೂನುರ್ಗುಣೈರ್ದಶರಥೋಪಮಃ ॥ ೯

---

ದಶರಥರಾಜನನ್ನು ನೆನೆಸಿಕೊಳ್ಳುತ್ತಲೇ ಇದ್ದರು. ಇತ್ತ ದಶರಥಮಹಾರಾಜನೂ ಕೂಡ ಪರಸ್ಥಳಕ್ಕೆ ಹೋಗಿದ್ದ ತನ್ನ ಮಕ್ಕಳಾದ ಭರತಶತ್ರುಘ್ನರನ್ನು, ದೇವೇಂದ್ರ ವರುಣರಂತೆ ಇಬ್ಬರೂ ಎಷ್ಟು ಅನ್ಯೋನ್ಯಪ್ರೀತಿಯಿಂದ ಇದ್ದಾರೆ ಎಂದು ಸ್ಮರಿಸಿಕೊಳ್ಳುತ್ತಿದ್ದನು (೩-೪). ದಶರಥನಿಗೆ ಪುರುಷ ಶ್ರೇಷ್ಠರಾದ ನಾಲ್ವರು ಮಕ್ಕಳಲ್ಲಿಯೂ ಅತಿಶಯವಾದ ಪ್ರೀತಿ. ಅವರು ನಾಲ್ವರೂ ತನ್ನ ದೇಹಕ್ಕಿರುವ ನಾಲ್ಕು ಭುಜಗಳೆಂದು ಅವನು ಭಾವಿಸಿದ್ದನು. ಅದರಲ್ಲಿಯೂ ಮಹಾತೇಜಸ್ವಿಯಾದ ಶ್ರೀರಾಮನ ಮೇಲೆ ತಂದೆಗೆ ಅತ್ಯಂತ ವ್ಯಾಮೋಹ. ಸಕಲ ಜೀವಿಗಳಲ್ಲಿಯೂ ಬ್ರಹ್ಮದೇವನಂತೆ ಶ್ರೀರಾಮನು ಬಹಳ ಗುಣಶಾಲಿಯಾಗಿದ್ದನು (೫-೬). ಶ್ರೀರಾಮನೆಂದರೆ ಯಾರು? ಉದ್ಧತನಾದ ರಾವಣನನ್ನು ಸಂಹರಿಸಬೇಕೆಂದು ದೇವತೆಗಳು ಪ್ರಾರ್ಥಿಸಿಕೊಳ್ಳಲು, ಅದಕ್ಕೋಸ್ಕರ ಮನುಷ್ಯಲೋಕದಲ್ಲಿ ಅವತರಿಸಿದ ಸನಾತನನಾದ ಶ್ರೀಮನ್ನಾರಾಯಣನಲ್ಲವೆ? ಕೌಸಲ್ಯಾದೇವಿಯು ಮಹಾಪರಾಕ್ರಮಿಯಾದ ಆ ಪುತ್ರನೊಡನೆ, ವಜ್ರಪಾಣಿಯಾದ ದೇವೇಂದ್ರನೊಡನಿರುವ ಅದಿತಿಯಂತೆ ಶೋಭಿಸುತ್ತಿದ್ದಳು (೭-೮). ರಾಮನು ಕೌಸಲ್ಯೆಗೆ ಶೂರನೂ ರೂಪವಂತನೂ

ಸ ತು ನಿತ್ಯಂ ಪ್ರಶಾಂತಾತ್ಮಾ ಮೃದುಪೂರ್ವಂ ಚ ಭಾಷತೇ ।
ಉಚ್ಯಮಾನೋಽಪಿ ಪರುಷಂ ನೋತ್ತರಂ ಪ್ರತಿಪದ್ಯತೇ ॥ ೧೦

ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ ।
ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ ॥ ೧೧

ಶೀಲವೃದ್ಧೈರ್ಜ್ಞಾನವೃದ್ಧೈರ್ವಯೋವೃದ್ಧೈಶ್ಚ ಸಜ್ಜನೈಃ ।
ಕಥಯನ್ನಾಸ್ತ ವೈ ನಿತ್ಯಮಸ್ತ್ರ ಯೋಗ್ಯಾಂತರೇಷ್ವಪಿ ॥ ೧೨

ಬುದ್ಧಿಮಾನ್ ಮಧುರಾಭಾಷೀ ಪೂರ್ವಭಾಷೀ ಪ್ರಿಯಂವದಃ ।
ವೀರ್ಯವಾನ್ನ ಚ ವೀರ್ಯೇಣ ಮಹತಾ ಸ್ವೇನ ವಿಸ್ಮಿತಃ ॥ ೧೩

ನ ಚಾನೃತಕಥೋ ವಿದ್ವಾನ್ ವೃದ್ಧಾನಾಂ ಪ್ರತಿಪೂಜಕಃ ।
ಅನುರಕ್ತಃ ಪ್ರಜಾಭಿಶ್ಚ ಪ್ರಜಾಶ್ಚಾಪ್ಯನುರಂಜತೇ ॥ ೧೪

---

ಆದ ಪುತ್ರನಾಗಿದ್ದನು. ಅವನಿಗೆ ಯಾರ ಮೇಲೂ ಅಸೂಯೆಯಿರಲಿಲ್ಲ. ಅಂಥ ಪುತ್ರನು ಈ ಭೂಮಂಡಲದಲ್ಲಿ ಇನ್ನೊಬ್ಬಳಿಗೆ ಜನಿಸಿರಲಿಲ್ಲ. ದಶರಥನ ಸದ್ಗುಣಗಳೇ ಮಗನಲ್ಲಿ ಮೂಡಿಬಂದಿದ್ದವು. (೯). ರಾಮನು ಯಾವಾಗಲೂ ಶಾಂತಸ್ವಭಾವದವನು. ಜನರೊಡನೆ ಮೃದುವಾಗಿ ಮಾತನಾಡತಕ್ಕವನು. ಯಾರಾದರೂ ತನಗೆ ಕಠಿಣವಾಗಿ ನುಡಿದರೂ ಪ್ರತಿಯಾಗಿ ಹೇಳತಕ್ಕವನಲ್ಲ (೧೦.). ಯಾವುದಾದರೊಂದು ಚಿಕ್ಕ ಉಪಕಾರವನ್ನು ತನಗೆ ಮಾಡಿದರೂ ಸಾಕು, ಅದರಿಂದಲೇ ಸಂತೋಷಪಡುತ್ತಿದ್ದನು. ಅವನು ವಶೀಕೃತಚಿತ್ತನಾದ್ದರಿಂದ, ತನಗೆ ನೂರಾರು ಅಪಕಾರಗಳನ್ನು ಮಾಡಿದರೂ ಗಣಿಸತಕ್ಕವನಲ್ಲ (೧೧). ಶ್ರೀರಾಮನು ನಿತ್ಯವೂ ಶಸ್ತ್ರವಿದ್ಯೆಯನ್ನು ಅಭ್ಯಾಸಮಾಡುತ್ತಿದ್ದನಲ್ಲದೆ, ಬಿಡುವು ದೊರೆತಾಗ ಪರಿಶುದ್ಧಚಾರಿತ್ರರೂ ಜ್ಞಾನಿಗಳೂ ವಯೋವೃದ್ಧರೂ ಆದ ಸಜ್ಜನರೊಡನೆ ಕಲೆತು ಸಂಭಾಷಣೆ ಮಾಡುತ್ತಿದ್ದನು (೧೨). ಅವನು ಮೇಧಾವಿ. ಸರ್ವದಾ ಮಧುರವಾಗಿ ಪ್ರಿಯವಾದ ಮಾತನ್ನಾಡತಕ್ಕವನು. ಜನರನ್ನು ಕಂಡಾಗ ತಾನೇ ಮೊದಲು ಮಾತನಾಡಿಸುವನು. ಮಹಾಶೂರನಾದರೂ ತಾನು ಶೂರನೆಂಬ ಜಂಭವಿಲ್ಲ (೧೩). ಆತನ ಬಳಿ ಸುಳ್ಳೆಂಬುದು ಸುಳಿಯದು. ಶಾಸ್ತ್ರದಲ್ಲಿ ಪಂಡಿತ. ಗುರುಹಿರಿಯರನ್ನು ಗೌರವದಿಂದ ಪೂಜಿಸತಕ್ಕವನು. ಪ್ರಜೆಗಳೆಲ್ಲರಿಗೂ ಅವನಲ್ಲಿ ಅನುರಾಗ.

ಸಾನುಕ್ರೋಶೋ ಜಿತಕ್ರೋಧೋ ಬ್ರಾಹ್ಮಣಪ್ರತಿಪೂಜಕಃ ।
ದೀನಾನುಕಂಪೀ ಧರ್ಮಜ್ಞೋ ನಿತ್ಯಂ ಪ್ರಗ್ರಹವಾನ್ ಶುಚಿಃ ॥ ೧೫

ಕುಲೋಚಿತಮತಿಃ ಕ್ಷಾತ್ರಂ ಧರ್ಮಂ ಸ್ವಂ ಬಹು ಮನ್ಯತೇ ।
ಮನ್ಯತೇ ಪರಯಾ ಕೀರ್ತ್ಯಾ ಮಹತ್ ಸ್ವರ್ಗಫಲಂ ತತಃ ॥ ೧೬

ನಾಶ್ರೇಯಸಿ ರತೋ ಯಶ್ಚ ನ ವಿರುದ್ಧಕಥಾರುಚಿಃ ।
ಉತ್ತರೋತ್ತರಯುಕ್ತೀನಾಂ ವಕ್ತಾ ವಾಚಸ್ಪತಿರ್ಯಥಾ ॥ ೧೭

ಅರೋಗಸ್ತರುಣೋ ವಾಗ್ಮೀ ವಪುಷ್ಮಾನ್ ದೇಶಕಾಲವಿತ್ ।
ಲೋಕೇ ಪುರುಷಸಾರಜ್ಞಃ ಸಾಧುರೇಕೋ ವಿನಿರ್ಮಿತಃ ॥ ೧೮

---

ಅವನಿಗೆ ಪ್ರಜೆಗಳಲ್ಲಿ ಅನುರಾಗ (೧೪). ಶ್ರೀರಾಮನು ಬಡಬಗ್ಗರಲ್ಲಿ ದಯಾಳುವಾಗಿದ್ದನು. ಅವನು ಕ್ರೋಧವನ್ನು ಗೆದ್ದವನು. ಬ್ರಾಹ್ಮಣರನ್ನು ಭಕ್ತಿಯಿಂದ ಪೂಜಿಸುವವನು. ದೀನರಲ್ಲಿ ಮರುಕವುಳ್ಳವನು. ಆತನು ಧರ್ಮಜ್ಞನೂ ನಿಯಮವಂತನೂ ಪರಧನವನ್ನು ಎಂದಿಗೂ ಬಯಸದ ಶುದ್ಧಮನಸ್ಕನೂ ಆಗಿದ್ದನು (೧೫). ಶ್ರೀರಾಮನು ತನ್ನ ಇಕ್ಷ್ವಾಕುವಂಶಕ್ಕೆ ಉಚಿತವಾದ (ದಯಾ ದಾಕ್ಷಿಣ್ಯ ದೀನಸಂರಕ್ಷಣೆ ಮುಂತಾದ) ಗುಣಗಳಲ್ಲಿ ನಿಷ್ಠೆಯುಳ್ಳವನು. ಕ್ಷಾತ್ರಧರ್ಮವು ಸ್ವಧರ್ಮವೆಂದು ಬಗೆದು ಅದರಲ್ಲಿ ವಿಶೇಷವಾದ ಆದರವನ್ನಿಟ್ಟಿದ್ದನು. ಅದರಿಂದ ಮಹಾಕೀರ್ತಿಯೂ ಸ್ವರ್ಗವೂ ದೊರೆಯುವುದೆಂದು ನಂಬಿದ್ದನು (೧೬). ಅವನಿಗೆ ಶ್ರೇಯಸ್ಕರವಲ್ಲದ ಕೆಲಸದಲ್ಲಿ ಸ್ವಲ್ಪವೂ ಆಸಕ್ತಿ ಇರಲಿಲ್ಲ. ಕುತ್ಸಿತವಾದ ವಿಷಯವನ್ನು ಕುರಿತು ಮಾತನಾಡುವುದರಲ್ಲಿ ಲೇಶವಾದರೂ ಇಷ್ಟವಿರಲಿಲ್ಲ. ಶ್ರೀರಾಮನು (ಶಾಸ್ತ್ರೀಯ ವಿಷಯದಲ್ಲಿ ಮಾತನಾಡುವ ಪ್ರಸಂಗ ಬಂದಾಗ) ಒಂದರ ಮೇಲೊಂದು ಯುಕ್ತಿಯನ್ನು ಜೋಡಿಸಿ ಬೃಹಸ್ಪತಿಯಂತೆ ತನ್ನ ವಾಗ್ವೈಖರಿಯನ್ನು ಮೆರೆಯಿಸುತ್ತಿದ್ದನು (೧೭). ಆತನು ಸದಾ ಆರೋಗ್ಯ ಶಾಲಿ; ತರುಣ; ವಾಗ್ಮಿ; ಬಲಿಷ್ಠವಾದ ಸುಂದರಶರೀರವುಳ್ಳವನು. ದೇಶಕಾಲಗಳನ್ನು ತಿಳಿದು ವ್ಯವಹರಿಸತಕ್ಕವನು. ಜನರನ್ನು ನೋಡುತ್ತಿದ್ದಂತೆಯೇ ಅವರ ಯೋಗ್ಯತೆಯನ್ನು ತಿಳಿದುಕೊಳ್ಳಲು ಸಮರ್ಥನು. ಸಕಲಗುಣ ಸಂಪನ್ನನಾದ ಸತ್ಪುರುಷನೊಬ್ಬನಿರಲೆಂದು ಶ್ರೀರಾಮನೊಬ್ಬನನ್ನೇ

ಸ ತು ಶ್ರೇಷ್ಠಗುಣೈರ್ಯುಕ್ತಃ ಪ್ರಜಾನಾಂ ಪಾರ್ಥಿವಾತ್ಮಜಃ ।
ಬಹಿಶ್ಚರ ಇವ ಪ್ರಾಣೋ ಬಭೂವ ಗುಣತಃ ಪ್ರಿಯಃ ॥ ೧೯

ಸಮ್ಯಗ್ವಿದ್ಯಾವ್ರತಸ್ನಾತೋ ಯಥಾವತ್ ಸಾಂಗವೇದವಿತ್ ।
ಇಷ್ವಸ್ತ್ರೇ ಚ ಪಿತುಃ ಶ್ರೇಷ್ಠೋ ಬಭೂವ ಭರತಾಗ್ರಜಃ ॥ ೨೦

ಕಲ್ಯಾಣಾಭಿಜನಃ ಸಾಧುರದೀನಃ ಸತ್ಯವಾಗೃಜುಃ ।
ವೃದ್ಧೈರಭಿವಿನೀತಶ್ಚ ದ್ವಿಜೈರ್ಧರ್ಮಾರ್ಥದರ್ಶಿಭಿಃ ॥ ೨೧

ಧರ್ಮಾರ್ಥಕಾಮತತ್ತ್ವಜ್ಞಃ ಸ್ಮೃತಿಮಾನ್ ಪ್ರತಿಭಾನವಾನ್ ।
ಲೌಕಿಕೇ ಸಮಯಾಚಾರೇ ಕೃತಕಲ್ಪೋ ವಿಶಾರದಃ ॥ ೨೨

ನಿಭೃತಃ ಸಂವತಾಕಾರೋ ಗುಪ್ತಮಂತ್ರಃ ಸಹಾಯವಾನ್ ॥
ಅಮೋಘಕ್ರೋಧಹರ್ಷಶ್ಚ ತ್ಯಾಗಸಂಗ್ರಹಕಾಲವಿತ್ ॥ ೨೩

---

ಬ್ರಹ್ಮನು ಸೃಷ್ಟಿಸಿದ್ದನು (೧೮). ಆ ರಾಜಕುಮಾರನು ಶ್ರೇಷ್ಠಗುಣಯುಕ್ತನಾದ್ದರಿಂದ ಪ್ರಜೆಗಳು ಅವನನ್ನು ಹೊರಗೆ ಸುಳಿದಾಡುವ ತಮ್ಮ ಪ್ರಾಣವೋ ಎಂಬಂತೆ ಪ್ರೀತಿಸುತ್ತಿದ್ದರು. ಆತನು ಗುರುಸನ್ನಿಧಿಯಲ್ಲಿ ಕ್ರಮವಾಗಿ ವಿದ್ಯಾಭ್ಯಾಸವನ್ನು ಮಾಡಿ ಸಮಾವೃತನಾಗಿದ್ದನು. ವೇದವೇದಾಂಗಗಳನ್ನು ವಿಧಿಪೂರ್ವಕವಾಗಿ ಅಧ್ಯಯನ ಮಾಡಿದ್ದನು. ಶಸ್ತ್ರಾಸ್ತ್ರವಿದ್ಯೆಯಲ್ಲಿ * ತನ್ನ ತಂದೆಯನ್ನು ಮೀರಿಸುವಷ್ಟು ಪರಿಣತನಾಗಿದ್ದನು (೧೯-೨೦). ಶ್ರೀರಾಮನು ಪರಿಶುದ್ಧವಂಶದಲ್ಲಿ ಜನಿಸಿದ ತಂದೆತಾಯಿಗಳನ್ನು ಪಡೆದ ಸತ್ಪುರುಷ. ಎಂತಹ ವಿಪತ್ತಿನಲ್ಲಿಯೂ ಕಂಗೆಡದ ಧೀರ. ಸತ್ಯವನ್ನೇ ನುಡಿಯತಕ್ಕವನು. ಋಜುಮಾರ್ಗದಲ್ಲಿಯೇ ನಡೆಯತಕ್ಕವನು. ಧರ್ಮಾರ್ಥಗಳನ್ನು ಬಲ್ಲ ಹಿರಿಯರಾದ ಬ್ರಾಹ್ಮಣರಿಂದ ಶಿಕ್ಷಣವನ್ನು ಪಡೆದವನು (೨೧). ಆತನು ಧರ್ಮಾರ್ಥಕಾಮಗಳನ್ನು ಕಾಲೋಚಿತವಾಗಿ ಬಳಸುವ ರಹಸ್ಯವನ್ನರಿತಿದ್ದನು. ಅವನಿಗೆ ಒಳ್ಳೆಯ ಸ್ಮರಣಶಕ್ತಿ ಇದ್ದಿತು. ಅವನು ಮಹಾಪ್ರತಿಭಾಶಾಲಿ. ಲೌಕಕ ವ್ಯವಹಾರದಲ್ಲಿಯೂ ಸಂಪ್ರದಾಯದಲ್ಲಿಯೂ ಚೆನ್ನಾಗಿ ನುರಿತವನು (೨೨). ಹೀಗಿದ್ದರೂ ಶ್ರೀರಾಮನು ಅತ್ಯಂತ ವಿನಯಶಾಲಿ. ತನ್ನ ಸುಖದುಃಖಗಳನ್ನು ಹೊರಗೆ ತೋರ್ಪಡಿಸದ ಗಂಭೀರಸ್ವಭಾವದವನು. ಮಂತ್ರಾ

---

* ಮಂತ್ರರಹಿತವಾದ ಆಯುಧ ಶಸ್ತ್ರ. ಮಂತ್ರಪೂರ್ವಕವಾದ ಆಯುಧ ಅಸ್ತ್ರ.

ದೃಢಭಕ್ತಿಃ ಸ್ಥಿರಪ್ರಜ್ಞೋ ನಾಸದ್ಗ್ರಾಹೀ ನ ದುರ್ವಚಾಃ ।
ನಿಸ್ತಂದ್ರಿರಪ್ರಮತ್ತಶ್ಚ ಸ್ವದೋಷಪರದೋಷವಿತ್ ॥ ೨೪

ಶಾಸ್ತ್ರಜ್ಞಶ್ಚ ಕೃತಜ್ಞಶ್ಚ ಪುರುಷಾಂತರಕೋವಿದಃ ।
ಯಃ ಪ್ರಗ್ರಹಾನುಗ್ರಹಯೋರ್ಯಥಾನ್ಯಾಯಂ ವಿಚಕ್ಷಣಃ ॥ ೨೫

ಸತ್ಸಂಗ್ರಹಪ್ರಗ್ರಹಣೇ ಸ್ಥಾನವಿನ್ನಿಗ್ರಹಸ್ಯ ಚ ।
ಆಯಕರ್ಮಣ್ಯುಪಾಯಜ್ಞಃ ಸಂದೃಷ್ಟವ್ಯಯಕರ್ಮವಿತ್ ॥ ೨೬

ಶ್ಲೈಷ್ಣ್ಯಂ ಶಾಸ್ತ್ರಸಮೂಹೇಷು ಪ್ರಾಪ್ತೋ ವ್ಯಾಮಿಶ್ರಕೇಷು ಚ ।
ಅರ್ಥಧರ್ಮೌ ಚ ಸಂಗೃಹ್ಯ ಸುಖಿತಂತ್ರೋ ನ ಚಾಲಸಃ ॥ ೨೭

---

ಲೋಚನೆಯನ್ನು ರಹಸ್ಯವಾಗಿ ಇರಿಸಬಲ್ಲವನು. ಅವನಿಗೆ ಉತ್ತಮರಾದ ಸಹಾಯಕ ಮಂತ್ರಿಗಳಿದ್ದರು. ಒಂದು ವೇಳೆ ಅವನಿಗೆ ಕೋಪವಾಗಲಿ ಅನುಗ್ರಹಬುದ್ಧಿಯಾಗಲಿ ಹುಟ್ಟಿದರೆ, ಅದು ಆಯಾ ಜನರಿಗೆ ತಕ್ಕ ಫಲವನ್ನು ಕೊಡದೆ ವಿರಮಿಸದು ಐಶ್ವರ್ಯವನ್ನು ದಾನಮಾಡುವುದಕ್ಕೂ ಸಂಗ್ರಹ ಮಾಡುವುದಕ್ಕೂ ಕಾಲಾಕಾಲ ಗಳನ್ನು ಅವನು ಬಲ್ಲನು (೨೩). ಶ್ರೀರಾಮನಿಗೆ ಗುರುಹಿರಿಯರಲ್ಲಿಯೂ ದೇವತೆಗಳಲ್ಲಿಯೂ ದೃಢವಾದ ಭಕ್ತಿ. ಅವನ ಪ್ರಜ್ಞಾಶಕ್ತಿಯು ಯಾವ ಸಮಯದಲ್ಲಿಯೂ ಸ್ಥಿರವಾಗಿ ಇರುತ್ತಿತ್ತು. ಅವನು ಕೆಟ್ಟವರನ್ನು ಹತ್ತಿರಕ್ಕೆ ಸೇರಿಸುತ್ತಿರಲಿಲ್ಲ. ಕೆಟ್ಟ ಮಾತನ್ನು ಆಡುತ್ತಿರಲಿಲ್ಲ. ಕೆಲಸ ದಲ್ಲಿ ಆಲಸ್ಯವೆಂಬುದೇ ಅವನಿಗಿರಲಿಲ್ಲ. ಅವನಿಂದ ಪ್ರಮಾದವು ನಡೆದದ್ದೇ ಇಲ್ಲ. ಅವನು ಇತರ ಜನರಲ್ಲಿರುವ ನ್ಯೂನತೆಗಳನ್ನು ಗಮನಿಸುತ್ತಿದ್ದ ನಲ್ಲದೆ ತನ್ನಲ್ಲಿರಬಹುದಾದ ನ್ಯೂನತೆ ಯಾವುದೆಂಬುದನ್ನು ವಿಮರ್ಶಿಸಿಕೊಳ್ಳು ತ್ತಿದ್ದನು (೨೪). ಶ್ರೀರಾಮನು ಸಮಸ್ತ ಶಾಸ್ತ್ರಜ್ಞ; ಕೃತಜ್ಞ; ಜನರ ಸ್ವಭಾವವನ್ನು ಪರಿಶೀಲಿಸುವುದರಲ್ಲಿ ಕೋವಿದ. ಮಿತ್ರರನ್ನು ಸಂಗ್ರಹಿಸುವುದರಲ್ಲಿಯೂ ಸಮಯದಲ್ಲಿ ಅವರಿಗೆ ಉಪಕಾರ ಮಾಡುವುದರಲ್ಲಿಯೂ ವಿಚಕ್ಷಣ (೨೫). ಸಜ್ಜನರಿಗೆ ಆಶ್ರಯವಿತ್ತು ರಕ್ಷಿಸುವುದರಲ್ಲಿಯೂ ದುಷ್ಟರನ್ನು ದಂಡಿಸುವುದರಲ್ಲಿಯೂ ಔಚಿತ್ಯವನ್ನು ಬಲ್ಲವನು. ನ್ಯಾಯಮಾರ್ಗದಲ್ಲಿ ಹೇಗೆ ಧನವನ್ನು ಸಂಪಾದಿಸಬೇಕೆಂಬುದನ್ನೂ ಹೇಗೆ ವ್ಯಯಮಾಡಬೇಕೆಂಬುದನ್ನೂ ಚೆನ್ನಾಗಿ ತಿಳಿದಿರುವನು (೨೬). ಶ್ರೀರಾಮನಿಗೆ

ವೈಹಾರಿಕಾಣಾಂ ಶಿಲ್ಪಾನಾಂ ವಿಜ್ಞಾತಾರ್ಥವಿಭಾಗವಿತ್ ।
ಆರೋಹೇ ವಿನಯೇ ಚೈವ ಯುಕ್ತೋ ವಾರಣ ವಾಜಿವಾಮ್ ॥ ೨೮

ಧನುರ್ವೇದವಿದಾಂ ಶ್ರೇಷ್ಠೋ ಲೋಕೇಽತ್ರಿರಥಸಂಮತಃ ।
ಅಭಿಯಾತಾ ಪ್ರಹರ್ತಾ ಚ ಸೇನಾನಯವಿಶಾರದಃ ॥ ೨೯

ಅಪ್ರಧೃಷ್ಯಶ್ಚ ಸಂಗ್ರಾಮೇ ಕ್ರುದ್ಧೈರಪಿ ಸುರಾಸುರೈಃ ।
ಅನಸೂಯೋ ಜಿತಕ್ರೋಧೋ ನ ದೃಪ್ತೋ ನ ಚ ಮತ್ಸರೀ ॥ ೩೦

ನ ಚಾವಮಂತಾ ಭೂತಾನಾಂ ನ ಚ ಕಾಲವಶಾನುಗಃ ।
ಏವಂ ಶ್ರೇಷ್ಠಗುಣೈರ್ಯುಕ್ತಃ ಪ್ರಜಾನಾಂ ಪಾರ್ಥಿವಾತ್ಮಜಃ ॥ ೩೧

---

ಶಾಸ್ತ್ರಗಳಲ್ಲಿಯೂ ಕಾವ್ಯನಾಟಕಾದಿ ಸಾಹಿತ್ಯದಲ್ಲಿಯೂ ಉತ್ತಮವಾದ ಪಾಂಡಿತ್ಯವಿತ್ತು. ಅವನು ಅರ್ಥಧರ್ಮಗಳಿಗೆ ವಿರೋಧಬರದಂತೆ ಸುಖವನ್ನನುಭವಿಸುತ್ತಿದ್ದನು. ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ಆಲಸ್ಯವೆಂಬುದೇ ಅವನಿಗಿರಲಿಲ್ಲ (೨೭). ಮನೋರಂಜನೆಯನ್ನುಂಟುಮಾಡುವ ಸಂಗೀತ, ಚಿತ್ರ ಮುಂತಾದ ಕಲೆಗಳಲ್ಲಿ ಅವನಿಗೆ ನೈಪುಣ್ಯವಿದ್ದಿತು. ಅವುಗಳ ಸ್ವರೂಪ ತಾರತಮ್ಯಗಳನ್ನು ಅವನು ತಿಳಿದಿದ್ದನು. ಆನೆ ಕುದುರೆಗಳನ್ನು ಸವಾರಿ ಮಾಡುವುದರಲ್ಲಿಯೂ ಅವುಗಳನ್ನು ಪಳಗಿಸುವುದರಲ್ಲಿಯೂ ಆತನು ಬಹುಸಮರ್ಥ (೨೮). ಯುದ್ಧವಿದ್ಯೆಯಲ್ಲಿ ಶ್ರೀರಾಮನನ್ನು ಮೀರಿಸಿದವರಿರಲಿಲ್ಲ. ಅತಿರಥರೆನಿಸಿಕೊಂಡವರೂ ಅವನನ್ನು ಗೌರವಿಸುತ್ತಿದ್ದರು. ಸಂಗ್ರಾಮಭೂಮಿಯಲ್ಲಿ ತಾನೇ ಮುಂದೆ ನುಗ್ಗಿ ವೈರಿಗಳನ್ನು ಸದೆಬಡಿಯುತ್ತಿದ್ದ ವೀರನವನು. ಸೇನಾವ್ಯೂಹವನ್ನು ರಚಿಸುವುದರಲ್ಲಿ ವಿಶಾರದ (೨೯). ಒಂದು ವೇಳೆ ದೇವಾಸುರರೆಲ್ಲರೂ ಕ್ರುದ್ಧರಾಗಿ ಸಮರಾಂಗಣದಲ್ಲಿ ಎದುರಿಸಿದರೂ ಶ್ರೀರಾಮನನ್ನು ಕದಲಿಸಲು ಶಕ್ಯವಿರಲಿಲ್ಲ. ಅವನು ಅಂಥ ಪರಾಕ್ರಮಿ. ಅವನಲ್ಲಿ ಅಸೂಯೆಯೆಂಬುದಿಲ್ಲ. ಕೋಪವನ್ನು ಅಂಕೆಯಲ್ಲಿಟ್ಟುಕೊಂಡಿದ್ದನು. ಅವನು ಅಹಂಕಾರಿಯಲ್ಲ. ಮತ್ಸರಿಯಲ್ಲ (೩೦). ಶ್ರೀರಾಮನು ಯಾರನ್ನೂ ಅವಮಾನಪಡಿಸತಕ್ಕವನಲ್ಲ. ಸಮಯಸಾಧಕನಲ್ಲ. ಹೀಗೆ ಆ ರಾಜಪುತ್ರನು ಲೋಕೋತ್ತರವಾದ ಶ್ರೇಷ್ಠ ಗುಣಗಳಿಂದ ಮೂರು ಲೋಕದ ಜನರಿಗೂ ಪ್ರಿಯನಾಗಿದ್ದನು. ಆತನು ತಾಳ್ಮೆಯಲ್ಲಿ ಭೂದೇವಿಗೂ

ಸಂಮತಸ್ತ್ರಿಷು ಲೋಕೇಷು ವಸುಧಾಯಾಃ ಕ್ಷಮಾಗುಣೈಃ ।
ಬುದ್ಧ್ಯಾ ಬೃಹಸ್ಪತೇಸ್ತುಲ್ಯೋ ವೀರ್ಯೇಣಾಪಿ ಶಚೀಪತೇಃ ॥ ೩೨

ತಥಾ ಸರ್ವಪ್ರಜಾಕಾಂತೈಃ ಪ್ರೀತಿಸಂಜನನೈಃ ಪಿತುಃ ।
ಗುಣೈರ್ವಿರುರುಚೇ ರಾಮೋ ದೀಪ್ತಃ ಸೂರ್ಯ ಇವಾಂಶುಭಿಃ ॥ ೩೩

ತಮೇವಂ ವೃತ್ತಸಂಪನ್ನಮಪ್ರಧೃಷ್ಯಪರಾಕ್ರಮಮ್ ।
ಲೋಕಪಾಲೋಪಮಂ ನಾಥಮಕಾಮಯತ ಮೇದಿನೀ ॥ ೩೪

ಏತೈಸ್ತು ಬಹುಭಿರ್ಯುಕ್ತಂ ಗುಣೈರನುಪಮೈಃ ಸುತಮ್ ।
ದೃಷ್ಟ್ವಾ ದಶರಥೋ ರಾಜಾ ಚಕ್ರೇ ಚಿಂತಾಂ ಪರಂತಪಃ ॥ ೩೫

ಅಥ ರಾಜ್ಞೋ ಬಭೂವೈವಂ ವೃದ್ಧಸ್ಯ ಚಿರಜೀವಿನಃ ।
ಪ್ರೀತಿರೇಷಾ ಕಥಂ ರಾಮೋ ರಾಜಾ ಸ್ಯಾನ್ಮಯಿ ಜೀವತಿ ॥ ೩೬

ಏಷಾ ಹ್ಯಸ್ಯ ಪರಾ ಪ್ರೀತಿರ್ಹೃದಿ ಸಂಪರಿವರ್ತತೇ ।
ಕದಾ ನಾಮ ಸುತಂ ದ್ರಕ್ಷ್ಯಾಮ್ಯಭಿಷಿಕ್ತಮಹಂ ಪ್ರಿಯಮ್ ॥ ೩೭

---

ಬುದ್ಧಿಯಲ್ಲಿ ಬೃಹಸ್ಪತಿಗೂ ಪರಾಕ್ರಮದಲ್ಲಿ ದೇವೇಂದ್ರನಿಗೂ ಸಮಾನನು (೩೧-೩೨). ಆತನ ಸದ್ಗುಣಗಳು ಸಮಸ್ತ ಪ್ರಜೆಗಳಿಗೂ ಪ್ರಿಯವಾಗಿದ್ದವು. ತಂದೆಯಾದ ದಶರಥನು ಮಗನ ಈ ಸದ್ಗುಣಗಳನ್ನು ಕಂಡು ಹಿಗ್ಗುತ್ತಿದ್ದನು. ಸೂರ್ಯನು ತನ್ನ ಕಿರಣಗಳಿಂದ ಬೆಳಗುವಂತೆ ರಾಮನು ಈ ಗುಣಗಳಿಂದ ಬೆಳಗುತ್ತಿದ್ದನು (೩೩). ಹೀಗೆ ಶ್ರೀರಾಮನು ಸಚ್ಚಾರಿತ್ರನೂ ಅಪ್ರತಿಮ ಪರಾಕ್ರಮ ಶಾಲಿಯೂ ದಿಕ್ಪಾಲಸಮಾನನೂ ಆಗಿರುವುದನ್ನು ಕಂಡು, ಆತನು ತನಗೆ ಪತಿಯಾಗಲೆಂದು ಭೂದೇವಿಯು ಬಯಸಿದಳು ! (೩೪). ಆಗ ದಶರಥ ಮಹಾರಾಜನಿಗೆ ಅಸಾಧಾರಣವಾದ ಗುಣಾತಿಶಯಗಳಿಂದ ವಿರಾಜಿಸುವ ಮಗನನ್ನು ನೋಡಿ ಒಂದು ಆಲೋಚನೆ ಹುಟ್ಟಿತು : "ನಾನು ವೃದ್ಧನಾದೆ. ಬಹುಕಾಲ ಬದುಕಿದೆ. ನನ್ನ ಕಣ್ಣೆದುರಿಗೆ ರಾಮನು ರಾಜನಾದರೆ ನನಗೆ ಆನಂದವಾಗುವುದು. ಇದು ಹೇಗೆ ಸಾಧ್ಯವಾದೀತು ? (೩೫-೩೬). ನನ್ನ ಮೋಹದ ಕಂದನಿಗೆ ಪಟ್ಟಾಭಿಷೇಕ ವಾಗುವುದನ್ನು ಯಾವಾಗ ನೋಡಿ ಆನಂದಿಸಿಯೇನು ? ಅದನ್ನು ಎಂದು ನೋಡುವೆನೋ ಎಂಬ ಆಸೆ ಹೃದಯದಲ್ಲಿ ತುಂಬಿ ನಿಂತಿದೆ (೩೭).

ವೃದ್ಧಿಕಾಮೋ ಹಿ ಲೋಕಸ್ಯ ಸರ್ವಭೂತಾನುಕಂಪನಃ ।
ಮತ್ತಃ ಪ್ರಿಯತರೋ ಲೋಕೇ ಪರ್ಜನ್ಯ ಇವ ವೃಷ್ಟಿಮಾನ್ ॥ ೩೮

ಯಮಶಕ್ರಸಮೋ ವೀರ್ಯೇ ಬೃಹಸ್ಪತಿಸಮೋ ಮತೌ ।
ಮಹೀಧರಸಮೋ ಧೃತ್ಯಾಂ ಮತ್ತಶ್ಚ ಗುಣವತ್ತರಃ ॥ ೩೯

ಮಹೀಮಹಮಿಮಾಂ ಕೃತ್ಸ್ನಾಮಧಿತಿಷ್ಠಂತಮಾತ್ಮಜಮ್ ।
ಅನೇನ ವಯಸಾ ದೃಷ್ಟ್ವಾ ಯಥಾ ಸ್ವರ್ಗಮವಾಪ್ನುಯಾಮ್ ॥ ೪೦

ಇತ್ಯೇತೈರ್ವಿವಿಧೈಸ್ತೈಸ್ತೈರನ್ಯಪಾರ್ಥಿವದುರ್ಲಭೈಃ ।
ಶಿಷ್ಟೈರಪರಿಮೇಯೈಶ್ಚ ಲೋಕೇ ಲೋಕೋತ್ತರೈರ್ಗುಣೈಃ ॥ ೪೧

ತಂ ಸಮೀಕ್ಷ್ಯ ಮಹಾರಾಜೋ ಯುಕ್ತಂ ಸಮುದಿತೈಃ ಶುಭೈಃ ।
ನಿಶ್ಚಿತ್ಯ ಸಚಿವೈಃ ಸಾರ್ಧಂ ಯುವರಾಜಮಮನ್ಯತ ॥ ೪೨

ದಿವ್ಯಾಂತರಿಕ್ಷೇ ಭೂಮೌ ಚ ಘೋರಮುತ್ಪಾತಜಂ ಭಯಮ್ ।
ಸಂಚಚಕ್ಷೇ ಚ ಮೇಧಾವೀ ಶರೀರೇ ಚಾತ್ಮನೋ ಜರಾಮ್ ॥ ೪೩

---

"ಅವನು ಪ್ರಜೆಗಳಿಗೆ ಶ್ರೇಯಸ್ಸನ್ನು ಹಾರೈಸುತ್ತಾನೆ. ಅವನಿಗೆ ನಿಖಿಲ ಪ್ರಾಣಿಗಳಲ್ಲಿಯೂ ಎಷ್ಟು ಅನುಕಂಪ! ಪ್ರಜೆಗಳಿಗೆ ನನ್ನಲ್ಲಿರುವುದಕ್ಕಿಂತಲೂ ರಾಮನಲ್ಲಿ ಹೆಚ್ಚು ಪ್ರೀತಿ! ಅವರಿಗೆ ರಾಮನನ್ನು ಕಂಡರೆ ಮಳೆಸುರಿಸುವ ಮೇಘವನ್ನು ಕಂಡಂತಾಗುತ್ತದೆ! (೩೮). ಪರಾಕ್ರಮದಲ್ಲಿ ಯಮನಂತೆ - ದೇವೇಂದ್ರನಂತೆ ಇದ್ದಾನೆ. ಬುದ್ಧಿಶಕ್ತಿಯಲ್ಲಿ ಬೃಹಸ್ಪತಿಗೆ ಸಮಾನ. ಧೈರ್ಯದಲ್ಲಿ ಬೆಟ್ಟದ ಹಾಗೆ ಸ್ಥಿರನಾಗಿದ್ದಾನೆ. ನಿಜವಾಗಿಯೂ ಶ್ರೀರಾಮನು ನನಗಿಂತ ಗುಣಶಾಲಿ (೩೯). ಸಕಲ ರಾಜ್ಯದ ಅಧಿಪತ್ಯವನ್ನು ವಹಿಸಿಕೊಂಡು ರಾಜ್ಯವಾಳುವ ಮಗನನ್ನು ನೋಡುವ ಯೋಗವು ದೊರಕಿದರೆ, ಈ ವಯಸ್ಸಿನಲ್ಲಿ ನನಗೆ ಸ್ವರ್ಗಸುಖವು ಲಭಿಸಿದಂತೆಯೇ. ಅಂತಹ ಭಾಗ್ಯವನ್ನನುಭವಿಸಿ ನಾನು ಪರಲೋಕವನ್ನು ಸೇರಬೇಕು" (೪೦). ಹೀಗೆ ಚಿಂತಿಸುತ್ತ ಮಂತ್ರಿಗಳೊಡನೆ ಆಲೋಚಿಸಿ ದಶರಥರಾಜನು ಒಂದು ನಿಶ್ಚಯಕ್ಕೆ ಬಂದನು. ಇತರ ಯಾವ ಕ್ಷತ್ರಿಯರಾಜರಲ್ಲಿಯೂ ಕಂಡುಬರದ ಊಹಾತೀತವಾದ ಲೋಕೋತ್ತರ ಸದ್ಗುಣಗಳಿಂದ ಪ್ರಕಾಶಿಸುವ ಶ್ರೀರಾಮನಿಗೆ ಯುವರಾಜ ಪದವಿಯನ್ನು ಕೊಡಬೇಕೆಂದು ನಿಶ್ಚಯಿಸಿದನು (೪೧-೪೨). ಆ ಬುದ್ಧಿ

ಪೂರ್ಣಚಂದ್ರಾನನಸ್ಯಾಥ ಶೋಕಾಪನುದಮಾತ್ಮನಃ ।
ಲೋಕೇ ರಾಮಸ್ಯ ಬುಬುಧೇ ಸಂಪ್ರಿಯತ್ವಂ ಮಹಾತ್ಮನಃ ॥ ೪೪

ಆತ್ಮನಶ್ಚ ಪ್ರಜಾನಾಂ ಚ ಶ್ರೇಯಸೇ ಚ ಪ್ರಿಯೇಣ ಚ ।
ಪ್ರಾಪ್ತಕಾಲೇ ಸ ಧರ್ಮಾತ್ಮಾ ಭಕ್ತ್ಯಾ ತ್ವರಿತವಾನ್ ನೃಪಃ ॥ ೪೫

ನಾನಾನಗರವಾಸ್ತವ್ಯಾನ್ ಪೃಥಗ್ಜಾನಪದಾನಪಿ ।
ಸಮಾನಿನಾಯ ಮೇದಿನ್ಯಾಃ ಪ್ರಧಾನಾನ್ ಪೃಥಿವೀಪತೀನ್ ॥ ೪೬

ತಾನ್ ವೇಶ್ಮನಾನಾಭರಣೈರ್ಯಥಾರ್ಹಂ ಪ್ರತಿಪೂಜಿತಾನ್ ।
ದದರ್ಶಾಲಂಕೃತೋ ರಾಜಾ ಪ್ರಜಾಪತಿರಿವ ಪ್ರಜಾಃ ॥ ೪೭

---

ಶಾಲಿಯು ದೇವಲೋಕದಲ್ಲಿಯೂ ಅಂತರಿಕ್ಷದಲ್ಲಿಯೂ ಭೂಮಿಯಲ್ಲಿಯೂ ಗೋಚರಿಸುತ್ತಿದ್ದ ಉತ್ಪಾತಗಳನ್ನು* ಗಮನಿಸಿದನಲ್ಲದೆ, ತನ್ನ ಶರೀರವು ಮುಪ್ಪಿನಿಂದ ಜೀರ್ಣವಾಗುತ್ತಿರುವುದನ್ನು ಲಕ್ಷಿಸಿದನು (೪೩). ಪೂರ್ಣಚಂದ್ರನಂತೆ ಸುಂದರವಾದ ಮುಖವುಳ್ಳ ಮಹಾತ್ಮನಾದ ಶ್ರೀರಾಮಚಂದ್ರನು ಜನಪ್ರಿಯನಾಗಿರುವುದನ್ನು ನೆನೆಸಿಕೊಂಡಾಗ ದಶರಥನ ಚಿಂತೆಯು ಶಾಂತವಾಯಿತು (೪೪). ಧರ್ಮಾತ್ಮನಾದ ಆ ನೃಪಾಲನು ಪ್ರಜೆಗಳ ಶ್ರೇಯೋಭಿವೃದ್ಧಿಗೂ ತನ್ನ ಇಷ್ಟವನ್ನು ನೆರವೇರಿಸಿಕೊಳ್ಳುವುದಕ್ಕೂ ಇದು ಸರಿಯಾದ ಕಾಲವೆಂದು ನಿರ್ಧರಿಸಿ ಶ್ರೀರಾಮನಿಗೆ ಪಟ್ಟಗಟ್ಟಲು ತ್ವರೆ ಮಾಡಿದನು (೪೫). ಅನಂತರ ದಶರಥನು ತನ್ನ ರಾಜ್ಯದ ನಾನಾ ನಗರಗಳಲ್ಲಿದ್ದ ಪೌರರನ್ನೂ ಗ್ರಾಮಾಂತರವಾಸಿಗಳಾದ ಪ್ರಜೆಗಳನ್ನೂ ಮುಖ್ಯರಾದ ಕೆಲವು ರಾಜರನ್ನೂ ಕರೆಸಿದನು. ಅವರಿಗೆ ಯಥಾರ್ಹವಾಗಿ ವಸತಿ ಗಳನ್ನೇರ್ಪಡಿಸಿ ಆಭರಣಾದಿ ದ್ರವ್ಯಗಳಿಂದ ಸತ್ಕರಿಸಿದನು. (ಅವರೆಲ್ಲರನ್ನೂ ರಾಜಸಭೆಗೆ ಬರಮಾಡಿಕೊಂಡು) ತಾನು ರಾಜಭೂಷಣಗಳಿಂದ ಅಲಂಕೃತನಾಗಿ ಬ್ರಹ್ಮದೇವನಂತೆ ಪ್ರಸನ್ನದೃಷ್ಟಿಯಿಂದ ಅವರಿಗೆ ಸಂದರ್ಶನವನ್ನು ನೀಡಿದನು (೪೬-೪೭).

---

* ಗ್ರಹನಕ್ಷತ್ರಗಳಲ್ಲಿ ಕಾಣಸುವ ಉತ್ಪಾತವು ದಿವ್ಯೋತ್ಪಾತವೆನಿಸುವುದು. ಬಿರುಗಾಳಿ, ಮೇಘಜಾಲ, ಅಕಾಲದಲ್ಲಿ ಕತ್ತಲಾಗುವುದು ಮುಂತಾದದ್ದು ಅಂತರಿಕ್ಷೋತ್ಪಾತ. ಮೃಗಗಳು ವಿಕಾರವಾಗಿ ಕೂಗುವುದು, ಪಕ್ಷಿಗಳು ರಾತ್ರಿ ಹಾರಾಡುವುದು ಮೊದಲಾದದ್ದು ಭೂಮಿಯಲ್ಲಿ ಹುಟ್ಟುವ ಭೌಮೋತ್ಪಾತ.

ನ ತು ಕೇಕಯರಾಜಾನಂ ಜನಕಂ ವಾ ನರಾಧಿಪಃ ।
ತ್ವರಯಾ ಚಾನಯಾಮಾಸ ಪಶ್ಚಾತ್ತೌ ಶ್ರೋಷ್ಯತಃ ಪ್ರಿಯಮ್ ॥ ೪೮
ಅಥೋಪವಿಷ್ಟೇ ನೃಪತೌ ತಸ್ಮಿನ್ ಪರಬಲಾರ್ದನೇ ।
ತತಃ ಪ್ರವಿವಿಶುಃ ಶೇಷಾ ರಾಜಾನೋ ಲೋಕಸಂಮತಾಃ ॥ ೪೯
ಅಥ ರಾಜ್ಞಾ ವಿತೀರ್ಣೇಷು ವಿವಿಧೇಷ್ವಾಸನೇಷು ಚ ।
ರಾಜಾನಮೇವಾಭಿಮುಖಾ ನಿಷೇದುರ್ನಯಕೋವಿದಾಃ ॥ ೫೦

ಸ ಲಬ್ಧಮಾನೈರ್ವಿನಯಾನ್ವಿತೈರ್ನೃಪೈಃ
ಪುರಾಲಯೈರ್ಜಾನಪದೈಶ್ಚ ಮಾನವೈಃ ।
ಉಪೋಪವಿಷ್ಟೈರ್ನೃಪತಿರ್ವೃತೋ ಬಭೌ
ಸಹಸ್ರಚಕ್ಷುರ್ಭಗವಾನಿವಾಮರೈಃ ॥ ೫೧

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಚತುರ್ವಿಂಶತಿಸಹಸ್ರಿಕಾಯಾಂ ಸಂಹಿತಾಯಾಂ ಅಯೋಧ್ಯಾಕಾಂಡೇ ಪ್ರಥಮಃ ಸರ್ಗಃ

ಅವನು ತ್ವರಾವಿಷ್ಟನಾದ್ದರಿಂದ ದೂರದೇಶದಲ್ಲಿದ್ದ ಕೇಕಯ ರಾಜನಿಗೂ ಜನಕರಾಜನಿಗೂ ಹೇಳಿಕಳಿಸಿ ಕರೆಸಲಿಲ್ಲ. ಈ ಶುಭಕಾರ್ಯವು ನಡೆದ ಮೇಲೆ ಅವರೀರ್ವರೂ ಈ ವೃತ್ತಾಂತವನ್ನು ಕೇಳಿ ಸಂತೋಷಪಡುವರೆಂದು ಅವನು ಭಾವಿಸಿದನು (೪೮). ಮಹಾಶೂರನಾದ ದಶರಥಮಹಾರಾಜನು ಸಿಂಹಾಸನದ ಮೇಲೆ ಮಂಡಿಸಲಾಗಿ, ಜನಪ್ರಿಯರೂ ರಾಜನೀತಿಜ್ಞರೂ ಆದ ಇತರ ನೃಪಾಲರೆಲ್ಲರೂ ತಮಗಾಗಿ ಏರ್ಪಡಿಸಿದ್ದ ವಿವಿಧ ಪೀಠಗಳಲ್ಲಿ ಮಹಾರಾಜನಿಗೆ ಅಭಿಮುಖವಾಗಿ ಕುಳಿತುಕೊಂಡರು (೪೯-೫೦). ಹೀಗೆ ಯಥಾಯೋಗ್ಯವಾಗಿ ಸತ್ಕರಿಸಲ್ಪಟ್ಟ ವಿನೀತರಾದ ಸಾಮಂತರಾಜರೂ ಪೌರರೂ ಗ್ರಾಮಾಂತರವಾಸಿಗಳಾದ ಪ್ರಜೆಗಳೂ ರಾಜಸಭೆಯಲ್ಲಿ ನೆರೆದಿರಲು, ದಶರಥನು ದೇವತೆಗಳಿಂದ ಪರಿವೃತನಾದ ದೇವೇಂದ್ರನಂತೆ ವಿರಾಜಿಸುತ್ತಿದ್ದನು (೫೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಒಂದನೆಯ ಸರ್ಗ.

## ದ್ವಿತೀಯಃ ಸರ್ಗಃ

### ಪರಿಷದನುಮೋದನಮ್

ತತಃ ಪರಿಷದಂ ಸರ್ವಾಮಾಮಂತ್ರ್ಯ ವಸುಧಾಧಿಪಃ ।
ಹಿತಮುದ್ಧರ್ಷಣಂ ಚೈವಮುವಾಚ ಪ್ರಥಿತಂ ವಚಃ ॥ ೧

ದುಂದುಭಿಸ್ವನಕಲ್ಪೇನ ಗಂಭೀರೇಣಾನುನಾದಿನಾ ।
ಸ್ವರೇಣ ಮಹತಾ ರಾಜಾ ಜೀಮೂತ ಇವ ನಾದಯನ್ ॥ ೨

ರಾಜಲಕ್ಷಣಯುಕ್ತೇನ ಕಾಂತೇನಾನುಪಮೇನ ಚ ।
ಉವಾಚ ರಸಯುಕ್ತೇನ ಸ್ವರೇಣ ನೃಪತಿರ್ನೃಪಾನ್ ॥ ೩

ವಿದಿತಂ ಭವತಾಮೇತದ್ಯಥಾ ಮೇ ರಾಜ್ಯಮುತ್ತಮಮ್ ।
ಪೂರ್ವಕೈರ್ಮಮ ರಾಜೇಂದ್ರೈಃ ಸುತವತ್ ಪರಿಪಾಲಿತಮ್ ॥ ೪

ಸೋಽಹಮಿಕ್ಷ್ವಾಕುಭಿಃ ಸರ್ವೈರ್ನರೇಂದ್ರೈಃ ಪರಿಪಾಲಿತಮ್ ।
ಶ್ರೇಯಸಾ ಯೋಕ್ತುಕಾಮೋಽಸ್ಮಿ ಸುಖಾರ್ಹಮಖಿಲಂ ಜಗತ್ ॥ ೫

## ಸರ್ಗ ೨

**ಶ್ರೀರಾಮನಿಗೆ ಪಟ್ಟಾಭಿಷೇಕಮಾಡಬೇಕೆಂಬ ಉದ್ದೇಶವನ್ನು ದಶರಥನು ಪ್ರಜೆಗಳಿಗೆ ತಿಳಿಸುವುದು. ಪ್ರಜೆಗಳ ಸಮ್ಮತಿ.**

ಅನಂತರ ದಶರಥಮಹಾರಾಜನು ಸಭೆಯಲ್ಲಿದ್ದ ಸರ್ವಸದಸ್ಯರನ್ನೂ ಉದ್ದೇಶಿಸಿ ಎಲ್ಲರಿಗೂ ಕೇಳಿಸುವಂತೆ, ದುಂದುಭಿಯಂತೆಯೂ ಮೇಘದಂತೆಯೂ ಗಂಭೀರವಾದ ಧ್ವನಿಯಿಂದ, ಅವರೆಲ್ಲರಿಗೂ ಹಿತಕರವೂ ಸಂತೋಷಜನಕವೂ ಆದ ಮಾತನ್ನಾಡಿದನು (೧-೨). ಅವನ ಕಂಠಸ್ವರವು ರಾಜೋಚಿತವಾದ ಪ್ರಭಾವದಿಂದ ಕೂಡಿದ್ದಿತಲ್ಲದೆ ಬಹಳ ಮೃದುವಾಗಿಯೂ ಮಧುರ ವಾಗಿಯೂ ಇದ್ದಿತು (೩). "ಪ್ರೀತಿಪಾತ್ರರಾದ ಪ್ರಜೆಗಳೆ, ಈ ವಿಶಾಲವಾದ ರಾಜ್ಯವನ್ನು ನನ್ನ ಪೂರ್ವಜರಾದ ರಾಜಾಧಿರಾಜರು ಪರಿಪಾಲಿಸುತ್ತ ಪ್ರಜೆಗಳನ್ನು ಮಕ್ಕಳಂತೆ ಕಾಪಾಡಿಕೊಂಡು ಬಂದಿದ್ದಾರೆಂಬುದು ನಿಮಗೆ ತಿಳಿದಿದೆ (೪). ಇಕ್ಷ್ವಾಕುವಂಶೋದ್ಭವರಾದ ಆ ನರೇಂದ್ರರು

ಮಯಾಪ್ಯಾಚರಿತಂ ಪೂರ್ವೈಃ ಪಂಥಾನಮನುಗಚ್ಛತಾ ।
ಪ್ರಜಾ ನಿತ್ಯಮನಿದ್ರೇಣ ಯಥಾಶಕ್ತ್ಯಭಿರಕ್ಷಿತಾಃ ॥ ೬

ಇದಂ ಶರೀರಂ ಲೋಕಸ್ಯ ಕೃತ್ಸ್ನಸ್ಯ ಚರತಾ ಹಿತಮ್ ।
ಪಾಂಡರಸ್ಯಾತಪತ್ರಸ್ಯ ಚ್ಛಾಯಾಯಾಂ ಜರಿತಂ ಮಯಾ ॥ ೭

ಪ್ರಾಪ್ಯ ವರ್ಷಸಹಸ್ರಾಣಿ ಬಹೂನ್ಯಾಯೂಂಷಿ ಜೀವತಃ ।
ಜೀರ್ಣಸ್ಯಾಸ್ಯ ಶರೀರಸ್ಯ ವಿಶ್ರಾಂತಿಮಭಿರೋಚಯೇ ॥ ೮

ರಾಜಪ್ರಭಾವಜುಷ್ಟಾಂ ಹಿ ದುರ್ವಹಾಮಜಿತೇಂದ್ರಿಯೈಃ ।
ಪರಿಶ್ರಾಂತೋಽಸ್ಮಿ ಲೋಕಸ್ಯ ಗುರ್ವೀಂ ಧರ್ಮಧುರಂ ವಹನ್ ॥ ೯

ಸೋಹಂ ವಿಶ್ರಾಮಮಿಚ್ಛಾಮಿ ರಾಮಂ ಕೃತ್ವಾ ಪ್ರಜಾಹಿತೇ ।
ಸನ್ನಿಕೃಷ್ಟಾನಿಮಾನ್ ಸರ್ವಾನನುಮಾನ್ಯ ದ್ವಿಜರ್ಷಭಾನ್ ॥ ೧೦

ಅನುಜಾತೋ ಹಿ ಮಾಂ ಸರ್ವೈರ್ಗುಣೈರ್ಜ್ಯೇಷ್ಠೋ ಮಮಾತ್ಮಜಃ ।
ಪುರಂದರಸಮೋ ವೀರ್ಯೇ ರಾಮಃ ಪರಪುರಂಜಯಃ ॥ ೧೧

---

ಪಾಲಿಸಿಕೊಂಡು ಬಂದಿರುವ ಸುಖಾಶ್ರಯವಾದ ಈ ಸಮಸ್ತರಾಜ್ಯಕ್ಕೆ, ಇನ್ನೂ ಶ್ರೇಯಸ್ಸು ದೊರಕಲೆಂಬುದು ನನ್ನ ಬಯಕೆಯಾಗಿದೆ (೫). ನನ್ನ ಹಿರಿಯರು ಹೋದ ದಾರಿಯಲ್ಲಿಯೇ ಹೋಗುತ್ತ ನಾನೂ ಕೂಡ ಪ್ರಜೆಗಳನ್ನು ಎಚ್ಚರಿಕೆಯಿಂದ ಯಥಾಶಕ್ತಿಯಾಗಿ ರಕ್ಷಿಸುತ್ತ ಬಂದಿದ್ದೇನೆ (೬). ಈ ಶ್ವೇತಚ್ಛತ್ರದ ನೆರಳಿನಲ್ಲಿದ್ದು ಎಲ್ಲರಿಗೂ ಹಿತವನ್ನು ಮಾಡುತ್ತ ಮಾಡುತ್ತ ನನ್ನ ಶರೀರವು ಜೀರ್ಣವಾಯಿತು. ನನಗೆ ಅರುವತ್ತು ಸಾವಿರ ವರ್ಷಗಳು ಕಳೆದವು. ದೀರ್ಘಕಾಲ ನಾನು ಬದುಕಿದೆ. ಜೀರ್ಣವಾದ ಈ ಶರೀರಕ್ಕೆ ವಿಶ್ರಾಂತಿಯು ಬೇಕೆನಿಸಿದೆ (೭-೮). ಲೋಕರಕ್ಷಣೆಯೆಂಬ ಈ ಕಾರ್ಯಭಾರವು ರಾಜರಿಗೆ ಅವಶ್ಯಕವಾದ ಶೌರ್ಯಾದಿಗುಣಗಳನ್ನಪೇಕ್ಷಿಸುತ್ತದೆ. ಇಂದ್ರಿಯಜಯವಿಲ್ಲದವರಿಗೆ ಇದನ್ನು ಹೊರಲು ಶಕ್ಯವಲ್ಲ. ಧರ್ಮಪಾಲನೆಯ ಈ ಭಾರವನ್ನು ಹೊತ್ತು ನಾನು ಬಳಲಿಹೋಗಿದ್ದೇನೆ (೯). ಆದ್ದರಿಂದ ನಾನು ಇಲ್ಲಿ ನೆರೆದಿರುವ ಈ ಬ್ರಾಹ್ಮಣಶ್ರೇಷ್ಠರೆಲ್ಲರೂ ಒಪ್ಪುವುದಾದರೆ, ನನ್ನ ಮಗನಿಗೆ ಪ್ರಜಾರಕ್ಷಣೆಯ ಭಾರವನ್ನು ವಹಿಸಿ ವಿಶ್ರಾಂತಿ ಪಡೆಯಲಪೇಕ್ಷಿಸುತ್ತೇನೆ (೧೦). ನನ್ನ ಹಿರಿಯಮಗನಾದ ಶ್ರೀರಾಮನು ಎಲ್ಲ ಸದ್ಗುಣ

ತಂ ಚಂದ್ರಮಿವ ಪುಷ್ಯೇಣ ಯುಕ್ತಂ ಧರ್ಮಭೃತಾಂ ವರಮ್ ।
ಯೌವರಾಜ್ಯೇನ ಯೋಕ್ತಾಸ್ಮಿ ಪ್ರೀತಃ ಪುರುಷಪುಂಗವಮ್ ॥ ೧೨

ಅನುರೂಪಃ ಸ ವೈ ನಾಥೋ ಲಕ್ಷ್ಮೀವಾನ್ ಲಕ್ಷ್ಮಣಾಗ್ರಜಃ ।
ತ್ರೈಲೋಕ್ಯಮಪಿ ನಾಥೇನ ಯೇನ ಸ್ಯಾನ್ನಾಥವತ್ತರಮ್ ॥ ೧೩

ಅನೇನ ಶ್ರೇಯಸಾ ಸದ್ಯಃ ಸಂಯೋಕ್ಷ್ಯೇ ಸಮಿಮಾಂ ಮಹೀಮ್ ।
ಗತಕ್ಲೇಶೋ ಭವಿಷ್ಯಾಮಿ ಸುತೇ ತಸ್ಮಿನ್ನಿವೇಶ್ಯ ವೈ ॥ ೧೪

ಯದೀದಂ ಮೇಽನುರೂಪಾರ್ಥಂ ಮಯಾ ಸಾಧು ಸುಮಂತ್ರಿತಮ್ ।
ಭವಂತೋ ಮೇಽನುಮನ್ಯಂತಾಂ ಕಥಂ ವಾ ಕರವಾಣ್ಯಹಮ್ ॥ ೧೫

ಯದ್ಯಪ್ಯೇಷಾ ಮಮ ಪ್ರೀತಿರ್ಹಿತಮನ್ಯದ್ವಿಚಿಂತ್ಯತಾಮ್ ।
ಅನ್ಯಾ ಮಧ್ಯಸ್ಥಚಿಂತಾ ಹಿ ವಿಮರ್ದಾಭ್ಯಧಿಕೋದಯಾ ॥ ೧೬

---

ಗಳನ್ನೂ ಪಡೆದು ನನಗೆ ಅನುರೂಪನಾಗಿ ಜನಿಸಿದ್ದಾನೆ. ಪರಾಕ್ರಮದಲ್ಲಿ ಪರಂದ್ರನಿಗೆ ಸಮಾನನಾದ ವೀರನಾಗಿದ್ದಾನೆ (೧೧). ಪುಷ್ಯನಕ್ಷತ್ರದೊಡನಿರುವ ಚಂದ್ರನಂತೆ ಆಹ್ಲಾದವನ್ನುಂಟುಮಾಡುತ್ತ ಧರ್ಮಾತ್ಮನಾಗಿರುವ ರಾಮನಿಗೆ ಯುವರಾಜಪದವಿಯನ್ನು ಕೊಡಲು ನನಗೆ ಸಂತೋಷವಾಗುತ್ತದೆ (೧೨). ಲಕ್ಷ್ಮಣನಿಗೆ ಅಣ್ಣನಾಗಿ ತೇಜಸ್ವಿಯಾಗಿರುವ ಆತನು ನಿಮ್ಮೆಲ್ಲರಿಗೂ ಯೋಗ್ಯನಾದ ಪ್ರಭುವಾಗಬಲ್ಲನು. ಅವನು ಮೂರು ಲೋಕಗಳಿಗೂ ಒಡೆಯನಾಗಿ ಎಲ್ಲರಿಗಿಂತಲೂ ಶ್ರೇಷ್ಠನಾದ ರಾಜನೆನಿಸಿಕೊಳ್ಳಬಲ್ಲನು (೧೩). ನನ್ನ ರಾಜ್ಯಕ್ಕೆ ಈ ರೀತಿಯಾದ ಶ್ರೇಯಸ್ಸನ್ನು ದೊರಕಿಸಿಕೊಡಬೇಕೆಂದು ನಾನು ಉದ್ದೇಶಿಸಿದ್ದೇನೆ. ನನ್ನ ಮಗನಿಗೆ ರಾಜ್ಯಭಾರವನ್ನು ವಹಿಸಿ ಆಯಾಸವನ್ನು ಪರಿಹರಿಸಿಕೊಳ್ಳುವೆನು. (೧೪). ನನ್ನ ಅಭಿಪ್ರಾಯವು ನಿಮಗೆ ಯೋಗ್ಯವೆನಿಸಿದರೆ, ನನ್ನ ಆಲೋಚನೆಯು ಸರಿಯೆನಿಸಿದರೆ ಈ ಕಾರ್ಯಕ್ಕೆ ನೀವು ಸಮ್ಮತಿಸಬೇಕು; ಅಥವಾ ಇನ್ನು ಹೇಗೆ ನಾನು ಮಾಡಬೇಕೆಂಬುದನ್ನಾದರೂ ತಿಳಿಸಿರಿ (೧೫). ನನಗೆ ಇದು ಪ್ರಿಯವಾಗಿದ್ದರೂ ಹಿತಕರವಾದ ಬೇರೆ ಮಾರ್ಗವಿದ್ದರೆ ನೀವು ಆಲೋಚಿಸಿ ಹೇಳಬಹುದು. ಏಕೆಂದರೆ, ಮಧ್ಯಸ್ಥರಾದ ನಿಮ್ಮ ಅಭಿಪ್ರಾಯವು ಪಕ್ಷಪಾತವಿಲ್ಲದೆ ಪೂರ್ವಾಪರ ವಿಮರ್ಶೆಯಿಂದ ಹೆಚ್ಚು ಗ್ರಾಹ್ಯವಾಗಿರುತ್ತದೆ" ಎಂದು

ಇತಿ ಬ್ರುವಂತಂ ಮುದಿತಾಃ ಪ್ರತ್ಯನಂದನ್ ನೃಪಾ ನೃಪಮ್ ।
ವೃಷ್ಟಿಮಂತಂ ಮಹಾಮೇಘಂ ನರ್ದಂತ ಇವ ಬರ್ಹಿಣಃ ॥ ೧೭

ಸ್ನಿಗ್ಧೋಽನುನಾದೀ ಸಂಜಜ್ಞೇ ತತ್ರ ಹರ್ಷಸಮೀರಿತಃ ।
ಜನೌಘೋದ್ಘುಷ್ಟಸನ್ನಾದೋ ವಿಮಾನಂ ಕಂಪಯನ್ನಿವ ॥ ೧೮

ತಸ್ಯ ಧರ್ಮಾರ್ಥವಿದುಷೋ ಭಾವಮಾಜ್ಞಾಯ ಸರ್ವಶಃ ।
ಬ್ರಾಹ್ಮಣಾ ಜನಮುಖ್ಯಾಶ್ಚ ಪೌರಜಾನಪದೈಃ ಸಹ ॥ ೧೯

ಸಮೇತ್ಯ ಮಂತ್ರಯಿತ್ವಾ ತು ಸಮತಾಗತಬುದ್ಧಯಃ ।
ಊಚುಶ್ಚ ಮನಸಾ ಜ್ಞಾತ್ವಾ ವೃದ್ಧಂ ದಶರಥಂ ನೃಪಮ್ ॥ ೨೦

ಅನೇಕವರ್ಷಸಾಹಸ್ರೋ ವೃದ್ಧಸ್ತ್ವಮಸಿ ಪಾರ್ಥಿವ ।
ಸ ರಾಮಂ ಯುವರಾಜಾನಮಭಿಷಿಂಚಸ್ವ ಪಾರ್ಥಿವಮ್ ॥ ೨೧

ಇಚ್ಛಾಮೋ ಹಿ ಮಹಾಬಾಹುಂ ರಘುವೀರಂ ಮಹಾಬಲಮ್ ।
ಗಜೇನ ಮಹತಾ ಯಾಂತಂ ರಾಮಂ ಛತ್ರಾವೃತಾನನಮ್ ॥ ೨೨

---

ನುಡಿದನು (೧೬). ದಶರಥನು ಹೀಗೆ ನುಡಿಯುತ್ತಿರುವಾಗ ಅಲ್ಲಿ ನೆರೆದಿದ್ದ ಸಾಮಂತರಾಜರೆಲ್ಲರೂ ಮಳೆಸುರಿಸುವ ಮೋಡವನ್ನು ಕಂಡು ಕೇಕೆ ಹಾಕುವ ನವಿಲುಗಳಂತೆ, ಹರ್ಷೋದ್ಗಾರಗಳಿಂದ ತಮ್ಮ ಮೆಚ್ಚುಗೆಯನ್ನು ತೋರಿಸಿದರು (೧೭). ಸಭೆಯಲ್ಲಿದ್ದ ಸಕಲ ಜನಸಮುದಾಯವೂ ಆನಂದದಿಂದ ಉಗ್ಗಡಿಸಲು, ಮಧುರವಾದ ಆ ಶಬ್ದವು ಎಲ್ಲೆಲ್ಲಿಯೂ ಪ್ರತಿಧ್ವನಿಸಿ ಆಸ್ಥಾನ ಮಂಟಪವೇ ಅಲ್ಲಾಡುತ್ತಿರುವಂತೆ ಭಾಸವಾಯಿತು (೧೮). ಅಲ್ಲಿ ಸೇರಿದ್ದ ಬ್ರಾಹ್ಮಣರೂ ಜನನಾಯಕರೂ ನಾಗರಿಕ ಪ್ರಜೆಗಳೂ ಧರ್ಮಾರ್ಥಗಳನ್ನು ಬಲ್ಲ ದಶರಥಮಹಾರಾಜನ ಆಶಯವನ್ನು ಗ್ರಹಿಸಿದರು. ಅವರೆಲ್ಲರೂ ಒಟ್ಟುಗೂಡಿ ಸಮಾಲೋಚಿಸಿ ಐಕಮತ್ಯದಿಂದ ಒಂದೇ ನಿರ್ಧಾರಕ್ಕೆ ಬಂದರು. ದಶರಥನು ವೃದ್ಧನಾದನೆಂದು ಮನಗಂಡು ಅವನನ್ನು ಕುರಿತು ಹೀಗೆಂದರು : (೧೯-೨೦) "ಮಹಾರಾಜ, ನಿನಗೆ ಅನೇಕ ಸಾವಿರ ವರ್ಷಗಳಾದವು. ನೀನು ವೃದ್ಧನಾದೆ. ಶ್ರೀರಾಮನಿಗೆ ಯುವರಾಜಪಟ್ಟಾಭಿಷೇಕವನ್ನು ನೆರವೇರಿಸು. ಆಜಾನುಬಾಹುವೂ ಮಹಾಬಲಶಾಲಿಯೂ ಆದ ರಘುವೀರ ಶ್ರೀರಾಮನು ಶ್ವೇತಚ್ಛತ್ರದ ನೆರಳಿನಲ್ಲಿ ಪಟ್ಟದಾನೆಯನ್ನೇರಿ ಬರುವುದನ್ನು ನೋಡಲು

ಇತಿ ತದ್ವಚನಂ ಶ್ರುತ್ವಾ ರಾಜಾ ತೇಷಾಂ ಮನಃಪ್ರಿಯಮ್ ।
ಅಜಾನನ್ನಿವ ಜಿಜ್ಞಾಸುರಿದಂ ವಚನಮಬ್ರವೀತ್ ॥ ೨೩

ಶ್ರುತ್ವೈವ ವಚನಂ ಯನ್ಮೇ ರಾಘವಂ ಪತಿಮಿಚ್ಛಥ ।
ರಾಜಾನಃ ಸಂಶಯೋಽಯಂ ಮೇ ಕಿಮಿದಂ ಬ್ರೂತ ತತ್ತ್ವತಃ ॥ ೨೪

ಕಥಂ ನು ಮಯಿ ಧರ್ಮೇಣ ಪೃಥಿವೀಮನುಶಾಸತಿ ।
ಭವಂತೋ ದ್ರಷ್ಟುಮಿಚ್ಛಂತಿ ಯುವರಾಜಂ ಮಮಾತ್ಮಜಮ್ ॥ ೨೫

ತೇ ತಮೂಚುರ್ಮಹಾತ್ಮಾನಂ ಪೌರಜಾನಪದೈಃ ಸಹ ।
ಬಹವೋ ನೃಪ ಕಲ್ಯಾಣಾ ಗುಣಾಃ ಪುತ್ರಸ್ಯ ಸಂತಿ ತೇ ॥ ೨೬

ಗುಣಾನ್ ಗುಣವತೋ ದೇವ ದೇವಕಲ್ಪಸ್ಯ ಧೀಮತಃ ।
ಪ್ರಿಯಾನಾನಂದನಾನ್ ಕೃತ್ಸ್ನಾನ್ ಪ್ರವಕ್ಷ್ಯಾಮೋಽದ್ಯ ತಾನ್ ಶೃಣು ॥

ದಿವ್ಯೈರ್ಗುಣೈಃ ಶಕ್ರಸಮೋ ರಾಮಃ ಸತ್ಯಪರಾಕ್ರಮಃ ।
ಇಕ್ಷ್ವಾಕುಭ್ಯೋಽಪಿ ಸರ್ವೇಭ್ಯೋ ಹ್ಯತಿರಿಕ್ತೋ ವಿಶಾಂಪತೇ ॥ ೨೮

---

ನಮಗೆ ಆಸೆಯಾಗಿದೆ "(೨೧-೨೨). ಅವರ ಮಾತನ್ನು ಕೇಳಿ ದಶರಥನು ಮನಸ್ಸಿನಲ್ಲಿ ಹಿಗ್ಗಿದನು. ಆದರೂ ಅವರ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಯಬೇಕೆಂದು, ತಾನು ಏನೂ ತಿಳಿಯದವನಂತೆ ನಟಿಸುತ್ತ ಹೀಗೆ ಕೇಳಿದನು: (೨೩). "ಎಲೈ ರಾಜರೆ, ಪ್ರಜೆಗಳೆ, ನನ್ನ ಮಾತನ್ನು ಕೇಳಿದ ಕೂಡಲೆ ರಾಮನು ರಾಜನಾಗಲೆಂದು ಅಪೇಕ್ಷಿಸುತ್ತಿದ್ದೀರಲ್ಲ? ನನಗೆ ಸಂದೇಹವಾಗಿದೆ. ಸತ್ಯವನ್ನು ಹೇಳಿ. ನಾನು ಧರ್ಮದಿಂದ ರಾಜ್ಯವಾಳುತ್ತಿರುವಾಗ, ನನ್ನ ಪುತ್ರನು ರಾಜನಾಗಬೇಕೆಂದು ಬಯಸುವಿರಲ್ಲ; ಇದೇನು?" (೨೪-೨೫). ಅದನ್ನು ಕೇಳಿ ರಾಜರೂ ಪ್ರಜೆಗಳೂ ಏಕಕಂಠದಿಂದ ಹೀಗೆ ನುಡಿದರು : "ಮಹಾರಾಜ, ನಿನ್ನ ಪುತ್ರನಲ್ಲಿ ಕಲ್ಯಾಣಗುಣಗಳು ಅಪರಿಮಿತವಾಗಿವೆ. ನಿನ್ನ ಪುತ್ರನಾದ ಶ್ರೀರಾಮನು ದೇವತಾಸದೃಶನಾದ ಧೀಮಂತ ಪುರುಷ. ಅವನ ಸದ್ಗುಣಗಳು ಸಮಸ್ತರಿಗೂ ಪ್ರಿಯವಾದವು. ಆನಂದಕರ ವಾದವು. ಅವುಗಳನ್ನು ವಿವರಿಸುತ್ತೇವೆ; ಕೇಳು: (೨೬-೨೭). ಶ್ರೀರಾಮನು ಸತ್ಯಸಂಧ. ದಿವ್ಯಗುಣಸಂಪನ್ನ. ದೇವೇಂದ್ರನಂತಿದ್ದಾನೆ. ಮಹಾರಾಜ,

ರಾಮಃ ಸತ್ಪುರುಷೋ ಲೋಕೇ ಸತ್ಯಧರ್ಮಪರಾಯಣಃ ।
ಸಾಕ್ಷಾದ್ರಾಮಾದ್ವಿನಿರ್ವೃತ್ತೋ ಧರ್ಮಶ್ಚಾಪಿ ಶ್ರಿಯಾ ಸಹ ॥ ೨೯

ಪ್ರಜಾ ಸುಖತ್ವೇ ಚಂದ್ರಸ್ಯ ವಸುಧಾಯಾಃ ಕ್ಷಮಾಗುಣೈಃ ।
ಬುದ್ಧ್ಯಾ ಬೃಹಸ್ಪತೇಸ್ತುಲ್ಯೋ ವೀರ್ಯೇ ಸಾಕ್ಷಾಚ್ಛಚೀಪತೇಃ ॥ ೩೦

ಧರ್ಮಜ್ಞಃ ಸತ್ಯಸಂಧಶ್ಚ ಶೀಲವಾನನಸೂಯಕಃ ।
ಕ್ಷಾಂತಃ ಸಾಂತ್ವಯಿತಾ ಶ್ಲಕ್ಷ್ಣಃ ಕೃತಜ್ಞೋ ವಿಜಿತೇಂದ್ರಿಯಃ ॥ ೩೧

ಮೃದುಶ್ಚ ಸ್ಥಿರಚಿತ್ತಶ್ಚ ಸದಾ ಭವ್ಯೋಽನಸೂಯಕಃ ।
ಪ್ರಿಯವಾದೀ ಚ ಭೂತಾನಾಂ ಸತ್ಯವಾದೀ ಚ ರಾಘವಃ ॥ ೩೨

ಬಹುಶ್ರುತಾನಾಂ ವೃದ್ಧಾನಾಂ ಬ್ರಾಹ್ಮಣಾನಾಮುಪಾಸಿತಾ ।
ತೇನಾಸ್ಯೇಹಾತುಲಾ ಕೀರ್ತಿರ್ಯಶಸ್ತೇಜಶ್ಚ ವರ್ಧತೇ ॥ ೩೩

---

ಇಕ್ಷ್ವಾಕುವಂಶದಲ್ಲಿ ಜನಿಸಿದ ಸಕಲನರೇಂದ್ರರನ್ನೂ ಅವನು ಮೀರಿಸಿದ್ದಾನೆ (೨೮). ಸತ್ಪುರುಷನೆಂಬ ಕೀರ್ತಿಯು ಲೋಕದಲ್ಲಿ ಅವನಿಗೇ ಸಲ್ಲುವುದು. ಅವನು ಸತ್ಯಧರ್ಮಗಳನ್ನು ಎಂದಿಗೂ ತಪ್ಪಿ ನಡೆಯುವವನಲ್ಲ. ಧರ್ಮವೂ ರಾಜ್ಯಲಕ್ಷ್ಮಿಯೂ ರಾಮನಿಂದ ಸ್ಥಿರವಾಗಿ ನಿರ್ವಾಹಗೊಳ್ಳುತ್ತವೆ (೨೯). ಆತನು ಜನರಂಜನೆಯಲ್ಲಿ ಚಂದ್ರನಂತೆಯೂ ತಾಳ್ಮೆಯಲ್ಲಿ ಭೂದೇವಿಯಂತೆಯೂ ಬುದ್ಧಿಯಲ್ಲಿ ಬೃಹಸ್ಪತಿಯಂತೆಯೂ ಶೌರ್ಯದಲ್ಲಿ ದೇವೇಂದ್ರನಂತೆಯೂ ಇದ್ದಾನೆ. ಅವನು ಧರ್ಮಜ್ಞ, ಸತ್ಯಸಂಧ, ಶೀಲವಂತ, ಅಸೂಯಾರಹಿತ, ಕ್ಷಮಾಶೀಲ (ಕುಪಿತರನ್ನೂ ದುಃಖಿತರನ್ನೂ ಮೃದುವಚನಗಳಿಂದ) ಸಮಾಧಾನ ಪಡಿಸುತ್ತಾನೆ. ಮೃದುಸ್ವಭಾವದವನು, ಕೃತಜ್ಞ, ಜಿತೇಂದ್ರಿಯ (೩೦-೩೧). ಅವನು ಸೌಮ್ಯಸ್ವಭಾವದವನು, ಆತನ ಮನಸ್ಸು ಚಂಚಲವಲ್ಲ. ಭವ್ಯವಾದ ಆಕಾರ. ಅವನನ್ನು ಕಂಡು ಅಸೂಯೆಪಡತಕ್ಕವರೇ ಇಲ್ಲ. ರಘುಕುಲದಲ್ಲಿ ಹುಟ್ಟಿದ ಈ ಕುಮಾರನು ಪ್ರಿಯವನ್ನೇ ನುಡಿಯುತ್ತಾನೆ (೩೨). ಸತ್ಯವನ್ನೇ ನುಡಿಯುತ್ತಾನೆ. ವಿದ್ವಾಂಸರಾದ ಹಿರಿಯರನ್ನೂ ಬ್ರಾಹ್ಮಣರನ್ನೂ ಸೇವಿಸುತ್ತಾನೆ. ಅದರಿಂದ ಆತನಿಗೆ ಗುಣವಂತನೆಂಬ ಕೀರ್ತಿಯೂ ಶೂರನೆಂಬ ಖ್ಯಾತಿಯೂ ಪ್ರಭಾವವೂ

ದೇವಾಸುರಮನುಷ್ಯಾಣಾಂ ಸರ್ವಾಸ್ತ್ರೇಷು ವಿಶಾರದಃ ।
ಸಮ್ಯಗ್ವಿದ್ಯಾವ್ರತಸ್ನಾತೋ ಯಥಾವತ್ ಸಾಂಗವೇದವಿತ್ ॥ ೩೪

ಗಾಂಧರ್ವೇ ಚ ಭುವಿ ಶ್ರೇಷ್ಠೋ ಬಭೂವ ಭರತಾಗ್ರಜಃ ।
ಕಲ್ಯಾಣಾಭಿಜನಃ ಸಾಧುರದೀನಾತ್ಮಾ ಮಹಾಮತಿಃ ॥ ೩೫

ದ್ವಿಜೈರಭಿವಿನೀತಶ್ಚ ಶ್ರೇಷ್ಠೈರ್ಧರ್ಮಾರ್ಥನೈಪುಣೈಃ ।
ಯದಾ ವ್ರಜತಿ ಸಂಗ್ರಾಮಂ ಗ್ರಾಮಾರ್ಥೇ ನಗರಸ್ಯ ವಾ ॥ ೩೬

ಗತ್ವಾ ಸೌಮಿತ್ರಿ ಸಹಿತೋ ನಾವಿಜಿತ್ಯ ನಿವರ್ತತೇ ।
ಸಂಗ್ರಾಮಾತ್ ಪುನರಾಗಮ್ಯ ಕುಂಜರೇಣ ರಥೇನ ವಾ ॥ ೩೭

ಪೌರಾನ್ ಸ್ವಜನವನ್ನಿತ್ಯಂ ಕುಶಲಂ ಪರಿಪೃಚ್ಛತಿ ।
ಪುತ್ರೇಷ್ವಗ್ನಿಷು ದಾರೇಷು ಪ್ರೇಷ್ಯಶಿಷ್ಯಗಣೇಷು ಚ ॥ ೩೮

ನಿಖಿಲೇನಾನುಪೂರ್ವ್ಯಾ ಚ ಪಿತಾ ಪುತ್ರಾನಿವೌರಸಾನ್ ।
ಶುಶ್ರೂಷಂತೇ ಚ ವಃ ಶಿಷ್ಯಾಃ ಕಚ್ಚಿತ್ ಕರ್ಮಸು ದಂಶಿತಾಃ ॥ ೩೯

---

ದಿನೇ ದಿನೇ ಹೆಚ್ಚುತ್ತಲಿದೆ (೩೩). ದೇವತೆಗಳೂ ರಾಕ್ಷಸರೂ ಮನುಷ್ಯರೂ ಉಪಯೋಗಿಸತಕ್ಕ ಅಸ್ತ್ರವಿಶೇಷಗಳನ್ನೆಲ್ಲ ಅವನು ಬಲ್ಲನು. ವಿಧಿಪೂರ್ವಕವಾಗಿ ವಿದ್ಯಾಭ್ಯಾಸವನ್ನು ಮಾಡಿ ಸಮಾವೃತನಾಗಿದ್ದಾನೆ. ವೇದವೇದಾಂಗಗಳಲ್ಲಿ ಪಂಡಿತನಾಗಿದ್ದಾನೆ (೩೪). ಈ ಭರತಾಗ್ರಜನು ಸಂಗೀತದಲ್ಲಿ ವಿಶಾರದ. ಪರಿಶುದ್ಧವಾದ ವಂಶದಲ್ಲಿ ಜನಿಸಿದ್ದಾನೆ. ಸಾಧುಸ್ವಭಾವದವನಾದರೂ ದೈನ್ಯವನ್ನು ತೋರಿಸದ ಗಂಭೀರಪ್ರವೃತ್ತಿಯವನು. ಮಹಾಮೇಧಾವಿ (೩೫). ಧರ್ಮಾರ್ಥಗಳಲ್ಲಿ ನಿಪುಣರಾದ ದ್ವಿಜಶ್ರೇಷ್ಠರಿಂದ ಪಳಗಿದ್ದಾನೆ. ಗ್ರಾಮವನ್ನೊ ನಗರವನ್ನೊ ರಕ್ಷಿಸುವುದಕ್ಕಾಗಿ ಯುದ್ಧ ಒದಗಿದರೆ, ಲಕ್ಷ್ಮಣನೊಡನೆ ಹೊರಟನೆಂದರೆ ಶತ್ರುಗಳನ್ನು ಗೆಲ್ಲದೆ ಹಿಂದಿರುಗುವುದಿಲ್ಲ (೩೬). ರಣಭೂಮಿಯಿಂದ ಆನೆಯಮೇಲೊ ರಥದ ಮೇಲೊ ಹಿಂದಿರುಗುವಾಗ ಪಟ್ಟಣಿಗರನ್ನು ಕಂಡಕೂಡಲೆ ತನ್ನ ಬಂಧುಗಳಂತೆ ಭಾವಿಸಿ ಕ್ಷೇಮವನ್ನು ವಿಚಾರಿಸುತ್ತಾನೆ (೩೭). ನಮ್ಮ ಹೆಂಡತಿಯರು, ಮಕ್ಕಳು, ಶಿಷ್ಯರು, ಸೇವಕರು, ನಮ್ಮ ಅಗ್ನಿಹೋತ್ರ - ಇವೆಲ್ಲವನ್ನೂ ಕುರಿತು ಒಂದೊಂದಾಗಿ ತಂದೆಯು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು

ಇತಿ ನಃ ಪುರುಷವ್ಯಾಘ್ರಃ ಸದಾ ರಾಮೋಽಭಿಭಾಷತೇ ।
ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ ॥ ೪೦

ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ ।
ಸತ್ಯವಾದೀ ಮಹೇಷ್ವಾಸೋ ವೃದ್ಧಸೇವೀ ಜಿತೇಂದ್ರಿಯಃ ॥ ೪೧

ಸ್ಮಿತಪೂರ್ವಾಭಿಭಾಷೀ ಚ ಧರ್ಮಂ ಸರ್ವಾತ್ಮನಾ ಶ್ರಿತಃ ।
ಸಮ್ಯಗ್ಯೋಕ್ತಾ ಶ್ರೇಯಸಾಂ ಚ ನ ವಿಗೃಹ್ಯಕಥಾರುಚಿಃ ॥ ೪೨

ಉತ್ತರೋತ್ತರಯುಕ್ತೌ ಚ ವಕ್ತಾ ವಾಚಸ್ಪತಿರ್ಯಥಾ ।
ಸುಭ್ರೂರಾಯತತಾಮ್ರಾಕ್ಷಃ ಸಾಕ್ಷಾದ್ವಿಷ್ಣುರಿವ ಸ್ವಯಮ್ ॥ ೪೩

ರಾಮೋ ಲೋಕಾಭಿರಾಮೋಽಯಂ ಶೌರ್ಯವೀರ್ಯಪರಾಕ್ರಮೈಃ ।
ಪ್ರಜಾಪಾಲನಸಂಯುಕ್ತೋ ನ ರಾಗೋಪಹತೇಂದ್ರಿಯಃ ॥ ೪೪

---

ವಿಚಾರಿಸುವಂತೆ ವಿಚಾರಿಸಿಕೊಳ್ಳುತ್ತಾನೆ. ನಮ್ಮನ್ನು ಕುರಿತು 'ನಿಮ್ಮ ಶಿಷ್ಯರೂ ಸೇವಕರೂ ಕರ್ತವ್ಯ ನಿರತರಾಗಿ ನಿಮ್ಮನ್ನು ಸೇವಿಸುತ್ತಿರುವರೆ ?' ಎಂದು ಕೇಳುತ್ತಾನೆ (೩೮-೨೯). ಜನರಿಗೆ ಆಕಸ್ಮಿಕವಾಗಿ ಬಂದ ಕಷ್ಟಗಳನ್ನು ಕೇಳಿ ಆ ಪುರುಷಶ್ರೇಷ್ಠನು ಬಹಳ ಮರುಕಪಡುತ್ತಾನೆ. ಜನರು ತಮಗೆ ಸಂತೋಷಕರವಾದ ವಿಷಯವನ್ನು ತಿಳಿಸಿದರೆ ತಂದೆಯಂತೆ ತಾನೂ ಸಂತೋಷಪಡುತ್ತಾನೆ. ಶ್ರೀರಾಮನು ಎಷ್ಟು ಸತ್ಯವಂತ! ಎಂತಹ ಧನುರ್ಧಾರಿ! ಹಿರಿಯರಲ್ಲಿ ಅವನಿಗೆ ಎಷ್ಟು ವಿನಯ! ಇಂದ್ರಿಯಗಳ ಮೇಲೆ ಎಂತಹ ನಿಗ್ರಹ ಶಕ್ತಿ! (೪೦-೪೧). ಆತನು ನಗುನಗುತ್ತ ನಮ್ಮೊಡನೆ ಮಾತನಾಡುತ್ತಾನೆ. ಎಂಥ ಸಮಯದಲ್ಲಿಯೂ ಧರ್ಮವನ್ನು ಬಿಡತಕ್ಕವನಲ್ಲ. ಆಶ್ರಿತಜನರಿಗೆ ಶ್ರೇಯಸ್ಸನ್ನು ಬಯಸುತ್ತಾನೆ. ಜಗಳದ ಮಾತಿನಲ್ಲಿ ಸ್ವಲ್ಪವೂ ಅವನಿಗೆ ಆಸಕ್ತಿಯಿಲ್ಲ (೪೨). (ಶಾಸ್ತ್ರೀಯ ವಿಷಯದಲ್ಲಿ ವಾದ ಪ್ರಸಕ್ತಿಯು ಬಂದರೆ) ಒಂದರಮೇಲೊಂದು ಯುಕ್ತಿಯನ್ನು ಜೋಡಿಸಿ ಬೃಹಸ್ಪತಿಯಂತೆ ವಾಗ್ಝರಿಯನ್ನು ಮೆರೆಸುವನು. ಅವನ ಹುಬ್ಬುಗಳು ಎಷ್ಟು ಚೆನ್ನಾಗಿವೆ! ವಿಶಾಲವಾದ ಕಡೆಗೆಂಪಿನ ಆ ಕಣ್ಣುಗಳೊ! ಸಾಕ್ಷಾತ್ ಶ್ರೀಮನ್ನಾರಾಯಣನಂತಿದ್ದಾನೆ (೪೩). ಶ್ರೀರಾಮನು ಲೋಕಾಭಿರಾಮನೇ ಸರಿ. ತನ್ನ ಶೌರ್ಯವೀರ್ಯ ಪರಾಕ್ರಮಗಳಿಂದ ಪ್ರಜೆಗಳನ್ನು ಪಾಲಿಸಲು ಸಮರ್ಥ.

ಶಕ್ತಸ್ತ್ರೈಲೋಕ್ಯಮಪ್ಯೇಕೋ ಭೋಕ್ತುಂ ಕಿಂನು ಮಹೀಮಿಮಾಮ್
ನಾಸ್ಯ ಕ್ರೋಧಃ ಪ್ರಸಾದಶ್ಚ ನಿರರ್ಥೋಽಸ್ತಿ ಕದಾಚನ ॥ ೪೫

ಹಂತ್ಯೇವ ನಿಯಮಾದ್ವಧ್ಯಾನವಧ್ಯೇಷು ನ ಕುಪ್ಯತಿ ।
ಯುನಕ್ತ್ಯರ್ಥೈಃ ಪ್ರಹೃಷ್ಟಶ್ಚ ತಮಸೌ ಯತ್ರ ತುಷ್ಯತಿ ॥ ೪೬

ಶಾಂತ್ಯೈಃ ಸರ್ವಪ್ರಜಾಕಾಂತ್ಯೈಃ ಪ್ರೀತಿಸಂಜನನೈರ್ಗುಣಾಮ್ ।
ಗುಣೈರ್ವಿರೋಚತೇ ರಾಮೋ ದೀಪ್ತಃ ಸೂರ್ಯ ಇವಾಂಶುಭಿಃ ॥ ೪೭

ತಮೇವಂ ಗುಣಸಂಪನ್ನಂ ರಾಮಂ ಸತ್ಯಪರಾಕ್ರಮಮ್ ।
ಲೋಕಪಾಲೋಪಮಂ ನಾಥಮಕಾಮಯತ ಮೇದಿನೀ ॥ ೪೮

ವತ್ಸಃ ಶ್ರೇಯಸಿ ಜಾತಸ್ತೇ ದಿಷ್ಟ್ಯಾಸೌ ತವ ರಾಘವ ।
ದಿಷ್ಟ್ಯಾ ಪುತ್ರಗುಣೈರ್ಯುಕ್ತೋ ಮಾರೀಚ ಇವ ಕಶ್ಯಪಃ ॥ ೪೯

ಬಲಮಾರೋಗ್ಯಮಾಯುಶ್ಚ ರಾಮಸ್ಯ ವಿದಿತಾತ್ಮನಃ ।
ದೇವಾಸುರಮನುಷ್ಯೇಷು ಗಂಧರ್ವೇಷೂರಗೇಷು ಚ ॥ ೫೦

---

ಇಂದ್ರಿಯಚಾಪಲ್ಯಗಳಿಗೆ ಅವನಲ್ಲಿ ಎಡೆಯೇ ಇಲ್ಲ (೪೪). ಮಹಾರಾಜ, ಈ ಭೂಮಂಡಲವನ್ನೇಕೆ, ಮೂರು ಲೋಕಗಳನ್ನೂ ಆಳಲು ಅವನು ಶಕ್ತ. ಅವನಿಗೆ ಒಂದು ವೇಳೆ ಕೋಪವಾಗಲಿ ಅನುಗ್ರಹಬುದ್ಧಿಯಾಗಲಿ ಹುಟ್ಟಿದರೆ, ಅದು ಫಲವನ್ನು ಸಾಧಿಸದೆ ವಿರಮಿಸದು (೪೫). ವಧಾರ್ಹರಾದ ಅಪರಾಧಿಗಳನ್ನು ಕೊಂದೇ ತೀರುವನು. ನಿರಪರಾಧಿಗಳ ಮೇಲೆ ಎಂದಿಗೂ ಕೋಪಿಸನು. ಯಾರ ವಿಷಯದಲ್ಲಿ ಸಂತೋಷವಾಗುವುದೋ ಅವರ ಇಷ್ಟಾರ್ಥಗಳನ್ನು ಕೈಗೂಡಿಸುವನು (೪೬). ಹೀಗೆ ಶಾಂತವೂ ರಮಣೀಯವೂ ಪ್ರಜೆಗಳಿಗೆ ಆನಂದದಾಯಕವೂ ಆದ ಗುಣಗಳಿಂದ, ಸಹಸ್ರಕಿರಣಗಳಿಂದ ಸೂರ್ಯನಂತೆ, ಶ್ರೀರಾಮನು ಶೋಭಿಸು ತ್ತಿದ್ದಾನೆ (೪೭). ಇಂಥ ಕಲ್ಯಾಣಗುಣಸಂಪನ್ನನೂ ಸತ್ಯಸಂಧನೂ ದಿಕ್ಪಾಲಕರಿಗೆ ಸಮಾನನೂ ಆದ ಶ್ರೀರಾಮನು ತನಗೆ ಪತಿಯಾಗಲೆಂದು ಭೂದೇವಿಯೇ ಬಯಸಿ ದ್ದಾಳೆ (೪೮). ಮಹಾರಾಜ, ನಿನ್ನ ಭಾಗ್ಯದಿಂದ ಇಂಥ ಕುಮಾರನು ನಮ್ಮೆಲ್ಲರ ಶ್ರೇಯಸ್ಸಿಗೋಸ್ಕರ ಜನಿಸಿದ್ದಾನೆ. ಮರೀಚಿಗೆ ಕಶ್ಯಪನು ಜನಿಸಿದಂತೆ, ಪುತ್ರರಲ್ಲಿರ ಬೇಕಾದ ಸಕಲಗುಣಗಳಿಂದಲೂ ಯುಕ್ತನಾದ ಶ್ರೀರಾಮನು ನಿನಗೆ ಮಗನಾಗಿ ಜನಿಸಿದ್ದಾನೆ (೪೯). ದೇವಾಸುರಮನುಷ್ಯರಲ್ಲಿ ಗಂಧರ್ವರಲ್ಲಿ ಉರಗರಲ್ಲಿ, ಈ ರಾಷ್ಟ್ರದಲ್ಲಿ ಈ ನಗರ

ಆಶಂಸಂತೇ ಜನಾಃ ಸರ್ವೇ ರಾಷ್ಟ್ರೇ ಪುರವರೇ ತಥಾ ।
ಆಭ್ಯಂತರಶ್ಚ ಬಾಹ್ಯಶ್ಚ ಪೌರಜಾನಪದೋ ಜನಃ ॥ ೫೧

ಸ್ತ್ರಿಯೋ ವೃದ್ಧಾಸ್ತರುಣ್ಯಶ್ಚ ಸಾಯಂ ಪ್ರಾತಃ ಸಮಾಹಿತಾಃ ।
ಸರ್ವಾನ್ ದೇವಾನ್ನಮಸ್ಯಂತಿ ರಾಮಸ್ಯಾರ್ಥೇ ಮನಸ್ವಿನಃ ॥ ೫೨

ತೇಷಾಂ ತದ್ಯಾಚಿತಂ ದೇವ ತ್ವತ್ಪ್ರಸಾದಾತ್ ಸಮೃಧ್ಯತಾಮ್ ।
ರಾಮಮಿಂದೀವರಶ್ಯಾಮಂ ಸರ್ವಶತ್ರುನಿಬರ್ಹಣಮ್ ॥ ೫೩

ಪಶ್ಯಾಮೋ ಯೌವರಾಜ್ಯಸ್ಥಂ ತವ ರಾಜೋತ್ತಮಾತ್ಮಜಮ್ ॥

ತಂ ದೇವದೇವೋಪಮಮಾತ್ಮಜಂ ತೇ
ಸರ್ವಸ್ಯ ಲೋಕಸ್ಯ ಹಿತೇ ನಿವಿಷ್ಟಮ್ ।
ಹಿತಾಯ ನಃ ಕ್ಷಿಪ್ರಮುದಾರಜುಷ್ಟಂ
ಮುದಾಭಿಷೇಕ್ತುಂ ವರದ ತ್ವಮರ್ಹಸಿ ॥ ೫೪

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿತೀಯಃ ಸರ್ಗಃ

ದಲ್ಲಿ ಇರತಕ್ಕ ಸಕಲ ಅಧಿಕಾರಿವರ್ಗದವರೂ ಸ್ವತಂತ್ರರಾದ ಪ್ರಜೆಗಳೂ ಕೀರ್ತಿಶಾಲಿಯಾದ ಶ್ರೀರಾಮನಿಗೆ ಬಲ, ಆರೋಗ್ಯ, ಆಯುಸ್ಸು ವರ್ಧಿಸಲೆಂದು ಹಾರೈಸುತ್ತಿದ್ದಾರೆ (೫೦-೫೧). ರಾಜ್ಯದಲ್ಲಿರುವ ಹುಡುಗಿಯರು, ಮುದುಕಿಯರು ಮೊದಲಾಗಿ ಎಲ್ಲಾ ಸ್ತ್ರೀಯರೂ ಕೂಡ ಧೀರನಾದ ಶ್ರೀರಾಮನಿಗೆ ಒಳ್ಳೆಯದಾಗಲೆಂದು ಪ್ರತಿದಿನ ಪ್ರಾತಃಕಾಲ ಸಾಯಂಕಾಲಗಳಲ್ಲಿ ದೇವತೆಗಳನ್ನು ಭಕ್ತಿಯಿಂದ ಪ್ರಾರ್ಥಿಸುತ್ತಿದ್ದಾರೆ (೫೨). ಇವರೆಲ್ಲರ ಪ್ರಾರ್ಥನೆಯು, ಮಹಾರಾಜ, ನಿನ್ನ ಅನುಗ್ರಹದಿಂದ ನೆರವೇರಲಿ. ಇಂದೀವರಶ್ಯಾಮನೂ ಸಕಲಶತ್ರು ವಿಧ್ವಂಸಕನೂ ಆದ ನಿನ್ನ ಕುಮಾರ ಶ್ರೀರಾಮಚಂದ್ರನು ಯುವರಾಜ ಪದವಿಯನ್ನೇರುವುದನ್ನು ನಾವು ನೋಡಬೇಕೆಂದಿದ್ದೇವೆ (೫೩). ಆದ್ದರಿಂದ ದೇವರಾಜನಿಗೆ ಸಮಾನನಾಗಿ ನಿಖಿಲ ಪ್ರಜೆಗಳ ಹಿತದಲ್ಲಿ ಆದರವುಳ್ಳ ಉದಾರಿಯಾದ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಸಂತೋಷದಿಂದ ಏರ್ಪಡಿಸು. ಈ ಕಾರ್ಯವು ನಮ್ಮೆಲ್ಲರ ಹಿತಕ್ಕೋಸ್ಕರವೇ ಸರಿ. ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಶೀಘ್ರವಾಗಿ ನೆರವೇರಿಸು" ಎಂದು ಹೇಳಿದರು (೫೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎರಡನೆಯ ಸರ್ಗ

## ತೃತೀಯಃ ಸರ್ಗಃ

### ಪುತ್ರಾನುಶಾಸನಮ್

ತೇಷಾಮಂಜಲಿಪದ್ಮಾನಿ ಪ್ರಗೃಹೀತಾನಿ ಸರ್ವಶಃ ।
ಪ್ರತಿಗೃಹ್ಯಾಬ್ರವೀದ್ರಾಜಾ ತೇಭ್ಯಃ ಪ್ರಿಯಹಿತಂ ವಚಃ ॥ ೧

ಅಹೋಽಸ್ಮಿ ಪರಮಪ್ರೀತಃ ಪ್ರಭಾವಶ್ಚಾತುಲೋ ಮಮ ।
ಯನ್ಮೇ ಜ್ಯೇಷ್ಠಂ ಪ್ರಿಯಂ ಪುತ್ರಂ ಯೌವರಾಜ್ಯಸ್ಥಮಿಚ್ಛಥ ॥ ೨

ಇತಿ ಪ್ರತ್ಯರ್ಚ್ಯ ತಾನ್ರಾಜಾ ಬ್ರಾಹ್ಮಣಾನಿದಮಬ್ರವೀತ್ ।
ವಸಿಷ್ಠಂ ವಾಮದೇವಂ ಚ ತೇಷಾಮೇವೋಪಶೃಣ್ವತಾಮ್ ॥ ೩

ಚೈತ್ರಃ ಶ್ರೀಮಾನಯಂ ಮಾಸಃ ಪುಣ್ಯಃ ಪುಷ್ಪಿತಕಾನನಃ ।
ಯೌವರಾಜ್ಯಾಯ ರಾಮಸ್ಯ ಸರ್ವಮೇವೋಪಕಲ್ಪ್ಯತಾಮ್ ॥ ೪

## ಸರ್ಗ ೩

### ಪಟ್ಟಾಭಿಷೇಕಕ್ಕೆ ಸಿದ್ಧತೆ. ದಶರಥನು ರಾಮನಿಗೆ ಹೇಳಿದ ಹಿತೋಪದೇಶ.

ಹೀಗೆ ಪ್ರಾರ್ಥಿಸುತ್ತ ಸಭೆಯಲ್ಲಿದ್ದ ಎಲ್ಲ ಸದಸ್ಯರೂ ಕೈಗಳನ್ನು ಜೋಡಿಸಿಕೊಂಡಿರಲು, ಅವರ ಅಂಜಲಿಗಳು ಕಮಲದ ಮೊಗ್ಗುಗಳಂತೆ ಶೋಭಿಸುತ್ತಿದ್ದವು. ದಶರಥರಾಜನು ಅವರ ಪ್ರಾರ್ಥನೆಯನ್ನು ಮನ್ನಿಸಿ ಅವರಿಗೆ ಪ್ರಿಯವೂ ಹಿತಕರವೂ ಆದ ರೀತಿಯಲ್ಲಿ "ಪ್ರಜೆಗಳೆ, ನನಗೆ ಪರಮಾನಂದವಾಯಿತು. ನನಗೆ ಪ್ರಿಯನಾದ ಜ್ಯೇಷ್ಠಪುತ್ರನು ಯುವರಾಜನಾಗಲೆಂದು ಬಯಸುತ್ತಿದ್ದೀರಿ. ಆಹಾ! ನನ್ನ ಭಾಗ್ಯಕ್ಕೆ ಎಣೆಯಿಲ್ಲ" ಎಂದು ಹೇಳಿದನು (೧-೨). ಅವರೆಲ್ಲರನ್ನೂ ಸತ್ಕರಿಸಿ ವಸಿಷ್ಠವಾಮದೇವಾದಿ ಬ್ರಾಹ್ಮಣರನ್ನು ಕುರಿತು ಎಲ್ಲರಿಗೂ ಕೇಳಿಸುವಂತೆ "ಮಹಾತ್ಮರೆ, ಈಗ ಬಂದಿರುವ ಚೈತ್ರಮಾಸವು ಮಂಗಳಕಾರ್ಯಕ್ಕೆ ಪವಿತ್ರವಾದದ್ದು. ಉಪವನಗಳಲ್ಲಿ ಹೂಗಳು ಅರಳಿ ರಮಣೀಯವಾಗಿದೆ. ಶ್ರೀರಾಮನ ಪಟ್ಟಾಭಿಷೇಕಕ್ಕೆ ಬೇಕಾದ ಸಾಮಗ್ರಿಗಳು ಸಿದ್ಧವಾಗಲಿ" ಎಂದು ನುಡಿದನು (೩-೪).

ರಾಜ್ಞಸ್ತೂಪರತೇ ವಾಕ್ಯೇ ಜನಘೋಷೋ ಮಹಾನಭೂತ್ ।
ಶನೈಸ್ತಸ್ಮಿನ್ ಪ್ರಶಾಂತೇ ಚ ಜನಘೋಷೇ ನರಾಧಿಪಃ ॥ ೫

ವಸಿಷ್ಠಂ ಮುನಿಶಾರ್ದೂಲಂ ರಾಜಾ ವಚನಮಬ್ರವೀತ್ ।
ಅಭಿಷೇಕಾಯ ರಾಮಸ್ಯ ಯತ್ಕರ್ಮ ಸಪರಿಚ್ಛದಮ್ ॥ ೬

ತದದ್ಯ ಭಗವಾನ್ ಸರ್ವಮಾಜ್ಞಾಪಯಿತುಮರ್ಹತಿ ।
ತಚ್ಛ್ರುತ್ವಾ ಭೂಮಿಪಾಲಸ್ಯ ವಸಿಷ್ಠೋ ದ್ವಿಜಸತ್ತಮಃ ॥ ೭

ಆದಿದೇಶಾಗ್ರತೋ ರಾಜ್ಞಃ ಸ್ಥಿತಾನ್ ಯುಕ್ತಾನ್ ಕೃತಾಂಜಲೀನ್ ।
ಸುವರ್ಣಾದೀನಿ ರತ್ನಾನಿ ಬಲೀನ್ ಸರ್ವೌಷಧೀರಪಿ ॥ ೮

ಶುಕ್ಲಮಾಲ್ಯಾನಿ ಲಾಜಾಂಶ್ಚ ಪೃಥಕ್ಚ ಮಧುಸರ್ಪಿಷೀ ।
ಅಹತಾನಿ ಚ ವಾಸಾಂಸಿ ರಥಂ ಸರ್ವಾಯುಧಾನ್ಯಪಿ ॥ ೯

ಚತುರಂಗಬಲಂ ಚೈವ ಗಜಂ ಚ ಶುಭಲಕ್ಷಣಮ್ ।
ಚಾಮರವ್ಯಜನೇ ಶ್ವೇತೇ ಧ್ವಜಂ ಛತ್ರಂ ಚ ಪಾಂಡರಮ್ ॥ ೧೦

ಶತಂ ಚ ಶಾತಕುಂಭಾನಾಂ ಕುಂಭಾನಾಮಗ್ನಿವರ್ಚಸಾಮ್ ।
ಹಿರಣ್ಯಶೃಂಗಮೃಷಭಂ ಸಮಗ್ರಂ ವ್ಯಾಘ್ರಚರ್ಮ ಚ ॥ ೧೧

---

ದಶರಥನು ಹೀಗೆ ನುಡಿದು ಮುಗಿಸುವಷ್ಟರಲ್ಲಿ ಜನರೆಲ್ಲರೂ ಆನಂದದಿಂದ ಗಟ್ಟಿಯಾಗಿ ಘೋಷಣೆ ಮಾಡಿದರು. ಆ ಕೋಲಾಹಲಶಬ್ದವು ಶಾಂತವಾದ ಮೇಲೆ ಮಹಾರಾಜನು ವಸಿಷ್ಠ ಮಹರ್ಷಿಗಳನ್ನುದ್ದೇಶಿಸಿ "ಭಗವನ್, ರಾಮನ ಅಭಿಷೇಕಕ್ಕೆ ಯಾವ ಯಾವ ಶಾಂತಿಕರ್ಮಗಳು ನಡೆಯಬೇಕು, ಯಾವ ಯಾವ ಉಪಕರಣಗಳು ಬೇಕಾಗುತ್ತವೆ ಎಂಬುದನ್ನು ಆಜ್ಞಾಪಿಸಬೇಕು" ಎಂದು ನಿವೇದಿಸಿಕೊಂಡನು (೫-೬). ಆ ಮಾತನ್ನು ಕೇಳಿ ವಸಿಷ್ಠ ಮಹರ್ಷಿಗಳು ರಾಜನೆದುರಿಗೆ ಕೈ ಮುಗಿದುಕೊಂಡು ನಿಂತಿದ್ದ ಅಧಿಕಾರಿಗಳಿಗೆ ಈ ರೀತಿಯಲ್ಲಿ ಸೂಚಿಸಿದರು : "ಈ ಕಾರ್ಯಕ್ಕೆ ಸುವರ್ಣವೇ ಮೊದಲಾದ ರತ್ನಗಳು, ಪೂಜಾದ್ರವ್ಯಗಳು, ವಿವಿಧ ಧಾನ್ಯ-ಮೂಲಿಕೆಗಳು, ಬಿಳಿಯ ಹೂವಿನ ಮಾಲೆಗಳು, ಅರಳು, ಜೇನುತುಪ್ಪ, ತುಪ್ಪ, ರಥ ಮತ್ತು ಸಕಲ ಶಸ್ತ್ರಾಸ್ತ್ರಗಳು ಸಿದ್ಧವಾಗಬೇಕು (೭-೯). ಅಲ್ಲದೆ ಚತುರಂಗ ಸೈನ್ಯ, ಶುಭಲಕ್ಷಣವಿರುವ ಆನೆ, ಬಿಳಿಯ ಚಾಮರ, ಬೀಸಣಿಗೆ, ಧ್ವಜ, ಶ್ವೇತಚ್ಛತ್ರ -ಇವುಗಳು ಬೇಕು (೧೦).

ಉಪಸ್ಥಾಪಯತ ಪ್ರಾತರಗ್ನ್ಯಾಗಾರಂ ಮಹೀಪತೇಃ ।
ಯಚ್ಚಾನ್ಯತ್ ಕಿಂಚಿದೇಷ್ಟವ್ಯಂ ತತ್ಸರ್ವಮುಪಕಲ್ಪ್ಯತಾಮ್ ॥ ೧೨

ಅಂತಃಪುರಸ್ಯ ದ್ವಾರಾಣಿ ಸರ್ವಸ್ಯ ನಗರಸ್ಯ ಚ ।
ಚಂದನಸ್ರಗ್ಭಿರರ್ಚ್ಯಂತಾಂ ಧೂಪೈಶ್ಚ ಘ್ರಾಣಹಾರಿಭಿಃ ॥ ೧೩

ಪ್ರಶಸ್ತಮನ್ನಂ ಗುಣವದ್ದಧಿಕ್ಷೀರೋಪಸೇಚನಮ್ ।
ದ್ವಿಜಾನಾಂ ಶತಸಾಹಸ್ರಂ ಯತ್ಪ್ರಕಾಮಮಲಂ ಭವೇತ್ ॥ ೧೪

ಸತ್ಕೃತ್ಯ ದ್ವಿಜಮುಖ್ಯಾನಾಂ ಶ್ವಃ ಪ್ರಭಾತೇ ಪ್ರದೀಯತಾಮ್ ।
ಘೃತಂ ದಧಿ ಚ ಲಾಜಾಶ್ಚ ದಕ್ಷಿಣಾಶ್ಚಾಪಿ ಪುಷ್ಕಲಾಃ ॥ ೧೫

ಸೂರ್ಯೋಽಭ್ಯುದಿತಮಾತ್ರೇ ಶ್ವೋ ಭವಿತಾ ಸ್ವಸ್ತಿವಾಚನಮ್ ।
ಬ್ರಾಹ್ಮಣಾಶ್ಚ ನಿಮಂತ್ರ್ಯಂತಾಂ ಕಲ್ಪ್ಯಂತಾಮಾಸನಾನಿ ಚ ॥ ೧೬

---

ಮತ್ತು ಅಗ್ನಿಯಂತೆ ಸ್ವಚ್ಛವಾಗಿ ಬೆಳಗುವ ಒಂದು ನೂರು ಚಿನ್ನದ ಕಲಶಗಳನ್ನೂ ಬಂಗಾರದಿಂದ ಕೊಂಬುಗಳನ್ನು ಅಲಂಕರಿಸಿದ ವೃಷಭವನ್ನೂ ಸಮಗ್ರವಾದ ಒಂದು ವ್ಯಾಘ್ರಚರ್ಮವನ್ನೂ ಸಿದ್ಧಪಡಿಸಿರಿ (೧೧). ಇವುಗಳೆಲ್ಲವೂ ನಾಳೆ ಬೆಳಗಾಗುವುದರಲ್ಲಿ ಮಹಾರಾಜನ ಅಗ್ನಿಹೋತ್ರಶಾಲೆಯಲ್ಲಿ ಸಿದ್ಧವಾಗಿರಲಿ. ಇವುಗಳಲ್ಲದೆ ಇನ್ನೂ ಬೇಕಾಗುವ ಗಂಧ, ಪುಷ್ಪ, ತಾಂಬೂಲ ಮುಂತಾದವುಗಳನ್ನು ತಂದಿರಿಸಿರಿ (೧೨). ಅರಮನೆಯ ಮತ್ತು ನಗರದ ಮಹಾದ್ವಾರಗಳನ್ನು ಗಂಧಪುಷ್ಪಗಳಿಂದಲೂ ಸುಗಂಧವನ್ನು ಬೀರುವ ಧೂಪಗಳಿಂದಲೂ ಅಲಂಕರಿಸಿರಿ (೧೩). ಸುಮಾರು ಒಂದು ಲಕ್ಷ ದ್ವಿಜರಿಗೆ ಸಂತರ್ಪಣೆಯಾಗಬೇಕು. ಅವರೆಲ್ಲರಿಗೂ ಸಂತೃಪ್ತಿಯಾಗುವಂತೆ ಪ್ರಶಸ್ತವಾದ ಅನ್ನ, ಹಾಲು, ಮೊಸರು, ವ್ಯಂಜನಗಳು ಸಿದ್ಧವಾಗುವಂತೆ ಏರ್ಪಡಿಸಿರಿ (೧೪). ನಾಳೆ ಪ್ರಾತಃಕಾಲ ದ್ವಿಜಶ್ರೇಷ್ಠರನ್ನು ಕರೆಸಿ ತುಪ್ಪ, ಮೊಸರು, ಅರಳುಗಳನ್ನು ದಾನಮಾಡಿ ಯಥೇಷ್ಟವಾಗಿ ದಕ್ಷಿಣೆಯನ್ನು ಕೊಡತಕ್ಕದ್ದು (೧೫). ನಾಳೆ ಸೂರ್ಯೋದಯವಾದ ಕೂಡಲೆ ಸ್ವಸ್ತಿವಾಚನವು ನಡೆಯುತ್ತದೆ. ಅದಕ್ಕೋಸ್ಕರ ಬ್ರಾಹ್ಮಣರನ್ನು ಆಹ್ವಾನಿಸಿ, ಕುಳಿತುಕೊಳ್ಳಲು

ಆಬಧ್ಯಂತಾಂ ಪತಾಕಾಶ್ಚ ರಾಜಮಾರ್ಗಶ್ಚ ಸಿಚ್ಯತಾಮ್ ।
ಸರ್ವೇ ಚ ತಾಲಾವಚರಾ ಗಣಿಕಾಶ್ಚ ಸ್ವಲಂಕೃತಾಃ ॥ ೧೭

ಕಕ್ಷ್ಯಾಂ ದ್ವಿತೀಯಾಮಾಶ್ರಿತ್ಯ ತಿಷ್ಠಂತು ನೃಪವೇಶ್ಮನಃ ।
ದೇವಾಯತನಚೈತ್ಯೇಷು ಸಾನ್ನಭಕ್ಷ್ಯಾಃ ಸದಕ್ಷಿಣಾಃ ॥ ೧೮

ಉಪಸ್ಥಾಪಯಿತವ್ಯಾಃ ಪ್ಯುರ್ಮಾಲ್ಯಯೋಗ್ಯಾಃ ಪೃಥಕ್ ಪೃಥಕ್ ।
ದೀರ್ಘಾಸಿಬದ್ಧಾ ಯೋಧಾಶ್ಚ ಸನ್ನದ್ಧಾ ಮೃಷ್ಟವಾಸಸಃ ॥ ೧೯

ಮಹಾರಾಜಾಂಗಣಂ ಸರ್ವೇ ಪ್ರವಿಶಂತು ಮಹೋದಯಮ್ ।
ಏವಂ ವ್ಯಾದಿಶ್ಯ ವಿಪ್ರೌ ತೌ ಕ್ರಿಯಾಸ್ತತ್ರ ಸುನಿಷ್ಠಿತೌ ॥ ೨೦

ಚಕ್ರತುಶ್ಚೈವ ಯಚ್ಛೇಷಂ ಪಾರ್ಥಿವಾಯ ನಿವೇದ್ಯ ಚ ।
ಕೃತಮಿತ್ಯೇವ ಚಾಬ್ರೂತಾಮಭಿಗಮ್ಯ ಜಗತ್ಪತಿಮ್ ॥ ೨೧

---

ಯಥೋಚಿತವಾಗಿ ಪೀಠಗಳನ್ನು ಸಜ್ಜುಮಾಡಿರಿ (೧೬). ಧ್ವಜಪಟಗಳನ್ನು ಏರಿಸಿ ರಾಜಬೀದಿಗಳನ್ನು ನೀರಿನಿಂದ ಚಿಮುಕಿಸಬೇಕು. ಅರಮನೆಯ ಎರಡನೆಯ ತೊಟ್ಟಿಯಲ್ಲಿ ಸಂಗೀತಗಾರರೂ ನರ್ತಕರೂ ವೇಶ್ಯೆಯರೂ ಚೆನ್ನಾಗಿ ಅಲಂಕರಿಸಿಕೊಂಡು ಬಂದು ಸೇರಲಿ (೧೭). ಎಲ್ಲಾ ದೇವಾಲಯಗಳಲ್ಲಿಯೂ ಇತರ ಪೂಜಾಸ್ಥಳಗಳಲ್ಲಿಯೂ ಬೇರೆಬೇರೆಯಾಗಿ ವಿಶೇಷವಾದ ಪೂಜೆಯು ನಡೆಯಲಿ. ಅದಕ್ಕೇ ಬೇಕಾದ ಅನ್ನ, ಭಕ್ಷ್ಯ, ಹೂ, ದಕ್ಷಿಣೆಗಳನ್ನು ಒದಗಿಸಿರಿ. ಪಟ್ಟಾಭಿಷೇಕ ನಡೆಯುವ ಕಲ್ಯಾಣ ಮಂಟಪದ ಎದುರಿಗಿರುವ ಅರಮನೆಯ ಅಂಗಳದಲ್ಲಿ, ಸೈನಿಕರು ನಿಡುಗತ್ತಿಗಳನ್ನು ನಡುವಿಗೆ ಕಟ್ಟಿಕೊಂಡು ಕವಚಧಾರಿಗಳಾಗಿ ಉಜ್ಜ್ವಲವಾದ ವಸ್ತ್ರಗಳನ್ನುಟ್ಟು ನೆರೆದಿರಲಿ" (೧೮-೧೯). ಈ ರೀತಿಯಲ್ಲಿ ಕಾರ್ಯದಕ್ಷರಾದ ವಸಿಷ್ಠರೂ ಅವರೊಡನೆ ವಾಮದೇವರೂ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದರು. ಅನಂತರ ಪೌರೋಹಿತ್ಯಕ್ಕೆ ಸಂಬಂಧಿಸಿದ ಇತರ ಕಾರ್ಯಗಳನ್ನೂ ಮಹಾರಾಜನಿಗೆ ತಿಳಿಸಿ ಅರಮನೆಯಲ್ಲಿ ಅವುಗಳಿಗೆ ಸಿದ್ಧತೆಯನ್ನು ಮಾಡಿಸಿ ಎಲ್ಲವೂ ಅಣಿಯಾಗಿದೆಯೆಂದು ಸಂತೋಷದಿಂದ ದಶರಥರಾಜನಿಗೆ ತಿಳಿಸಿದರು (೨೦-೨೧).

ಯಥೋಕ್ತವಚನಂ ಪ್ರೀತೌ ಹರ್ಷಯುಕ್ತೌ ದ್ವಿಜರ್ಷಭೌ ।
ತತಃ ಸುಮಂತ್ರಂ ದ್ಯುತಿಮಾನ್ ರಾಜಾ ವಚನಮಬ್ರವೀತ್ ॥ ೨೨

ರಾಮಃ ಕೃತಾತ್ಮಾ ಭವತಾ ಶೀಘ್ರಮಾನೀಯತಾಮಿತಿ ।
ಸ ತಥೇತಿ ಪ್ರತಿಜ್ಞಾಯ ಸುಮಂತ್ರೋ ರಾಜಶಾಸನಾತ್ ॥ ೨೩

ರಾಮಂ ತತ್ರಾನಯಾಂಚಕ್ರೇ ರಥೇನ ರಥಿನಾಂ ವರಮ್ ।
ಅಥ ತತ್ರ ಸಮಾಸೀನಾಸ್ತದಾ ದಶರಥಂ ನೃಪಮ್ ॥ ೨೪

ಉಪವಿಷ್ಟಾಶ್ಚ ಸಚಿವಾ ರಾಜಾನಶ್ಚ ಸನೈಗಮಾಃ ।
ಪ್ರಾಚ್ಯೋದೀಚ್ಯಾಃ ಪ್ರತೀಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಭೂಮಿಪಾಃ ॥ ೨೫

ಮ್ಲೇಚ್ಛಾಶ್ಚಾರ್ಯಾಶ್ಚ ಯೇ ಚಾನ್ಯೇ ವನಶೈಲಾಂತವಾಸಿನಃ ।
ಉಪಾಸಾಂಚಕ್ರಿರೇ ಸರ್ವೇ ತಂ ದೇವಾ ಇವ ವಾಸವಮ್ ॥ ೨೬

ತೇಷಾಂ ಮಧ್ಯೇ ಸ ರಾಜರ್ಷಿರ್ಮರುತಾಮಿವ ವಾಸವಃ ।
ಪ್ರಾಸಾದಸ್ಥೋ ರಥಗತಂ ದದರ್ಶಾಯಾಂತಮಾತ್ಮಜಮ್ ॥ ೨೭

ಗಂಧರ್ವರಾಜಪ್ರತಿಮಂ ಲೋಕೇ ವಿಖ್ಯಾತಪೌರುಷಮ್ ।
ದೀರ್ಘಬಾಹುಂ ಮಹಾಸತ್ತ್ವಂ ಮತ್ತಮಾತಂಗಗಾಮಿನಮ್ ॥ ೨೮

---

ಆಗ ತೇಜಸ್ವಿಯಾದ ದಶರಥನು ಸುಮಂತ್ರನನ್ನು ಕರೆದು 'ನೀನು ಹೋಗಿ ಧರ್ಮಶೀಲನಾದ ರಾಮನನ್ನು ಈಗಲೇ ಕರೆದುಕೊಂಡು ಬಾ' ಎಂದು ಹೇಳಿದನು. ಸುಮಂತ್ರನು ಹಾಗೆಯೇ ಆಗಲೆಂದು ರಾಮನ ಸಮೀಪಕ್ಕೆ ಹೋಗಿ ರಾಜಾಜ್ಞೆಯನ್ನು ತಿಳಿಸಿ ರಥಿಕಶ್ರೇಷ್ಠನಾದ ರಾಮನನ್ನು ರಥದಲ್ಲಿ ಕರೆತಂದನು (೨೨-೨೩). ಆಗ ರಾಜಸಭೆಯಲ್ಲಿ ಪೂರ್ವಪಶ್ಚಿಮ ದಕ್ಷಿಣೋತ್ತರ ದೇಶಗಳ ರಾಜರು, ಮಂತ್ರಿಗಳು, ನಾಗರಿಕ ಪ್ರಜೆಗಳು, ಮ್ಲೇಚ್ಛರು, ಆರ್ಯರು ಮತ್ತು ಗುಡ್ಡಗಾಡುಗಳಲ್ಲಿ ವಾಸ ಮಾಡುವ ಜನರು ನೆರೆದಿದ್ದರು. ದೇವತೆಗಳು ದೇವೇಂದ್ರನನ್ನು ಓಲೈಸುವಂತೆ ಅವರೆಲ್ಲರೂ ದಶರಥನನ್ನು ಓಲೈಸುತ್ತ ಕುಳಿತಿದ್ದರು (೨೪-೨೬). ಆಗ ದೇವತೆಗಳ ಮಧ್ಯದಲ್ಲಿ ಇಂದ್ರನಂತೆ ಕುಳಿತಿದ್ದ ಆ ರಾಜರ್ಷಿಯು ರಥದಲ್ಲಿ ಬರುತ್ತಿದ್ದ ತನ್ನ ಪುತ್ರನನ್ನು ಅರಮನೆಯಿಂದಲೇ ಕಂಡನು (೨೭). ಶ್ರೀರಾಮ ನಾದರೋ ಗಂಧರ್ವರಾಜನಂತೆ ಪೌರುಷವಂತನೆಂದು ಲೋಕದಲ್ಲಿ ಪ್ರಖ್ಯಾತನು.

ಚಂದ್ರಕಾಂತಾನನಂ ರಾಮಮತೀವ ಪ್ರಿಯದರ್ಶನಮ್ ।
ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಮ್ ॥ ೨೯

ಘರ್ಮಾಭಿತಪ್ತಾಃ ಪರ್ಜನ್ಯಂ ಹ್ಲಾದಯಂತಮಿವ ಪ್ರಜಾಃ ।
ನ ತತರ್ಪ ಸಮಾಯಾಂತಂ ಪಶ್ಯಮಾನೋ ನರಾಧಿಪಃ ॥ ೩೦

ಅವತಾರ್ಯ ಸುಮಂತ್ರಸ್ತಂ ರಾಘವಂ ಸ್ಯಂದನೋತ್ತಮಾತ್ ।
ಪಿತುಃ ಸಮೀಪಂ ಗಚ್ಛಂತಂ ಪ್ರಾಂಜಲಿಃ ಪೃಷ್ಠತೋಽನ್ವಗಾತ್ ॥ ೩೧

ಸ ತಂ ಕೈಲಾಸಶೃಂಗಾಭಂ ಪ್ರಾಸಾದಂ ನರಪುಂಗವಃ ।
ಆರುರೋಹ ನೃಪಂ ದ್ರಷ್ಟುಂ ಸಹ ಸೂತೇನ ರಾಘವಃ ॥ ೩೨

ಸ ಪ್ರಾಂಜಲಿರಭಿಪ್ರೇತ್ಯ ಪ್ರಣತಃ ಪಿತುರಂತಿಕೇ ।
ನಾಮ ಸ್ವಂ ಶ್ರಾವಯನ್ ರಾಮೋ ವವಂದೇ ಚರಣೌ ಪಿತುಃ ॥ ೩೩

ತಂ ದೃಷ್ಟ್ವಾ ಪ್ರಣತಂ ಪಾರ್ಶ್ವೇ ಕೃತಾಂಜಲಿಪುಟಂ ನೃಪಃ ।
ಗೃಹ್ಯಾಂಜಲೌ ಸಮಾಕೃಷ್ಯ ಸಸ್ವಜೇ ಪ್ರಿಯಮಾತ್ಮಜಮ್ ॥ ೩೪

---

ಆಜಾನುಬಾಹು. ಸತ್ತ್ವಗುಣಸಂಪನ್ನ. ಮದ್ದಾನೆಯಂತೆ ಗಂಭೀರವಾದ ನಡಿಗೆಯುಳ್ಳವನು (೨೮). ಚಂದ್ರನಂತೆ ಸೊಗಸುಬೀರುವ ಮುಖ. ಶ್ರೀರಾಮನನ್ನು ನೋಡಿದಷ್ಟೂ ಆನಂದವು ಹೆಚ್ಚುತ್ತಿದ್ದಿತು. ತನ್ನ ಸೌಂದರ್ಯ-ಔದಾರ್ಯಾದಿಗುಣಗಳಿಂದ ನೋಡುವವರ ಕಣ್ಮನಗಳನ್ನು ಸೂರೆಗೊಳ್ಳುತ್ತಿದ್ದನು (೨೯). ಬೇಸಿಗೆಯಿಂದ ಬಳಲಿದವರಿಗೆ ಮೇಘವಿದ್ದಂತೆ, ನೋಡುವ ಜನರೆಲ್ಲರಿಗೂ ಶ್ರೀರಾಮನು ಆಹ್ಲಾದವನ್ನು ಕೊಡುತ್ತಿದ್ದನು. ಅಂಥ ಮಗನನ್ನು ಎಷ್ಟು ನೋಡಿದರೂ ದಶರಥನಿಗೆ ತೃಪ್ತಿಯಾಗಲಿಲ್ಲ (೩೦). ಸುಮಂತ್ರನು ಶ್ರೀರಾಮನನ್ನು ರಥದಿಂದ ಇಳಿಸಿಕೊಳ್ಳಲಾಗಿ ಅವನು ತಂದೆಯ ಬಳಿಗೆ ಹೊರಟನು. ಸುಮಂತ್ರನು ಅವನ ಹಿಂದೆ ವಿನೀತನಾಗಿ ನಡೆದು ಬಂದನು (೩೧). ಪುರುಷೋತ್ತಮನಾದ ರಾಘವನು ತಂದೆಯನ್ನು ನೋಡುವುದಕ್ಕಾಗಿ, ಕೈಲಾಸ ಶಿಖರದಂತೆ ಉನ್ನತವಾಗಿದ್ದ ಪ್ರಾಸಾದವನ್ನು ಸೂತನೊಡನೆ ಹತ್ತಿದನು. ಅಲ್ಲಿ ಶ್ರೀರಾಮನು ಕೈಮುಗಿದುಕೊಂಡು ತಂದೆಯ ಬಳಿಗೆ ಹೋಗಿ, ತನ್ನ ಹೆಸರನ್ನು ಹೇಳುತ್ತ ದಶರಥನ ಪಾದಗಳಿಗೆ ಅಭಿವಾದನೆ ಮಾಡಿದನು (೩೨-೩೩). ಹೀಗೆ ಅಭಿವಾದನೆ ಮಾಡಿದ ತನ್ನ

ತಸ್ಮೈ ಚಾಭ್ಯುದಿತಂ ಸೌಮ್ಯಂ ಮಣಿಕಾಂಚನಭೂಷಿತಮ್ ।
ದಿದೇಶ ರಾಜಾ ರುಚಿರಂ ರಾಮಾಯ ವರಮಾಸನಮ್ ॥ ೩೫

ತದಾಸನವರಂ ಪ್ರಾಪ್ಯ ವ್ಯದೀಪಯತ ರಾಘವಃ ।
ಸ್ವಯೇವ ಪ್ರಭಯಾ ಮೇರುಮುದಯೇ ವಿಮಲೋ ರವಿಃ ॥ ೩೬

ತೇವ ವಿಭ್ರಾಜತಾ ತತ್ರ ಸಾ ಸಭಾಭಿವ್ಯರೋಚತ ।
ವಿಮಲಗ್ರಹನಕ್ಷತ್ರಾ ಶಾರದೀ ದ್ಯೌರಿವೇಂದುನಾ ॥ ೩೭

ತಂ ಪಶ್ಯಮಾನೋ ನೃಪತಿಸ್ತುತೋಷ ಪ್ರಿಯಮಾತ್ಮಜಮ್ ।
ಅಲಂಕೃತಮಿವಾತ್ಮಾನಮಾದರ್ಶತಲಸಂಸ್ಥಿತಮ್ ॥ ೩೮

ಸ ತಂ ಸಸ್ಮಿತಮಾಭಾಷ್ಯ ಪುತ್ರಂ ಪುತ್ರವತಾಂ ವರಃ ।
ಉವಾಚೇದಂ ವಚೋ ರಾಜಾ ದೇವೇಂದ್ರಮಿವ ಕಶ್ಯಪಃ ॥ ೩೯

ಜ್ಯೇಷ್ಠಾಯಾಮಾಸಿ ಮೇ ಪತ್ನ್ಯಾಂ ಸದೃಶ್ಯಾಂ ಸದೃಶಃ ಸುತಃ ।
ಉತ್ಪನ್ನಸ್ತ್ವಂ ಗುಣಶ್ರೇಷ್ಠೋ ಮಮ ರಾಮಾತ್ಮಜಃ ಪ್ರಿಯಃ ॥ ೪೦

---

ಪ್ರಿಯಪುತ್ರನನ್ನು ಮಹಾರಾಜನು ಕೈಹಿಡಿದು ತನ್ನ ಬಳಿಗೆ ಸೆಳೆದುಕೊಂಡು ಆಲಿಂಗಿಸಿದನು. ಅನಂತರ ರತ್ನಖಚಿತವೂ ಉನ್ನತವೂ ಆದ ಒಂದು ಸುಂದರವಾದ ಸುವರ್ಣಪೀಠದಲ್ಲಿ ಕುಳಿತುಕೊಳ್ಳುವಂತೆ ರಾಮನಿಗೆ ಸೂಚಿಸಿದನು (೩೪-೩೫). ಅದರಂತೆ ರಾಘವನು ಪೀಠದಲ್ಲಿ ಕುಳಿತುಕೊಳ್ಳಲು, ಉದಯಕಾಲದಲ್ಲಿ ಶುಭ್ರನಾದ ಆದಿತ್ಯನಿಂದ ಮೇರುಪರ್ವತವು ಬೆಳಗುವಂತೆ ರಾಮನ ಕಾಂತಿಯಿಂದ ಸುವರ್ಣ ಪೀಠವೇ ಬೆಳಗಿತು (೩೬). ಅಷ್ಟೇ ಅಲ್ಲ. ಆ ರಾಜಸಭೆಗೆ ಶ್ರೀರಾಮನು ಬಂದುದ ರಿಂದ, ಶರತ್ಕಾಲದ ರಾತ್ರಿಯಲ್ಲಿ ವಿಮಲವಾದ ಗ್ರಹನಕ್ಷತ್ರಗಳಿಂದ ಕೂಡಿದ ಅಂತರಿಕ್ಷಕ್ಕೆ ಚಂದ್ರನು ಉದಯಿಸಿ ಬಂದಂತಾಯಿತು (೩೭). ಅಲಂಕರಿಸಿಕೊಂಡಿರುವ ಪುರುಷನು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನೇ ನೋಡಿ ಸಂತೋಷಿಸುವಂತೆ, ದಶರಥನು ತನ್ನ ಪ್ರಿಯಪುತ್ರನನ್ನು ನೋಡಿ ನೋಡಿ ಹಿಗ್ಗುತ್ತಿದ್ದನು (೩೮). ಪುತ್ರವಂತರಲ್ಲಿ ಮೇಲೆನಿಸಿಕೊಂಡ ದಶರಥರಾಜನು ತನ್ನ ಮಗನನ್ನು ಸಂಬೋಧಿಸಿ, ಕಶ್ಯಪನು ದೇವೇಂದ್ರನಿಗೆ ಹೇಳುವಂತೆ, ನಸುನಗುತ್ತ ಹೀಗೆಂದನು (೩೯) : "ರಾಮ, ನನಗೆ ಅನುರೂಪಳಾದ ನನ್ನ ಜ್ಯೇಷ್ಠಪತ್ನಿಯಲ್ಲಿ ನೀನು ಅನು

ಯತಸ್ತ್ವಯಾ ಪ್ರಜಾಶ್ಚೇಮಾಃ ಸ್ವಗುಣೈರನುರಂಜಿತಾಃ ।
ತಸ್ಮಾತ್ತ್ವಂ ಪುಷ್ಯಯೋಗೇನ ಯೌವರಾಜ್ಯಮವಾಪ್ನುಹಿ ॥ ೪೧

ಕಾಮತಸ್ತ್ವಂ ಪ್ರಕೃತ್ಯೈವ ವಿನೀತೋ ಗುಣವಾನಸಿ ।
ಗುಣವತ್ಯಪಿ ತು ಸ್ನೇಹಾತ್ ಪುತ್ರ ವಕ್ಷ್ಯಾಮಿ ತೇ ಹಿತಮ್ ॥ ೪೨

ಭೂಯೋ ವಿನಯಮಾಸ್ಥಾಯ ಭವ ನಿತ್ಯಂ ಜಿತೇಂದ್ರಿಯಃ ।
ಕಾಮಕ್ರೋಧಸಮುತ್ಥಾನಿ ತ್ಯಜೇಥಾ ವ್ಯಸನಾನಿ ಚ ॥ ೪೩

ಪರೋಕ್ಷಯಾ ವರ್ತಮಾನೋ ವೃತ್ತ್ಯಾ ಪ್ರತ್ಯಕ್ಷಯಾ ತಥಾ ।
ಅಮಾತ್ಯಪ್ರಭೃತೀಃ ಸರ್ವಾಃ ಪ್ರಕೃತೀಶ್ಚಾನುರಂಜಯ ॥ ೪೪

ಕೋಷ್ಠಾಗಾರಾಯುಧಾಗಾರೈಃ ಕೃತ್ವಾ ಸನ್ನಿಚಯಾನ್ ಬಹೂನ್ ।
ತುಷ್ಟಾನುರಕ್ತಪ್ರಕೃತಿರ್ಯಃ ಪಾಲಯತಿ ಮೇದಿನೀಮ್ ॥ ೪೫

---

ರೂಪನಾದ ಮಗನಾಗಿ ಜನಿಸಿರುವೆ. ಒಳ್ಳೆಯ ಗುಣಶಾಲಿಯಾಗಿ ಎಲ್ಲರಿಗೂ ಪ್ರಿಯನಾಗಿದ್ದೀಯೆ (೪೦). ನಿನ್ನ ಸದ್ಗುಣಗಳಿಂದ ಈ ಪ್ರಜೆಗಳೆಲ್ಲರನ್ನೂ ಸಂತೋಷಪಡಿಸುತ್ತಿದ್ದೀಯೆ. ಆದ್ದರಿಂದ ನಾಳೆ ಪುಷ್ಯ ನಕ್ಷತ್ರದಲ್ಲಿ ನೀನು ಯುವರಾಜ ಪದವಿಯನ್ನು ವಹಿಸಿಕೊ. ವಿನಯಾದಿ ಗುಣಗಳು ಸಹಜವಾಗಿಯೇ ನಿನ್ನಲ್ಲಿ ನೆಲೆಗೊಂಡಿವೆ. ಆದರೂ ಪುತ್ರವಾತ್ಸಲ್ಯದಿಂದ ಒಂದೆರಡು ಒಳ್ಳೆಯ ಮಾತುಗಳನ್ನು ಹೇಳುತ್ತೇನೆ (೪೧-೪೨) : ನೀನು ಅತ್ಯಂತ ವಿನಯ ಸಂಪನ್ನನಾಗಿ ಯಾವಾಗಲೂ ಇಂದ್ರಿಯಗಳನ್ನು ಸ್ವಾಧೀನದಲ್ಲಿರಿಸಿಕೊಂಡಿರು. ಕಾಮಕ್ರೋಧಗಳಿಂದ ಸಂಭವಿಸುವ ವ್ಯಸನಗಳನ್ನು* ಹತ್ತಿರ ಸೇರಿಸಬೇಡ (೪೩). ಕೆಲವು ವೇಳೆ (ಗೂಢಚಾರರ ಮೂಲಕ) ಪರೋಕ್ಷವಾಗಿಯೂ ಕೆಲವು ವೇಳೆ ಪ್ರತ್ಯಕ್ಷವಾಗಿಯೂ ಪರಿಶೀಲಿಸಿ ರಾಜ್ಯವಾಳುತ್ತ, ಸಚಿವರೇ ಮೊದಲಾಗಿ ಸಮಸ್ತ ಅಧಿಕಾರಿಗಳಿಗೂ ಪ್ರಜೆಗಳಿಗೂ ಸಂತೋಷವಾಗುವಂತೆ ನಡೆದುಕೊ (೪೪). ಧಾನ್ಯದ ಉಗ್ರಾಣಗಳನ್ನೂ ಆಯುಧಶಾಲೆಗಳನ್ನೂ ತುಂಬಿಸಿ, ಭಂಡಾರದಲ್ಲಿ ಐಶ್ವರ್ಯವನ್ನು ವಿಪುಲವಾಗಿ

---

* ಸ್ತ್ರೀ ದ್ಯೂತ ಮೃಗಯಾ ಮದ್ಯವಾಕ್ಪಾರುಷ್ಯೋಗ್ರದಂಡತಾಃ ।
ಅರ್ಥಸಂದೂಷಣಂ ಚೇತಿ ರಾಜ್ಞಾಂ ವ್ಯಸನಸಪ್ತಕಮ್ ॥
ಅರ್ಥಸಂದೂಷಣ = ದುಂದುಗಾರಿಕೆ.

ತಸ್ಯ ನಂದಂತಿ ಮಿತ್ರಾಣಿ ಲಬ್ಧ್ವಾಮೃತಮಿವಾಮರಾಃ ।
ತಸ್ಮಾತ್ ಪುತ್ರ ತ್ವಮಾತ್ಮಾನಂ ನಿಯಮ್ಯೈವಂ ಸಮಾಚರ ॥ ೪೬

ತಚ್ಛ್ರುತ್ವಾ ಸುಹೃದಸ್ತಸ್ಯ ರಾಮಸ್ಯ ಪ್ರಿಯಕಾರಿಣಃ ।
ತ್ವರಿತಾಃ ಶೀಘ್ರಮಭ್ಯೇತ್ಯ ಕೌಸಲ್ಯಾಯೈ ನ್ಯವೇದಯನ್ ॥ ೪೭

ಸಾ ಹಿರಣ್ಯಂ ಚ ಗಾಶ್ಚೈವ ರತ್ನಾನಿ ವಿವಿಧಾನಿ ಚ ।
ವ್ಯಾದಿದೇಶ ಪ್ರಿಯಾಖ್ಯೇಭ್ಯಃ ಕೌಸಲ್ಯಾ ಪ್ರಮದೋತ್ತಮಾ ॥ ೪೮

ಅಥಾಭಿವಾದ್ಯ ರಾಜಾನಂ ರಥಮಾರುಹ್ಯ ರಾಘವಃ ।
ಯಯೌ ಸ್ವಂ ದ್ಯುತಿಮದ್ವೇಶ್ಮ ಜನೌಘೈಃ ಪರಿಪೂಜಿತಃ ॥ ೪೯

ತೇ ಚಾಪಿ ಪೌರಾ ನೃಪತೇರ್ವಚಸ್ತತ್
ಶ್ರುತ್ವಾ ತದಾ ಲಾಭಮಿವೇಷ್ಟಮಾಶು ।

---

ಸಂಗ್ರಹಿಸಿಡಬೇಕು. ಪ್ರಜೆಗಳನ್ನು ತೃಪ್ತಿಗೊಳಿಸಿ ಅವರ ಅನುರಾಗವನ್ನು ಸಂಪಾದಿಸಬೇಕು. ಹೀಗೆ ರಾಜ್ಯವನ್ನು ಪಾಲಿಸುವ ರಾಜನನ್ನು ಕಂಡರೆ ಅವನ ಮಿತ್ರರಿಗೆ, ದೇವತೆಗಳಿಗೆ ಅಮೃತವು ದೊರಕಿದಷ್ಟು ಆನಂದವಾಗುವುದು. ಆದ್ದರಿಂದ ವತ್ಸ, ಮನಸ್ಸನ್ನು ನಿಗ್ರಹಿಸಿ ವ್ಯವಹಾರ ಮಾಡು" (೪೫-೪೬). ದಶರಥ ಮಹಾರಾಜನು ಈ ಪ್ರಕಾರ ನುಡಿಯುತ್ತಿದ್ದುದನ್ನು ಶ್ರೀರಾಮನ ಹಿತಚಿಂತಕರಾದ ಗೆಳೆಯರು ಕೇಳಿಸಿಕೊಂಡರು. ಕೂಡಲೆ ಅವರು ಬೇಗಬೇಗನೆ ಹೋಗಿ ಕೌಸಲ್ಯಾದೇವಿಗೆ ಈ ಪಟ್ಟಾಭಿಷೇಕವೃತ್ತಾಂತವನ್ನು ತಿಳಿಸಿದರು (೪೭). ಆಗ ಕೌಸಲ್ಯೆಯು ಸಂತೋಷದ ಸುದ್ದಿಯನ್ನು ತಂದ ಅವರೆಲ್ಲರಿಗೂ ಚಿನ್ನ, ಗೋವುಗಳು ಮುಂತಾದ ನಾನಾ ಬಗೆಯ ವಸ್ತುಗಳನ್ನು ಪಾರಿತೋಷಕವಾಗಿ ಕೊಡಿಸಿದಳು (೪೮). ಇತ್ತ ಶ್ರೀರಾಮನು ತಂದೆಗೆ ಅಭಿವಾದನೆಯನ್ನು ಮಾಡಿ ರಥವನ್ನೇರಿ ದಿವ್ಯವಾದ ತನ್ನ ಭವನಕ್ಕೆ ಹೋದನು. ನೆರೆದಿದ್ದ ಜನರೆಲ್ಲರೂ ಶ್ರೀರಾಮನನ್ನು ಗೌರವದಿಂದ ಅಭಿನಂದಿಸಿದರು (೪೯). ಸಭೆಯಲ್ಲಿದ್ದ ಸಕಲಪ್ರಜೆಗಳೂ ಮಹಾರಾಜನ ಮಾತನ್ನು ಆಲಿಸಿ, ಇಷ್ಟವಸ್ತು ಒಂದು ತಮಗೇ ದೊರಕಿ ಲಾಭವಾಯಿತೆಂಬಂತೆ ಆನಂದಿಸಿದರು. ಅವರು ದಶರಥನಿಗೆ ನಿವೇದಿಸಿ ತಮ್ಮ ಮನೆಗಳಿಗೆ ಹೋಗಿ

ನರೇಂದ್ರಮಾಮಂತ್ರ್ಯ ಗೃಹಾಣಿ ಗತ್ವಾ
ದೇವಾನ್ ಸಮಾನರ್ಚುರತಿಪ್ರಹೃಷ್ಟಾಃ ॥ ೫೦

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತೃತೀಯಃ ಸರ್ಗಃ

---

## ಚತುರ್ಥಃ ಸರ್ಗಃ

### ಮಾತ್ರಾಶೀಃಪರಿಗ್ರಹಃ

ಗತೇಷ್ವಥ ನೃಪೋ ಭೂಯಃ ಪೌರೇಷು ಸಹ ಮಂತ್ರಿಭಿಃ ।
ಮಂತ್ರಯಿತ್ವಾ ತತಶ್ಚಕ್ರೇ ನಿಶ್ಚಯಜ್ಞಃ ಸುನಿಶ್ಚಯಮ್ ॥ ೧

ಶ್ವ ಏವ ಪುಷ್ಯೋ ಭವಿತಾ ಶ್ವೋಽಭಿಷೇಚ್ಯಸ್ತು ಮೇ ಸುತಃ ।
ರಾಮೋ ರಾಜೀವಪತ್ರಾಕ್ಷೋ ಯೌವರಾಜ್ಯ ಇತಿ ಪ್ರಭುಃ ॥ ೨

ಅಥಾಂತರ್ಗೃಹಮಾವಿಶ್ಯ ರಾಜಾ ದಶರಥಸ್ತದಾ ।
ಸೂತಮಾಜ್ಞಾಪಯಾಮಾಸ ರಾಮಂ ಪುನರಿಹಾನಯ ॥ ೩

---

(ಶ್ರೀರಾಮನಿಗೆ ನಿರ್ವಿಘ್ನವಾಗಿ ಪಟ್ಟಾಭಿಷೇಕವಾಗಲೆಂದು) ದೇವರನ್ನು ಪೂಜಿಸುತ್ತಿದ್ದರು (೫೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂರನೆಯ ಸರ್ಗ

## ಸರ್ಗ ೪

ದಶರಥನು ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಲು ಕಾರಣವನ್ನು ತಿಳಿಸುವುದು.
ಶ್ರೀರಾಮನಿಗೆ ತಾಯಿಯ ಆಶೀರ್ವಾದ.

ಹೀಗೆ ಪುರಜನರು ಹೊರಟು ಹೋದ ಮೇಲೆ ವಿವೇಚನಾಚತುರನಾದ ದಶರಥನು ಮಂತ್ರಿಗಳೊಡನೆ ಆಲೋಚಿಸಿ, ಮನಸ್ಸಿನಲ್ಲಿ ದೃಢವಾಗಿ ಒಂದು ನಿಶ್ಚಯಕ್ಕೆ ಬಂದನು (೧). 'ನಾಳೆಯೇ ಪುಷ್ಯ ನಕ್ಷತ್ರ. ತಾವರೆಯ ಎಸಳಿನಂತೆ ಕಣ್ಣುಗಳುಳ್ಳ ಮುದ್ದುಮಗನಾದ ನನ್ನ ರಾಮನಿಗೆ ನಾಳೆ ಪಟ್ಟಾಭಿಷೇಕ ಮಾಡಬೇಕು' ಎಂಬುದೇ ಮಹಾರಾಜನ ಆ ನಿಶ್ಚಯ (೨). ಆಮೇಲೆ ದಶರಥನು ಅಂತಃಪುರಕ್ಕೆ ಹೋಗಿ ಸುಮಂತ್ರನನ್ನು ಕರೆಸಿ ಪುನಃ

ಪ್ರತಿಗೃಹ್ಯ ಸ ತದ್ವಾಕ್ಯಂ ಸೂತಃ ಪುನರುಪಾಯಯೌ ।
ರಾಮಸ್ಯ ಭವನಂ ಶೀಘ್ರಂ ರಾಮಮಾನಯಿತುಂ ಪುನಃ ॥ ೪

ದ್ವಾಸ್ಥೈರಾವೇದಿತಂ ತಸ್ಯ ರಾಮಾಯಾಗಮನಂ ಪುನಃ ।
ಶ್ರುತ್ವೈವ ಚಾಪಿ ರಾಮಸ್ತಂ ಪ್ರಾಪ್ತಂ ಶಂಕಾನ್ವಿತೋಽಭವತ್ ॥ ೫

ಪ್ರವೇಶ್ಯ ಚೈನಂ ತ್ವರಿತಂ ರಾಮೋ ವಚನಮಬ್ರವೀತ್ ।
ಯದಾಗಮನಕೃತ್ಯಂ ತೇ ಭೂಯಸ್ತದ್ಬ್ರೂಹ್ಯಶೇಷತಃ ॥ ೬

ತಮುವಾಚ ತತಃ ಸೂತೋ ರಾಜಾ ತ್ವಾಂ ದ್ರಷ್ಟುಮಿಚ್ಛತಿ ।
ಶ್ರುತ್ವಾ ಪ್ರಮಾಣಮತ್ರ ತ್ವಂ ಗಮನಾಯೇತರಾಯ ವಾ ॥ ೭

ಇತಿ ಸೂತವಚಃ ಶ್ರುತ್ವಾ ರಾಮೋಽಥ ತ್ವರಯಾನ್ವಿತಃ ।
ಪ್ರಯಯೌ ರಾಜಭವನಂ ಪುನರ್ದ್ರಷ್ಟುಂ ನರೇಶ್ವರಮ್ ॥ ೮

ತಂ ಶ್ರುತ್ವಾ ಸಮನುಪ್ರಾಪ್ತಂ ರಾಮಂ ದಶರಥೋ ನೃಪಃ ।
ಪ್ರವೇಶಯಾಮಾಸ ಗೃಹಂ ವಿವಕ್ಷುಃ ಪ್ರಿಯಮುತ್ತಮಮ್ ॥ ೯

ಪ್ರವಿಶನ್ನೇವ ಚ ಶ್ರೀಮಾನ್ ರಾಘವೋ ಭವನಂ ಪಿತುಃ ।
ದದರ್ಶ ಪಿತರಂ ದೂರಾತ್ ಪ್ರಣಿಪತ್ಯ ಕೃತಾಂಜಲಿಃ ॥ ೧೦

---

ಶ್ರೀರಾಮನನ್ನು ಕರೆತರಬೇಕೆಂದು ಆಜ್ಞಾಪಿಸಿದನು. ರಾಜಾಜ್ಞೆಯಂತೆ ಆ ಸಾರಥಿಯು ರಾಮನನ್ನು ಕರೆತರುವುದಕ್ಕಾಗಿ ಅವನ ಭವನಕ್ಕೆ ತ್ವರೆಯಿಂದ ಹೋದನು (೩-೪). ಸುಮಂತ್ರನು ಬಂದ ವಿಷಯವನ್ನು ದ್ವಾರಪಾಲಕರು ಶ್ರೀರಾಮನಿಗೆ ತಿಳಿಸಲು, ಪುನಃ ಅವನೇಕೆ ಬಂದಿರಬಹುದೆಂದು ರಾಮನಿಗೆ ಶಂಕೆಯಾಯಿತು. ಕೂಡಲೇ ಸುಮಂತ್ರನನ್ನು ಒಳಕ್ಕೆ ಬರಹೇಳಿ 'ಪುನಃ ನೀನು ಬರಲು ಕಾರಣವೇನು? ಎಲ್ಲವನ್ನೂ ವಿವರವಾಗಿ ತಿಳಿಸು' ಎಂದನು (೫-೬). ಸುಮಂತ್ರನು "ನಿನ್ನನ್ನು ನೋಡಬೇಕೆಂದು ಮಹಾರಾಜನು ಅಪೇಕ್ಷಿಸುತ್ತಾನೆ. ಹೋಗುವುದೂ ಬಿಡುವುದೂ ನಿನ್ನ ಚಿತ್ತ" ಎಂದು ನುಡಿದನು. ಸುಮಂತ್ರನ ಆ ನುಡಿಯನ್ನು ಕೇಳಿ ಶ್ರೀರಾಮನು ಮಹಾರಾಜನನ್ನು ನೋಡುವುದಕ್ಕಾಗಿ ಅವಸರದಿಂದ ರಾಜಭವನಕ್ಕೆ ಹೋದನು (೭-೮). ರಾಮನು ಬಂದನೆಂಬುದನ್ನು ಕೇಳಿ ದಶರಥನು ಅವನಿಗೆ ಶುಭವಾರ್ತೆಯನ್ನು ಹೇಳಬೇಕೆಂದು ಒಳಕ್ಕೆ ಕರೆಸಿದನು. ವರ್ಚಸ್ವಿಯಾದ ಶ್ರೀರಾಮನು ಒಳಗೆ ಪ್ರವೇಶಿಸುತ್ತಲೇ ದೂರದಿಂದ ತಂದೆಯನ್ನು ಕಾಣುತ್ತ

ಪ್ರಣಮಂತಂ ಸಮುತ್ಥಾಪ್ಯ ತಂ ಪರಿಷ್ವಜ್ಯ ಭೂಮಿಪಃ ।
ಪ್ರದಿಶ್ಯ ಚಾಸ್ಮೈ ರುಚಿರಮಾಸನಂ ಪುನರಬ್ರವೀತ್ ॥ ೧೧

ರಾಮ ವೃದ್ಧೋಽಸ್ಮಿ ದೀರ್ಘಾಯುರ್ಭುಕ್ತಾ ಭೋಗಾ ಮಯೇಪ್ಸಿತಾಃ ।
ಅನ್ನವದ್ಭಿಃ ಕ್ರತುಶತೈಸ್ತಥೇಷ್ಟಂ ಭೂರಿದಕ್ಷಿಣೈಃ ॥ ೧೨

ಜಾತಮಿಷ್ಟಮಪತ್ಯಂ ಮೇ ತ್ವಮದ್ಯಾನುಪಮಂ ಭುವಿ ।
ದತ್ತಮಿಷ್ಟಮಧೀತಂ ಚ ಮಯಾ ಪುರುಷಸತ್ತಮ ॥ ೧೩

ಅನುಭೂತಾನಿ ಚೇಷ್ಟಾನಿ ಮಯಾ ವೀರ ಸುಖಾನ್ಯಪಿ ।
ದೇವರ್ಷಿಪಿತೃವಿಪ್ರಾಣಾಮನೃಣೋಽಸ್ಮಿ ತಥಾತ್ಮನಃ ॥ ೧೪

ನ ಕಿಂಚಿನ್ಮಮ ಕರ್ತವ್ಯಂ ತವಾನ್ಯತ್ರಾಭಿಷೇಚನಾತ್ ।
ಅತೋ ಯತ್ತ್ವಾಮಹಂ ಬ್ರೂಯಾಂ ತನ್ಮೇ ತ್ವಂ ಕರ್ತುಮರ್ಹಸಿ ॥

---

ಕೈಮುಗಿದು ನಮಸ್ಕರಿಸಿದನು (೯-೧೦). ಹೀಗೆ ಪ್ರಣಾಮಮಾಡಿದ ಮಗನನ್ನು ಎತ್ತಿ ಆಲಿಂಗಿಸಿಕೊಂಡು ಒಂದು ಸುಂದರವಾದ ಪೀಠದಲ್ಲಿ ಕುಳಿತುಕೊಳ್ಳುವಂತೆ ಸೂಚಿಸಿ ದಶರಥನು ಹೀಗೆಂದನು (೧೧) : "ರಾಮ, ನಾನು ಮುದುಕನಾದೆ. ದೀರ್ಘಕಾಲ ಬದುಕಿದೆನು. ನನಗೆ ಬೇಕಾದ ಭೋಗಗಳನ್ನು ಅನುಭವಿಸಿದೆನು. ನೂರಾರು ಯಾಗಗಳನ್ನು ಆಚರಿಸಿ ಯಥೇಷ್ಟವಾಗಿ ಅನ್ನ ಸಂತರ್ಪಣೆಗಳನ್ನು ಮಾಡಿ ಭೂರಿದಕ್ಷಿಣೆಗಳನ್ನು ಕೊಟ್ಟಿದ್ದೇನೆ (೧೨). ಲೋಕದಲ್ಲಿ ಇನ್ನೊಬ್ಬನಿಗೆ ಲಭ್ಯವಿಲ್ಲದಂತೆ ನೀನು ನನಗೆ ಪುತ್ರರತ್ನವಾಗಿ ಜನಿಸಿದ್ದೀಯೆ. ನಾನು ದಾನ ಮಾಡಿದ್ದಾಯಿತು. ಯಾಗ ಮಾಡಿದ್ದಾಯಿತು. ವೇದಾಧ್ಯಯನ ಮಾಡಿದ್ದಾಯಿತು. ಮನಸ್ಸಿಗೆ ಬಂದ ಸುಖಗಳನ್ನು ಅನುಭವಿಸಿದ್ದಾಯಿತು. ದೇವ, ಋಷಿ, ಪಿತೃ, ಬ್ರಾಹ್ಮಣ ಮತ್ತು ಆತ್ಮ - ಈ ಐವರ * ಋಣಗಳನ್ನೂ ತೀರಿಸಿದ್ದೇನೆ (೧೩-೧೪). ನಿನ್ನ ಪಟ್ಟಾಭಿಷೇಕ ಒಂದನ್ನು ಬಿಟ್ಟು ನನ್ನ ಕರ್ತವ್ಯಗಳಲ್ಲಿ ಯಾವುದೂ ಉಳಿದಿಲ್ಲ. ಆದ್ದರಿಂದ ನಾನು ಹೇಳುವ ಒಂದು ಮಾತನ್ನು ನೀನು ನಡೆಸಬೇಕು. ವತ್ಸ,

---

* ಅನುಬಂಧವನ್ನು ನೋಡಿ.

ಅದ್ಯ ಪ್ರಕೃತಯಃ ಸರ್ವಾಸ್ತ್ವಾಮಿಚ್ಛಂತಿ ನರಾಧಿಪಮ್ ।
ಅತಸ್ತ್ವಾಂ ಯುವರಾಜಾನಮಭಿಷೇಕ್ಷ್ಯಾಮಿ ಪುತ್ರಕ ॥ ೧೬

ಅಪಿ ಚಾದ್ಯಾಶುಭಾನ್ ರಾಮ ಸ್ವಪ್ನಾನ್ ಪಶ್ಯಾಮಿ ದಾರುಣಾನ್ ।
ಸನಿರ್ಘಾತಾ ದಿವೋಲ್ಕಾ ಚ ಪತತೀಹ ಮಹಾಸ್ವನಾ ॥ ೧೭

ಅವಷ್ಟಬ್ಧಂ ಚ ಮೇ ರಾಮ ನಕ್ಷತ್ರಂ ದಾರುಣೈರ್ಗ್ರಹೈಃ ।
ಆವೇದಯಂತಿ ದೈವಜ್ಞಾಃ ಸೂರ್ಯಾಂಗಾರಕರಾಹುಭಿಃ ॥ ೧೮

ಪ್ರಾಯೇಣ ಹಿ ನಿಮಿತ್ತಾನಾಮೀದೃಶಾನಾಂ ಸಮುದ್ಭವೇ ।
ರಾಜಾ ಮೃತ್ಯುಮವಾಪ್ನೋತಿ ಘೋರಾಂ ವಾ ಪದಮೃಚ್ಛತಿ ॥ ೧೯

ತದ್ಯಾವದೇವ ಮೇ ಚೇತೋ ನ ವಿಮುಹ್ಯತಿ ರಾಘವ ।
ತಾವದೇವಾಭಿಷಿಂಚಸ್ವ ಚಲಾ ಹಿ ಪ್ರಾಣಿನಾಂ ಮತಿಃ ॥ ೨೦

ಅದ್ಯ ಚಂದ್ರೋಽಭ್ಯುಪಗತಃ ಪುಷ್ಯಾತ್ಪೂರ್ವಂ ಪುನರ್ವಸೂ ।
ಶ್ವಃ ಪುಷ್ಯಯೋಗಂ ನಿಯತಂ ವಕ್ಷ್ಯಂತೇ ದೈವಚಿಂತಕಾಃ ॥ ೨೧

---

ಇಂದು ಸಕಲಪ್ರಜೆಗಳೂ ನೀನು ರಾಜನಾಗಬೇಕೆಂದು ಬಯಸುತ್ತಿದ್ದಾರೆ. ಆದ್ದರಿಂದ ನಿನಗೆ ಯುವರಾಜಪಟ್ಟಾಭಿಷೇಕವನ್ನು ಮಾಡುವೆನು (೧೫-೧೬). ಮತ್ತು ರಾಮ, ನನಗೆ ಈಚೆಗೆ ಭಯಂಕರವಾದ ಕೆಟ್ಟ ಸ್ವಪ್ನಗಳು ಬೀಳುತ್ತಿವೆ. ಮೋಡವಿಲ್ಲದೆ ಸಿಡಿಲು ಹೊಡೆಯುತ್ತಿದೆ. ಹಗಲುಹೊತ್ತಿನಲ್ಲಿಯೇ ಭೀಕರಧ್ವನಿಯೊಡನೆ ಉಲ್ಕಾಪಾತವಾಗುತ್ತಿದೆ (೧೭). ನನ್ನ ಜನ್ಮನಕ್ಷತ್ರವನ್ನು ಕ್ರೂರವಾದ ರವಿ, ಕುಜ, ರಾಹುಗಳು ಆಕ್ರಮಿಸಿದ್ದಾರೆಂದು ಈಗ ಜ್ಯೋತಿಷ್ಕರು ಹೇಳುತ್ತಿದ್ದಾರೆ. ಸಾಮಾನ್ಯವಾಗಿ ಇಂಥ ದುರ್ನಿಮಿತ್ತಗಳಾದರೆ ರಾಜನಿಗೆ ಮರಣವೋ ಅಥವಾ ಇನ್ನಾವುದಾದರೂ ದೊಡ್ಡ ವಿಪತ್ತೋ ಸಂಭವಿಸುತ್ತದೆ (೧೮-೧೯). ಆದ್ದರಿಂದ ರಾಘವ, ನೀನು ಬೇಗನೆ ಪಟ್ಟಾಭಿಷಿಕ್ತನಾಗು. ಆಮೇಲೆ ನನ್ನ ಮನಸ್ಸು ಬದಲಾಯಿಸಿಬಿಟ್ಟೀತು. ಮನುಷ್ಯರ ಮನಸ್ಸು ಬಹಳ ಚಂಚಲ (೨೦). ಈ ದಿನ ಚಂದ್ರನು ಪುಷ್ಯನಕ್ಷತ್ರಕ್ಕೆ ಹಿಂದಿನ ಪುನರ್ವಸು ನಕ್ಷತ್ರದಲ್ಲಿದ್ದಾನೆ. ನಾಳೆ ಪುಷ್ಯಕ್ಕೆ ಬರುತ್ತಾನೆಂದೂ ಆ ನಕ್ಷತ್ರವು (ಶುಭಕಾರ್ಯಕ್ಕೆ) ಪ್ರಶಸ್ತವೆಂದೂ ಜ್ಯೋತಿಷ್ಕರು ಹೇಳು

ತತ್ರ ಪುಷ್ಯೇಽಭಿಷಿಂಚಸ್ವ ಮನಸ್ತ್ವರಯತೀವ ಮಾಮ್ ।
ಶ್ವಸ್ತ್ವಹಮಭಿಷೇಕ್ಷ್ಯಾಮಿ ಯೌವರಾಜ್ಯೇ ಪರಂತಪ ॥ ೨೨

ತಸ್ಮಾತ್ತ್ವಯಾದ್ಯ ಪ್ರಭೃತಿ ನಿಶೇಯಂ ನಿಯತಾತ್ಮನಾ ।
ಸಹ ವಧ್ವೋಪವಸ್ತವ್ಯಾ ದರ್ಭಪ್ರಸ್ತರಶಾಯಿನಾ ॥ ೨೩

ಸುಹೃದಶ್ಚಾಪ್ರಮತ್ತಾಸ್ತ್ವಾಂ ರಕ್ಷಂತ್ವದ್ಯ ಸಮಂತತಃ ।
ಭವಂತಿ ಬಹುವಿಘ್ನಾನಿ ಕಾರ್ಯಾಣ್ಯೇವಂ ವಿಧಾನಿ ಹಿ ॥ ೨೪

ವಿಪ್ರೋಷಿತಶ್ಚ ಭರತೋ ಯಾವದೇವ ಪುರಾದಿತಃ ।
ತಾವದೇವಾಭಿಷೇಕಸ್ತೇ ಪ್ರಾಪ್ತಕಾಲೋ ಮತೋ ಮಮ ॥ ೨೫

ಕಾಮಂ ಖಲು ಸತಾಂ ವೃತ್ತೇ ಭ್ರಾತಾ ತೇ ಭರತಃ ಸ್ಥಿತಃ ।
ಜ್ಯೇಷ್ಠಾನುವರ್ತೀ ಧರ್ಮಾತ್ಮಾ ಸಾನುಕ್ರೋಶೋ ಜಿತೇಂದ್ರಿಯಃ ॥

ಕಿಂ ತು ಚಿತ್ತಂ ಮನುಷ್ಯಾಣಾಮನಿತ್ಯಮಿತಿ ಮೇ ಮತಿಃ ।
ಸತಾಂ ಚ ಧರ್ಮನಿತ್ಯಾನಾಂ ಕೃತಶೋಭಿ ಚ ರಾಘವ ॥ ೨೭

---

ತ್ತಿದ್ದಾರೆ (೨೧). ನೀನು ಆ ಪುಷ್ಯನಕ್ಷತ್ರದಲ್ಲಿ ಅಭಿಷಿಕ್ತನಾಗು. ನನ್ನ ಮನಸ್ಸು ನನ್ನನ್ನು ಅವಸರ ಪಡಿಸುತ್ತಿದೆ. ವೀರಾಗ್ರಣಿ, ನಾಳೆಯೇ ನಿನಗೆ ಪಟ್ಟಾಭಿಷೇಕ ಮಾಡುವೆನು! ನೀನು ಈಗಿನಿಂದ ಸಪತ್ನೀಕನಾಗಿ ವ್ರತನಿಷ್ಠನಾಗಿರಬೇಕು. ಈ ರಾತ್ರಿ ಉಪವಾಸವಿದ್ದು ದರ್ಭೆಯ ಹಾಸಿಗೆಯಲ್ಲಿ ಮಲಗಬೇಕು (೨೨-೨೩). ನಿನ್ನ ಆಪ್ತಮಿತ್ರರು ಈ ದಿನ ಸುತ್ತಲೂ ಎಚ್ಚರಿಕೆಯಿಂದಿದ್ದು ನಿನ್ನನ್ನು ರಕ್ಷಿಸುತ್ತಿರಲಿ. ಏಕೆಂದರೆ, ಇಂಥ ಒಳ್ಳೆಯ ಕಾರ್ಯಗಳಿಗೆ ವಿಘ್ನಗಳು ಬಹಳ. ಭರತನು ಈ ನಗರದಿಂದ ಪರಸ್ಥಳಕ್ಕೆ ಹೋಗಿದ್ದಾನೆ. ನಿನಗೆ ಪಟ್ಟಾಭಿಷೇಕಮಾಡಲು ಇದೇ ಸಮಯವೆಂದು ನನ್ನ ಅಭಿಪ್ರಾಯ (೨೪-೨೫). ನಿನ್ನ ತಮ್ಮನಾದ ಭರತನೇನೋ ಸಜ್ಜನರ ನಡತೆಯಲ್ಲಿಯೇ ಇದ್ದಾನೆ. ಹಿರಿಯರಿಗೆ ವಿಧೇಯ, ಧರ್ಮಾತ್ಮ, ದಯಾವಂತ. ಕಾಮಕ್ರೋಧಾದಿ ವಿಕಾರಗಳಿಗೆ ಒಳಗಾಗದ ಜಿತೇಂದ್ರಿಯ. ಆದರೂ ಜನರ ಮನಸ್ಸು ಒಂದೇ ರೀತಿಯಾಗಿ ಇರುವುದಿಲ್ಲವೆಂದು ನಾನು ಭಾವಿಸುತ್ತೇನೆ. ರಾಮ, ಧರ್ಮಶೀಲರಾದ ಸತ್ಪುರುಷರ ಮನಸ್ಸು ನಡೆದುಹೋದ ಕೃತ್ಯಕ್ಕೆ

ಇತ್ಯುಕ್ತಃ ಸೋಽಭ್ಯನುಜ್ಞಾತಃ ಶ್ವೋಭಾವಿನ್ಯಭಿಷೇಚನೇ ।
ವ್ರಜೇತಿ ರಾಮಃ ಪಿತರಮಭಿವಾದ್ಯಾಭ್ಯಯಾದ್ಸ್ವಗೃಹಮ್ ॥ ೨೮

ಪ್ರವಿಶ್ಯ ಚಾತ್ಮನೋ ವೇಶ್ಮ ರಾಜ್ಞೋದ್ದಿಷ್ಟೇಽಭಿಷೇಚನೇ ।
ತತ್ಕ್ಷಣೇನ ಚ ನಿಷ್ಕ್ರಮ್ಯ ಮಾತುರಂತಃಪುರಂ ಯಯೌ ॥ ೨೯

ತತ್ರ ತಾಂ ಪ್ರವಣಾಮೇವ ಮಾತರಂ ಕ್ಷೌಮವಾಸಿನೀಮ್ ।
ವಾಗ್ಯತಾಂ ದೇವತಾಗಾರೇ ದದರ್ಶಾಯಾಚತೀಂ ಶ್ರಿಯಮ್ ॥ ೩೦

ಪ್ರಾಗೇವ ಚಾಗತಾ ತತ್ರ ಸುಮಿತ್ರಾ ಲಕ್ಷ್ಮಣಸ್ತಥಾ ।
ಸೀತಾ ಚಾನಾಯಿತಾ ಶ್ರುತ್ವಾ ಪ್ರಿಯಂ ರಾಮಾಭಿಷೇಚನಮ್ ॥ ೩೧

ತಸ್ಮಿನ್ ಕಾಲೇ ಹಿ ಕೌಸಲ್ಯಾ ತಸ್ಥಾವಾಮೀಲಿತೇಕ್ಷಣಾ ।
ಸುಮಿತ್ರಯಾನ್ವಾಸ್ಯಮಾನಾ ಸೀತಯಾ ಲಕ್ಷ್ಮಣೇನ ಚ ॥ ೩೨

ಶ್ರುತ್ವಾ ತು ಪುಷ್ಯೇ ಪುತ್ರಸ್ಯ ಯೌವರಾಜ್ಯಾಭಿಷೇಚನಮ್ ।
ಪ್ರಾಣಾಯಾಮೇನ ಪುರುಷಂ ಧ್ಯಾಯಮಾನಾ ಜನಾರ್ದನಮ್ ॥ ೩೩

---

ಅನುಮತಿಯನ್ನು ಕೊಟ್ಟುಬಿಡುತ್ತದೆ" (೨೬-೨೭). ಹೀಗೆ ದಶರಥನು ಮಾರನೆಯ ದಿನ ನಡೆಯಬೇಕಾದ ಅಭಿಷೇಕದ ವಿಷಯವನ್ನು ತಿಳಿಸಿದ ಮೇಲೆ, ಶ್ರೀರಾಮನು ಹೋಗಲು ಅನುಮತಿಯನ್ನು ಪಡೆದು ತಂದೆಗೆ ನಮಸ್ಕರಿಸಿ ತನ್ನ ಭವನಕ್ಕೆ ಹೋದನು (೨೮). (ಅಲ್ಲಿ ಸೀತೆಯಿರಲಿಲ್ಲ.) ಆದ್ದರಿಂದ ರಾಜನು ಉದ್ದೇಶಿಸಿದ ಪಟ್ಟಾಭಿಷೇಕದ ವಿಷಯವನ್ನು ತನ್ನ ತಾಯಿಗೆ ತಿಳಿಸಬೇಕೆಂದು ಮರುಕ್ಷಣದಲ್ಲಿಯೇ ಕೌಸಲ್ಯೆಯ ಅಂತಃಪುರಕ್ಕೆ ಹೋದನು (೨೯). ಅಲ್ಲಿ ತಾಯಿಯು ಪಟ್ಟೆಮಡಿಯನ್ನು ಉಟ್ಟುಕೊಂಡು ದೇವರೆದುರಿಗೆ ಮೌನದಿಂದ ತನ್ನ ಮಗನ ಶ್ರೇಯಸ್ಸನ್ನು ಬೇಡುತ್ತ ತಲ್ಲೀನಳಾಗಿರುವುದನ್ನು ಕಂಡನು (೩೦). ಅಷ್ಟರಲ್ಲಿ ಸುಮಿತ್ರೆಯೂ ಲಕ್ಷ್ಮಣನೂ ಅಲ್ಲಿಗೆ ಬಂದುಬಿಟ್ಟಿದ್ದರು. ಪ್ರಿಯವಾದ ರಾಮಾಭಿಷೇಕ ವೃತ್ತಾಂತವನ್ನು ಕೇಳಿ ಕೌಸಲ್ಯೆಯು ಸೀತೆಯನ್ನೂ ಅಲ್ಲಿಗೆ ಕರೆಸಿದ್ದಳು (೩೧). ಶ್ರೀರಾಮನು ಬರುವಾಗ ಕೌಸಲ್ಯೆಯು ನಿಮೀಲಿತನಯನೆಯಾಗಿ ದೇವತಾ ಪ್ರಾರ್ಥನೆಯನ್ನು ಮಾಡುತ್ತಿದ್ದಳು. ಸೀತೆ ಸುಮಿತ್ರೆ ಲಕ್ಷ್ಮಣರು ಬಳಿಯಲ್ಲಿದ್ದರು (೩೨). ಮರುದಿನ ಪುಷ್ಯನಕ್ಷತ್ರದಲ್ಲಿ ಮಗನಿಗೆ ಯುವರಾಜಪಟ್ಟಾಭಿಷೇಕವಾಗು

ತಥಾ ಸನಿಯಮಾಮೇವ ಸೋಽಭಿಗಮ್ಯಾಭಿವಾದ್ಯ ಚ ।
ಉವಾಚ ವಚನಂ ರಾಮೋ ಹರ್ಷಯಂಸ್ತಾಮನಿಂದಿತಾಮ್ ॥ ೩೪

ಅಂಬ ಪಿತ್ರಾ ನಿಯುಕ್ತೋಽಸ್ಮಿ ಪ್ರಜಾಪಾಲನಕರ್ಮಣಿ ।
ಭವಿತಾ ಶ್ವೋಽಭಿಷೇಕೋಽಯಂ ಯಥಾ ಮೇ ಶಾಸನಂ ಪಿತುಃ ॥ ೩೫

ಸೀತಯಾಪ್ಯುಪವಸ್ತವ್ಯಾ ರಜನೀಯಂ ಮಯಾ ಸಹ ।
ಏವಮೃತ್ವಿಗುಪಾಧ್ಯಾಯೈಃ ಸಹ ಮಾಮುಕ್ತವಾನ್ ಪಿತಾ ॥ ೩೬

ಯಾನಿ ಯಾನ್ಯತ್ರ ಯೋಗ್ಯಾನಿ ಶ್ವೋಭಾವಿನ್ಯಭಿಷೇಚನೇ ।
ತಾನಿ ಮೇ ಮಂಗಲಾನ್ಯದ್ಯ ವೈದೇಹ್ಯಾಶ್ಚೈವ ಕಾರಯ ॥ ೩೭

ಏತಚ್ಛ್ರುತ್ವಾ ತು ಕೌಸಲ್ಯಾ ಚಿರಕಾಲಾಭಿಕಾಂಕ್ಷಿತಮ್ ।
ಹರ್ಷಬಾಷ್ಪಾಕುಲಂ ವಾಕ್ಯಮಿದಂ ರಾಮಮಭಾಷತ ॥ ೩೮

ವತ್ಸ ರಾಮ ಚಿರಂ ಜೀವ ಹತಾಸ್ತೇ ಪರಿಪಂಥಿನಃ ।
ಜ್ಞಾತೀನ್ ಮೇ ತ್ವಂ ಶ್ರಿಯಾ ಯುಕ್ತಃ ಸುಮಿತ್ರಾಯಾಶ್ಚ ನಂದಯ ॥

---

ವುದೆಂದು ತಿಳಿದು, ಕೌಸಲ್ಯೆಯು ಪ್ರಾಣಾಯಾಮಪೂರ್ವಕವಾಗಿ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತಿದ್ದಳು (೩೩) ಹಾಗೆ ಧ್ಯಾನಿಸುತ್ತಿರುವಾಗ ಶ್ರೀರಾಮನು ಹತ್ತಿರ ಹೋಗಿ ಅಭಿವಾದನೆ ಮಾಡಿ ನಿಷ್ಕಳಂಕ ಹೃದಯಳಾದ ಅವಳಿಗೆ ಸಂತೋಷಕರವಾದ ಈ ಮಾತನ್ನು ಹೇಳಿದನು : "ಅಮ್ಮ, ಪ್ರಜಾಪಾಲನೆಯ ಕಾರ್ಯವನ್ನು ನೋಡಿಕೊಳ್ಳಬೇಕೆಂದು ತಂದೆಯು ನನ್ನನ್ನು ನಿಯಮಿಸಿರುವನು. ತಂದೆಯ ಆಜ್ಞೆಯಂತೆ ನಾಳೆ ನನಗೆ ಪಟ್ಟಾಭಿಷೇಕವು ನಡೆಯುವುದು (೩೪-೩೫). ಈ ದಿನ ರಾತ್ರಿಯೆಲ್ಲಾ ನಾನು ಸೀತೆಯೊಡನೆ ಉಪವಾಸವಿರಬೇಕೆಂದು ತಂದೆಯು ಹೇಳಿದ್ದಾನೆ. ಋತ್ವಿಜರೂ ಉಪಾಧ್ಯಾಯರೂ ಹಾಗೆಯೇ ಹೇಳಿದ್ದಾರೆ. ನಾಳೆ ನಡೆಯುವ ಅಭಿಷೇಕಕ್ಕೆ ಯೋಗ್ಯವಾದ ಮಂಗಳಕಾರ್ಯಗಳನ್ನು ನನಗೂ ಸೀತೆಗೂ ಈ ದಿನ ಮಾಡಿಸು" (೩೬-೩೭). ಕೌಸಲ್ಯೆಗೆ ಬಹುಕಾಲದಿಂದಿದ್ದ ತನ್ನ ಬಯಕೆ ಕೈಗೂಡುವುದೆಂಬುದನ್ನು ಕೇಳಿ ಹರ್ಷದಿಂದ ಕಣ್ಣಲ್ಲಿ ನೀರು ತುಂಬಿತು. ಅವಳು ತೊದಲುತ್ತ "ಮಗು, ರಾಮ, ಚಿರಂಜೀವಿಯಾಗು. ನಿನಗಿದ್ದ ಕಂಟಕಗಳು ಕಳೆದವು. ನನ್ನ ಬಂಧುಗಳೂ ಈ ಸುಮಿತ್ರೆಯ ಬಂಧುಗಳೂ

ಕಲ್ಯಾಣೇ ಬತ ನಕ್ಷತ್ರೇ ಮಯಿ ಜಾತೋಽಸಿ ಪುತ್ರಕ ।
ಯೇನ ತ್ವಯಾ ದಶರಥೋ ಗುಣೈರಾರಾಧಿತಃ ಪಿತಾ ॥ ೪೦
ಅಮೋಘಂ ಬತ ಮೇ ಕ್ಷಾಂತಂ ಪುರುಷೇ ಪುಷ್ಕರೇಕ್ಷಣೇ ।
ಯೇಯಮಿಕ್ಷ್ವಾಕು ರಾಜ್ಯಶ್ರೀಃ ಪುತ್ರ ತ್ವಾಂ ಸಂಶ್ರಯಿಷ್ಯತಿ ॥ ೪೧
ಇತ್ಯೇವಮುಕ್ತೋ ಮಾತ್ರೇದಂ ರಾಮೋ ಭ್ರಾತರಮಬ್ರವೀತ್ ।
ಪ್ರಾಂಜಲಿಂ ಪ್ರಹ್ವಮಾಸೀನಮಭಿವೀಕ್ಷ್ಯ ಸ್ಮಯನ್ನಿವ ॥ ೪೨
ಲಕ್ಷ್ಮಣೇಮಾಂ ಮಯಾ ಸಾರ್ಧಂ ಪ್ರಶಾಧಿ ತ್ವಂ ವಸುಂಧರಾಮ್ ।
ದ್ವಿತೀಯಂ ಮೇಽಂತರಾತ್ಮಾನಂ ತ್ವಾಮಿಯಂ ಶ್ರೀರುಪಸ್ಥಿತಾ ॥ ೪೩
ಸೌಮಿತ್ರೇ ಭುಂಕ್ಷ್ವ ಭೋಗಾಂಸ್ತ್ವಮಿಷ್ಟಾನ್ ರಾಜ್ಯಫಲಾನಿ ಚ ।
ಜೀವಿತಂ ಚ ಹಿ ರಾಜ್ಯಂ ಚ ತ್ವದರ್ಥಮಭಿಕಾಮಯೇ ॥ ೪೪
ಇತ್ಯುಕ್ತ್ವಾ ಲಕ್ಷ್ಮಣಂ ರಾಮೋ ಮಾತರಾವಭಿವಾದ್ಯ ಚ ।
ಅಭ್ಯನುಜ್ಞಾಪ್ಯ ಸೀತಾಂ ಚ ಜಗಾಮ ಸ್ವಂ ನಿವೇಶನಮ್ ॥ ೪೫

**ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ಥಃ ಸರ್ಗಃ**

---

ಸಂತೋಷಪಡುವಂತಾಗಲಿ (೩೮-೩೯). ವತ್ಸ, ಒಳ್ಳೆಯ ನಕ್ಷತ್ರದಲ್ಲಿ ನನಗೆ ಮಗನಾಗಿ ಜನಿಸಿದೆ. ನಿನ್ನ ತಂದೆಯಾದ ದಶರಥ ಮಹಾರಾಜನನ್ನು ಸದ್ಗುಣಗಳಿಂದ ತೃಪ್ತಿ ಪಡಿಸಿದ್ದೀಯೆ. ಪುಂಡರೀಕಾಕ್ಷನಾದ ಭಗವಂತನಲ್ಲಿ ನಾನು ಮಾಡಿದ ಸೇವೆ ಇಂದು ಫಲಿಸಿತು. ಮಗು, ಇಕ್ಷ್ವಾಕುವಂಶದ ಈ ರಾಜ್ಯಲಕ್ಷ್ಮಿಯು ನಿನ್ನನ್ನು ಬಂದು ಸೇರು ವಳು" ಎಂದು ಹೇಳಿದಳು (೪೦-೪೧). ತಾಯಿಯು ಹೀಗೆ ಹೇಳುತ್ತಿರಲಾಗಿ, ರಾಮನು ಬಳಿಯಲ್ಲಿ ಕೈಮುಗಿದುಕೊಂಡು ವಿನಯದಿಂದ ನಿಂತಿದ್ದ ತಮ್ಮನನ್ನು ನೋಡಿ ನಸು ನಗುತ್ತ ಹೇಳಿದನು (೪೨) : "ಲಕ್ಷ್ಮಣ, ನನ್ನ ಜೊತೆಯಲ್ಲಿ ಸೇರಿ ನೀನೂ ಈ ರಾಜ್ಯ ವನ್ನು ಆಳಬಹುದು. ನೀನು ನನಗೆ ಎರಡನೆಯ ಪ್ರಾಣವಾಗಿದ್ದೀಯೆ. ಈ ರಾಜ್ಯ ಲಕ್ಷ್ಮಿಯು ನಿನಗೂ ಸೇರಿದಂತೆಯೇ ಸರಿ. ಲಕ್ಷ್ಮಣ, ಬೇಕಾದ ಭೋಗಗಳನ್ನೂ ರಾಜ್ಯಫಲವಾದ ಧರ್ಮಾರ್ಥಗಳನ್ನೂ ಅನುಭವಿಸು. ನನ ಜೀವ, ಈ ರಾಜ್ಯ - ಎಲ್ಲವೂ ನಿನಗೋಸ್ಕರ" (೪೩-೪೪). ಹೀಗೆ ನುಡಿದು ಶ್ರೀರಾಮನು ತಾಯಂದಿರಿಗೆ ನಮಸ್ಕರಿಸಿ ಅವರ ಅನುಮತಿಯನ್ನು ಪಡೆದು ಸೀತೆಯೊಡನೆ ತನ್ನ ಭವನಕ್ಕೆ ಹೋದನು (೪೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಾಲ್ಕನೆಯ ಸರ್ಗ

## ಪಂಚಮಃ ಸರ್ಗಃ

### ವ್ರತಚರ್ಯಾವಿಧಾನಮ್

ಸಂದಿಶ್ಯ ರಾಮಂ ನೃಪತಿಃ ಶ್ವೋಭಾವಿನ್ಯಭಿಷೇಚನೇ ।
ಪುರೋಹಿತಂ ಸಮಾಹೂಯ ವಸಿಷ್ಠಮಿದಮಬ್ರವೀತ್ ॥ ೧

ಗಚ್ಛೋಪವಾಸಂ ಕಾಕುತ್ಸ್ಥಂ ಕಾರಯಾದ್ಯ ತಪೋಧನ ।
ಶ್ರೇಯಸೇ ರಾಜ್ಯಲಾಭಾಯ ವಧ್ವಾ ಸಹ ಯತವ್ರತಮ್ ॥ ೨

ತಥೇತಿ ಚ ಸ ರಾಜಾನಮುಕ್ತ್ವಾ ವೇದವಿದಾಂ ವರಃ ।
ಸ್ವಯಂ ವಸಿಷ್ಠೋ ಭಗವಾನ್ ಯಯೌ ರಾಮನಿವೇಶನಮ್ ॥ ೩

ಉಪವಾಸಯಿತುಂ ರಾಮಂ ಮಂತ್ರವನ್ಮಂತ್ರಕೋವಿದಃ ।
ಬ್ರಾಹ್ಮಂ ರಥವರಂ ಯುಕ್ತಮಾಸ್ಥಾಯ ಸುಧೃತವ್ರತಃ ॥ ೪

ಸ ರಾಮಭವನಂ ಪ್ರಾಪ್ಯ ಪಾಂಡರಾಭ್ರಘನಪ್ರಭಮ್ ।
ತಿಸ್ರಃ ಕಕ್ಷ್ಯಾ ರಥೇನೈವ ವಿವೇಶ ಮುನಿಸತ್ತಮಃ ॥ ೫

## ಸರ್ಗ ೫

### ಶ್ರೀರಾಮನು ವ್ರತನಿಷ್ಠನಾಗಿರುವಂತೆ ವಸಿಷ್ಠರು ನಿಯಮಿಸುವುದು.

ದಶರಥರಾಜನು ಮಾರನೆಯ ದಿನ ನಡೆಯಬೇಕಾದ ಪಟ್ಟಾಭಿಷೇಕ ಕ್ಕೋಸ್ಕರ ವ್ರತನಿಷ್ಠನಾಗಿರಬೇಕೆಂದು ರಾಮನಿಗೆ ಸೂಚಿಸಿದ ಮೇಲೆ, ಪುರೋಹಿತ ರಾದ ವಸಿಷ್ಠರನ್ನು ಕರೆಸಿ ಹೀಗೆಂದನು (೧). : "ತಪೋಧನರೆ, ರಾಮನು ತನ್ನ ಪತ್ನಿ ಯೊಡನೆ ಈ ದಿನ ನಿಯಮಪೂರ್ವಕ ಉಪವಾಸವಿರುವಂತೆ ನೀವು ಹೋಗಿ ಏರ್ಪಡಿಸಿರಿ. ಇದು ಅವನ ಶ್ರೇಯಸ್ಸಿಗೂ ರಾಜ್ಯಲಾಭಕ್ಕೂ ಆವಶ್ಯಕ" (೨). ಆಗ ವೇದಾಧ್ಯಯನಸಂಪನ್ನರಾದ ಭಗವಾನ್ ವಸಿಷ್ಠರು ಹಾಗೆಯೇ ಆಗಲೆಂದು ಹೇಳಿ, ತಾವೇ ಶ್ರೀರಾಮನ ನಿವಾಸಕ್ಕೆ ಹೋದರು (೩). ಮಂತ್ರಜ್ಞರಾದ ಆ ಮಹರ್ಷಿಗಳು ವಿಧಿವತ್ತಾಗಿ ರಾಮನಿಂದ ವ್ರತೋಪವಾಸಗಳನ್ನು ಮಾಡಿಸಬೇಕೆಂದು ಬ್ರಾಹ್ಮಣ ಯೋಗ್ಯವಾದ ರಥವನ್ನೇರಿ ಹೊರಟರು. ಸಾಂದ್ರವಾದ ಬಿಳಿಯ ಮೇಘವೋ ಎಂಬಂತೆ ವಿರಾಜಿಸುತ್ತಿದ್ದ ಶ್ರೀರಾಮನ ಪ್ರಾಸಾದಕ್ಕೆ ಹೋಗಿ, ಅದರ ಮೂರು ಕಕ್ಷ್ಯ

ತಮಾಗತಮೃಷಿಂ ರಾಮಸ್ತ್ವರನ್ನಿವ ಸಸಂಭ್ರಮಮ್ ।
ಮಾನಯಿಷ್ಯನ್ ಸ ಮಾನಾರ್ಹಂ ನಿಶ್ಚಕ್ರಾಮ ನಿವೇಶನಾತ್ ॥ ೬

ಅಭ್ಯೇತ್ಯ ತ್ವರಮಾಣಶ್ಚ ರಥಾಭ್ಯಾಶಂ ಮನೀಷಿಣಃ ।
ತತೋಽವತಾರಯಾಮಾಸ ಪರಿಗೃಹ್ಯ ರಥಾತ್ ಸ್ವಯಮ್ ॥ ೭

ಸ ಚೈನಂ ಪ್ರಶ್ರಿತಂ ದೃಷ್ಟ್ವಾ ಸಂಭಾಷ್ಯಾಭಿಪ್ರಸಾದ್ಯ ಚ ।
ಪ್ರಿಯಾರ್ಹಂ ಹರ್ಷಯನ್ ರಾಮಮಿತ್ಯುವಾಚ ಪುರೋಹಿತಃ ॥ ೮

ಪ್ರಸನ್ನಸ್ತೇ ಪಿತಾ ರಾಮ ಯೌವರಾಜ್ಯಮವಾಪ್ಸ್ಯಸಿ ।
ಉಪವಾಸಂ ಭವಾನದ್ಯ ಕರೋತು ಸಹ ಸೀತಯಾ ॥ ೯

ಪ್ರಾತಸ್ತ್ವಾಮಭಿಷೇಕ್ತಾ ಹಿ ಯೌವರಾಜ್ಯೇ ನರಾಧಿಪಃ ।
ಪಿತಾ ದಶರಥಃ ಪ್ರೀತ್ಯಾ ಯಯಾತಿಂ ನಹುಷೋ ಯಥಾ ॥ ೧೦

ಇತ್ಯುಕ್ತ್ವಾ ಸ ತದಾ ರಾಮಮುಪವಾಸಂ ಯತವ್ರತಮ್ ।
ಮಂತ್ರವತ್ಕಾರಯಾಮಾಸ ವೈದೇಹ್ಯಾ ಸಹಿತಂ ಮುನಿಃ ॥ ೧೧

---

ಗಳನ್ನು ಅವರು ರಥದಲ್ಲಿಯೇ ದಾಟಿಹೋದರು (೪-೫). ವಸಿಷ್ಠ ಮುನಿಗಳು ಬಂದರೆಂದು ಶ್ರೀರಾಮನಿಗೆ ತಿಳಿಯಿತು. ಆ ಪೂಜ್ಯರನ್ನು ಗೌರವಿಸುವುದಕ್ಕಾಗಿ ಅವನು ಆದರದಿಂದ ಬೇಗಬೇಗನೆ ತನ್ನ ನಿವಾಸದಿಂದ ಹೊರಗೆ ಬಂದನು (೬). ತ್ವರೆಯಿಂದ ರಥದ ಬಳಿಗೆ ಹೋಗಿ ತಾನೇ ವಸಿಷ್ಠರ ಕೈಹಿಡಿದು ರಥದಿಂದ ಕೆಳಕ್ಕೆ ಇಳಿಸಿದನು. ವಸಿಷ್ಠರು ವಿನೀತನಾದ ರಾಮನಿಗೆ ಕುಶಲಪ್ರಶ್ನೆಗಳನ್ನು ಮಾಡಿ ಅಭಿನಂದಿಸಿ ಸಂತೋಷಕರವಾದ ಮಾತುಗಳನ್ನಾಡಿದರು (೭-೮) : "ರಾಮ, ನಿನ್ನ ತಂದೆ ಪ್ರಸನ್ನನಾಗಿದ್ದಾನೆ. ನೀನು ಯುವರಾಜಪದವಿಯನ್ನು ಪಡೆಯುವೆ. ನೀನೂ ಸೀತೆಯೂ ಈ ದಿನ ಉಪವಾಸವಿರಬೇಕು. ನಿನ್ನ ತಂದೆಯಾದ ದಶರಥಮಹಾರಾಜನು ನಾಳೆ ಪ್ರಾತಃಕಾಲ ನಿನಗೆ ಪಟ್ಟಾಭಿಷೇಕ ಮಾಡುವನು. ನಹುಷನು ಯಯಾತಿಗೆ ಪಟ್ಟಗಟ್ಟಿದಂತೆ ಸಂತೋಷದಿಂದ ಈ ಕಾರ್ಯವನ್ನು ನೆರವೇರಿಸುವನು" (೯-೧೦). ಹೀಗೆ ನುಡಿದು ವಸಿಷ್ಠಮುನಿಗಳು ಶ್ರೀರಾಮನೂ ಸೀತಾದೇವಿಯೂ ಉಪವಾಸವ್ರತವನ್ನು ಸ್ವೀಕರಿಸುವಂತೆ ಮಂತ್ರಪೂರ್ವಕವಾಗಿ

ತತೋ ಯಥಾವದ್ರಾಮೇಣ ಸ ರಾಜ್ಞೋ ಗುರುರರ್ಚಿತಃ ।
ಅಭ್ಯನುಜ್ಞಾಪ್ಯ ಕಾಕುತ್ಸ್ಥಂ ಯಯೌ ರಾಮನಿವೇಶನಾತ್ ॥ ೧೨

ಸುಹೃದ್ಭಿಸ್ತತ್ರ ರಾಮೋಽಪಿ ಸಹಾಸೀನಃ ಪ್ರಿಯಂವದೈಃ ।
ಸಭಾಜಿತೋ ವಿವೇಶಾಥ ತಾನನುಜ್ಞಾಪ್ಯ ಸರ್ವಶಃ ॥ ೧೩

ಪ್ರಹೃಷ್ಟನರನಾರೀಕಂ ರಾಮವೇಶ್ಮ ತದಾ ಬಭೌ ।
ಯಥಾ ಮತ್ತದ್ವಿಜಗಣಂ ಪ್ರಫುಲ್ಲನಲಿನಂ ಸರಃ ॥ ೧೪

ಸ ರಾಜಭವನಪ್ರಖ್ಯಾತ್ತಸ್ಮಾದ್ರಾಮನಿವೇಶನಾತ್ ।
ನಿಃಸೃತ್ಯ ದದೃಶೇ ಮಾರ್ಗಂ ವಸಿಷ್ಠೋ ಜನಸಂವೃತಮ್ ॥ ೧೫

ವೃಂದವೃಂದೈರಯೋಧ್ಯಾಯಾಂ ರಾಜಮಾರ್ಗಾಃ ಸಮಂತತಃ ।
ಬಭೂವುರಭಿಸಂಬಾಧಾಃ ಕುತೂಹಲಜನೈರ್ವೃತಾಃ ॥ ೧೬

ಜನವೃಂದೋರ್ಮಿ ಸಂಘರ್ಷ ಹರ್ಷಸ್ವನವೃತಸ್ತದಾ ।
ಬಭೂವ ರಾಜಮಾರ್ಗಸ್ಯ ಸಾಗರಸ್ಯೇವ ನಿಸ್ವನಃ ॥ ೧೭

---

ಸಂಕಲ್ಪಮಾಡಿಸಿದರು (೧೧). ಅನಂತರ ಆ ರಾಜಗುರುಗಳು ಶ್ರೀರಾಮನಿಂದ ಸತ್ಕೃತರಾಗಿ ಬೀಳ್ಕೊಂಡು ಆ ನಿವಾಸದಿಂದ ನಿರ್ಗಮಿಸಿದರು. ಇತ್ತ ಶ್ರೀರಾಮನೂ ಪ್ರೀತಿಯಿಂದ ಮಾತನಾಡುತ್ತಿದ್ದ ತನ್ನ ಗೆಳೆಯರೊಡನೆ ಸ್ವಲ್ಪ ಕಾಲವಿದ್ದು ಅವರ ಅಭಿನಂದನೆಗಳನ್ನು ಸ್ವೀಕರಿಸಿ ತನ್ನ ಅಂತಃಪುರಕ್ಕೆ ಹೋದನು (೧೨-೧೩). ಆಗ ಶ್ರೀರಾಮನ ನಿವಾಸದಲ್ಲಿ ಹರ್ಷಯುಕ್ತರಾದ ಸ್ತ್ರೀಪುರುಷರ ಸಡಗರ ತುಂಬಿತು. ಅವನ ಮನೆಯು, ಸಂತೋಷದಿಂದ ನಲಿಯುವ ಹಕ್ಕಿಗಳಿಂದ ಒಪ್ಪುತ್ತ ಅರಳಿದ ತಾವರೆಗಳಿರುವ ಕೊಳದಂತೆ ಚೆಲುವಾಯಿತು (೧೪). ವಸಿಷ್ಠರು ರಾಜಭವನದಂತಿದ್ದ ಶ್ರೀರಾಮನ ನಿವಾಸದಿಂದ ಹೊರಟು ರಾಜಮಾರ್ಗಗಳೆಲ್ಲವೂ ಜನರಿಂದ ಕಿಕ್ಕಿರಿದು ತುಂಬಿರುವುದನ್ನು ಕಂಡರು. ಅಯೋಧ್ಯಾನಗರದ ರಾಜಬೀದಿಗಳಲ್ಲಿ ಎಲ್ಲೆಡೆಯಿಂದಲೂ ಜನರು ಕುತೂಹಲದಿಂದ ಗುಂಪುಗುಂಪಾಗಿ ಬಂದು ನೆರೆದಿದ್ದರು (೧೫-೧೬). ರಾಜಮಾರ್ಗದಲ್ಲಿ ಜನಸಂದಣಿಯು ಹರ್ಷದಿಂದ ಜಯಘೋಷ ಮಾಡುತ್ತ ಸಮುದ್ರದಲ್ಲಿ ಅಲೆಗಳು ಬಂದಂತೆ ಬರುತ್ತಿರಲು, ಆ ಕೋಲಾ

ಸಿಕ್ತಸಂಮೃಷ್ಟರಥ್ಯಾ ಚ ತದಹರ್ವನಮಾಲಿನೀ ।
ಆಸೀದಯೋಧ್ಯಾ ನಗರೀ ಸಮುಚ್ಛ್ರಿತಗೃಹಧ್ವಜಾ ॥ ೧೮

ತದಾ ಹ್ಯಯೋಧ್ಯಾನಿಲಯಃ ಸಸ್ತ್ರೀಬಾಲಾಕುಲೋ ಜನಃ ।
ರಾಮಾಭಿಷೇಕಮಾಕಾಂಕ್ಷನ್ನಾಕಾಂಕ್ಷನ್ನುದಯಂ ರವೇಃ ॥ ೧೯

ಪ್ರಜಾಲಂಕಾರಭೂತಂ ಚ ಜನಸ್ಯಾನಂದವರ್ಧನಮ್
ಉತ್ಸುಕೋಽಭೂಜ್ಜನೋ ದ್ರಷ್ಟುಂ ತಮಯೋಧ್ಯಾಮಹೋತ್ಸವಮ್

ಏವಂ ತು ಜನಸಂಬಾಧಂ ರಾಜಮಾರ್ಗಂ ಪುರೋಹಿತಃ ।
ವ್ಯೂಹನ್ನಿವ ಜನೌಘಂ ತಂ ಶನೈ ರಾಜಕುಲಂ ಯಯೌ ॥ ೨೧

ಸಿತಾಭ್ರಶಿಖರಪ್ರಖ್ಯಂ ಪ್ರಾಸಾದಮಧಿರುಹ್ಯ ಸಃ ।
ಸಮೀಯಾಯ ನರೇಂದ್ರೇಣ ಶಕ್ರೇಣೇವ ಬೃಹಸ್ಪತಿಃ ॥ ೨೨

ತಮಾಗತಮಭಿಪ್ರೇಕ್ಷ್ಯ ಹಿತ್ವಾ ರಾಜಾಸನಂ ನೃಪಃ ।
ಪಪ್ರಚ್ಛ ಸ ಚ ತಸ್ಮೈ ತತ್ ಕೃತಮಿತ್ಯಭ್ಯವೇದಯತ್ ॥ ೨೩

---

ಹಲವು ಸಮುದ್ರಘೋಷದಂತೆ ಕೇಳಿಸುತ್ತಿತ್ತು (೧೭). ನಗರದ ಬೀದಿಗಳನ್ನು ಚೊಕ್ಕಟಮಾಡಿ ನೀರನ್ನು ಚಿಮುಕಿಸಿದ್ದರು. ತಳಿರುತೋರಣಗಳನ್ನು ಕಟ್ಟಿದ್ದರು. ಆಗ ಮನೆಮನೆಗಳ ಮೇಲೂ ಧ್ವಜಪಟಗಳು ಹಾರಾಡುತ್ತಿದ್ದವು (೧೮). ಅಯೋಧ್ಯೆಯಲ್ಲಿದ್ದ ಹೆಂಗಸರು ಹುಡುಗರು ಮೊದಲಾಗಿ ಸಮಸ್ತ ಜನರೂ ಯಾವಾಗ ರಾಮಾಭಿಷೇಕವಾಗುವುದೋ, ಯಾವಾಗ ಮಾರನೆಯ ದಿನ ಸೂರ್ಯನು ಹುಟ್ಟುವನೋ ಎಂದು ಕಾದಿದ್ದರು (೧೯). ಶ್ರೀರಾಮನ ಪಟ್ಟಾಭಿಷೇಕವು ಪ್ರಜೆಗಳ ಆನಂದವನ್ನು ಹೆಚ್ಚಿಸಿ ತೃಪ್ತಿಪಡಿಸುವ ಒಂದು ಅಲಂಕಾರವೇ ಆಗಿತ್ತು. ಜನರಿಗೆ ಅದೊಂದು ಮಹೋತ್ಸವವಾದ್ದರಿಂದ ಅದನ್ನು ನೋಡಲು ಎಲ್ಲರೂ ಉತ್ಸುಕರಾಗಿದ್ದರು (೨೦). ಹೀಗೆ ನಿಬಿಡವಾಗಿದ್ದ ರಾಜಬೀದಿಯಲ್ಲಿ ಜನಸ್ತೋಮವನ್ನು ಒತ್ತಟ್ಟಿಗೆ ಮಾಡುವಂತೆ ದಾರಿಯನ್ನು ಮೆಲ್ಲಗೆ ಬಿಡಿಸಿಕೊಳ್ಳುತ್ತ ವಸಿಷ್ಠರು ಅರಮನೆಗೆ ಬಂದರು (೨೧). ಅಲ್ಲಿ ಬಿಳಿಯ ಮೋಡದಿಂದ ಕೂಡಿದ ಪರ್ವತ ಶಿಖರದಂತೆ ಒಪ್ಪುವ ಉಪ್ಪರಿಗೆಯನ್ನು ಹತ್ತಿ ವಸಿಷ್ಠಮುನಿಗಳು, ದೇವೇಂದ್ರನ ಬಳಿಗೆ ಬೃಹಸ್ಪತಿಯು ಬರುವಂತೆ, ನರೇಂದ್ರನಾದ ದಶರಥನ ಬಳಿಗೆ ಬಂದರು (೨೨). ದಶರಥನು ಅವರನ್ನು

ತೇನ ಚೈವ ತದಾ ತುಲ್ಯಂ ಸಹಾಸೀನಾಃ ಸಭಾಸದಃ ।
ಆಸನೇಭ್ಯಃ ಸಮುತ್ತಸ್ಥುಃ ಪೂಜಯಂತಃ ಪುರೋಹಿತಮ್ ॥ ೨೪

ಗುರುಣಾ ತ್ವಭ್ಯನುಜ್ಞಾತೋ ಮನುಜೌಘಂ ವಿಸೃಜ್ಯ ತಮ್ ।
ವಿವೇಶಾಂತಃಪುರಂ ರಾಜಾ ಸಿಂಹೋ ಗಿರಿಗುಹಾಮಿವ ॥ ೨೫

ತದಗ್ರ್ಯವೇಷಪ್ರಮದಾಜನಾಕುಲಂ
ಮಹೇಂದ್ರವೇಶ್ಮಪ್ರತಿಮಂ ನಿವೇಶನಮ್ ।
ವಿದೀಪಯಂಶ್ಚಾರು ವಿವೇಶ ಪಾರ್ಥಿವಃ
ಶಶೀವ ತಾರಾಗಣಸಂಕುಲಂ ನಭಃ ॥ ೨೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಮಃ ಸರ್ಗಃ

---

ಕಂಡೊಡನೆ ರಾಜಪೀಠದಿಂದ ಇಳಿದು ಬಂದು 'ಎಲ್ಲವೂ ಸಾಂಗವಾಗಿ ನೆರವೇರಿತೆ?' ಎಂದು ಕೇಳಿದನು. ವಸಿಷ್ಠರು 'ನೆರವೇರಿತು' ಎಂದು ತಿಳಿಸಿದರು (೨೩). ಅಷ್ಟರಲ್ಲಿ ಆಸ್ಥಾನದಲ್ಲಿದ್ದ ಸಭಾಸದರೆಲ್ಲರೂ ದಶರಥನಂತೆ ತಾವೂ ಎದ್ದುನಿಂತು ಆ ಪುರೋಹಿತರಿಗೆ ಗೌರವವನ್ನು ಸೂಚಿಸಿದರು (೨೪). ಆಮೇಲೆ ಮಹಾರಾಜನು ಗುರುಗಳ ಅನುಮತಿಯನ್ನು ಪಡೆದು ಸಭೆಯನ್ನು ವಿಸರ್ಜಿಸಿ, ಸಿಂಹವು ಪರ್ವತಗುಹೆಯನ್ನು ಪ್ರವೇಶಿಸುವಂತೆ ತನ್ನ ಅಂತಃಪುರವನ್ನು ಪ್ರವೇಶಿಸಿದನು (೨೫). ಅಲ್ಲಿದ್ದ ಹೆಂಗಸರೆಲ್ಲರೂ ತಮ್ಮನ್ನು ವಿಶೇಷವಾಗಿ ಸಿಂಗರಿಸಿಕೊಂಡಿರಲು, ಇಂದ್ರಭವನದಂತಿದ್ದ ಅಂತಃಪುರವು ತಾರಾಪುಂಜರಂಜಿತವಾದ ಗಗನದಂತೆ ಶೋಭಿಸುತ್ತಿತ್ತು. ಅಲ್ಲಿಗೆ ದಶರಥ ಮಹಾರಾಜನು ಆಗಮಿಸಲು, ಗಗನಕ್ಕೆ ಚಂದ್ರನು ಉದಯಿಸಿ ಬಂದಂತಾಗಿ ಅಂತಃಪುರಕ್ಕೆ ಹೊಸ ಕಾಂತಿ ಬಂದಿತು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐದನೆಯ ಸರ್ಗ

## ಷಷ್ಠಃ ಸರ್ಗಃ

### ಪೌರೋತ್ಸೇಕಃ

ಗತೇ ಪುರೋಹಿತೇ ರಾಮಃ ಸ್ನಾತೋ ನಿಯತಮಾನಸಃ ।
ಸಹ ಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್ ॥ ೧

ಪ್ರಗೃಹ್ಯ ಶಿರಸಾ ಪಾತ್ರೀಂ ಹವಿಷೋ ವಿಧಿವತ್ತತಃ ।
ಮಹತೇ ದೈವತಾಯಾಜ್ಯಂ ಜುಹಾವ ಜ್ವಲಿತೇಽನಲೇ ॥ ೨

ಶೇಷಂ ಚ ಹವಿಷಸ್ತಸ್ಯ ಪ್ರಾಶ್ಯಾಶಾಸ್ಯಾತ್ಮನಃ ಪ್ರಿಯಮ್ ।
ಧ್ಯಾಯನ್ನಾರಾಯಣಂ ದೇವಂ ಸ್ವಾಸ್ತೀರ್ಣೇ ಕುಶಸಂಸ್ತರೇ ॥ ೩

ವಾಗ್ಯತಃ ಸಹ ವೈದೇಹ್ಯಾ ಭೂತ್ವಾ ನಿಯತಮಾನಸಃ ।
ಶ್ರೀಮತ್ಯಾಯತನೇ ವಿಷ್ಣೋಃ ಶಿಶ್ಯೇ ನರವರಾತ್ಮಜಃ ॥ ೪

ಏಕಯಾಮಾವಶಿಷ್ಟಾಯಾಂ ರಾತ್ರ್ಯಾಂ ಪ್ರತಿವಿಬುದ್ಧ್ಯ ಸಃ ।
ಅಲಂಕಾರವಿಧಿಂ ಕೃತ್ಸ್ನಂ ಕಾರಯಾಮಾಸ ವೇಶ್ಮನಃ ॥ ೫

## ಸರ್ಗ ೬

### ಪಟ್ಟಾಭಿಷೇಕವು ನಡೆಯುವುದೆಂದು ಪ್ರಜೆಗಳ ಉತ್ಸಾಹ.

ಇತ್ತ ಪುರೋಹಿತರಾದ ವಸಿಷ್ಠರು ಹೊರಟುಹೋದ ಮೇಲೆ, ಶ್ರೀರಾಮನು ಪುನಃ ಸ್ನಾನಮಾಡಿ ವಿಶಾಲಾಕ್ಷಿಯಾದ ತನ್ನ ಪತ್ನಿ ಸೀತಾದೇವಿಯೊಡನೆ ಶ್ರೀಮನ್ನಾರಾಯಣನನ್ನು ಒಂದೇ ಮನಸ್ಸಿನಿಂದ ಪೂಜಿಸಿದನು (೧). ವಿನಯದಿಂದ ತಲೆಬಾಗಿ ಹವಿಸ್ಸಿನ ಪಾತ್ರೆಯನ್ನು ಎತ್ತಿಹಿಡಿದು ಮಹಾದೇವನಾದ ಶ್ರೀಮನ್ನಾರಾಯಣನನ್ನುದ್ದೇಶಿಸಿ, ಆಜ್ಯವನ್ನು ಉರಿಯುವ ಅಗ್ನಿಯಲ್ಲಿ ವಿಧಿವತ್ತಾಗಿ ಹೋಮ ಮಾಡಿದನು (೨). ಅನಂತರ ತನ್ನ ಇಷ್ಟಾರ್ಥವು ನೆರವೇರಲೆಂದು ಪ್ರಾರ್ಥಿಸಿ ಹವಿಃಶೇಷವನ್ನು ಸ್ವೀಕರಿಸಿ ಪರಮಾತ್ಮನನ್ನು ಧ್ಯಾನಮಾಡುತ್ತ ದರ್ಭೆಗಳನ್ನು ನೆಲದ ಮೇಲೆ ಹಾಸಿದನು (೩). ಆ ರಾಜಕುಮಾರನು ಭವ್ಯವಾದ ಆ ವಿಷ್ಣುಪೂಜಾಗೃಹದಲ್ಲಿ ಮೌನವ್ರತವನ್ನವಲಂಬಿಸಿ ಭಕ್ತಿಯಿಂದ ಭಗವಂತನನ್ನು ಧ್ಯಾನಿಸುತ್ತ (ದರ್ಭೆಯ ಹಾಸಿಗೆಯಲ್ಲಿ) ಸೀತಾಸಮೇತನಾಗಿ ಮಲಗಿದನು. (೪). ರಾತ್ರಿಯ ಒಂದು ಯಾಮವಿರುವಾಗಲೇ ಎದ್ದು ಗೃಹಕ್ಕೆ ಮಾಡಬೇಕಾದ ಎಲ್ಲ ಅಲಂಕಾರ

ತತ್ರ ಶೃಣ್ವನ್ ಸುಖಾ ವಾಚಃ ಸೂತಮಾಗಧವಂದಿನಾಮ್ ।
ಪೂರ್ವಾಂ ಸಂಧ್ಯಾಮುಪಾಸೀನೋ ಜಜಾಪ ಯತಮಾನಸಃ ॥ ೬

ತುಷ್ಟಾವ ಪ್ರಣತಶ್ಚೈವ ಶಿರಸಾ ಮಧುಸೂದನಮ್ ।
ವಿಮಲಕ್ಷೌಮಸಂವೀತೋ ವಾಚಯಾಮಾಸ ಚ ದ್ವಿಜಾನ್ ॥ ೭

ತೇಷಾಂ ಪುಣ್ಯಾಹಘೋಷೋಽಥ ಗಂಭೀರಮಧುರಸ್ತದಾ ।
ಅಯೋಧ್ಯಾಂ ಪೂರಯಾಮಾಸ ತೂರ್ಯಘೋಷಾನುನಾದಿತಃ ॥ ೮

ಕೃತೋಪವಾಸಂ ತು ತದಾ ವೈದೇಹ್ಯಾ ಸಹ ರಾಘವಮ್ ।
ಅಯೋಧ್ಯಾನಿಲಯಃ ಶ್ರುತ್ವಾ ಸರ್ವಃ ಪ್ರಮುದಿತೋ ಜನಃ ॥ ೯

ತತಃ ಪೌರಜನಃ ಸರ್ವಃ ಶ್ರುತ್ವಾ ರಾಮಾಭಿಷೇಚನಮ್ ।
ಪ್ರಭಾತಾಂ ರಜನೀಂ ದೃಷ್ಟ್ವಾ ಚಕ್ರೇ ಶೋಭಯಿತುಂ ಪುರೀಮ್ ॥ ೧೦

ಶುಭ್ರಾಭ್ರ ಶಿಖರಾಭೇಷು ದೇವತಾಯತನೇಷು ಚ ।
ಚತುಷ್ಪಥೇಷು ರಥ್ಯಾಸು ಚೈತ್ಯೇಷ್ವಟ್ಟಾಲಕೇಷು ಚ ॥ ೧೧

---

ಗಳನ್ನು ಮಾಡಿಸಿದನು. ಶ್ರೀರಾಮನು ಸೂತ, ಮಾಗಧ, ವಂದಿಗಳ* ಪರಾಕುಗಳನ್ನು ಕೇಳುತ್ತಿದ್ದು, ಅನಂತರ ನಿಶ್ಚಲವಾದ ಮನಸ್ಸಿನಿಂದ ಪ್ರಾತಃ ಸಂಧ್ಯಾವಂದನೆಯನ್ನು ಆಚರಿಸುತ್ತ ಗಾಯತ್ರಿಯನ್ನು ಜಪಿಸಿದನು (೫-೬). ಆಮೇಲೆ ಮಹಾವಿಷ್ಣುವನ್ನು ಸ್ತುತಿಸಿ ಸಾಷ್ಟಾಂಗ ಪ್ರಣಾಮ ಮಾಡಿದನು. ಶುಭ್ರವಾದ ದುಕೂಲವನ್ನುಟ್ಟು ಬ್ರಾಹ್ಮಣರಿಂದ ಪುಣ್ಯಾಹವಾಚನವನ್ನು ಮಾಡಿಸಿದನು. ಇಂಪಾಗಿಯೂ ಮಧುರವಾಗಿಯೂ ಇದ್ದ ಆ ವೇದ ಘೋಷವೂ ಮಂಗಳವಾದ್ಯದ ಧ್ವನಿಯೂ ಅಯೋಧ್ಯೆಯನ್ನು ವ್ಯಾಪಿಸಿದವು (೭-೮). ಶ್ರೀರಾಮನು ಸೀತಾದೇವಿಯೊಡನೆ ಉಪವಾಸವ್ರತವನ್ನಾಚರಿಸಿದನೆಂಬುದನ್ನು ಕೇಳಿ ಅಯೋಧ್ಯಾನಿವಾಸಿಗಳು (ಉತ್ಸವ ಕಾಲವು ಸನ್ನಿಹಿತವಾಯಿತೆಂದು) ಸಂತೋಷದಿಂದ ಹಿಗ್ಗಿದರು. ಪುರಜನರೆಲ್ಲರೂ ಬೆಳಗಾದ ಕೂಡಲೆ ನಗರವನ್ನು ಅಲಂಕರಿಸತೊಡಗಿದರು (೯-೧೦). ಬಿಳಿಯ ಮೋಡ

---

* ಸೂತರು = ದೇವತಾಸ್ತೋತ್ರಗಳನ್ನು ಪಠಿಸತಕ್ಕವರು, ಮಾಗಧರು = ರಾಜವಂಶಾವಳಿಯನ್ನು ಹೇಳತಕ್ಕವರು, ವಂದಿಗಳು=ಅರಸನ ಶೌರ್ಯಾದಿಗುಣಗಳನ್ನು ವರ್ಣಿಸುವವರು.

ನಾನಾಪಣ್ಯಸಮೃದ್ಧೇಷು ವಣಿಜಾಮಾಪಣೇಷು ಚ ।
ಕುಟುಂಬಿನಾಂ ಸಮೃದ್ಧೇಷು ಶ್ರೀಮತ್ಸು ಭವನೇಷು ಚ ॥ ೧೨

ಸಭಾಸು ಚೈವ ಸರ್ವಾಸು ವೃಕ್ಷೇಷ್ವಾಲಕ್ಷಿತೇಷು ಚ ।
ಧ್ವಜಾಃ ಸಮುಚ್ಛ್ರಿತಾಶ್ಚಿತ್ರಾಃ ಪತಾಕಾಶ್ಚಾಭವಂಸ್ತದಾ ॥ ೧೩

ನಟನರ್ತಕಸಂಘಾನಾಂ ಗಾಯಕಾನಾಂ ಚ ಗಾಯತಾಮ್ ।
ಮನಃಕರ್ಣಸುಖಾ ವಾಚಃ ಶುಶ್ರಾವ ಜನತಾ ತತಃ ॥ ೧೪

ರಾಮಾಭಿಷ್ಟವಯುಕ್ತಾಶ್ಚ ಕಥಾಶ್ಚಕ್ರುರ್ಮಿಥೋ ಜನಾಃ ।
ರಾಮಾಭಿಷೇಕೇ ಸಂಪ್ರಾಪ್ತೇ ಚತ್ವರೇಷು ಗೃಹೇಷು ಚ ॥ ೧೫

ಬಾಲಾ ಅಪಿ ಕ್ರೀಡಮಾನಾ ಗೃಹದ್ವಾರೇಷು ಸಂಘಶಃ ।
ರಾಮಾಭಿಷೇಕಸಂಯುಕ್ತಾಶ್ಚಕ್ರುರೇವ ಮಿಥಃ ಕಥಾಃ ॥ ೧೬

ಕೃತಪುಷ್ಪೋಪಹಾರಶ್ಚ ಧೂಪಗಂಧಾಭಿವಾಸಿತಃ ।
ರಾಜಮಾರ್ಗಃ ಕೃತಃ ಶ್ರೀಮಾನ್ ಪೌರೈ ರಾಮಾಭಿಷೇಚನೇ ॥ ೧೭

---

ಗಳಿಂದ ತುಂಬಿದ ಪರ್ವತಶೃಂಗಗಳಂತಿರುವ ದೇವಾಲಯಗಳು, ಚೌಕಗಳು, ರಸ್ತೆಗಳು, ಚಿಕ್ಕಗುಡಿಗಳು, ಪ್ರಾಸಾದಗಳ ಉಪ್ಪರಿಗೆಗಳು, ವಿಕ್ರಯವಸ್ತುಗಳಿಂದ ಸಮೃದ್ಧವಾದ ವ್ಯಾಪಾರಿಗಳ ಅಂಗಡಿಗಳು, ಗೃಹಸ್ಥರ ಮನೆಗಳು, ವೈಭವದಿಂದ ಕೂಡಿದ ಸಭಾಮಂಟಪಗಳು, ಸಾಲುಮರಗಳು - ಮೊದಲಾದ ಸ್ಥಳಗಳಲ್ಲಿ ಉನ್ನತವಾದ ಧ್ವಜಸ್ತಂಭಗಳನ್ನು ನಿಲ್ಲಿಸಿ ಚಿತ್ರವರ್ಣದ ಪತಾಕೆಗಳನ್ನೇರಿಸಿದರು (೧೧-೧೩). ನಟರು, ನರ್ತಕರು ಮತ್ತು ಗಾಯಕರ ಇಂಪಾದ ಧ್ವನಿಯು ಜನರ ಮನಸ್ಸನ್ನು ಸೂರೆಗೊಳ್ಳುತ್ತಿದ್ದಿತು. ಚೌಕಗಳಲ್ಲಿಯೂ ಮನೆಗಳಲ್ಲಿಯೂ ಜನರು ಗುಂಪುಕಟ್ಟಿ ಶ್ರೀರಾಮನ ಪಟ್ಟಾಭಿಷೇಕದ ವಿಷಯವನ್ನೇ ಕುರಿತು ಮಾತನಾಡುತ್ತಿದ್ದರು (೧೪-೧೫). ಮನೆಯ ಬಾಗಿಲ ಸಮೀಪದಲ್ಲಿ ಆಟವಾಡುತ್ತಿದ್ದ ಹುಡುಗರೂ ಕೂಡ ಪಟ್ಟಾಭಿಷೇಕದ ವಿಚಾರವನ್ನು ಹೇಳಿಕೊಳ್ಳುತ್ತಿದ್ದರು (೧೬). ನಗರವಾಸಿಗಳು ರಾಜಮಾರ್ಗವನ್ನು ಹೂಗಳಿಂದ ದಿವ್ಯವಾಗಿ ಅಲಂಕರಿಸಿ ಧೂಪದ ಸುಗಂಧವು ಎಲ್ಲೆಡೆಯೂ ಹರಡುವಂತೆ ಮಾಡಿದರು. (ಮರವಣಿಗೆಯು ಬರುವಷ್ಟರಲ್ಲಿ) ರಾತ್ರಿಯಾಗ

ಪ್ರಕಾಶೀಕರಣಾರ್ಥಂ ಚ ನಿಶಾಗಮನಶಂಕಯಾ ।
ದೀಪವೃಕ್ಷಾಂಸ್ತಥಾ ಚಕ್ರುರನುರಥ್ಯಾಸು ಸರ್ವಶಃ ॥ ೧೮

ಅಲಂಕಾರಂ ಪುರಸ್ಯೈವಂ ಕೃತ್ವಾ ತತ್ಪುರವಾಸಿನಃ ।
ಆಕಾಂಕ್ಷಮಾಣಾ ರಾಮಸ್ಯ ಯೌವರಾಜ್ಯಾಭಿಷೇಚನಮ್ ॥ ೧೯

ಸಮೇತ್ಯ ಸಂಘಶಃ ಸರ್ವೇ ಚತ್ವರೇಷು ಸಭಾಸು ಚ ।
ಕಥಯಂತೋ ಮಿಥಸ್ತತ್ರ ಪ್ರಶಶಂಸುರ್ಜನಾಧಿಪಮ್ ॥ ೨೦

ಅಹೋ ಮಹಾತ್ಮಾ ರಾಜಾಯಮಿಕ್ಷ್ವಾಕುಕುಲನಂದನಃ ।
ಜ್ಞಾತ್ವಾ ಯೋ ವೃದ್ಧಮಾತ್ಮಾನಂ ರಾಮಂ ರಾಜ್ಯೇಽಭಿಷೇಕ್ಷ್ಯತಿ ॥ ೨೧

ಸರ್ವೇ ಹ್ಯನುಗೃಹೀತಾಃ ಸ್ಮೋ ಯನ್ನೋ ರಾಮೋ ಮಹೀಪತಿಃ ।
ಚಿರಾಯ ಭವಿತಾ ಗೋಪ್ತಾ ದೃಷ್ಟಲೋಕಪರಾವರಃ ॥ ೨೨

ಅನುದ್ಧತಮನಾ ವಿದ್ವಾನ್ ಧರ್ಮಾತ್ಮಾ ಭ್ರಾತೃವತ್ಸಲಃ ।
ಯಥಾ ಚ ಭ್ರಾತೃಷು ಸ್ನಿಗ್ಧಸ್ತಥಾಸ್ಮಾಸ್ವಪಿ ರಾಘವಃ ॥ ೨೩

---

ಬಹುದೆಂದು ಊಹಿಸಿ ರಸ್ತೆಯ ಪಕ್ಕಗಳಲ್ಲಿ ವೃಕ್ಷದಂತೆ ವಿಚಿತ್ರವಾದ ದೀಪಸ್ತಂಭಗಳನ್ನು ರಚಿಸಿದರು (೧೭-೧೮). ಈ ರೀತಿಯಲ್ಲಿ ಪುರಜನರು ಅಯೋಧ್ಯಾನಗರವನ್ನು ಸಿಂಗರಿಸಿ, ಶ್ರೀರಾಮನ ಪಟ್ಟಾಭಿಷೇಕೋತ್ಸವವನ್ನೇ ನಿರೀಕ್ಷಿಸುತ್ತ ಚೌಕಗಳಲ್ಲಿ ನೆರೆದು ಸಭೆಗಳನ್ನು ಸೇರಿಸಿ ಆ ವಿಷಯವನ್ನೇ ಮಾತನಾಡುತ್ತಿದ್ದರು. (ದಶರಥಮಹಾರಾಜನ ಉದ್ದೇಶವು ಶ್ರೇಷ್ಠವಾದದ್ದೆಂದು) ಅವನನ್ನು ಕೊಂಡಾಡಿದರು (೧೯-೨೦) : "ಆಹಾ! ನಮ್ಮ ಮಹಾರಾಜನು ಎಂಥ ಮಹಾತ್ಮ! ಇಕ್ಷ್ವಾಕುವಂಶಕ್ಕೆ ಭೂಷಣಪ್ರಾಯನಾಗಿದ್ದಾನೆ. ತಾನು ವೃದ್ಧನಾದೆನೆಂದು ಶ್ರೀರಾಮನಿಗೆ ರಾಜ್ಯಾಭಿಷೇಕಮಾಡುತ್ತಿರುವನು (೨೧). ಅವನು ನಮ್ಮೆಲ್ಲರನ್ನೂ ಅನುಗ್ರಹಿಸಿದ್ದಾನೆ. ಏಕೆಂದರೆ, ಲೋಕದ ತಾರತಮ್ಯವನ್ನು ಬಲ್ಲ ರಾಮನು ಚಿರಕಾಲದವರೆಗೆ ನಮ್ಮನ್ನು ಪಾಲಿಸುವ ರಾಜನಾಗುವನು. ರಾಮನ ಮನಸ್ಸಿನಲ್ಲಿ ಸ್ವಲ್ಪವೂ ಗರ್ವವಿಲ್ಲ. ಅವನು ವಿದ್ವಾಂಸ, ಧರ್ಮಾತ್ಮ, ಒಡಹುಟ್ಟಿದವರಲ್ಲಿ ಪ್ರೀತಿಯುಳ್ಳವನು. ತನ್ನ ತಮ್ಮಂದಿರನ್ನು ಕಂಡರೆ ಎಷ್ಟು ಸ್ನೇಹವೋ ನಮ್ಮನ್ನು ಕಂಡರೆ ಅವನಿಗೆ ಅಷ್ಟು

ಚಿರಂ ಜೀವತು ಧರ್ಮಾತ್ಮಾ ರಾಜಾ ದಶರಥೋಽನಘಃ ।
ಯತ್ಪ್ರಸಾದೇನಾಭಿಷಿಕ್ತಂ ರಾಮಂ ದ್ರಕ್ಷ್ಯಾಮಹೇ ವಯಮ್ ॥ ೨೪

ಏವಂವಿಧಂ ಕಥಯತಾಂ ಪೌರಾಣಾಂ ಶುಶ್ರುವುಃ ಪರೇ ।
ದಿಗ್ಭ್ಯೋ ವಿಶ್ರುತವೃತ್ತಾಂತಾಃ ಪ್ರಾಪ್ತಾ ಜಾನಪದಾ ಜನಾಃ ॥ ೨೫

ತೇ ತು ದಿಗ್ಭ್ಯಃ ಪುರೀಂ ಪ್ರಾಪ್ತಾ ದ್ರಷ್ಟುಂ ರಾಮಾಭಿಷೇಚನಮ್ ।
ರಾಮಸ್ಯ ಪೂರಯಾಮಾಸುಃ ಪುರೀಂ ಜಾನಪದಾ ಜನಾಃ ॥ ೨೬

ಜನೌಘೈಸ್ತೈರ್ವಿಸರ್ಪದ್ಭಿಃ ಶುಶ್ರುವೇ ತತ್ರ ನಿಸ್ವನಃ ।
ಪರ್ವಸೂದೀರ್ಣವೇಗಸ್ಯ ಸಾಗರಸ್ಯೇವ ನಿಸ್ವನಃ ॥ ೨೭

ತತಸ್ತದಿಂದ್ರಕ್ಷಯಸಂನಿಭಂ ಪುರಂ
ದಿದೃಕ್ಷುಭಿರ್ಜಾನಪದೈರುಪಾಗತೈಃ ।
ಸಮಂತತಃ ಸಸ್ವನಮಾಕುಲಂ ಬಭೌ
ಸಮುದ್ರಯಾದೋಭಿರಿವಾರ್ಣವೋದಕಮ್ ॥ ೨೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಷ್ಠಃ ಸರ್ಗಃ

---

ಸ್ನೇಹವಿದೆ (೨೨-೨೩). ಗುಣಶಾಲಿಯೂ ಧರ್ಮಾತ್ಮನೂ ಆದ ದಶರಥ ಮಹಾರಾಜನು ದೀರ್ಘಾಯುವಾಗಲಿ! ಅವನ ಅನುಗ್ರಹದಿಂದಲೇ ಅಲ್ಲವೆ ನಾವು ಶ್ರೀರಾಮನ ಪಟ್ಟಾಭಿಷೇಕವನ್ನು ನೋಡುವುದು ?" (೨೪). ಈ ರೀತಿಯಲ್ಲಿ ಪುರಜನರು ಮಾತನಾಡಿಕೊಳ್ಳುತ್ತಿರುವುದನ್ನು, ಪಟ್ಟಾಭಿಷೇಕದ ಸುದ್ದಿಯು ತಿಳಿದು ರಾಜ್ಯದ ನಾನಾ ದಿಕ್ಕುಗಳಿಂದ ಬಂದ ಪ್ರಜೆಗಳು ಆಲಿಸುತ್ತಿದ್ದರು. ರಾಮಾಭಿಷೇಕವನ್ನು ನೋಡುವುದಕ್ಕಾಗಿ ಬಂದ ಜನರಿಂದ ಅಯೋಧ್ಯೆಯು ತುಂಬಿಹೋಯಿತು (೨೫-೨೬). ಹೀಗೆ (ಅಲೆಯಂತೆ) ಗುಂಪುಗುಂಪಾಗಿ ಬಂದು ಸೇರುತ್ತಿದ್ದ ಜನರ ಕೋಲಾಹಲ ಧ್ವನಿಯು ಪರ್ವಕಾಲದಲ್ಲಿ ಉಬ್ಬರಿಸುವ ಸಮುದ್ರದ ಘೋಷದಂತೆ ಕೇಳಿಸುತ್ತಿತ್ತು (೨೭). ಇಂದ್ರನ ಅಮರಾವತಿಯಂತೆ ಸುಂದರವಾಗಿದ್ದ ಅಯೋಧ್ಯಾ ನಗರವು, ಪಟ್ಟಾಭಿಷೇಕವನ್ನು ನೋಡಲು ಬಂದ ಜನಸಂದಣಿಯಿಂದ ಕಿಕ್ಕಿರಿದು ಹೋಯಿತು. ಆ ಜನರ ಒತ್ತಡ ಕೋಲಾಹಲಗಳಿಂದ ಕೂಡಿದ ಆ ಪಟ್ಟಣವು ಜಲಚರಪ್ರಾಣಿಗಳಿಂದ ತುಂಬಿದ ಮಹಾಸಾಗರದಂತೆ ಶೋಭಿಸುತ್ತಿತ್ತು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಆರನೆಯ ಸರ್ಗ

## ಸಪ್ತಮಃ ಸರ್ಗಃ

### ಮಂಥರಾಪರಿದೇವನಮ್

ಜ್ಞಾತಿದಾಸೀ ಯತೋಜಾತಾ ಕೈಕೇಯ್ಯಾಸ್ತು ಸಹೋಷಿತಾ ।
ಪ್ರಾಸಾದಂ ಚಂದ್ರಸಂಕಾಶಮಾರುರೋಹ ಯದೃಚ್ಛಯಾ ॥ ೧

ಸಿಕ್ತರಾಜಪಥಾಂ ಕೃತ್ಸ್ನಾಂ ಪ್ರಕೀರ್ಣಕಮಲೋತ್ಪಲಾಮ್ ।
ಅಯೋಧ್ಯಾಂ ಮಂಥರಾ ತಸ್ಮಾತ್ ಪ್ರಾಸಾದಾದನ್ವವೈಕ್ಷತ ॥ ೨

ಪತಾಕಾಭಿರ್ವರಾರ್ಹಾಭಿರ್ಧ್ವಜೈಶ್ಚ ಸಮಲಂಕೃತಾಮ್ ।
ಸಿಕ್ತಾಂ ಚಂದನತೋಯೈಶ್ಚ ಶಿರಃಸ್ನಾತಜನೈರ್ಯುತಾಮ್ ॥ ೩

ಮಾಲ್ಯಮೋದಕಹಸ್ತೈಶ್ಚ ದ್ವಿಜೇಂದ್ರೈರಭಿನಾದಿತಾಮ್ ।
ಶುಕ್ಲದೇವಗೃಹದ್ವಾರಾಂ ಸರ್ವಪಾದಿತ್ರನಿಸ್ವನಾಮ್ ॥ ೪

## ಸರ್ಗ ೭

### ಮಂಥರೆಯ ದುರಾಲೋಚನೆ.

ಹೀಗಿರಲು ಮಂಥರೆಯೆಂಬ ಕೈಕೇಯಿಯ ದಾಸಿಯೊಬ್ಬಳು ಚಂದ್ರನಂತೆ ಸ್ವಚ್ಛವಾಗಿಯೂ ಉನ್ನತವಾಗಿಯೂ ಇದ್ದ ಅಂತಃಪುರದ ಮೇಲ್ಮಹಡಿಯನ್ನು ಅಕಸ್ಮಾತ್ತಾಗಿ ಹತ್ತಿಹೋದಳು. ಅವಳು ಕೈಕೇಯಿಯ ತವರುಮನೆಯಿಂದ ಬಂದವಳು. ಎಲ್ಲಿ ಹುಟ್ಟಿದಳೊ, ಯಾರು ತಾಯಿತಂದೆಗಳೊ ತಿಳಿಯದು. ಅವಳು ಮೊದಲಿನಿಂದ ಕೈಕೇಯಿಯ ಜೊತೆಯಲ್ಲಿಯೇ ಇರುತ್ತಿದ್ದಳು (೧). ಅಯೋಧ್ಯಾನಗರದ ರಾಜಬೀದಿಗಳು ಜಲಸೇಚನದಿಂದಲೂ, ತಾವರೆ ನೈದಿಲೆ ಮುಂತಾದ ಹೂಗಳಿಂದಲೂ ಅಲಂಕರಿಸಲ್ಪಟ್ಟುದನ್ನು ಮಹಡಿಯಿಂದ ನೋಡಿದಳು. ಎಲ್ಲಿ ನೋಡಿದರೂ ಉತ್ತಮವಾದ ಧ್ವಜಸ್ತಂಭಗಳನ್ನು ನಿಲ್ಲಿಸಿ ಬಾವುಟಗಳನ್ನು ಹಾರಿಸಿದ್ದರು. ಚಂದನೋದಕದಿಂದ ರಸ್ತೆಗಳನ್ನು ಚಿಮುಕಿಸಿದ್ದ ರಲ್ಲದೆ ಜನರು ಶಿರಃಸ್ನಾನಮಾಡಿ ಪರಿಶುದ್ಧರಾಗಿದ್ದರು (೨-೩). (ಸುಣ್ಣವನ್ನು ತೊಡೆದು) ಶುಭ್ರವಾಗಿದ್ದ ದೇವಸ್ಥಾನದ ಬಾಗಿಲುಗಳಲ್ಲಿ ಬ್ರಾಹ್ಮಣೋತ್ತಮರು ಹೂವಿನ ಹಾರಗಳನ್ನೂ ಭಕ್ಷ್ಯಗಳನ್ನೂ ಪೂಜಾರ್ಥವಾಗಿ ಹಿಡಿದು

ಸಂಪ್ರಹೃಷ್ಟಜನಾಕೀರ್ಣಾಂ ಬ್ರಹ್ಮಘೋಷಾಭಿನಾದಿತಾಮ್ ।
ಪ್ರಹೃಷ್ಟವರಹಸ್ತ್ಯಶ್ವಾಂ ಸಂಪ್ರಣರ್ದಿತಗೋವೃಷಾಮ್ ॥ ೫

ಪ್ರಹೃಷ್ಟಮುದಿತೈಃ ಪೌರೈರುಚ್ಛ್ರಿತಧ್ವಜಮಾಲಿನೀಮ್ ।
ಅಯೋಧ್ಯಾಂ ಮಂಥರಾ ದೃಷ್ಟ್ವಾ ಪರಂ ವಿಸ್ಮಯಮಾಗತಾ ॥ ೬

ಸಾ ಹರ್ಷೋತ್ಫುಲ್ಲನಯನಾಂ ಪಾಂಡರಕ್ಷೌಮವಾಸಿನೀಮ್ ।
ಅವಿದೂರೇ ಸ್ಥಿತಾಂ ದೃಷ್ಟ್ವಾ ಧಾತ್ರೀಂ ಪಪ್ರಚ್ಛ ಮಂಥರಾ ॥ ೭

ಉತ್ತಮೇನಾಭಿಸಂಯುಕ್ತಾ ಹರ್ಷೇಣಾರ್ಥಪರಾ ಸತೀ ।
ರಾಮಮಾತಾ ಧನಂ ಕಿಂ ನು ಜನೇಭ್ಯಃ ಸಂಪ್ರಯಚ್ಛತಿ ॥ ೮

ಅತಿಮಾತ್ರಪ್ರಹರ್ಷೋಽಯಂ ಕಿಂ ಜನಸ್ಯ ಚ ಶಂಸ ಮೇ ।
ಕಾರಯಿಷ್ಯತಿ ಕಿಂ ವಾಪಿ ಸಂಪ್ರಹೃಷ್ಟೋ ಮಹೀಪತಿಃ ॥ ೯

ವಿದೀರ್ಯಮಾಣಾ ಹರ್ಷೇಣ ಧಾತ್ರೀ ಪರಮಯಾ ಮುದಾ ।
ಆಚಚಕ್ಷೇಽಥ ಕುಬ್ಜಾಯೈ ಭೂಯಸೀಂ ರಾಘವೇ ಶ್ರಿಯಮ್ ॥ ೧೦

---

ನಿಂತುಕೊಂಡಿದ್ದರು. ಮಂಗಳವಾದ್ಯಗಳು ಮೊಳಗುತ್ತಿದ್ದವು (೪). ಜನರೆಲ್ಲರೂ ಸಂತೋಷಭರಿತರಾಗಿದ್ದರು. ವೇದಘೋಷವು ನಡೆಯುತ್ತಿತ್ತು. (ಉತ್ಸವಾರ್ಥವಾಗಿ ಬರುತ್ತಿದ್ದ) ಆನೆ, ಕುದುರೆ, ಹಸು, ಎತ್ತುಗಳು ಉತ್ಸಾಹದಿಂದ ಸಂಚರಿಸುತ್ತಿದ್ದವು. ಪುರಜನರು ನಲಿಯುತ್ತಿದ್ದರು. ಧ್ವಜ ತೋರಣಗಳಿಂದ ಅಯೋಧ್ಯೆಯು ಅಲಂಕೃತವಾಗಿತ್ತು (೫-೬). ಇದನ್ನೆಲ್ಲಾ ಕಂಡು ಆ ಮಂಥರೆಯು ಸಮೀಪದಲ್ಲಿದ್ದ ಇನ್ನೊಬ್ಬ ದಾಸಿಯ ಕಡೆಗೆ ತಿರುಗಿ ನೋಡಲು, ಅವಳು ಬಿಳಿಯ ದುಕೂಲವನ್ನುಟ್ಟು ಹರ್ಷದಿಂದ ಕಣ್ಣನ್ನು ಅರಳಿಸಿಕೊಂಡು ನಿಂತಿದ್ದಳು. ಅವಳನ್ನು ಮಂಥರೆಯು ಕೇಳಿದಳು (೭): "ಏನಮ್ಮ! ರಾಮನ ತಾಯಿ ಅಷ್ಟು ಜಿಪುಣೆ! ಅಂಥವಳು ಬಹಳ ಸಂತೋಷದಿಂದ ಈ ದಿನ ಜನರಿಗೆ ಹಣವನ್ನು ದಾನ ಮಾಡುತ್ತಿದ್ದಾಳಲ್ಲ! ಏಕಿರಬಹುದು ? (೮). ಜನರಿಗೆ ಹಿಡಿಸಲಾರದಷ್ಟು ಸಂತೋಷವಾಗಿದೆಯಲ್ಲ? ಮಹಾರಾಜನು ಸಂತುಷ್ಟನಾಗಿ ಯಾವುದಾದರೂ ಕಾರ್ಯವನ್ನು ಮಾಡಿಸುವನೋ ಹೇಗೆ? ನನಗೆ ಸ್ವಲ್ಪ ಹೇಳು" ಎಂದಳು (೯). ಆಗ ಆ ದಾಸಿಯು ಪರಮಾನಂದದಿಂದ ಉಬ್ಬುತ್ತ ಗೂನುಬೆನ್ನಿನ ಮಂಥರೆಗೆ ಶ್ರೀರಾಮನ

ಶ್ವಃ ಪುಷ್ಯೇಣ ಜಿತಕ್ರೋಧಂ ಯೌವರಾಜ್ಯೇನ ರಾಘವಮ್ ।
ರಾಜಾ ದಶರಥೋ ರಾಮಮಭಿಷೇಚಯಿತಾನಘಮ್ ॥ ೧೧

ಧಾತ್ರ್ಯಾಸ್ತು ವಚನಂ ಶ್ರುತ್ವಾ ಕುಬ್ಜಾ ಕ್ಷಿಪ್ರಮಮರ್ಷಿತಾ ।
ಕೈಲಾಸಶಿಖರಾಕಾರಾತ್ ಪ್ರಾಸಾದಾದವರೋಹತ ॥ ೧೨

ಸಾ ದಹ್ಯಮಾನಾ ಕೋಪೇನ ಮಂಥರಾ ಪಾಪದರ್ಶಿನೀ ।
ಶಯಾನಾಮೇತ್ಯ ಕೈಕೇಯೀಮಿದಂ ವಚನಮಬ್ರವೀತ್ ॥ ೧೩

ಉತ್ತಿಷ್ಠ ಮೂಢೇ ಕಿಂ ಶೇಷೇ ಭಯಂ ತ್ವಾಮಭಿವರ್ತತೇ ।
ಉಪಪ್ಲುತಮಘೌಘೇನ ಕಿಮಾತ್ಮಾನಂ ನ ಬುಧ್ಯಸೇ ॥ ೧೪

ಅನಿಷ್ಟೇ ಸುಭಗಾಕಾರೇ ಸೌಭಾಗ್ಯೇನ ವಿಕತ್ಥಸೇ ।
ಚಲಂ ಹಿ ತವ ಸೌಭಾಗ್ಯಂ ನದ್ಯಾಃ ಸ್ರೋತ ಇವೋಷ್ಣಗೇ ॥ ೧೫

ಏವಮುಕ್ತಾ ತು ಕೈಕೇಯೀ ರುಷ್ಯಯಾ ಪರುಷಂ ವಚಃ ।
ಕುಬ್ಜಯಾ ಪಾಪದರ್ಶಿನ್ಯಾ ವಿಷಾದಮಗಮತ್ ಪರಮ್ ॥ ೧೬

---

ಅಭ್ಯುದಯ ವೃತ್ತಾಂತವನ್ನು ಹೇಳುತ್ತ "ದಶರಥಮಹಾರಾಜನು ನಾಳೆ ಪುಷ್ಯನಕ್ಷತ್ರದಲ್ಲಿ ಶಾಂತಸ್ವಭಾವದವನೂ ಗುಣಶಾಲಿಯೂ ಆದ ಶ್ರೀರಾಮನಿಗೆ ಯುವರಾಜಪದವಿಯಲ್ಲಿ ಪಟ್ಟಾಭಿಷೇಕ ಮಾಡುವನು" ಎಂದಳು (೧೦-೧೧). ಆ ಮಾತನ್ನು ಕೇಳಿದೊಡನೆ ಆ ಗೂನಿಗೆ ಸಹನೆ ತಪ್ಪಿತು. ಕೈಲಾಸಶಿಖರದಂತಿದ್ದ ಮಹಡಿಯಿಂದ ಅವಳು ಥಟ್ಟನೆ ಕೆಳಗಿಳಿದು ಹೋದಳು. ಪಾಪಿಷ್ಠಳಾದ ಮಂಥರೆಯು ಸಿಟ್ಟಿನಿಂದ ಉರಿದುಹೋದಳು. ಮಲಗಿದ್ದ ಕೈಕೇಯಿಯ ಬಳಿಗೆ ನೇರವಾಗಿ ಹೋಗಿ ಈ ರೀತಿ ಹೇಳಿದಳು (೧೨-೧೩) : "ಅಯ್ಯೋ ಮೂಢೆ! ಏಳು ಏಳು! ಇನ್ನೂ ಮಲಗಿದ್ದೀಯಾ? ಭಯಂಕರವಾದ ವಿಪತ್ತು ನಿನ್ನನ್ನು ಸುತ್ತುಗಟ್ಟಿದೆ! ಕಷ್ಟದ ಪರಂಪರೆಯೇ ನಿನ್ನನ್ನು ಮುತ್ತಿಕೊಂಡಿದೆಯೆಂದು ನಿನಗೆ ಗೊತ್ತಿಲ್ಲವೆ ? (೧೪). 'ನನ್ನ ಗಂಡನಿಗೆ ನನ್ನ ಮೇಲೆ ಪರಮಪ್ರೀತಿ' ಎಂದು ನಿನ್ನ ಸೌಭಾಗ್ಯವನ್ನು ಹೇಳಿಕೊಳ್ಳುತ್ತ ಅನಿಷ್ಟನಾದ ಆ ಸುಭಗನ ವಿಷಯದಲ್ಲಿ ಜಂಭ ಹೊಡೆಯುತ್ತಿದ್ದೆಯಲ್ಲ. ನಿನ್ನ ಸೌಭಾಗ್ಯ ಸ್ಥಿರವಾದ್ದಲ್ಲ. ಅದು ಬೇಸಿಗೆಯ ನದೀಪ್ರವಾಹವಿದ್ದಂತೆ ಆಗಿದೆ" (೧೫). ಈ ಪ್ರಕಾರ ಕುಬ್ಜೆಯು ಸಿಟ್ಟಿನಿಂದ ಕಠೋರವಾದ

ಕೈಕೇಯೀ ತ್ವಬ್ರವೀತ್ ಕುಬ್ಜಾಂ ಕಚ್ಚಿತ್ ಕ್ಷೇಮಂ ನ ಮಂಥರೇ ।
ವಿಷಣ್ಣವದನಾಂ ಹಿ ತ್ವಾಂ ಲಕ್ಷಯೇ ಭೃಶದುಃಖಿತಾಮ್ ॥ ೧೭

ಮಂಥರಾ ತು ವಚಃ ಶ್ರುತ್ವಾ ಕೈಕೇಯ್ಯಾ ಮಧುರಾಕ್ಷರಮ್ ।
ಉವಾಚ ಕ್ರೋಧಸಂಯುಕ್ತಾ ವಾಕ್ಯಂ ವಾಕ್ಯವಿಶಾರದಾ ॥ ೧೮

ಸಾ ವಿಷಣ್ಣತರಾ ಭೂತ್ವಾ ಕುಬ್ಜಾ ತಸ್ಯಾ ಹಿತೈಷಿಣೀ ।
ವಿಷಾದಯಂತೀ ಪ್ರೋವಾಚ ಭೇದಯಂತೀ ಚ ರಾಘವಮ್ ॥ ೧೯

ಅಕ್ಷಯ್ಯಂ ಸುಮಹದ್ದೇವಿ ಪ್ರವೃತ್ತಂ ತ್ವದ್ವಿನಾಶನಮ್ ।
ರಾಮಂ ದಶರಥೋ ರಾಜಾ ಯೌವರಾಜ್ಯೇಽಭಿಷೇಕ್ಷ್ಯತಿ ॥ ೨೦

ಸಾಸ್ಮ್ಯಗಾಧೇ ಭಯೇ ಮಗ್ನಾ ದುಃಖಶೋಕಸಮನ್ವಿತಾ ।
ದಹ್ಯಮಾನಾನಲೇನೇವ ತ್ವದ್ಧಿತಾರ್ಥಮಿಹಾಗತಾ ॥ ೨೧

---

ಮಾತನ್ನಾಡಲು, ಕೈಕೇಯಿಯ ಮನಸ್ಸಿಗೆ ಬಹಳ ಖೇದವಾಯಿತು. ಅವಳು ಕುಬ್ಜೆಯನ್ನು ಕುರಿತು "ಮಂಥರೆ, ಇದೇನು? ನೀನು ಕ್ಷೇಮವಾಗಿಲ್ಲವೆ? ನಿನ್ನ ಮುಖದಲ್ಲಿ ವಿಷಾದವು ತೋರುತ್ತಿದೆ. ಬಹಳ ದುಃಖಿತಳಾದಂತೆ ಕಾಣಿಸುತ್ತೀಯೆ" ಎಂದಳು (೧೬-೧೭). ಕೈಕೇಯಿಯ ಮೃದುವಾಕ್ಯವನ್ನು ಕೇಳಿ ಮಂಥರೆಯು ಮತ್ತಷ್ಟು ಕುಪಿತಳಾದಳು. ಮಾತಾಡುವುದರಲ್ಲಿ ನಿಪುಣೆಯಾದ ಆ ಗೂನಿಯು ಇನ್ನೂ ಹೆಚ್ಚಿನ ದುಃಖವನ್ನು ತೋರಿಸುತ್ತ, ತಾನು ಬಹಳ ಹಿತೈಷಿಣಿಯೆಂಬಂತೆ ನಟಿಸುತ್ತ, ಕೈಕೇಯಿಗೆ ಖೇದವನ್ನುಂಟು ಮಾಡುತ್ತ, ಶ್ರೀರಾಮನ ವಿಷಯದಲ್ಲಿ ಅವಳಿಗೆ ಒಡಕುಬುದ್ಧಿಯನ್ನು ಹುಟ್ಟಿಸುವುದಕ್ಕಾಗಿ ಹೀಗೆಂದಳು (೧೮-೧೯) : "ದೇವಿ, ಶಾಶ್ವತವಾಗಿ ನಿನ್ನನ್ನು ಹಾಳುಮಾಡುವುದಕ್ಕೋಸ್ಕರ ಭಾರಿ ಸಂಚು ನಡೆದಿದೆ. ದಶರಥ ರಾಜನು ರಾಮನಿಗೆ ಯುವರಾಜಪದವಿಯಲ್ಲಿ ಪಟ್ಟಾಭಿಷೇಕಮಾಡುವನಂತೆ (೨೦). ಅದನ್ನು ಕೇಳಿ ನನಗೆ ಹೇಳಿತೀರದಷ್ಟು ಹೆದರಿಕೆಯಾಯಿತು, ದುಃಖವಾಯಿತು, ಸಂಕಟಪಟ್ಟೆನು. ದೇಹಕ್ಕೆ ಬೆಂಕಿಬಿದ್ದು ಸುಟ್ಟುಹೋಗುತ್ತಿರುವಂತೆ ಯಾತನೆಯಾಯಿತು. ನಿನಗೆ ಏನಾದರೂ ಒಳ್ಳೆಯದನ್ನು ಮಾಡೋಣ

ತವ ದುಃಖೇನ ಕೈಕೇಯಿ ಮಮ ದುಃಖಂ ಮಹದ್ಭವೇತ್ ।
ತ್ವದ್ವೃದ್ಧೌ ಮಮ ವೃದ್ಧಿಶ್ಚ ಭವೇದತ್ರ ನ ಸಂಶಯಃ ॥ ೨೨

ನರಾದಿಪಕುಲೇ ಜಾತಾ ಮಹಿಷೀ ತ್ವಂ ಮಹೀಪತೇಃ ।
ಉಗ್ರತ್ವಂ ರಾಜಧರ್ಮಾಣಾಂ ಕಥಂ ದೇವಿ ನ ಬುಧ್ಯಸೇ ॥ ೨೩

ಧರ್ಮವಾದೀ ಶಠೋ ಭರ್ತಾ ಶ್ಲಕ್ಷ್ಣವಾದೀ ಚ ದಾರುಣಃ ।
ಶುದ್ಧಭಾವೇ ನ ಜಾನೀಷೇ ತೇನೈವಮತಿಸಂಧಿತಾ ॥ ೨೪

ಉಪಸ್ಥಿತಂ ಪ್ರಯುಂಜಾನಸ್ತ್ವಯಿ ಸಾಂತ್ವಮನರ್ಥಕಮ್ ।
ಅರ್ಥೇನೈವಾದ್ಯ ತೇ ಭರ್ತಾ ಕೌಸಲ್ಯಾಂ ಯೋಜಯಿಷ್ಯತಿ ॥ ೨೫

ಅಪವಾಹ್ಯ ಸ ದುಷ್ಟಾತ್ಮಾ ಭರತಂ ತವ ಬಂಧುಷು ।
ಕಾಲ್ಯೇ ಸ್ಥಾಪಯಿತಾ ರಾಮಂ ರಾಜ್ಯೇ ನಿಹತಕಂಟಕೇ ॥ ೨೬

ಶತ್ರುಃ ಪತಿಪ್ರವಾದೇನ ಮಾತ್ರೇವ ಹಿತಕಾಮ್ಯಯಾ ।
ಆಶೀವಿಷ ಇವಾಂಕೇನ ಬಾಲೇ ಪರಿಹೃತಸ್ತ್ವಯಾ ॥ ೨೭

---

ವೆಂದು ಇಲ್ಲಿಗೆ ಬಂದೆನು (೨೧). ಕೈಕೇಯಿ, ನಿನಗೆ ದುಃಖವಾದರೆ ನನ್ನ ದುಃಖ ಹೆಚ್ಚುವುದು. ನಿನಗೆ ಒಳ್ಳೆಯದಾದರೆ ನನಗೂ ಒಳ್ಳೆಯದು. ಸಂದೇಹವೇ ಇಲ್ಲ. ದೇವಿ, ನೀನು ಮಹಾರಾಜರ ವಂಶದಲ್ಲಿ ಹುಟ್ಟಿ ಮಹಾರಾಜನಿಗೆ ರಾಣಿಯಾಗಿದ್ದೀಯೆ. ಆದರೂ ರಾಜಧರ್ಮವು ಎಷ್ಟು ಉಗ್ರವಾಗಿರುತ್ತದೆಯೆಂಬುದು ತಿಳಿಯದೆಹೋಯಿತೆ ? (೨೨-೨೩). ನಿನ್ನ ಗಂಡನು ಧರ್ಮದ ಮಾತನ್ನಾಡುತ್ತಿದ್ದರೂ ಅಂತರಂಗದಲ್ಲಿ ಕಪಟಿ. ಮೇಲೆ ಮೃದುವಾಗಿ ಮಾತನ್ನಾಡುತ್ತಾನೆ. ಒಳಗಡೆ ಕ್ರೂರಿ. ನೀನಾದರೋ ಶುದ್ಧ ಮನಸ್ಸಿನವಳು. ಈಗ ಹೇಗೆ ಕೈಕೊಟ್ಟಿದ್ದಾನೆಂಬುದು ನಿನಗೆ ತಿಳಿಯದು (೨೪). ಆ ರಾಜನು ನಿನ್ನ ಹತ್ತಿರ ಕೆಲಸಕ್ಕೆ ಬಾರದ ಸವಿನುಡಿಗಳನ್ನು ಸಮಯಕ್ಕೆ ತಕ್ಕಂತೆ ಆಡುತ್ತಾನೆ. ನಿಜವಾದ ಪ್ರಯೋಜನವು ಕೌಸಲ್ಯೆಗೆ ದೊರೆಯುವಂತೆ ಮಾಡುತ್ತಿದ್ದಾನೆ (೨೫). ಆ ದುರ್ಬುದ್ಧಿಯವನು ಭರತನನ್ನು ನಿನ್ನ ತವರುಮನೆಗೆ ಓಡಿಸಿ, ಇತ್ತ ರಾಮನನ್ನು ನಾಳೆ ಬೆಳಗಿನಲ್ಲಿ ನಿಷ್ಕಂಟಕವಾದ ರಾಜ್ಯದ ಮೇಲೆ ಕುಳ್ಳಿರಿಸಬೇಕೆಂದಿದ್ದಾನೆ (೨೬). ಅಯ್ಯೋ ಹುಡುಗಿ! ಶತ್ರುವನ್ನು ಗಂಡನೆಂದು ಪ್ರೀತಿಸಿದೆಯಲ್ಲ! ಒಳ್ಳೆಯದಾಗಲೆಂದು ವಿಷಸರ್ಪ

ಯಥಾ ಹಿ ಕುರ್ಯಾತ್ ಸರ್ಪೋ ವಾ ಶತ್ರುರ್ವಾ ಪ್ರತ್ಯುಪೇಕ್ಷಿತಃ ।
ರಾಜ್ಞಾ ದಶರಥೇನಾದ್ಯ ಸಪುತ್ರಾ ತ್ವಂ ತಥಾ ಕೃತಾ ॥ ೨೮

ಪಾಪೇನಾನೃತಸಾಂತ್ವೇನ ಬಾಲೇ ನಿತ್ಯಸುಖೋಚಿತೇ ।
ರಾಮಂ ಸ್ಥಾಪಯತಾ ರಾಜ್ಯೇ ಸಾನುಬಂಧಾ ಹತಾ ಹ್ಯಸಿ ॥ ೨೯

ಸಾ ಪ್ರಾಪ್ತಕಾಲಂ ಕೈಕೇಯಿ ಕ್ಷಿಪ್ರಂ ಕುರು ಹಿತಂ ತವ ।
ತ್ರಾಯಸ್ವ ಪುತ್ರಮಾತ್ಮಾನಂ ಮಾಂ ಚ ವಿಸ್ಮಯದರ್ಶನೇ ॥ ೩೦

ಮಂಥರಾಯಾ ವಚಃ ಶ್ರುತ್ವಾ ಶಯನಾತ್ ಸಾ ಶುಭಾನನಾ ।
ಉತ್ತಸ್ಥೌ ಹರ್ಷಸಂಪೂರ್ಣಾ ಚಂದ್ರಲೇಖೇವ ಶಾರದೀ ॥ ೩೧

ಅತೀವ ಸಾ ತು ಸಂಹೃಷ್ಟಾ ಕೈಕೇಯೀ ವಿಸ್ಮಯಾನ್ವಿತಾ ।
ಏಕಮಾಭರಣಂ ತಸ್ಯೈ ಕುಬ್ಜಾಯೈ ಪ್ರದದೌ ಶುಭಮ್ ॥ ೩೨

---

ವನ್ನು ತೊಡೆಯಮೇಲೆ ಮಲಗಿಸಿಕೊಂಡು ಲಾಲಿಸಿದ ತಾಯಿಯಂತಾದೆಯಲ್ಲ! (೨೭). ಉಪೇಕ್ಷೆಯಿಂದ ಸುಮ್ಮನಿದ್ದರೆ ಸರ್ಪವೇನು ಮಾಡುವುದೋ, ಶತ್ರುವೇನು ಮಾಡುವನೋ, ಅಂಥ ಕೆಲಸವನ್ನು ದಶರಥರಾಜನು ನಿನಗೂ ನಿನ್ನ ಮಗನಿಗೂ ಮಾಡಿದ್ದಾನೆ (೨೮). ಹುಡುಗಿ! ನೀನು ಶಾಶ್ವತವಾಗಿ ಸುಖದಲ್ಲಿರಬೇಕಾದವಳು. ಆ ಪಾಪಿಯು ನಿನಗೆ ಸುಳ್ಳುಸುಳ್ಳು ಸವಿಮಾತುಗಳನ್ನು ಹೇಳಿ ರಾಮನನ್ನು ರಾಜ್ಯದಲ್ಲಿ ಸ್ಥಾಪಿಸಿ ಬಿಡುತ್ತಾನೆ. ನೀನು ಬಂಧುಬಾಂಧವ ಸಹಿತ ಹಾಳಾಗಿಹೋದೆ (೨೯). ಆದ್ದರಿಂದ ಕೈಕೇಯಿ, ಈ ಸಮಯದಲ್ಲಿ ನಿನ್ನ ಹಿತರಕ್ಷಣೆಗೆ ಬೇಕಾದ್ದನ್ನು ಬೇಗನೆ ಮಾಡಿಕೊ. ನಿನ್ನ ಮಗನನ್ನೂ ನಿನ್ನನ್ನೂ ನನ್ನನ್ನೂ ಉಳಿಸಿಕೊ. ನನ್ನ ಮಾತು ಕೇಳಿ ನಿನಗೆ ಆಶ್ಚರ್ಯವಾಗುತ್ತಿದೆಯೆ ?" ಎಂದಳು (೩೦). ಆದರೆ ಮಂಥರೆಯ ವಚನವನ್ನು ಕೇಳಿ ಕೈಕೇಯಿಯ ಮುಖವು ಅರಳಿತು. ಅವಳು ಹರ್ಷದಿಂದ ಶರತ್ಕಾಲದ ಚಂದ್ರಲೇಖೆಯಂತೆ ಬೆಳಗುತ್ತ ಹಾಸಿಗೆಯಿಂದ ಎದ್ದು ಕುಳಿತಳು. ಅವಳು ಅತ್ಯಂತ ಸಂತುಷ್ಟಳಾಗಿ, ಮಂಥರೆಯು ಹೀಗೇಕೆ ಮಾತನಾಡುವ ಳೆಂದು ಅಚ್ಚರಿಗೊಳ್ಳುತ್ತ ಒಂದು ಉತ್ತಮವಾದ ಆಭರಣವನ್ನು ತೆಗೆದು

ದತ್ವಾ ತ್ವಾಭರಣಂ ತಸ್ಯೈ ಕುಬ್ಜಾಯೈ ಪ್ರಮದೋತ್ತಮಾ ।
ಕೈಕೇಯೀ ಮಂಥರಾಂ ದೃಷ್ಟ್ವಾ ಪುನರೇವಾಬ್ರವೀದಿದಮ್ ॥ ೩೩

ಇದಂ ತು ಮಂಥರೇ ಮಹ್ಯಮಾಖ್ಯಾಸಿ ಪರಮಂ ಪ್ರಿಯಮ್ ।
ಏತನ್ಮೇ ಪ್ರಿಯಮಾಖ್ಯಾತಂ ಭೂಯಃ ಕಿಂ ವಾ ಕರೋಮಿ ತೇ ॥ ೩೪

ರಾಮೇ ವಾ ಭರತೇ ವಾಹಂ ವಿಶೇಷಂ ನೋಪಲಕ್ಷಯೇ ।
ತಸ್ಮಾತ್ತುಷ್ಟಾಸ್ಮಿ ಯದ್ರಾಜಾ ರಾಮಂ ರಾಜ್ಯೇಽಭಿಷೇಕ್ಷ್ಯತಿ ॥ ೩೫

ನ ಮೇ ಪರಂ ಕಿಂಚಿದಿತಸ್ತ್ವಯಾ ಪುನಃ ।
ಪ್ರಿಯಂ ಪ್ರಿಯಾರ್ಹೇ ಸುವಚಂ ವಚಃ ಪರಮ್ ।
ತಥಾ ಹ್ಯವೋಚಸ್ತ್ವಮತಃ ಪ್ರಿಯೋತ್ತರಂ
ಪರಂ ವರಂ ತೇ ಪ್ರದದಾಮಿ ತಂ ವೃಣು ॥ ೩೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಮಃ ಸರ್ಗಃ

---

ಕುಬ್ಜೆಗೆ ಬಹುಮಾನವಾಗಿ ಕೊಟ್ಟಳು (೩೧-೩೨). ಕೈಕೇಯಿಯು ಹೀಗೆ ಬಹುಮಾನವನ್ನು ಕೊಟ್ಟು ಮಂಥರೆಯನ್ನು ನೋಡುತ್ತ ಈ ರೀತಿ ಹೇಳಿದಳು : "ಮಂಥರೆ, ರಾಮನ ಪಟ್ಟಾಭಿಷೇಕದ ವಿಷಯವು ನನಗೆ ಪರಮಾನಂದಕರವಾದ ಸುದ್ದಿ. ಈ ಸುದ್ದಿಯನ್ನು ತಿಳಿಸಿದ ನಿನಗೆ ಇನ್ನೂ ಪ್ರಿಯವಾದ ಯಾವ ಕಾರ್ಯವನ್ನು ಮಾಡಿಕೊಡಲಿ ? (೩೩-೩೪). ರಾಮನಲ್ಲಾಗಲಿ ಭರತನಲ್ಲಾಗಲಿ ನನಗೆ ಯಾವ ವಿಶೇಷವೂ ಕಾಣಲಿಲ್ಲ. ಮಹಾರಾಜನು ರಾಮನಿಗೆ ರಾಜ್ಯಾಭಿಷೇಕ ಮಾಡುವನೆಂಬುದನ್ನು ಕೇಳಿ ನನಗೆ ಆನಂದವಾಗಿದೆ. ಮಂಥರೆ, ನನಗೆ ಇದಕ್ಕಿಂತಲೂ ಹೆಚ್ಚು ಆನಂದಕರವಾದ ಇನ್ನೊಂದು ವಾರ್ತೆಯನ್ನು ಹೇಳಲು ನಿನಗೆ ಶಕ್ಯವಿಲ್ಲ! ರಾಮನ ಪಟ್ಟಾಭಿಷೇಕವು ನನಗೆ ಸರ್ವೋತ್ತಮವಾದ ಶುಭವಾರ್ತೆ ! ನಿನಗೆ ಇನ್ನೂ ಬೇಕಾದ್ದನ್ನು ಕೇಳಿಕೊ; ಕೊಡುತ್ತೇನೆ" ಎಂದಳು (೩೫-೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಏಳನೆಯ ಸರ್ಗ

## ಅಷ್ಟಮಃ ಸರ್ಗಃ

### ಮಂಥರೋಪಜಾಪಃ

ಮಂಥರಾ ತ್ವಭ್ಯಸೂಯ್ಯೈನಾಮುತ್ಸೃಜ್ಯಾಭರಣಂ ಚ ತತ್ ।
ಉವಾಚೇದಂ ತತೋ ವಾಕ್ಯಂ ಕೋಪದುಃಖಸಮನ್ವಿತಾ ॥ ೧

ಹರ್ಷಂ ಕಿಮಿದಮಸ್ಥಾನೇ ಕೃತವತ್ಯಸಿ ಬಾಲಿಶೇ ।
ಶೋಕಸಾಗರಮಧ್ಯಸ್ಥಮಾತ್ಮಾನಂ ನಾವಬುಧ್ಯಸೇ ॥ ೨

ಮನಸಾ ಪ್ರಹಸಾಮಿ ತ್ವಾಂ ದೇವಿ ದುಃಖಾರ್ದಿತಾ ಸತೀ ।
ಯಚ್ಛೋಚಿತವ್ಯೇ ಹೃಷ್ಟಾಸಿ ಪ್ರಾಪ್ಯೇದಂ ವ್ಯಸನಂ ಮಹತ್ ॥ ೩

ಶೋಚಾಮಿ ದುರ್ಮತಿತ್ವಂ ತೇ ಕಾ ಹಿ ಪ್ರಾಜ್ಞಾ ಪ್ರಹರ್ಷಯೇತ್ ।
ಅರೇಃ ಸಪತ್ನೀಪುತ್ರಸ್ಯ ವೃದ್ಧಿಂ ಮೃತ್ಯೋರಿವಾಗತಾಮ್ ॥ ೪

## ಸರ್ಗ ೮

### ಕೈಕೇಯಿಗೆ ಮಂಥರೆಯ ದುರ್ಬೋಧನೆ.

ಆಗ ಮಂಥರೆಯು ಕೈಕೇಯಿಯನ್ನು ನಿಂದಿಸುತ್ತ, ಅವಳು ಕೊಟ್ಟ ಆಭರಣವನ್ನು ಸಿಟ್ಟಿನಿಂದ ತೆಗೆದು ಬಿಸಾಡಿದಳು. ಅನಂತರ ದುಃಖಿಸುತ್ತ ಈ ಮಾತನ್ನು ಹೇಳಿದಳು (೧) : "ಎಲೈ ಮೂರ್ಖಳೆ, ಅನುಚಿತವಾದ ಸಂದರ್ಭದಲ್ಲಿ ಸಂತೋಷ ಪಡುತ್ತಿರುವುದೇಕೆ? ಶೋಕಸಮುದ್ರದ ನಡುವೆ ಮುಳುಗಿಹೋಗುತ್ತಿರುವೆ ಯೆಂಬುದು ನಿನಗೆ ತಿಳಿಯದೆ ? (೨). ದೇವಿ, ನನಗೆ ಬಹಳ ದುಃಖವಾಗಿದ್ದರೂ ನಿನ್ನನ್ನು ನೋಡಿ ಮನಸ್ಸಿನಲ್ಲಿ ನಗು ಬರುತ್ತಿದೆ. ಇಂಥ ಮಹತ್ತರವಾದ ಸಂಕಟವು ಬಂದು ವ್ಯಥೆಪಡಬೇಕಾಗಿರುವಾಗ ಸಂತೋಷಪಡುತ್ತಿದ್ದೀಯೆ.. ನಿನ್ನ ಬುದ್ಧಿಗೇಡಿತನಕ್ಕಾಗಿ ನನಗೆ ದುಃಖವಾಗುತ್ತದೆ. ಸವತಿಯ ಮಗನೆಂದರೆ ಶತ್ರುವೇ ಸರಿ. ಅವನ ಅಭ್ಯುದಯ ಮೃತ್ಯುವಿನ ಅಭ್ಯುದಯವಿದ್ದಂತೆ. ಅದನ್ನು ಕಂಡು ಯಾವ

ಭರತಾದೇವ ರಾಮಸ್ಯ ರಾಜ್ಯಸಾಧಾರಣಾದ್ಭಯಮ್ ।
ತದ್ವಿಚಿಂತ್ಯ ವಿಷಣ್ಣಾಸ್ಮಿ ಭಯಂ ಭೀತಾದ್ಧಿ ಜಾಯತೇ ॥ ೫

ಲಕ್ಷ್ಮಣೋ ಹಿ ಮಹೇಷ್ವಾಸೋ ರಾಮಂ ಸರ್ವಾತ್ಮನಾ ಗತಃ ।
ಶತ್ರುಘ್ನಶ್ಚಾಪಿ ಭರತಂ ಕಾಕುತ್ಸ್ಥಂ ಲಕ್ಷ್ಮಣೋ ಯಥಾ ॥ ೬

ಪ್ರತ್ಯಾಸನ್ನಕ್ರಮೇಣಾಪಿ ಭರತಸ್ಯೈವ ಭಾಮಿನಿ ।
ರಾಜ್ಯಕ್ರಮೋ ವಿಪ್ರಕೃಷ್ಟಸ್ತಯೋಸ್ತಾವದ್ಯವೀಯಸೋಃ ॥ ೭

ವಿದುಷಃ ಕ್ಷತ್ರಚಾರಿತ್ರೇ ಪ್ರಾಜ್ಞಸ್ಯ ಪ್ರಾಪ್ತಕಾರಿಣಃ ।
ಭಯಾತ್ ಪ್ರವೇಪೇ ರಾಮಸ್ಯ ಚಿಂತಯಂತೀ ತವಾತ್ಮಜಮ್ ॥ ೮

ಸುಭಗಾ ಖಲು ಕೌಸಲ್ಯಾ ಯಸ್ಯಾಃ ಪುತ್ರೋಽಭಿಷೇಕ್ಷ್ಯತೇ ।
ಯೌವರಾಜ್ಯೇನ ಮಹತಾ ಶ್ವಃ ಪುಷ್ಯೇಣ ದ್ವಿಜೋತ್ತಮೈಃ ॥ ೯

---

ಬುದ್ಧಿವಂತಳು ತಾನೆ ಹರ್ಷಿಸುತ್ತಾಳೆ ? (೩-೪). ಭರತನಿಗೆ ರಾಜ್ಯದಲ್ಲಿ ಸಮಾನವಾದ ಅಧಿಕಾರವಿರುವುದರಿಂದ ರಾಮನಿಗೆ ಭರತನ ಭೀತಿ ಇದ್ದೇ ಇದೆ. ಅದನ್ನು ಆಲೋಚಿಸಿ ನನಗೆ ಖೇದವಾಗುತ್ತಿದೆ. ಏಕೆಂದರೆ, ಭೀತಿಪಟ್ಟವನಿಂದಲೇ ವಿಪತ್ತು ಬರುತ್ತದೆ (೫). ಮಹಾಧನುರ್ಧಾರಿಯಾದ ಲಕ್ಷ್ಮಣನು ಸರ್ವವಿಧದಲ್ಲಿಯೂ ರಾಮನನ್ನು ಅನುಸರಿಸಿ ನಡೆಯುತ್ತಿದ್ದಾನೆ. ಲಕ್ಷ್ಮಣನಂತೆ ಶತ್ರುಘ್ನನು ಭರತನನ್ನು ಅನುಸರಿಸಿದ್ದಾನೆ. ಜನ್ಮಕ್ರಮದಿಂದ ರಾಮನ ಒತ್ತಿನಲ್ಲಿ ಭರತನಿರುವುದರಿಂದ ಕಿರಿಯರಾದ ಲಕ್ಷ್ಮಣ-ಶತ್ರುಘ್ನರಿಗೆ ರಾಜ್ಯಪ್ರಾಪ್ತಿಯು ಭರತನಿಗಿಂತ ದೂರವಾಗಿದೆ (ರಾಜ್ಯವನ್ನು ಪಡೆಯಲು ಎರಡನೆಯ ಅಧಿಕಾರಸ್ಥಾನ ಭರತನಿಗೆ ಸಲ್ಲುತ್ತದೆ.) (೬-೭). ರಾಮನಾದರೋ ಬುದ್ಧಿವಂತ. ಕ್ಷತ್ರಿಯ ಧರ್ಮವನ್ನು ಬಲ್ಲವನು. ಒದಗಿದ ಕಾರ್ಯವನ್ನು ಕಾಲೋಚಿತವಾಗಿ ನಿರ್ವಹಿಸಿ ಮುಗಿಸತಕ್ಕವನು. ಭರತನ ಗತಿಯೇನೆಂದು ಚಿಂತಿಸಿದರೆ ರಾಮನಿಂದ ಭಯವಾಗಿ ನನಗೆ ನಡುಕಹುಟ್ಟುವುದು (೮). ಕೌಸಲ್ಯೆಯೇ ಭಾಗ್ಯಶಾಲಿ. ನಾಳೆ ಪುಷ್ಯನಕ್ಷತ್ರದಲ್ಲಿ ಅವಳ ಮಗನನ್ನು ದೊಡ್ಡದಾದ ಯುವರಾಜಪದವಿಯಲ್ಲಿ ಕುಳ್ಳಿರಿಸಿ ಬ್ರಾಹ್ಮಣರು ಪಟ್ಟಾಭಿಷೇಕ

ಪ್ರಾಪ್ತಾಂ ವಸುಮತೀಂ ಪ್ರೀತಿಂ ಪ್ರತೀತಾಂ ತಾಂ ಹತದ್ವಿಷಮ್ ।
ಉಪಸ್ಥಾಸ್ಯಸಿ ಕೌಸಲ್ಯಾಂ ದಾಸೀವ ತ್ವಂ ಕೃತಾಂಜಲಿಃ ॥ ೧೦

ಏವಂ ಚ ತ್ವಂ ಸಹಾಸ್ಮಾಭಿಸ್ತಸ್ಯಾಃ ಪ್ರೇಷ್ಯಾ ಭವಿಷ್ಯಸಿ ।
ಪುತ್ರಶ್ಚ ತವ ರಾಮಸ್ಯ ಪ್ರೇಷ್ಯಭಾವಂ ಗಮಿಷ್ಯತಿ ॥ ೧೧

ಹೃಷ್ಟಾಃ ಖಲು ಭವಿಷ್ಯಂತಿ ರಾಮಸ್ಯ ಪರಮಾಃ ಸ್ತ್ರಿಯಃ ।
ಅಪ್ರಹೃಷ್ಟಾ ಭವಿಷ್ಯಂತಿ ಸ್ನುಷಾಸ್ತೇ ಭರತಕ್ಷಯೇ ॥ ೧೨

ತಾಂ ದೃಷ್ಟ್ವಾ ಪರಮಪ್ರೀತಾ ಬ್ರುವಂತೀ ಮಂಥರಾಂ ತತಃ ।
ರಾಮಸ್ಯೈವ ಗುಣಾನ್ ದೇವೀ ಕೈಕೇಯೀ ಪ್ರಶಶಂಸ ಹ ॥ ೧೩

ಧರ್ಮಜ್ಞೋ ಗುರುಭಿರ್ದಾಂತಃ ಕೃತಜ್ಞಃ ಸತ್ಯವಾಕ್ ಶುಚಿಃ ।
ರಾಮೋ ರಾಜ್ಞಃ ಸುತೋ ಜ್ಯೇಷ್ಠೋ ಯೌವರಾಜ್ಯಮತೋಽರ್ಹತಿ ॥

ಭ್ರಾತೄನ್ ಭೃತ್ಯಾಂಶ್ಚ ದೀರ್ಘಾಯುಃ ಪಿತೃವತ್ಪಾಲಯಿಷ್ಯತಿ ।
ಸಂತಪ್ಯಸೇ ಕಥಂ ಕುಬ್ಜೇ ಶ್ರುತ್ವಾ ರಾಮಾಭಿಷೇಚನಮ್ ॥ ೧೫

---

ಮಾಡುವರು. ಅವಳು ರಾಜ್ಯಲಕ್ಷ್ಮಿಯನ್ನು ಪಡೆದು ಸವತಿಯರನ್ನು ತುಳಿದು ನೆಮ್ಮದಿಯಾಗಿರುವಳು. ನೀನು ಕೈಮುಗಿದುಕೊಂಡು ತೊತ್ತಿನಂತೆ ಕೌಸಲ್ಯೆಯನ್ನು ಸೇವಿಸುತ್ತಿರಬೇಕಾಗುವುದು (೯-೧೦). ನಮ್ಮ ಜೊತೆಗೆ ನೀನೊಬ್ಬಳು ಅವಳ ಪರಿಚಾರಕಳಾಗುತ್ತೀಯೆ. ನಿನ್ನ ಮಗನು ರಾಮನಿಗೆ ದಾಸನಾಗುತ್ತಾನೆ. ಆಗ ರಾಮನ ಹೆಂಡತಿಗೂ ಅವಳ ಸಖಿಯರಿಗೂ ಆನಂದವಾಗುತ್ತದೆ. ಭರತನು ಹೀಗೆ ಹಾಳಾದರೆ ನಿನ್ನ ಸೊಸೆಯರು ಕೊರಗುತ್ತ ಇರಬೇಕಾಗುವುದು" ಎಂದಳು (೧೧-೧೨). ಆಗಲೂ ಕೈಕೇಯೀ ದೇವಿಯು ಪರಮಸಂತೋಷದಿಂದ ಮಂಥರೆಯನ್ನು ನೋಡುತ್ತ ಶ್ರೀರಾಮನ ಸದ್ಗುಣಗಳನ್ನು ಕೊಂಡಾಡಿದಳು : "ಕುಬ್ಜೆ, ರಾಮನು ಧರ್ಮವನ್ನು ಬಲ್ಲವನು; ಗುರುಹಿರಿಯರಿಂದ ಪಳಗಿ ವಿನೀತನಾಗಿದ್ದಾನೆ. ಕೃತಜ್ಞ, ಸತ್ಯಸಂಧ, ಮನೋವಾಕ್ಕಾಯಗಳಲ್ಲಿ ಶುಚಿಯಾಗಿದ್ದಾನೆ. ಅಲ್ಲದೆ ಮಹಾರಾಜನಿಗೆ ಹಿರಿಯ ಮಗನಾದ್ದರಿಂದ ಯುವರಾಜಪದವಿಗೆ ಅರ್ಹ (೧೩-೧೪). ಅವನು ತನ್ನ ತಮ್ಮಂದಿರನ್ನೂ ಆಶ್ರಿತಜನರನ್ನೂ ದೀರ್ಘಾಯುವಾಗಿ ತಂದೆಯಂತೆ

ಭರತಶ್ಚಾಪಿ ರಾಮಸ್ಯ ಧ್ರುವಂ ವರ್ಷಶತಾತ್ ಪರಮ್ ।
ಪಿತೃಪೈತಾಮಹಂ ರಾಜ್ಯಂ ಪ್ರಾಪ್ನುಯಾತ್ ಪುರುಷರ್ಷಭಃ ॥ ೧೬

ಸಾ ತ್ವಮಭ್ಯುದಯೇ ಪ್ರಾಪ್ತೇ ದಹ್ಯಮಾನೇವ ಮಂಥರೇ ।
ಭವಿಷ್ಯತಿ ಚ ಕಲ್ಯಾಣೇ ಕಿಮರ್ಥಂ ಪರಿತಪ್ಯಸೇ ॥ ೧೭

ಯಥಾ ಮೇ ಭರತೋ ಮಾನ್ಯಸ್ತಥಾ ಭೂಯೋಽಪಿ ರಾಘವಃ ।
ಕೌಸಲ್ಯಾತೋಽತ್ಯರಿಕ್ತಂ ಚ ಸ ತು ಶುಶ್ರೂಷತೇ ಹಿ ಮಾಮ್ ॥ ೧೮

ರಾಜ್ಯಂ ಚ ಯದಿ ರಾಮಸ್ಯ ಭರತಸ್ಯಾಪಿ ತತ್ತದಾ ।
ಮನ್ಯತೇ ಹಿ ಯಥಾತ್ಮಾನಂ ತಥಾ ಭ್ರಾತ್ರೂಂಶ್ಚ ರಾಘವಃ ॥ ೧೯

ಕೈಕೇಯ್ಯಾ ವಚನಂ ಶ್ರುತ್ವಾ ಮಂಥರಾ ಭೃಶದುಃಖಿತಾ ।
ದೀರ್ಘಮುಷ್ಣಂ ವಿನಿಶ್ವಸ್ಯ ಕೈಕೇಯೀಮಿದಮಬ್ರವೀತ್ ॥ ೨೦

---

ಪಾಲಿಸಿಕೊಂಡಿರುವನು. ಹೀಗಿರುವಾಗ, ಎಲೇ ಕುಬ್ಜೆ, ರಾಮಾಭಿಷೇಕವನ್ನು ಕೇಳಿ ನೀನೇಕೆ ಉರಿದುಬೀಳುತ್ತೀಯೆ ? ನೂರು ವರ್ಷಗಳ ಮೇಲಾದರೂ ಪುರುಷಶ್ರೇಷ್ಠನಾದ ಭರತನು ಬಯಸಿದರೆ, ಪಿತ್ರಾರ್ಜಿತವಾದ ರಾಮನ ರಾಜ್ಯದಲ್ಲಿ ಒಂದು ಭಾಗವನ್ನು ತೆಗೆದುಕೊಳ್ಳಬಲ್ಲನು (೧೫-೧೬). ನಮಗೆ ಎಲ್ಲಾ ಬಗೆಯ ಶ್ರೇಯಸ್ಸು ದೊರಕಿರುವಾಗ ಮಂಗಳಕಾರ್ಯವು ನಡೆಯಬೇಕಾಗಿರುವಲ್ಲಿ, ಮಂಥರೆ, ನೀನೇಕೆ ಉರಿದುಹೋಗುವವಳಂತೆ ಸಂಕಟಪಡುತ್ತಿದ್ದೀಯೆ ? (೧೭). ನನಗೆ ಭರತನು ಎಷ್ಟು ಬೇಕಾದವನೋ ರಾಮನೂ ಅಷ್ಟೇ ಬೇಕಾದವನು. ರಾಮನು ಇನ್ನೂ ಒಂದು ತೂಕ ಹೆಚ್ಚು. ಅವನು ಕೌಸಲ್ಯೆಗಿಂತಲೂ ಹೆಚ್ಚಾಗಿ ನನ್ನನ್ನೇ ಪ್ರೀತಿಯಿಂದ ಸೇವಿಸುತ್ತಿದ್ದಾನೆ. ರಾಮನಿಗೆ ರಾಜ್ಯ ಬಂದರೆ ಭರತನಿಗೆ ಬಂದ ಹಾಗೆಯೇ ಸರಿ. ರಾಘವನು ತಮ್ಮಂದಿರನ್ನು ತನ್ನಂತೆಯೇ ನೋಡಿಕೊಳ್ಳುತ್ತಿದ್ದಾನೆ" ಎಂದು ಕೈಕೇಯಿಯು ಹೇಳಿದಳು (೧೮-೧೯). ಅವಳ ಮಾತನ್ನು ಕೇಳಿ ಮಂಥರೆಗೆ ಬಹಳ ದುಃಖವಾಯಿತು. ಅವಳು ಬಿಸಿಯಾದ ನಿಟ್ಟುಸಿರನ್ನು

ಅನರ್ಥದರ್ಶಿನೀ ಮೌಖ್ಯಾನ್ನಾತ್ಮಾನಮವಬುಧ್ಯಸೇ ।
ಶೋಕವ್ಯಸನವಿಸ್ತೀರ್ಣೇ ಮಜ್ಜಂತೀ ದುಃಖಸಾಗರೇ ॥ ೨೧

ಭವಿತಾ ರಾಘವೋ ರಾಜಾ ರಾಘವಸ್ಯ ಚ ಯಃ ಸುತಃ ।
ರಾಜವಂಶಾತ್ತು ಭರತಃ ಕೈಕೇಯಿ ಪರಿಹಾಸ್ಯತೇ ॥ ೨೨

ನ ಹಿ ರಾಜ್ಞಃ ಸುತಾಃ ಸರ್ವೇ ರಾಜ್ಯೇ ತಿಷ್ಠಂತಿ ಭಾಮಿನಿ ।
ಸ್ಥಾಪ್ಯಮಾನೇಷು ಸರ್ವೇಷು ಸುಮಹಾನನಯೋ ಭವೇತ್ ॥ ೨೩

ತಸ್ಮಾಜ್ಜ್ಯೇಷ್ಠೇ ಹಿ ಕೈಕೇಯಿ ರಾಜ್ಯತಂತ್ರಾಣಿ ಪಾರ್ಥಿವಾಃ ।
ಸ್ಥಾಪಯಂತ್ಯನವದ್ಯಾಂಗಿ ಗುಣವತ್ಸ್ವಿತರೇಷು ಚ ॥ ೨೪

ಅಸಾವತ್ಯಂತನಿರ್ಭಗ್ನಸ್ತವ ಪುತ್ರೋ ಭವಿಷ್ಯತಿ ।
ಅನಾಥವತ್ ಸುಖೇಭ್ಯಶ್ಚ ರಾಜವಂಶಾಚ್ಚ ಹಾಸ್ಯತೇ ॥ ೨೫

ಸಾಹಂ ತ್ವದರ್ಥೇ ಸಂಪ್ರಾಪ್ತಾ ತ್ವಂ ತು ಮಾಂ ನಾವಬುಧ್ಯಸೇ ।
ಸಪತ್ನಿವೃದ್ಧೌ ಯಾ ಮೇ ತ್ವಂ ಪ್ರದೇಯಂ ದಾತುಮಿಚ್ಛಸಿ ॥ ೨೬

---

ಬಿಟ್ಟು ಕೈಕೇಯಿಯನ್ನು ಕುರಿತು ಹೀಗೆಂದಳು (೨೦) : "ನಿನಗೆ ಮುಂದೆ ಬರುವ ಅನರ್ಥವು ಕಾಣುತ್ತಿದ್ದರೂ ಮೂರ್ಖತನದಿಂದ ನಿನ್ನನ್ನೇ ನೀನು ತಿಳಿದುಕೊಳ್ಳುತ್ತಿಲ್ಲ. ನಾನಾ ಬಗೆಯ ಕಷ್ಟಸಂಕಟಗಳಿಂದ ತುಂಬಿದ ದೊಡ್ಡ ದುಃಖಸಮುದ್ರದಲ್ಲಿ ಮುಳುಗಿಹೋಗುತ್ತಿದ್ದೀಯೆ (೨೧). ರಾಮನು ರಾಜನಾದರೆ ಮುಂದೆ ಅವನ ಮಗನೇ ರಾಜನಾಗುವನು. ಕೈಕೇಯಿ, ಭರತನು ರಾಜವಂಶದ ಪರಂಪರೆಯಿಂದ ತಪ್ಪಿಹೋಗುತ್ತಾನೆ. ರಾಜನ ಮಕ್ಕಳೆಲ್ಲರೂ ರಾಜರಾಗುವುದಿಲ್ಲ. ಎಲ್ಲರನ್ನೂ ರಾಜರನ್ನಾಗಿ ಮಾಡುವುದು ದೊಡ್ಡ ಅನೀತಿ (೨೨-೨೩). ಆದ್ದರಿಂದ ಕೈಕೇಯಿ, ಕ್ಷತ್ರಿಯರು ತಮ್ಮ ಹಿರಿಯ ಮಗನಿಗೆ ರಾಜ್ಯಭಾರವನ್ನು ವಹಿಸಿ ಕೊಡುತ್ತಾರೆ (೨೪). ನಿನ್ನ ಮಗನು ಅತ್ಯಂತ ಕಷ್ಟಕ್ಕೆ ಸಿಕ್ಕಿಕೊಳ್ಳುವನು. ಅವನಿಗೆ ಸುಖವೂ ಇಲ್ಲ. ರಾಜವಂಶೀಯನೆಂಬ ಹೆಸರೂ ಇಲ್ಲವಾಗಿ ಅನಾಥನಂತಾಗುವನು (೨೫). ಇದನ್ನೆಲ್ಲಾ ತಿಳಿದುಕೊಂಡು ನಾನು ನಿನಗೋಸ್ಕರ ಬಂದೆ. ನನ್ನನ್ನು ನೀನು ಅರ್ಥಮಾಡಿಕೊಳ್ಳುತ್ತಲೇ ಇಲ್ಲ. ನಿನ್ನ ಸವತಿಗೆ ಅಭ್ಯುದಯವಾಗು

ಧ್ರುವಂ ತು ಭರತಂ ರಾಮಃ ಪ್ರಾಪ್ಯ ರಾಜ್ಯಮಕಂಟಕಮ್ ।
ದೇಶಾಂತರಂ ನಾಯಯಿತಾ ಲೋಕಾಂತರಮಥಾಪಿ ವಾ ॥ ೨೭

ಬಾಲ ಏವ ಹಿ ಮಾತುಲ್ಯಂ ಭರತೋ ನಾಯಿತಸ್ತ್ವಯಾ ।
ಸಂನಿಕರ್ಷಾಚ್ಚ ಸೌಹಾರ್ದಂ ಜಾಯತೇ ಸ್ಥಾವರೇಷ್ವಪಿ ॥ ೨೮

ಭರತಸ್ಯಾಪ್ಯನುವಶಃ ಶತ್ರುಘ್ನೋಽಪಿ ಸಮಂ ಗತಃ ।
ಲಕ್ಷ್ಮಣೋ ಹಿ ಯಥಾ ರಾಮಂ ತಥಾಸೌ ಭರತಂ ಗತಃ ॥ ೨೯

ಶ್ರೂಯತೇ ಚ ದ್ರುಮಃ ಕಶ್ಚಿಚ್ಛೇತ್ತವ್ಯೋ ವನಜೀವಿಭಿಃ ।
ಸಂನಿಕರ್ಷಾದಿಷೀಕಾಭಿರ್ಮೋಚಿತಃ ಪರಮಾದ್ಭಯಾತ್ ॥ ೩೦

ಗೋಪ್ತಾ ಹಿ ರಾಮಂ ಸೌಮಿತ್ರಿರ್ಲಕ್ಷ್ಮಣಂ ಚಾಪಿ ರಾಘವಃ ।
ಅಶ್ವಿನೋರಿವ ಸೌಭ್ರಾತ್ರಂ ತಯೋರ್ಲೋಕೇಷು ವಿಶ್ರುತಮ್ ॥ ೩೧

---

ತ್ತಿದ್ದರೆ, ನನಗೆ ಬಹುಮಾನವನ್ನು ಕೊಡಲು ಬರುತ್ತೀಯೆ (೨೬). ರಾಮನಿಗೆ ರಾಜ್ಯವು ಸಿಕ್ಕಿದರೆ ಕಂಟಕವು ತೊಲಗಿ ಹೋಗಲೆಂದು, ಅವನು ನಿಶ್ಚಯವಾಗಿಯೂ ಭರತನನ್ನು ದೇಶಭ್ರಷ್ಟನನ್ನಾಗಿ ಮಾಡುವನು, ಇಲ್ಲವೆ ಅವನನ್ನು ಕೊಂದುಹಾಕುವನು (೨೭). ಭರತನು ಚಿಕ್ಕವನಾಗಿರುವಾಗಲೇ ನೀನು ಅವನನ್ನು ಸೋದರಮಾವನ ಮನೆಗೆ ಕಳಿಸಿಬಿಟ್ಟಿದ್ದೀಯೆ. (ಮಹಾರಾಜನಿಗೆ ಅವನ ಮೇಲೆ ಪ್ರೀತಿಯು ಬೆಳೆಯುವುದಾದರೂ ಹೇಗೆ?) ಮರ ಬಳ್ಳಿಗಳಿಗೆ ಕೂಡ ಹತ್ತಿರ ಇರುವುದರಿಂದ ಪರಸ್ಪರ ಪ್ರೀತಿಯು ಬೆಳೆಯುತ್ತದೆ (ಬಳ್ಳಿಯು ಹತ್ತಿರವಿರುವ ಮರವನ್ನು ಆಲಿಂಗಿಸಿಕೊಳ್ಳುತ್ತದೆ) (೨೮). ಭರತನ ಜೊತೆಗೆ ಶತ್ರುಘ್ನನೂ ಹೋಗಿಬಿಟ್ಟಿದ್ದಾನೆ. ಲಕ್ಷ್ಮಣನು ರಾಮನೊಡನೆಯೇ ಇರುವಂತೆ ಅವನು ಭರತನೊಡನೆ ಇದ್ದು ಬಿಡುತ್ತಾನೆ (೨೯). ಕಾಡಿನಲ್ಲಿರತಕ್ಕ ಕಟ್ಟಿಗೆ ಕಡಿಯುವವರು ಒಂದು ಮರವನ್ನು ಕತ್ತರಿಸಲು ಹೋದರಂತೆ. ಆಗ ಮರದ ಸುತ್ತಲೂ ಇದ್ದ ಮುಳ್ಳಿನ ಪೊದೆಗಳು ಆ ಮರವನ್ನು ರಕ್ಷಿಸಿ ವಿಪತ್ತಿನಿಂದ ಪಾರುಮಾಡಿದುವಂತೆ (೩೦). (ಅದರ ಹಾಗೆಯೇ ಇದು) ಆ ಸುಮಿತ್ರೆಯ ಮಗನು ರಾಮನಿಗೆ ಬೆಂಬಲವಾಗಿರುತ್ತಾನೆ. ಅಶ್ವಿನೀ

ತಸ್ಮಾನ್ನ ಲಕ್ಷ್ಮಣೇ ರಾಮಃ ಪಾಪಂ ಕಿಂಚಿತ್ಕರಿಷ್ಯತಿ ।
ರಾಮಸ್ತು ಭರತೇ ಪಾಪಂ ಕುರ್ಯಾದಿತಿ ನ ಸಂಶಯಃ ॥ ೩೨

ತಸ್ಮಾದ್ರಾಜಗೃಹಾದ್ದೇವಿ ವನಂ ಗಚ್ಛತು ತೇ ಸುತಃ ।
ಏತದ್ಧಿ ರೋಚತೇ ಮಹ್ಯಂ ಭೃಶಂ ಚಾಪಿ ಹಿತಂ ತವ ॥ ೩೩

ಏವಂ ತೇ ಜ್ಞಾತಿಪಕ್ಷಸ್ಯ ಶ್ರೇಯಶ್ಚೈವ ಭವಿಷ್ಯತಿ ।
ಯದಿ ಚೇದ್ಭರತೋ ಧರ್ಮಾತ್ ಪಿತ್ರ್ಯಂ ರಾಜ್ಯಮವಾಪ್ಸ್ಯತಿ ॥ ೩೪

ಸ ತೇ ಸುಖೋಚಿತೋ ಬಾಲೋ ರಾಮಸ್ಯ ಸಹಜೋ ರಿಪುಃ ।
ಸಮೃದ್ಧಾರ್ಥಸ್ಯ ನಷ್ಟಾರ್ಥೋ ಜೀವಿಷ್ಯತಿ ಕಥಂ ವಶೇ ॥ ೩೫

ಅಭಿದ್ರುತಮಿವಾರಣ್ಯೇ ಸಿಂಹೇನ ಗಜಯೂಥಪಮ್ ।
ಪ್ರಚ್ಛಾದ್ಯಮಾನಂ ರಾಮೇಣ ಭರತಂ ತ್ರಾತುಮರ್ಹಸಿ ॥ ೩೬

ದರ್ಪಾನ್ನಿರಾಕೃತಾ ಪೂರ್ವಂ ತ್ವಯಾ ಸೌಭಾಗ್ಯವತ್ತಯಾ ।
ರಾಮಮಾತಾ ಸಪತ್ನೀ ತೇ ಕಥಂ ವೈರಂ ನ ಯಾತಯೇತ್ ॥ ೩೭

---

ದೇವತೆಗಳಂತೆ ಅವರಲ್ಲಿ ಅಣ್ಣತಮ್ಮಂದಿರ ಸ್ನೇಹವು ಲೋಕಪ್ರಸಿದ್ಧವಾಗಿದೆ (೩೧). ಆದ್ದರಿಂದ ರಾಮನು ಲಕ್ಷ್ಮಣನಿಗೆ ಯಾವ ಕೇಡನ್ನೂ ಮಾಡುವುದಿಲ್ಲ. ಅವನು ಭರತನಿಗೆ ಮಾತ್ರ ಕೇಡನ್ನು ಮಾಡುತ್ತಾನೆಂಬುದರಲ್ಲಿ ಸಂದೇಹವೇ ಇಲ್ಲ. ಆದ ಕಾರಣ ನಿನ್ನ ಮಗನು ರಾಜಗೃಹದಿಂದ ನೇರವಾಗಿ ಅರಣ್ಯಕ್ಕೆ ಹೊರಟುಹೋಗಲಿ. ಅದೇ ಒಳ್ಳೆಯದೆಂದು ನನಗೆ ತೋರುತ್ತದೆ. ನಿನಗೂ ಇದು ಶ್ರೇಯಸ್ಕರ (೩೨-೩೩). ಇಲ್ಲದಿದ್ದರೆ ಭರತನು ತಂದೆಯ ಒಪ್ಪಿಗೆಯಿಂದ ರಾಜ್ಯವನ್ನು ಪಡೆದರೆ ಮಾತ್ರ ನಿನಗೂ ನಿನ್ನ ಬಂಧುಗಳಿಗೂ ಶ್ರೇಯಸ್ಸುಂಟು. ಸುಖವಾಗಿ ಇರಬೇಕಾದ ನಿನ್ನ ಹುಡುಗನು ರಾಮನಿಗೆ ಸಹಜವಾಗಿ ಶತ್ರುವಾಗಿದ್ದಾನೆ. ರಾಜ್ಯವನ್ನು ಗಳಿಸಿಕೊಂಡು ಸರ್ವಾಧಿಕಾರವನ್ನು ಪಡೆದ ರಾಮನ ವಶದಲ್ಲಿ, ಸಕಲವನ್ನೂ ಕಳೆದುಕೊಂಡ ಭರತನು ಬದುಕಿರುವುದಾದರೂ ಹೇಗೆ ? (೩೪-೩೫). ವನದಲ್ಲಿ ಸಿಂಹವು ಅಟ್ಟಿಸಿಕೊಂಡು ಹೋಗುವ ಆನೆಯಂತೆ, ರಾಮನ ಆಕ್ರಮಣಕ್ಕೆ ಸಿಕ್ಕಿದ ಭರತನನ್ನು ಉಳಿಸಿಕೊ. ನೀನು ಸೌಭಾಗ್ಯದ ಗರ್ವದಿಂದ ರಾಮನ ತಾಯಿಯನ್ನು ಇದುವರೆಗೆ ಅಲಕ್ಷ್ಯ ಮಾಡಿದ್ದೀಯೆ. ಆ ಸವತಿ ನಿನ್ನ ಮೇಲಿನ ಹಗೆತನವನ್ನು

ಯದಾ ಹಿ ರಾಮಃ ಪೃಥಿವೀಮವಾಪ್ಸ್ಯತಿ
ಪ್ರಭೂತರತ್ನಾಕರಶೈಲಪತ್ತನಾಮ್ ।
ತದಾ ಗಮಿಷ್ಯಸ್ಯಶುಭಂ ಪರಾಭವಂ
ಸಹೈವ ದೀನಾ ಭರತೇನ ಭಾಮಿನಿ ॥ ೩೮

ಯದಾ ಹಿ ರಾಮಃ ಪೃಥಿವೀಮವಾಪ್ಸ್ಯತಿ
ಧ್ರುವಂ ಪ್ರನಷ್ಟೋ ಭರತೋ ಭವಿಷ್ಯತಿ ।
ಅತೋ ಹಿ ಸಂಚಿಂತಯ ರಾಜ್ಯಮಾತ್ಮಜೇ
ಪರಸ್ಯ ಚೈವಾದ್ಯ ವಿವಾಸಕಾರಣಮ್ ॥ ೩೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಮಃ ಸರ್ಗಃ

---

ತೀರಿಸಿಕೊಳ್ಳದೆ ಬಿಟ್ಟಾಳೆ ? (೩೬-೩೭). ಬೇಕಾದಷ್ಟು ಐಶ್ವರ್ಯದಿಂದ ತುಳುಕುವ ಪಟ್ಟಣಗಳಿಂದಲೂ ಬೆಟ್ಟಗಳಿಂದಲೂ ತುಂಬಿದೆ ಈ ರಾಜ್ಯ. ಇಂಥ ಮಹಾರಾಜ್ಯವು ರಾಮನ ಕೈವಶವಾಯಿತೆಂದರೆ, ಕೈಕೇಯಿ, ತೀರಿತು ನಿನ್ನ ಹಣೆಬರಹ. ನಿನಗೂ ಭರತನಿಗೂ ಕಷ್ಟ, ಅವಮಾನ, ದೈನ್ಯ - ಇವು ಕಟ್ಟಿದವು (೩೮). ರಾಮನಿಗೆ ರಾಜ್ಯಾಧಿಕಾರವು ದೊರಕಿದರೆ ಭರತನು ನಿಶ್ಚಯವಾಗಿ ಹಾಳಾಗಿಹೋಗುವನು. ಆದ್ದರಿಂದ ನಿನ್ನ ಮಗನಿಗೆ ರಾಜ್ಯ ದೊರೆಯುವುದು ಹೇಗೆ, ಇನ್ನೊಬ್ಬ ಆ ಶತ್ರುವನ್ನು ದೇಶದಿಂದ ಹೊರಡಿಸುವುದು ಹೇಗೆ - ಎಂಬುದನ್ನು ಆಲೋಚಿಸು" ಎಂದು ಮಂಥರೆಯು ನುಡಿದಳು (೩೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಟನೆಯ ಸರ್ಗ

## ನವಮಃ ಸರ್ಗಃ

### ರಾಮಪ್ರವಾಸನೋಪಾಯಚಿಂತಾ

ಏವಮುಕ್ತಾ ತು ಕೈಕೇಯೀ ಕ್ರೋಧೇನ ಜ್ವಲಿತಾನನಾ ।
ದೀರ್ಘಮುಷ್ಣಂ ವಿನಿಶ್ವಸ್ಯ ಮಂಥರಾಮಿದಮಬ್ರವೀತ್ ॥ ೧

ಅದ್ಯ ರಾಮಮಿತಃ ಕ್ಷಿಪ್ರಂ ವನಂ ಪ್ರಸ್ಥಾಪಯಾಮ್ಯಹಮ್ ।
ಯೌವರಾಜ್ಯೇನ ಭರತಂ ಕ್ಷಿಪ್ರಮೇವಾಭಿಷೇಚಯೇ ॥ ೨

ಇದಂತ್ವಿದಾನೀಂ ಸಂಪಶ್ಯ ಕೇನೋಪಾಯೇನ ಮಂಥರೇ ।
ಭರತಃ ಪ್ರಾಪ್ನುಯಾದ್ರಾಜ್ಯಂ ನ ತು ರಾಮಃ ಕಥಂಚನ ॥ ೩

ಏವಮುಕ್ತಾ ತದಾ ದೇವ್ಯಾ ಮಂಥರಾ ಪಾಪದರ್ಶಿನೀ ।
ರಾಮಾರ್ಥಮುಪಹಿಂಸಂತೀ ಕೈಕೇಯೀಮಿದಮಬ್ರವೀತ್ ॥ ೪

## ಸರ್ಗ ೯

**ಕೈಕೇಯಿಯು ಮಂಥರೆಯ ದುರ್ಬೋಧನೆಗೆ ಒಳಗಾಗುವುದು. ರಾಮನನ್ನು ವನಕ್ಕೆ ಕಳುಹಿಸಿ ಭರತನಿಗೆ ಪಟ್ಟವಾಗುವಂತೆ ಮಾಡಲು ಉಪಾಯ ಚಿಂತನೆ.**

ಕೈಕೇಯಿಯು ಮಂಥರೆಯ ಮಾತಿನ ಪ್ರಭಾವಕ್ಕೆ ಒಳಗಾದಳು. ಅವಳಿಗೆ ಸಿಟ್ಟು ಬಂದಿತು. ಮುಖವು ಕೆಂಪಾಯಿತು. ಅವಳು ಒಂದು ಸಲ ನಿಟ್ಟುಸಿರುಬಿಟ್ಟು ಮಂಥರೆಯನ್ನು ಕುರಿತು ಹೀಗೆಂದಳು (೧) : "ಈ ದಿನವೇ ರಾಮನು ಇಲ್ಲಿಂದ ವನಕ್ಕೆ ಹೊರಟುಹೋಗುವಂತೆ ಮಾಡುತ್ತೇನೆ. ಶೀಘ್ರದಲ್ಲಿಯೇ ಭರತನಿಗೆ ಯುವರಾಜಪದವಿಯಲ್ಲಿ ಪಟ್ಟಾಭಿಷೇಕ ಮಾಡಿಸುತ್ತೇನೆ. ಭರತನಿಗೇ ರಾಜ್ಯವಾಗಬೇಕು, ರಾಮನಿಗೆ ಯಾವ ರೀತಿಯಲ್ಲಿಯೂ ರಾಜ್ಯವು ದೊರಕಬಾರದು - ಇದಕ್ಕೆ ಉಪಾಯವೇನು? ಮಂಥರೆ, ಆಲೋಚಿಸಿ ನೋಡು" ಎಂದಳು (೨-೩). ಒಡತಿಯ ಮಾತನ್ನು ಕೇಳಿ ಪಾಪಿಷ್ಠೆಯಾದ ಮಂಥರೆಯು ರಾಮನ ಪಟ್ಟಾಭಿಷೇಕವನ್ನು ತಪ್ಪಿಸುವುದಕ್ಕಾಗಿ

ಹಂತೇದಾನೀಂ ಪ್ರವಕ್ಷ್ಯಾಮಿ ಕೈಕೇಯಿ ಶ್ರೂಯತಾಂ ಚ ಮೇ ।
ಯಥಾ ತೇ ಭರತೋ ರಾಜ್ಯಂ ಪುತ್ರಃ ಪ್ರಾಪ್ಸ್ಯತಿ ಕೇವಲಮ್ ॥ ೫

ಕಿಂ ನ ಸ್ಮರಸಿ ಕೈಕೇಯಿ ಸ್ಮರಂತೀ ವಾ ನಿಗೂಹಸೇ ।
ಯದುಚ್ಯಮಾನಮಾತ್ಮಾರ್ಥಂ ಮತ್ತಸ್ತ್ವಂ ಶ್ರೋತುಮಿಚ್ಛಸಿ ॥ ೬

ಮಯೋಚ್ಯಮಾನಂ ಯದಿ ತೇ ಶ್ರೋತುಂ ಛೇಂದೋ ವಿಲಾಸಿನಿ ।
ಶ್ರೂಯತಾಮಭಿಧಾಸ್ಯಾಮಿ ಶ್ರುತ್ವಾ ಚಾಪಿ ವಿಮೃಶ್ಯತಾಮ್ ॥ ೭

ಶ್ರುತ್ವೈವಂ ವಚನಂ ತಸ್ಯಾ ಮಂಥರಾಯಾಸ್ತು ಕೈಕಯೀ ।
ಕಿಂಚಿದುತ್ಥಾಯ ಶಯನಾತ್ ಸ್ಪಾಸ್ತೀರ್ಣಾದಿದಮಬ್ರವೀತ್ ॥ ೮

ಕಥಯ ತ್ವಂ ಮಮೋಪಾಯಂ ಕೇನೋಪಾಯೇನ ಮಂಥರೇ ।
ಭರತಃ ಪ್ರಾಪ್ನುಯಾದ್ರಾಜ್ಯಂ ನ ತು ರಾಮಃ ಕಥಂಚನ ॥ ೯

ಏವಮುಕ್ತಾ ತು ಕೈಕೇಯ್ಯಾ ಮಂಥರಾ ಪಾಪದರ್ಶಿನೀ ।
ರಾಮಾರ್ಥಮುಪಹಿಂಸಂತೀ ಕುಬ್ಜಾ ವಚನಮಬ್ರವೀತ್ ॥ ೧೦

---

ಉಪಾಯವನ್ನು ಹೇಳಿದಳು. "ಆಹಾ ! ಕೈಕೇಯಿ, ನಿನ್ನ ಮಗ ಭರತನಿಗೇ ರಾಜ್ಯವಾಗುವ ಉಪಾಯವನ್ನು ಹೇಳುತ್ತೇನೆ, ಕೇಳು (೪-೫) : ಅಲ್ಲ, ಕೈಕೇಯಿ, ನಿನಗೆ ನೆನಪೇ ಇಲ್ಲವೊ? ಅಥವಾ ನೆನಪಾದರೂ ಮರೆಮಾಚುತ್ತೀಯೋ ? ನಿನಗೆ ಹಿತಕರವಾದ ವಿಷಯವನ್ನು ನಾನು ಹೇಳಬೇಕು, ನನ್ನ ಬಾಯಿಂದ ಕೇಳಬೇಕು ಎಂದಿರುವೆಯಾ ? ಆಗಲಿ, ಹೇಳುತ್ತೇನೆ. ಅದನ್ನು ಕೇಳಿ ಆಮೇಲೆ ವಿಚಾರಮಾಡಿ ನೋಡು" (೬-೭). ಹೀಗೆ ಮಂಥರೆಯು ಹೇಳಿದ ಮಾತನ್ನು ಕೇಳಿದ ಕೂಡಲೆ ಕೈಕೇಯಿಯು ಹಾಸಿಗೆಯಿಂದ ಸ್ವಲ್ಪ ಮೇಲಕ್ಕೆದ್ದು, "ಅದು ಯಾವ ಉಪಾಯ? ನನಗೆ ಹೇಳು. ಮಂಥರೆ, ಭರತನಿಗೇ ರಾಜ್ಯವು ಸಿಗಬೇಕು. ರಾಮನಿಗೆ ಸಿಗಬಾರದು" ಎಂದಳು (೮-೯). ಆಗ ಪಾಪಿಷ್ಠಳಾದ ಆ ಗೂನಿಯು ಶ್ರೀರಾಮನ ಶ್ರೇಯಸ್ಸಿಗೆ ಅಡ್ಡಿಮಾಡುವುದಕ್ಕಾಗಿ ಈ ರೀತಿ ಹೇಳಿದಳು: "ಹಿಂದೆ ದೇವಾಸುರ ಯುದ್ಧದಲ್ಲಿ ನಿನ್ನ ಗಂಡನು ಇಂದ್ರನಿಗೆ ಸಹಾಯಮಾಡು

ಪುರಾ ದೈವಾಸುರೇ ಯುದ್ಧೇ ಸಹ ರಾಜರ್ಷಿಭಿಃ ಪತಿಃ ।
ಅಗಚ್ಛತ್ತ್ವಾಮುಪಾದಾಯ ದೇವರಾಜಸ್ಯ ಸಾಹ್ಯಕೃತ್ ॥ ೧೧

ದಿಶಮಾಸ್ಥಾಯ ವೈ ದೇವಿ ದಕ್ಷಿಣಾಂ ದಂಡಕಾನ್ ಪ್ರತಿ ।
ವೈಜಯಂತಮಿತಿ ಖ್ಯಾತಂ ಪುರಂ ತತ್ರ ತಿಮಿಧ್ವಜಃ ॥ ೧೨

ಸ ಶಂಬರ ಇತಿ ಖ್ಯಾತಃ ಶತಮಾಯೋ ಮಹಾಸುರಃ ।
ದದೌ ಶಕ್ರಸ್ಯ ಸಂಗ್ರಾಮಂ ದೇವಸಂಘೈರನಿರ್ಜಿತಃ ॥ ೧೩

ತಸ್ಮಿನ್ ಮಹತಿ ಸಂಗ್ರಾಮೇ ಪುರುಷಾನ್ ಕ್ಷತವಿಕ್ಷತಾನ್ ।
ರಾತ್ರೌ ಪ್ರಸುಪ್ತಾನ್ ಘ್ನಂತಿ ಸ್ಮ ತರಸಾಸಾದ್ಯ ರಾಕ್ಷಸಾಃ ॥ ೧೪

ತತ್ರಾಕರೋನ್ಮಹಾಯುದ್ಧಂ ರಾಜಾ ದಶರಥಸ್ತದಾ ।
ಅಸುರೈಶ್ಚ ಮಹಾಬಾಹುಃ ಶಸ್ತ್ರೈಶ್ಚ ಶಕಲೀಕೃತಃ ॥ ೧೫

ಅಪವಾಹ್ಯ ತ್ವಯಾ ದೇವಿ ಸಂಗ್ರಾಮಾನ್ನಷ್ಟಚೇತನಃ ।
ತತ್ರಾಪಿ ವಿಕ್ಷತಃ ಶಸ್ತ್ರೈಃ ಪತಿಸ್ತೇ ರಕ್ಷಿತಸ್ತ್ವಯಾ ॥ ೧೬

---

ವುದಕ್ಕೆ ಹೊರಟಾಗ, ಅನೇಕ ರಾಜರೊಡನೆ ನಿನ್ನನ್ನೂ ಜೊತೆಗೆ ಕರೆದುಕೊಂಡುಹೋದನಷ್ಟೆ. ಆಗ ದಕ್ಷಿಣ ದಿಕ್ಕಿನಲ್ಲಿರುವ ದಂಡಕಾರಣ್ಯದ ಕಡೆಗೆ ನೀವು ಹೋಗಲಿಲ್ಲವೆ ? ಅಲ್ಲಿದ್ದ ವೈಜಯಂತಪುರದಲ್ಲಿ ತಿಮಿಧ್ವಜನು ಆಳುತ್ತಿದ್ದನು (೧೦-೧೨). ಅವನು ಶಂಬರಾಸುರನೆಂದು ಪ್ರಸಿದ್ಧನಾಗಿದ್ದನು. ಅವನು ಮಹಾಮಾಯಾವಿ. ಆ ರಾಕ್ಷಸನು ದೇವೇಂದ್ರನಿಗೆ ಯುದ್ಧವನ್ನು ಕೊಟ್ಟಾಗ ದೇವತೆಗಳಿಗೆ ಅವನನ್ನು ಗೆಲ್ಲಲಾಗಲಿಲ್ಲ. ಆ ಘೋರಯುದ್ಧದಲ್ಲಿ ಸೈನಿಕರು ಗಾಯಗೊಂಡು ಮಲಗಿದ್ದಾಗ ರಾತ್ರಿಯ ಹೊತ್ತು ರಾಕ್ಷಸರು ನುಗ್ಗಿ ಬಂದು ಅವರನ್ನು ಕೊಂದು ಹಾಕುತ್ತಿದ್ದರು (೧೩-೧೪). ಆಗ ದಶರಥ ರಾಜನು ರಾಕ್ಷಸರೊಡನೆ ಭಯಂಕರವಾದ ಯುದ್ಧವನ್ನು ಮಾಡುತ್ತಿರಲು ಆಯುಧಗಳ ಹೊಡೆತದಿಂದ ಇವನ ದೇಹದಲ್ಲಿ ಬಹಳ ಗಾಯಗಳಾದವು. ಆ ರೀತಿಯಲ್ಲಿ ಗಾಯಗೊಂಡು ಇವನು ಎಚ್ಚರದಪ್ಪಿ ಬಿದ್ದಿರುವಾಗ, ದೇವಿ, ನೀನು ಯುದ್ಧಭೂಮಿಯಿಂದ ಹೊರಕ್ಕೆ ಸಾಗಿಸಿ ನಿನ್ನ ಗಂಡನನ್ನು ಕಾಪಾಡಿ

ತುಷ್ಟೇನ ತೇನ ದತ್ತೌ ತೇ ದ್ವೌ ವರೌ ಶುಭದರ್ಶನೇ ।
ಸ ತ್ವಯೋಕ್ತಃ ಪತಿರ್ದೇವಿ ಯದೇಚ್ಛೇಯಂ ತದಾ ವರೌ ॥ ೧೭

ಗೃಹ್ಣೀಯಾಮಿತಿ ತತ್ತೇನ ತಥೇತ್ಯುಕ್ತಂ ಮಹಾತ್ಮನಾ ।
ಅನಭಿಜ್ಞಾಹ್ಯಹಂ ದೇವಿ ತ್ವಯೈವ ಕಥಿತಾ ಪುರಾ ॥ ೧೮

ಕಥೈಷಾ ತವ ತು ಸ್ನೇಹಾನ್ಮನಸಾ ಧಾರ್ಯತೇ ಮಯಾ ।
ರಾಮಾಭಿಷೇಕಸಂಭಾರಾನ್ನಿಗೃಹ್ಯ ವಿನಿವರ್ತಯ ॥ ೧೯

ತೌ ಚ ಯಾಚಸ್ವ ಭರ್ತಾರಂ ಭರತಸ್ಯಾಭಿಷೇಚನಮ್ ।
ಪ್ರವ್ರಾಜನಂ ಚ ರಾಮಸ್ಯ ತ್ವಂ ವರ್ಷಾಣಿ ಚತುರ್ದಶ ॥ ೨೦

ಚತುರ್ದಶ ಹಿ ವರ್ಷಾಣಿ ರಾಮೇ ಪ್ರವ್ರಾಜಿತೇ ವನಮ್ ।
ಪ್ರಜಾಭಾವಗತಸ್ನೇಹಃ ಸ್ಥಿರಃ ಪುತ್ರೋ ಭವಿಷ್ಯತಿ ॥ ೨೧

ಕ್ರೋಧಾಗಾರಂ ಪ್ರವಿಶ್ಯಾದ್ಯ ಕ್ರುದ್ಧೇವಾಶ್ವಪತೇಃ ಸುತೇ ।
ಶೇಷ್ವಾನಂತರ್ಹಿತಾಯಾಂ ತ್ವಂ ಭೂಮೌ ಮಲಿನವಾಸಿನೀ ॥ ೨೨

---

ದ್ದೀಯೆ (೧೫-೧೬). ಶೋಭನಾಂಗಿ, ಆಗ ನಿನ್ನ ಪತಿಯು ಸಂತುಷ್ಟನಾಗಿ ನಿನಗೆ ಎರಡು ವರಗಳನ್ನು ಕೊಟ್ಟಿದ್ದಾನೆ. 'ನನಗೆ ಬೇಕಾದಾಗ ಆ ವರಗಳನ್ನು ಉಪಯೋಗಿಸಿಕೊಳ್ಳುತ್ತೇನೆ' ಎಂದು ನೀನು ಅವನಿಗೆ ಹೇಳಿದ್ದೀಯೆ. ಹಾಗೆಯೇ ಆಗಲೆಂದು ಆ ಮಹಾರಾಯನು ನಿನಗೆ ಮಾತುಕೊಟ್ಟಿದ್ದಾನೆ. ಇದೆಲ್ಲಾ ನನಗೆ ಹೇಗೆ ಗೊತ್ತಾಗಬೇಕು, ತಾಯಿ? ಇದನ್ನು ನೀನೇ ನನಗೆ ಹಿಂದೆ ಹೇಳಿದ್ದೀಯೆ (೧೭-೧೮). ಈ ಕಥೆಯನ್ನು ನಿನ್ನ ಮೇಲಿನ ಪ್ರೀತಿಯಿಂದ ನಾನು ಮನಸ್ಸಿನಲ್ಲಿ ನೆನಪಿಟ್ಟುಕೊಂಡಿದ್ದೇನೆ. ರಾಮಾಭಿಷೇಕಕ್ಕೆ ಮಾಡಿಕೊಂಡಿರುವ ಸನ್ನಾಹಗಳನ್ನು ತಡೆದು ನಿಲ್ಲಿಸು. ಈಗ ಆ ಎರಡು ವರಗಳನ್ನು ಸಲ್ಲಿಸಬೇಕೆಂದು ಗಂಡನನ್ನು ಕೇಳು. ಭರತನಿಗೆ ಪಟ್ಟಾಭಿಷೇಕ ಮಾಡಬೇಕೆಂಬುದು ಒಂದನೆಯದು. ರಾಮನು ಹದಿನಾಲ್ಕು ವರ್ಷಗಳ ಕಾಲ ದೇಶಭ್ರಷ್ಟನಾಗಿ ಹೋಗಬೇಕೆಂಬುದು ಎರಡನೆಯದು (೧೯-೨೦). ಹದಿನಾಲ್ಕು ವರ್ಷಗಳವರೆಗೆ ರಾಮನು ಕಾಡಿಗೆ ಹೊರಟುಹೋದರೆ, ನಿನ್ನ ಮಗನು ಪ್ರಜೆಗಳ ಅನುರಾಗವನ್ನು ಸಂಪಾದಿಸಿ ರಾಜ್ಯದಲ್ಲಿ ದೃಢವಾಗಿ ಬೇರೂರಿಕೊಳ್ಳುವನು (೨೧). ನೀನು ಅಶ್ವಪತಿಮಹಾರಾಜನ ಮಗಳಲ್ಲವೆ ?

ಮಾ ಸ್ಮೈನಂ ಪ್ರತ್ಯುದೀಕ್ಷೇಥಾ ಮಾ ಚೈನಮಭಿಭಾಷಥಾಃ ।
ರುದಂತೀ ಪಾರ್ಥಿವಂ ದೃಷ್ಟ್ವಾ ಜಗತ್ಯಾಂ ಶೋಕಲಾಲಸಾ ॥ ೨೩

ದಯಿತಾ ತ್ವಂ ಸತಾ ಭರ್ತುರತ್ರ ಮೇ ನಾಸ್ತಿ ಸಂಶಯಃ ।
ತ್ವತ್ಕೃತೇ ಸ ಮಹಾರಾಜೋ ವಿಶೇದಪಿ ಹುತಾಶನಮ್ ॥ ೨೪

ನ ತ್ವಾಂ ಕ್ರೋಧಯಿತುಂ ಶಕ್ತೋ ನ ಕ್ರುದ್ಧಾಂ ಪ್ರತ್ಯುದೀಕ್ಷಿತುಮ್
ತವ ಪ್ರಿಯಾರ್ಥಂ ರಾಜಾ ಹಿ ಪ್ರಾಣಾನಪಿ ಪರಿತ್ಯಜೇತ್ ॥ ೨೫

ನ ಹ್ಯತಿಕ್ರಮಿತುಂ ಶಕ್ತಸ್ತವ ವಾಕ್ಯಂ ಮಹೀಪತಿಃ ।
ಮಂದಸ್ವಭಾವೇ ಬುಧ್ಯಸ್ವ ಸೌಭಾಗ್ಯಬಲಮಾತ್ಮನಃ ॥ ೨೬

ಮಣಿಮುಕ್ತಾಸುವರ್ಣಾನಿ ರತ್ನಾನಿ ವಿವಿಧಾನಿ ಚ ।
ದದ್ಯಾದ್ದಶರಥೋ ರಾಜಾ ಮಾ ಸ್ಮ ತೇಷು ಮನಃ ಕೃಥಾಃ ॥ ೨೭

ಯೌ ತೌ ದೈವಾಸುರೇ ಯುದ್ಧೇ ವರೌ ದಶರಥೋ ದದೌ ।
ತೌ ಸ್ಮಾರಯ ಮಹಾಭಾಗೇ ಸೋಽರ್ಥೋ ಮಾ ತ್ವಾಮತಿಕ್ರಮೇತ್ ॥

---

ಈಗಲೆ ಕೋಪಗೃಹಕ್ಕೆ ಹೋಗಿ ಸಿಟ್ಟಿನಿಂದ ಬರಿಯ ನೆಲದ ಮೇಲೆ ಮಲಗಿಕೊ. ಕೊಳೆಬಟ್ಟೆಯನ್ನು ಹಾಕಿಕೊ. ಮಹಾರಾಜನು ಬಂದುದನ್ನು ಕಂಡರೆ, ಅವನನ್ನು ಕಣ್ಣೆತ್ತಿ ನೋಡಬೇಡ. ಅವನೊಡನೆ ಮಾತನಾಡಬೇಡ. ಸುಮ್ಮನೆ ಶೋಕಮಗ್ನಳಾಗಿ ಅಳುತ್ತ ನೆಲದ ಮೇಲೆ ಮಲಗಿರು(೨೨-೨೩). ನಿನ್ನ ಗಂಡನಿಗೆ ನಿನ್ನ ಮೇಲೆ ಬಹಳ ಪ್ರೀತಿ ಇದೆ. ಈ ವಿಷಯದಲ್ಲಿ ನನಗೇನೂ ಸಂಶಯವಿಲ್ಲ. ಮಹಾರಾಜನು ನಿನಗೋಸ್ಕರ ಬೆಂಕಿಯಲ್ಲಿ ಬೇಕಾದರೂ ಬೀಳುತ್ತಾನೆ. ನಿನಗೆ ಕೋಪ ಬರುವಂತೆ ಅವನು ಮಾಡಲಾರ. ನೀನು ಕೋಪಿಸಿಕೊಂಡಿರುವುದನ್ನು ಅವನು ನೋಡಲಾರ. ನಿನ್ನ ಸಂತೋಷಕ್ಕಾಗಿ ರಾಜನು ಪ್ರಾಣವನ್ನಾದರೂ ಬಿಟ್ಟಾನು (೨೪-೨೫). ನಿನ್ನ ಮಾತನ್ನು ಅವನು ಎಂದಿಗೂ ಮೀರುವುದಿಲ್ಲ. ಅಯ್ಯೋ ದಡ್ಡೆ! ನಿನ್ನ ಸೌಭಾಗ್ಯದ ಬಲ ಎಷ್ಟಿದೆಯೆಂಬುದನ್ನು ತಿಳಿದುಕೊ. ದಶರಥರಾಜನು ನಿನಗೆ ರತ್ನ ಮುತ್ತು ಚಿನ್ನ ಮುಂತಾದ ಉತ್ತಮೋತ್ತಮ ವಸ್ತುಗಳನ್ನು ಕೊಟ್ಟು ಸಮಾಧಾನಪಡಿಸುವುದಕ್ಕೆ ಬಂದಾನು. ಅವುಗಳಲ್ಲಿ ಮಾತ್ರ ನೀನು ಮನಸ್ಸು ಮಾಡಬೇಡ (೨೬-೨೭). ದೇವಾಸುರಯುದ್ಧದಲ್ಲಿ ನಿನಗೆ ಕೊಟ್ಟಿದ್ದ ಎರಡು

ಯದಾ ತು ತೇ ವರಂ ದದ್ಯಾತ್ ಸ್ವಯಮುತ್ಥಾಪ್ಯ ರಾಘವಃ ।
ವ್ಯವಸ್ಥಾಪ್ಯ ಮಹಾರಾಜಂ ತ್ವಮಿಮಂ ವೃಣುಯಾ ವರಮ್ ॥ ೨೯
ರಾಮಂ ಪ್ರವ್ರಾಜಯಾರಣ್ಯೇ ನವ ವರ್ಷಾಣಿ ಪಂಚ ಚ ।
ಭರತಃ ಕ್ರಿಯತಾಂ ರಾಜಾ ಪೃಥಿವ್ಯಾಃ ಪಾರ್ಥಿವರ್ಷಭಃ ॥ ೩೦
ಚತುರ್ದಶ ಹಿ ವರ್ಷಾಣಿ ರಾಮೇ ಪ್ರವ್ರಾಜಿತೇ ವನಮ್ ।
ರೂಢಶ್ಚ ಕೃತಮೂಲಶ್ಚ ಶೇಷಂ ಸ್ಥಾಸ್ಯತಿ ತೇ ಸುತಃ ॥ ೩೧
ರಾಮಪ್ರವ್ರಾಜನಂ ಚೈವ ದೇವಿ ಯಾಚಸ್ವ ತಂ ವರಮ್ ।
ಏವಂ ಸಿಧ್ಯಂತಿ ಪುತ್ರಸ್ಯ ಸರ್ವಾರ್ಥಾಸ್ತವ ಭಾಮಿನಿ ॥ ೩೨
ಏವಂ ಪ್ರವ್ರಾಜಿತಶ್ಚೈವ ರಾಮೋ ರಾಮೋ ಭವಿಷ್ಯತಿ ।
ಭರತಶ್ಚ ಹತಾಮಿತ್ರಸ್ತವ ರಾಜಾ ಭವಿಷ್ಯತಿ ॥ ೩೩
ಯೇನ ಕಾಲೇನ ರಾಮಶ್ಚ ವನಾತ್ ಪ್ರತ್ಯಾಗಮಿಷ್ಯತಿ ।
ತೇನ ಕಾಲೇನ ಪುತ್ರಸ್ತೇ ಕೃತಮೂಲೋ ಭವಿಷ್ಯತಿ ॥ ೩೪

---

ವರಗಳನ್ನು ಅವನಿಗೆ ನೆನಪುಮಾಡು. ಪುಣ್ಯಾತ್ಮಳೆ, ಆ ವಿಷಯವನ್ನು ಮಾತ್ರ ಮರೆತೀಯೆ. ದಶರಥನು ನಿನ್ನನ್ನು ಕೈಹಿಡಿದು ಎಬ್ಬಿಸಿ ವರವನ್ನು ಸಲ್ಲಿಸುತ್ತೇನೆಂದು ಹೇಳಿದಾಗ, ಅವನಿಂದ ಸರಿಯಾಗಿ ಮಾತು ತೆಗೆದುಕೊಂಡು ಈ ವರವನ್ನು ಕೇಳಬೇಕು (೨೮-೨೯). ಒಂಬತ್ತು ಮೇಲ್ಮೆದು - ಹದಿನಾಲ್ಕು ವರ್ಷ ರಾಮನು ಅರಣ್ಯಕ್ಕೆ ಹೋಗಬೇಕೆಂದು ಕೇಳು. ಕ್ಷತ್ರಿಯೋತ್ತಮನಾದ ಭರತನು ಈ ದೇಶಕ್ಕೆ ರಾಜನಾಗಲಿ. ರಾಮನನ್ನು ಹದಿನಾಲ್ಕು ವರ್ಷ ಅರಣ್ಯಕ್ಕೆ ಕಳಿಸಿಬಿಟ್ಟರೆ, ಅಷ್ಟರಲ್ಲಿ ನಿನ್ನ ಮಗನು ಬೇರೂರಿಕೊಂಡು ಗಟ್ಟಿಯಾಗುವನು. ಆಮೇಲೆ ಉಳಿದ ಕಾಲವೆಲ್ಲ ಅವನೇ ರಾಜನಾಗಿ ಉಳಿಯುವನು (೩೦-೩೧). ಮಹಾರಾಣಿ, ರಾಮನು ಕಾಡಿಗೆ ಹೋಗಬೇಕೆಂಬ ವರವನ್ನು ನೀನು ಪಟ್ಟುಹಿಡಿದು ಕೇಳಿಕೊಳ್ಳಲೇಬೇಕು. ಅವನು ಕಾಡಿಗೆ ಹೋದರೆ ಮಾತ್ರ ನಿನ್ನ ಮಗನ ಸಕಲ ಇಷ್ಟಾರ್ಥಗಳೂ ಕೈಗೂಡುತ್ತವೆ (೩೨). ಈ ರೀತಿಯಲ್ಲಿ ಕಾಡಿಗೆ ಓಡಿಸಿಬಿಟ್ಟರೆ ರಾಮನು ಯಾವನೋ ಒಬ್ಬ ರಾಮನಾಗಿ ಬಿಡುತ್ತಾನೆ. ನಿನ್ನ ಭರತನು ಶತ್ರುವನ್ನು ತುಳಿದು ರಾಜನಾಗಿರುತ್ತಾನೆ. ಯಾವ ಕಾಲದಲ್ಲೋ ರಾಮನು ತಿರುಗಿ ಬಂದರೆ, ಅಷ್ಟರಲ್ಲಿ ನಿನ್ನ ಮಗನು ದೃಢವಾಗಿ ನಿಂತು ಬಲಶಾಲಿಯಾಗಿರುತ್ತಾನೆ (೩೩-೩೪).

ಸಂಗೃಹೀತಮನುಷ್ಯಶ್ಚ ಸುಹೃದ್ಭಿಃ ಸಾರ್ಧಮಾತ್ಮವಾನ್ ।
ಪ್ರಾಪ್ತಕಾಲಂ ತು ತೇ ಮನ್ಯೇ ರಾಜಾನಾಂ ವೀತಸಾಧ್ವಸಾ ॥ ೩೫

ರಾಮಾಭಿಷೇಕಸಂಭಾರಾನ್ನಿಗೃಹ್ಯ ವಿನಿವರ್ತಯ ।
ಅನರ್ಥಮರ್ಥರೂಪೇಣ ಗ್ರಾಹಿತಾ ಸಾ ತತಸ್ತಯಾ ॥ ೩೬

ಹೃಷ್ಟಾ ಪ್ರತೀತಾ ಕೈಕೇಯೀ ಮಂಥರಾಮಿದಮಬ್ರವೀತ್ ।
ಸಾ ಹಿ ವಾಕ್ಯೇನ ಕುಬ್ಜಾಯಾಃ ಕಿಶೋರೀವೋತ್ಪಥಂ ಗತಾ ॥ ೩೭

ಕೈಕೇಯೀ ವಿಸ್ಮಯಂ ಪ್ರಾಪ್ತಾ ಪರಂ ಪರಮದರ್ಶನಾ ।
ಕುಬ್ಜೇ ತ್ವಾಂ ನಾವಜಾನಾಮಿ ಶ್ರೇಷ್ಠಾಂ ಶ್ರೇಷ್ಠಾಭಿಧಾಯಿನೀಮ್ ॥

ಪೃಥಿವ್ಯಾಮಸಿ ಕುಬ್ಜಾನಾಮುತ್ತಮಾ ಬುದ್ಧಿನಿಶ್ಚಯೇ ।
ತ್ವಮೇವ ತು ಮಮಾರ್ಥೇಷು ನಿತ್ಯಯುಕ್ತಾ ಹಿತೈಷಿಣೀ ॥ ೩೯

ನಾಹಂ ಸಮವಬುಧ್ಯೇಯಂ ಕುಬ್ಜೇ ರಾಜ್ಞಶ್ಚಿಕೀರ್ಷಿತಮ್ ।
ಸಂತಿ ದುಃಸಂಸ್ಥಿತಾಃ ಕುಬ್ಜಾ ವಕ್ರಾಃ ಪರಮದಾರುಣಾಃ ॥ ೪೦

---

ಪ್ರಜೆಗಳನ್ನು ಒಲಿಸಿಕೊಂಡು ಸ್ನೇಹಿತರ ಬಳಗದೊಡನೆ ಧೀರವಾಗಿ ನಿಂತಿರುತ್ತಾನೆ. (ಕಾರ್ಯಸಾಧನೆ ಮಾಡಿಕೊಳ್ಳುವುದಕ್ಕೆ) ನಿನಗೆ ಇದೇ ಸಮಯವೆಂದು ನನ್ನ ಅಭಿಪ್ರಾಯ. ನೀನು ನಾಚಿಕೆ-ಹೆದರಿಕೆಗಳನ್ನು ಬಿಟ್ಟು, ರಾಜನು ರಾಮಾಭಿಷೇಕಕ್ಕೆ ಸನ್ನಾಹಮಾಡುತ್ತಿರುವುದನ್ನು ತಡೆದು ನಿಲ್ಲಿಸು" ಎಂದು ಹೇಳಿದಳು. ಹೀಗೆ ಕುಬ್ಜೆಯು ಅನರ್ಥವನ್ನೇ ಹಿತಕರವಾದ ಇಷ್ಟಾರ್ಥವೆಂದು ಬೋಧಿಸಿದ್ದು ಕೈಕೇಯಿಗೆ ಹಿಡಿಸಿತು (೩೫-೩೬). ಕೈಕೇಯಿಯು ಅದೆಲ್ಲವನ್ನೂ ಗ್ರಹಿಸಿ ಹರ್ಷಭರಿತಳಾದಳು. ಆ ಗೂನಿಯ ಮಾತನ್ನು ಕೇಳಿ ದಾರಿತಪ್ಪಿದ ಹೆಣ್ಣುಗುದುರೆಯಂತಾದಳು. ಆ ವಿವೇಕ ಹೀನಳು ಮೇಲಿಂದ ಮೇಲೆ ಅಚ್ಚರಿಪಡುತ್ತ ಹಿಗ್ಗಿದಳು. ಮಂಥರೆಯನ್ನು ಕುರಿತು ಹೀಗೆಂದಳು : "ಎಲೆ ಗೂನಿ, ನೀನು ಇಷ್ಟು ಬುದ್ಧಿವಂತೆ - ಇಷ್ಟು ಚೆನ್ನಾಗಿ ಮಾತನಾಡುತ್ತೀಯೆ ಎಂದು ನನಗೆ ಗೊತ್ತೇ ಇರಲಿಲ್ಲ (೩೭-೩೮). ಈ ಜಗತ್ತಿನಲ್ಲಿರುವ ಕುಬ್ಜೆಯರಲ್ಲಿ ನೀನೇ ಬುದ್ಧಿಶಾಲಿ. ನೀನೊಬ್ಬಳೇ ಯಾವಾಗಲೂ ನನ್ನ ಕೆಲಸವನ್ನು ಮಾಡಿಕೊಡುತ್ತ ನನ್ನ ಹಿತವನ್ನು ಬಯಸುತ್ತಿದ್ದೀಯೆ (೩೯). ಮಹಾರಾಜನ ಏರ್ಪಾಡಿನಿಂದ ಯಾವ ಅನರ್ಥವಾಗು

ತ್ವಂ ಪದ್ಮಮಿವ ವಾತೇನ ಸಂನತಾ ಪ್ರಿಯದರ್ಶನಾ ।
ಉರಸ್ತೇಽಭಿನಿವಿಷ್ಟಂ ವೈ ಯಾವತ್ಸ್ಕಂಧಂ ಸಮುನ್ನತಮ್ ॥ ೪೧

ಅಧಸ್ತಾಚ್ಚೋದರಂ ಶಾತಂ ಸುನಾಭಮಿವ ಲಜ್ಜಿತಮ್ ।
ಪರಿಪೂರ್ಣಂ ಚ ಜಘನಂ ಸುಪೀನೌ ಚ ಪಯೋಧರೌ ॥ ೪೨

ವಿಮಲೇಂದುಸಮಂ ವಕ್ತ್ರಮಹೋ ರಾಜಸಿ ಮಂಥರೇ ।
ಜಘನಂ ತವ ನಿರ್ಮೃಷ್ಟಂ ರಶನಾದಾಮಶೋಭಿತಮ್ ॥ ೪೩

ಜಂಘೇ ಭೃಶಮುಪನ್ಯಸ್ತೇ ಪಾದೌ ಚಾಪ್ಯಾಯತಾವುಭೌ ।
ತ್ವಮಾಯತಾಭ್ಯಾಂ ಸಕ್ಥಿಭ್ಯಾಂ ಮಂಥರೇ ಕ್ಷೌಮವಾಸಿನೀ ॥ ೪೪

ಅಗ್ರತೋ ಮಮ ಗಚ್ಛಂತೀ ರಾಜಹಂಸೀವ ರಾಜಸೇ ।
ಆಸನ್ ಯಾಃ ಶಂಬರೇ ಮಾಯಾಃ ಸಪತ್ನ್ಯಮಸುರಾಧಿಪೇ ॥ ೪೫

---

ತ್ತಿತ್ತೆಂದು (ನೀನಿಲ್ಲದಿದ್ದರೆ) ನನಗೆ ತಿಳಿಯುತ್ತಲೇ ಇರಲಿಲ್ಲ. ಇಲ್ಲಿ ಲೆಲಸಕ್ಕೆ ಬಾರದ ಪರಮ ಪಾಪಿಗಳಾದ ಎಷ್ಟೋ ಮಂದಿ ಗೂನಿಯರಿದ್ದಾರೆ (೪೦). ಆದರೆ ನೀನು ಗಾಳಿಯಿಂದ ಬಾಗಿದ ತಾವರೆಯ ಒಳ್ಳೆಯಂತೆ ನೋಡಲು ಚೆನ್ನಾಗಿದ್ದೀಯೆ. ನಿನ್ನ ಎದೆಯು ಹೆಗಲಿನವರೆಗೆ ಹೆಮ್ಮೆಯಿಂದ ಚಾಚಿಕೊಂಡಿದೆ. ಕೆಳಗೆ ಸುಂದರವಾದ ನಾಭಿಯುಳ್ಳ ಉದರವು ಎದೆಯ ಉನ್ನತಿಯನ್ನು ಕಂಡು ನಾಚಿಕೊಂಡಂತೆ ಕೃಶವಾಗಿದೆ. ನಿನ್ನ ಜಘನವು ತುಂಬಿಕೊಂಡು ಸ್ತನಗಳು ಉಬ್ಬಿವೆ (೪೧-೪೨). ನಿನ್ನ ಮುಖವು ನಿರ್ಮಲ ಚಂದ್ರನಂತೆ ಸುಂದರವಾಗಿದೆ. ಆಹಾ! ನೀನು ಎಷ್ಟು ಚೆನ್ನಾಗಿ ಕಾಣಿಸುತ್ತೀಯೆ, ಮಂಥರೆ! ಸ್ವಚ್ಛವಾದ ಜಘನವು ಡಾಬಿನ ಎಳೆಗಳಿಂದ ಎಷ್ಟು ಮನೋಹರವಾಗಿ ಒಪ್ಪುತ್ತಿದೆ! ನಿನ್ನ ಮೊಳಕಾಲುಗಳೂ ಪಾದಗಳೂ ಬಹುಮಾಟವಾಗಿ ನೀಳವಾಗಿವೆ. ನಿನ್ನ ವಿಶಾಲವಾದ ತೊಡೆಗಳಿಗೂ ಈ ಬಿಳಿಯ ದುಕೂಲವನ್ನು ಧರಿಸಿರುವುದಕ್ಕೂ ಎಂಥ ಹೊಂದಿಕೆ! (೪೩-೪೪). ನನ್ನೆದುರಿಗೆ ನೀನು ಹೋಗುತ್ತಿದ್ದರೆ ರಾಜಹಂಸಿಯಂತೆ ಕಾಣುತ್ತೀಯೆ. ಆ ಶಂಬರಾಸುರನಲ್ಲಿದ್ದ ಮಾಯೆಗಳೆಲ್ಲವೂ ನಿನ್ನಲ್ಲಿವೆ. ಅವನಿಗಿಂತ ಸಾವಿರಾರು ಹೆಚ್ಚು

ಸರ್ವಾಸ್ತ್ವಯಿ ನಿವಿಷ್ಟಾಸ್ತಾ ಭೂಯಶ್ಚಾನ್ಯಾಃ ಸಹಸ್ರಶಃ ।
ತವೇದಂ ಸ್ಥಗು ಯದ್ದೀರ್ಘಂ ರಥಘೋಣಾಮಿವಾಯತಮ್ ॥ ೪೬

ಮತಯಃ ಕ್ಷಾತ್ರವಿದ್ಯಾಶ್ಚ ಮಾಯಾಶ್ಚಾತ್ರ ವಸಂತಿ ತೇ ।
ಅತ್ರ ತೇ ಪ್ರತಿಮೋಕ್ಷ್ಯಾಮಿ ಮಾಲಾಂ ಕುಬ್ಜೇ ಹಿರಣ್ಮಯೀಮ್ ॥ ೪೭

ಅಭಿಷಿಕ್ತೇ ಚ ಭರತೇ ರಾಘವೇ ಚ ವನಂ ಗತೇ ।
ಜಾತ್ಯೇನ ಚ ಸುವರ್ಣೇನ ಸುನಿಷ್ಟಪ್ತೇನ ಮಂಥರೇ ॥ ೪೮

ಲಬ್ಧಾರ್ಥಾ ಚ ಪ್ರತೀತಾ ಚ ಲೇಪಯಿಷ್ಯಾಮಿ ತೇ ಸ್ಥಗು ।
ಮುಖೇ ಚ ತಿಲಕಂ ಚಿತ್ರಂ ಜಾತರೂಪಮಯಂ ಶುಭಮ್ ॥ ೪೯

ಕಾರಯಿಷ್ಯಾಮಿ ತೇ ಕುಬ್ಜೇ ಶುಭಾನ್ಯಾಭರಣಾನಿ ಚ ।
ಪರಿಧಾಯ ಶುಭೇ ವಸ್ತ್ರೇ ದೇವತೇವ ಚರಿಷ್ಯಸಿ ॥ ೫೦

ಚಂದ್ರಮಾಹ್ವಯಮಾನೇನ ಮುಖೇನಾಪ್ರತಿಮಾನನಾ ।
ಗಮಿಷ್ಯಸಿ ಗತಿಂ ಮುಖ್ಯಾಂ ಗರ್ಹಯಂತೀ ದ್ವಿಷಜ್ಜನಮ್ ॥ ೫೧

---

ಮಾಯೆಗಳನ್ನು ನೀನು ಬಲ್ಲೆ. ಈ ಬುದ್ಧಿಶಕ್ತಿ, ಈ ರಾಜನೀತಿ, ಈ ಮಾಯೆಗಳು - ಇವೆಲ್ಲವೂ ರಥದ ಮೂಕಿಯಂತೆ ಉಬ್ಬಿಕೊಂಡಿರುವ ನಿನ್ನ ಈ ಗೂನಿನ ಗಂಟಿನಲ್ಲಿ ನೆಲೆಸಿಬಿಟ್ಟಿವೆ! (೪೫-೪೬). ಭರತನಿಗೆ ಪಟ್ಟಾಭಿಷೇಕವಾದ ಮೇಲೆ - ರಾಮನು ಕಾಡಿಗೆ ಹೋದಮೇಲೆ, ಈ ಗೂನಿಗೆ ಒಂದು ಚಿನ್ನದ ಸರವನ್ನು ಮಾಡಿಸಿ ಹಾಕಿಸುತ್ತೇನೆ ! ನನ್ನ ಕಾರ್ಯವು ಸಿದ್ಧಿಸಿದ ಮೇಲೆ ನೆನಪಿಟ್ಟುಕೊಂಡು ಅಪರಂಜಿಯ ತಗಡಿನಿಂದ ಇದನ್ನು ಹೊದಿಸುತ್ತೇನೆ (೪೭-೪೮). ಕುಬ್ಜೆ, ನಿನ್ನ ಮುಖಕ್ಕೆ ಚಿತ್ತಾರವಿರುವ ಬಂಗಾರದ ಒಂದು ತಿಲಕವನ್ನೂ ಇನ್ನೂ ಅನೇಕ ಒಡವೆಗಳನ್ನೂ ಮಾಡಿಸಿಕೊಡುತ್ತೇನೆ. ಬೆಲೆಬಾಳುವ ಒಳ್ಳೆಯ ಸೀರೆಗಳನ್ನುಟ್ಟು ಅಪ್ಸರೆಯಂತೆ ನೀನು ತಿರುಗಾಡಿಕೊಂಡಿರಬಹುದು (೪೯-೫೦). ಚಂದ್ರನೊಡನೆ ಸ್ಪರ್ಧೆಮಾಡುವ ನಿನ್ನ ಮುಖದ ಚೆಲುವು ಯಾರಿಗೂ ಇಲ್ಲ. ಆಗ ನೀನು ಶತ್ರುಜನರನ್ನು ಗೇಲಿಮಾಡುತ್ತ ಹೆಮ್ಮೆಯಿಂದ ಹೆಜ್ಜೆಯಿಡುತ್ತ ತಿರುಗಾಡಬಹುದು. ನೀನು

ತವಾಪಿ ಕುಬ್ಜಾಃ ಕುಬ್ಜಾಯಾಃ ಸರ್ವಾಭರಣಭೂಷಿತಾಃ ।
ಪಾದೌ ಪರಿಚರಿಷ್ಯಂತಿ ಯಥೈವ ತ್ವಂ ಸದಾ ಮಮ ॥ ೫೨

ಇತಿ ಪ್ರಶಸ್ಯಮಾನಾ ಸಾ ಕೈಕೇಯೀಮಿದಮಬ್ರವೀತ್ ।
ಶಯಾನಾಂ ಶಯನೇ ಶುಭ್ರೇ ವೇದ್ಯಾಮಗ್ನಿಶಿಖಾಮಿವ ॥ ೫೩

ಗತೋದಕೇ ಸೇತುಬಂಧೋ ನ ಕಲ್ಯಾಣಿ ವಿಧೀಯತೇ ।
ಉತ್ತಿಷ್ಠ ಕುರು ಕಲ್ಯಾಣಿ ರಾಜಾನಮನುದರ್ಶಯ ॥ ೫೪

ತಥಾ ಪ್ರೋತ್ಸಾಹಿತಾ ದೇವೀ ಗತ್ವಾ ಮಂಥರಯಾ ಸಹ ।
ಕ್ರೋಧಾಗಾರಂ ವಿಶಾಲಾಕ್ಷೀ ಸೌಭಾಗ್ಯಮದಗರ್ವಿತಾ ॥ ೫೫

ಅನೇಕಶತಸಾಹಸ್ರಂ ಮುಕ್ತಾಹಾರಂ ವರಾಂಗನಾ ।
ಅವಮುಚ್ಯ ವರಾರ್ಹಾಣಿ ಶುಭಾನ್ಯಾಭರಣಾನಿ ಚ ॥ ೫೬

ತತೋ ಹೇಮೋಪಮಾ ತತ್ರ ಕುಬ್ಜಾವಾಕ್ಯವಶಂ ಗತಾ ।
ಸಂವಿಶ್ಯ ಭೂಮೌ ಕೈಕೇಯೀ ಮಂಥರಾಮಿದಮಬ್ರವೀತ್ ॥ ೫೭

---

ನನ್ನನ್ನು ಸೇವಿಸುತ್ತಿರುವಂತೆ ಸರ್ವಾಭರಣಭೂಷಿತರಾದ ಅನೇಕ ಕುಬ್ಜೆಯರು ಬಂದು ನಿನ್ನ ಪಾದಸೇವೆಯನ್ನು ಮಾಡುವರು" (೫೧-೫೨). ಈ ಪ್ರಕಾರ ಕೈಕೇಯಿಯು ವೇದಿಕೆಯಲ್ಲಿರುವ ಅಗ್ನಿಶಿಖೆಯಂತೆ, ಶುಭ್ರವಾದ ಹಾಸಿಗೆಯ ಮೇಲೆ ಮಲಗಿಕೊಂಡು ಕುಬ್ಜೆಯನ್ನು ಹೊಗಳುತ್ತಿದ್ದಳು. ಆಗ ಆ ಮಂಥರೆಯು "ಮಂಗಳಾಂಗಿ, ನೀರು ಹರಿದುಹೋದಮೇಲೆ ಹೊಳೆಗೆ ಅಡ್ಡಗಟ್ಟೆಯನ್ನು ಹಾಕಿದರೆ ಏನು ಪ್ರಯೋಜನ? ಏಳು, ಏಳು. ರಾಜನಿಗೆ ಕಾಣಿಸಿಕೊ" ಎಂದಳು (೫೩-೫೪). ಹೀಗೆ ಪ್ರೋತ್ಸಾಹಿತಳಾದ ಆ ರಾಣಿಯು ಮಂಥರೆಯೊಡನೆ ಕೋಪಗೃಹಕ್ಕೆ ಹೋದಳು. ಅಲ್ಲಿ ಆ ಚೆಲುವೆಯು ತನ್ನ ಸೌಂದರ್ಯದ ಮದದಿಂದ ಉಬ್ಬಿ, ಎಷ್ಟೋ ಲಕ್ಷಗಟ್ಟಲೆ ಬೆಲೆಬಾಳುವ ತಾನು ಧರಿಸಿದ್ದ ಮುತ್ತಿನ ಸರವನ್ನೂ ಅಮೂಲ್ಯವಾದ ಒಳ್ಳೆಯ ಒಡವೆಗಳನ್ನೂ ಕಿತ್ತೆಸೆದಳು (೫೫-೫೬). ಚಿನ್ನದಂಥ ಕೈಕೇಯಿಯು ಕುಬ್ಜೆಯ ಮಾತಿನ ಪ್ರಭಾವಕ್ಕೊಳಗಾಗಿ ಚಿನ್ನದಂತೆ ಆಕಾರವನ್ನು ಬದಲಾಯಿಸಿದಳು. ಅವಳು ನೆಲದ ಮೇಲೆ ಮಲಗಿಕೊಂಡು ಮಂಥರೆಗೆ ಹೇಳಿದಳು (೫೭) :

ಇಹ ವಾ ಮಾಂ ಮೃತಾಂ ಕುಬ್ಜೇ ನೃಪಾಯಾವೇದಯಿಷ್ಯಸಿ ।
ವನಂ ತು ರಾಘವೇ ಪ್ರಾಪ್ತೇ ಭರತಃ ಪ್ರಾಪ್ಸ್ಯತಿ ಕ್ಷಿತಿಮ್ ॥ ೫೮

ನ ಸುವರ್ಣೇನ ಮೇ ಹ್ಯರ್ಥೋ ನ ರತ್ನೈರ್ನ ಚ ಭೋಜನೈಃ ।
ಏಷ ಮೇ ಜೀವಿತಸ್ಯಾಂತೋ ರಾಮೋ ಯದ್ಯಭಿಷಿಚ್ಯತೇ ॥ ೫೯

ಅಥೋ ಪುನಸ್ತಾಂ ಮಹಿಷೀಂ ಮಹೀಕ್ಷಿತೋ
ವಚೋಬಿರತ್ಯರ್ಥಮಹಾಪರಾಕ್ರಮೈಃ ।
ಉವಾಚ ಕುಬ್ಜಾ ಭರತಸ್ಯ ಮಾತರಂ
ಹಿತಂ ವಚೋ ರಾಮಮುಪೋತ್ಯ ಚಾಹಿತಮ್ ॥ ೬೦

ಪ್ರಪತ್ಸ್ಯತೇ ರಾಜ್ಯಮಿದಂ ಹಿ ರಾಘವೋ
ಯದಿ ಧ್ರುವಂ ತ್ವಂ ಸಸುತಾ ಚ ತಪ್ಸ್ಯಸೇ ।
ಅತೋ ಹಿ ಕಲ್ಯಾಣಿ ಯತಸ್ವ ತತ್ತಥಾ
ಯಥಾ ಸುತಸ್ತೇ ಭರತೋಽಭಿಷೇಕ್ಷ್ಯತೇ ॥ ೬೧

ತಥಾತಿವಿದ್ಧಾ ಮಹಿಷೀ ತು ಕುಬ್ಜಯಾ
ಸಮಾಹತಾ ವಾಗಿಷುಭಿರ್ಮುಹುರ್ಮುಹುಃ ।

---

"ಮಂಥರೆ, ಇಲ್ಲಿ ನಾನು ಸತ್ತುಹೋದೆನೆಂಬ ಸುದ್ದಿಯನ್ನು ನೀನು ರಾಜನಿಗೆ ಹೇಳಬೇಕಾಗಬಹುದು. ಇಲ್ಲವೆ, ರಾಮನು ಅರಣ್ಯಕ್ಕೆ ಹೊರಟುಹೋದ ಮೇಲೆ ಭರತನು ರಾಜ್ಯವನ್ನು ಪಡೆಯುವನು. ನನಗೆ ಚಿನ್ನ ಬೇಡ, ರತ್ನ ಬೇಡ, ಆಹಾರವೂ ಬೇಡ. ರಾಮನಿಗೇನಾದರೂ ಪಟ್ಟಾಭಿಷೇಕವಾದರೆ ನನ್ನ ಬದುಕು ಇಲ್ಲಿಗೆ ಮುಗಿಯಿತು" ಎಂದಳು (೫೮-೫೯). ಆಗ ಆ ಗೂನಿಯು ರಾಜಮಹಿಷಿಯಾದ ಭರತನ ತಾಯಿಗೆ, ತಾನು ಗೆದ್ದಂತೆ ಪರಾಕ್ರಮದ ಮಾತುಗಳನ್ನು ಮತ್ತೆ ಹೇಳಿದಳು. ಶ್ರೀರಾಮನನ್ನು ಗುರಿ ಮಾಡಿ ಅವಳು ಆಡಿದ ಮಾತು (ಕೇಳುವುದಕ್ಕೆ) ಹಿತಕಾರಿಯೂ (ಪರಿಣಾಮದಲ್ಲಿ) ಅಹಿತಕಾರಿಯೂ ಆಗಿತ್ತು (೬೦). ಅವಳು "ರಾಮನಿಗೇನಾದರೂ ರಾಜ್ಯವು ಲಭಿಸಿದರೆ ನೀನೂ ನಿನ್ನ ಮಗನೂ ನಿಶ್ಚಯವಾಗಿಯೂ ಕಷ್ಟಕ್ಕೆ ಸಿಕ್ಕುತ್ತೀರಿ. ಆದ್ದರಿಂದ, ಕಲ್ಯಾಣಿ, ನಿನ್ನ ಮಗ ಭರತನಿಗೆ ಪಟ್ಟಾಭಿಷೇಕವಾಗುವಂತೆ ಪ್ರಯತ್ನಮಾಡು" ಎಂದು ನುಡಿದಳು (೬೧). ಹೀಗೆ ಆ

ನಿಧಾಯ ಹಸ್ತೌ ಹೃದಯೇಽತ್ತವಿಸ್ಮಿತಾ
ಶಶಂಸ ಕುಬ್ಜಾಂ ಕುಪಿತಾ ಪುನಃ ಪುನಃ ॥ ೬೨

ಯಮಸ್ಯ ವಾ ಪೂಂ ವಿಷಯಂ ಗತಾಮಿತೋ
ನಿಶಮ್ಯ ಕುಬ್ಜೇ ಪ್ರತಿವೇದಯಿಷ್ಯಸಿ ।
ವನಂ ಗತೇ ವಾ ಸುಚಿರಾಯ ರಾಘವೇ
ಸಮೃದ್ಧಕಾಮೋ ಭರತೋ ಭವಿಷ್ಯತಿ ॥ ೬೩

ಅಹಂ ಹಿ ನೈವಾಸ್ತರಣಾನಿ ನ ಸ್ರಜೋ
ನ ಚಂದನಂ ನಾಂಜನಪಾನಭೋಜನಮ್ ।
ನ ಕಿಂಚಿದಿಚ್ಛಾಮಿ ನ ಚೇಹ ಜೀವಿತಂ
ನ ಚೇದಿತೋ ಗಚ್ಛತಿ ರಾಘವೋ ವನಮ್ ॥ ೬೪

ಅಥೈತದುಕ್ತ್ವಾ ವಚನಂ ಸುದಾರುಣಂ
ನಿಧಾಯ ಸರ್ವಾಭರಣಾನಿ ಭಾಮಿನೀ ।
ಅಸಂವೃತಾಮಾಸ್ತರಣೇನ ಮೇದಿನೀಂ
ತಥಾಧಿಶೇಯೇ ಪತಿತೇವ ಕಿಂನರೀ ॥ ೬೫

---

ಗೂನಿಯು ವಾಗ್ಬಾಣಗಳಿಂದ ಮತ್ತೆ ಮತ್ತೆ ಚುಚ್ಚಿ ರೇಗಿಸುತ್ತಿರಲು, ಕೈಕೇಯಿಯು ತನ್ನ ಎದೆಯ ಮೇಲೆ ಕೈಗಳನ್ನಿಟ್ಟುಕೊಂಡು 'ರಾಜನು ನನಗೆ ಹೀಗೆ ದ್ರೋಹಮಾಡಬಹುದೆ ?' ಎಂದು ವಿಸ್ಮಿತಳಾದಳು. (ಮುನ್ನೆಚ್ಚರಿಕೆಯನ್ನು ಕೊಟ್ಟ) ಕುಬ್ಜೆಯನ್ನು ಹೊಗಳಿದಳು (೬೨). ಕೈಕೇಯಿಯು "ಕುಬ್ಜೆ, ನಾನು ಇಲ್ಲಿಂದ ಯಮಮಂದಿರಕ್ಕೆ ಹೋದದನ್ನು ನೀನು ನೋಡಿ ಪ್ರಕಟಿಸಬೇಕಾಗಿ ಬರುತ್ತದೆ. ಇಲ್ಲವೆ, ರಾಮನು ದೀರ್ಘಕಾಲ ವನವಾಸಕ್ಕೆ ಹೊರಟುಹೋದಮೇಲೆ ಭರತನು ಸಕಲ ಇಷ್ಟಾರ್ಥಗಳನ್ನೂ ಪಡೆಯುತ್ತಾನೆ. ರಾಮನು ಇಲ್ಲಿಂದ ಕಾಡಿಗೆ ಹೊರಟುಹೋಗದಿದ್ದರೆ, ನಾನಂತೂ ಹಾಸಿಗೆಯಲ್ಲಿ ಮಲಗುವವಳಲ್ಲ. ಹೂಗಳನ್ನು ಮುಡಿಯುವವಳಲ್ಲ. ಗಂಧವನ್ನು ತೊಡೆಯುವವಳಲ್ಲ. ಸ್ನಾನವೂ ಬೇಡ, ಪಾನವೂ ಬೇಡ, ಭೋಜನವೂ ಬೇಡ. ನನಗೆ ಏನೂ ಬೇಕಾಗಿಲ್ಲ. ಈ ಪ್ರಾಣವೂ ಬೇಕಾಗಿಲ್ಲ" ಎಂದಳು (೬೩-೬೪). ಹೀಗೆ ಕರ್ಣಕಠೋರವಾದ

ಉದೀರ್ಣಸಂರಂಭತಮೋವೃತಾನನಾ
ತಥಾವಮುಕ್ತೋತ್ತಮಮಾಲ್ಯಭೂಷಣಾ ।
ನರೇಂದ್ರಪತ್ನೀ ವಿಮನಾ ಬಭೂವ ಸಾ
ತಮೋವೃತಾ ದ್ಯೌರಿವ ಮಗ್ನತಾರಕಾ ॥ ೬೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವಮಃ ಸರ್ಗಃ

---

## ದಶಮಃ ಸರ್ಗಃ

### ಕೈಕೇಯ್ಯನುನಯಃ

ವಿದರ್ಶಿತಾ ಯದಾ ದೇವೀ ಕುಬ್ಜಯಾ ಪಾಪಯಾ ಭೃಶಮ್ ।
ತದಾ ಶೇತೇ ಸ್ಮ ಸಾ ಭೂಮೌ ದಿಗ್ಧವಿದ್ಧೇವ ಕಿಂನರೀ ॥ ೧

---

ಮಾತನ್ನು ಹೇಳಿ ಆ ಕೋಪನೆಯು ಸಮಸ್ತ ಆಭರಣಗಳನ್ನೂ ಕಿತ್ತೆಸೆದಳು. ಬರಿಯ ನೆಲದ ಮೇಲೆ ಬಿದ್ದುಕೊಂಡು ಆಕಾಶದಿಂದ ಉರುಳಿದ ಕಿನ್ನರಿಯೋ ಎಂಬಂತೆ ಕಾಣುತ್ತಿದ್ದಳು (೬೫). ಕೋಪವೆಂಬ ಕತ್ತಲೆಯು ಮುಸುಕಿ ಆ ರಾಜಪತ್ನಿಯ ಮುಖವು ಕಾಂತಿಹೀನವಾಗಿತ್ತು. ಮುಡಿದ ಹೂವನ್ನೂ ತೊಟ್ಟ ಒಡವೆಯನ್ನೂ ತೆಗೆದು ಎಸೆದಿದ್ದಳು. ವಿಷಣ್ಣಳಾದ ಆ ಕೈಕೇಯಿಯು (ಮೋಡದಿಂದ) ನಕ್ಷತ್ರಗಳು ಮರೆಯಾಗಿರುವಾಗ ಕತ್ತಲೆಯಿಂದ ಕೂಡಿದ ಗಗನದಂತೆ ತೋರುತ್ತಿದ್ದಳು (೬೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಒಂಬತ್ತನೆಯ ಸರ್ಗ

---

## ಸರ್ಗ ೧೦

### ದಶರಥನು ಕೋಪಗೃಹಕ್ಕೆ ಬಂದು ಕೈಕೇಯಿಯನ್ನು ಸಮಾಧಾನಗೊಳಿಸಲು ಪ್ರಯತ್ನಿಸುವುದು.

ಈ ರೀತಿಯಲ್ಲಿ ಕೆಟ್ಟಬುದ್ಧಿಯ ಕುಬ್ಜೆಯು ಬಹಳ ದುರ್ಬೋಧನೆ ಮಾಡಿ ಕೈಕೇಯೀದೇವಿಗೆ ತಪ್ಪುದಾರಿಯನ್ನು ತೋರಿಸಿದಳು. ಕೈಕೇಯಿಯು ವಿಷದಿಗ್ಧವಾದ ಬಾಣದಿಂದ ನೊಂದ ಕಿನ್ನರಿಯಂತೆ ನೆಲದಮೇಲೆ ಮಲಗಿ

ನಿಶ್ಚಿತ್ಯ ಮನಸಾ ಕೃತ್ಯಂ ಸಾ ಸಮ್ಯಗಿತಿ ಭಾಮಿನೀ ।
ಮಂಥರಾಯೈ ಶನೈಃ ಸರ್ವಮಾಚಚಕ್ಷೇ ವಿಚಕ್ಷಣಾ ॥ ೨

ಸಾ ದೀನಾ ನಿಶ್ಚಯಂ ಕೃತ್ವಾ ಮಂಥರಾವಾಕ್ಯಮೋಹಿತಾ ।
ನಾಗಕನ್ಯೇವ ನಿಶ್ವಸ್ಯ ದೀರ್ಘಮುಷ್ಣಂ ಚ ಭಾಮಿನೀ ॥ ೩

ಮುಹೂರ್ತಂ ಚಿಂತಯಾಮಾಸ ಮಾರ್ಗಮಾತ್ಮಸುಖಾವಹಮ್ ।
ಸಾ ಸುಹೃಚ್ಚಾರ್ಥಕಾಮಾ ಚ ತನ್ನಿಶಮ್ಯ ಸುನಿಶ್ಚಯಮ್ ॥ ೪

ಬಭೂವ ಪರಮಪ್ರೀತಾ ಸಿದ್ಧಿಂ ಪ್ರಾಪ್ಯೇವ ಮಂಥರಾ ।
ಅಥ ಸಾಮರ್ಷಿತಾ ದೇವೀ ಸಮ್ಯಕ್ಕೃತ್ವಾ ವಿನಿಶ್ಚಯಮ್ ॥ ೫

ಸಂವಿವೇಶಾಬಲಾ ಭೂಮೌ ನಿವೇಶ್ಯ ಭ್ರುಕುಟೀಂ ಮುಖೇ ।
ತತಶ್ಚಿತ್ರಾಣಿ ಮಾಲ್ಯಾನಿ ದಿವ್ಯಾನ್ಯಾಭರಣಾನಿ ಚ ॥ ೬

ಅಪವಿದ್ಧಾನಿ ಕೈಕೇಯ್ಯಾ ತಾನಿ ಭೂಮಿಂ ಪ್ರಪೇದಿರೇ ।
ತಯಾ ತಾನ್ಯಪವಿದ್ಧಾನಿ ಮಾಲ್ಯಾನ್ಯಾಭರಣಾನಿ ಚ ॥ ೭

---

ಬಿಟ್ಟಳು (೧). ಆ ಚತುರೆಯು ಮುಂದೆ ಏನೇನು ಮಾಡಬೇಕೆಂಬುದನ್ನು ಮನಸ್ಸಿನಲ್ಲಿ ಚೆನ್ನಾಗಿ ನಿಶ್ಚಯಿಸಿ, ಮೆಲ್ಲಗೆ ಅದೆಲ್ಲವನ್ನೂ ಮಂಥರೆಗೆ ಹೇಳಿದಳು (೨). ಮಂಥರೆಯ ಮಾತಿನಿಂದ ಬುದ್ಧಿಗೆಟ್ಟ ಆ ಕೋಪನೆಯು ವಿಷಣ್ಣಳಾಗಿ, ಅವಳ ಮಾತಿನಂತೆ ನಡೆಯಬೇಕೆಂದು ನಿರ್ಧರಿಸಿದಳು. ಸರ್ಪಿಣಿಯಂತೆ ಬಿಸಿಯಾದ ನಿಟ್ಟುಸಿರನ್ನು ಬಿಡುತ್ತ ತನಗೆ ಸುಖಕರವಾದ ದಾರಿಯನ್ನು ಸ್ವಲ್ಪ ಹೊತ್ತು ಚಿಂತಿಸಿದಳು (೩). ಮಂಥರೆಯಾದರೋ ಕೈಕೇಯಿಯಲ್ಲಿ ಸಹಜವಾದ ಪ್ರೀತಿಯುಳ್ಳವಳೂ ಸ್ವಾರ್ಥಪರಳೂ ಆಗಿದ್ದಳು. ಕೈಕೇಯಿಯ ನಿರ್ಧಾರವನ್ನರಿತ ಮೇಲೆ ಅವಳು ಕಾರ್ಯಸಿದ್ಧಿಯಾಗಿಯೇ ಬಿಟ್ಟಿತೆಂಬಂತೆ ಆನಂದದಿಂದ ಹಿಗ್ಗಿದಳು (೪-೫). ಅನಂತರ ಹೊಟ್ಟೆಕಿಚ್ಚಿನಿಂದ ಕುದಿಯುತ್ತಿದ್ದ ಕೈಕೇಯಿಯು ಹೀಗೆಯೇ ಮಾಡಬೇಕೆಂದು ನಿಶ್ಚಯಿಸಿ ಹುಬ್ಬುಗಂಟಿಕ್ಕಿ ನೆಲದಲ್ಲಿ ಒರಗಿದಳು. ಅವಳು ಕಿತ್ತೆಸೆದ ವಿವಿಧ ವರ್ಣದ ಹೂಮಾಲೆಗಳೂ ದಿವ್ಯಾಭರಣಗಳೂ ಭೂಮಿಯ ಮೇಲೆ ಚೆಲ್ಲಾಪಿಲ್ಲಿಯಾಗಿ

ಅಶೋಭಯಂತ ವಸುಧಾಂ ನಕ್ಷತ್ರಾಣಿ ಯಥಾ ನಭಃ ।
ಕ್ರೋಧಾಗಾರೇ ನಿಪತಿತಾ ಸಾ ಬಭೌ ಮಲಿನಾಂಬರಾ ॥ ೮

ಏಕವೇಣೀಂ ದೃಢಂ ಬದ್ಧ್ವಾ ಗತಸತ್ತ್ವೇವ ಕಿಂನರೀ ।
ಆಜ್ಞಾಪ್ಯ ತು ಮಹಾರಾಜೋ ರಾಘವಸ್ಯಾಭಿಷೇಚನಮ್ ॥ ೯

ಉಪಸ್ಥಾನಮನುಜ್ಞಾಪ್ಯ ಪ್ರವಿವೇಶ ನಿವೇಶನಮ್ ।
ಅದ್ಯ ರಾಮಾಭಿಷೇಕೋ ವೈ ಪ್ರಸಿದ್ಧ ಇತಿ ಜಜ್ಞಿವಾನ್ ॥ ೧೦

ಪ್ರಿಯಾರ್ಹಾಂ ಪ್ರಿಯಮಾಖ್ಯಾತುಂ ವಿವೇಶಾಂತಃಪುರಂ ವಶೀ ।
ಸ ಕೈಕೇಯ್ಯಾ ಗೃಹಂ ಶ್ರೇಷ್ಠಂ ಪ್ರವಿವೇಶ ಮಹಾಯಶಾಃ ॥ ೧೧

ಪಾಂಡರಾಭ್ರಮಿವಾಕಾಶಂ ರಾಹುಯುಕ್ತಂ ನಿಶಾಕರಃ ।
ಶುಕಬರ್ಹಿಣಸಂಘುಷ್ಟಂ ಕ್ರೌಂಚಹಂಸರುತಾಯುತಮ್ ॥ ೧೨

---

ಹರಡಿದವು (೬-೭). ಆಕಾಶದಲ್ಲಿ ಬಿತ್ತರಿಸಿದ ನಕ್ಷತ್ರಗಳಂತೆ ಕಂಗೊಳಿಸುತ್ತ ಅವು ನೆಲಕ್ಕೆ ಒಂದು ಶೋಭೆಯನ್ನುಂಟುಮಾಡಿದವು. ಅವಳು ಕೊಳೆಬಟ್ಟೆಯನ್ನುಟ್ಟು ಒಂಟಿಜಡೆಯನ್ನು ಬಿಗಿದು ಕಟ್ಟಿ ಬಿದ್ದುಕೊಂಡಿರಲು, ಎಚ್ಚರದಪ್ಪಿ ಭೂಮಿಗೆ ಬಿದ್ದ ಕಿನ್ನರಿಯಂತೆ ಕಾಣಿಸುತ್ತಿದ್ದಳು (೮). ಇತ್ತ ದಶರಥ ಮಹಾರಾಜನು ಶ್ರೀರಾಮನ ಪಟ್ಟಾಭಿಷೇಕಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುವಂತೆ ಆಜ್ಞಾಪಿಸಿ, ರಾಜಸಭೆಯನ್ನು ವಿಸರ್ಜಿಸಿ ತನ್ನ ಭವನವನ್ನು ಪ್ರವೇಶಿಸಿದನು. 'ರಾಮಾಭಿಷೇಕವು ನಡೆಯಬೇಕೆಂದು ಈ ದಿನವೇ ನಿಶ್ಚಿತವಾಯಿತು. (ಇದು ಕೈಕೇಯಿಗೆ ಗೊತ್ತಿಲ್ಲ)' ಎಂದು ಅವನು ಭಾವಿಸಿದನು (೯-೧೦). ಕೀರ್ತಿಶಾಲಿಯೂ ಸ್ವತಂತ್ರೇಚ್ಛನೂ ಆದ ದಶರಥನು ತನ್ನ ಪ್ರಿಯಳಿಗೆ ಈ ಸಂತೋಷದ ಸುದ್ದಿಯನ್ನು ತಿಳಿಸಬೇಕೆಂದು ಕೈಕೇಯಿಯ ದಿವ್ಯವಾದ ಅಂತಃಪುರಕ್ಕೆ ಹೋದನು. ಬಿಳಿಯ ಮೋಡಗಳಿಂದ ಭವ್ಯವಾದ - ಆದರೆ ರಾಹುವು ಕಾದು ಕುಳಿತಿದ್ದ ಅಂತರಿಕ್ಷಕ್ಕೆ ಚಂದ್ರನು ಹೋದಂತಾಯಿತು (೧೧). ಆ ಭವನದ ಆವರಣದಲ್ಲಿ ಗಿಣಿಗಳ ಕೂಗು, ನವಿಲುಗಳ ಕೇಕೆ, ಕ್ರೌಂಚಪಕ್ಷಿಗಳ ಮಂಜುಳ ಧ್ವನಿ, ಹಂಸಗಳ ಕಲಕಲ ಶಬ್ದಗಳು ಕೇಳಿಸುತ್ತಿದ್ದವು. ವಿವಿಧ ವಾದ್ಯಗಳ ಇಂಪಾದ ನಾದವು ಹರಡಿತ್ತು. ಗೂನಿ

ವಾದಿತ್ರರವಸಂಘುಷ್ಟಂ ಕುಬ್ಜಾವಾಮನಿಕಾಯುತಮ್ ।
ಲತಾಗೃಹೈಶ್ಚಿತ್ರಗೃಹೈಶ್ಚಂಪಕಾಶೋಕಶೋಭಿತೈಃ ॥ ೧೩

ದಾಂತರಾಜತಸೌವರ್ಣವೇದಿಕಾಭಿಃ ಸಮಾಯುತಮ್ ।
ನಿತ್ಯಪುಷ್ಪಫಲೈರ್ವೃಕ್ಷೈರ್ವಾಪೀಭಿಶ್ಚೋಪಶೋಭಿತಮ್ ॥ ೧೪

ದಾಂತರಾಜತಸೌವರ್ಣೈಃ ಸಂವೃತಂ ಪರಮಾಸನೈಃ ।
ವಿವಿಧೈರನ್ನಪಾನೈಶ್ಚ ಭಕ್ಷೈಶ್ಚ ವಿವಿಧೈರಪಿ ॥ ೧೫

ಉಪಪನ್ನಂ ಮಹಾರ್ಹೈಶ್ಚ ಭೂಷಣೈಸ್ತ್ರಿದಿವೋಪಮಮ್ ।
ತತ್ಪ್ರವಿಶ್ಯ ಮಹಾರಾಜಃ ಸ್ವಮಂತಃಪುರಮೃದ್ಧಿಮತ್ ॥ ೧೬

ನ ದದರ್ಶ ಪ್ರಿಯಾಂ ಭಾರ್ಯಾಂ ಕೈಕೇಯೀಂ ಶಯನೋತ್ತಮೇ ।
ಸ ಕಾಮಬಲಸಂಯುಕ್ತೋ ರತ್ಯರ್ಥಂ ಮನುಜಾಧಿಪಃ ॥ ೧೭

ಅಪಶ್ಯನ್ ದಯಿತಾಂ ಭಾರ್ಯಾಂ ಪಪ್ರಚ್ಛ ವಿಷಸಾದ ಚ ।
ನ ಹಿ ತಸ್ಯ ಪುರಾ ದೇವೀ ತಾಂ ವೇಲಾಮತ್ಯವರ್ತತ ॥ ೧೮

---

ಯರೂ ಕುಳ್ಳಿಯರೂ ಆದ ಪರಿಚಾರಿಕೆಯರು ಅಲ್ಲಲ್ಲಿ ಕಾಣಿಸುತ್ತಿದ್ದರು. ಸಂಪಗೆ ಅಸುಗೆ ಮುಂತಾದ ಗಿಡಗಳಿರುವ ಲತಾಕುಂಜಗಳೂ ಚಿತ್ರಶಾಲೆಗಳೂ ಕಂಗೊಳಿಸುತ್ತಿದ್ದವು (೧೨-೧೩). ಆನೆಯ ದಂತ, ಬೆಳ್ಳಿ, ಬಂಗಾರಗಳಿಂದ ಅಲಂಕೃತವಾದ ಜಗುಲಿಗಳೂ ಸದಾ ಹಣ್ಣುಹೂಗಳಿಂದ ತುಳುಕುವ ಗಿಡಗಳೂ ಕೊಳಗಳೂ ರಂಜಿಸುತ್ತಿದ್ದವು. ಅಂತಃಪುರದೊಳಗೆ ದಂತ-ರಜತ - ಸುವರ್ಣಗಳಿಂದ ನಿರ್ಮಿಸಿದ ಶ್ರೇಷ್ಠವಾದ ಪೀಠಗಳನ್ನು ಹಾಕಿದ್ದರು. ನಾನಾ ಬಗೆಯ ಅನ್ನಪಾನಗಳೂ ವಿವಿಧ ಭಕ್ಷ್ಯಗಳೂ ಅನುವಾಗಿದ್ದವು (೧೪-೧೫). ಉಜ್ಜ್ವಲವಾದ ಅಲಂಕಾರಗಳಿಂದ ಸಿಂಗರಿಸಲ್ಪಟ್ಟ ಕೈಕೇಯಿಯ ಅಂತಃಪುರವು ಸ್ವರ್ಗಲೋಕದಂತೆ ರಮಣೀಯವಾಗಿತ್ತು. ಹೀಗೆ ಸಕಲ ಸಮೃದ್ಧಿಯಿಂದ ವಿರಾಜಿಸುತ್ತಿದ್ದ ತನ್ನ ಅಂತಃಪುರವನ್ನು ಮಹಾರಾಜನು ಪ್ರವೇಶಿಸಿದನು (೧೬). ಅಲ್ಲಿ ನೋಡಿದಾಗ ಉತ್ತಮವಾದ ಶಯನ ಸ್ಥಾನದಲ್ಲಿ ಪ್ರಿಯಪತ್ನಿಯಾದ ಕೈಕೇಯಿಯು ಕಾಣಿಸಲಿಲ್ಲ. ಕಾಮೋದ್ದೀಪಿತನಾದ

ನ ಚ ರಾಜಾ ಗೃಹಂ ಶೂನ್ಯಂ ಪ್ರವಿವೇಶ ಕದಾಚನ ।
ತತೋ ಗೃಹಗತೋ ರಾಜಾ ಕೈಕೇಯೀಂ ಪರ್ಯಪೃಚ್ಛತ ॥ ೧೯

ಯಥಾಪುರಮವಿಜ್ಞಾಯ ಸ್ವಾರ್ಥಲಿಪ್ಸುಮಪಂಡಿತಾಮ್ ।
ಪ್ರತೀಹಾರೀ ತ್ವಥೋವಾಚ ಸಂತ್ರಸ್ತಾ ಸುಕೃತಾಂಜಲಿಃ ॥ ೨೦

ದೇವ ದೇವೀ ಭೃಶಂ ಕ್ರುದ್ಧಾ ಕ್ರೋಧಾಗಾರಮಭಿದ್ರುತಾ ।
ಪ್ರತೀಹಾರ್ಯಾ ವಚಃ ಶ್ರುತ್ವಾ ರಾಜಾ ಪರಮದುರ್ಮನಾಃ ॥ ೨೧

ವಿಷಸಾದ ಪುನರ್ಭೂಯೋ ಲುಲಿತವ್ಯಾಕುಲೇಂದ್ರಿಯಃ ।
ತತ್ರ ತಾಂ ಪತಿತಾಂ ಭೂಮೌ ಶಯಾನಾಮತಥೋಚಿತಾಮ್ ॥ ೨೨

ಪ್ರತಪ್ತ ಇವ ದುಃಖೇನ ಸೋಽಪಶ್ಯಜ್ಜಗತೀಪತಿಃ ।
ಸ ವೃದ್ಧಸ್ತರುಣೀಂ ಭಾರ್ಯಾಂ ಪ್ರಾಣೇಭ್ಯೋಽಪಿ ಗರೀಯಸೀಮ್ ॥

---

ರಾಜನು ವಿನೋದಾರ್ಥವಾಗಿ ಬಂದರೆ ದಯಿತೆ ಕಾಣಲಿಲ್ಲ. ಅವನು ವಿಷಣ್ಣನಾಗಿ "ಕೈಕೇಯಿ, ಎಲ್ಲಿ ಹೋದೆ?" ಎಂದು ಹೇಳಿಕೊಂಡನು. ಆ ರಾಣಿಯು ಹಿಂದೆ ಯಾವಾಗಲೂ ರಾಜನು ಬರುವ ವೇಳೆಯಲ್ಲಿ ಇಲ್ಲದೆ ಇರುತ್ತಿರಲಿಲ್ಲ (೧೭-೧೮). ದಶರಥನು ಶೂನ್ಯವಾದ ಅಂತಃಪುರಕ್ಕೆ ಬಂದುದೇ ಇಲ್ಲ. ಅನಂತರ ಆ ನೃಪಾಲನು "ಕೈಕೇಯಿಯು ಎಲ್ಲಿಗೆ ಹೋದಳು?" ಎಂದು ಸಹಜವಾಗಿ ಪ್ರತೀಹಾರಿಯನ್ನು ವಿಚಾರಿಸಿದನು. ಕೈಕೇಯಿಯು ಹಾಗೆ ಸ್ವಾರ್ಥಪರಾಯಣಳಾಗಿ ವಿವೇಕಭ್ರಷ್ಟಳಾಗಿರುವುದು ದಶರಥನಿಗೆ ತಿಳಿಯಲಿಲ್ಲ (೧೯). ಆಗ ಪ್ರತೀಹಾರಿಯು ಹೆದರುತ್ತ ಕೈಮುಗಿದುಕೊಂಡು "ಮಹಾರಾಜ, ಮಹಾರಾಣಿಯು ಏನು ಕಾರಣವೊ ಬಹಳ ಕೋಪಗೊಂಡು ಕೋಪಗೃಹಕ್ಕೆ ಹೋಗಿದ್ದಾಳೆ" ಎಂದಳು. ಆ ದ್ವಾರಪಾಲಿಕೆಯ ಮಾತನ್ನು ಕೇಳಿ ರಾಜನ ಮನಸ್ಸಿಗೆ ಬಹಳ ಖೇದವಾಯಿತು (೨೦-೨೧). ಅವನ ಇಂದ್ರಿಯಗಳೆಲ್ಲವೂ ತಳಮಳಗೊಂಡವು. ಮನಸ್ಸಿಗೆ ಬಹಳ ಕಳವಳವಾಯಿತು. ಅವನು (ತ್ವರೆಯಿಂದ ಕೋಪಗೃಹಕ್ಕೆ ಹೋಗಿ) ತನಗೆ ಯೋಗ್ಯವಲ್ಲದ ಬರಿಯ ನೆಲದ ಮೇಲೆ ಕೈಕೇಯಿಯು ಬಿದ್ದಿರುವುದನ್ನು ನೋಡಿ ದುಃಖದಿಂದ ಬೆಂದು ಹೋದಂತಾದನು. ತರುಣಿಯಾದ ಆ ಪತ್ನಿಯು ಈ ವೃದ್ಧನಿಗೆ ಪ್ರಾಣ

ಅಪಾಪಃ ಪಾಪಸಂಕಲ್ಪಾಂ ದದರ್ಶ ಧರಣೀತಲೇ ।
ಲತಾಮಿವ ವಿನಿಷ್ಕೃತ್ತಾಂ ಪತಿತಾಂ ದೇವತಾಮಿವ ॥ ೨೪

ಕಿಂನರೀಮಿವ ನಿರ್ಧೂತಾಂ ಚ್ಯುತಾಮಪ್ಸರಸಂ ಯಥಾ ।
ಮಾಲಾಮಿವ ಪರಿಭ್ರಷ್ಟಾಂ ಹರಿಣೀಮಿವ ಸಂಯುತಾಮ್ ॥ ೨೫

ಕರೇಣುಮಿವ ದಿಗ್ಧೇನ ವಿದ್ಧಾಂ ಮೃಗಯುನಾ ವನೇ ।
ಮಹಾಗಜ ಇವಾರಣ್ಯೇ ಸ್ನೇಹಾತ್ ಪರಿಮಮರ್ಶ ತಾಮ್ ॥ ೨೬

ಪರಿಮೃಶ್ಯ ಚ ಪಾಣಿಭ್ಯಾಮಭಿಸಂತ್ರಸ್ತಚೇತನಃ ।
ಕಾಮೀ ಕಮಲಪತ್ರಾಕ್ಷೀಮುವಾಚ ವನಿತಾಮಿದಮ್ ॥ ೨೭

ನ ತೇಽಹಮಭಿಜಾನಾಮಿ ಕ್ರೋಧಮಾತ್ಮನಿ ಸಂಶ್ರಿತಮ್ ।
ದೇವಿ ಕೇನಾಭಿಯುಕ್ತಾಸಿ ಕೇನ ವಾಸಿ ವಿಮಾನಿತಾ ॥ ೨೮

ಯದಿದಂ ಮಮ ದುಃಖಾಯ ಶೇಷೇ ಕಲ್ಯಾಣಿ ಪಾಂಸುಷು ।
ಭೂಮೌ ಶೇಷೇ ಕಿಮರ್ಥಂ ತ್ವಂ ಮಯಿ ಕಲ್ಯಾಣಿ ಜೀವತಿ ॥ ೨೯

---

ಕ್ಕಿಂತಲೂ ಪ್ರಿಯತಮಳಾಗಿದ್ದಳು (೨೨-೨೩). ಸರಳ ಸ್ವಭಾವದ ರಾಜನು ನೆಲದ ಮೇಲೆ ಕೆಟ್ಟ ಉದ್ದೇಶದಿಂದ ಮಲಗಿದ್ದ ಕೈಕೇಯಿಯನ್ನು ಕಂಡನು. ಅವಳು ಕಿತ್ತೆಸೆದ ಬಳ್ಳಿಯಂತೆ, ಭೂಮಿಗೆ ಬಿದ್ದ ದೇವತೆಯಂತೆ, ತಳ್ಳಿ ಬೀಳಿಸಿದ ಕಿನ್ನರಿಯಂತೆ, ಜಾರಿಬಿದ್ದ ಅಪ್ಸರೆಯಂತೆ, ಹರಿದುಹಾಕಿದ ಮಾಲೆಯಂತೆ, ಸೆರೆಹಿಡಿದು ಕಟ್ಟಿದ ಹೆಣ್ಣುಜಿಂಕೆಯಂತೆ ಇದ್ದಳು (೨೪-೨೫). ಕಾಡಿನಲ್ಲಿ ಬೇಟೆಗಾರನ ವಿಷಾಕ್ತಬಾಣದ ಹೊಡೆತದಿಂದ ನರಳುವ ಹೆಣ್ಣಾನೆಯನ್ನು ಮಹಾಗಜವು ಸೊಂಡಿಲಿನಿಂದ ನೇವರಿಸುವಂತೆ, ಮಹಾರಾಜನು ಪ್ರೀತಿಯಿಂದ ಆಕೆಯನ್ನು ಕೈಯಿಂದ ಸವರಿದನು (೨೬). ಆ ಕಾಮಿಯು ಎರಡು ಕೈಗಳಿಂದಲೂ ಅವಳನ್ನು ನೇವರಿಸುತ್ತ ಮನಸ್ಸಿನಲ್ಲಿ ಅಳುಕುತ್ತ ಆ ಕಮಲ ದಳನೇತ್ರೆಯನ್ನು ಕುರಿತು ಹೀಗೆಂದನು (೨೭) : "ದೇವಿ, ನಿನ್ನ ಮನಸ್ಸಿನಲ್ಲಿ ಇಷ್ಟು ಕೋಪವೇಕೆ ಬಂದಿತೆಂಬುದು ನನಗೆ ತಿಳಿಯದು. ಯಾರಾದರೂ ನಿನ್ನನ್ನು ಬಯ್ದರೆ ? ಅವಮಾನಪಡಿಸಿದರೆ? ಈ ಧೂಳಿನಲ್ಲಿ ಮಲಗಿರುವುದರಿಂದ ನನಗೆ ಬಹಳ ದುಃಖವಾಗಿದೆ. ಮಂಗಳಾಗಿ, ನಾನು ಬದುಕಿರುವಾಗ

ಭೂತೋಪಹತಚಿತ್ತೇವ ಮಮ ಚಿತ್ತಪ್ರಮಾಥಿನೀ ।
ಸಂತಿ ಮೇ ಕುಶಲಾ ವೈದ್ಯಾಸ್ತ್ವಭಿತುಷ್ಟಾಶ್ಚ ಸರ್ವಶಃ ॥ ೩೦

ಸುಖಿತಾಂ ತ್ವಾಂ ಕರಿಷ್ಯಂತಿ ವ್ಯಾಧಿಮಾಚಕ್ಷ್ವ ಭಾಮಿನಿ ।
ಕಸ್ಯ ವಾ ತೇ ಪ್ರಿಯಂ ಕಾರ್ಯಂ ಕೇನ ವಾ ವಿಪ್ರಿಯಂ ಕೃತಮ್ ॥ ೩೧

ಕಃ ಪ್ರಿಯಂ ಲಭತಾಮದ್ಯ ಕೋ ವಾ ಸುಮಹದಪ್ರಿಯಮ್ ।
ಮಾ ರೋದೀರ್ಮಾ ಚ ಕಾರ್ಷೀಸ್ತ್ವಂ ದೇವಿ ಸಂಪರಿಶೋಷಣಮ್ ॥ ೩೨

ಅವಧ್ಯೋ ವಧ್ಯತಾಂ ಕೋ ವಾ ವಧ್ಯಃ ಕೋ ವಾ ವಿಮುಚ್ಯತಾಮ್
ದರಿದ್ರಃ ಕೋ ವಾ ಭವತ್ವಾಢ್ಯೋ ದ್ರವ್ಯವಾನ್ವಾಪ್ಯಕಿಂಚನಃ ॥ ೩೩

ಅಹಂ ಚೈವ ಮದೀಯಾಶ್ಚ ಸರ್ವೇ ತವ ವಶಾನುಗಾಃ ।
ನ ತೇ ಕಂಚಿದಭಿಪ್ರಾಯಂ ವ್ಯಾಹಂತುಮಹಮುತ್ಸಹೇ ॥ ೩೪

---

ನೀನು ನೆಲದ ಮೇಲೆ ಮಲಗಬೇಕೆ ? (೨೮-೨೯). ನಿನ್ನನ್ನು ನೋಡಿದರೆ ದೆವ್ವ ಹಿಡಿದವಳನ್ನು ನೋಡಿದಂತಾಗಿ ನನ್ನ ಮನಸ್ಸು ಸಂಕಟದಿಂದ ಕಡೆದು ಹೋಗುತ್ತಿದೆ. ನಮ್ಮ ಬಳಿ ಪ್ರಸಿದ್ಧರಾದ ಕುಶಲವೈದ್ಯರು ಬೇಕಾದಷ್ಟು ಮಂದಿ ಇದ್ದಾರೆ. ಕೋಪನೆ, ಯಾವುದಾದರೂ ವ್ಯಾಧಿಯಿದ್ದರೆ ತಿಳಿಸು, ಆ ವೈದ್ಯರು ಗುಣಪಡಿಸುವರು. ನಿನಗೆ ಬೇಕಾದ ಯಾರಿಗಾದರೂ ಒಳ್ಳೆಯದನ್ನು ಮಾಡಬೇಕೆ? ಯಾರಾದರೂ ನಿನಗೆ ವ್ಯಥೆಯಾಗುವ ಕಾರ್ಯವನ್ನು ಮಾಡಿದರೆ ? (೩೦-೩೧). ದೇವಿ, ಯಾರಿಗೆ ಒಳ್ಳೆಯದನ್ನು ಮಾಡಿಕೊಡಬೇಕು ? ಯಾರನ್ನು ದಂಡಿಸಬೇಕು? ಹೇಳು. ಹೀಗೆ ನೀನು ಅಳಬೇಡ. ಹೀಗೆ ದೇಹವನ್ನು ಬಳಲಿಸಬೇಡ (೩೨). (ನಿನ್ನ ಸಂತೋಷಕ್ಕಾಗಿ) ಕೊಲೆಗೆ ಅರ್ಹನಲ್ಲದವನನ್ನಾದರೂ ಕೊಲ್ಲಿಸುತ್ತೇನೆ. ಮರಣದಂಡನೆಗೆ ಒಳಗಾದವನನ್ನು ಬಿಡಿಸುತ್ತೇನೆ. ಯಾವ ದರಿದ್ರನನ್ನು ಶ್ರೀಮಂತನನ್ನಾಗಿ ಮಾಡಬೇಕು ? ಯಾವ ಶ್ರೀಮಂತನನ್ನು ದರಿದ್ರನನ್ನಾಗಿ ಮಾಡಬೇಕು? (೩೩). ನಾನು, ನನ್ನವರು-ಎಲ್ಲರೂ ನಿನಗೆ ಅಧೀನ ರಾಗಿದ್ದೇವೆ. ನಿನ್ನ ಅಭಿಲಾಷೆಗೆ ನಾನೆಂದಿಗೂ ಅಡ್ಡಬರುವುದಿಲ್ಲ. ನನ್ನ ಪ್ರಾಣ

ಆತ್ಮನೋ ಜೀವಿತೇನಾಪಿ ಬ್ರೂಹಿ ಯನ್ಮನಸೇಚ್ಛಸಿ ।
ಬಲಮಾತ್ಮನಿ ಜಾನಂತೀ ನ ಮಾಂ ಶಂಕಿತುಮರ್ಹಸಿ ॥ ೩೫

ಕರಿಷ್ಯಾಮಿ ತವ ಪ್ರೀತಿಂ ಸುಕೃತೇನಾಪಿ ತೇ ಶಪೇ ।
ಯಾವದಾವರ್ತತೇ ಚಕ್ರಂ ತಾವತೀ ಮೇ ವಸುಂಧರಾ ॥ ೩೬

ಪ್ರಾಚೀನಾಃ ಸಿಂಧುಸೌವೀರಾಃ ಸೌರಾಷ್ಟ್ರಾ ದಕ್ಷಿಣಾಪಥಾಃ ।
ವಂಗಾಂಗಮಗಧಾ ವತ್ಸಾಃ ಸಮೃದ್ಧಾಃ ಕಾಶಿಕೋಸಲಾಃ ॥ ೩೭

ತತ್ರ ಜಾತಂ ಬಹು ದ್ರವ್ಯಂ ಧನಧಾನ್ಯಮಜಾವಿಕಮ್ ।
ತತೋ ವೃಣೀಷ್ವ ಕೈಕೇಯಿ ಯದ್ಯತ್ತ್ವಂ ಮನಸೇಚ್ಛಸಿ ॥ ೩೮

ಕಿಮಾಯಾಸೇನ ತೇ ಭೀರು ಉತ್ತಿಷ್ಠೋತ್ತಿಷ್ಠ ಶೋಭನೇ ।
ತತ್ತ್ವಂ ಮೇ ಬ್ರೂಹಿ ಕೈಕೇಯಿ ಯತಸ್ತೇ ಭಯಮಾಗತಮ್ ॥ ೩೯

ತತ್ತೇ ವ್ಯಪನಯಿಷ್ಯಾಮಿ ನೀಹಾರಮಿವ ರಶ್ಮಿವಾನ್ ।
ತಥೋಕ್ತಾ ಸಾ ಸಮಾಶ್ವಸ್ತಾ ವಕ್ತುಕಾಮಾ ತದಪ್ರಿಯಮ್ ॥ ೪೦

---

ವನ್ನಾದರೂ ಒತ್ತೆಯಿಡುತ್ತೇನೆ. ನಿನ್ನ ಮನಸ್ಸಿನಲ್ಲಿ ಏನಿದೆ ? ಹೇಳು. ನಿನ್ನಲ್ಲಿ ನನ್ನ ಪ್ರೇಮದ ಬಲವೆಷ್ಟೆಂಬುದು ಗೊತ್ತಿರುವಾಗ ನೀನು ಸಂದೇಹ ಪಡುವುದು ಯುಕ್ತವಲ್ಲ (೩೪-೩೫). ನಿನ್ನ ಇಷ್ಟವನ್ನು ನಡೆಸಿಕೊಡುತ್ತೇನೆಂದು ನನ್ನ ಪುಣ್ಯದಮೇಲೆ ಆಣೆಯಿಟ್ಟು ಶಪಥಮಾಡುತ್ತೇನೆ. ಈ ಸೂರ್ಯಮಂಡಲವು ಎಲ್ಲಿಯವರೆಗೆ ಸುತ್ತಿ ಬೆಳಗುವುದೊ ಅಲ್ಲಿಯವರೆಗಿನ ಸಮಸ್ತ ಪೃಥ್ವಿಯೂ ನನಗೆ ಸೇರಿದ್ದು (೩೬). ಪೂರ್ವದೇಶಗಳು, ಸಿಂಧು, ಸೌವೀರ, ಸೌರಾಷ್ಟ್ರ, ದಕ್ಷಿಣಾಪಥ, ಅಂಗ, ವಂಗ, ಮಗಧ, ಮತ್ಸ್ಯ, ಕಾಶಿ, ಕೋಸಲ ರಾಜ್ಯಗಳೆಲ್ಲವೂ ನನ್ನ ವಶದಲ್ಲಿವೆ. ಅಲ್ಲಿರುವ ಧನಧಾನ್ಯ ಪಶು ಸಂಪತ್ತುಗಳಲ್ಲಿ ಯಾವುದು ನಿನಗೆ ಬೇಕು? ಕೈಕೇಯಿ, ನಿನಗೆ ಬೇಕಾದ್ದನ್ನು ಕೇಳಿಕೊ (೩೭-೩೮). ಭೀರು, ಹೀಗೆ ಆಯಾಸ ಪಡುವುದೇಕೆ? ಸುಂದರಿ, ಏಳು ಏಳು. ಯಾವುದರಿಂದ ನಿನಗೆ ಭಯವಾಗಿದೆ? ಹೇಳು. ಕೈಕೇಯಿ, ಸೂರ್ಯನು ಮಂಜನ್ನು ಕರಗಿಸುವಂತೆ ನಿನ್ನ ಕಷ್ಟವನ್ನು ಪರಿಹರಿಸುತ್ತೇನೆ" ಎಂದನು. ಹೀಗೆ ದಶರಥನು ಸಮಾಧಾನವನ್ನು ಹೇಳಲಾಗಿ ಅಪ್ರಿಯವಾದ

ಪರಿಪೀಡಯಿತುಂ ಭೂಯೋ ಭರ್ತಾರಮುಪಚಕ್ರಮೇ ॥

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದಶಮಃ ಸರ್ಗಃ

---

## ಏಕಾದಶಃ ಸರ್ಗಃ

ವರದ್ವಯನಿರ್ಬಂಧಃ

ತಂ ಮನ್ಮಥಶರೈರ್ವಿದ್ಧಂ ಕಾಮವೇಗವಶಾನುಗಮ್ ।
ಉವಾಚ ಪೃಥಿವೀಪಾಲಂ ಕೈಕೇಯೀ ದಾರುಣಂ ವಚಃ ॥ ೧

ನಾಸ್ಮಿ ವಿಪ್ರಕೃತಾ ದೇವ ಕೇನಚಿನ್ನಾವಮಾನಿತಾ ।
ಅಭಿಪ್ರಾಯಸ್ತು ಮೇ ಕಶ್ಚಿತ್ತಮಿಚ್ಛಾಮಿ ತ್ವಯಾ ಕೃತಮ್ ॥ ೨

---

ಆ ವಿಷಯವನ್ನು ಹೇಳಬೇಕೆಂದು ಕೈಕೇಯಿಯು ಸಂಕಲ್ಪಿಸಿದಳು. ಅದಕ್ಕೆ ಮೊದಲು ಗಂಡನನ್ನು ಇನ್ನೂ ನಿರ್ಬಂಧಕ್ಕೆ ಸಿಕ್ಕಿಸಿಕೊಳ್ಳಲಾರಂಭಿಸಿದಳು (೩೯-೪೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹತ್ತನೆಯ ಸರ್ಗ

---

## ಸರ್ಗ ೧೧

**ಎರಡು ವರಗಳನ್ನು ಸಲ್ಲಿಸಬೇಕೆಂದು ಕೈಕೇಯಿಯು ದಶರಥನನ್ನು ಒತ್ತಾಯಪಡಿಸುವುದು.**

ದಶರಥರಾಜನು ಮನ್ಮಥಬಾಣಗಳಿಂದ ಪೀಡಿತನಾಗಿ ಕಾಮವಶನಾಗಿರುತ್ತಾನೆಂಬುದನ್ನು ಬಲ್ಲ ಕೈಕೇಯಿಯು ಕ್ರೂರವಾದ ಮಾತನ್ನಾಡಲು ಪ್ರಾರಂಭಿಸಿದಳು (೧) : "ಮಹಾರಾಜ, ನನಗೆ ಯಾರೂ ಕೇಡನ್ನು ಎಸಗಿಲ್ಲ. ಯಾರೂ ಅವಮಾನಗೊಳಿಸಿಲ್ಲ. ನನ್ನ ಇಷ್ಟ ಒಂದನ್ನು ನೀನು ನೆರವೇರಿಸಿ

ಪ್ರತಿಜ್ಞಾಂ ಪ್ರತಿಜ್ಞಾನೀಷ್ವ ಯದಿ ತ್ವಂ ಕರ್ತುಮಿಚ್ಛಸಿ ।
ಅಥ ತದ್ವ್ಯಾಹರಿಷ್ಯಾಮಿ ಯದಭಿಪ್ರಾರ್ಥಿತಂ ಮಯಾ ॥ ೩

ತಾಮುವಾಚ ಮಹಾರಾಜಃ ಕೈಕೇಯೀಮೀಷದುತ್ಸ್ಮಿತಃ ।
ಕಾಮೀ ಹಸ್ತೇನ ಸಂಗೃಹ್ಯ ಮೂರ್ಧಜೇಷು ಶುಚಿಸ್ಮಿತಾಮ್ ॥ ೪

ಅವಲಿಪ್ತೇ ನ ಜಾನಾಸಿ ತ್ವತ್ತಃ ಪ್ರಿಯತರೋ ಮಮ ।
ಮನುಜೋ ಮನುಜವ್ಯಾಘ್ರಾದ್ರಾಮಾದನ್ಯೋ ನ ವಿದ್ಯತೇ ॥ ೫

ತೇನಾಜಯ್ಯೇನ ಮುಖ್ಯೇನ ರಾಘವೇಣ ಮಹಾತ್ಮನಾ ।
ಶಪೇ ತೇ ಜೀವನಾರ್ಹೇಣ ಬ್ರೂಹಿ ಯನ್ಮನಸೇಚ್ಛಸಿ ॥ ೬

ಯಂ ಮುಹೂರ್ತಮಪಶ್ಯಂಸ್ತು ನ ಜೀವೇಯಮಹಂ ಧ್ರುವಮ್ ।
ತೇನ ರಾಮೇಣ ಕೈಕೇಯಿ ಶಪೇ ತೇ ವಚನಕ್ರಿಯಾಮ್ ॥ ೭

ಆತ್ಮನಾ ವಾತ್ಮಜೈಶ್ಚಾನ್ಯೈರ್ವೃಣೇ ಯಂ ಮನುಜರ್ಷಭಮ್ ।
ತೇನ ರಾಮೇಣ ಕೈಕೇಯಿ ಶಪೇ ತೇ ವಚನಕ್ರಿಯಾಮ್ ॥ ೮

---

ಕೊಡಬೇಕೆಂಬುದೇ ನನ್ನ ಬಯಕೆ. ಅದನ್ನು ನೆರವೇರಿಸಿಕೊಡಲು ನಿನಗೆ ಇಚ್ಛೆಯಿದ್ದರೆ, ಆ ರೀತಿಯಲ್ಲಿ ನೀನು ಪ್ರತಿಜ್ಞೆ ಮಾಡಬೇಕು. ಆಗಲೇ ನನ್ನ ಅಭಿಲಾಷೆ ಏನೆಂಬುದನ್ನು ಹೇಳುತ್ತೇನೆ" ಎಂದು ನುಡಿದಳು (೨-೩). ಮಹಾರಾಜನಿಗೆ ಸ್ವಲ್ಪ ನಗು ಬಂದಿತು. ಆ ಕಾಮಿಯು ತನ್ನ ಕೈಯಿಂದ ಆ ಸುಂದರಿಯ ತಲೆಗೂದಲನ್ನು ಹಿಡಿದು ನೇವರಿಸುತ್ತ ಹೀಗೆಂದನು : "ಎಲೆ ಜಂಭದವಳೆ! ನಿನಗಿಂತಲೂ ಹೆಚ್ಚು ಪ್ರೀತಿಪಾತ್ರರಾದವರು ನನಗೆ ಇಲ್ಲವೆಂಬುದು ನಿನಗೆ ತಿಳಿಯದೆ ? ಪುರುಷೋತ್ತಮನಾದ ರಾಮನೊಬ್ಬನನ್ನು ಬಿಟ್ಟು ಅಂಥವರು ಇನ್ನೊಬ್ಬರಿಲ್ಲ (೪-೫). ಅಜೇಯನಾದ ಮಹಾಪುರುಷನೂ, ನನಗೆ ಅತ್ಯಂತ ಮುಖ್ಯನೂ, ನನ್ನ ಜೀವಕ್ಕೆ ಆಧಾರನೂ ಆದ ರಾಮನ ಹೆಸರಿನಲ್ಲಿ ಶಪಥ ಮಾಡುತ್ತೇನೆ. ನಿನ್ನ ಮನಸ್ಸಿನಲ್ಲಿರುವುದೇನು ? (೬). ಕೈಕೇಯಿ, ಯಾರನ್ನು ಒಂದು ಮುಹೂರ್ತಕಾಲ ನೋಡದಿದ್ದರೆ ನಾನು ನಿಶ್ಚಯವಾಗಿಯೂ ಬದುಕಲಾರೆನೊ, ಆ ಶ್ರೀರಾಮನ ಹೆಸರಿನಲ್ಲಿ ನಿನ್ನ ಮಾತನ್ನು ನಡೆಸಿಕೊಡುತ್ತೇನೆಂದು ಶಪಥ ಮಾಡುತ್ತೇನೆ (೭). ನನಗಿಂತಲೂ ನನ್ನ ಇತರ ಮಕ್ಕಳಿಗಿಂತಲೂ ಯಾವ ಪುರುಷಶ್ರೇಷ್ಠನು ಅಧಿಕ

ಭದ್ರೇ ಹೃದಯಮಪ್ಯೇತದನುಮೃಶ್ಯೋದ್ಧರಸ್ವ ಮೇ ।
ಏತತ್ಸಮೀಕ್ಷ್ಯ ಕೈಕೇಯಿ ಬ್ರೂಹಿ ಯತ್ ಸಾಧು ಮನ್ಯಸೇ ॥ ೯

ಬಲಮಾತ್ಮನಿ ಪಶ್ಯಂತೀ ನ ಮಾಂ ಶಂಕಿತುಮರ್ಹಸಿ ।
ಕರಿಷ್ಯಾಮಿ ತವ ಪ್ರೀತಿಂ ಸುಕೃತೇನಾಪಿ ತೇ ಶಪೇ ॥ ೧೦

ಸಾ ತದರ್ಥಮನಾ ದೇವೀ ತಮಭಿಪ್ರಾಯಮಾಗತಮ್ ।
ನಿರ್ಮಾಧ್ಯಸ್ಥ್ಯಾತ್ ಪ್ರಹರ್ಷಾಚ್ಚ ಬಭಾಷೇ ದುರ್ವಚಂ ವಚಃ ॥ ೧೧

ತೇನ ವಾಕ್ಯೇನ ಸಂಹೃಷ್ಟಾ ತಮಭಿಪ್ರಾಯಮಾತ್ಮನಃ ।
ವ್ಯಾಜಹಾರ ಮಹಾಘೋರಮಭ್ಯಾಗತಮಿವಾಂತಕಮ್ ॥ ೧೨

ಯಥಾ ಕ್ರಮೇಣ ಶಪಸಿ ವರಂ ಮಮ ದದಾಸಿ ಚ ।
ತಚ್ಛೃಣ್ವಂತು ತ್ರಯಸ್ತ್ರಿಂಶದ್ದೇವಾಃ ಸಾಗ್ನಿಪುರೋಗಮಾಃ ॥ ೧೩

---

ನೆಂದು ನಾನು ಮೆಚ್ಚಿಕೊಂಡಿರುವೆನೊ, ಅಂಥ ರಾಮನ ಹೆಸರಿನಲ್ಲಿ, ಕೈಕೇಯಿ, ನಿನ್ನ ಮಾತನ್ನು ನಡೆಸುತ್ತೇನೆಂದು ಶಪಥ ಮಾಡುತ್ತೇನೆ (೮). ಮಂಗಳಾಂಗಿ, ನನ್ನ ಮಾತಿನಂತೆಯೇ ನನ್ನ ಮನಸ್ಸು ಇದೆಯೆಂದು ತಿಳಿದುಕೊ. ಈ ದುಃಖದಿಂದ ನನ್ನನ್ನು ಪಾರುಮಾಡು. ಇದನ್ನೆಲ್ಲ ಮನಸ್ಸಿಗೆ ತಂದುಕೊಂಡು ನಿನಗೆ ಬೇಕಾಗಿರುವುದೇನೆಂಬುದನ್ನು ಹೇಳು (೯). ನಿನ್ನಲ್ಲಿರುವ ಪ್ರೇಮದ ಬಲವನ್ನಾದರೂ ಆಲೋಚಿಸಿದರೆ ನನ್ನ ವಿಷಯದಲ್ಲಿ ನೀನು ಸಂದೇಹಿಸುವುದು ಯುಕ್ತವಾಗದು. ನಿನ್ನ ಇಷ್ಟವನ್ನು ಸಲ್ಲಿಸುತ್ತೇನೆಂದು ನಾನು ಸಂಪಾದಿಸಿದ ಪುಣ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ" ಎಂದನು (೧೦). ಅವನ ಮಾತಿನ ಕಡೆಗೇ ಗಮನವಿಟ್ಟಿದ್ದ ಕೈಕೇಯಿಯು ತನ್ನ ದಾರಿಗೆ ರಾಜನು ಬಂದನೆಂದು ಹಿರಿಹಿಗ್ಗಿದಳು. ಅವಳು ಪಕ್ಷಪಾತವನ್ನವಲಂಬಿಸಿ ಆಡಬಾರದ ಮಾತನ್ನಾಡಿದಳು. ರಾಜನ ಶಪಥವಾಕ್ಯದಿಂದ ಸಂತುಷ್ಟಳಾಗಿ, ಎದುರಿಗೆ ಪ್ರತ್ಯಕ್ಷವಾಗಿ ಬಂದು ನಿಂತ ಮೃತ್ಯುವಿನಂತೆ ಮಹಾಘೋರವಾದ ತನ್ನ ಅಭಿಪ್ರಾಯವನ್ನು ಹೇಳಿದಳು (೧೧-೧೨): "ಮಹಾರಾಜ, ನನ್ನ ವರವನ್ನು ಸಲ್ಲಿಸುತ್ತೇನೆಂದು ಕ್ರಮವಾಗಿ ಆಣೆಯಿಟ್ಟು ಹೇಳಿದ್ದೀಯೆ. ಅಗ್ನಿಯೇ

ಚಂದ್ರಾದಿತ್ಯೌ ನಭಶ್ಚೈವ ಗ್ರಹಾ ರಾತ್ರ್ಯಹನೀ ದಿಶಃ ।
ಜಗಚ್ಚ ಪೃಥಿವೀ ಚೇಯಂ ಸಗಂಧರ್ವಾ ಸರಾಕ್ಷಸಾ ॥ ೧೪

ನಿಶಾಚರಾಣಿ ಭೂತಾನಿ ಗೃಹೇಷು ಗೃಹದೇವತಾಃ ।
ಯಾನಿ ಚಾನ್ಯಾನಿ ಭೂತಾನಿ ಜಾನೀಯುರ್ಭಾಷಿತಂ ತವ ॥ ೧೫

ಸತ್ಯಸಂಧೋ ಮಹಾತೇಜಾ ಧರ್ಮಜ್ಞಃ ಸುಸಮಾಹಿತಃ ।
ವರಂ ಮಮ ದದಾತ್ಯೇಷ ತನ್ಮೇ ಶೃಣ್ವಂತು ದೇವತಾಃ ॥ ೧೬

ಇತಿ ದೇವೀ ಮಹೇಷ್ವಾಸಂ ಪರಿಗೃಹ್ಯಾಭಿಶಸ್ಯ ಚ ।
ತತಃ ಪರಮುವಾಚೇದಂ ವರದಂ ಕಾಮಮೋಹಿತಮ್ ॥ ೧೭

ಸ್ಮರ ರಾಜನ್ ಪುರಾವೃತ್ತಂ ತಸ್ಮಿನ್ ದೈವಾಸುರೇ ರಣೇ ।
ತತ್ರ ತ್ವಚ್ಛ್ರಾವಯಚ್ಛತ್ರುಸ್ತವ ಜೇವಿತಮಂತರಾ ॥ ೧೮

---

ಮೊದಲಾದ ಮೂವತ್ತುಮೂರು (ಕೋಟಿ) ದೇವತೆಗಳಿರಾ, ಕೇಳಿರಿ! ಸೂರ್ಯ, ಚಂದ್ರ, ಆಕಾಶ, ಗ್ರಹಗಳು, ರಾತ್ರಿ, ಹಗಲು, ದಿಕ್ಕುಗಳು, ಈ ವಿಶ್ವ, ಪೃಥಿವಿ, ಗಂಧರ್ವರು ರಾಕ್ಷಸರು, ರಾತ್ರಿಯಲ್ಲಿ ಸಂಚರಿಸತಕ್ಕ ಭೂತಗಳು, ಈ ಗೃಹದಲ್ಲಿರುವ ಗೃಹದೇವತೆಗಳು ಮತ್ತು ಯಾವ ಯಾವ ದೇವಯೋನಿವಿಶೇಷಗಳಿವೆಯೊ ಅವರೆಲ್ಲರೂ, ಮಹಾರಾಜ, ನೀನು ಕೊಟ್ಟ ಮಾತಿಗೆ ಸಾಕ್ಷಿಗಳಾಗಿರಲಿ ! (೧೩-೧೫). ಹೇ ದೇವತೆಗಳೆ, ಸತ್ಯಸಂಧನೂ ಮಹಾತೇಜಸ್ವಿಯೂ ಧರ್ಮಜ್ಞನೂ ಸ್ವಸ್ಥಚಿತ್ತನೂ ಆದ ಈತನು ನನ್ನ ವರವನ್ನು ಸಲ್ಲಿಸುತ್ತಿದ್ದಾನೆ. ನೀವೆಲ್ಲರೂ ಕೇಳುತ್ತಿರಿ" ಹೀಗೆ ಹೊಗಳುತ್ತ ನುಡಿದು ಆ ರಾಣಿಯು ಮಹಾವೀರನಾದ ದಶರಥನನ್ನು ತನ್ನ ಹಿಡಿತಕ್ಕೆ ತಂದುಕೊಂಡಳು. ಅನಂತರ ಕಾಮವಶದಿಂದ ಬುದ್ಧಿಗೆಟ್ಟು ವರವನ್ನು ಸಲ್ಲಿಸುವುದಾಗಿ ಮಾತುಕೊಟ್ಟ ಅವನನ್ನು ಕುರಿತು ಹೀಗೆಂದಳು (೧೬-೧೭): "ಮಹಾರಾಜ, ದೇವಾಸುರಯುದ್ಧದಲ್ಲಿ ನಡೆದ ಪೂರ್ವವೃತ್ತಾಂತವನ್ನು ಸ್ಮರಿಸಿಕೊ. ಯುದ್ಧಮಧ್ಯದಲ್ಲಿ ಶತ್ರುವಾದ ಶಂಬರಾಸುರನು ನಿನ್ನನ್ನು

ತತ್ರ ಚಾಪಿ ಮಯಾ ದೇವ ಯತ್ತ್ವಂ ಸಮಭಿರಕ್ಷಿತಃ ।
ಜಾಗ್ರತ್ಯಾ ಯತಮಾನಾಯಾಸ್ತತೋ ಮೇ ಪ್ರಾದದಾ ವರೌ ॥ ೧೯

ತೌ ತು ದತ್ತೌ ವರೌ ದೇವ ನಿಕ್ಷೇಪೌ ಮೃಗಯಾಮ್ಯಹಮ್ ।
ತವೈವ ಪೃಥಿವೀಪಾಲ ಸಕಾಶೇ ಸತ್ಯಸಂಗರ ॥ ೨೦

ತತ್ ಪ್ರತಿಶ್ರುತ್ಯ ಧರ್ಮೇಣ ನ ಚೇದ್ದಾಸ್ಯಸಿ ಮೇ ವರಮ್ ।
ಅದ್ಯೈವ ಹಿ ಪ್ರಹಾಸ್ಯಾಮಿ ಜೀವಿತಂ ತ್ವದ್ವಿಮಾನಿತಾ ॥ ೨೧

ಪಾಪ್ಮಾತ್ಮೇನ ತದಾ ರಾಜಾ ಕೈಕೇಯ್ಯಾ ಸ್ವವಶೇ ಕೃತಃ ।
ಪ್ರಚಸ್ಕಂದ ವಿನಾಶಾಯ ಪಾಶಂ ಮೃಗ ಇವಾತ್ಮನಃ ॥ ೨೨

ತತಃ ಪರಮುವಾಚೇದಂ ವರದಂ ಕಾಮಮೋಹಿತಮ್ ।
ವರೌ ಯೌ ಮೇ ತ್ವಯಾ ದೇವ ತದಾ ದತ್ತೌ ಮಹೀಪತೇ ॥ ೨೩

---

ಮೂರ್ಛೆಗೊಳಿಸಿದನು (೧೮). ಆ ಸಮಯದಲ್ಲಿ ನಾನು ಜಾಗರೂಕತೆಯಿಂದ ಬಹುಪ್ರಯತ್ನಮಾಡಿ ನಿನ್ನನ್ನು ರಕ್ಷಿಸಿದೆನು. ಅದಕ್ಕಾಗಿ ನನಗೆ ಎರಡು ವರಗಳನ್ನು ಅನುಗ್ರಹಿಸಿದ್ದೀಯೆ (೧೯). ನೀನು ಕೊಟ್ಟ ವರಗಳನ್ನು ಇದುವರೆಗೂ ನಿನ್ನಲ್ಲಿಯೇ ನಿಕ್ಷೇಪವಾಗಿ ಇರಿಸಿದ್ದೆನು. ಈಗ ಆ ವರಗಳನ್ನು ಕೇಳಿಕೊಳ್ಳುತ್ತೇನೆ. ಮಹಾರಾಜ, ನೀನು ಸತ್ಯಸಂಧ; ಅವುಗಳನ್ನು ಸಲ್ಲಿಸುತ್ತೇನೆಂದು ಪ್ರತಿಜ್ಞೆ ಮಾಡಿದ್ದೀಯೆ. ನ್ಯಾಯವಾಗಿ ವರವನ್ನು ನನಗೆ ಸಲ್ಲಿಸದಿದ್ದರೆ, ನಿನ್ನಿಂದ ಅವಮಾನಿತಳಾದ ನಾನು ಈ ದಿನವೇ ಪ್ರಾಣವನ್ನು ಬಿಡುವೆನು" ಎಂದು ಹೇಳಿದಳು (೨೦-೨೧). ಹೀಗೆ ಕೈಕೇಯಿಯು ಬರಿಯ ಮಾತಿನಿಂದಲೆ ರಾಜನನ್ನು ತನ್ನ ವಶಮಾಡಿಕೊಂಡಳು. ಮೃಗವು ತನ್ನ ವಿನಾಶಕ್ಕೋಸ್ಕರ ಬಲೆಯಲ್ಲಿ ಹೋಗಿ ಸಿಕ್ಕಿಕೊಳ್ಳುವಂತೆ, ದಶರಥನು ಕೈಕೇಯಿಯ ಬಲೆಗೆ ಜಾರಿಬಿದ್ದನು (೨೨). ಅನಂತರ ಕಾಮವಶನಾಗಿ ಬುದ್ಧಿಗೆಟ್ಟು ವರವನ್ನು ಕೊಡಲು ಬಂದ ದಶರಥನನ್ನು ಕುರಿತು ಹೀಗೆಂದಳು: "ಮಹಾರಾಜ, ಆ ಸಮಯದಲ್ಲಿ ನೀನು ಯಾವ ಎರಡು ವರಗಳನ್ನು

ತೌ ತಾವದಹಮದ್ಯೈವ ವಕ್ಷ್ಯಾಮಿ ಶೃಣು ಮೇ ವಚಃ ।
ಯೋಽಭಿಷೇಕಸಮಾರಂಭೋ ರಾಘವಸ್ಯೋಪಕಲ್ಪಿತಃ ॥ ೨೪

ಅನೇನೈವಾಭಿಷೇಕೇಣ ಭರತೋ ಮೇಽಭಿಷಿಚ್ಯತಾಮ್ ।
ಯೋ ದ್ವಿತೀಯೋ ವರೋ ದೇವ ದತ್ತಃ ಪ್ರೀತೇನ ಮೇ ತ್ವಯಾ ॥

ತದಾ ದೈವಾಸುರೇ ಯುದ್ಧೇ ತಸ್ಯ ಕಾಲೋಽಯಮಾಗತಃ ।
ನವ ಪಂಚ ಚ ವರ್ಷಾಣಿ ದಂಡಕಾರಣ್ಯಮಾಶ್ರಿತಃ ॥ ೨೬

ಚೀರಾಜಿನಜಟಾಧಾರೀ ರಾಮೋ ಭವತು ತಾಪಸಃ ।
ಭರತೋ ಭಜತಾಮದ್ಯ ಯೌವರಾಜ್ಯಮಕಂಟಕಮ್ ॥ ೨೭

ಏಷ ಮೇ ಪರಮಃ ಕಾಮೋ ದತ್ತಮೇವ ವರಂ ವೃಣೇ ।
ಅದ್ಯ ಚೈವ ಹಿ ಪಶ್ಯೇಯಂ ಪ್ರಯಾಂತಂ ರಾಘವಂ ವನಮ್ ॥ ೨೮

ಸ ರಾಜರಾಜೋ ಭವ ಸತ್ಯಸಂಗರಃ
ಕುಲಂ ಚ ಶೀಲಂ ಚ ಹಿ ರಕ್ಷ ಜನ್ಮ ಚ ।

---

ಕೊಟ್ಟೆಯೊ ಅವನ್ನು ಈಗ ಕೇಳಿಕೊಳ್ಳುತ್ತೇನೆ. ನಾನು ಹೇಳುವುದನ್ನು ಕೇಳು : ಈಗ ರಾಮನ ಪಟ್ಟಾಭಿಷೇಕಕ್ಕಾಗಿ ಯಾವ ಏರ್ಪಾಡನ್ನು ಮಾಡಿರುವೆಯೊ, ಇದೇ ಏರ್ಪಾಡಿನಿಂದ ನನ್ನ ಭರತನಿಗೆ ಪಟ್ಟಾಭಿಷೇಕವನ್ನು ಮಾಡಬೇಕು (೨೩-೨೪). ಮಹಾರಾಜ, ದೇವಾಸುರಯುದ್ಧದ ಸಂದರ್ಭದಲ್ಲಿ ನೀನು ಸಂತುಷ್ಟನಾಗಿ ಇನ್ನೊಂದು ಎರಡನೆಯ ವರವನ್ನು ಕೊಟ್ಟೆಯಲ್ಲ, ಅದನ್ನು ಕೇಳಿಕೊಳ್ಳಲು ಈಗ ಸಮಯವು ಪ್ರಾಪ್ತವಾಗಿದೆ (೨೫). ರಾಮನು ನಾರುಬಟ್ಟೆಯನ್ನುಟ್ಟು ಚರ್ಮವನ್ನು ಹೊದೆದು ಜಟಾಧಾರಿಯಾಗಿ ತಾಪಸನಂತೆ ಹದಿನಾಲ್ಕು ವರ್ಷಗಳವರೆಗೆ ದಂಡಕಾರಣ್ಯಕ್ಕೆ ಹೋಗಿರಬೇಕು. ಈಗ ಭರತನು ನಿಷ್ಕಂಟಕವಾಗಿ ಯುವರಾಜಪದವಿಯನ್ನೇರಲಿ (೨೬-೨೭). ಇದು ನನ್ನ ಪರಮ ಇಷ್ಟಾರ್ಥ. ಹಿಂದೆ ಕೊಟ್ಟಿದ್ದ ವರವನ್ನೇ ಈಗ ಸಲ್ಲಿಸಬೇಕೆಂದು ಕೇಳುತ್ತಿದ್ದೇನೆ. ಈ ದಿನವೇ ರಾಮನು ಕಾಡಿಗೆ ಹೋಗುವುದನ್ನು ನಾನು ನೋಡಬೇಕು (೨೮). ನೀನು ರಾಜಾಧಿರಾಜನಾಗಿದ್ದೀಯೆ. ಸತ್ಯಸಂಧನಾಗಿ ನಡೆದುಕೊ. ನಿನ್ನ ಕುಲ ಶೀಲ ಜನ್ಮಗಳನ್ನು ರಕ್ಷಿಸಿಕೊಂಡು ಸಾರ್ಥಕ

ಪರತ್ರ ವಾಸೇ ಹಿ ವದಂತ್ಯನುತ್ತಮಂ
ತಪೋಧನಾಃ ಸತ್ಯವಚೋ ಹಿತಂ ನೃಣಾಮ್ ॥ ೨೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾದಶಃ ಸರ್ಗಃ

---

## ದ್ವಾದಶಃ ಸರ್ಗಃ

ಕೈಕೇಯೀನಿವರ್ತನಪ್ರಯಾಸಃ

ತತಃ ಶ್ರುತ್ವಾ ಮಹಾರಾಜಃ ಕೈಕೇಯ್ಯಾ ದಾರುಣಂ ವಚಃ ।
ಚಿಂತಾಮಭಿಸಮಾಪೇದೇ ಮುಹೂರ್ತಂ ಪ್ರತತಾಪ ಚ ॥ ೧

ಕಿಂ ನು ಮೇ ಯದಿ ವಾ ಸ್ವಪ್ನಶ್ಚಿತ್ತಮೋಹೋಽಪಿ ವಾ ಮಮ ।
ಅನುಭೂತೋಽಪಸರ್ಗೋ ವಾ ಮನಸೋ ವಾಪ್ಯುಪದ್ರವಃ ॥ ೨

---

ಪಡಿಸಿಕೊ. ಪರಲೋಕದಲ್ಲಿ ಸದ್ಗತಿಯನ್ನು ಪಡೆಯುವುದಕ್ಕೆ ಸತ್ಯವಚನವೇ ಶ್ರೇಷ್ಠವಾದ ಮಾರ್ಗವೆಂದು ತಪಸ್ವಿಗಳು ಹೇಳುತ್ತಾರೆ" ಎಂದು ಹೇಳಿದಳು (೨೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹನ್ನೊಂದನೆಯ ಸರ್ಗ

---

## ಸರ್ಗ ೧೨

**ದಶರಥನು ರಾಮನ ಗುಣಗಳನ್ನು ವರ್ಣಿಸಿ ಕೈಕೇಯಿಗೆ ಸಮಾಧಾನ ಹೇಳುವುದು. ಕೈಕೇಯಿಯ ಹಠ. ದಶರಥನ ದುಃಖ.**

ಕೈಕೇಯಿಯ ಕ್ರೂರವಾದ ನುಡಿಯನ್ನು ಕೇಳಿ ದಶರಥನಿಗೆ ಚಿಂತೆ ಆವರಿಸಿತು. ಒಂದು ಕ್ಷಣಕಾಲ ದಿಗ್ಭ್ರಾಂತನಾಗಿ ಮಿಲಮಿಲನೆ ಬೆಂದು ಸೊರಗಿದನು (೧). "ಇದೇನು ನನಗೆ ಸ್ವಪ್ನವೊ, ಭ್ರಾಂತಿಯೊ, ಭೂತಾವೇಶವೊ ಅಥವಾ ಮನೋರೋಗವೊ ?" ಎಂದು ಚಿಂತಿಸುತ್ತ ಕಳವಳಗೊಂಡನು. ಕೈಕೇಯಿಯ ವಾಗ್ಬಾಣದ ಹೊಡೆತಕ್ಕೆ ಈಡಾದ ರಾಜನು

ಇತಿ ಸಂಚಿಂತ್ಯ ತದ್ರಾಜಾ ನಾಧ್ಯಗಚ್ಛತ್ತದಾ ಸುಖಮ್ ।
ಪ್ರತಿಲಭ್ಯ ತತಃ ಸಂಜ್ಞಾಂ ಕೈಕೇಯೀವಾಕ್ಯತಾಡಿತಃ ॥ ೩

ವ್ಯಥಿತೋ ವಿಕ್ಲವಶ್ಚೈವ ವ್ಯಾಘ್ರೀಂ ದೃಷ್ಟ್ವೇವ ಯಥಾ ಮೃಗಃ ।
ಅಸಂವೃತಾಯಾಮಾಸೀನೋ ಜಗತ್ಯಾಂ ದೀರ್ಘಮುಚ್ಛ್ವಸನ್ ॥ ೪

ಮಂಡಲೇ ಪನ್ನಗೋ ರುದ್ಧೋ ಮಂತ್ರೈರಿವ ಮಹಾವಿಷಃ ।
ಅಹೋ ಧಿಗಿತಿ ಸಾಮರ್ಷೋ ವಾಚಮುಕ್ತ್ವಾ ನರಾಧಿಪಃ ॥ ೫

ಮೋಹಮಾಪೇದಿವಾನ್ ಭೂಯಃ ಶೋಕೋಪಹತಚೇತನಃ ।
ಚಿರೇಣ ತು ನೃಪಃ ಸಂಜ್ಞಾಂ ಪ್ರತಿಲಭ್ಯ ಸುದುಃಖಿತಃ ॥ ೬

ಕೈಕೇಯೀಮಬ್ರವೀತ್ ಕ್ರುದ್ಧಃ ಪ್ರದಹನ್ನಿವ ಚಕ್ಷುಷಾ ।
ನೃಶಂಸೇ ದುಷ್ಟಚಾರಿತ್ರೇ ಕುಲಸ್ಯಾಸ್ಯ ವಿನಾಶಿನಿ ॥ ೭

ಕಿಂ ಕೃತಂ ತವ ರಾಮೇಣ ಪಾಪೇ ಪಾಪಂ ಮಯಾಪಿ ವಾ ।
ಸದಾ ತೇ ಜನನೀತುಲ್ಯಾಂ ವೃತ್ತಿಂ ವಹತಿ ರಾಘವಃ ॥ ೮

---

ಸ್ವಲ್ಪ ಚೇತರಿಸಿಕೊಂಡನು (೨-೩). ಹುಲಿಯನ್ನು ಕಂಡ ಜಿಂಕೆಯಂತೆ ಭಯದಿಂದ ತಳಮಳಿಸಿದನು. ದೀರ್ಘವಾಗಿ ನಿಟ್ಟುಸಿರುಬಿಡುತ್ತ ಬರಿಯ ನೆಲದ ಮೇಲೆ ಕುಸಿದನು. ಮಂತ್ರವಾದಿಯ ಮಂತ್ರಗಳಿಗೆ ಕಟ್ಟುಬಿದ್ದು ನೆಲದಲ್ಲಿ ಗೆರೆಹಾಕಿದ ಮಂಡಲದಲ್ಲಿ ಸಿಕ್ಕಿಬಿದ್ದ ವಿಷಸರ್ಪದಂತಾದನು. ಕುಪಿತನಾದ ಆ ನರಪತಿಯ ಬಾಯಿಂದ 'ಹಾ! ಧಿಕ್' ಎಂಬ ಉದ್ಗಾರ ಹೊರಟಿತು (೪-೫). ದಶರಥನು ಸಂಕಟದಿಂದ ಚೈತನ್ಯಗುಂದಿ ಬವಳಿಹೋದನು. ಬಹಳ ಹೊತ್ತಿನ ಮೇಲೆ ಎಚ್ಚರವಾಗಲು ಅವನಿಗೆ ಬಹು ದುಃಖವಾಯಿತು. ಅನಂತರ ಅವನು ಅತ್ಯಂತ ಕ್ರುದ್ಧನಾಗಿ ಕೈಕೇಯಿಯನ್ನು ಸುಟ್ಟುಬಿಡುವನೋ ಎಂಬಂತೆ ದುರದುರನೆ ನೋಡುತ್ತ ಈ ರೀತಿ ಹೇಳಿದನು : "ಎಲೇ ಘಾತುಕಿ! ದುಷ್ಟೆ! ಈ ಕುಲಕ್ಕೆ ನೀನು ಮೃತ್ಯುವಾದೆ! (೬-೭). ಎಲೇ ಪಾಪಿಷ್ಠೆ! ರಾಮನು ನಿನಗೆ ಏನು ಮಾಡಿದ್ದಾನೆ? ನಾನಾದರೂ ಮಾಡಿದ್ದೇನು? ಹಡೆದ

ತಸ್ಯೈವ ತ್ವಮನರ್ಥಾಯ ಕಿಂ ನಿಮಿತ್ತಮಿಹೋದ್ಯತಾ ।
ತ್ವಂ ಮಯಾತ್ಮವಿನಾಶಾಯ ಭವನಂ ತ್ವಂ ನಿವೇಶಿತಾ ॥ ೯

ಅವಿಜ್ಞಾನಾನ್ನೃಪಸುತಾ ವ್ಯಾಲೀ ತೀಕ್ಷ್ಣವಿಷಾ ಯಥಾ ।
ಜೀವಲೋಕೋ ಯದಾ ಸರ್ವೋ ರಾಮಸ್ಯಾಹ ಗುಣಸ್ತವಮ್ ॥ ೧೦

ಅಪರಾಧಂ ಕಮುದ್ದಿಶ್ಯ ತ್ಯಕ್ಷ್ಯಾಮೀಷ್ಟಮಹಂ ಸುತಂ ।
ಕೌಸಲ್ಯಾಂ ವಾ ಸುಮಿತ್ರಾಂ ವಾ ತ್ಯಜೇಯಮಪಿ ವಾ ಶ್ರಿಯಮ್ ॥ ೧೧

ಜೀವಿತಂ ವಾತ್ಮನೋ ರಾಮಂ ನ ತ್ವೇವ ಪಿತೃವತ್ಸಲಮ್ ।
ಪರಾ ಭವತಿ ಮೇ ಪ್ರೀತಿರ್ದೃಷ್ಟ್ವಾ ತನಯಮಗ್ರಜಮ್ ॥ ೧೨

ಅಪಶ್ಯತಸ್ತು ಮೇ ರಾಮಂ ನಷ್ಟಾ ಭವತಿ ಚೇತನಾ ।
ತಿಷ್ಠೇಲ್ಲೋಕೋ ವಿನಾ ಸೂರ್ಯಂ ಸಸ್ಯಂ ವಾ ಸಲಿಲಂ ವಿನಾ ॥ ೧೩

ನ ತು ರಾಮಂ ವಿನಾ ದೇಹೇ ತಿಷ್ಠೇತ್ತು ಮಮ ಜೀವಿತಮ್ ।
ತದಲಂ ತ್ಯಜ್ಯತಾಮೇಷ ನಿಶ್ಚಯಃ ಪಾಪನಿಶ್ಚಯೇ ॥ ೧೪

---

ತಾಯಿಯಂತೆ ನಿನ್ನಲ್ಲಿ ರಾಮನು ಸದಾ ನಡೆದುಕೊಳ್ಳುತ್ತಿದ್ದಾನೆ. ಅಂಥ ರಾಮನಿಗೇ ಅನರ್ಥವನ್ನು ತರಲು ಯಾವ ಕಾರಣದಿಂದ ಹೊರಟಿದ್ದೀಯೆ ? ನನ್ನ ಸರ್ವನಾಶಕ್ಕಾಗಿ ನಿನ್ನನ್ನು ನನ್ನ ಮನೆಗೆ ತಂದೆನಲ್ಲ (೮-೯). ನೀನು ರಾಜಪುತ್ರಿಯೆಂದು ಭಾವಿಸಿದ್ದೆ. ನೀನು ಘೋರವಿಷದ ಸರ್ಪಿಣಿಯೆಂದು ತಿಳಿದಿರಲಿಲ್ಲ. ಸಕಲಜೀವಲೋಕವೂ ರಾಮನ ಸದ್ಗುಣಗಳನ್ನು ಕೊಂಡಾಡುತ್ತಿರುವಾಗ, ಅವನಲ್ಲಿ ಯಾವ ತಪ್ಪನ್ನು ಕಂಡು ಅಂಥ ಮುದ್ದುಮಗನನ್ನು ಮನೆಯಿಂದ ಹೊರಡಿಸಲಿ ? (೧೦). ಅಂಥ ಸಂದರ್ಭದಲ್ಲಿ ಕೌಸಲ್ಯೆಯನ್ನಾದರೂ, ಸುಮಿತ್ರೆಯನ್ನಾದರೂ, ರಾಜ್ಯಲಕ್ಷ್ಮಿಯನ್ನಾದರೂ, ಕಡೆಗೆ ನನ್ನ ಪ್ರಾಣವನ್ನಾದರೂ ಬಿಟ್ಟೇನು. ಪಿತೃವತ್ಸಲನಾದ ರಾಮನನ್ನು ಮಾತ್ರ ಎಂದಿಗೂ ಬಿಡಲಾರೆನು. ನನ್ನ ಆ ಹಿರಿಯ ಮಗನನ್ನು ನೋಡದಿದ್ದರೆ ನನ್ನ ಚೈತನ್ಯವೇ ಉಡುಗಿಹೋಗುವುದು. ಸೂರ್ಯನಿಲ್ಲದಿದ್ದರೂ ಜಗತ್ತು ನಿಂತೀತು. ನೀರಿಲ್ಲದಿದ್ದರೂ ಸಸಿಯು ಉಳಿದೀತು. ರಾಮನಿಲ್ಲದಿದ್ದರೆ ಮಾತ್ರ ನನ್ನ ದೇಹದಲ್ಲಿ ಜೀವವು ನಿಲ್ಲದು. ಎಲೇ ಪಾಪಿ, ಈ ದುರಾಲೋಚನೆ

ಅಪಿ ತೇ ಚರಣೌ ಮೂರ್ಧ್ನಾ ಸ್ಪೃಶಾಮ್ಯೇಷ ಪ್ರಸೀದ ಮೇ ।
ಕಿಮಿದಂ ಚಿಂತಿತಂ ಪಾಪೇ ತ್ವಯಾ ಪರಮದಾರುಣಮ್ ॥ ೧೫

ಅಥ ಜಿಜ್ಞಾಸಸೇ ಮಾಂ ತ್ವಂ ಭರತಸ್ಯ ಪ್ರಿಯಾಪ್ರಿಯೇ ।
ಅಸ್ತು ಯತ್ತತ್ತ್ವಯಾ ಪೂರ್ವಂ ವ್ಯಾಹೃತಂ ರಾಘವಂ ಪ್ರತಿ ॥ ೧೬

ಸ ಮೇ ಜ್ಯೇಷ್ಠಃ ಸುತಃ ಶ್ರೀಮಾನ್ ಧರ್ಮಜ್ಯೇಷ್ಠ ಇತೀವ ಮೇ ।
ತತ್ತ್ವಯಾ ಪ್ರಿಯವಾದಿನ್ಯಾ ಸೇವಾರ್ಥಂ ಕಥಿತಂ ಭವೇತ್ ॥ ೧೭

ತಚ್ಛ್ರುತ್ವಾ ಶೋಕ ಸಂತಪ್ತಾ ಸಂತಾಪಯಸಿ ಮಾಂ ಭೃಶಮ್ ।
ಆವಿಷ್ಟಾಸಿ ಗೃಹೇ ಶೂನ್ಯೇ ಸಾ ತ್ವಂ ಪರವಶಂ ಗತಾ ॥ ೧೮

ಇಕ್ಷ್ವಾಕೂಣಾಂ ಕುಲೇ ದೇವಿ ಸಂಪ್ರಾಪ್ತಃ ಸುಮಹಾನಯಮ್ ।
ಅನಯೋ ನಯಸಂಪನ್ನೇ ಯತ್ರ ತೇ ವಿಕೃತಾ ಮತಿಃ ॥ ೧೯

ನ ಹಿ ಕಿಂಚಿದಯುಕ್ತಂ ವಾ ವಿಪ್ರಿಯಂ ವಾ ಪುರಾ ಮಮ ।
ಅಕರೋಸ್ತ್ವಂ ವಿಶಾಲಾಕ್ಷಿ ತೇನ ನ ಶ್ರದ್ದಧಾಮ್ಯಹಮ್ ॥ ೨೦

---

ಯನ್ನು ಬಿಟ್ಟುಬಿಡು (೧೩-೧೪). ಇಗೊ, ನಿನ್ನ ಕಾಲಿಗೆ ತಲೆಬಾಗಿ ನಮಸ್ಕಾರ ಮಾಡುತ್ತೇನೆ, ಅನುಗ್ರಹಮಾಡು. ಇಂಥ ಮಹಾಘೋರವಾದ ಆಲೋಚನೆ ನಿನ್ನಲ್ಲೇಕೆ ಸುಳಿಯಿತು ? (೧೫). ಒಂದು ವೇಳೆ ನನಗೆ ಭರತನಲ್ಲಿ ಪ್ರೀತಿಯು ಇದೆಯೊ ಇಲ್ಲವೊ - ಎಂದು ನನ್ನನ್ನು ನೀನು ಪರೀಕ್ಷೆ ಮಾಡುವುದಾದರೆ, ಒಳ್ಳೆಯದು, ಪರೀಕ್ಷೆ ನಡೆಯಲಿ. ಆದರೆ ನೀನು ಹಿಂದೆ ರಾಮನ ವಿಷಯದಲ್ಲಿ 'ಧರ್ಮಿಷ್ಠನಾದ ಶ್ರೀರಾಮನು ನನ್ನ ಹಿರಿಯ ಮಗ' ಎಂದು ನನ್ನೆದುರಿಗೆ ಹೇಳಿಕೊಳ್ಳುತ್ತಿದ್ದೆಯಲ್ಲ, ಅದು ನನ್ನ ಮನೋರಂಜನೆಗಾಗಿ, ಮುಖಸ್ತುತಿಗಾಗಿ ಹೇಳಿದ್ದಿರಬೇಕು (೧೬-೧೭). ಈಗ ರಾಮಾಭಿಷೇಕದ ಸುದ್ದಿಯನ್ನು ಕೇಳಿ ಸಂಕಟದಿಂದ ಉರಿಯುತ್ತ ನನ್ನನ್ನು ಅತಿಯಾಗಿ ಉರಿಸುತ್ತಿದ್ದೀಯೆ. ಯಾರದೋ ತರಲೆಯ ಮಾತನ್ನು ಕೇಳಿ ಈ ಶೂನ್ಯಾಗಾರಕ್ಕೆ ಬಂದು ಆವೇಶ ಹೊಂದಿದ್ದೀಯೆ (೧೮). ದೇವಿ, ನೀತಿಗೆ ಅಗರವಾದ ಈ ಇಕ್ಷ್ವಾಕುವಂಶದಲ್ಲಿ ನಿನ್ನ ಬುದ್ಧಿಯು ಹೀಗೆ ಕೆಟ್ಟು ಹೋಗುವುದು ಒಂದು ದೊಡ್ಡ ಅನೀತಿ. ಹೇ ವಿಶಾಲಾಕ್ಷಿ! ಇದುವರೆಗೂ ನೀನು ನನ್ನ ವಿಷಯದಲ್ಲಿ ಅನುಚಿತವನ್ನಾಗಲಿ ಅಪ್ರಿಯವನ್ನಾಗಲಿ ಮಾಡಿದುದೇ ಇಲ್ಲ. ಆದ್ದರಿಂದ

ನನು ತೇ ರಾಘವಸ್ತುಲ್ಯೋ ಭರತೇನ ಮಹಾತ್ಮನಾ ।
ಬಹುಶೋ ಹಿ ಸುಬಾಲೇ ತ್ವಂ ಕಥಾಃ ಕಥಯಸೇ ಮಮ ॥ ೨೧

ತಸ್ಯ ಧರ್ಮಾತ್ಮನೋ ದೇವಿ ವನೇ ವಾಸಂ ಯಶಸ್ವಿನಃ ।
ಕಥಂ ರೋಚಯಸೇ ಭೀರು ನವ ವರ್ಷಾಣಿ ಪಂಚ ಚ ॥ ೨೨

ಅತ್ಯಂತಸುಕುಮಾರಸ್ಯ ತಸ್ಯ ಧರ್ಮೇ ಧೃತಾತ್ಮನಃ ।
ಕಥಂ ರೋಚಯಸೇ ವಾಸಮರಣ್ಯೇ ಭೃಶದಾರುಣೇ ॥ ೨೩

ರೋಚಯಸ್ಯಭಿರಾಮಸ್ಯ ರಾಮಸ್ಯ ಶುಭಲೋಚನೇ ।
ತವ ಶುಶ್ರೂಷಮಾಣಸ್ಯ ಕಿಮರ್ಥಂ ವಿಪ್ರವಾಸನಮ್ ॥ ೨೪

ರಾಮೋಽಪಿ ಭರತಾದ್ಭೂಯಸ್ತವ ಶುಶ್ರೂಷತೇ ಸದಾ ।
ವಿಶೇಷಂ ತ್ವಯಿ ತಸ್ಮಾತ್ತು ಭರತಸ್ಯ ನ ಲಕ್ಷಯೇ ॥ ೨೫

ಶುಶ್ರೂಷಾಂ ಗೌರವಂ ಚೈವ ಪ್ರಮಾಣಂ ವಚನಕ್ರಿಯಾಮ್ ।
ಕಸ್ತೇ ಭೂಯಸ್ತರಾಂ ಕುರ್ಯಾದನ್ಯತ್ರ ಮನುಜರ್ಷಭಾತ್ ॥ ೨೬

---

ನಿನ್ನ ಮಾತಿನಲ್ಲಿ ನನಗೆ ನಂಬಿಕೆಯೇ ಹುಟ್ಟಿಲ್ಲ! (೧೯-೨೦). ಮಹಾತ್ಮನಾದ ಭರತನೂ ರಾಮನೂ ನಿನಗೆ ಸಮಾನರಲ್ಲವೆ ? ಇಂಥ ಮಾತುಗಳನ್ನು ನೀನು ಎಷ್ಟೋ ಬಾರಿ ನನಗೆ ಹೇಳಿದ್ದೀಯೆ. ದೇವಿ, ಕೀರ್ತಿಶಾಲಿಯೂ ಧರ್ಮಾತ್ಮನೂ ಆದ ರಾಮನಿಗೆ ಹದಿನಾಲ್ಕು ವರ್ಷಗಳ ಕಾಲ ವನವಾಸವು ನಿನಗೆ ಹೇಗೆ ತಾನೆ ರುಚಿಸಿತು? (೨೧-೨೨). ಅವನು ಅತ್ಯಂತ ಸುಕುಮಾರ. ಧರ್ಮಮಾರ್ಗದಲ್ಲಿ ನಿಷ್ಠೆಯುಳ್ಳವನು. ಭಯಂಕರವಾದ ಅರಣ್ಯದಲ್ಲಿ ಅವನು ವಾಸ ಮಾಡುವುದು ನಿನಗೆ ಹೇಗೆ ತಾನೆ ಬೇಕೆನಿಸಿತು? ಸುಂದರಿ, ಸಕಲರಿಗೂ ಆನಂದವನ್ನು ತರುವ ರಾಮನು ನಿನ್ನ ಶುಶ್ರೂಷೆಯಲ್ಲಿ ನಿರತನಾಗಿದ್ದಾನಲ್ಲ. ಅವನು ದೇಶಭ್ರಷ್ಟನಾಗಿ ಹೋಗಬೇಕೆಂದು ಯಾವ ಕಾರಣ ಬಯಸುತ್ತೀಯೆ ? (೨೩-೨೪). ಭರತನಿಗಿಂತಲೂ ಹೆಚ್ಚಾಗಿ ರಾಮನು ನಿನ್ನಲ್ಲಿ ವಿನಯದಿಂದ ನಡೆದುಕೊಳ್ಳುತ್ತಿದ್ದಾನೆ. ನಿನ್ನ ವಿಷಯದಲ್ಲಿ ರಾಮನಿಗಿಂತಲೂ ಭರತನಲ್ಲಿ ವಿಶೇಷವೇನೆಂಬುದು ನನಗೆ ಹೊಳೆಯುವುದಿಲ್ಲ (೨೫). ನಿನ್ನ ಮಾತನ್ನೇ ಪ್ರಮಾಣವೆಂದು ಭಾವಿಸಿ ನೀನು ಹೇಳಿದಂತೆ ನಡೆಯುತ್ತ ಭಕ್ತಿಯಿಂದ ನಿನ್ನ ಶುಶ್ರೂಷೆಯನ್ನು, ಆ ಪುರುಷೋತ್ತಮನಿಗಿಂತ ಅಧಿಕ

ಬಹೂನಾಂ ಸ್ತ್ರೀಸಹಸ್ರಾಣಾಂ ಬಹೂನಾಂ ಚೋಪಜೀವಿನಾಮ್ ।
ಪರಿವಾದೋಽಪವಾದೋ ವಾ ರಾಘವೇ ನೋಪಪದ್ಯತೇ ॥ ೨೭

ಸಾಂತ್ವಯನ್ ಸರ್ವಭೂತಾನಿ ರಾಮಃ ಶುದ್ಧೇನ ಚೇತಸಾ ।
ಗೃಹ್ಣಾತಿ ಮನುಜವ್ಯಾಘ್ರಃ ಪ್ರಿಯೈರ್ವಿಷಯವಾಸಿನಃ ॥ ೨೮

ಸತ್ಯೇನ ಲೋಕಾನ್ ಜಯತಿ ದೀನಾನ್ದಾನೇನ ರಾಘವಃ ।
ಗುರೂನ್ ಶುಶ್ರೂಷಯಾ ವೀರೋ ಧನುಷಾ ಯುಧಿ ಶಾತ್ರವಾನ್ ॥ ೨೯

ಸತ್ಯಂ ದಾನಂ ತಪಸ್ತ್ಯಾಗೋ ಮಿತ್ರತಾ ಶೌಚಮಾರ್ಜವಮ್ ।
ವಿದ್ಯಾ ಚ ಗುರುಶುಶ್ರೂಷಾ ಧ್ರುವಾಣ್ಯೇತಾನಿ ರಾಘವೇ ॥ ೩೦

ತಸ್ಮಿನ್ನಾರ್ಜವಸಂಪನ್ನೇ ದೇವಿ ದೇವೋಪಮೇ ಕಥಮ್ ।
ಪಾಪಮಾಶಂಸಸೇ ರಾಮೇ ಮಹರ್ಷಿಸಮತೇಜಸಿ ॥ ೩೧

ನ ಸ್ಮರಾಮ್ಯಪ್ರಿಯಂ ವಾಕ್ಯಂ ಲೋಕಸ್ಯ ಪ್ರಿಯವಾದಿನಃ ।
ಸ ಕಥಂ ತ್ವಕ್ಕೃತೇ ರಾಮಂ ವಕ್ಷ್ಯಾಮಿ ಪ್ರಿಯಮಪ್ರಿಯಮ್ ॥ ೩೨

---

ವಾಗಿ ಯಾವನು ಮಾಡಿಯಾನು ? (೨೬). ಇಲ್ಲಿ ಸಾವಿರಾರು ಹೆಂಗಸರಿದ್ದಾರೆ. ಬಹುಮಂದಿ ಸೇವಕರಿದ್ದಾರೆ. ಒಬ್ಬರಾದರೂ ರಾಮನ ವಿಷಯದಲ್ಲಿ ಒಂದು ಕೆಟ್ಟ ಮಾತನ್ನು ನುಡಿದಿಲ್ಲ. ಒಂದು ಅಪವಾದವನ್ನು ಹೊರಿಸಿಲ್ಲ (೨೭). ಆ ಪುರುಷ ಶ್ರೇಷ್ಠನು ಪರಿಶುದ್ಧವಾದ ಮನಸ್ಸಿನಿಂದ ಸಕಲರನ್ನೂ ಸಮಾಧಾನಪಡಿಸುತ್ತಾನೆ. ಪ್ರಜೆಗಳ ಕೋರಿಕೆಯನ್ನು ಸಲ್ಲಿಸಿ ಲಾಲಿಸುತ್ತಾನೆ (೨೮). ರಘುಕುಲೋತ್ಪನ್ನನಾದ ಆ ವೀರನು ಸತ್ಯದಿಂದ ಜನರನ್ನೂ, ದಾನದಿಂದ ದೀನರನ್ನೂ, ಶುಶ್ರೂಷೆಯಿಂದ ಗುರುಹಿರಿಯರನ್ನೂ ಒಲಿಸಿಕೊಳ್ಳುತ್ತಾನೆ. ಯುದ್ಧದಲ್ಲಿ ಶತ್ರುಗಳನ್ನು ಧನುರ್ಧಾರಿಯಾಗಿ ಮರ್ದಿಸುತ್ತಾನೆ (೨೯). ಸತ್ಯ, ದಾನ, ತಪಸ್ಸು, ತ್ಯಾಗಬುದ್ಧಿ, ಮೈತ್ರಿ, ಪರಿಶುದ್ಧತೆ, ಋಜುಮಾರ್ಗ, ವಿದ್ಯೆ, ಗುರುಶುಶ್ರೂಷೆ - ಇವೆಲ್ಲವೂ ರಘುರಾಮನಲ್ಲಿ ಸ್ಥಿರವಾಗಿ ನೆಲೆಸಿವೆ (೩೦). ದೇವಿ, ಋಜುಮಾರ್ಗದಲ್ಲಿ ನಡೆಯುತ್ತ, ದೇವತೆಗಳಿಗೂ ಮಹರ್ಷಿಗಳಿಗೂ ಸಮಾನನಾದ ರಾಮನಿಗೆ ನೀನು ಇಂಥ ಕೇಡನ್ನು ಬಯಸಬಹುದೆ. ಪ್ರೀತಿಯಿಂದ ಮಾತಾಡುವ ಯಾರ ವಿಷಯದಲ್ಲಿಯೂ ನಾನು ಅಪ್ರಿಯವಾಗಿ ನುಡಿದದ್ದು ಸ್ಮರಣೆಯಲ್ಲಿಲ್ಲ. ಅಂಥ ನಾನು ಅತ್ಯಂತ

ಕ್ಷಮಾ ಯಸ್ಮಿಂಸ್ತಪಸ್ತ್ಯಾಗಃ ಸತ್ಯಂ ಧರ್ಮಃ ಕೃತಜ್ಞತಾ ।
ಅವಿಹಿಂಸಾ ಚ ಭೂತಾನಾಂ ತಮೃತೇ ಕಾ ಗತಿರ್ಮಮ ॥ ೩೩

ಮಮ ವೃದ್ಧಸ್ಯ ಕೈಕೇಯಿ ಗತಾಂತಸ್ಯ ತಪಸ್ವಿನಃ ।
ದೀನಂ ಲಾಲಪ್ಯಮಾನಸ್ಯ ಕಾರುಣ್ಯಂ ಕರ್ತುಮರ್ಹಸಿ ॥ ೩೪

ಪೃಥಿವ್ಯಾಂ ಸಾಗರಾಂತಾಯಾಂ ಯತ್ಕಿಂಚಿದಧಿಗಮ್ಯತೇ ।
ತತ್ಸರ್ವಂ ತವ ದಾಸ್ಯಾಮಿ ಮಾ ಚ ತ್ವಾಂ ಮನ್ಯುರಾವಿಶೇತ್ ॥ ೩೫

ಅಂಜಲಿಂ ಕುರ್ಮಿ ಕೈಕೇಯಿ ಪಾದೌ ಚಾಪಿ ಸ್ಪೃಶಾಮಿ ತೇ ।
ಶರಣಂ ಭವ ರಾಮಸ್ಯ ಮಾಽಧರ್ಮೋ ಮಾಮಿಹ ಸ್ಪೃಶೇತ್ ॥ ೩೬

ಇತಿ ದುಃಖಾಭಿಸಂತಪ್ತಂ ವಿಲಪಂತಮಚೇತನಮ್ ।
ಘೂರ್ಣಮಾನಂ ಮಹಾರಾಜಂ ಶೋಕೇನ ಸಮಭಿಪ್ಲುತಮ್ ॥ ೩೭

ಪಾರಂ ಶೋಕಾರ್ಣವಸ್ಯಾಶು ಪ್ರಾರ್ಥಯಂತಂ ಪುನಃಪುನಃ ।
ಪ್ರತ್ಯುವಾಚಾಥ ಕೈಕೇಯೀ ರೌದ್ರಾ ರೌದ್ರತರಂ ವಚಃ ॥ ೩೮

---

ಪ್ರಿಯನಾದ ರಾಮನಿಗೆ ಉದ್ವೇಗಕರವಾದ ಮಾತನ್ನು ನಿನಗೋಸ್ಕರ ಹೇಗೆ ನುಡಿಯಲಿ? (೩೧-೩೨). ತಾಳ್ಮೆ, ತಪಸ್ಸು, ತ್ಯಾಗ, ಸತ್ಯ, ಧರ್ಮ, ಕೃತಜ್ಞತೆ, ಸಕಲರ ವಿಷಯದಲ್ಲಿಯೂ ಅಹಿಂಸೆ - ಇಂಥ ಗುಣವಂತನಾದ ರಾಮನಿಲ್ಲದಿದ್ದರೆ ನನ್ನ ಗತಿ ಏನು ? (೩೩). ಕೈಕೇಯಿ, ನಾನು ಸಾಯುವ ಮುದುಕ, ಮರುಗಬೇಕಾದ ಸ್ಥಿತಿಯಲ್ಲಿದ್ದೇನೆ. ದೈನ್ಯದಿಂದ ನಾನು ಗೋಳಾಡುವುದನ್ನಾದರೂ ಕಂಡು ದಯೆ ತೋರಿಸು. ಈ ಸಮುದ್ರ ಪರ್ಯಂತವಾದ ಭೂಮಿಯಲ್ಲಿ ಯಾವ ವಸ್ತು ಬೇಕಾದರೂ ಅದನ್ನು ತಂದು ಒಪ್ಪಿಸುತ್ತೇನೆ (ಇದೊಂದು ವಿಷಯದಲ್ಲಿ) ಹಠಮಾಡಬೇಡ (೩೪-೩೫). ಕೈಕೇಯಿ, ನಿನಗೆ ಕೈಮುಗಿಯುತ್ತೇನೆ. ನಿನ್ನ ಕಾಲುಗಳನ್ನಾದರೂ ಮುಟ್ಟಿ ನಮಸ್ಕರಿಸುತ್ತೇನೆ. ರಾಮನಿಗೆ ಆಶ್ರಯವನ್ನು ಕೊಡು. ನನಗೆ ಅಧರ್ಮವು ಸೋಕದಂತೆ ಮಾಡು" (೩೬). ಈ ರೀತಿಯಲ್ಲಿ ದಶರಥಮಹಾರಾಜನು ದುಃಖದಲ್ಲಿ ಬೇಯುತ್ತ, ಮೈಮೇಲೆ ಪ್ರಜ್ಞೆಯಿಲ್ಲದೆ ಅತ್ತಿಂದಿತ್ತ ಒಲೆಯುತ್ತ ಶೋಕಾವಿಷ್ಟನಾಗಿ ಹಲುಬುತ್ತ, 'ಈ ಶೋಕ ಸಮುದ್ರದಿಂದ ನನ್ನನ್ನು ಪಾರುಮಾಡು' ಎಂದು ಮತ್ತೆ ಮತ್ತೆ ಬೇಡಿಕೊಳ್ಳುತ್ತಿದ್ದನು. ಆಗ ಕೈಕೇಯಿಯು

ಯದಿ ದತ್ತ್ವಾ ವರೌ ರಾಜನ್ ಪುನಃ ಪ್ರತ್ಯನುತಪ್ಯಸೇ ।
ಧಾರ್ಮಿಕತ್ವಂ ಕಥಂ ವೀರ ಪೃಥಿವ್ಯಾಂ ಕಥಯಿಷ್ಯಸಿ ॥ ೩೯

ಯದಾ ಸಮೇತಾ ಬಹವಸ್ತ್ವಯಾ ರಾಜರ್ಷಯಃ ಸಹ ।
ಕಥಯಿಷ್ಯಂತಿ ಧರ್ಮಜ್ಞ ತತ್ರ ಕಿಂ ಪ್ರತಿವಕ್ಷ್ಯಸಿ ॥ ೪೦

ಯಸ್ಯಾಃ ಪ್ರಸಾದೇ ಜೀವಾಮಿ ಯಾ ಚ ಮಾಮಭ್ಯಪಾಲಯತ್ ।
ತಸ್ಯಾಃ ಕೃತಂ ಮಯಾ ಮಿಥ್ಯಾ ಕೈಕೇಯ್ಯಾ ಇತಿ ವಕ್ಷ್ಯಸಿ ॥ ೪೧

ಕಿಲ್ಬಿಷಂ ತ್ವಂ ನರೇಂದ್ರಾಣಾಂ ಕರಿಷ್ಯಸಿ ನರಾಧಿಪ ।
ಯೋ ದತ್ತ್ವಾ ವರಮದ್ಯೈವ ಪುನರನ್ಯಾನಿ ಭಾಷಸೇ ॥ ೪೨

ಶೈಬ್ಯಃ ಶ್ಯೇನಕಪೋತೀಯೇ ಸ್ವಮಾಂಸಂ ಪಕ್ಷಿಣೇ ದದೌ ।
ಅಲರ್ಕಶ್ಚಕ್ಷುಷೀ ದತ್ತ್ವಾ ಜಗಾಮ ಗತಿಮುತ್ತಮಾಮ್ ॥ ೪೩

ಸಾಗರಃ ಸಮಯಂ ಕೃತ್ವಾ ನ ವೇಲಾಮತಿವರ್ತತೇ ।
ಸಮಯಂ ಮಾನೃತಂ ಕಾರ್ಷೀಃ ಪೂರ್ವವೃತ್ತಮನುಸ್ಮರನ್ ॥ ೪೪

---

ರೌದ್ರಾವೇಶವನ್ನು ತಾಳಿ, ಮತ್ತಷ್ಟು ಕ್ರೂರವಾದ ಮಾತನ್ನಾಡಿದಳು (೩೭-೩೮) : "ರಾಜ, ವರಗಳನ್ನು ಸಲ್ಲಿಸುತ್ತೇನೆಂದು ಮಾತುಕೊಟ್ಟು ಈಗ ಸಂಕಟ ಪಡುತ್ತಿದ್ದೀಯೆ. ನೀನು ಧಾರ್ಮಿಕನೆಂದು ಲೋಕದಲ್ಲಿ ಹೇಗೆ ಹೇಳಿಕೊಳ್ಳುತ್ತೀಯೆ? ಇತರ ರಾಜರು ಬಂದು ಸಂಭಾಷಿಸುವಾಗ 'ಕೈಕೇಯಿಗೆ ಕೊಟ್ಟ ವರವನ್ನು ಸಲ್ಲಿಸಿದೆಯಾ?' ಎಂದು ಕೇಳಿದರೆ, ನೀನು ಅವರಿಗೆ ಯಾವ ಉತ್ತರವನ್ನು ಕೊಡುತ್ತೀಯೆ? (೩೯-೪೦). 'ಕೈಕೇಯಿಯ ಅನುಗ್ರಹದಿಂದ ನಾನು ಬದುಕಿದ್ದೇನೆ. ಅವಳು ನನ್ನನ್ನು ಕಾಪಾಡಿದಳು. ಆದರೆ ನಾನು ಮಾತ್ರ ಅವಳಿಗೆ ಮೋಸಮಾಡಿದೆ' ಎಂದು ತಾನೆ ಹೇಳುತ್ತೀಯೆ ? (೪೧). ವರವನ್ನು ಸಲ್ಲಿಸುತ್ತೇನೆಂದು ಈಗ ಮಾತುಕೊಟ್ಟು, ಈಗಲೇ ಮಾತು ಮುರಿಯುತ್ತಿದ್ದೀಯಲ್ಲ. ನಿನ್ನ ವಂಶದ ನರೇಂದ್ರರಿಗೆ ಕೆಟ್ಟ ಹೆಸರನ್ನು ತರುತ್ತಿದ್ದೀಯೆ (೪೨). ಶ್ಯೇನಕಪೋತಗಳ ಕಥೆಯಲ್ಲಿ ಶಿಬಿರಾಜನು ತನ್ನ ಮಾಂಸವನ್ನು ಪಕ್ಷಿಗೆ ದಾನಮಾಡಿದ್ದಾನೆ. ಅಲರ್ಕನೆಂಬ ರಾಜನು ತನ್ನ ಕಣ್ಣುಗಳನ್ನೇ ದಾನಮಾಡಿ ಸದ್ಗತಿಯನ್ನು ಪಡೆದನು (೪೩). ಸಮುದ್ರರಾಜನು ತಾನು ಕೊಟ್ಟ ಭಾಷೆಯಂತೆ ಎಲ್ಲೆಯನ್ನು ಮೀರದೆ

ಸ ತ್ವಂ ಧರ್ಮಂ ಪರಿತ್ಯಜ್ಯ ರಾಮಂ ರಾಜ್ಯೇಽಭಿಷಿಚ್ಯ ಚ ।
ಸಹ ಕೌಸಲ್ಯಯಾ ನಿತ್ಯಂ ರಂತುಮಿಚ್ಛಸಿ ದುರ್ಮತೇ ॥ ೪೫

ಭವತ್ವಧರ್ಮೋ ಧರ್ಮೋ ವಾ ಸತ್ಯಂ ವಾ ಯದಿ ವಾನೃತಮ್ ।
ಯತ್ತ್ವಯಾ ಸಂಶ್ರುತಂ ಮಹ್ಯಂ ತಸ್ಯ ನಾಸ್ತಿ ವ್ಯತಿಕ್ರಮಃ ॥ ೪೬

ಅಹಂ ಹಿ ವಿಷಮದ್ಯೈವ ಪೀತ್ವಾ ಬಹು ತವಾಗ್ರತಃ ।
ಪಶ್ಯತಸ್ತೇ ಮರಿಷ್ಯಾಮಿ ರಾಮೋ ಯದ್ಯಭಿಷಿಚ್ಯತೇ ॥ ೪೭

ಏಕಾಹಮಪಿ ಪಶ್ಯೇಯಂ ಯದ್ಯಹಂ ರಾಮಮಾತರಮ್ ।
ಅಂಜಲಿಂ ಪ್ರತಿಗೃಹ್ಣಂತೀಂ ಶ್ರೇಯೋ ನನು ಮೃತಿರ್ಮಮ ॥ ೪೮

ಭರತೇನಾತ್ಮನಾ ಚಾಹಂ ಶಪೇ ತೇ ಮನುಜಾಧಿಪ ।
ಯಥಾ ನಾನ್ಯೇನ ತುಷ್ಯೇಯಮೃತೇ ರಾಮವಿವಾಸನಾತ್ ॥ ೪೯

ಏತಾವದುಕ್ತ್ವಾ ವಚನಂ ಕೈಕೇಯೀ ವಿರರಾಮ ಹ ।
ವಿಲಪಂತಂ ಚ ರಾಜಾನಂ ನ ಪ್ರತಿವ್ಯಾಜಹಾರ ಸಾ ॥ ೫೦

---

ಇದ್ದಾನೆ. ಪೂರ್ವಿಕರು ಹೋದ ದಾರಿಯನ್ನು ನೆನಪಿನಲ್ಲಿಟ್ಟುಕೊಂಡು, ಮಾಡಿದ ಪ್ರತಿಜ್ಞೆಯನ್ನು ಸುಳ್ಳುಮಾಡಬೇಡ. ನಿನಗೆ ದುರ್ಬುದ್ಧಿ ಬಂದಿದೆ. ನೀನು ಧರ್ಮವನ್ನು ಮೂಲೆಗೊತ್ತಿ ರಾಮನಿಗೆ ರಾಜ್ಯವನ್ನಿತ್ತು ಅಭಿಷೇಕ ಮಾಡಿ ಕೌಸಲ್ಯೆಯೊಡನೆ ಸದಾ ವಿಹರಿಸುತ್ತಿರಬೇಕೆಂದು ಉದ್ದೇಶಿಸಿದ್ದೀಯೆ (೪೪-೪೫). ನನ್ನ ಕೋರಿಕೆ ಅಧರ್ಮವೊ ಧರ್ಮವೊ, ಸರಿಯೊ ತಪ್ಪೊ - ನೀನು ಕೊಟ್ಟ ಭಾಷೆಯಂತೆ ನಡೆಯಲೇಬೇಕು; ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ರಾಮನಿಗೇನಾದರೂ ಪಟ್ಟಾಭಿಷೇಕವಾದರೆ, ನಿನ್ನ ಕಣ್ಣೆದುರಿಗೇ ನಾನು ವಿಷವನ್ನು ಕುಡಿದು ಸಾಯುವೆನು (೪೬-೪೭). ರಾಮನ ತಾಯಿಯು (ಪ್ರಜೆಗಳ) ವಂದನಾಸ್ವೀಕಾರ ಮಾಡುತ್ತಿರುವುದನ್ನು ಒಂದು ದಿನವಾದರೂ ನೋಡುವುದಕ್ಕಿಂತ ನಾನು ಸತ್ತುಹೋಗುವುದೇ ಲೇಸು (೪೮). ಮಹಾರಾಜ, ಭರತನ ಹೆಸರಿನಲ್ಲಿ - ನನ್ನ ಹೆಸರಿನಲ್ಲಿ ನಿನಗೆ ಆಣೆ ಮಾಡಿ ಹೇಳುತ್ತೇನೆ, ರಾಮನು ದೇಶಭ್ರಷ್ಟನಾಗಿ ಹೊರಡುವುದನ್ನು ಬಿಟ್ಟು ಇನ್ನು ಯಾವುದರಿಂದಲೂ ನನಗೆ ತೃಪ್ತಿ ಇಲ್ಲ" ಎಂದು ಹೇಳಿ ಕೈಕೇಯಿಯು ಸುಮ್ಮನಾದಳು. ದಶರಥನ ವಿಲಾಪಕ್ಕೆ ಯಾವ ಪ್ರತ್ಯುತ್ತರವನ್ನೂ ಅವಳು

ಶ್ರುತ್ವಾ ಚ ರಾಜಾ ಕೈಕೇಯ್ಯಾ ವಾಕ್ಯಂ ಪರಮದಾರುಣಮ್ ।
ರಾಮಸ್ಯ ಚ ವನೇ ವಾಸಮೈಶ್ವರ್ಯಂ ಭರತಸ್ಯ ಚ ॥ ೫೧

ನಾಭ್ಯಭಾಷತ ಕೈಕೇಯೀಂ ಮುಹೂರ್ತಂ ವ್ಯಾಕುಲೇಂದ್ರಿಯಃ ।
ಪ್ರೈಕ್ಷತಾನಿಮಿಷೋ ದೇವೀಂ ಪ್ರಿಯಾಮಪ್ರಿಯವಾದಿನೀಮ್ ॥ ೫೨

ತಾಂ ಹಿ ವಜ್ರಸಮಾಂ ವಾಚಮಾಕರ್ಣ್ಯ ಹೃದಯಚ್ಛಿದಮ್ ।
ದುಃಖಶೋಕಮಯೀಂ ಘೋರಾಂ ರಾಜಾ ನ ಸುಖಿತೋಽಭವೇತ್ ॥ ೫೩

ಸ ದೇವ್ಯಾ ವ್ಯವಸಾಯಂ ಚ ಘೋರಂ ಚ ಶಪಥಂ ಕೃತಮ್ ।
ಧ್ಯಾತ್ವಾ ರಾಮೇತಿ ನಿಶ್ವಸ್ಯ ಛಿನ್ನಸ್ತರುರಿವಾಪತತ್ ॥ ೫೪

ನಷ್ಟಚೇತೋ ಯಥೋನ್ಮತ್ತೋ ವಿಪರೀತೋ ಯಥಾತುರಃ ।
ಹೃತತೇಜಾ ಯಥಾ ಸರ್ಪೋ ಬಭೂವ ಜಗತೀಪತಿಃ ॥ ೫೫

ದೀನಯಾ ತು ಗಿರಾ ರಾಜಾ ಇತಿ ಹೋವಾಚ ಕೈಕಯೀಮ್ ।
ಅನರ್ಥಮಿಮಮರ್ಥಾಭಂ ಕೇನ ತ್ವಮುಪದರ್ಶಿತಾ ॥ ೫೬

---

ಕೊಡಲಿಲ್ಲ (೪೯-೫೦). ರಾಮನು ವನವಾಸದಲ್ಲಿರಬೇಕು, ಭರತನು ರಾಜ್ಯಕ್ಕೆ ಅಧಿಪತಿಯಾಗಬೇಕು ಎಂದು ಹೇಳುವ ಕೈಕೇಯಿಯ ಅತಿನಿಷ್ಠುರವಾದ ವಚನವನ್ನು ಕೇಳಿ ಚೈತನ್ಯವೆಲ್ಲವೂ ಉಡುಗಿಹೋದ ದಶರಥನಿಗೆ ಸ್ವಲ್ಪ ಹೊತ್ತು ಮಾತನಾಡುವುದಕ್ಕೆ ಆಗಲಿಲ್ಲ. ಅಪ್ರಿಯವಾದಿನಿಯಾದ ಆ 'ಪ್ರಿಯ'ಳನ್ನು ಕಣ್ಣುಮಿಟುಕಿಸದೆ ನೋಡುತ್ತಿದ್ದನು (೫೧-೫೨). ಎದೆಯೊಡೆಯಿಸುವ ಅವಳ ವಾಕ್ಯವು ಅನಿರೀಕ್ಷಿತವಾಗಿ ಸಿಡಿಲಿನಂತೆ ಎರಗಿತ್ತು. ಭಯಂಕರವಾದ ಆ ವಾಕ್ಯವು ದುಃಖಸಂಕಟಗಳನ್ನು ತಂದಿತ್ತು. ದಶರಥನು ಕಂಗಾಲಾಗಿದ್ದನು ಅವನು ಹೆಂಡತಿಯ ಹಠವನ್ನೂ ತನ್ನ ಘೋರವಾದ ಶಪಥವನ್ನೂ ನೆನೆಸಿಕೊಂಡು 'ರಾಮಾ' ಎಂದು ಚೀರುತ್ತ ಕಡಿದುಹಾಕಿದ ಮರದಂತೆ ನೆಲಕ್ಕೆ ಉರುಳಿದನು (೫೩-೫೪). ಆ ಭೂಪಾಲನು ಹುಚ್ಚುಹಿಡಿದವನಂತೆ ಬುದ್ಧಿಗೆಟ್ಟನು. ಸನ್ನಿಪಾತರೋಗಿಯಂತೆ ತಳಮಳಗೊಂಡನು (ಮಂತ್ರೌಷಧಗಳಿಂದ) ತಡೆಗಟ್ಟಿದ ಸರ್ಪದಂತೆ ಕೈಲಾಗದವನಾದನು (೫೫). ಅನಂತರ ದೈನ್ಯದಿಂದ ಕೈಕೇಯಿಯನ್ನು ಕುರಿತು ಹೀಗೆಂದನು 'ನೋಡಲು ಹಿತಕರವಾಗಿದ್ದರೂ

ಭೂತೋಪಹತಚಿತ್ತೇವ ಬ್ರುವಂತೀ ಮಾಂ ನ ಲಜ್ಜಸೇ ।
ಶೀಲವ್ಯಸನಮೇತತ್ತೇ ನಾಭಿಜಾನಾಮ್ಯಹಂ ಪುರಾ ॥ ೫೭

ಬಾಲಾಯಾಸ್ತತ್ತ್ವದಾನೀಂ ತೇ ಲಕ್ಷಯೇ ವಿಪರೀತವತ್ ।
ಕುತೋ ವಾ ತೇ ಭಯಂ ಜಾತಂ ಯಾ ತ್ವಮೇವಂವಿಧಂ ವರಮ್ ॥ ೫೮

ರಾಷ್ಟ್ರೇ ಭರತಮಾಸೀನಂ ವೃಣೋಷೇ ರಾಘವಂ ವನೇ ।
ವಿರಮೈತೇನ ಭಾವೇನ ತ್ವಮೇತೇನಾನೃತೇನ ವಾ ॥ ೫೯

ಯದಿ ಭರ್ತುಃ ಪ್ರಿಯಂ ಕಾರ್ಯಂ ಲೋಕಸ್ಯ ಭರತಸ್ಯ ಚ ।
ನೃಶಂಸೇ ಪಾಪಸಂಕಲ್ಪೇ ಕ್ಷುದ್ರೇ ದುಷ್ಕೃತಕಾರಿಣಿ ॥ ೬೦

ಕಿಂ ನು ದುಃಖಮಲೀಕಂ ವಾ ಮಯಿ ರಾಮೇ ಚ ಪಶ್ಯಸಿ ।
ನ ಕಥಂಚಿದೃತೇ ರಾಮಾತ್ ಭರತೋ ರಾಜ್ಯಮಾವಸೇತ್ ॥ ೬೧

ರಾಮಾದಪಿ ಹಿ ತಂ ಮನ್ಯೇ ಧರ್ಮತೋ ಬಲವತ್ತರಮ್ ।
ಕಥಂ ದ್ರಕ್ಷ್ಯಾಮಿ ರಾಮಸ್ಯ ವಸಂ ಗಚ್ಛೇತಿ ಭಾಷಿತೇ ॥ ೬೨

---

ಅನರ್ಥವನ್ನೇ ತಂದೊಡ್ಡುವ ಈ ವಿಷಯವನ್ನು ನಿನಗೆ ಯಾರು ಹೇಳಿಕೊಟ್ಟರು ? ದೆವ್ವ ಹಿಡಿದವಳಂತೆ ಈ ಪ್ರಕಾರ ನನಗೆ ಹೇಳುತ್ತೀಯಲ್ಲ. ನಿನಗೆ ನಾಚಿಕೆಯಾಗುವುದಿಲ್ಲವೆ ? ಚಿಕ್ಕವಳಾಗಿದ್ದಾಗಲೂ ಈ ಕೆಟ್ಟಬಾಳಿಯನ್ನು ನಿನ್ನಲ್ಲಿ ನಾನು ಹಿಂದೆ ಕಂಡಿರಲಿಲ್ಲ (೫೬-೫೭). ಎಲ್ಲವೂ ಈಗ ವಿಪರೀತವಾಗಿ ಕಾಣಿಸುತ್ತಿದೆ. ಭರತನು ರಾಜ್ಯದಲ್ಲಿರಬೇಕು-ರಾಮನು ಕಾಡಿನಲ್ಲಿರಬೇಕು ಎಂದು ಕೇಳುತ್ತೀಯಲ್ಲ, ರಾಮನಿಂದ ನಿನಗೆ ಭಯವಾಗಲು ಕಾರಣವಾದರೂ ಏನು? ಈ ತಪ್ಪು ಭಾವನೆಯನ್ನು ನಿಲ್ಲಿಸು. ಅದೆಲ್ಲವೂ ಸುಳ್ಳು (೫೮-೫೯). ನಿನ್ನ ಗಂಡನಿಗೆ - ಪ್ರಜೆಗಳಿಗೆ - ಭರತನಿಗೆ ಒಳ್ಳೆಯದಾಗಬೇಕೆಂದಿದ್ದರೆ, ಈ ಹಠವನ್ನು ಬಿಡು. ಅಯ್ಯೊ ಘಾತುಕಿ! ಪಾಪಿ! ತುಚ್ಛ ಬುದ್ಧಿಯವಳೆ! ದುಷ್ಟೆ! ನನ್ನಲ್ಲಾಗಲಿ ರಾಮನಲ್ಲಾಗಲಿ ನಿನಗೆ ಅಸಮಾಧಾನವನ್ನು ತರುವ ಯಾವ ಅಂಶವನ್ನು ಕಂಡೆ? ಯಾವ ತಪ್ಪನ್ನು ಕಂಡೆ? ರಾಮನನ್ನು ತಳ್ಳಿ ಭರತನು ಎಂದಿಗೂ ರಾಜ್ಯವನ್ನು ವಹಿಸಿ ಕೊಳ್ಳಲಾರನು (೬೦-೬೧). ಧರ್ಮಸೂಕ್ಷ್ಮವನ್ನು ವಿಚಾರಿಸುವುದರಲ್ಲಿ ಭರತನೇ ರಾಮನಿಗಿಂತ ಒಂದು ತೂಕ ಹೆಚ್ಚೆಂದು ಭಾವಿಸಿದ್ದೇನೆ. ಕಾಡಿಗೆ ಹೋಗೆಂದು ರಾಮ

ಮುಖವರ್ಣಂ ವಿವರ್ಣಂ ತಂ ಯಥೈವೇಂದುಮುಪಪ್ಲುತಮ್ ।
ತಾಂ ಹಿ ಮೇ ಸುಕೃತಾಂ ಬುದ್ಧಿಂ ಸುಹೃದ್ಭಿಃ ಸಹ ನಿಶ್ಚಿತಾಮ್ ॥ ೬೩

ಕಥಂ ದ್ರಕ್ಷ್ಯಾಮ್ಯಪಾವೃತ್ತಾಂ ಪರೈರಿವ ಹತಾಂ ಚಮೂಮ್ ।
ಕಿಂ ಮಾಂ ವಕ್ಷ್ಯಂತಿ ರಾಜಾನೋ ನಾನಾದಿಗ್ಭ್ಯಃ ಸಮಾಗತಾಃ ॥ ೬೪

ಬಾಲೋ ಬತಾಯುಷ್ಮೈಕ್ಷ್ವಾಕಶ್ಚಿರಂ ರಾಜ್ಯಮಕಾರಯತ್ ।
ಯದಾ ತು ಬಹವೋ ವೃದ್ಧಾ ಗುಣವಂತೋ ಬಹುಶ್ರುತಾಃ ॥ ೬೫

ಪರಿಪ್ರಕ್ಷ್ಯಂತಿ ಕಾಕುತ್ಸ್ಥಂ ವಕ್ಷ್ಯಾಮಿ ಕಿಮಹಂ ತದಾ ।
ಕೈಕೇಯ್ಯಾ ಕ್ಲಿಶ್ಯಮಾನೇನ ಪುತ್ರಃ ಪ್ರವ್ರಾಜಿತೋ ಮಯಾ ॥ ೬೬

ಯದಿ ಸತ್ಯಂ ಬ್ರವೀಮ್ಯೇತತ್ತದಸತ್ಯಂ ಭವಿಷ್ಯತಿ ।
ಕಿಂ ಮಾಂ ವಕ್ಷ್ಯತಿ ಕೌಸಲ್ಯಾ ರಾಘವೇ ವನಮಾಸ್ಥಿತೇ ॥ ೬೭

---

ನಿಗೆ ಹೇಳಿದಾಗ, ಗ್ರಹಣ ಹಿಡಿದ ಚಂದ್ರನಂತೆ ಕಾಂತಿಗುಂದುವ ಅವನ ಮುಖವನ್ನು ನಾನು ಹೇಗೆ ನೋಡಲಿ? ಸ್ನೇಹಿತರೊಡನೆ ಸಮಾಲೋಚಿಸಿ ರಾಮನ ಪಟ್ಟಾಭಿಷೇಕವನ್ನು ನಿರ್ಧರಿಸಿದೆನು (೬೨-೬೩). ಶತ್ರುಗಳಿಂದ ಹೊಡೆದೋಡಿಸಲ್ಪಟ್ಟ ಸೇನೆಯು ಹಿಂದಿರುಗುವಂತೆ, ನಿಷ್ಫಲವಾದ ನನ್ನ ನಿರ್ಧಾರವನ್ನು ಹೇಗೆ ಹಿಂತೆಗೆದುಕೊಳ್ಳಲಿ ? ನಾನಾದೇಶಗಳಿಂದ ಬಂದಿರುವ ರಾಜರು ಏನು ಹೇಳಿಯಾರು? (೬೪). 'ಈತನು ಇಕ್ಷ್ವಾಕುವಂಶದಲ್ಲಿ ಹುಟ್ಟಿ ಬಹುಕಾಲ ರಾಜ್ಯಭಾರ ಮಾಡಿದ್ದರೂ ಹುಡುಗನಂತೆ ಮೂರ್ಖನಾಗಿದ್ದಾನಲ್ಲ!' ಎಂದು ಹೇಳುವುದಿಲ್ಲವೆ ? ಗುಣಶಾಲಿಗಳೂ ವಿದ್ವಾಂಸರೂ ಆದ ಬಹುಮಂದಿ ಹಿರಿಯರು ಬಂದು 'ರಾಮನ ವಿಷಯವೇನು?' ಎಂದು ಕೇಳಿದರೆ ನಾನು ಏನೆಂದು ಉತ್ತರಿಸಲಿ? ಕೈಕೇಯಿಯ ಪೀಡೆಯನ್ನು ತಡೆಯಲಾರದೆ ನಾನು ರಾಮನನ್ನು ಹೊರಡಿಸಿದೆನೆಂದರೆ, ಈ ಮಾತು ಸತ್ಯವಾದರೂ ಹುಸಿಯೆಂದೇ ಅವರು ತಿಳಿಯುವರು* ರಾಘವನು ವನಕ್ಕೆ ಹೋದರೆ

---

* ಸತ್ಯಕ್ಕೆ ಕಟ್ಟುಬಿದ್ದು ದಶರಥನು ರಾಮನನ್ನು ವನವಾಸಕ್ಕೆ ಕಳಿಸಬೇಕಾಯಿತೆಂದು ನಂಬುವುದಿಲ್ಲ. ಕಾಮವಶನಾಗಿ ಕೈಕೇಯಿಯ ಸಂತೋಷಕ್ಕಾಗಿ ಕಳಿಸಿದ್ದಾನೆಂದು ತಿಳಿಯುವರು. ಅಥವಾ ಕೈಕೇಯಿಯು ಪೀಡಿಸಿದ್ದು ಸುಳ್ಳು; ರಾಮನಲ್ಲಿ ಏನೋ ದೋಷವಿರಬೇಕು ಎಂದು ಊಹಿಸುವರು.

H.K. SRINIVASA RAO,
No. 26, 2nd Floor, 15th Cross,

ಕಿಂ ಚೈನಾಂ ಪ್ರತಿವಕ್ಷ್ಯಾಮಿ ಕೃತ್ವಾ ವಿಪ್ರಿಯಮೀದೃಶಮ್ ।
ಯದಾ ಯದಾ ಚ ಕೌಸಲ್ಯಾ ದಾಸೀವಚ್ಚ ಸಖೀವ ಚ ॥ ೬೮

ಭಾರ್ಯಾವದ್ಭಗಿನೀವಚ್ಚ ಮಾತೃವಚ್ಚೋಪತಿಷ್ಠತಿ ।
ಸತತಂ ಪ್ರಿಯಕಾಮಾ ಮೇ ಪ್ರಿಯಪುತ್ರಾ ಪ್ರಿಯಂವದಾ ॥ ೬೯

ನ ಮಯಾ ಸತ್ಕೃತಾ ದೇವೀ ಸತ್ಕಾರಾರ್ಹಾ ಕೃತೇ ತವ ।
ಇದಾನೀಂ ತತ್ತಪತಿ ಮಾಂ ಯನ್ಮಯಾ ಸುಕೃತಂ ತ್ವಯಿ ॥ ೭೦

ಅಪಥ್ಯವ್ಯಂಜನೋಪೇತಂ ಭುಕ್ತಮನ್ನಮಿವಾತುರಮ್ ।
ವಿಪ್ರಕಾರಂ ಚ ರಾಮಸ್ಯ ಸಂಪ್ರಯಾಣಂ ವನಸ್ಯ ಚ ॥ ೭೧

ಸುಮಿತ್ರಾ ಪ್ರೇಕ್ಷ್ಯ ವೈ ಭೀತಾ ಕಥಂ ಮೇ ವಿಶ್ವಸಿಷ್ಯತಿ ।
ಕೃಪಣಂ ಬತ ವೈದೇಹೀ ಶ್ರೋಷ್ಯತಿ ದ್ವಯಮಪ್ರಿಯಮ್ ॥ ೭೨

ಮಾಂ ಚ ಪಂಚತ್ವಮಾಪನ್ನಂ ರಾಮಂ ಚ ವನಮಾಶ್ರಿತಮ್ ।
ವೈದೇಹೀ ಬತ ಮೇ ಪ್ರಾಣಾನ್ ಶೋಚಂತೀ ಕ್ಷಪಯಿಷ್ಯತಿ ॥ ೭೩

---

ಕೌಸಲ್ಯೆಯು ನನಗೆ ಏನು ಹೇಳಬಹುದು? (೬೫-೬೭). ಅವಳಿಗೆ ಇಂಥ ಕೆಡುಕನ್ನು ಮಾಡಿ ಏನೆಂದು ಉತ್ತರ ಕೊಡಲಿ? ಕೌಸಲ್ಯೆಯು ನನಗೆ ದಾಸಿಯಂತೆ, ಸಖಿಯಂತೆ, ಹೆಂಡತಿಯಂತೆ, ತಂಗಿಯಂತೆ, ತಾಯಿಯಂತೆ ಸೇವೆ ಮಾಡಿದ್ದಾಳೆ. ಸತತವೂ ನನಗೆ ಒಳ್ಳೆಯದನ್ನು ಬಯಸುತ್ತ ಒಳ್ಳೆಯ ಮಾತನ್ನಾಡುತ್ತ ಮಗನಲ್ಲಿ ವ್ಯಾಮೋಹವನ್ನಿಟ್ಟುಕೊಂಡಿದ್ದಾಳೆ (೬೮-೬೯). ಅವಳು ನ್ಯಾಯವಾಗಿ ಮನ್ನಣೆಗೆ ಯೋಗ್ಯಳು. ನಿನಗೋಸ್ಕರ ಆಕೆಯನ್ನು ನಾನು ಸರಿಯಾಗಿ ಕಂಡುಕೊಳ್ಳದೆ ಹೋದೆನು. ನಿನಗೆ ಮಾಡಿದ ವೈಭವದ ಸತ್ಕಾರವು ಈಗ ನನಗೆ ಸಂಕಟವನ್ನು ತಂದಿಟ್ಟಿದೆ. ಮನಸಾರೆ ಮೆದ್ದ ಅಪಥ್ಯವಾದ ಆಹಾರವು ರೋಗಿಗೆ ಯಾತನೆಯನ್ನು ಕೊಡುವಂತಾಗಿದೆ (೭೦-೭೧). ರಾಮನಿಗೆ ಪಟ್ಟಾಭಿಷೇಕವು ತಪ್ಪಿಹೋಗುವುದನ್ನೂ ಅವನು ಕಾಡಿಗೆ ಹೋಗುವುದನ್ನೂ ನೋಡಿ ಸುಮಿತ್ರೆಯು ಹೆದರಿಹೋಗುವಳು. ಅವಳು ನನ್ನನ್ನು ನಂಬುವಳೆ? ಅಯ್ಯೋ! ಎಂಥ ಕಷ್ಟವು ಬಂದಿತು! ಜಾನಕಿಯು ಎರಡು ಕೆಟ್ಟ ಸುದ್ದಿಗಳನ್ನು ಕೇಳಬೇಕಾಗುತ್ತದೆಯಲ್ಲ. ನಾನು ಸತ್ತುಹೋದೆನೆಂಬುದೊಂದು, ರಾಮನು ಕಾಡಿಗೆ ಹೋದನೆಂಬುದಿನ್ನೊಂದು.

ಹೀನಾ ಹಿಮವತಃ ಪಾರ್ಶ್ವೇ ಕಿಂನರೇಣೇವ ಕಿಂನರೀ ।
ನ ಹಿ ರಾಮಮಹಂ ದೃಷ್ಟ್ವಾ ಪ್ರವಸಂತಂ ಮಹಾವನೇ ॥ ೭೪
ಚಿರಂ ಜೀವಿತುಮಾಶಂಸೇ ರುದಂತೀಂ ಚಾಪಿ ಮೈಥಿಲೀಮ್ ।
ಸಾ ನೂನಂ ವಿಧವಾ ರಾಜ್ಯಂ ಸಪುತ್ರಾ ಕಾರಯಿಷ್ಯಸಿ ॥ ೭೫
ಸತೀಂ ತ್ವಾಮಹಮತ್ಯಂತಂ ವ್ಯವಸ್ಯಾಮ್ಯಸತೀಂ ಸತೀಮ್ ।
ರೂಪಿಣೀಂ ವಿಷಸಂಯುಕ್ತಾಂ ಪೀತ್ವೇವ ಮದಿರಾಂ ನರಃ ॥ ೭೬
ಅನೃತೈರ್ಬತ ಮಾಂ ಸಾಂತ್ವೈಃ ಸಾಂತ್ವಯಂತೀ ಸ್ಮ ಭಾಷಸೇ ।
ಗೀತಶಬ್ದೇನ ಸಂರುಧ್ಯ ಲುಬ್ಧೋ ಮೃಗಮಿವಾವಧೀಃ ॥ ೭೭
ಅನಾರ್ಯ ಇತಿ ಮಾಮಾರ್ಯಾಃ ಪುತ್ರವಿಕ್ರಯಿಣಂ ಧ್ರುವಮ್ ।
ಧಿಕ್ಕರಿಷ್ಯಂತಿ ರಥ್ಯಾಸು ಸುರಾಪಂ ಬ್ರಾಹ್ಮಣಂ ಯಥಾ ॥ ೭೮
ಅಹೋ ದುಃಖಮಹೋ ಕೃಚ್ಛ್ರಂ ಯತ್ರ ವಾಚಃ ಕ್ಷಮೇ ತವ ।
ದುಃಖಮೇವಂವಿಧಂ ಪ್ರಾಪ್ತಂ ಪುರಾಕೃತಮಿವಾಶುಭಮ್ ॥ ೭೯

---

ಅಕಟಾ! ಜಾನಕಿಯ ಶೋಕವು ನನ್ನ ಪ್ರಾಣವನ್ನು ತೆಗೆಯುವುದು (೭೨-೭೩). ಅವಳು ರಾಮನಿಲ್ಲದೆ ಹಿಮಾಲಯದ ಪಾರ್ಶ್ವದಲ್ಲಿ ಕಿನ್ನರನನ್ನು ಕಳೆದುಕೊಂಡ ಕಿನ್ನರಿಯಂತಾಗುವಳು. ರಾಮನು ಘೋರಾರಣ್ಯಕ್ಕೆ ಹೋಗುವುದನ್ನೂ ಅದನ್ನು ಕಂಡು ಸೀತೆಯು ಗೋಳಾಡುವುದನ್ನೂ ನೋಡಿದ ಮೇಲೆ ನಾನು ಬದುಕುವ ಆಸೆ ಇಲ್ಲ. ಆಮೇಲೆ ನೀನು ಮುಂಡೆಯಾಗಿ ಮಗನೊಡನೆ ರಾಜ್ಯಭಾರವನ್ನು ನಡೆಸಬಹುದು (೭೪-೭೫). ನೀನು ರೂಪವತಿಯೆಂದು ಸಾಧುಸ್ವಭಾವದವಳೆಂದೂ ನಾನು ಮರುಳಾದೆ. ನೀನು ಎಂಥ ಕೇಡಿಯೆಂಬುದು ಈಗ ತಿಳಿಯಿತು. ನೋಡಲು ಚೆನ್ನಾಗಿದೆಯೆಂದು ವಿಷಯುಕ್ತವಾದ ಹೆಂಡವನ್ನು ಕುಡಿದವನಂತೆ ನನ್ನ ಸ್ಥಿತಿಯಾಯಿತು (೭೬). ಬೇಡನು ಇಂಪಾದ ಸಂಗೀತದಿಂದ ಜಿಂಕೆಯನ್ನು ನಿಲ್ಲಿಸಿ ಹೊಡೆಯುವಂತೆ, ನೀನು ಕಪಟಪ್ರೇಮದ ನುಡಿಗಳಿಂದ ನನ್ನನ್ನು ಮರುಳು ಮಾಡಿ ಕೊಂದೆ (೭೭). (ಹೆಂಗಸಿಗಾಗಿ) ಮಗನನ್ನು ಮಾರಿಕೊಂಡ ಅಯೋಗ್ಯನೆಂದು ಬೀದಿಬೀದಿಗಳಲ್ಲಿಯೂ ಮಹಾಜನರು ನನ್ನನ್ನು ಥೂಗುಟ್ಟುತ್ತಾರೆ. ಹೆಂಡಗುಡುಕನಾದ ಬ್ರಾಹ್ಮಣನನ್ನು ಕಂಡಂತೆ ನನ್ನನ್ನು ಧಿಕ್ಕರಿಸುತ್ತಾರೆ (೭೮). ಅಯ್ಯೊ! ಎಂಥ ದುಃಖದ ಕಾಲ ಬಂದಿತು! ಅಪ್ಪಾ! ಎಂಥ

ಚಿರಂ ಖಲು ಮಯಾ ಪಾಪೇ ತ್ವಂ ಪಾಪೇನಾಭಿರಕ್ಷಿತಾ ।
ಅಜ್ಞಾನಾದುಪಸಂಪನ್ನಾ ರಜ್ಜುರುದ್ಬಂಧಿನೀ ಯಥಾ ॥ ೮೦

ರಮಮಾಣಸ್ತ್ವಯಾ ಸಾರ್ಧಂ ಮೃತ್ಯುಂ ತ್ವಾ ನಾಭಿಲಕ್ಷಯೇ ।
ಬಾಲೋ ರಹಸಿ ಹಸ್ತೇನ ಕೃಷ್ಣಸರ್ಪಮಿವಾಸ್ಪೃಶಮ್ ॥ ೮೧

ಮಯಾ ಹ್ಯಪಿತೃಕಃ ಪುತ್ರಃ ಸ ಮಹಾತ್ಮಾ ದುರಾತ್ಮನಾ ।
ತಂ ತು ಮಾಂ ಜೀವಲೋಕೋಽಯಂ ನೂನಮಾಕ್ರೋಷ್ಟುಮರ್ಹತಿ ॥ ೮೨

ಬಾಲಿಶೋ ಬತ ಕಾಮಾತ್ಮಾ ರಾಜಾ ದಶರಥೋ ಭೃಶಮ್ ।
ಸ್ತ್ರೀಕೃತೇ ಯಃ ಪ್ರಿಯಂ ಪುತ್ರಂ ವನಂ ಪ್ರಸ್ಥಾಪಯಿಷ್ಯತಿ ॥ ೮೩

ವ್ರತೈಶ್ಚ ಬ್ರಹ್ಮಚರ್ಯೈಶ್ಚ ಗುರುಭಿಶ್ಚೋಪಕರ್ಶಿತಃ ।
ಭೋಗಕಾಲೇ ಮಹತ್ಕಷ್ಟಂ ಪುನರೇವ ಪ್ರಪತ್ಸ್ಯತೇ ॥ ೮೪

ನಾಲಂ ದ್ವಿತೀಯಂ ವಚನಂ ಪುತ್ರೋ ಮಾಂ ಪ್ರತಿಭಾಷಿತುಮ್ ।
ಸ ವನಂ ಪ್ರವ್ರಜೇತ್ಯುಕ್ತೋ ಬಾಢಮಿತ್ಯೇವ ವಕ್ಷ್ಯತಿ ॥ ೮೫

---

ಕಷ್ಟಕ್ಕೆ ಸಿಕ್ಕಿದೆನು! ನಿನ್ನ ಕಠೋರವಾಕ್ಯಗಳನ್ನು ಕೇಳಿ ಸಹಿಸಿಕೊಳ್ಳಬೇಕಾಗಿದೆ! ನನ್ನ ಜನ್ಮಾಂತರದ ಪಾಪಕರ್ಮದಿಂದಲೇ ಈ ಬಗೆಯ ದುಃಖವು ಒದಗಿಬಂದಿತು (೭೯). ಎಲೆ ಪಾಪಿ, ಪಾಪಿಯಾದ ನಾನು ಅಜ್ಞಾನದಿಂದ ಇಷ್ಟುದಿನದವರೆಗೆ ನಿನ್ನನ್ನು ಸಲಹಿದೆನಲ್ಲ. ಈಗ ನೀನು (ನನ್ನ ಕುತ್ತಿಗೆಗೆ) ನೇಣಿನ ಹಗ್ಗವಾದೆ (೮೦). ನಿನ್ನೊಡನೆ ವಿನೋದಿಸುತ್ತಿರುವಾಗ ಮೃತ್ಯುವಿನೊಡನೆ ಸರಸವಾಡುತ್ತಿದ್ದೇನೆಂದು ನನಗೆ ತಿಳಿಯದೆ ಹೋಯಿತು. ಯಾರೂ ಇಲ್ಲದಿರುವಾಗ ಬಾಲಕನು ಕೃಷ್ಣಸರ್ಪವನ್ನು ಮುಟ್ಟಿದಂತಾಯಿತು. ಆ ಮಹಾತ್ಮನಾದ ಪುತ್ರನು ದುರಾತ್ಮನಾದ ನಾನು ಬದುಕಿರುವಾಗಲೇ ತಂದೆಯಿಲ್ಲದ ತಬ್ಬಲಿಯಾದನು (೮೧-೮೨). 'ದಶರಥ ರಾಜನು ಎಷ್ಟು ಮೂರ್ಖ! ಕಾಮಿ. ಒಬ್ಬ ಹೆಂಗಸಿಗೋಸ್ಕರ ಅಷ್ಟು ಒಳ್ಳೆಯ ಮಗನನ್ನು ಕಾಡಿಗೆ ಅಟ್ಟಿದ್ದಾನೆ' ಎಂದು ಪ್ರತಿಯೊಬ್ಬರೂ ನನ್ನನ್ನು ಬಯ್ಯುತ್ತಾರೆ (೮೩). ಇದುವರೆಗೂ ರಾಮನು ಬ್ರಹ್ಮಚರ್ಯಾದಿ ವ್ರತಗಳಿಂದಲೂ ಗುರುಶುಶ್ರೂಷೆ ಮೊದಲಾದ ನಿಯಮಗಳಿಂದಲೂ ನಾನಾ ಕ್ಲೇಶಗಳನ್ನು ಅನುಭವಿಸಿದ್ದಾನೆ. ಈಗ ಸುಖಪಡಬೇಕಾದ ಕಾಲದಲ್ಲಿ ಪುನಃ

ಯದಿ ಮೇ ರಾಘವಃ ಕುರ್ಯಾದ್ವನಂ ಗಚ್ಛೇತಿ ಭಾಷಿತಃ ।
ಪ್ರತಿಕೂಲಂ ಪ್ರಿಯಂ ಮೇ ಸ್ಯಾನ್ನ ತು ವತ್ಸಃ ಕರಿಷ್ಯತಿ ॥ ೮೬

ಶುದ್ಧಭಾವೋ ಹಿ ಭಾವಂ ಮೇ ನ ತು ಜ್ಞಾಸ್ಯತಿ ರಾಘವಃ ।
ರಾಘವೇ ಹಿ ವನಂ ಪ್ರಾಪ್ತೇ ಸರ್ವಲೋಕಸ್ಯ ಧಿಕ್ಕೃತಮ್ ॥ ೮೭

ಮೃತ್ಯುರಕ್ಷಮಣೀಯಂ ಮಾಂ ನಯಿಷ್ಯತಿ ಯಮಕ್ಷಯಮ್ ।
ಮತೇ ಮಯಿ ಗತೇ ರಾಮೇ ವನಂ ಮನುಜಪುಂಗವೇ ॥ ೮೮

ಇಷ್ಟೇ ಮಮ ಜನೇ ಶೇಷೇ ಕಿಂ ಪಾಪಂ ಪ್ರತಿಪತ್ಸ್ಯಸೇ ।
ಕೌಸಲ್ಯಾ ಮಾಂ ಚ ರಾಮಂ ಚ ಪುತ್ರೌ ಚ ಯದಿ ಹಾಸ್ಯತಿ ॥ ೮೯

ದುಃಖಾನ್ಯಸಹತೀ ದೇವೀ ಮಾಮೇವಾನುಮರಿಷ್ಯತಿ ।
ಕೌಸಲ್ಯಾಂ ಚ ಸುಮಿತ್ರಾಂ ಚ ಮಾಂ ಚ ಪುತ್ರೈಸ್ತ್ರಿಭಿಃ ಸಹ ॥ ೯೦

---

ದೊಡ್ಡ ಕಷ್ಟವನ್ನು ಅನುಭವಿಸಬೇಕಾಗುವುದು. 'ನೀನು ಕಾಡಿಗೆ ಹೋಗಬೇಕು' ಎಂದು ಹೇಳಿದರೆ ನನ್ನ ಮಗನು ಎರಡನೆಯ ಮಾತನ್ನೇ ತಿರುಗಿ ಆಡುವುದಿಲ್ಲ. 'ಓಹೋ! ಆಗಬಹುದು' ಎಂದೇ ಹೇಳುವನು (೮೪-೮೫). 'ಕಾಡಿಗೆ ಹೋಗು' ಎಂದು ಹೇಳಿದಾಗ ನನ್ನ ಮಾತನ್ನು ಒಪ್ಪದೆ ಅವನು ವಿರೋಧಿಸಿದರೇ ನನಗೆ ಆನಂದ. ಆದರೆ ನನ್ನ ವತ್ಸನು ಹಾಗೆ ಮಾಡತಕ್ಕವನಲ್ಲ (೮೬). ರಾಮನ ಮನಸ್ಸು ಪರಿಶುದ್ಧವಾದದ್ದು. ನನ್ನ ಅಂತರಂಗದ ಆಶಯವನ್ನು ಅವನು ತಿಳಿದುಕೊಳ್ಳುವುದಿಲ್ಲ. ರಾಘವನು ಅರಣ್ಯಕ್ಕೆ ಹೋದರೆ ಕ್ಷಮೆಗೆ ಅನರ್ಹನಾದ ನನ್ನನ್ನು ಸಮಸ್ತ ಜನರೂ ಧಿಕ್ಕರಿಸುವರು. ಮೃತ್ಯುವು ನನ್ನನ್ನು ಯಮನ ಮನೆಗೆ ಕಳುಹಿಸುವುದು (೮೭-೮೮). ಇತ್ತ ನಾನು ಸಾಯುವೆನು. ಪುರುಷೋತ್ತಮನಾದ ರಾಮನು ಅತ್ತ ಅರಣ್ಯಕ್ಕೆ ಹೋಗಿರುವನು. ಆಗ ನನಗೆ ಬೇಕಾದ ಉಳಿದವರ ಮೇಲೆ ಯಾವ ಯಾವ ಪಾಪಕೃತ್ಯವನ್ನು ಮಾಡಬೇಕೆಂದಿದ್ದೀಯೆ ? (ಲಕ್ಷ್ಮಣ ಶತ್ರುಘ್ನರನ್ನು ನೀನು ಉಳಿಸುವೆಯಾ?) (೮೯). ಕೌಸಲ್ಯೆಯು ನನ್ನನ್ನೂ ರಾಮನನ್ನೂ ಆ ಇಬ್ಬರು ಮಕ್ಕಳನ್ನೂ ಅಗಲಿದಮೇಲೆ ದುಃಖವನ್ನು ತಡೆದು ಕೊಂಡಿರಬಲ್ಲಳೆ ? ಆ ದೇವಿಯು ನನ್ನ ಹಿಂದೆಯೇ ಸತ್ತುಹೋಗುವಳು.

ಪ್ರಕ್ಷಿಪ್ಯ ನರಕೇ ಸಾ ತ್ವಂ ಕೈಕೇಯಿ ಸುಖಿತಾ ಭವ ।
ಮಯಾ ರಾಮೇಣ ಚ ತ್ಯಕ್ತಂ ಶಾಶ್ವತಂ ಸತ್ಪತಂ ಗುಣೈಃ ॥ ೯೧

ಇಕ್ಷ್ವಾಕುಕುಲಮಕ್ಷೋಭ್ಯಮಾಕುಲಂ ಪಾಲಯಿಷ್ಯಸಿ ।
ಪ್ರಿಯಂ ಚೇದ್ಭರತಸ್ಯೈತದ್ರಾಮಪ್ರವ್ರಾಜನಂ ಭವೇತ್ ॥ ೯೨

ಮಾ ಸ್ಮ ಮೇ ಭರತಃ ಕಾರ್ಷೀತ್ ಪ್ರೇತಕೃತ್ಯಂ ಗತಾಯುಷಃ ।
ಹಂತಾನಾರ್ಯೇ ಮಮಾಮಿತ್ರೇ ಸಕಾಮಾ ಭವ ಕೈಕಯಿ ॥ ೯೩

ಮೃತೇ ಮಯಿ ಗತೇ ರಾಮೇ ವನಂ ಪುರುಷಪುಂಗವೇ ।
ಸೇದಾನೀಂ ವಿಧವಾ ರಾಜ್ಯಂ ಸಪುತ್ರಾ ಕಾರಯಿಷ್ಯಸಿ ॥ ೯೪

ತ್ವಂ ರಾಜಪುತ್ರೀವಾದೇನ ನ್ಯವಸೋ ಮಮ ವೇಶ್ಮನಿ ।
ಅಕೀರ್ತಿಶ್ಚಾತುಲಾ ಲೋಕೇ ಧ್ರುವಃ ಪರಿಭವಶ್ಚ ಮೇ ॥ ೯೫

---

ಈ ರೀತಿಯಲ್ಲಿ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ನನ್ನನ್ನೂ ನಮ್ಮ ಮೂರು ಮಕ್ಕಳೊಡನೆ ನರಕದಂಥ ಸಂಕಟಕ್ಕೆ ದೂಡಿ, ಕೈಕೇಯಿ, ನೀನು ಸುಖವಾಗಿರು (೯೦-೯೧). ನಮ್ಮ ಇಕ್ಷ್ವಾಕುವಂಶವು ಸದ್ಗುಣಗಳಿಗೆ ಹೆಸರಾಗಿ ಯಾವ ಅಪವಾದಕ್ಕೂ ಗುರಿಯಾಗದೆ ಶಾಶ್ವತವಾಗಿ ನಡೆದುಕೊಂಡು ಬಂದಿದೆ. ನಾನೂ ರಾಮನೂ ಇಲ್ಲದೆ ಕ್ಷೋಭೆಗೊಳಗಾದ ಈ ರಾಜ್ಯವನ್ನು ನೀನು ಪಾಲಿಸಿಕೊಂಡು ಹೋಗುವೆಯಲ್ಲವೆ ? (೯೨). ರಾಮನನ್ನು ಕಾಡಿಗೆ ಕಳುಹಿಸುವುದು ಒಂದು ವೇಳೆ ಭರತನಿಗೆ ಸಮ್ಮತವಾದರೆ, ನಾನು ಸತ್ತ ಮೇಲೆ ನನ್ನ ಉತ್ತರಕ್ರಿಯೆಯನ್ನು ಭರತನು ಮಾಡಬಾರದು! ಅಯ್ಯೋ ದುಷ್ಟೆ! ನನ್ನ ವೈರಿಯಾದ ಕೈಕೇಯಿ! ನಿನ್ನ ಕೋರಿಕೆ ನಡೆಯಲಿ. ಅದರಂತೆ ನಾನು ಸತ್ತು, ಪುರುಷೋತ್ತಮನಾದ ರಾಮನು ಅರಣ್ಯಕ್ಕೆ ಹೋಗಿ, ನೀನು ಮುಂಡೆಯಾಗಬೇಕು. ಆಗ ನೀನು ಮಗನನ್ನು ಕಟ್ಟಿಕೊಂಡು ರಾಜ್ಯಭಾರವನ್ನು ನಡೆಸಬೇಕಾಗಿದೆ (೯೩-೯೪). ನೀನು ರಾಜಕುಮಾರಿಯೆಂಬ ಹೆಸರಿನಿಂದ ನನ್ನ ಮನೆಯಲ್ಲಿ ವಾಸವಾಗಿದ್ದೆ. ನಾನು ಮಹಾ ಪಾಪಕರ್ಮವನ್ನು ಮಾಡಿದವನಂತೆ ಲೋಕದಲ್ಲಿ ದೊಡ್ಡ ಅಪಕೀರ್ತಿಯನ್ನೂ ಅಪಮಾನವನ್ನೂ ಸಕಲಪ್ರಾಣಿಗಳಿಂದ ಧಿಕ್ಕಾರವನ್ನೂ ಪಡೆದೆನು (೯೫).

ಸರ್ವಭೂತೇಷು ಚಾವಜ್ಞಾ ಯಥಾ ಪಾಪಕೃತಸ್ತಥಾ ।
ಕಥಂ ರಥೈರ್ವಿಭುರ್ಯಾತ್ವಾ ಗಜಾಶ್ವೈಶ್ಚ ಮುಹುರ್ಮುಹುಃ ॥ ೯೬

ಪದ್ಭ್ಯಾಂ ರಾಮೋ ಮಹಾರಣ್ಯೇ ವತ್ಸೋ ಮೇ ವಿಚರಿಷ್ಯತಿ ।
ಯಸ್ಯ ತ್ವಾಹಾರಸಮಯೇ ಸೂದಾಃ ಕುಂಡಲಧಾರಿಣಃ ॥ ೯೭

ಅಹಂಪೂರ್ವಾಃ ಪಚಂತಿ ಸ್ಮ ಪ್ರಶಸ್ತಂ ಪಾನಭೋಜನಮ್ ।
ಸ ಕಥಂ ನು ಕಷಾಯಾಣಿ ತಿಕ್ತಾನಿ ಕಟುಕಾನಿ ಚ ॥ ೯೮

ಭಕ್ಷಯನ್ ವನ್ಯಮಾಹಾರಂ ಸುತೋ ಮೇ ವರ್ತಯಿಷ್ಯತಿ ।
ಮಹಾರ್ಹವಸ್ತ್ರಸಂವೀತೋ ಭೂತ್ವಾ ಚಿರಸುಖೋಷಿತಃ ॥ ೯೯

ಕಾಷಾಯಪರಿಧಾನಸ್ತು ಕಥಂ ಭೂಮೌ ನಿವತ್ಸ್ಯತಿ ।
ಕಸ್ಯೈತದ್ದಾರುಣಂ ವಾಕ್ಯಮೇವಂವಿಧಮಚಿಂತಿತಮ್ ॥ ೧೦೦

ರಾಮಸ್ಯಾರಣ್ಯಗಮನಂ ಭರತಸ್ಯಾಭಿಷೇಚನಮ್ ।
ಧಿಗಸ್ತು ಯೋಷಿತೋ ನಾಮ ಶಠಾಃ ಸ್ವಾರ್ಥಪರಾಃ ಸದಾ ॥ ೧೦೧

---

ನನ್ನ ದೊರೆ ರಾಮನು ರಥ ಆನೆ ಕುದುರೆಗಳಮೇಲೆ ಬೇಕಾದ ಹಾಗೆ ಸವಾರಿ ಮಾಡಿಕೊಂಡಿದ್ದಾನೆ. ನನ್ನ ಆ ಮುದ್ದುಮಗನು ಘೋರಾರಣ್ಯದಲ್ಲಿ ಬರಿಗಾಲುಗಳಿಂದ ತಿರುಗಾಡಬೇಕಾಗುತ್ತದೆ (೯೬). ಯಾರ ಭೋಜನಕ್ಕಾಗಿ ಕುಂಡಲಾದ್ಯಾಭರಣಗಳನ್ನು ಧರಿಸಿದ ಅಡಿಗೆಯವರು ನಾನು ಮುಂದೆ ತಾನು ಮುಂದೆ ಎಂದು ಉತ್ಸಾಹದಿಂದ ಅನ್ನಪಾನಗಳನ್ನು ಸಿದ್ಧಪಡಿಸುತ್ತಿರುವರೊ, ಆ ನನ್ನ ಪುತ್ರನು ಒಗರು, ಕಹಿ, ಕಾರಗಳಿಂದ ಕೂಡಿದ ಕಾಡಿನ ಆಹಾರವನ್ನು ತಿನ್ನುತ್ತ ಹೇಗೆ ಜೀವಿಸುವನು ? (೯೭-೯೮). ಅಮೂಲ್ಯವಾದ ವಸ್ತ್ರಗಳನ್ನು ಧರಿಸಿ ಸುಖವಾಗಿದ್ದವನು, ಕಾಷಾಯವಸ್ತ್ರವನ್ನುಟ್ಟು ನೆಲದ ಮೇಲೆ ಹೇಗೆ ಮಲಗುವನು ? (೯೯). 'ರಾಮನು ಅರಣ್ಯಕ್ಕೆ ಹೋಗಬೇಕು. ಭರತನಿಗೆ ಪಟ್ಟಾಭಿಷೇಕವಾಗಬೇಕು' ಎಂಬ ಊಹಾತೀತವಾದ ಈ ನಿಷ್ಠುರವಾಕ್ಯವನ್ನು ಹೇಳಲು ಯಾರಿಗೆ ಸಾಧ್ಯವಾದೀತು? ಸರ್ವದಾ ಸ್ವಾರ್ಥಿಗಳೂ ಧೂರ್ತರೂ ಆದ ಈ ಹೆಂಗಸರ ಜಾತಿಗೆ ಧಿಕ್ಕಾರ! ಇಲ್ಲ ಇಲ್ಲ. ಎಲ್ಲ ಹೆಂಗಸರನ್ನೂ ನಾನು ಹೇಳುತ್ತಿಲ್ಲ. ಈ ಭರತನ ತಾಯಿಯನ್ನು

ನ ಬ್ರವೀಮಿ ಸ್ತ್ರಿಯಃ ಸರ್ವಾ ಭರತಸ್ಯೈವ ಮಾತರಮ್ ॥

ಅನರ್ಥಭಾವೇಽರ್ಥಪರೇ ನೃಶಂಸೇ
ಮಮಾನುತಾಪಾಯ ನಿವಿಷ್ಟಭಾವೇ ।
ಕಿಮಪ್ರಿಯಂ ಪಶ್ಯಸಿ ಮನ್ನಿಮಿತ್ತಂ
ಹಿತಾನುಕಾರಿಣ್ಯಥವಾಪಿ ರಾಮೇ ॥ ೧೦೨

ಪರಿತ್ಯಜೇಯುಃ ಪಿತರೋ ಹಿ ಪುತ್ರಾನ್
ಭಾರ್ಯಾಃ ಪತೀಂಶ್ಚಾಪಿ ಕೃತಾನುರಾಗಾಃ ।
ಕೃತ್ಸ್ನಂ ಹಿ ಸರ್ವಂ ಕುಪಿತಂ ಜಗತ್ ಸ್ಯಾತ್
ದೃಷ್ಟ್ವೈವ ರಾಮಂ ವ್ಯಸನೇ ನಿಮಗ್ನಮ್ ॥ ೧೦೩

ಅಹಂ ಪುನರ್ದೇವಕುಮಾರರೂಪ
ಮಲಂಕೃತಂ ತಂ ಸುತಮಾಪ್ರಜಂತಮ್ ।
ನಂದಾಮಿ ಪಶ್ಯನ್ನಪಿ ದರ್ಶನೇನ
ಭವಾಮಿ ದೃಷ್ಟ್ವೈವ ಪುನರ್ಯುವೇವ ॥ ೧೦೪

ವಿನಾಪಿ ಸೂರ್ಯೇಣ ಭವೇತ್ ಪ್ರವೃತ್ತಿ
ರವರ್ಷತಾ ವಜ್ರಧರೇಣ ವಾಪಿ ।

---

ಮಾತ್ರ ಹೇಳುತ್ತಿದ್ದೇನೆ! (೧೦೦-೧೦೧). ಎಲೇ ಕೆಡುಕನ್ನೇ ಚಿಂತಿಸುವ ಸ್ವಾರ್ಥಿ, ನನ್ನನ್ನು ಸಂಕಟಪಡಿಸಲು ಪಣತೊಟ್ಟಿರುವ ದುಷ್ಟೆ! ನಿನ್ನ ಹಿತವನ್ನು ಕೋರುತ್ತಿದ್ದ ನನ್ನಲ್ಲಾಗಲಿ ರಾಮನಲ್ಲಾಗಲಿ ಯಾವ ಅಪರಾಧವನ್ನು ಕಂಡೆ? (೧೦೨). ರಾಮನಿಗೆ ಇಂಥ ವಿಪತ್ತು ಬಂದಿತೆಂಬುದನ್ನು ಕಂಡರೆ ಇಡೀ ಜಗತ್ತೇ ಕೋಪಗೊಂಡೀತು. (ಒಬ್ಬರನ್ನೊಬ್ಬರು ನಂಬದೆ ಹೋದಾರು). ತಂದೆ ತಾಯಿಗಳು ಮಕ್ಕಳನ್ನು ತೊರೆಯ ಬಹುದು. ಪ್ರೀತಿಸುವ ಮಡದಿಯರು ಗಂಡಂದಿರನ್ನು ಬಿಡಬಹುದು (೧೦೩). ದೇವಕುಮಾರನಂತೆ ರೂಪಸಂಪನ್ನನಾದ ನನ್ನ ಪುತ್ರನು ಸರ್ವಾಭರಣಭೂಷಿತ ನಾಗಿ ಬರುವುದನ್ನು ನೋಡುತ್ತಿದ್ದರೆ, ಆನಂದದಿಂದ ನನ್ನ ಮೈ ಉಬ್ಬುವುದು. ನನಗೆ ನವಯೌವನವು ಬಂದಂತಾಗುವುದು (೧೦೪). ಸೂರ್ಯನಿಲ್ಲದಿದ್ದರೂ ಇಂದ್ರನು ಮಳೆಸುರಿಸದಿದ್ದರೂ ಜಗತ್ತು ನಡೆದೀತು. ರಾಮನು ಇಲ್ಲಿಂದ

ರಾಮಂ ತು ಗಚ್ಛಂತಮಿತಃ ಸಮೀಕ್ಷ್ಯ
ಜೀವೇನ್ನ ಕಶ್ಚಿತ್ತ್ವಿತಿ ಚೇತನಾ ಮೇ ॥ ೧೦೫

ವಿನಾಶಕಾಮಾಮಹಿತಾಮಮಿತ್ರಾ
ಮಾವಾಸಯಂ ಮೃತ್ಯುಮಿವಾತ್ಮನಸ್ತ್ವಾಮ್ ।
ಚಿರಂ ಬತಾಂಕೇನ ಧೃತಾಸಿ ಸರ್ಪೀ
ಮಹಾವಿಷಾ ತೇನ ಹತೋಽಸ್ಮಿ ಮೋಹಾತ್ ॥ ೧೦೬

ಮಯಾ ಚ ರಾಮೇಣ ಚ ಲಕ್ಷ್ಮಣೇನ
ಪ್ರಶಾಸ್ತು ಹೀನೋ ಭರತಸ್ತ್ವಯಾ ಸಹ ।
ಪುರಂ ಚ ರಾಷ್ಟ್ರಂ ಚ ನಿಹತ್ಯ ಬಾಂಧವಾನ್
ಮಮಾಹಿತಾನಾಂ ಚ ಭವಾಭಿಹರ್ಷಿಣೀ ॥ ೧೦೭

ನೃಶಂಸವೃತ್ತೇ ವ್ಯಸನಪ್ರಹಾರಿಣಿ
ಪ್ರಸಹ್ಯ ವಾಕ್ಯಂ ಯದಿಹಾದ್ಯ ಭಾಷಸೇ ।
ನ ನಾಮ ತೇ ಕೇನ ಮುಖಾತ್ ಪತಂತ್ಯಥೋ
ವಿಶೀರ್ಯಮಾಣಾಃ ದಶನಾಃ ಸಹಸ್ರಧಾ ॥ ೧೦೮

---

ಕಾಡಿಗೆ ಹೋಗುವುದನ್ನು ನೋಡಿ ಯಾರೂ ಜೀವಿಸಿರಲಾರರೆಂದೇ ನನಗೆ ತೋರುತ್ತದೆ (೧೦೫). ನೀನು ನನ್ನ ವಿನಾಶಕ್ಕೆ ಹೊಂಚುಹಾಕಿ ನನ್ನ ಕೇಡನ್ನೇ ಬಯಸುತ್ತಿದ್ದ ಶತ್ರು. ನನ್ನ ಮೃತ್ಯುವನ್ನೇ ಮನೆಯಲ್ಲಿರಿಸಿಕೊಂಡು ಸಾಕಿದೆನು. ಘೋರವಿಷವನ್ನು ಕಾರುವ ಸರ್ಪವನ್ನು ಇಷ್ಟು ದಿನ ಅವಿವೇಕದಿಂದ ತೊಡೆಯ ಮೇಲಿಟ್ಟುಕೊಂಡೆನಲ್ಲ. (ಈಗ ಸರ್ಪವು ಕಚ್ಚಿತು) ನಾನು ಸತ್ತೆ (೧೦೬). ನನ್ನನ್ನೂ ರಾಮಲಕ್ಷ್ಮಣರನ್ನೂ ತೊರೆದು ಭರತನು ನಿನ್ನೊಡನೆ ಈ ನಗರವನ್ನೂ ರಾಷ್ಟ್ರವನ್ನೂ ಆಳಲಿ. ನೀನು ನನ್ನ ಇಷ್ಟ ಮಿತ್ರರನ್ನು ಹಿಂಸಿಸಿ - ಕೊಂದು ನನ್ನ ಶತ್ರುಗಳಿಗೆ ಸಂತೋಷವನ್ನುಂಟುಮಾಡು (೧೦೭). ಎಲೇ ಕೆಟ್ಟನಡತೆಯವಳೆ, ನೀನು ಗಾಯದ ಮೇಲೆ ಬರೆಹಾಕತಕ್ಕವಳು. ಇಂಥ ಕೆಟ್ಟ ಮಾತನ್ನು ಧೈರ್ಯದಿಂದ ಹೇಳುತ್ತೀಯಲ್ಲ. ನಿನ್ನ ಹಲ್ಲುಗಳು ಸಾವಿರಚೂರಾಗಿ ಬಾಯಿಂದ ಏಕೆ

ನ ಕಿಂಚಿದಾಹಾಹಿತಮಪ್ರಿಯಂ ವಚೋ
ನ ವೇತ್ತಿ ರಾಮಃ ಪರುಷಾಣಿ ಭಾಷಿತುಮ್ ।
ಕಥಂ ನು ರಾಮೇ ಹ್ಯಭಿರಾಮವಾದಿನಿ
ಬ್ರವೀಷಿ ದೋಷಾನ್ ಗುಣನಿತ್ಯಸಂಮತೇ ॥ ೧೦೯

ಪ್ರತಾಮ್ಯ ವಾ ಪ್ರಜ್ವಲ ವಾ ಪ್ರಣಶ್ಯ ವಾ
ಸಹಸ್ರಶೋ ವಾ ಸ್ಫುಟಿತಾ ಮಹೀಂ ವ್ರಜ ।
ನ ತೇ ಕರಿಷ್ಯಾಮಿ ವಚಃ ಸುದಾರುಣಂ
ಮಮಾಹಿತಂ ಕೇಕಯರಾಜಪಾಂಸನಿ ॥ ೧೧೦

ಕ್ಷುರೋಪಮಾಂ ನಿತ್ಯಮಸತ್ಪ್ರಿಯಂವದಾಂ
ಪ್ರದುಷ್ಟಭಾವಾಂ ಸ್ವಕುಲೋಪಘಾತಿನೀಮ್ ।
ನ ಜೀವಿತುಂ ತ್ವಾಂ ವಿಷಹೇಽಮನೋರಮಾಂ
ದಿಧಕ್ಷಮಾಣಾಂ ಹೃದಯಂ ಸಬಂಧನಮ್ ॥ ೧೧೧

ಉದುರಬಾರದು? (೧೦೮). ರಾಮನು ಒಬ್ಬರಿಗೆ ಒಂದು ಕೆಟ್ಟ ಮಾತನ್ನೂ ಒಂದು ಬೇಸರವಾಗುವ ನುಡಿಯನ್ನೂ ಹೇಳತಕ್ಕವನಲ್ಲ. ಕೆಟ್ಟ ಮಾತನ್ನಾಡುವುದು ಹೇಗೆಂಬುದೇ ಅವನಿಗೆ ತಿಳಿಯದು. ಪ್ರಸನ್ನವಾಗಿ ಮಾತನಾಡತಕ್ಕ ಗುಣಾಢ್ಯನಾದ ರಾಮನಲ್ಲಿ ಯಾವ ದೋಷವಿದೆಯೆಂದು ಹೇಳುತ್ತೀಯೆ? (೧೦೯). ನೀನು ಕೇಕಯ ರಾಜನ ವಂಶಕ್ಕೆ ಕೆಟ್ಟ ಹೆಸರನ್ನು ತಂದೆ. ಎಲೇ, ನಿನ್ನ ಮಾತನ್ನು ನಾನು ನಡೆಸುವುದಿಲ್ಲ. ನೀನು ದೇಹವನ್ನಾದರೂ ಒಣಗಿಸು. ಬೆಂಕಿಯಲ್ಲಾದರೂ ಬಿದ್ದು ಉರಿದುಹೋಗು. ಎಲ್ಲಾದರೂ ಹಾಳಾಗಿ ಹೋಗು. ಸಾವಿರ ತುಂಡು ತುಂಡಾಗಿ ಮಣ್ಣಿನಲ್ಲಾದರೂ ಕೂಡಿಹೋಗು. ಎಂಥ ದಾರುಣವಾದ ಅನರ್ಥವನ್ನು ತರುವ ಮಾತನ್ನಾಡುತ್ತಿದ್ದೀಯೆ (೧೧೦). ನೀನು ಕ್ಷೌರದ ಕತ್ತಿಯಂಥವಳು. ಸುಳ್ಳುಸುಳ್ಳಾಗಿ ಪ್ರೇಮದ ಮಾತನ್ನಾಡತಕ್ಕವಳು. ಕೆಟ್ಟ ಮನಸ್ಸಿನವಳು. ಕುಲವನ್ನೇ ಕೊಲ್ಲತಕ್ಕವಳು. ನನಗೆ ಬೇಡವಾದವಳು. ನನ್ನ ಹೃದಯವನ್ನು ಪ್ರಾಣಸಹಿತವಾಗಿ ಸುಡಲಿಕ್ಕೆ ಹೊರಟವಳು. ನೀನು ಬದುಕಿರುವುದನ್ನು ನಾನು

ನ ಜೀವಿತಂ ಮೇಽಸ್ತಿ ಕುತಃ ಪುನಃ ಸುಖಂ
ವಿನಾತ್ಮಜೇನಾತ್ಮವತಃ ಕುತೋ ರತಿಃ ।
ಮಮಾಹಿತಂ ದೇವಿ ನ ಕರ್ತುಮರ್ಹಸಿ
ಸ್ಪೃಶಾಮಿ ಪಾದಾವಪಿ ತೇ ಪ್ರಸೀದ ಮೇ ॥ ೧೧೨

ಸ ಭೂಮಿಪಾಲೋ ವಿಲಪನ್ನನಾಥವತ್
ಸ್ತ್ರಿಯಾ ಗೃಹೀತೋ ಹೃದಯೇಽತ್ತಿ ಮಾತ್ರಯಾ ।
ಪಪಾತ ದೇವ್ಯಾಶ್ಚರಣೌ ಪ್ರಸಾರಿತಾ-
ವುಭಾವಸಂಸ್ಪೃಶ್ಯ ಯಥಾತುರಸ್ತಥಾ ॥ ೧೧೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾದಶಃ ಸರ್ಗಃ

ಸಹಿಸಲಾರೆ (೧೧೧). ನಾನು ಬದುಕುವ ಹಾಗೆಯೇ ಇಲ್ಲ. ಇನ್ನು ಸುಖದ ಆಸೆ ಎಲ್ಲಿ? ಮಗನಿಲ್ಲದಮೇಲೆ ನೆಮ್ಮದಿಯೆಲ್ಲಿ? ದೇವಿ, ನನಗೆ ಅಹಿತವಾದ್ದನ್ನು ಮಾಡಬೇಡ. ನಿನ್ನ ಪಾದಗಳನ್ನಾದರೂ ಮುಟ್ಟಿ ನಮಸ್ಕರಿಸುತ್ತೇನೆ. ಪ್ರಸನ್ನಳಾಗು" (೧೧೨). ಈ ರೀತಿಯಲ್ಲಿ ದಶರಥರಾಜನು ಎಲ್ಲೆಮೀರಿದ ಹೆಂಗಸಿಗೆ ವಶನಾಗಿ ಅನಾಥನಂತೆ ಗೋಳಾಡಿದನು. ಕೈಕೇಯಿಯು ಚಾಚಿಕೊಂಡಿದ್ದ ಪಾದಗಳನ್ನು ಹಿಡಿದುಕೊಳ್ಳಬೇಕೆಂದು ಹೋದನು. ಆದರೆ ಅವನ್ನು ಮುಟ್ಟುವುದರೊಳಗಾಗಿ ವ್ಯಾಧಿಗ್ರಸ್ತನಂತೆ ಬಳಲಿ ಬಿದ್ದುಹೋದನು (೧೧೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹನ್ನೆರಡನೆಯ ಸರ್ಗ

## ತ್ರಯೋದಶಃ ಸರ್ಗಃ

### ದಶರಥ ವಿಲಾಪಃ

ಅತದರ್ಹಂ ಮಹಾರಾಜಂ ಶಯಾನಮತಥೋಚಿತಮ್ ।
ಯಯಾತಿಮಿವ ಪುಣ್ಯಾಂತೇ ದೇವಲೋಕಾತ್ಪರಿಚ್ಯುತಮ್॥ ೧

ಅನರ್ಥರೂಪಾಸಿದ್ಧಾರ್ಥಾ ಹ್ಯಭೀತಾ ಭಯದರ್ಶಿನೀ ।
ಪುನರಾಕಾರಯಾಮಾಸ ತಮೇವ ವರಮಂಗನಾ ॥ ೨

ತ್ವಂ ಕತ್ಥಸೇ ಮಹಾರಾಜ ಸತ್ಯವಾದೀ ದೃಢವ್ರತಃ ।
ಮಮ ಚೇಮಂ ವರಂ ಕಸ್ಮಾದ್ವಿಧಾರಯಿತುಮಿಚ್ಛಸಿ ॥ ೩

ವಿಪಮುಕ್ತಸ್ತು ಕೈಕೇಯ್ಯಾ ರಾಜಾ ದಶರಥಸ್ತದಾ ।
ಪ್ರತ್ಯುವಾಚ ತತಃ ಕ್ರುದ್ಧೋ ಮುಹೂರ್ತಂ ವಿಹ್ವಲನ್ನಿವ ॥ ೪

## ಸರ್ಗ ೧೩

**ದಶರಥನು ಕೈಕೇಯಿಯನ್ನು ಸಮಾಧಾನಪಡಿಸಲು ಪುನಃ ಪ್ರಯತ್ನಿಸುವುದು.**

ಹೀಗೆ ದಶರಥ ಮಹಾರಾಜನು ತನ್ನ ಹೆಂಡತಿಗೆ ನಮಸ್ಕರಿಸಬೇಕೆಂಬ ಅನುಚಿತವಾದ ಕಾರ್ಯದಲ್ಲಿ ತೊಡಗಿ ತನಗೆ ಅನರ್ಹವಾದ ನೆಲದಮೇಲೆ ಬಿದ್ದುಹೋದನು. ಆಗ ಗಳಿಸಿದ ಪುಣ್ಯವು ತೀರಿದ ಮೇಲೆ ಸ್ವರ್ಗಲೋಕದಿಂದ ಭೂಮಿಗೆ ಬಿದ್ದ ಯಯಾತಿ ಚಕ್ರವರ್ತಿಯಂತೆ ಅವನು ಕಾಣುತ್ತಿದ್ದನು (೧). ತನ್ನ ಕುಲಕ್ಕೆ ಅನರ್ಥಸ್ವರೂಪಳಾದ ಕೈಕೇಯಿಯು ಇನ್ನೂ ಇಷ್ಟಾರ್ಥವು ಕೈಗೂಡಲಿಲ್ಲವೆಂದು ಮನಗಂಡಳು. ಭರತನಿಗೆ ರಾಮನಿಂದ ಭಯವುಂಟು ಎಂಬ ಭಾವನೆಯು ಅವಳಲ್ಲಿ ಬೇರೂರಿತ್ತು. ತಾನು ಕೇಳಿಕೊಂಡ ವರವು ಸಲ್ಲಲೇಬೇಕೆಂದು ಆಕೆಯು ಲೋಕಾಪವಾದಕ್ಕೆ ಅಂಜದೆ ಮತ್ತೆ ಕೇಳಿದಳು (೨). "ಮಹಾರಾಜ, ನೀನು ಸತ್ಯವಾದಿಯೆಂದೂ ದೃಢವ್ರತನೆಂದೂ ಜಂಭ ಹೊಡೆಯುತ್ತೀಯೆ. ನನ್ನ ವರವನ್ನು ಕೊಡದೆ ತಡೆಹಿಡಿಯುವುದೇಕೆ ?" ಎಂದಳು (೩). ದಶರಥನು ಸ್ವಲ್ಪ ಹೊತ್ತು ದಿಕ್ಕು

ಮೃತೇ ಮಯಿ ಗತೇ ರಾಮೇ ವನಂ ಮನುಜಪುಂಗವೇ ।
ಹಂತಾನಾರ್ಯೇ ಮಮಾಮಿತ್ರೇ ಸಕಾಮಾ ಭವ ಕೈಕಯಿ ॥ ೫

ಸ್ವರ್ಗೇಽಪಿ ಖಲು ರಾಮಸ್ಯ ಕುಶಲಂ ದೈವತೈರಹಮ್ ।
ಪ್ರತ್ಯಾದೇಶಾದಭಿಹಿತಂ ಧಾರಯಿಷ್ಯೇ ಕಥಂ ಬತ ॥ ೬

ಕೈಕೇಯ್ಯಾಃ ಪ್ರಿಯಕಾಮೇನ ರಾಮಃ ಪ್ರವ್ರಾಜಿತೋ ವನಮ್ ।
ಯದಿ ಸತ್ಯಂ ಬ್ರವೀಮ್ಯೇತತ್ತದಸತ್ಯಂ ಭವಿಷ್ಯತಿ ॥ ೭

ಅಪುತ್ರೇಣ ಮಯಾ ಪುತ್ರಃ ಶ್ರಮೇಣ ಮಹತಾ ಮಹಾನ್ ।
ರಾಮೋ ಲಬ್ಧೋ ಮಹಾಬಾಹುಃ ಸ ಕಥಂ ತ್ಯಜ್ಯತೇ ಮಯಾ ॥ ೮

ಶೂರಶ್ಚ ಕೃತವಿದ್ಯಶ್ಚ ಜಿತಕ್ರೋಧಃ ಕ್ಷಮಾಪರಃ ।
ಕಥಂ ಕಮಲಪತ್ರಾಕ್ಷೋ ಮಯಾ ರಾಮೋ ವಿವಾಸ್ಯತೇ ॥ ೯

ಕಥಮಿಂದೀವರಶ್ಯಾಮಂ ದೀರ್ಘಬಾಹುಂ ಮಹಾಬಲಮ್ ।
ಅಭಿರಾಮಮಹಂ ರಾಮಂ ಪ್ರೇಷಯಿಷ್ಯಾಮಿ ದಂಡಕಾನ್ ॥ ೧೦

---

ತೋಚದವನಾಗಿ ಪುನಃ ಸಿಟ್ಟಿನಿಂದ ಹೇಳಿದನು : "ನಾನು ಸತ್ತು ಶ್ರೀರಾಮನು ವನಕ್ಕೆ ಹೋದಮೇಲೆ .- ಅಯ್ಯೊ ದುಷ್ಟೆ ! ಕೈಕೇಯಿ, ನನ್ನ ವೈರಿಯೆ! ನಿನ್ನ ಇಷ್ಟವು ಕೈಗೂಡುವುದು (೪-೫). ಸ್ವರ್ಗದಲ್ಲಿಯೂ ದೇವತೆಗಳು ನನ್ನನ್ನು ಹಂಗಿಸುವ ಉದ್ದೇಶದಿಂದ ರಾಮನ ಯೋಗಕ್ಷೇಮವನ್ನು ವಿಚಾರಿಸಿದರೆ, ಅಯ್ಯೊ, ಅವರ ಚುಚ್ಚುಮಾತನ್ನು ಹೇಗೆ ಸಹಿಸಿಕೊಳ್ಳಲಿ? (೬). ಕೈಕೇಯಿಯ ಸಂತೋಷಕ್ಕಾಗಿ ರಾಮನನ್ನು ಕಾಡಿಗೆ ಕಳಿಸಿದೆನೆಂದು ಹೇಳಲೆ? ನಾನು ಸತ್ಯವನ್ನು ಹೇಳಿದರೂ ಅಸತ್ಯವೆಂದೇ ತಿಳಿದುಕೊಳ್ಳುತ್ತಾರೆ (೭). ಬಹುಕಾಲದವರೆಗೆ ಪುತ್ರಹೀನನಾಗಿದ್ದ ನಾನು ಬಹಳ ಶ್ರಮದಿಂದ (ವ್ರತೋಪವಾಸ ಪುತ್ರಕಾಮೇಷ್ಟಿಗಳನ್ನು ಮಾಡಿ) ಮಹಾತ್ಮನೂ ವೀರನೂ ಆದ ರಾಮನನ್ನು ಪಡೆದಿದ್ದೇನೆ. ಅವನನ್ನು ಹೇಗೆ ಬಿಟ್ಟುಬಿಡಲಿ ? (೮). ಮಹಾಶೂರನೂ ವಿದ್ಯಾವಂತನೂ ಕೋಪವನ್ನು ಗೆದ್ದ ಶಾಂತಸ್ವಭಾವದವನೂ ಆಗಿದ್ದಾನೆ. ಕಣ್ಣುಗಳು ತಾವರೆ ಎಸಳಿನಂತೆ ಎಷ್ಟು ಸುಂದರವಾಗಿವೆ! ಅಂಥ ರಾಮನನ್ನು ಹೇಗೆ ಮನೆಯಿಂದ ಹೊರಡಿಸಲಿ? (೯). ನೈದಿಲೆಯಂತೆ

ಸುಖಾನಾಮುಚಿತಸ್ಯೈವ ದುಃಖೈರನುಚಿತಸ್ಯ ಚ ।
ದುಃಖಂ ನಾಮಾನುಪಶ್ಯೇಯಂ ಕಥಂ ರಾಮಸ್ಯ ಧೀಮತಃ ॥ ೧೧

ಯದಿ ದುಃಖಮನುತ್ಪಾದ್ಯ ಮಮ ಸಂಕ್ರಮಣಂ ಭವೇತ್ ।
ಅದುಃಖಾರ್ತಸ್ಯ ರಾಮಸ್ಯ ತತಃ ಸುಖಮವಾಪ್ನುಯಾಮ್ ॥ ೧೨

ನೃಶಂಸೇ ಪಾಪಸಂಕಲ್ಪೇ ರಾಮಂ ಸತ್ಯಪರಾಕ್ರಮಮ್ ।
ಕಿಂ ವಿಪ್ರಿಯೇಣ ಕೈಕೇಯಿ ಪ್ರಿಯಂ ಯೋಜಯಸೇ ಮಮ ॥ ೧೩

ಅಕೀರ್ತಿರತುಲಾ ಲೋಕೇ ಧ್ರುವಃ ಪರಿಭವಶ್ಚ ಮೇ ।
ತಥಾ ವಿಲಪತಸ್ತಸ್ಯ ಪರಿಭ್ರಮಿತಚೇತಸಃ ॥ ೧೪

ಅಸ್ತಮಭ್ಯಾಗಮತ್ ಸೂರ್ಯೋ ರಜನೀ ಚಾಭ್ಯವರ್ತತ ।
ಸಾ ತ್ರಿಯಾಮಾ ತಥಾರ್ತಸ್ಯ ಚಂದ್ರಮಂಡಲಮಂಡಿತಾ ॥ ೧೫

ರಾಜ್ಞೋ ವಿಲಪತಸ್ತಸ್ಯ ನ ವ್ಯಭಾಸತ ಶರ್ವರೀ ।
ತಥೈವೋಷ್ಣಂ ವಿನಿಶ್ವಸ್ಯ ವೃದ್ಧೋ ದಶರಥೋ ನೃಪಃ ॥ ೧೬

---

ಶ್ಯಾಮಲಾಂಗನೂ ಆಜಾನುಬಾಹುವೂ ಅತ್ಯಂತ ಬಲಶಾಲಿಯೂ ಆಗಿದ್ದಾನೆ. ಸಕಲರಿಗೂ ಆನಂದವನ್ನು ಬೀರುವ ರಾಮನನ್ನು ದಂಡಕಾರಣ್ಯಕ್ಕೆ ಹೇಗೆ ಕಳಿಸಲಿ? ಇದುವರೆಗೆ ಸುಖದಲ್ಲಿದ್ದು ಕಷ್ಟವನ್ನು ಕಂಡರಿಯದ ಧೀಮಂತನಾದ ರಾಮನು ಕಷ್ಟಪಡುವುದನ್ನು ಹೇಗೆ ತಾನೆ ನೋಡಲಿ ? (೧೦-೧೧). ದುಃಖವನ್ನು ಕಂಡರಿಯದ ರಾಮನಿಗೆ ದುಃಖಕಾಲವು ಬರುವುದರೊಳಗೆ ನಾನು ಸತ್ತುಹೋಗುವುದೇ ಸುಖ. ಎಲೆ ಪಾಪಿ, ನೀಚೆ, ಕೈಕೇಯಿ ! ಸತ್ಯಸಂಧನೂ ಪ್ರೀತಿಪಾತ್ರನೂ ಆದ ನನ್ನ ರಾಮನಿಗೆ ಯಾವ ಕಾರಣದಿಂದ ಕೇಡನ್ನು ತಂದು ಒಡ್ಡುತ್ತಿದ್ದೀಯೆ ? (೧೨-೧೩). ಈ ಲೋಕದಲ್ಲಿ ನನಗೆ ದೊಡ್ಡ ಅಪಕೀರ್ತಿಯೂ ಕೆಟ್ಟಹೆಸರೂ ನಿಶ್ಚಯವಾಗಿ ಕಾದು ನಿಂತಿದೆ" ಹೀಗೆ ದಶರಥನು ಬುದ್ಧಿಭ್ರಮಣೆಗೊಂಡು ಗೋಳಿಡುತ್ತಿರಲು ಸೂರ್ಯನು ಮುಳುಗಿದನು. ರಾತ್ರಿಯಾಯಿತು (೧೪). ಚಂದ್ರಮಂಡಲದಿಂದ ಶೋಭಿಸುತ್ತಿದ್ದ ರಾತ್ರಿಯು ವ್ಯಥೆಯಲ್ಲಿ ಸಿಕ್ಕಿದ್ದ ರಾಜನಿಗೆ ಸಂತೋಷಕರವಾಗಲಿಲ್ಲ. ಆ ವೃದ್ಧನು ಬಿಸಿಯಾಗಿ ನಿಟ್ಟುಸಿರುಬಿಟ್ಟು ಆಕಾಶವನ್ನು ದಿಟ್ಟಿಸುತ್ತ ವ್ಯಾಧಿ

ವಿಲಲಾಪಾರ್ತವದ್ದುಃಖಂ ಗಗನಾಸಕ್ತಲೋಚನಃ ।
ನ ಪ್ರಭಾತಂ ತ್ವಯೇಚ್ಛಾಮಿ ನಿಶೇ ನಕ್ಷತ್ರಭೂಷಣೇ ॥ ೧೭

ಕ್ರಿಯತಾಂ ಮೇ ದಯಾ ಭದ್ರೇ ರಚಿತೋಽಯಂ ಮಯಾಂಜಲಿಃ ।
ಅಥವಾ ಗಮ್ಯತಾಂ ಶೀಘ್ರಂ ನಾಹಮಿಚ್ಛಾಮಿ ನಿರ್ಘೃಣಾಮ್ ॥ ೧೮

ನೃಶಂಸಾಂ ಕೈಕಯೀಂ ದ್ರಷ್ಟುಂ ಯತ್ಕೃತೇ ವ್ಯಸನಂ ಮಹತ್ ।
ಏವಮುಕ್ತ್ವಾ ತತೋ ರಾಜಾ ಕೈಕೇಯೀಂ ಸಂಯತಾಂಜಲಿಃ ॥ ೧೯

ಪ್ರಸಾದಯಾಮಾಸ ಪುನಃ ಕೈಕೇಯೀಮಿದಮಬ್ರವೀತ್ ।
ಸಾಧುವೃತ್ತಸ್ಯ ದೀನಸ್ಯ ತ್ವದ್ಗತಸ್ಯ ಗತಾಯುಷಃ ॥ ೨೦

ಪ್ರಸಾದಃ ಕ್ರಿಯತಾಂ ದೇವಿ ಮಮ ರಾಜ್ಞೋ ವಿಶೇಷತಃ ।
ಶೂನ್ಯೇ ನ ಖಲು ಸುಶ್ರೋಣಿ ಮಯೇದಂ ಸಮುದಾಹೃತಮ್ ॥ ೨೧

ಕುರು ಸಾಧು ಪ್ರಸಾದಂ ಮೇ ಬಾಲೇ ಸಹೃದಯಾ ಹ್ಯಸಿ ।
ಪ್ರಸೀದ ದೇವಿ ರಾಮೋ ಮೇ ತ್ವದ್ದತ್ತಂ ರಾಜ್ಯಮವ್ಯಯಮ್ ॥ ೨೨

---

ಗ್ರಸ್ತನಂತೆ ನರಳುತ್ತ ಹಲುಬಿದನು (೧೫-೧೬) : "ನಕ್ಷತ್ರಮಂಡಿತಳಾದ ಹೇ ನಿಶಾದೇವಿ, ನೀನು ಬೆಳಗಾಗುವುದೇ ಬೇಡ. ಕೈಮುಗಿದು ಬೇಡಿಕೊಳ್ಳುತ್ತೇನೆ. ನನ್ನ ಮೇಲೆ ಕರುಣಿಸು. ಅದಾಗದಿದ್ದರೆ ನೀನು ಬೇಗನೆ ಹೊರಟುಹೋಗು. ನನಗೆ ಮಹಾವ್ಯಸನವನ್ನು ತಂದಿಟ್ಟ ಕ್ರೂರಳೂ ಘಾತುಕಳೂ ಆದ ಈ ಕೈಕೇಯಿಯನ್ನು ನೋಡುತ್ತ ಇರಲಾರೆನು" (೧೭-೧೮). ಹೀಗೆ ಹೇಳಿ ದಶರಥರಾಜನು ಪುನಃ ಕೈಕೇಯಿಗೆ ಕೈಮುಗಿದುಕೊಂಡು ಬೇಡುತ್ತ ನುಡಿದನು : "ದೇವಿ, ನನ್ನ ಸಾಧುಸ್ವಭಾವವನ್ನಾದರೂ ಗಮನಿಸು. ದಿಕ್ಕಿಲ್ಲದೆ ದೀನನಾಗಿ ಬೇಡಿಕೊಳ್ಳುತ್ತಿದ್ದೇನೆ. ನಿನ್ನನ್ನು ಮನಃಪೂರ್ವಕವಾಗಿ ಪ್ರೇಮಿಸುತ್ತ ನಿನ್ನನ್ನೇ ನಂಬಿಕೊಂಡಿದ್ದೇನೆ. ಆಯುಸ್ಸು ಕಳೆದು ಸಾಯುವ ವಯಸ್ಸಿನಲ್ಲಿದ್ದೇನೆ (೧೯-೨೦). ಮಹಾರಾಜನೆನಿಸಿಕೊಂಡು ಈ ದೈನ್ಯಸ್ಥಿತಿಗೆ ಬಂದಿರುವುದನ್ನಾದರೂ ಗಮನಿಸಿ ಅನುಗ್ರಹ ಮಾಡು. ಸುಂದರಿ, ನನ್ನ ಪ್ರಾರ್ಥನೆಯು ಶೂನ್ಯಪ್ರಾಯವಾದ ಬಂಡೆಯ ಮೇಲೆ ಮಳೆಸುರಿದಂತೆ ಆಗದಿರಲಿ. ಬಾಲೆ! ನೀನು ಸಹೃದಯಳಲ್ಲವೆ? ಇದೊಂದು ದೊಡ್ಡ ಉಪಕಾರವನ್ನು ಮಾಡು. ಪ್ರಸನ್ನಳಾಗು. (ಈ ರಾಜ್ಯ

ಲಭತಾಮಸಿತಾಪಾಂಗೇ ಯಶಃ ಪರಮಮಾಪ್ಸ್ಯಸಿ ।
ಮಮ ರಾಮಸ್ಯ ಲೋಕಸ್ಯ ಗುರೂಣಾಂ ಭರತಸ್ಯ ಚ ॥ ೨೩
ಪ್ರಿಯಮೇತದ್ಗುರುಶ್ರೋಣಿ ಕುರು ಚಾರುಮುಖೇಕ್ಷಣೇ ॥

ವಿಶುದ್ಧಭಾವಸ್ಯ ಹಿ ದುಷ್ಟಭಾವಾ
ತಾಮ್ರೇಕ್ಷಣಾಸ್ಯಾಶ್ರುಕಲಸ್ಯ ರಾಜ್ಞಃ ।
ಶ್ರುತ್ವಾ ವಿಚಿತ್ರಂ ಕರುಣಂ ವಿಲಾಪಂ
ಭರ್ತುರ್ನೃಶಂಸಾ ನ ಚಕಾರ ವಾಕ್ಯಮ್ ॥ ೨೪
ತತಃ ಸ ರಾಜಾ ಪುನರೇವ ಮೂರ್ಛಿತಃ
ಪ್ರಿಯಾಮತುಷ್ಟಾಂ ಪ್ರತಿಕೂಲಭಾಷಿಣೀಮ್ ।
ಸಮೀಕ್ಷ್ಯ ಪುತ್ರಸ್ಯ ವಿವಾಸನಂ ಪ್ರತಿ
ಕ್ಷಿತೌ ವಿಸಂಜ್ಞೋ ನಿಪಪಾತ ದುಃಖಿತಃ ॥ ೨೫
ಇತೀವ ರಾಜ್ಞೋ ವ್ಯಥಿತಸ್ಯ ಸಾ ನಿಶಾ
ಜಗಾಮ ಘೋರಂ ಶ್ವಸತೋ ಮನಸ್ವಿನಃ ।

---

ವೆಲ್ಲವೂ ನಿನ್ನದು). ನೀನೇ ಕೈಯೆತ್ತಿ ಕೊಟ್ಟ ರಾಜ್ಯವನ್ನು ರಾಮನು ಪಡೆಯಲಿ (೨೧-೨೨). ಇದರಿಂದ ನಿನಗೆ ಉತ್ತಮವಾದ ಕೀರ್ತಿಯು ಬರುತ್ತದೆ. ಚಾರುನಯನೆ! ನನಗೂ ರಾಮನಿಗೂ ಪ್ರಜೆಗಳಿಗೂ ಗುರುಹಿರಿಯರಿಗೂ ಭರತನಿಗೂ ಪ್ರಿಯವಾದ ಈ ಒಳ್ಳೆಯ ಕಾರ್ಯವನ್ನು ಮಾಡು" ಎಂದು ಪ್ರಾರ್ಥಿಸಿದನು (೨೩). ಪರಿಶುದ್ಧ ಹೃದಯನಾದ ದಶರಥನ ಕಣ್ಣುಗಳು ಅತ್ತು ಅತ್ತು ಕೆಂಪಾಗಿದ್ದವು. ಕಣ್ಣೀರು ಸುರಿಯುತ್ತಿತ್ತು. ಆ ರಾಜನು ಮನಸ್ಸನ್ನು ಕರಗಿಸುವಂತೆ ನಾನಾವಿಧದಲ್ಲಿ ವಿಲಾಪಿಸಿದನು. ಅವೆಲ್ಲವನ್ನು ಕೇಳಿದರೂ ದುಷ್ಟಹೃದಯಳೂ ಕ್ರೂರಳೂ ಆದ ಕೈಕೇಯಿಯು ಜಗ್ಗಲಿಲ್ಲ. ಅವನ ಮಾತನ್ನು ನಡೆಸಲಿಲ್ಲ (೨೪). ಅವಳಿಗೆ ತೃಪ್ತಿ ಯಾಗಲಿಲ್ಲ. ಆ 'ಪ್ರಿಯ'ಳು ಇನ್ನೂ ಪ್ರತಿಕೂಲವಾಗಿ ಮಾತನಾಡಲಾರಂಭಿಸಿದಳು. ಆಗ ದಶರಥನು ತನ್ನ ಮಗನ ಅರಣ್ಯವಾಸವನ್ನು ನೆನೆಸಿಕೊಂಡು ಮತ್ತೆ ಮತ್ತೆ ಎಚ್ಚರದಪ್ಪಿ ನೆಲದ ಮೇಲೆ ಬೀಳುತ್ತಿದ್ದನು (೨೫). ಉದಾತ್ತ ಭಾವನೆಯುಳ್ಳ ದಶರಥ ರಾಜನು ಹೀಗೆ ವ್ಯಥೆಯಿಂದ ತಳಮಳಿಸುತ್ತ ಘೋರವಾಗಿ ಬಿಸುಸುಯ್ಯುತ್ತಿರಲು

ವಿಬೋಧ್ಯಮಾನಾಃ ಪ್ರತಿಬೋಧನಂ ತದಾ
ನಿವಾರಯಾಮಾಸ ಸ ರಾಜಸತ್ತಮಃ ॥ ೨೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯೋದಶಃ ಸರ್ಗಃ

---

## ಚತುರ್ದಶಃ ಸರ್ಗಃ

### ಕೈಕೇಯ್ಯುಪಾಲಂಭಃ

ಪುತ್ರಶೋಕಾರ್ದಿತಂ ಪಾಪಾ ವಿಸಂಜ್ಞಂ ಪತಿತಂ ಭುವಿ ।
ವಿಚೇಷ್ಟಮಾನಮುದ್ವೀಕ್ಷ್ಯ ಸೈಕ್ಷ್ವಾಕಮಿದಮಬ್ರವೀತ್ ॥ ೧

ಪಾಪಂ ಕೃತ್ವೇವ ಕಿಮಿದಂ ಮಮ ಸಂಶ್ರುತ್ಯ ಸಂಶ್ರವಮ್ ।
ಶೇಷೇ ಕ್ಷಿತಿತಲೇ ಸನ್ನಃ ಸ್ಥಿತ್ಯಾಂ ಸ್ಥಾತುಂ ತ್ವಮರ್ಹಸಿ ॥ ೨

---

ರಾತ್ರಿಯು ಕಳೆಯುತ್ತ ಬಂದಿತು. (ಬೆಳಗಿನ ಜಾವದಲ್ಲಿ ಎಂದಿನಂತೆ ವೈತಾಳಿಕರು) ರಾಜನನ್ನು ಎಚ್ಚರಗೊಳಿಸುವ ಮಂಗಳಗೀತವಾದ್ಯಗಳನ್ನಾರಂಭಿಸಿದರು. ದಶರಥನು 'ಬೇಡ' ಎಂದು ಹೇಳಿಕಳಿಸಿ ಅವುಗಳನ್ನು ನಿಲ್ಲಿಸಿದನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹದಿಮೂರನೆಯ ಸರ್ಗ

---

## ಸರ್ಗ ೧೪

ತನ್ನ ಕೋರಿಕೆಯನ್ನು ಸಲ್ಲಿಸುವಂತೆ ಕೈಕೇಯಿಯು ಒತ್ತಾಯ. ದಶರಥನು ರಾಮನನ್ನು ನೋಡಲು ಬಯಸುವುದು. ಸುಮಂತ್ರನು ರಾಮನನ್ನು ಕರೆತರಲು ಹೋಗುವುದು.

ಹೀಗೆ ಪುತ್ರಶೋಕದಿಂದ ಪೀಡಿತನಾಗಿ ಪ್ರಜ್ಞೆಯಿಲ್ಲದೆ ನೆಲದಮೇಲೆ ಬಿದ್ದು ಹೊರಳುತ್ತಿದ್ದ ದಶರಥನನ್ನು ನೋಡುತ್ತ ಪಾಪಿಯಾದ ಕೈಕೇಯಿಯು ಹೀಗೆಂದಳು (೧) : "ವರವನ್ನು ಸಲ್ಲಿಸುತ್ತೇನೆಂದು ನನಗೆ ಮಾತುಕೊಟ್ಟು, ಏನೋ ಪಾಪಕೃತ್ಯವನ್ನು ಮಾಡಿದವನಂತೆ ನೆಲದಮೇಲೆ ಬಿದ್ದು ಹೊರಳಾಡಲು ನಿನಗೇನಾಗಿದೆ ? ದೊಡ್ಡತನದಿಂದ ಮರ್ಯಾದೆಯಲ್ಲಿ ನಡೆದುಕೊ (೨).

ಆಹುಃ ಸತ್ಯಂ ಹಿ ಪರಮಂ ಧರ್ಮಂ ಧರ್ಮವಿದೋ ಜನಾಃ ।
ಸತ್ಯಮಾಶ್ರಿತ್ಯ ಚ ಮಯಾ ತ್ವಂ ಧರ್ಮಂ ಪ್ರತಿ ಚೋದಿತಃ ॥ ೩

ಸಂಶ್ರುತ್ಯ ಶೈಬ್ಯಃ ಶ್ಯೇನಾಯ ಸ್ವಾಂ ತನುಂ ಜಗತೀಪತಿಃ ।
ಪ್ರದಾಯ ಪಕ್ಷಿಣೇ ರಾಜಾ ಜಗಾಮ ಗತಿಮುತ್ತಮಾಮ್ ॥ ೪

ತಥಾ ಹ್ಯಲರ್ಕಸ್ತೇಜಸ್ವೀ ಬ್ರಾಹ್ಮಣೇ ವೇದಪಾರಗೇ ।
ಯಾಚಮಾನೇ ಸ್ವಕೇ ನೇತ್ರೇ ಉದ್ಧೃತ್ಯಾವಿಮನಾ ದದೌ ॥ ೫

ಸರಿತಾಂ ತು ಪತಿಃ ಸ್ವಲ್ಪಾಂ ಮರ್ಯಾದಾಂ ಸತ್ಯಮನ್ವಿತಃ ।
ಸತ್ಯಾನುರೋಧಾತ್ಸಮಯೇ ವೇಲಾಂ ಸ್ವಾಂ ನಾತಿವರ್ತತೇ ॥ ೬

ಸತ್ಯಮೇಕಪದಂ ಬ್ರಹ್ಮ ಸತ್ಯೇ ಧರ್ಮಃ ಪ್ರತಿಷ್ಠಿತಃ ।
ಸತ್ಯಮೇವಾಕ್ಷಯಾ ವೇದಾಃ ಸತ್ಯೇನೈವಾಪ್ಯತೇ ಪರಮ್ ॥ ೭

ಸತ್ಯಂ ಸಮನುವರ್ತಸ್ವ ಯದಿ ಧರ್ಮೇ ಧೃತಾ ಮತಿಃ ।
ಸ ವರಃ ಸಫಲೋ ಮೇಽಸ್ತು ವರದೋ ಹ್ಯಸಿ ಸತ್ತಮ ॥ ೮

---

ಧರ್ಮಜ್ಞರಾದ ಜನರು ಸತ್ಯವೇ ಶ್ರೇಷ್ಠವಾದ ಧರ್ಮವೆಂದು ಹೇಳುತ್ತಾರೆ. ಸತ್ಯವನ್ನು ಹಿಡಿದು ಧರ್ಮಮಾರ್ಗದಲ್ಲಿ ಹೋಗೆಂದು ನಿನಗೆ ಹೇಳುತ್ತಿದ್ದೇನೆ (೩). ಶಿಬಿರಾಜನು ಒಂದು ಗಿಡಗನಿಗೆ ಮಾತುಕೊಟ್ಟು ಅದರಂತೆ ತನ್ನ ದೇಹವನ್ನೇ ಆ ಹಕ್ಕಿಗೆ ಒಪ್ಪಿಸಿ ಸದ್ಗತಿಯನ್ನು ಪಡೆದನು. ಹಾಗೆಯೇ ಮಹಾತೇಜಸ್ವಿಯಾದ ಅಲರ್ಕನು, ವೇದಪಾರಂಗತನಾದ ಬ್ರಾಹ್ಮಣನು ಬಂದು ಯಾಚಿಸಿದಾಗ, ತನ್ನ ಕಣ್ಣುಗಳೆರಡನ್ನೂ ಒಂದೇ ಮನಸ್ಸಿನಿಂದ ಕಿತ್ತು ಅವನಿಗೆ ದಾನಮಾಡಿದನು (೪-೫). ಸಮಸ್ತ ನದಿಗಳಿಗೂ ಪತಿಯಾದ ಸಮುದ್ರರಾಜನು ಸತ್ಯಕ್ಕೆ ಪ್ರಣವಸ್ವರೂಪವಾದ ಬ್ರಹ್ಮವೆನಿಸಿದೆ. ಸತ್ಯದಲ್ಲಿಯೇ ಧರ್ಮವೆಲ್ಲವೂ ನಿಂತಿದೆ. ಸತ್ಯವನ್ನೇ ನಿತ್ಯವಾದ ವೇದಗಳು ಬೋಧಿಸುತ್ತವೆ. ಸತ್ಯದಿಂದಲೇ ಮೋಕ್ಷವು ಲಭಿಸುತ್ತದೆ (೬-೭). ಧರ್ಮದಲ್ಲಿಯೇ ನಡೆಯ ಬೇಕೆಂಬ ಬುದ್ಧಿಯಿದ್ದರೆ ಸತ್ಯವನ್ನು ಅನುಸರಿಸಿ ನಡೆ. ಮಹಾರಾಜ, ನನ್ನ

ಧರ್ಮಸ್ಯೈವಾಭಿಕಾಮಾರ್ಥಂ ಮಮ ಚೈವಾಭಿಚೋದನಾತ್।
ಪ್ರವ್ರಾಜಯ ಸುತಂ ರಾಮಂ ತ್ರಿಃ ಖಲು ತ್ವಾಂ ಬ್ರವೀಮ್ಯಹಮ್ ॥ ೯

ಸಮಯಂ ಚ ಮಮಾದ್ಯೇಮಂ ಯದಿ ತ್ವಂ ನ ಕರಿಷ್ಯಸಿ ।
ಅಗ್ರತಸ್ತೇ ಪರಿತ್ಯಕ್ತಾ ಪರಿತ್ಯಕ್ಷ್ಯಾಮಿ ಜೀವಿತಮ್ ॥ ೧೦

ಏವಂ ಪ್ರಚೋದಿತೋ ರಾಜಾ ಕೈಕೇಯ್ಯಾ ನಿರ್ವಿಶಂಕಯ ।
ನಾಶಕತ್ ಪಾಶಮುನ್ಮೋಕ್ತುಂ ಬಲಿರಿಂದ್ರಕೃತಂ ಯಥಾ ॥ ೧೧

ಉದ್ಭ್ರಾಂತಹೃದಯಶ್ಚಾಪಿ ವಿವರ್ಣವದನೋಽಭವತ್ ।
ಸ ಧುರ್ಯೋ ವೈ ಪರಿಸ್ಪಂದನ್ ಯುಗಚಕ್ರಾಂತರಂ ಯಥಾ ॥ ೧೨

ವಿಹ್ವಲಾಭ್ಯಾಂ ಚ ನೇತ್ರಾಭ್ಯಾಂ ಪಶ್ಯನ್ನಿವ ಸ ಭೂಪತಿಃ ।
ಕೃಚ್ಛ್ರಾದ್ಧೈರ್ಯೇಣ ಸಂಸ್ತಭ್ಯ ಕೈಕೇಯೀಮಿದಮಬ್ರವೀತ್ ॥ ೧೩

ಯಸ್ತೇ ಮಂತ್ರಕೃತಃ ಪಾಣಿರಗ್ನೌ ಪಾಪೇ ಮಯಾ ಧೃತಃ ।
ತಂ ತ್ಯಜಾಮಿ ಸ್ವಯಂ ಚೈವ ತವ ಪುತ್ರಂ ಸಹ ತ್ವಯಾ ॥ ೧೪

---

ವರವನ್ನು ಸಫಲಗೊಳಿಸು. ನೀನು ವರವನ್ನು ಕೊಟ್ಟವನಲ್ಲವೆ ? ಧರ್ಮದ ಪರಿಪಾಲನೆಗಾಗಿ, ನನ್ನ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕಾಗಿ ನಿನ್ನ ಮಗನಾದ ರಾಮನನ್ನು ಮನೆಯಿಂದ - ಹೊರಡಿಸು, ಹೊರಡಿಸು, ಹೊರಡಿಸು. ಮೂರು ಸಲ ಹೇಳಿದ್ದೇನೆ (೮-೯). ನನಗೆ ಕೊಟ್ಟ ಮಾತನ್ನು ನಡೆಸದಿದ್ದರೆ ನೀನು ನನ್ನನ್ನು ಕೈಬಿಟ್ಟೆಯೆಂದು ತಿಳಿದು ನಿನ್ನೆದುರಿಗೇ ಪ್ರಾಣವನ್ನು ಬಿಡುತ್ತೇನೆ " ಎಂದಳು (೧೦). ಹೀಗೆ ಸ್ವಲ್ಪವೂ ಸಂಕೋಚವಿಲ್ಲದೆ ಕೈಕೇಯಿಯು ನಿರ್ಬಂಧಪಡಿಸಲು, ಕೊರಳಿಗೆ ಸುತ್ತಿದ ಉರಲಿನಿಂದ ತಪ್ಪಿಸಿಕೊಳ್ಳಲು ದಶರಥನಿಗೆ ಸಾಧ್ಯವಾಗಲಿಲ್ಲ. ಇಂದ್ರನ ಪ್ರೇರಣೆಯಂತೆ ಬಂದ ವಾಮನನಿಗೆ ಮಾತುಕೊಟ್ಟು ಸಿಕ್ಕಿಬಿದ್ದ ಬಲಿಚಕ್ರವರ್ತಿಯಂತೆ ಅವನ ಸ್ಥಿತಿಯಾಯಿತು (೧೧). ಬುದ್ಧಿಯು ಗಿರ್ರೆಂದಿತು. ಮುಖವು ಬಿಳಿಕರಿಸಿತು. ಅವನು ನೊಗ ಗಾಲಿಗಳ ನಡುವೆ ಗಾಡಿಗೆ ಕಟ್ಟಿದ ಎತ್ತು ಮಿಸುಕಾಡುವಂತಾದನು. ಆ ಭೂಪಾಲನು ಶೂನ್ಯನೇತ್ರಗಳಿಂದ ನೋಡುತ್ತ ಬಹುಪ್ರಯಾಸದೊಡನೆ ಸ್ವಲ್ಪ ಸುಧಾರಿಸಿಕೊಂಡನು (೧೨-೧೩). ಅನಂತರ ಗಟ್ಟಿಮನಸ್ಸಿನಿಂದ ಕೈಕೇಯಿಯನ್ನು ಕುರಿತು "ಏ ಪಾಪಿಷ್ಠೆ, ಮಂತ್ರಪೂರ್ವಕವಾಗಿ ಅಗ್ನಿ

ಪ್ರಯಾತಾ ರಜನೀ ದೇವಿ ಸೂರ್ಯಸ್ಯೋದಯನಂ ಪ್ರತಿ ।
ಅಭಿಷೇಕಾಯ ಹಿ ಜನಸ್ತ್ವರಯಿಷ್ಯತಿ ಮಾಂ ಧ್ರುವಮ್ ॥ ೧೫

ರಾಮಾಭಿಷೇಕಸಂಭಾರೈಸ್ತದರ್ಥಮುಪಕಲ್ಪಿತೈಃ ।
ರಾಮಃ ಕಾರಯಿತವ್ಯೋ ಮೇ ಮೃತಸ್ಯ ಸಲಿಲಕ್ರಿಯಾಮ್ ॥ ೧೬

ತ್ವಯಾ ಸಪುತ್ರಯಾ ನೈವ ಕರ್ತವ್ಯಾ ಸಲಿಲಕ್ರಿಯಾ ।
ವ್ಯಾಹಂತಾಸ್ಯಶುಭಾಚಾರೇ ಯದಿ ರಾಮಾಭಿಷೇಚನಮ್ ॥ ೧೭

ನ ಶಕ್ತೋಽದ್ಯಾಸ್ಮ್ಯಹಂ ದ್ರಷ್ಟುಂ ದೃಷ್ಟ್ವಾ ಪೂರ್ವಂ ತಥಾಮುಖಿಮ್
ಹತಹರ್ಷಂ ನಿರಾನಂದಂ ಪುನರ್ಜನಮವಾಙ್ಮುಖಿಮ್ ॥ ೧೮

ತಾಂ ತಥಾ ಬ್ರುವತಸ್ತಸ್ಯ ಭೂಮಿಪಸ್ಯ ಮಹಾತ್ಮನಃ ।
ಪ್ರಭಾತಾ ಶರ್ವರೀ ಪುಣ್ಯಾ ಚಂದ್ರನಕ್ಷತ್ರಶಾಲಿನೀ ॥ ೧೯

ತತಃ ಪಾಪಸಮಾಚಾರ ಕೈಕೇಯೀ ಪಾರ್ಥಿವಂ ಪುನಃ ।
ಉವಾಚ ಪರುಷಂ ವಾಕ್ಯಂ ವಾಕ್ಯಜ್ಞಾ ರೋಷಮೂರ್ಛಿತಾ ॥ ೨೦

---

ಸಾಕ್ಷಿಕವಾಗಿ ನಾನು ಹಿಡಿದಿದ್ದ ನಿನ್ನ ಕೈಯನ್ನು ಇಂದಿಗೆ ಬಿಟ್ಟೆನು. ನಿನ್ನೊಡನೆ ನಿನ್ನ ಮಗನನ್ನೂ ಬಿಟ್ಟೆನು (೧೪). ರಾತ್ರಿ ಕಳೆಯಿತು. ಇನ್ನು ಸೂರ್ಯೋದಯವಾಯಿತೆಂದು ಜನರು ನನ್ನನ್ನು ತ್ವರೆಪಡಿಸುತ್ತಾರೆ. ರಾಮಾಭಿಷೇಕಕ್ಕಾಗಿ ಸಾಮಗ್ರಿಗಳನ್ನು ಸಿದ್ಧಪಡಿಸಲಾಗಿದೆ. ಸತ್ತುಹೋಗುವ ನನಗೆ ಆ ಸಾಮಗ್ರಿಗಳಿಂದಲೇ ರಾಮನು ಉತ್ತರಕ್ರಿಯೆಯನ್ನು ಮಾಡಲಿ! (೧೫-೧೬). ನೀನಾಗಲಿ ನಿನ್ನ ಮಗನಾಗಲಿ ನನಗೆ ತರ್ಪಣವನ್ನೂ ಕೊಡಕೂಡದು. ಎಲೆ ದುಷ್ಟೆ, ರಾಮಾಭಿಷೇಕಕ್ಕೆ ನೀನು ಕಲ್ಲು ಹಾಕಿದ ಮೇಲೆ ಜನರನ್ನು ಪುನಃ ನೋಡಲು ನನ್ನಿಂದ ಸಾಧ್ಯವಿಲ್ಲ. ಅಷ್ಟೊಂದು ಆನಂದಭರಿತರಾದ ಜನರು ಉತ್ಸಾಹಭಂಗದಿಂದ ಸಂತೋಷಲೇಶವೂ ಇಲ್ಲದೆ ವ್ಯಥೆಯಿಂದ ತಲೆತಗ್ಗಿಸಿರುವುದನ್ನು ನಾನು ನೋಡಲಾರೆ" ಎಂದನು (೧೭-೧೮). ಮಹಾತ್ಮನಾದ ದಶರಥನು ಹೀಗೆ ಹೇಳುತ್ತಿರುವಾಗ ಚಂದ್ರತಾರಾಮಂಡಿತವಾದ ರಾತ್ರಿಯು ಕಳೆದು ಬೆಳಗಾಯಿತು. ದುರಾಚಾರಳಾದ ಕೈಕೇಯಿಯು ರಾಜನ ಮಾತನ್ನು ಕೇಳಿ ರೋಷಾವಿಷ್ಟಳಾದಳು (೧೯-೨೦).

ಕಿಮಿದಂ ಭಾಷಸೇ ರಾಜನ್ ವಾಕ್ಯಂ ಗರರುಜೋಪಮಮ್ ।
ಆನಾಯಯಿತುಮಕ್ಲಿಷ್ಟಂ ಪುತ್ರಂ ರಾಮಮಿಹಾರ್ಹಸಿ ॥ ೨೧

ಸ್ಥಾಪ್ಯ ರಾಜ್ಯೇ ಮಮ ಸುತಂ ಕೃತ್ವಾ ರಾಮಂ ವನೇಚರಮ್ ।
ನಿಃಸಪತ್ನಾಂ ಚ ಮಾಂ ಕೃತ್ವಾ ಕೃತಕೃತ್ಯೋ ಭವಿಷ್ಯಸಿ ॥ ೨೨

ಸ ತುನ್ನ ಇವ ತೀಕ್ಷ್ಣೇನ ಪ್ರತೋದೇನ ಹಯೋತ್ತಮಃ ।
ರಾಜಾ ಪ್ರಚೋದಿತೋಽಭೀಕ್ಷ್ಣಂ ಕೈಕೇಯ್ಯಾ ವಾಕ್ಯಮಬ್ರವೀತ್ ॥

ಧರ್ಮಬಂಧೇನ ಬದ್ಧೋಽಸ್ಮಿ ನಷ್ಟಾ ಚ ಮಮ ಚೇತನಾ ।
ಜ್ಯೇಷ್ಠಂ ಪುತ್ರಂ ಪ್ರಿಯಂ ರಾಮಂ ದ್ರಷ್ಟುಮಿಚ್ಛಾಮಿ ಧಾರ್ಮಿಕಮ್ ॥

ತತಃ ಪ್ರಭಾತಾಂ ರಜನೀಮುದಿತೇ ಚ ದಿವಾಕರೇ ।
ಪುಷ್ಯೇ ನಕ್ಷತ್ರಯೋಗೇ ಚ ಮುಹೂರ್ತೇ ಚ ಸಮಾಗತೇ ॥ ೨೫

ವಸಿಷ್ಠೋ ಗುಣಸಂಪನ್ನಃ ಶಿಷ್ಯೈಃ ಪರಿವೃತಸ್ತದಾ ।
ಉಪಗೃಹ್ಯಾಶು ಸಂಭಾರಾನ್ ಪ್ರವಿವೇಶ ಪುರೋತ್ತಮಮ್ ॥ ೨೬

---

ಅವಳು ಕರ್ಣಕಠೋರವಾಗಿ, "ರಾಜ, ವಿಷದಂತೆ ಯಾತನೆಯನ್ನು ಕೊಡುವ ಇಂಥ ಮಾತನ್ನು ಯಾಕೆ ಆಡುತ್ತೀಯೆ ? ಯಾವ ತೊಂದರೆಯೂ ಇಲ್ಲದೆ ನಿನ್ನ ಮಗನಾದ ರಾಮನನ್ನು ಇಲ್ಲಿಗೆ ಕರೆಸು. ನನ್ನ ಪುತ್ರನನ್ನು ರಾಜ್ಯದಲ್ಲಿ ಸ್ಥಾಪಿಸಿ ರಾಮನನ್ನು ಕಾಡಿಗೆ ಅಟ್ಟಿ ನನಗೆ ಶತ್ರುಗಳಿಲ್ಲದಂತೆ ಮಾಡಿದರೆ ನಿನ್ನ ಕರ್ತವ್ಯ ಮುಗಿಯಿತು" ಎಂದು ಹೇಳಿದಳು (೨೧-೨೨). ಆಗ ದಶರಥನಿಗೆ ಚುರುಕಾದ ಚಾಟಿಯಿಂದ ಜಾತಿಯ ಕುದುರೆಯನ್ನು ಹೊಡೆದಂತಾಯಿತು. ಅವನು ಅತ್ಯಂತ ವೇದನೆಯಿಂದ "ಧರ್ಮದ ಪಾಶಕ್ಕೆ ಕಟ್ಟುಬಿದ್ದೆನು. ನನ್ನ ಚೈತನ್ಯ ಉಡುಗಿತು. ಜ್ಯೇಷ್ಠನೂ ಧಾರ್ಮಿಕನೂ ಆದ ನನ್ನ ಪ್ರೀತಿಯ ಪುತ್ರ ರಾಮನನ್ನು ನೋಡಬೇಕೆಂದು ಆಸೆಯಾಗಿದೆ" ಎಂದನು (೨೩-೨೪). ಅಷ್ಟರಲ್ಲಿ ರಾತ್ರಿಯು ಕಳೆದು ಸೂರ್ಯೋದಯವಾಗಿ ಪುಣ್ಯಕರವಾದ ಪುಷ್ಯನಕ್ಷತ್ರವು ಸಮೀಪಿಸಿತು. ಮುಹೂರ್ತಕಾಲವು ಬಂದಿತೆಂದು ಸದ್ಗುಣಸಂಪನ್ನರಾದ ವಸಿಷ್ಠರು ಶಿಷ್ಯರಿಂದ ಪರಿವೃತರಾಗಿ ಸಮಸ್ತ ಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು ಬೇಗಬೇಗನೆ ಪಟ್ಟಣದೊಳಗೆ ಬಂದರು

ಸಿಕ್ತಸಂಮಾರ್ಜಿತಪಥಾಂ ಪತಾಕೋತ್ತಮಭೂಷಿತಾಮ್ ।
ವಿಚಿತ್ರಕುಸುಮಾಕೀರ್ಣಾಂ ನಾನಾಸ್ರಗ್ಭಿರ್ವಿರಾಜಿತಾಮ್ ॥ ೨೭

ಸಂಹೃಷ್ಟಮನುಜೋಪೇತಾಂ ಸಮೃದ್ಧವಿಪಣಾಪಣಾಮ್ ।
ಮಹೋತ್ಸವಸಮಾಕೀರ್ಣಾಂ ರಾಘವಾರ್ಥೇ ಸಮುತ್ಸುಕಾಮ್ ॥ ೨೮

ಚಂದನಾಗರುಧೂಪೈಶ್ಚ ಸರ್ವತಃ ಪರಿಧೂಪಿತಾಮ್ ।
ತಾಂ ಪುರೀಂ ಸಮತಿಕ್ರಮ್ಯ ಪುರಂದರಪುರೋಪಮಾಮ್ ॥ ೨೯

ದದರ್ಶಾಂತಃಪುರಂ ಶ್ರೀಮಾನ್ ನಾನಾದ್ವಿಜಗಣಾಯುತಮ್ ।
ಪೌರಜಾನಪದಾಕೀರ್ಣಂ ಬ್ರಾಹ್ಮಣೈರುಪಶೋಭಿತಮ್ ॥ ೩೦

ಯಜ್ಞವಿದ್ಭಿಃ ಸುಸಂಪೂರ್ಣಾಂ ಸದಸ್ಯೈಃ ಪರಮಾರ್ಚಿತೈಃ ।
ತದಂತಃಪುರಮಾಸಾದ್ಯ ವ್ಯತಿಚಕ್ರಾಮ ತಂ ಜನಮ್ ॥ ೩೧

ವಸಿಷ್ಠಃ ಪರಮಪ್ರೀತಃ ಪರಮರ್ಷಿಭಿರಾವೃತಃ ।
ಸ ತ್ವಪಶ್ಯದ್ವಿನಿಷ್ಕ್ರಾಂತಂ ಸುಮಂತ್ರಂ ನಾಮ ಸಾರಥಿಮ್ ॥ ೩೨

---

(೨೫-೨೬). ಅಯೋಧ್ಯಾಪಟ್ಟಣದ ಬೀದಿಗಳನ್ನು ಗುಡಿಸಿ ನೀರನ್ನು ಚಿಮುಕಿಸಿದ್ದರು. ನಗರದಲ್ಲಿ ಬಾವುಟಗಳನ್ನು ಏರಿಸಿ ಬಣ್ಣಬಣ್ಣದ ಹೂಗಳನ್ನು ಚೆಲ್ಲಿ ನಾನಾ ಬಗೆಯ ಮಾಲೆಗಳಿಂದ ಅಲಂಕಾರಮಾಡಿದ್ದರು. ಜನರೆಲ್ಲರೂ ಆನಂದದಿಂದ ಸಂಚರಿಸುತ್ತಿದ್ದರು. ಪೇಟೆಯಲ್ಲಿರುವ ಅಂಗಡಿಗಳಲ್ಲಿ ಪದಾರ್ಥಗಳು ಸಮೃದ್ಧವಾಗಿ ಶೋಭಿಸುತ್ತಿದ್ದವು. ಎಲ್ಲರೂ ಶ್ರೀರಾಮನ ಪಟ್ಟಾಭಿಷೇಕವನ್ನು ನೋಡಲು ಉತ್ಸುಕರಾಗಿದ್ದರು (೨೭-೨೮). ಶ್ರೀಗಂಧ ಅಗರುಧೂಪಗಳು ಎಲ್ಲೆಲ್ಲಿಯೂ ಗಮಗಮಿಸುತ್ತಿದ್ದವು. ಹೀಗೆ ದೇವೇಂದ್ರನ ಅಮರಾವತಿಯಂತಿದ್ದ ಆ ಪಟ್ಟಣವನ್ನು ದಾಟುತ್ತ ಹೋಗಿ ವಸಿಷ್ಠರು ದಶರಥನ ಅಂತಃಪುರವನ್ನು ಕಂಡರು (೨೯). ಅಂತಃಪುರವು ನಾನಾ ಪಕ್ಷಿಗಣಗಳಿಂದ ಒಪ್ಪುತ್ತಿದ್ದಿತಲ್ಲದೆ ಪ್ರಜೆಗಳೂ ಬ್ರಾಹ್ಮಣೋತ್ತಮರೂ ನೆರೆದಿದ್ದರು. ಯಜ್ಞಕರ್ಮದಲ್ಲಿ ನಿಪುಣರೂ ಪರಮಪೂಜ್ಯರೂ ಆದ ವೈದಿಕರು ಬಂದು ಸೇರಿದ್ದರು. ವಸಿಷ್ಠಮುನಿಗಳು ಸಂತೋಷದಿಂದ ಅಲ್ಲಿಗೆ ಹೋಗಿ ಋಷಿಗಳಿಂದ ಸಮೇತರಾಗಿ, ನೆರೆದಿದ್ದ ಜನರನ್ನು ದಾಟಿ ಮುಂದೆ ಹೋದರು (೩೦-೩೧). ಅಷ್ಟರಲ್ಲಿ ಮಹಾರಾಜನ ಸೂತನೂ ಸಚಿವನೂ ಆದ ಸುಮಂತ್ರನು ವಸ್ತ್ರಾಭರಣಗಳಿಂದ

ದ್ವಾರೇ ಮನುಜಸಿಂಹಸ್ಯ ಸಚಿವಂ ಪ್ರಿಯದರ್ಶನಮ್ ।
ತಮುವಾಚ ಮಹಾತೇಜಾಃ ಸೂತಪುತ್ರಂ ವಿಶಾರದಮ್ ॥ ೩೩

ವಸಿಷ್ಠಃ ಕ್ಷಿಪ್ರಮಾಚಕ್ಷ್ವ ನೃಪತೇರ್ಮಾಮಿಹಾಗತಮ್ ।
ಇಮೇ ಗಂಗೋದಕಘಟಾಃ ಸಾಗರೇಭ್ಯಶ್ಚ ಕಾಂಚನಾಃ ॥ ೩೪

ಔದುಂಬರಂ ಭದ್ರಪೀಠಮಭಿಷೇಕಾರ್ಥಮಾಹೃತಮ್ ।
ಸರ್ವಬೀಜಾನಿ ಗಂಧಾಶ್ಚ ರತ್ನಾನಿ ವಿವಿಧಾನಿ ಚ ॥ ೩೫

ಕ್ಷೌದ್ರಂ ದಧಿ ಘೃತಂ ಲಾಜಾ ದರ್ಭಾಃ ಸುಮನಸಃ ಪಯಃ ।
ಅಷ್ಟೌ ಚ ಕನ್ಯಾ ರುಚಿರಾ ಮತ್ತಶ್ಚ ವರವಾರಣಃ ॥ ೩೬

ಚತುರಶ್ವೋ ರಥಃ ಶ್ರೀಮಾನ್ನಿಸ್ತ್ರಿಂಶೋ ಧನುರುತ್ತಮಮ್ ।
ವಾಹನಂ ನರಸಂಯುಕ್ತಂ ಛತ್ರಂ ಚ ಶಶಿಸಂನಿಭಮ್ ॥ ೩೭

ಶ್ವೇತೇ ಚ ವಾಲವ್ಯಜನೇ ಭೃಂಗಾರಶ್ಚ ಹಿರಣ್ಮಯಃ ।
ಹೇಮದಾಮಪಿನದ್ಧಶ್ಚ ಕಕುದ್ಮಾನ್ ಪಾಂಡರೋ ವೃಷಃ ॥ ೩೮

---

ಭೂಷಿತನಾಗಿ ಅಂತಃಪುರದ ಬಾಗಿಲಿಗೆ ಬಂದುದನ್ನು ವಸಿಷ್ಠರು ನೋಡಿದರು (೩೨). ಆಗ ಮಹಾತೇಜಸ್ವಿಗಳಾದ ವಸಿಷ್ಠರು ಸುಮಂತ್ರನನ್ನು ಕುರಿತು ಹೀಗೆಂದರು : "ಸುಮಂತ್ರ, ನಾನು ಬಂದಿರುವೆನೆಂದು ಮಹಾರಾಜನಿಗೆ ಕೂಡಲೆ ತಿಳಿಸು. ಇತ್ತ ನೋಡು. ಇವು ಗಂಗಾನದಿಯಿಂದಲೂ ಸಮುದ್ರಗಳಿಂದಲೂ ತರಿಸಿದ ಪುಣ್ಯತೀರ್ಥಗಳಿಂದ ತುಂಬಿದ ಸುವರ್ಣಕಲಶಗಳು (೩೩-೩೪). ಅತ್ತಿಯ ಮರದಿಂದ ಮಾಡಿದ ಮಂಗಳಪೀಠವನ್ನು ಪಟ್ಟಾಭಿಷೇಕಕ್ಕೋಸ್ಕರ ತರಿಸಿದ್ದೇನೆ. ಬೇಕಾದ ಎಲ್ಲ ಧಾನ್ಯಗಳನ್ನೂ ಸುಗಂಧ ದ್ರವ್ಯಗಳನ್ನೂ ವಿವಿಧರತ್ನಗಳನ್ನೂ ಸಿದ್ಧಪಡಿಸಿದ್ದೇನೆ (೩೫). ಜೇನುತುಪ್ಪ, ಮೊಸರು, ತುಪ್ಪ, ಅರಳು, ದರ್ಭೆ, ಹೂ ಮತ್ತು ಹಾಲು ಸಿದ್ಧವಾಗಿವೆ. ಲಕ್ಷಣವತಿಯರಾದ ಅಷ್ಟಕನ್ಯೆಯರು ಬಂದಿದ್ದಾರೆ. ಉತ್ತಮವಾದ ಮದ್ದಾನೆಯೂ ನಾಲ್ಕು ಕುದುರೆಗಳನ್ನು ಹೂಡಿದ ಶ್ರೇಷ್ಠವಾದ ರಥವೂ ಬಂದು ನಿಂತಿವೆ. ಖಡ್ಗ, ಧನುಸ್ಸು, ಪಲ್ಲಕ್ಕಿ, ಚಂದ್ರನಂತಿರುವ ಶ್ವೇತಚ್ಛತ್ರಗಳು ಅಣಿಯಾಗಿವೆ (೩೬-೩೭). ಎರಡು ಬಿಳಿಯ ಚಾಮರಗಳು, ಸುವರ್ಣ ಕಲಶ, ಬಂಗಾರದ ಸರಪಳಿಯಿಂದ ಕಟ್ಟಿದ ಬಿಳಿಯ ಹೋರಿ, ನಾಲ್ಕು

ಕೇಸರೀ ಚ ಚತುರ್ದಂಷ್ಟ್ರೋ ಹರಿಶ್ರೇಷ್ಠೋ ಮಹಾಬಲಃ ।
ಸಿಂಹಾಸನಂ ವ್ಯಾಘ್ರತನುಃ ಸಮಿದ್ಧಶ್ಚ ಹುತಾಶನಃ ॥ ೩೯

ಸರ್ವವಾದಿತ್ರಸಂಘಾಶ್ಚ ವೇಶ್ಯಾಶ್ಚಾಲಂಕೃತಾಃ ಸ್ತ್ರಿಯಃ ।
ಆಚಾರ್ಯಾ ಬ್ರಾಹ್ಮಣಾ ಗಾವಃ ಪುಣ್ಯಾಶ್ಚ ಮೃಗಪಕ್ಷಿಣಃ ॥ ೪೦

ಪೌರಜಾನಪದಶ್ರೇಷ್ಠಾ ನೈಗಮಾಶ್ಚ ಗಣೈಃ ಸಹ ।
ಏತೇ ಚಾನ್ಯೇ ಚ ಬಹವಃ ಪ್ರೀಯಮಾಣಾಃ ಪ್ರಿಯಂವದಾಃ ॥ ೪೧

ಅಭಿಷೇಕಾಯ ರಾಮಸ್ಯ ಸಹ ತಿಷ್ಠಂತಿ ಪಾರ್ಥಿವೈಃ ।
ತ್ವರಯಸ್ವ ಮಹಾರಾಜಂ ಯಥಾ ಸಮುದಿತೇಽಹನಿ ॥ ೪೨

ಪುಣ್ಯೇ ನಕ್ಷತ್ರಯೋಗೇ ಚ ರಾಮೋ ರಾಜ್ಯಮವಾಪ್ನುಯಾತ್ ।
ಇತಿ ತಸ್ಯ ವಚಃ ಶ್ರುತ್ವಾ ಸೂತಪುತ್ರೋ ಮಹಾತ್ಮನಃ ॥ ೪೩

ಸ್ತುವನ್ನೃಪತಿಶಾರ್ದೂಲಂ ಪ್ರವಿವೇಶ ನಿವೇಶನಮ್ ।
ತಂ ತು ಪೂರ್ವೋದಿತಂ ವೃದ್ಧಂ ದ್ವಾರಸ್ಥಾ ರಾಜಸಂಮತಾಃ ॥ ೪೪

---

ಕೋರೆಯ ಹಲ್ಲುಗಳಿರುವ ಸಿಂಹ, ಉತ್ತಮಾಶ್ವ, ಸಿಂಹಾಸನ ಮತ್ತು ವ್ಯಾಘ್ರಾಜಿನಗಳು ಸಜ್ಜಾಗಿವೆ. ವೇದಿಕೆಯಲ್ಲಿ ಅಗ್ನಿಯು ಜ್ವಲಿಸುತ್ತಿದೆ (೩೮-೩೯). ಸಕಲ ಮಂಗಳವಾದ್ಯಗಳು ಸಿದ್ಧವಾಗಿವೆ. ವೇಶ್ಯೆಯರು ಅಲಂಕರಿಸಿಕೊಂಡು ಬಂದಿದ್ದಾರೆ. ಆಚಾರ್ಯರೂ ಬ್ರಾಹ್ಮಣರೂ ಆಗಮಿಸಿದ್ದಾರೆ. ಗೋವುಗಳೂ ಮಂಗಳಕರವಾದ ಮೃಗಪಕ್ಷಿಗಳೂ ತರಿಸಲ್ಪಟ್ಟಿವೆ (೪೦). ಪ್ರಮುಖರಾದ ಪೌರರೂ ರಾಜ್ಯದ ಪ್ರಜೆಗಳೂ ವಣಿಕ್‌ಶ್ರೇಷ್ಠರೂ ತಮ್ಮ ಪರಿವಾರದೊಂದಿಗೆ ಬಂದಿದ್ದಾರೆ. ಇನ್ನೂ ಬಹುಜನರು ಬಂದು ಸೇರಿದ್ದಾರೆ. ಎಲ್ಲರೂ ಸಂತೋಷದಿಂದ ರಾಮಾಭಿಷೇಕವನ್ನುದ್ದೇಶಿಸಿ ಆನಂದಕರವಾದ ಸಂಭಾಷಣೆಯಲ್ಲಿ ಮಗ್ನರಾಗಿದ್ದಾರೆ. ಹಾಗೆಯೇ ಸಾಮಂತರಾಜರುಗಳೆಲ್ಲರೂ ಬಂದು ಕಾದಿದ್ದಾರೆ. (೪೧-೪೨). ನೀನು ಮಹಾರಾಜನನ್ನು ತ್ವರೆಪಡಿಸು. ಶುಭಗುಣಯುಕ್ತವಾದ ಈ ದಿನ ಪುಣ್ಯಕರವಾದ ಪುಷ್ಯನಕ್ಷತ್ರದಲ್ಲಿ ರಾಮನಿಗೆ ರಾಜ್ಯಪ್ರಾಪ್ತಿಯಾಗಬೇಕು" ಎಂದರು. ವಸಿಷ್ಠರ ನುಡಿಯನ್ನು ಕೇಳಿ ಸುಮಂತ್ರನು ದಶರಥ ರಾಜನನ್ನು ಕೊಂಡಾಡುತ್ತ ಅಂತಃಪುರದೊಳಗೆ ಹೋದನು (೪೩-೪೪).

ನ ಶೇಕುರಭಿಸಂರೋದ್ಧುಂ ರಾಜ್ಞಃ ಪ್ರಿಯಚಿಕೀರ್ಷವಃ ।
ಸ ಸಮೀಪಸ್ಥಿತೋ ರಾಜ್ಞಸ್ತಾಮವಸ್ಥಾಮಜಿಜ್ಞಿವಾನ್ ॥ ೪೫

ವಾಗ್ಭಿಃ ಪರಮತುಷ್ಟಾಭಿರಭಿಷ್ಟೋತುಂ ಪ್ರಚಕ್ರಮೇ ।
ತತಃ ಸೂತೋ ಯಥಾಕಾಲಂ ಪಾರ್ಥಿವಸ್ಯ ನಿವೇಶನೇ ॥ ೪೬

ಸುಮಂತ್ರಃ ಪ್ರಾಂಜಲಿರ್ಭೂತ್ವಾ ತುಷ್ಟಾವ ಜಗತೀಪತಿಮ್ ।
ಯಥಾ ನಂದತಿ ತೇಜಸ್ವೀ ಸಾಗರೋ ಭಾಸ್ಕರೋದಯೇ ॥ ೪೭

ಪ್ರೀತಃ ಪ್ರೀತೇನ ಮನಸಾ ತಥಾ ನಂದಯ ನಃ ಸ್ವತಃ ।
ಇಂದ್ರಮಸ್ಯಾಂ ತು ವೇಲಾಯಾಮಭಿತುಷ್ಟಾವ ಮಾತಲಿಃ ॥ ೪೮

ಸೋಽಜಯದ್ದಾನವಾನ್ ಸರ್ವಾಂಸ್ತಥಾ ತ್ವಾಂ ಬೋಧಯಾಮ್ಯಹಮ್ ।
ವೇದಾಃ ಸಹಾಂಗವಿದ್ಯಾಶ್ಚ ಯಥಾ ಹ್ಯಾತ್ಮಭುವಂ ವಿಭುಮ್ ॥ ೪೯

ಬ್ರಹ್ಮಾಣಂ ಬೋಧಯಂತ್ಯದ್ಯ ತಥಾ ತ್ವಾಂ ಬೋಧಯಾಮ್ಯಹಮ್ ।
ಆದಿತ್ಯಃ ಸಹ ಚಂದ್ರೇಣ ಯಥಾ ಭೂತಧರಾಂ ಶುಭಾಮ್ ॥ ೫೦

---

ಆ ವೃದ್ಧನಿಗೆ ಅಂತಃಪುರವನ್ನು ಪ್ರವೇಶಿಸಲು ರಾಜನ ಅನುಮತಿಯಿದ್ದುದರಿಂದ ದ್ವಾರಪಾಲಕರು ಅವನನ್ನು ತಡೆಯಲಿಲ್ಲ. ಅವನು ಮಹಾರಾಜನ ಸಮೀಪಕ್ಕೆ ಹೋದನು. ಆಗಲೂ ದಶರಥನಿಗುಂಟಾದ ದುರವಸ್ಥೆಯು ಸುಮಂತ್ರನಿಗೆ ತಿಳಿಯಲಿಲ್ಲ (೪೫). ಆ ಸೂತನು ರಾಜಭವನದಲ್ಲಿ ಎಂದಿನಂತೆ ಪ್ರಾಂಜಲಿಯಾಗಿ ಭೂಪಾಲನನ್ನು ಸ್ತೋತ್ರಮಾಡಲು ಉಪಕ್ರಮಿಸಿದನು : "ಮಹಾರಾಜ, ಸೂರ್ಯೋದಯ ಕಾಲದಲ್ಲಿ ಸೂರ್ಯಕಿರಣಗಳ ಸಂಕ್ರಮಣದಿಂದ ಉಜ್ವಲವಾಗಿ ಪ್ರಕಾಶಿಸುವ ಸಮುದ್ರರಾಜನಂತೆ ಸಂತುಷ್ಟಚಿತ್ತನಾಗಿ ನಮ್ಮೆಲ್ಲರನ್ನೂ ಆನಂದಪಡಿಸು. ಈ ಸಮಯದಲ್ಲಿ ಮಾತಲಿಯು ದೇವೇಂದ್ರನನ್ನು ಸ್ತೋತ್ರಮಾಡಿ ಎಚ್ಚರಗೊಳಿಸುತ್ತಾನೆ (೪೬-೪೮). ದೇವೇಂದ್ರನು ಎಚ್ಚೆತ್ತು ಸಕಲ ದಾನವರನ್ನೂ ಸಂಹರಿಸುತ್ತಾನೆ. ಅದೇ ರೀತಿಯಲ್ಲಿ ನಿನಗೆ ಜಯವಾಗಲೆಂದು ನಾನು ನಿನ್ನನ್ನು ಎಚ್ಚರಗೊಳಿಸುತ್ತಿದ್ದೇನೆ. ಷಡಂಗಸಹಿತವಾದ ವೇದಗಳೂ ಮೀಮಾಂಸಾದಿ ವಿದ್ಯೆಗಳೂ ಬ್ರಹ್ಮದೇವನನ್ನು ಸೃಷ್ಟಿಕಾರ್ಯಕ್ಕಾಗಿ ಉದ್ಬೋಧಿಸಲು ಸ್ತೋತ್ರಮಾಡುವಂತೆ ನಾನು ನಿನ್ನನ್ನು ಪ್ರಜಾಪಾಲನ ಕಾರ್ಯಕ್ಕಾಗಿ ಏಳಬೇಕೆಂದು ಸ್ತೋತ್ರಮಾಡು

ಬೋಧಯತ್ಯದ್ಯ ಪೃಥಿವೀಂ ತಥಾ ತ್ವಾಂ ಬೋಧಯಾಮ್ಯಹಮ್ ।
ಉತ್ತಿಷ್ಠಾಶು ಮಹಾರಾಜ ಕೃತಕೌತುಕಮಂಗಲಃ ॥ ೫೧

ವಿರಾಜಮಾನೋ ವಪುಷಾ ಮೇರೋರಿವ ದಿವಾಕರಃ ।
ಸೋಮಸೂರ್ಯೌ ಚ ಕಾಕುತ್ಸ್ಥ ಶಿವವೈಶ್ರವಣಾವಪಿ ॥ ೫೨

ವರುಣಶ್ಚಾಗ್ನಿರಿಂದ್ರಶ್ಚ ವಿಜಯಂ ಪ್ರದಿಶಂತು ತೇ ।
ಗತಾ ಭಗವತೀ ರಾತ್ರಿರಹಃ ಶಿವಮುಪಸ್ಥಿತಮ್ ॥ ೫೩

ಬುಧ್ಯಸ್ವ ರಾಜಶಾರ್ದೂಲ ಕುರು ಕಾರ್ಯಮನಂತರಮ್ ।
ಉದತಿಷ್ಠತ ರಾಮಸ್ಯ ಸಮಗ್ರಮಭಿಷೇಚನಮ್ ॥ ೫೪

ಪೌರಜಾನಪದೈಶ್ಚಾಪಿ ನೈಗಮೈಶ್ಚ ಕೃತಾತ್ಮಭಿಃ ।
ಸ್ವಯಂ ವಸಿಷ್ಠೋ ಭಗವಾನ್ ಬ್ರಾಹ್ಮಣೈಃ ಸಹ ತಿಷ್ಠತಿ ॥ ೫೫

ಕ್ಷಿಪ್ರಮಾಜ್ಞಾಪ್ಯತಾಂ ರಾಜನ್ ರಾಘವಸ್ಯಾಭಿಷೇಚನಮ್ ।
ಯಥಾ ಹ್ಯಪಾಲಾಃ ಪಶವೋ ಯಥಾ ಸೇನಾ ಹ್ಯನಾಯಕಾ ॥ ೫೬

---

ತ್ತೇನೆ (೪೯-೫೦). ಸೂರ್ಯಚಂದ್ರರು ಸಕಲಭೂತಗಳಿಗೂ ಆಶ್ರಯವಾದ ಪೃಥಿವಿಯನ್ನು ಜಾಗೃತಗೊಳಿಸುವಂತೆ, ನಾನು ನಿನ್ನನ್ನು ಜಾಗೃತನಾಗಬೇಕೆಂದು ಪ್ರಾರ್ಥಿಸುತ್ತಿದ್ದೇನೆ. ಮಹಾರಾಜ, ಬೇಗನೆ ಜಾಗೃತನಾಗು. ಮಂಗಳಾಲಂಕಾರಗಳಿಂದ ಭೂಷಿತನಾಗು (೫೧). ಸುಮೇರುಪರ್ವತದಿಂದ ಈಚೆಗೆ ಬಂದು ದಿನಕರನು ಕಾಣಿಸಿಕೊಳ್ಳುತ್ತಿರುವಂತೆ, ನೀನು ಅಂತಃಪುರದಿಂದ ಹೊರಗೆ ಬಂದು ತೇಜೋವಿಶಿಷ್ಟವಾದ ದೇಹದೊಡನೆ ನಮಗೆ ಗೋಚರನಾಗು. ಹೇ ಕಕುತ್ಸ್ಥವಂಶೋದ್ಭವ, ಚಂದ್ರಾದಿತ್ಯರೂ ಶಿವಕುಬೇರರೂ ವರುಣನೂ ಇಂದ್ರಾಗ್ನಿಗಳೂ ನಿನಗೆ ಶ್ರೇಯಸ್ಸನ್ನುಂಟುಮಾಡಲಿ. ಪೂಜ್ಯವಾದ ರಾತ್ರಿಯು ಕಳೆಯಿತು. ಮಂಗಳಕರವಾದ ಸುಪ್ರಭಾತವು ಬಂದಿತು (೫೨-೫೩). ಹೇ ರಾಜಶ್ರೇಷ್ಠ, ಎಚ್ಚರಗೊಳ್ಳು. ಮುಂದಿನ ಕರ್ತವ್ಯವನ್ನು ನೆರವೇರಿಸು. ಶ್ರೀರಾಮನ ಪಟ್ಟಾಭಿಷೇಕಕ್ಕೋಸ್ಕರ ಸಕಲ ಸಾಮಗ್ರಿಗಳೂ ಸಿದ್ಧವಾಗಿವೆ. ಪುರಜನರೂ ರಾಜ್ಯದ ಪ್ರಜೆಗಳೂ . ವರ್ತಕರೂ ತಮ್ಮ ಪರಿವಾರದೊಂದಿಗೆ ಬಂದು ಕಾಯುತ್ತಿದ್ದಾರೆ. ಭಗವಾನ್ ವಸಿಷ್ಠ ಮುನಿಗಳು ಬ್ರಾಹ್ಮಣರೊಡನೆ ದಯಮಾಡಿಸಿದ್ದಾರೆ (೫೪-೫೫). ಮಹಾರಾಜ,

ಯಥಾ ಚಂದ್ರಂ ವಿನಾ ರಾತ್ರಿರ್ಯಥಾ ಗಾವೋ ವಿನಾ ವೃಷಮ್ ।
ಏವಂ ಹಿ ಭವಿತಾ ರಾಷ್ಟ್ರಂ ಯತ್ರ ರಾಜಾ ನ ದೃಶ್ಯತೇ ॥ ೫೭

ಇತಿ ತಸ್ಯ ವಚಃ ಶ್ರುತ್ವಾ ಸಾಂತ್ವಪೂರ್ವಮಿವಾರ್ಥವತ್ ।
ಅಭ್ಯಕೀರ್ಯತ ಶೋಕೇನ ಭೂಯ ಏವ ಮಹೀಪತಿಃ ॥ ೫೮

ತತಃ ಸ ರಾಜಾ ತಂ ಸೂತಂ ಸನ್ನಹರ್ಷಃ ಸುತಂ ಪ್ರತಿ ।
ಶೋಕರಕ್ತೇಕ್ಷಣಃ ಶ್ರೀಮಾನುದ್ವೀಕ್ಷ್ಯೋವಾಚ ಧಾರ್ಮಿಕಃ ॥ ೫೯

ವಾಕ್ಯೈಸ್ತು ಖಲು ಮರ್ಮಾಣಿ ಮಮ ಭೂಯೋ ನಿಕೃಂತಸಿ ।
ಸುಮಂತ್ರಃ ಕರುಣಂ ಶ್ರುತ್ವಾ ದೃಷ್ಟ್ವಾ ದೀನಂ ಚ ಪಾರ್ಥಿವಮ್ ॥

ಪ್ರಗೃಹೀತಾಂಜಲಿಃ ಪ್ರಹ್ವಸ್ತಸ್ಮಾದ್ದೇಶಾದಪಾಕ್ರಮತ್ ।
ಯದಾ ವಕ್ತುಂ ಸ್ವಯಂ ದೈವಾನ್ನ ಶಶಾಕ ಮಹೀಪತಿಃ ॥ ೬೧

ತದಾ ಸುಮಂತ್ರಂ ಮಂತ್ರಜ್ಞಾ ಕೈಕೇಯೀ ಪ್ರತ್ಯುವಾಚ ಹ ।
ಸುಮಂತ್ರ ರಾಜಾ ರಜನೀಂ ರಾಮಹರ್ಷಸಮುತ್ಸುಕಃ ॥ ೬೨

---

ಶ್ರೀರಾಮನ ಪಟ್ಟಾಭಿಷೇಕವು ಆರಂಭವಾಗುವುದಕ್ಕೆ ಅನುಮತಿಯನ್ನು ಕೊಡು. ರಾಜನಿಲ್ಲದ ರಾಷ್ಟ್ರವು ಕಾವಲುಗಾರನಿಲ್ಲದ ಪಶುಗಳ ಮಂದೆಯಂತೆಯೂ, ಸೇನಾಪತಿಯಿಲ್ಲದ ಸೈನ್ಯದಂತೆಯೂ, ಚಂದ್ರನಿಲ್ಲದ ರಾತ್ರಿಯಂತೆಯೂ, ವೃಷಭವಿಲ್ಲದ ಗೋವುಗಳ ಹಿಂಡಿನಂತೆಯೂ ಆಗುತ್ತದೆ" ಎಂದು ಸ್ತುತಿಸಿದನು (೫೬-೫೭). ಹೀಗೆ ವಿನಯಪೂರ್ವಕವಾಗಿ ನುಡಿದ ಸುಮಂತ್ರನ ಅರ್ಥಗರ್ಭಿತ ವಾಕ್ಯವನ್ನು ಕೇಳಿ ದಶರಥರಾಜನ ಶೋಕವು ಉಮ್ಮಳಿಸಿತು. ಅವನು ತನ್ನ ಮಗನ ವಿಷಯವನ್ನು ಚಿಂತಿಸಿ ಚಿಂತಿಸಿ ಎದೆಗುಂದಿದ್ದನು. ಆ ಧರ್ಮಶೀಲನು ಅತ್ತು ಅತ್ತು ಕೆಂಪಾದ ಕಣ್ಣುಗಳನ್ನು ಮೇಲೆತ್ತಿ "ಸುಮಂತ್ರ, ಮರ್ಮಭೇದಕವಾದ ಮಾತುಗಳಿಂದ ನನ್ನನ್ನು ಮತ್ತೆ ಮತ್ತೆ ಕೊರೆಯುತ್ತಿದ್ದೀಯೆ" ಎಂದನು (೫೮-೫೯). ಕರುಣಾಪೂರ್ಣವಾದ ಆ ದೀನವಾಕ್ಯವನ್ನು ಕೇಳಿ ಸುಮಂತ್ರನು ತಲೆಬಾಗಿ ವಂದಿಸಿ ಹಿಂದಕ್ಕೆ ಸರಿದನು. ದಶರಥನು ಶೋಕದಿಂದ ಏನನ್ನೂ ಹೇಳಲಾರದೆ ಹೋದದ್ದನ್ನು ಕಂಡು ತಂತ್ರಜ್ಞಳಾದ ಕೈಕೇಯಿಯು ತಾನೇ ಸುಮಂತ್ರನಿಗೆ ಹೀಗೆಂದಳು (೬೦-೬೧) : "ಸುಮಂತ್ರ, ರಾಮನಿಗೆ ಪಟ್ಟಗಟ್ಟುವೆನೆಂಬ ಉತ್ಸಾಹದಿಂದ

ಪ್ರಜಾಗರಪರಿಶ್ರಾಂತೋ ನಿದ್ರಾಯಾ ವಶಮೇಯಿವಾನ್ ।
ತದ್ಗಚ್ಛ ತ್ವರಿತಂ ಸೂತ ರಾಜಪುತ್ರಂ ಯಶಸ್ವಿನಮ್ ॥ ೬೩

ರಾಮಮಾನಯ ಭದ್ರಂ ತೇ ನಾತ್ರ ಕಾರ್ಯಾ ವಿಚಾರಣಾ ।
ಸ ಮನ್ಯಮಾನಃ ಕಲ್ಯಾಣಂ ಹೃದಯೇನ ನನಂದ ಚ ॥ ೬೪

ನಿರ್ಜಗಾಮ ಚ ಸಂಪ್ರೀತ್ಯಾ ತ್ವರಿತೋ ರಾಜಶಾಸನಾತ್ ।
ಸುಮಂತ್ರಶ್ಚಿಂತಯಾಮಾಸ ತ್ವರಿತಂ ಚೋದಿತಸ್ತಯಾ ॥ ೬೫

ವ್ಯಕ್ತಂ ರಾಮೋಽಭಿಷೇಕಾರ್ಥಮಿಹಾಯಾಸ್ಯತಿ ಧರ್ಮವಿತ್ ।
ಇತಿ ಸೂತೋ ಮತಿಂ ಕೃತ್ವಾ ಹರ್ಷೇಣ ಮಹತಾ ವೃತಃ ॥ ೬೬

ನಿರ್ಜಗಾಮ ಮಹಾಬಾಹೋ ರಾಘವಸ್ಯ ದಿದೃಕ್ಷಯಾ ।
ಸಾಗರಹ್ರದಸಂಕಾಶಾತ್ ಸುಮಂತ್ರೋಽಂತಃಪುರಾಚ್ಛುಭಾತ್ ॥ ೬೭
ನಿಷ್ಕ್ರಮ್ಯ ಜನಸಂಬಾಧಂ ದದರ್ಶ ದ್ವಾರಮಗ್ರತಃ ॥

---

ಮಹಾರಾಜನಿಗೆ ರಾತ್ರಿಯೆಲ್ಲವೂ ನಿದ್ರೆ ಬರಲಿಲ್ಲ! ನಿದ್ರೆಗೆಟ್ಟುದರಿಂದ ಬಳಲಿ ಈಗ ಸ್ವಲ್ಪ ನಿದ್ರೆ ಬಂದಿದೆ. ಆದ್ದರಿಂದ ನೀನು ಬೇಗನೆ ಹೋಗಿ ರಾಜಕುಮಾರನಾದ ರಾಮನನ್ನು ಇಲ್ಲಿಗೆ ಕರೆದುಕೊಂಡು ಬಾ. ಬೇರೆ ಯಾವ ಚಿಂತೆಯೂ ಬೇಡ. ಒಳ್ಳೆಯದಾಗಲಿ, ಹೋಗು" ಎಂದಳು (೬೨-೬೩). ಒಳ್ಳೆಯದನ್ನೇ ಚಿಂತಿಸುತ್ತಿದ್ದ ಆ ಸಾರಥಿಯು ಅದೆಲ್ಲವೂ ಸತ್ಯವೆಂದು ಭಾವಿಸಿ ಮನಸ್ಸಿನಲ್ಲಿ ಹಿಗ್ಗಿದನು (೬೪). ಕೈಕೇಯಿಯ ಮಾತು ರಾಜಾಜ್ಞೆಯೆಂದು ತಿಳಿದು ಶೀಘ್ರವಾಗಿ ಅಲ್ಲಿಂದ ಹೊರಟನು. ಅವನು 'ಧರ್ಮಜ್ಞನಾದ ಶ್ರೀರಾಮನು ಪಟ್ಟಾಭಿಷೇಕವನ್ನು ಮಾಡಿಸಿಕೊಳ್ಳಲು ಇಲ್ಲಿಗೆ ಬರುವನೆಂಬುದು ಸ್ಪಷ್ಟವಾಗಿದೆ' ಎಂದುಕೊಂಡನು. ಸುಮಂತ್ರನಿಗೆ ಪರಮಾನಂದವಾಯಿತು (೬೫-೬೬). ಆತನು ಮಹಾಸಾಗರದ ಮಧ್ಯದಲ್ಲಿರುವ ಮಡುವಿನಂತೆ ಜನನಿಬಿಡವಾದ ನಗರದ ಮಧ್ಯದಲ್ಲಿರುವ ಸುಂದರವಾದ ಅಂತಃಪುರದಿಂದ ಹೊರಟನು. ಶ್ರೀರಾಮನನ್ನು ನೋಡುವ ತವಕದಿಂದ ಹೊರಟು ಅಂತಃಪುರದ ಹೊರಬಾಗಿಲಿಗೆ ಬಂದು ಅಲ್ಲಿ ನೆರೆದಿದ್ದ ಜನಸಂದಣಿಯನ್ನು ನೋಡಿ

ತತಃ ಪುರಸ್ತಾತ್ ಸಹಸಾ ವಿನರ್ಗತೋ
ಮಹೀಪತೀನ್ ದ್ವಾರಗತಾನ್ ವಿಲೋಕಯನ್ ।
ದದರ್ಶ ಪೌರಾನ್ ವಿವಿಧಾನ್ ಮಹಾಧನಾ-
ನುಪಸ್ಥಿತಾನ್ ದ್ವಾರಮುಪೇತ್ಯ ವಿಷ್ಠಿತಾನ್ ॥ ೬೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ದಶಃ ಸರ್ಗಃ

---

## ಪಂಚದಶಃ ಸರ್ಗಃ

### ಸುಮಂತ್ರಪ್ರೇಷಣಮ್

ತೇ ತು ತಾಂ ರಜನೀಮುಷ್ಯ ಬ್ರಾಹ್ಮಣಾ ವೇದಪಾರಗಾಃ ।
ಉಪತಸ್ಥುರುಪಸ್ಥಾನಂ ಸಹ ರಾಜಪುರೋಹಿತಾಃ ॥ ೧

ಅಮಾತ್ಯಾ ಬಲಮುಖ್ಯಾಶ್ಚ ಮುಖ್ಯಾ ಯೇ ನಿಗಮಸ್ಯ ಚ ।
ರಾಘವಸ್ಯಾಭಿಷೇಕಾರ್ಥೇ ಪ್ರೀಯಮಾಣಾಸ್ತು ಸಂಗತಾಃ ॥ ೨

---

ದನು (೬೭). ಆ ದ್ವಾರಪ್ರದೇಶದಲ್ಲಿ ಸಾಮಂತರಾಜರೂ ವಿವಿಧೋದ್ಯೋಗದ ಪೌರಮಹಾಜನರೂ ಕಾಣಿಕೆಯನ್ನರ್ಪಿಸುವುದಕ್ಕಾಗಿ ಬಹಳ ಧನವನ್ನು ತಂದು ಕಿಕ್ಕಿರಿದು ಸೇರಿದ್ದರು. ಅವರನ್ನು ಸುಮಂತ್ರನು ಕಂಡನು (೬೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹದಿನಾಲ್ಕನೆಯ ಸರ್ಗ

---

## ಸರ್ಗ ೧೫

**ಸುಮಂತ್ರನು ರಾಮಾಭಿಷೇಕದ ಸಿದ್ಧತೆಗಳನ್ನು ಕಂಡು ಪುನಃ ದಶರಥನ ಬಳಿಗೆ ಹೋಗುವುದು. ದಶರಥನ ಆಜ್ಞೆಯಂತೆ ಶ್ರೀರಾಮನನ್ನು ಕರೆತರಲು ಹೋಗುವುದು.**

ಅತ್ತಲಾಗಿ ವೇದಪಾರಂಗತರಾದ ಬ್ರಾಹ್ಮಣರು ರಾತ್ರಿಯು ಕಳೆದ ಮೇಲೆ ರಾಜಪುರೋಹಿತರೊಡನೆ ಅರಮನೆಗೆ ಬಂದಿದ್ದರು. ಅಮಾತ್ಯರೂ ಸೇನಾಪತಿಗಳೂ ದೊಡ್ಡ ಅಧಿಕಾರಿಗಳೂ ಶ್ರೀರಾಮನ ಪಟ್ಟಾಭಿಷೇಕ

ಉದಿತೇ ವಿಮಲೇ ಸೂರ್ಯೇ ಪುಷ್ಯೇ ಚಾಭ್ಯಾಗತೇಽಹನಿ ।
ಲಗ್ನೇ ಕರ್ಕಟಕೇ ಪ್ರಾಪ್ತೇ ಚಂದ್ರೇ ರಾಮಸ್ಯ ಚ ಸ್ಥಿತೇ ॥ ೩

ಅಭಿಷೇಕಾಯ ರಾಮಸ್ಯ ದ್ವಿಜೇಂದ್ರೈರುಪಕಲ್ಪಿತಮ್ ।
ಕಾಂಚನಾ ಜಲಕುಂಭಾಶ್ಚ ಭದ್ರಪೀಠಂ ಸ್ವಲಂಕೃತಮ್ ॥ ೪

ರಥಶ್ಚ ಸಮ್ಯಗಾಸ್ತೀರ್ಣೋ ಭಾಸ್ವತಾ ವ್ಯಾಘ್ರಚರ್ಮಣಾ ।
ಗಂಗಾಯಮುನಯೋಃ ಪುಣ್ಯಾತ್ ಸಂಗಮಾದಾಹೃತಂ ಜಲಮ್ ॥ ೫

ಯಾಶ್ಚಾನ್ಯಾಃ ಸರಿತಃ ಪುಣ್ಯಾ ಹ್ರದಾಃ ಕೂಪಾಃ ಸರಾಂಸಿ ಚ ।
ಪ್ರಾಗ್ವಾಹಾಶ್ಚೋದ್ಗ್ವಾಹಾಶ್ಚ ತಿರ್ಯಗ್ವಾಹಾಃ ಸಮಾಹಿತಾಃ ॥ ೬

ತಾಭ್ಯಶ್ಚೈವಾಹೃತಂ ತೋಯಂ ಸಮುದ್ರೇಭ್ಯಶ್ಚ ಸರ್ವಶಃ ।
ಸಲಾಜಾಃ ಕ್ಷೀರಿಭಿಶ್ಚಾನ್ಯಾ ಘಟಾಃ ಕಾಂಚನರಾಜತಾಃ ॥ ೭

---

ಕ್ಕೋಸ್ಕರ ಸಂತೋಷದಿಂದ ಬಂದು ಸೇರಿದ್ದರು (೧-೨). ಸೂರ್ಯನು ಪ್ರಕಾಶಮಾನವಾಗಿ ಉದಯಿಸಲು ಪುಷ್ಯನಕ್ಷತ್ರದ ವೇಳೆಯು ಬಂದಿತು. ಶ್ರೀರಾಮನ ಜನ್ಮಕಾಲವಾದ ಕರ್ಕಾಟಕಲಗ್ನವು ಪ್ರಾಪ್ತವಾಯಿತು. ಶ್ರೀರಾಮನ ಅಭಿಷೇಕಕ್ಕಾಗಿ ಬ್ರಾಹ್ಮಣೋತ್ತಮರು ಸಾಮಗ್ರಿಗಳನ್ನು ಸಿದ್ಧಪಡಿಸಿದರು. ಚಿನ್ನದ ಕಲಶಗಳು ಅಣಿಯಾಗಿದ್ದವು. ಸಿಂಹಾಸನವನ್ನು ಅಲಂಕರಿಸಿ ಇಡಲಾಗಿತ್ತು (೩-೪). ಮಿರುಗುವ ಒಂದು ಹುಲಿಯ ಚರ್ಮವನ್ನು ರಥದಲ್ಲಿ ಹಾಸಿದ್ದರು. ಗಂಗಾಯಮುನೆಗಳ ಸಂಗಮಕ್ಷೇತ್ರದಿಂದಲೂ ಪುಣ್ಯಕರವೆಂದು ಪ್ರಸಿದ್ಧವಾದ ಇನ್ನೂ ಇತರ ನದಿಗಳಿಂದಲೂ ವಾಪೀಕೂಪ ತಟಾಕ ಗಳಿಂದಲೂ ಜಲವನ್ನು ತರಿಸಿ ಇಟ್ಟಿದ್ದರು. ಪೂರ್ವಾಭಿಮುಖವಾಗಿ ಹರಿಯುವ ಗೋದಾವರಿ ಕಾವೇರಿ ಮುಂತಾದ ನದಿಗಳಿಂದಲೂ ಮೇಲ್ಮುಖವಾಗಿ ಚಿಮ್ಮುವ ಚಿಲುಮೆಗಳಿಂದಲೂ ದಕ್ಷಿಣೋತ್ತರವಾಗಿ ಹರಿಯುವ ಗಂಡಕಿ ಶೋಣಭದ್ರಾದಿ ನದಿಗಳಿಂದಲೂ ತೀರ್ಥವನ್ನು ತರಿಸಿದ್ದರು (೫-೬). ಚತುಃಸಮುದ್ರಗಳಿಂದಲೂ ಜಲವು ತರಲ್ಪಟ್ಟಿತ್ತು. ಬೆಳ್ಳಿಬಂಗಾರಗಳಿಂದ ಮಾಡಿದ ಕುಂಭಗಳಲ್ಲಿ ಪವಿತ್ರಜಲವನ್ನು ತುಂಬಿ ಅರಳಿನ ಮಧ್ಯದಲ್ಲಿ ಇರಿಸಿ

ಪದ್ಮೋತ್ಪಲಯುತಾ ಭಾಂತಿ ಪೂರ್ಣಾಃ ಪರಮವಾರಿಣಾ ।
ಕ್ಷೌದ್ರಂ ದಧಿ ಘೃತಂ ಲಾಜಾ ದರ್ಭಾಃ ಸುಮನಸಃ ಪಯಃ ॥ ೮

ವೇಶ್ಯಾಶ್ಚೈವ ಶುಭಾಚಾರಾಃ ಸರ್ವಾಭರಣಭೂಷಿತಾಃ ।
ಚಂದ್ರಾಂಶುವಿಕಚಪ್ರಖ್ಯಂ ಕಾಂಚನಂ ರತ್ನಭೂಷಿತಮ್ ॥ ೯

ಸಜ್ಜಂ ತಿಷ್ಠತಿ ರಾಮಸ್ಯ ವಾಲವ್ಯಜನಮುತ್ತಮಮ್ ।
ಚಂದ್ರಮಂಡಲಸಂಕಾಶಮಾತಪತ್ರಂ ಚ ಪಾಂಡರಮ್ ॥ ೧೦

ಸಜ್ಜಂ ದ್ಯುತಿಕರಂ ಶ್ರೀಮದಭಿಷೇಕಪುರಸ್ಕೃತಮ್ ।
ಪಾಂಡರಶ್ಚ ವೃಷಃ ಸಜ್ಜಃ ಪಾಂಡರೋಽಶ್ವಶ್ಚ ಸುಸ್ಥಿತಃ ॥ ೧೧

ಪ್ರಸೃತಶ್ಚ ಗಜಃ ಶ್ರೀಮಾನೌಪವಾಹ್ಯಃ ಪ್ರತೀಕ್ಷತೇ ।
ಅಷ್ಟೌ ಚ ಕನ್ಯಾ ಮಾಂಗಲ್ಯಾಃ ಸರ್ವಾಭರಣಭೂಷಿತಾಃ ॥ ೧೨

ವಾದಿತ್ರಾಣಿ ಚ ಸರ್ವಾಣಿ ವಂದಿನಶ್ಚ ತಥಾ ಪರೇ ।
ಇಕ್ಷ್ವಾಕೂಣಾಂ ಯಥಾ ರಾಜ್ಯೇ ಸಂಭ್ರಿಯೇತಾಭಿಷೇಚನಮ್ ॥ ೧೩

---

ದ್ದರು. ಆ ಕುಂಭಗಳನ್ನು ಅತ್ತಿ ಅರಳಿ ಮೊದಲಾದ ವೃಕ್ಷಗಳ ಚಿಗುರೆಲೆಗಳಿಂದಲೂ ಕಮಲ ನೈದಿಲೆ ಮುಂತಾದ ಹೂಗಳಿಂದಲೂ ಅಲಂಕರಿಸಿದ್ದರು. ಜೇನುತುಪ್ಪ, ಮೊಸರು, ತುಪ್ಪ, ಅರಳು, ದರ್ಭೆ, ಹೂ, ಹಾಲು - ಇವು ಸಿದ್ಧವಾಗಿದ್ದವು (೭-೮). (ತಮ್ಮ ಕುಲಧರ್ಮದಲ್ಲಿ ನಡೆಯುವ) ಒಳ್ಳೆಯ ನಡತೆಯುಳ್ಳ ವೇಶ್ಯೆಯರು ಸರ್ವಾಭರಣಗಳಿಂದ ಭೂಷಿತರಾಗಿ ಬಂದಿದ್ದರು. ಚಂದ್ರನ ಕಿರಣದಂತೆ ಶುಭ್ರವಾಗಿ, ಚಿನ್ನದ ಹಿಡಿಯಿಂದಲೂ ಮಣಿಗಳಿಂದಲೂ ವಿರಾಜಿಸುವ ಚಾಮರವು ಶ್ರೀರಾಮನಿಗೋಸ್ಕರ ಸಿದ್ಧವಾಗಿತ್ತು. ಚಂದ್ರಬಿಂಬದಂತೆ ರಾರಾಜಿಸುವ ಶ್ವೇತಚ್ಛತ್ರವು ಅಭಿಷೇಕಕ್ಕೋಸ್ಕರ ಸಜ್ಜಾಗಿತ್ತು. ಬೆಳ್ಳನೆಯ ಒಂದು ಎತ್ತನ್ನೂ ಕುದುರೆಯನ್ನೂ ತಂದು ನಿಲ್ಲಿಸಿದ್ದರು (೯-೧೧). ಸವಾರಿಗೋಸ್ಕರ ಲಕ್ಷಣಯುಕ್ತವಾದ ಒಂದು ಮದಗಜವು ಕಾದಿತ್ತು. ಮಂಗಳಾರ್ಥವಾಗಿ ಎಂಟು ಮಂದಿ ಕನ್ನಿಕೆಯರು ಅಲಂಕೃತರಾಗಿ ಬಂದಿದ್ದರು. ಸಕಲ ವಾದ್ಯಗಳೂ ಸಿದ್ಧವಾಗಿದ್ದುವಲ್ಲದೆ ವಂದಿಮಾಗಧರು ಬಂದು ಅಲ್ಲಿ ಕಾದಿದ್ದರು. ಇಕ್ಷ್ವಾಕುವಂಶದಲ್ಲಿ ರಾಜ್ಯಾಭಿಷೇಕವು ಹೇಗೆ ನಡೆಯುತ್ತಿದ್ದಿತೊ ಅದೇ ವೈಭವದಲ್ಲಿ ರಾಜಕುಮಾರನಿಗೆ ಪಟ್ಟಾಭಿಷೇಕವನ್ನು

ತಥಾಜಾತೀಯಮಾದಾಯ ರಾಜಪುತ್ರಾಭಿಷೇಚನಮ್ ।
ತೇ ರಾಜವಚನಾತ್ತತ್ರ ಸಮವೇತಾ ಮಹೀಪತಿಮ್ ॥ ೧೪

ಅಪಶ್ಯಂತೋಽಬ್ರುವನ್ ಕೋ ನು ಪ್ರಾಜ್ಞೋ ನಃ ಪ್ರತಿವೇದಯೇತ್ ।
ನ ಪಶ್ಯಾಮಶ್ಚ ರಾಜಾನಮುದಿತಶ್ಚ ದಿವಾಕರಃ ॥ ೧೫

ಯೌವರಾಜ್ಯಾಭಿಷೇಕಶ್ಚ ಸಜ್ಜೋ ರಾಮಸ್ಯ ಧೀಮತಃ ।
ಇತಿ ತೇಷು ಬ್ರುವಾಣೇಷು ಸಾರ್ವಭೌಮಾನ್ ಮಹೀಪತೀನ್ ॥ ೧೬

ಅಬ್ರವೀತ್ತಾನಿದಂ ಸರ್ವಾನ್ ಸುಮಂತ್ರೋ ರಾಜಸತ್ಕೃತಃ ।
ರಾಮಂ ರಾಜ್ಞೋ ನಿಯೋಗೇನ ತ್ವರಯಾ ಪ್ರಸ್ಥಿತೋಽಸ್ಮ್ಯಹಮ್ ॥ ೧೭

ಪೂಜ್ಯಾ ರಾಜ್ಞೋ ಭವಂತಸ್ತು ರಾಮಸ್ಯ ತು ವಿಶೇಷತಃ ।
ಅಹಂ ಪೃಚ್ಛಾಮಿ ವಚನಾತ್ ಸುಖಮಾಯುಷ್ಮತಾಮಹಮ್ ॥ ೧೮

ರಾಜ್ಞಃ ಸಂಪ್ರತಿಬುದ್ಧಸ್ಯ ಯಚ್ಚಾಗಮನಕಾರಣಮ್ ।
ಇತ್ಯುಕ್ತ್ವಾಂತಃಪುರದ್ವಾರಮಾಜಗಾಮ ಪುರಾಣವಿತ್ ॥ ೧೯

---

ನಡೆಸುವುದಕ್ಕಾಗಿ ಸಕಲಸಂಭಾರಗಳೂ ಅನುವಾಗಿದ್ದವು (೧೨-೧೩). ರಾಜಾಜ್ಞೆಯಂತೆ ಬಂದು ಸೇರಿದ್ದ ಜನರೆಲ್ಲರೂ ದೊರೆಯನ್ನು ಕಾಣದೆ ಪರಸ್ಪರವಾಗಿ "ನಾವು ಇಲ್ಲಿಗೆ ಬಂದಿರುವುದನ್ನು ಯಾವ ಮಹಾಶಯನು ದಶರಥರಾಜನಿಗೆ ತಿಳಿಸಿಯಾನು ? ಮಹಾರಾಜನು ಕಾಣಿಸುವುದಿಲ್ಲ. ಸೂರ್ಯನು ಉದಯಿಸಿದ್ದಾನೆ. ಧೀಮಂತನಾದ ಶ್ರೀರಾಮನ ಪಟ್ಟಾಭಿಷೇಕಕ್ಕೆ ಸಾಮಗ್ರಿಗಳೆಲ್ಲವೂ ಸಿದ್ಧವಾಗಿವೆಯಲ್ಲ?" ಎಂದು ಮಾತನಾಡಿಕೊಳ್ಳುತ್ತಿದ್ದರು (೧೪-೧೫). ಆಗ ಸುಮಂತ್ರನು ಸುಪ್ರಸಿದ್ಧರಾದ ಆ ರಾಜರುಗಳನ್ನುದ್ದೇಶಿಸಿ "ಮಹನೀಯರೆ, ಮಹಾರಾಜನ ಅಪ್ಪಣೆಯಂತೆ ಶ್ರೀರಾಮನನ್ನು ಶೀಘ್ರವಾಗಿ ಕರೆತರಲು ನಾನು ಹೊರಟಿದ್ದೇನೆ. ನೀವೆಲ್ಲರೂ ನಮ್ಮ ಮಹಾರಾಜನಿಗೂ ವಿಶೇಷವಾಗಿ ಶ್ರೀರಾಮನಿಗೂ ಗೌರವಪಾತ್ರರಾಗಿದ್ದೀರಿ. ನಿದ್ರೆಯಿಂದ ಎದ್ದಿರುವ ಮಹಾರಾಜನಿಗೆ ನೀವೆಲ್ಲರೂ ಸುವಿಶಯನವನ್ನು ಕೇಳಿದಿರೆಂದೂ ನೀವು ಪಟ್ಟಾಭಿಷೇಕದಲ್ಲಿ ಭಾಗವಹಿಸಲು ಬಂದಿರುವಿರೆಂದೂ ತಿಳಿಸುತ್ತೇನೆ" ಎಂದು ಹೇಳಿದನು (೧೬-೧೮). ಅನಂತರ ಬಹಳ ಅನುಭವಶಾಲಿಯಾದ ಆ ಸೂತನು ತನಗೆ ಸರ್ವದಾ ಪ್ರವೇಶವುಳ್ಳ ಅಂತಃ

ಸದಾ ಸಕ್ತಂ ಚ ಯದ್ವೇಶ್ಮ ಸುಮಂತ್ರಃ ಪ್ರವಿವೇಶ ಹ ।
ತುಷ್ಟಾವಾಸ್ಯ ತದಾ ವಂಶಂ ಪ್ರವಿಶ್ಯ ಚ ವಿಶಾಂಪತೇಃ ॥ ೨೦

ಶಯನೀಯಂ ನರೇಂದ್ರಸ್ಯ ತದಾಸಾದ್ಯ ವ್ಯತಿಷ್ಠತ ।
ಸೋಽತ್ಯಾಸಾದ್ಯ ತು ತದ್ವೇಶ್ಮ ತಿರಸ್ಕರಣಮಂತರಾ ॥ ೨೧

ಆಶೀರ್ಭಿರ್ಗುಣಯುಕ್ತಾಭಿರಭಿತುಷ್ಟಾವ ರಾಘವಮ್ ।
ಸೋಮಸೂರ್ಯೌ ಚ ಕಾಕುತ್ಸ್ಥ ಶಿವವೈಶ್ರವಣಾವಪಿ ॥ ೨೨

ವರುಣಶ್ಚಾಗ್ನಿರಿಂದ್ರಶ್ಚ ವಿಜಯಂ ಪ್ರದಿಶಂತು ತೇ ।
ಗತಾ ಭಗವತೀ ರಾತ್ರಿರಹಃ ಶಿವಮುಪಸ್ಥಿತಮ್ ॥ ೨೩

ಬುಧ್ಯಸ್ವ ನೃಪಶಾರ್ದೂಲ ಕುರು ಕಾರ್ಯಮನಂತರಮ್ ।
ಬ್ರಾಹ್ಮಣಾ ಬಲಮುಖ್ಯಾಶ್ಚ ನೈಗಮಾಶ್ಚಾಗತಾ ನೃಪ ॥ ೨೪

ದರ್ಶನಂ ತೇಽಭಿಕಾಂಕ್ಷಂತೇ ಪ್ರತಿಬುಧ್ಯಸ್ವ ರಾಘವ ।
ಸ್ತುವಂತಂ ತಂ ತದಾ ಸೂತಂ ಸುಮಂತ್ರಂ ಮಂತ್ರಕೋವಿದಮ್ ॥ ೨೫

ಪ್ರತಿಬುಧ್ಯ ತತೋ ರಾಜಾ ಇದಂ ವಚನಮಬ್ರವೀತ್ ।
ರಾಮಮಾನಯ ಸೂತೇತಿ ಯದಸ್ಯಭಿಹಿತೋಽನಯಾ ॥ ೨೬

---

ಪುರಕ್ಕೆ ಹಿಂದಿರುಗಿ ಹೋದನು. ಆತನು ದಶರಥನ ಕುಲವೈಭವವನ್ನು ಕೊಂಡಾಡುತ್ತ ಮಹಾರಾಜನ ಶಯನ ಮಂದಿರಕ್ಕೆ ಹೋಗಿ ತೆರೆಯ ಹೊರಗಡೆ ನಿಂತು ಶುಭಾಶಂಸನೆಗಳನ್ನು ಮಾಡುತ್ತ ಹೀಗೆಂದನು (೧೯-೨೧) : "ಹೇ ಕಕುತ್ಸ್ಥವಂಶೋದ್ಭವ! ಚಂದ್ರಾದಿತ್ಯರೂ ಶಿವಕುಬೇರರೂ ವರುಣನೂ ಇಂದ್ರಾಗ್ನಿಗಳೂ ನಿನಗೆ ಶ್ರೇಯಸ್ಸನ್ನುಂಟುಮಾಡಲಿ. ಪೂಜ್ಯವಾದ ರಾತ್ರಿಯು ಕಳೆಯಿತು. ಮಂಗಳ ಕರವಾದ ಸುಪ್ರಭಾತವು ಬಂದಿತು (೨೨-೨೩). ಹೇ ರಾಜಶ್ರೇಷ್ಠ, ಎಚ್ಚರಗೊಳ್ಳು. ಮುಂದಿನ ಕರ್ತವ್ಯವನ್ನು ನೆರವೇರಿಸು. ಬ್ರಾಹ್ಮಣರೂ ಸೇನಾಪತಿಗಳೂ ವರ್ತಕರೂ ಆಗಮಿಸಿ ನಿನ್ನ ದರ್ಶನಕ್ಕಾಗಿ ಕಾದಿದ್ದಾರೆ. ಹೇ ರಘುವಂಶ ತಿಲಕ! ಎಚ್ಚರವಾಗಲಿ" ಎಂದನು (೨೪). ಹೀಗೆ ಸ್ತೋತ್ರ ಮಾಡಿದವನು ಸೂತನಾದ ಸುಮಂತ್ರನೆಂದರಿತು ದಶರಥನು "ಸೂತ, ರಾಮನನ್ನು ಕರೆದುಕೊಂಡು ಬಾ ಎಂದು ಇವಳು ಹೇಳಿದಳಲ್ಲವೆ? ಈ ನನ್ನ ಆಜ್ಞೆಯನ್ನು ನಡೆಸದಿರಲು ಕಾರಣವೇನು? ನನಗೇನೂ ನಿದ್ರೆ

ಕಿಮಿದಂ ಕಾರಣಂ ಯೇನ ಮಮಾಜ್ಞಾ ಪ್ರತಿಹನ್ಯತೇ ।
ನ ಚೈವ ಸಂಪ್ರಸುಪ್ತೋಽಹಮಾನಯೇಹಾಶು ರಾಘವಮ್ ॥ ೨೭

ಇತಿ ರಾಜಾ ದಶರಥಃ ಸೂತಂ ತತ್ರಾನ್ವಶಾತ್ ಪುನಃ ।
ಸ ರಾಜವಚನಂ ಶ್ರುತ್ವಾ ಶಿರಸಾ ಪ್ರತಿಪೂಜ್ಯ ತಮ್ ॥ ೨೮

ನಿರ್ಜಗಾಮ ನೃಪಾವಾಸಾನ್ಮನ್ಯಮಾನಃ ಪ್ರಿಯಂ ಮಹತ್ ।
ಪ್ರಪನ್ನೋ ರಾಜಮಾರ್ಗಂ ಚ ಪತಾಕಾಧ್ವಜಶೋಭಿತಮ್ ॥ ೨೯

ಹೃಷ್ಟಃ ಪ್ರಮುದಿತಃ ಸೂತೋ ಜಗಾಮಾಶು ವಿಲೋಕಯನ್ ।
ಸ ಸೂತಸ್ತತ್ರ ಶುಶ್ರಾವ ರಾಮಾಧಿಕರಣಾಃ ಕಥಾಃ ॥ ೩೦

ಅಭಿಷೇಚನಸಂಯುಕ್ತಾಃ ಸರ್ವಲೋಕಸ್ಯ ಹೃಷ್ಟವತ್ ।
ತತೋ ದದರ್ಶ ರುಚಿರಂ ಕೈಲಾಸಶಿಖರಪ್ರಭಮ್ ॥ ೩೧

ರಾಮವೇಶ್ಮ ಸುಮಂತ್ರಸ್ತು ಶಕ್ರವೇಶ್ಮಸಮಪ್ರಭಮ್ ।
ಮಹಾಕವಾಟಸಂಯುಕ್ತಂ ವಿತರ್ದಿಶತಶೋಭಿತಮ್ ॥ ೩೨

ಕಾಂಚನಪ್ರತಿಮೈಕಾಗ್ರಂ ಮಣಿವಿದ್ರುಮತೋರಣಮ್ ।
ಶಾರದಾಭ್ರಘನಪ್ರಖ್ಯಂ ದೀಪ್ತಂ ಮೇರುಗುಹೋಪಮಮ್ ॥ ೩೩

---

ಬಂದಿಲ್ಲ. ಕೂಡಲೆ ರಾಮನನ್ನು ಇಲ್ಲಿಗೆ ಕರೆದುಕೊಂಡು ಬಾ" ಎಂದು ಆಜ್ಞಾಪಿಸಿದನು (೨೫-೨೭). ಆಗ ಸುಮಂತ್ರನು ರಾಜಾಜ್ಞೆಯನ್ನು ಶಿರಸಾ ವಹಿಸಿ ಅದೊಂದು ಸಂತೋಷಕರವಾದ ಕಾರ್ಯವೆಂದು ಭಾವಿಸಿ ಪುನಃ ಅಲ್ಲಿಂದ ಹೊರಟನು. ಅವನು ಧ್ವಜಪಟಗಳಿಂದ ಶೋಭಿಸುತ್ತಿದ್ದ ರಾಜಬೀದಿಗೆ ಬಂದು ಆನಂದದಿಂದ ಸುತ್ತಲೂ ನೋಡುತ್ತ ಹೋದನು. ಪ್ರಜೆಗಳು ರಾಮನ ವಿಷಯವನ್ನೇ ಕುರಿತು ಮಾತನಾಡುತ್ತಿರುವುದು ಸುಮಂತ್ರನಿಗೆ ಕೇಳಿಸುತ್ತಿತ್ತು (೨೮-೩೦). ಎಲ್ಲರೂ ರಾಮನ ಪಟ್ಟಾಭಿಷೇಕವನ್ನುದ್ದೇಶಿಸಿ ಹರ್ಷದಿಂದ ಸಂಭಾಷಿಸುತ್ತಿದ್ದರು. ಸುಮಂತ್ರನು ಮುಂದೆ ಹೋಗುತ್ತ ಕೈಲಾಸ ಶಿಖರದಂತೆ ಶುಭ್ರವರ್ಣದಿಂದ ರಂಜಿಸುವ ಶ್ರೀರಾಮನ ಅರಮನೆಯನ್ನು ಕಂಡನು. ಆ ಭವನವು ದೇವೇಂದ್ರನ ಭವನದಂತೆ ಸುಂದರವಾಗಿತ್ತು. ಅದು ಮಹಾದ್ವಾರದ ದೊಡ್ಡ ಬಾಗಿಲುಗಳಿಂದಲೂ ನೂರಾರು ಜಗುಲಿಗಳಿಂದಲೂ ಶೋಭಿಸುತ್ತಿತ್ತು (೩೧-೩೩). ಚಿನ್ನದ ಪ್ರತಿಮೆಗಳಿಂದಲೂ

ಮಣಿಭಿರ್ವರಮಾಲ್ಯಾನಾಂ ಸುಮಹದ್ಭಿರಲಂಕೃತಮ್ ।
ಮುಕ್ತಾಮಣಿಭಿರಾಕೀರ್ಣಂ ಚಂದನಾಗರುಧೂಪಿತಮ್ ॥ ೩೪

ಗಂಧಾನ್ಮನೋಜ್ಞಾನ್ ವಿಸೃಜದ್ದಾರ್ದುರಂ ಶಿಖರಂ ಯಥಾ ।
ಸಾರಸೈಶ್ಚ ಮಯೂರೈಶ್ಚ ನಿನದದ್ಭಿರ್ವಿರಾಜಿತಮ್ ॥ ೩೫

ಸುಕೃತೇಹಾಮೃಗಾಕೀರ್ಣಂ ಸುಕೀರ್ಣಂ ಭಕ್ತಿಭಿಸ್ತಥಾ ।
ಮನಶ್ಚಕ್ಷುಶ್ಚ ಭೂತಾನಾಮಾದದತ್ತಿಗ್ಮತೇಜಸಾ ॥ ೩೬

ಚಂದ್ರಭಾಸ್ಕರಸಂಕಾಶಂ ಕುಬೇರಭವನೋಪಮಮ್ ।
ಮಹೇಂದ್ರಧಾಮಪ್ರತಿಮಂ ನಾನಾಪಕ್ಷಿಸಮಾಕುಲಮ್ ॥ ೩೭

ಮೇರುಶೃಂಗಸಮಂ ಸೂತೋ ರಾಮವೇಶ್ಮ ದದರ್ಶ ಹ ।
ಉಪಸ್ಥಿತೈಃ ಸಮಾಕೀರ್ಣಂ ಜನೈರಂಜಲಿಕಾರಿಭಿಃ ॥ ೩೮

---

ರತ್ನ ಹವಳಗಳಿಂದ ಸಿಂಗರಿಸಿದ ಹೊರಬಾಗಿಲುಗಳಿಂದಲೂ ರಂಜಿಸುತ್ತಿತ್ತು. ಶರತ್ಕಾಲದ ಮೇಘದಂತೆ ಶುಭ್ರವಾಗಿಯೂ ಮೇರುಪರ್ವತದ ಗುಹೆಯಂತೆ ಸುವರ್ಣಮಯವಾಗಿಯೂ ಇತ್ತು (೩೩). ಚಿನ್ನದ ಹೂಗಳಿಂದಲೂ ಮಣಿಗಳಿಂದಲೂ ರಚಿಸಿದ ಮಾಲೆಗಳಿಂದ ಭೂಷಿತವಾಗಿತ್ತು. ಮುತ್ತುಗಳಿಂದ ಅಲಂಕೃತವಾಗಿ ಚಂದನ ಅಗರುಗಳ ಸುಗಂಧವು ಘಮಘಮಿಸುತ್ತಿತ್ತು (೩೪). ಮನೋಹರವಾದ ಶ್ರೀಗಂಧದ ಸುವಾಸನೆಯನ್ನು ಬೀರುವ ದರ್ದುರ ಗಿರಿಶೃಂಗದಂತೆ ವಿರಾಜಿಸುತ್ತಿತ್ತು. ಸಾರಸಪಕ್ಷಿಗಳೂ ನವಿಲುಗಳೂ ಇಂಪಾಗಿ ಧ್ವನಿಗೈಯುತ್ತಿದ್ದವು. ಗೋಡೆಗಳಲ್ಲಿಯೂ ಕಂಬಗಳಲ್ಲಿಯೂ ಸುಂದರವಾದ ತೋಳಗಳನ್ನೂ ಇತರ ನಾನಾ ಬಗೆಯ ಆಕೃತಿಗಳನ್ನೂ ಶಿಲ್ಪಿಗಳು ಕೆತ್ತಿದ್ದರು. ಆ ಭವನದ ಸೌಂದರ್ಯವು ನೋಡುವವರ ಕಣ್ಮನಗಳನ್ನು ಸೂರೆಗೊಳ್ಳುತ್ತಿದ್ದಿತು (೩೪-೩೬). ಶ್ರೀರಾಮನ ಅರಮನೆಯು ಚಂದ್ರಬಿಂಬದಂತೆ ಪ್ರಶಾಂತವಾಗಿ ಸೂರ್ಯಮಂಡಲದಂತೆ ತೇಜಸ್ವಿಯಾಗಿ ಕುಬೇರಭವನದಂತೆ ಐಶ್ವರ್ಯ ಸಮೃದ್ಧವಾಗಿ ದೇವೇಂದ್ರನ ಪ್ರಾಸಾದದಂತೆ ವೈಭವೋಪೇತವಾಗಿ ಕಂಗೊಳಿಸುತ್ತಿದ್ದಿತು. ನಾನಾಪಕ್ಷಿಗಳಿಂದ ಮನೋಹರವಾಗಿದ್ದಿತು (೩೭). ಮೇರುಶೃಂಗದಂತೆ ಉನ್ನತವಾದ ಶ್ರೀರಾಮನ ಗೃಹವನ್ನು ಸುಮಂತ್ರನು ನೋಡಿದನು. ಆ ಗೃಹದ ಬಾಗಿಲಿನಲ್ಲಿ ಬಹುಮಂದಿ ಪ್ರಜೆಗಳು ಕೈಮುಗಿದು

ಉಪಾದಾಯ ಸಮಾಕ್ರಾಂತೈಸ್ತಥಾ ಜಾನಪದೈರ್ಜನೈಃ ।
ರಾಮಾಭಿಷೇಕಸುಮುಖೈರುನ್ಮುಖೈಃ ಸಮಲಂಕೃತಮ್ ॥ ೩೯

ಮಹಾಮೇಘಸಮಪ್ರಖ್ಯಮುದಗ್ರಂ ಸುವಿಭೂಷಿತಮ್ ।
ನಾನಾರತ್ನಸಮಾಕೀರ್ಣಂ ಕುಬ್ಜಕೈರಾತಕಾವೃತಮ್ ॥ ೪೦

ಸ ವಾಜಿಯುಕ್ತೇನ ರಥೇನ ಸಾರಥಿ-
ರ್ನರಾಕುಲಂ ರಾಜಕುಲಂ ವಿಲೋಕಯನ್ ।
ವರೂಥಿನಾ ರಾಮಗೃಹಾಭಿಪಾತಿನಾ
ಪುರಸ್ಯ ಸರ್ವಸ್ಯ ಮನಾಂಸಿ ರಂಜಯನ್ ॥ ೪೧

ತತಃ ಸಮಾಸಾದ್ಯ ಮಹಾಧನಂ ಮಹತ್
ಪ್ರಹೃಷ್ಟರೋಮಾ ಸ ಬಭೂವ ಸಾರಥಿಃ ।
ಮೃಗೈರ್ಮಯೂರೈಶ್ಚ ಸಮಾಕುಲೋಲ್ಬಣಂ
ಗೃಹಂ ವರಾರ್ಹಸ್ಯ ಶಚೀಪತೇರಿವ ॥ ೪೨

---

ಕೊಂಡು ರಾಮನ ದರ್ಶನಕ್ಕಾಗಿ ಕಾದಿದ್ದರು. ರಾಮಾಭಿಷೇಕದ ವಾರ್ತೆಯನ್ನು ಕೇಳಿ ಗ್ರಾಮಾಂತರದ ಜನರು ಹರ್ಷದಿಂದ ಬೀಗುತ್ತ ಕಾಣಿಕೆಗಳನ್ನು ತಂದು ಉತ್ಸಾಹದಿಂದ ರಾಮನನ್ನು ಎದುರುನೋಡುತ್ತಿದ್ದರು (೩೮-೩೯). ಆ ಭವನವು ಮಹಾಮೇಘದಂತೆ ಗಂಭೀರವೂ ಪ್ರಶಸ್ತವೂ ಆಗಿದ್ದಿತಲ್ಲದೆ ಚೆನ್ನಾಗಿ ಅಲಂಕರಿಸಲ್ಪಟ್ಟಿತ್ತು. ಎಲ್ಲೆಲ್ಲಿಯೂ ಶ್ರೇಷ್ಠವಾದ ವಸ್ತುಗಳು ಕಂಗೊಳಿಸುತ್ತಿದ್ದವು. ಸೇವಕರಾದ ಕುಬ್ಜರೂ ಕಿರಾತಜಾತಿಯವರೂ ತುಂಬಿದ್ದರು (೪೦). ಆ ಸಮಯದಲ್ಲಿ ಸಾರಥಿಯಾದ ಸುಮಂತ್ರನು ಕುದುರೆಗಳನ್ನು ಹೂಡಿದ ತನ್ನ ರಥವನ್ನು ನಡೆಸುತ್ತ ಜನಸಂದಣಿಯನ್ನು ನೋಡುತ್ತ ಶ್ರೀರಾಮನ ಗೃಹಕ್ಕೆ ಅಭಿಮುಖವಾಗಿ ಹೋದನು. ಸಮಸ್ತ ಜನರಿಗೂ ಸುಮಂತ್ರನ ರಥವನ್ನು ಕಂಡು ಸಂತೋಷವಾಯಿತು (೪೧). ಸಾಕಿದ ಮೃಗಗಳಿಂದಲೂ ನವಿಲುಗಳಿಂದಲೂ ರಮಣೀಯವಾಗಿ ಒಪ್ಪುತ್ತ ಇಂದ್ರಭವನದಂತೆ ಐಶ್ವರ್ಯಸಮೃದ್ಧವಾದ ಶ್ರೀರಾಮನ ಮಂದಿರವನ್ನು ಪ್ರವೇಶಿಸುವಾಗ ಸುಮಂತ್ರನಿಗೆ ಆನಂದದಿಂದ ರೋಮಾಂಚವಾಯಿತು (೪೨).

ಸ ತತ್ರ ಕೈಲಾಸನಿಭಾಃ ಸ್ವಲಂಕೃತಾಃ
ಪ್ರವಿಶ್ಯ ಕಕ್ಷ್ಯಾಸ್ತ್ರಿದಶಾಲಯೋಪಮಾಃ ।
ಪ್ರಿಯಾನ್ನರಾನ್ ರಾಮಮತೇ ಸ್ಥಿತಾನ್ ಬಹೂ-
ನಪೋಹ್ಯ ಶುದ್ಧಾಂತಮುಪಸ್ಥಿತೋ ರಥೀ ॥ ೪೩
ಸ ತತ್ರ ಶುಶ್ರಾವ ಚ ಹರ್ಷಯುಕ್ತಾ
ರಾಮಾಭಿಷೇಕಾರ್ಥಯುತಾ ಜನಾನಾಮ್ ।
ನರೇಂದ್ರಸೂನೋರಭಿಮಂಗಲಾರ್ಥಾಃ
ಸರ್ವಸ್ಯ ಲೋಕಸ್ಯ ಗಿರಃ ಪ್ರಸೃಷ್ಟಾಃ ॥ ೪೪
ಮಹೇಂದ್ರಸದ್ಮಪ್ರತಿಮಂ ತು ವೇಶ್ಮ
ರಾಮಸ್ಯ ರಮ್ಯಂ ಮೃಗಪಕ್ಷಿಜುಷ್ಟಮ್ ।
ದದರ್ಶ ಮೇರೋರಿವ ಶೃಂಗಮುಚ್ಚಂ
ವಿಭ್ರಾಜಮಾನಂ ಪ್ರಭಯಾ ಸುಮಂತ್ರಃ ॥ ೪೫
ಉಪಸ್ಥಿತೈರಂಜಲಿಕಾರಿಭಿಶ್ಚ
ಸೋಪಾಯನೈರ್ಜಾನಪದೈರನೇಕೈಃ ।
ಕೋಟ್ಯಾ ಪರಾರ್ಧೈಶ್ಚ ವಿಮುಕ್ತಯಾನೈಃ
ಸಮಾಕುಲಂ ದ್ವಾರಪಥಂ ದದರ್ಶ ॥ ೪೬

---

ಆತನು ಕೈಲಾಸದಂತೆಯೂ ದೇವತೆಗಳ ಭವನದಂತೆಯೂ ಅಲಂಕೃತವಾಗಿದ್ದ ಅನೇಕ ಕಕ್ಷ್ಯಗಳನ್ನು ದಾಟಿ ಶ್ರೀರಾಮನನ್ನು ಪ್ರೀತಿಸುವ ಜನಜಂಗುಳಿಯನ್ನು ಒತ್ತರಿಸಿಕೊಂಡು ಅಂತಃಪುರದ ಸಮೀಪಕ್ಕೆ ಹೋದನು (೪೩). ಹೋಗುವಾಗ ಸುಮಂತ್ರನು ರಾಜಕುಮಾರನಾದ ಶ್ರೀರಾಮನ ಪಟ್ಟಾಭಿಷೇಕದ ವಿಷಯದಲ್ಲಿ ಜನರು ಹರ್ಷೋದ್ಗಾರ ಮಾಡುವುದನ್ನು ಕೇಳಿದನು (೪೪). ಶ್ರೀರಾಮನ ಗೃಹವು ಇಂದ್ರಭವನದಂತೆ ವೈಭವಪೂರ್ಣವಾಗಿದ್ದು ಸಾಕಿದ ಮೃಗಪಕ್ಷಿಗಳಿಂದ ರಮ್ಯವಾಗಿತ್ತು. ಮೇರುಶೃಂಗದಂತೆ ಸುವರ್ಣಕಾಂತಿಯಿಂದ ರಂಜಿಸುತ್ತಿರುವುದು ಸಾರಥಿಗೆ ಗೋಚರಿಸಿತು (೪೫). ಅಂತಃಪುರ ದ್ವಾರದಲ್ಲಿಯೂ ಕೂಡ ಕೋಟಿಗಟ್ಟಲೆ ಪ್ರಜೆಗಳು ಕಾಣಿಕೆಗಳನ್ನು ತಂದು ಪ್ರಾಂಜಲಿಗಳಾಗಿ ಶ್ರೀರಾಮನ ದರ್ಶನಕ್ಕಾಗಿ ಕಾದಿದ್ದರು. ಅವರು ತಮ್ಮ ವಾಹನಗಳನ್ನು ಹೊರಗಡೆಯಲ್ಲಿಯೇ ಬಿಟ್ಟು ಬಂದಿದ್ದರು (೪೬).

ತತೋ ಮಹಾಮೇಘಮಹೀಧರಾಭಂ
ಪ್ರಭಿನ್ನಮತ್ಯಂಕುಶಮಪ್ರಸಹ್ಯಮ್ ।
ರಾಮೌಪವಾಹ್ಯಂ ರುಚಿರಂ ದದರ್ಶ
ಶತ್ರುಂಜಯಂ ನಾಗಮುದಗ್ರಕಾಯಮ್ ॥ ೪೭

ಸ್ವಲಂಕೃತಾನ್ ಸಾಶ್ವರಥಾನ್ ಸಕುಂಜರಾ-
ನಮಾತ್ಯಮುಖ್ಯಾನ್ ಶತಶಶ್ಚ ವಲ್ಲಭಾನ್ ।
ವ್ಯಪೋಹ್ಯ ಸೂತಃ ಸಹಿತಾನ್ ಸಮಂತತಃ
ಸಮೃದ್ಧಮಂತಃಪುರಮಾವಿವೇಶ ॥ ೪೮

ತದದ್ರಿಕೂಟಾಚಲಮೇಘಸಂನಿಭಂ
ಮಹಾವಿಮಾನೋತ್ತಮವೇಶ್ಮಸಂಘವತ್ ।
ಅಪಾರ್ಯಮಾಣಃ ಪ್ರವಿವೇಶ ಸಾರಥಿಃ
ಪ್ರಭೂತರತ್ನಂ ಮಕರೋ ಯಥಾರ್ಣವಮ್ ॥ ೪೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚದಶಃ ಸರ್ಗಃ

ಅಂತಃಪುರದ ಸಮೀಪದಲ್ಲಿ ಶ್ರೀರಾಮನ ವಾಹನವಾದ ಶತ್ರುಂಜಯವೆಂಬ ಸುಂದರಾಕೃತಿಯ ಮದ್ದಾನೆಯು ಗೋಚರಿಸಿತು. ಅದು ಮಹಾಮೇಘದಂತೆ ಕಪ್ಪಾಗಿಯೂ ಬೆಟ್ಟದಂತೆ ಬೃಹದಾಕಾರವಾಗಿಯೂ ಇದ್ದಿತು. ಅದನ್ನು ನೋಡಿದರೆ ಅಂಕುಶದ ಅಂಕೆಗೆ ಒಳಪಡದಷ್ಟು ದುರ್ಧರ್ಷವೆಂದು ತೋರುತ್ತಿತ್ತು (೪೭). ಅಲ್ಲಿದ್ದ ಅಶ್ವ, ರಥ, ಗಜಗಳು ಅಲಂಕೃತವಾಗಿದ್ದುವಲ್ಲದೆ ಶ್ರೀರಾಮನಿಗೆ ಆಪ್ತರಾದ ಅಧಿಕಾರಿಗಳೂ ಮಿತ್ರರೂ ವಸ್ತ್ರಾಭರಣಗಳಿಂದ ಭೂಷಿತರಾಗಿ ಬಂದು ಸೇರಿದ್ದರು. ಅವರನ್ನೆಲ್ಲ ದಾಟಿ ಸುಮಂತ್ರನು ಅಂತಃಪುರದ ಸಮೀಪಕ್ಕೆ ಹೋದನು (೪೮). ಅಲ್ಲಿ ದೊಡ್ಡ ದೊಡ್ಡ ಉಪ್ಪರಿಗೆಗಳಿರುವ ಗೃಹಪಂಕ್ತಿಯು ಬೆಟ್ಟಗಳ ಸಾಲಿನಂತೆಯೂ ಚಲಿಸದ ಮೇಘ ಸಮೂಹದಂತೆಯೂ ಕಂಗೊಳಿಸುತ್ತಿತ್ತು. ಸುಮಂತ್ರನನ್ನು ಯಾರೂ ತಡೆಯಲಿಲ್ಲ. ಮಹಾಮತ್ಸ್ಯವು ಸಮುದ್ರದಲ್ಲಿ ನುಗ್ಗಿಹೋಗುವಂತೆ ಸುಮಂತ್ರನು ಅಂತಃಪುರವನ್ನು ಪ್ರವೇಶಿಸಿದನು (೪೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹದಿನೈದನೆಯ ಸರ್ಗ

## ಷೋಡಶಃ ಸರ್ಗಃ

### ರಾಮಪ್ರಸ್ಥಾನಮ್

ಸ ತದಂತಃಪುರದ್ವಾರಂ ಸಮತೀತ್ಯ ಜನಾಕುಲಮ್ ।
ಪ್ರವಿವಿಕ್ತಾಂ ತತಃ ಕಕ್ಷ್ಯಾಮಾಸಸಾದ ಪುರಾಣವಿತ್ ॥ ೧

ಪ್ರಾಸಕಾರ್ಮುಕಬಿಭ್ರದ್ಭಿರ್ಯುವಭಿರ್ಮೃಷ್ಟಕುಂಡಲೈಃ ।
ಅಪ್ರಮಾದಿಭಿರೇಕಾಗ್ರೈಃ ಸನುರಕ್ತೈರಧಿಷ್ಠಿತಾಮ್ ॥ ೨

ತತ್ರ ಕಾಷಾಯಿಣೋ ವೃದ್ಧಾನ್ ವೇತ್ರಪಾಣೀನ್ ಸ್ವಲಂಕೃತಾನ್ ।
ದದರ್ಶ ನಿಷ್ಠಿತಾನ್ ದ್ವಾರಿ ಸ್ತ್ರ್ಯಧ್ಯಕ್ಷಾನ್ ಸುಸಮಾಹಿತಾನ್ ॥ ೩

ತೇ ಸಮೀಕ್ಷ್ಯ ಸಮಾಯಾಂತಂ ರಾಮಪ್ರಿಯಚಿಕೀರ್ಷವಃ ।
ಸಹಸೋತ್ಪತಿತಾಃ ಸರ್ವೇ ಸ್ವಾಸನೇಭ್ಯಃ ಸಸಂಭ್ರಮಮ್ ॥ ೪

## ಸರ್ಗ ೧೬

**ಸುಮಂತ್ರನು ದಶರಥನ ಆಜ್ಞೆಯನ್ನು ಶ್ರೀರಾಮನಿಗೆ ತಿಳಿಸುವುದು. ಶ್ರೀರಾಮನು ದಶರಥನನ್ನು ನೋಡಲು ಹೊರಡುವುದು.**

ಅನುಭವಶಾಲಿಯಾದ ಸುಮಂತ್ರನು ಜನನಿಬಿಡವಾಗಿದ್ದ ಅಂತಃಪುರದ್ವಾರವನ್ನು ದಾಟಿ ಹೆಚ್ಚು ಜನರಿಲ್ಲದ ಒಳಗಿನ ಕಕ್ಷ್ಯೆಗೆ ಹೋದನು. ಅಲ್ಲಿ ಉತ್ತಮ ಕುಂಡಲಗಳನ್ನು ಧರಿಸಿದ ತರುಣರು ಪ್ರಾಸ, ಧನುಸ್ಸು ಮುಂತಾದ ಆಯುಧಗಳನ್ನು ಧರಿಸಿ ಜಾಗರೂಕತೆಯಿಂದ ಕಾವಲಿದ್ದರು. ಅವರು ರಾಜಭಕ್ತಿಯಿಂದಲೂ ಶ್ರದ್ಧೆಯಿಂದಲೂ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದರು (೧-೨). ಮತ್ತು ವೃದ್ಧರಾದ ಕಂಚುಕಿಗಳು ಬೆತ್ತವನ್ನು ಹಿಡಿದು ಬಾಗಿಲಲ್ಲಿ ಎಚ್ಚರಿಕೆಯಿಂದ ನಿಂತಿದ್ದರು. ಅವರು ಕೆಂಪುವಸ್ತ್ರವನ್ನು ಧರಿಸಿ ತಮ್ಮನ್ನು ಅಲಂಕರಿಸಿಕೊಂಡಿದ್ದರು. ಅವರೆಲ್ಲರಿಗೂ ಒಬ್ಬ ಸ್ತ್ರೀಯು ಮೇಲಧಿಕಾರಿಯಾಗಿದ್ದಳು (೩). ಸುಮಂತ್ರನು ಆ ಸ್ಥಳವನ್ನು ಪ್ರವೇಶಿಸಿದೊಡನೆ ಅವರೆಲ್ಲರೂ ತಮ್ಮ ಆಸನಗಳಿಂದ ಥಟ್ಟನೆ ಎದ್ದು ನಿಂತು ಗೌರವಿಸಿದರು. ಸುಮಂತ್ರನು ಶ್ರೀರಾಮನ ಪ್ರೀತಿಪಾತ್ರನೆಂಬುದು ಅವರಿಗೆ ತಿಳಿದಿತ್ತು (೪).

ತಾನುವಾಚ ವಿನೀತಾತ್ಮಾ ಸೂತಪುತ್ರಃ ಪ್ರದಕ್ಷಿಣಃ ।
ಕ್ಷಿಪ್ರಮಾಖ್ಯಾತ ರಾಮಾಯ ಸುಮಂತ್ರೋ ದ್ವಾರಿ ತಿಷ್ಠತಿ ॥ ೫

ತೇ ರಾಮಮುಪಸಂಗಮ್ಯ ಭರ್ತುಃ ಪ್ರಿಯಚಿಕೀರ್ಷವಃ ।
ಸಹಭಾರ್ಯಾಯ ರಾಮಾಯ ಕ್ಷಿಪ್ರಮೇವಾಚಚಕ್ಷಿರೇ ॥ ೬

ಪ್ರತಿವೇದಿತಮಾಜ್ಞಾಯ ಸೂತಮಭ್ಯಂತರಂ ಪಿತುಃ ।
ತತ್ರೈವಾನಾಯಯಾಮಾಸ ರಾಘವಃ ಪ್ರಿಯಕಾಮ್ಯಯಾ ॥ ೭

ತಂ ವೈಶ್ರವಣಸಂಕಾಶಮುಪವಿಷ್ಟಂ ಸ್ವಲಂಕೃತಮ್ ।
ದದರ್ಶ ಸೂತಃ ಪರ್ಯಂಕೇ ಸೌವರ್ಣೇ ಸೋತ್ತರಚ್ಛದೇ ॥ ೮

ವರಾಹರುಧಿರಾಭೇಣ ಶುಚಿನಾ ಚ ಸುಗಂಧಿನಾ ।
ಅನುಲಿಪ್ತಂ ಪರಾರ್ಧ್ಯೇನ ಚಂದನೇನ ಪರಂತಪಮ್ ॥ ೯

ಸ್ಥಿತಯಾ ಪಾರ್ಶ್ವತಶ್ಚಾಪಿ ವಾಲವ್ಯಜನಹಸ್ತಯಾ ।
ಉಪೇತಂ ಸೀತಯಾ ಭೂಯಶ್ಚಿತ್ರಯಾ ಶಶಿನಂ ಯಥಾ ॥ ೧೦

---

ಕಾರ್ಯಚತುರನಾದ ಆ ಸಾರಥಿಯು ಕಾವಲುಗಾರನನ್ನು ಕುರಿತು ನಮ್ರಭಾವದಿಂದ "ಸುಮಂತ್ರನು ಬಂದು ಬಾಗಿಲಲ್ಲಿ ಕಾದಿರುವನೆಂದು ಶ್ರೀರಾಮನಿಗೆ ಕೂಡಲೆ ತಿಳಿಸಿರಿ" ಎಂದನು. ದ್ವಾರಪಾಲಕರು ತಮ್ಮ ಒಡೆಯನಿಗೆ ಸಂತೋಷದ ಸುದ್ದಿಯನ್ನು ತಂದಿದ್ದೇವೆಂದು ಧಾವಿಸುತ್ತ ಹೋಗಿ ಪತ್ನೀಸಮೇತನಾಗಿ ಕುಳಿತಿದ್ದ ಶ್ರೀರಾಮನಿಗೆ ಈ ವಿಷಯವನ್ನು ಅರಿಕೆಮಾಡಿದರು (೫-೬). ಆಗ ರಾಘವನು ತನ್ನ ತಂದೆಗೆ ಆ ಸೂತನು ಪರಮಾಪ್ತನೆಂಬುದನ್ನು ಗ್ರಹಿಸಿ ತಾನಿದ್ದ ಅಂತಃಪುರದೊಳಕ್ಕೆ ಸುಮಂತ್ರನನ್ನು ಕರೆಯಿಸಿದನು. ಸುಮಂತ್ರನನ್ನು ವಿಶ್ವಾಸದಿಂದ ಕಂಡರೆ ತಂದೆಗೆ ಸಂತೋಷವಾಗುವುದೆಂದು ಅವನ ಆಶಯವಾಗಿತ್ತು (೭). ಸುಮಂತ್ರನು ಒಳಗೆ ಹೋಗಿ ಕುಬೇರನಂತೆ ಉದಾರಶೀಲನಾದ ಶ್ರೀರಾಮನನ್ನು ಕಂಡನು. ಅವನು ಸರ್ವಾಲಂಕಾರಭೂಷಿತನಾಗಿ ಮೇಲುಹೊದಿಕೆಯನ್ನು ಹಾಸಿದ್ದ ಸುವರ್ಣಮಂಚದ ಮೇಲೆ ಕುಳಿತಿದ್ದನು (೮). ವರಾಹರುಧಿರದಂತೆ ಕೆಂಪಾಗಿ ಸುಗಂಧವನ್ನು ಬೀರುವ ಶ್ರೇಷ್ಠವಾದ ಚಂದನವನ್ನು ಲೇಪಿಸಿಕೊಂಡಿದ್ದನು. ಶ್ರೀರಾಮನ ಬಳಿಯಲ್ಲಿ ಸೀತೆಯು ಬೀಸಣಿಗೆಯನ್ನು ಹಿಡಿದು ಕುಳಿತಿದ್ದಳು. ಆಗ ರಾಮನು ಚಿತ್ರಾ

ತಂ ತಪಂತಮಿವಾದಿತ್ಯಮುಪಪನ್ನಂ ಸ್ವತೇಜಸಾ ।
ಪಪಂದೇ ವರದಂ ಪಂದೀ ವಿನಯಜ್ಞೋ ವಿನೀತವತ್ ॥ ೧೧

ಪ್ರಾಂಜಲಿಸ್ತು ಸುಖಂ ಪೃಷ್ಟ್ವಾ ವಿಹಾರಶಯನಾಸನೇ ।
ರಾಜಪುತ್ರಮುವಾಚೇದಂ ಸುಮಂತ್ರೋ ರಾಜಸತ್ಕೃತಃ ॥ ೧೨

ಕೌಸಲ್ಯಾ ಸುಪ್ರಜಾ ರಾಮ ಪಿತಾ ತ್ವಾಂ ದ್ರಷ್ಟುಮಿಚ್ಛತಿ ।
ಮಹಿಷ್ಯಾ ಸಹ ಕೈಕೇಯ್ಯಾ ಗಮ್ಯತಾಂ ತತ್ರ ಮಾ ಚಿರಮ್ ॥ ೧೩

ಏವಮುಕ್ತಸ್ತು ಸಂಹೃಷ್ಟೋ ನರಸಿಂಹೋ ಮಹಾದ್ಯುತಿಃ ।
ತತಃ ಸಂಮಾನಯಾಮಾಸ ಸೀತಾಮಿದಮುವಾಚ ಹ ॥ ೧೪

ದೇವಿ ದೇವಶ್ಚ ದೇವೀ ಚ ಸಮಾಗಮ್ಯ ಮದಂತರೇ ।
ಮಂತ್ರಯೇತೇ ಧ್ರುವಂ ಕಿಂಚಿದಭಿಷೇಚನಸಂಹಿತಮ್ ॥ ೧೫

ಲಕ್ಷಯಿತ್ವಾ ಹ್ಯಭಿಪ್ರಾಯಂ ಪ್ರಿಯಕಾಮಾ ಸುದಕ್ಷಿಣಾ ।
ಸಂಚೋದಯತಿ ರಾಜಾನಂ ಮದರ್ಥಂ ಮದಿರೇಕ್ಷಣೇ ॥ ೧೬

---

ನಕ್ಷತ್ರದಿಂದ ಕೂಡಿದ ಪೂರ್ಣಚಂದ್ರನಂತೆ ಪ್ರಕಾಶಿಸುತ್ತಿದ್ದನು (೯-೧೦). ತನ್ನ ಒಂದು ತೇಜೋವಿಶೇಷದಿಂದ ಆದಿತ್ಯನಂತೆ ಜ್ವಲಿಸುತ್ತಿದ್ದ ವರದನಾದ ರಾಮನ ಸಮೀಪಕ್ಕೆ ಹೋಗಿ ಸುಮಂತ್ರನು ವಿನಯದಿಂದ ನಮಸ್ಕರಿಸಿದನು. ಅವನು ಬದ್ಧಾಂಜಲಿಯಾಗಿ ನಿಂತು ಆ ರಾಜಕುಮಾರನ ಸಂಚಾರ ನಿದ್ರೆ ಮುಂತಾದವುಗಳಲ್ಲಿ ಕ್ಷೇಮವನ್ನು ವಿಚಾರಿಸಿ ಹೀಗೆಂದನು (೧೧-೧೨) : "ಶ್ರೀರಾಮ, ನಿನ್ನನ್ನು ಪುತ್ರನನ್ನಾಗಿ ಪಡೆದ ಕೌಸಲ್ಯಾದೇವಿಯು ಭಾಗ್ಯವಂತೆ. ನಿನ್ನ ತಂದೆಯು ನಿನ್ನನ್ನು ನೋಡ ಬೇಕೆಂದಿರುವನು. ಅವನು ರಾಣಿಯಾದ ಕೈಕೇಯೀದೇವಿಯ ಬಳಿಯಲ್ಲಿದ್ದಾನೆ. ನೀನು ಬೇಗನೆ ಅಲ್ಲಿಗೆ ಹೋಗಬೇಕು" ಎಂದನು (೧೩). ಆಗ ಪುರುಷಶ್ರೇಷ್ಠನೂ ತೇಜಸ್ವಿಯೂ ಆದ ಶ್ರೀರಾಮನು ಸಂತೋಷದಿಂದ ಒಪ್ಪಿಕೊಂಡು ಸೀತಾದೇವಿಯ ಕಡೆಗೆ ತಿರುಗಿ ಹೀಗೆ ಹೇಳಿದನು : "ದೇವಿ, ಮಹಾರಾಜನೂ ಕೈಕೇಯೀ ದೇವಿಯೂ ನನ್ನ ಪಟ್ಟಾಭಿಷೇಕದ ವಿಷಯವಾಗಿಯೇ ಆಲೋಚಿಸುತ್ತಿರಬೇಕು (೧೪-೧೫). ನನ್ನ ತಂದೆಯ ಅಭಿಪ್ರಾಯವನ್ನು ತಿಳಿದು ಇಂಗಿತಜ್ಞಳಾದ ಆ ದೇವಿಯು ನನಗೆ ಒಳ್ಳೆಯದಾಗಲೆಂದು ಬಯಸಿದ್ದಾಳೆ . (ಭರತನು ಬರುವ

ಸಾ ಪ್ರಹೃಷ್ಟಾ ಮಹಾರಾಜಂ ಹಿತಕಾಮಾನುವರ್ತಿನೀ ।
ಜನನೀ ಚಾರ್ಥಕಾಮಾ ಮೇ ಕೇಕಯಾಧಿಪತೇಃ ಸುತಾ ॥ ೧೭

ದಿಷ್ಟ್ಯಾ ಖಲು ಮಹಾರಾಜೋ ಮಹಿಷ್ಯಾ ಪ್ರಿಯಯಾ ಸಹ ।
ಸುಮಂತ್ರಂ ಪ್ರಾಹಿಣೋದ್ದೂತಮರ್ಥಕಾಮಕರಂ ಮಮ ॥ ೧೮

ಯಾದೃಶೀ ಪರಿಷತ್ತತ್ರ ತಾದೃಶೋ ದೂತ ಆಗತಃ ।
ಧ್ರುವಮದ್ಯೈವ ಮಾಂ ರಾಜಾ ಯೌವರಾಜ್ಯೇಽಭಿಷೇಕ್ಷ್ಯತಿ ॥ ೧೯

ಹಂತ ಶೀಘ್ರಮಿತೋ ಗತ್ವಾ ದ್ರಕ್ಷ್ಯಾಮಿ ಚ ಮಹೀಪತಿಮ್ ।
ಸಹ ತ್ವಂ ಪರಿವಾರೇಣ ಸುಖಮಾಸ್ಸ್ವ ರಮಸ್ವ ಚ ॥ ೨೦

ಪತಿಸಂಮಾನಿತಾ ಸೀತಾ ಭರ್ತಾರಮಸಿತೇಕ್ಷಣಾ ।
ಆದ್ವಾರಮನುಪಪ್ರಾಜ ಮಂಗಲಾನ್ಯಭಿದಧ್ಯುಷೀ ॥ ೨೧

ರಾಜ್ಯಂ ದ್ವಿಜಾತಿಭಿರ್ಜುಷ್ಟಂ ರಾಜಸೂಯಾಭಿಷೇಚನಮ್ ।
ಕರ್ತುಮರ್ಹತಿ ತೇ ರಾಜಾ ವಾಸವಸ್ಯೇವ ಲೋಕಕೃತ್ ॥ ೨೨

---

ವರೆಗೆ ಕಾಯಬೇಕಾಗಿಲ್ಲವೆಂದು ಹೇಳಿ) ನನ್ನ ಪಟ್ಟಾಭಿಷೇಕಕ್ಕಾಗಿ ತ್ವರೆಪಡಿಸುತ್ತಿದ್ದಾಳೆ (೧೬). ಆಕೆಯು ಮಹಾರಾಜನಿಗೆ ಹಿತಕಾರಿಣಿಯಾಗಿ ಅವನ ಇಷ್ಟದಂತೆ ನಡೆಯುತಕ್ಕವಳು. ಆ ದೇವಿಯು ನನ್ನ ತಾಯಿಯಲ್ಲವೆ ? ಕೇಕಯಮಹಾರಾಜನ ಮಗಳಲ್ಲವೆ? ಅವಳು ನನ್ನ ಹಿತವನ್ನೇ ಕೋರುತ್ತಾಳೆ (೧೭). ಮಹಾರಾಜನೂ ಮಹಾರಾಣಿಯೂ ಸೇರಿ ಸುಮಂತ್ರನನ್ನು ದೂತನನ್ನಾಗಿ ಕಳಿಸಿರುವುದು ನನ್ನ ಭಾಗ್ಯ. ಈತನು ನನ್ನ ಇಷ್ಟಾರ್ಥವನ್ನು ನಡೆಸತಕ್ಕವನು. ಅಲ್ಲಿ ಸೇರಿರುವ ಮಹಾಸಭೆಗೆ ತಕ್ಕ ದೂತನೇ ನನ್ನನ್ನು ಕರೆಯಲು ಬಂದಿದ್ದಾನೆ. ಮಹಾರಾಜನು ಈ ದಿನ ನನಗೆ ಯುವರಾಜಪದವಿಯಲ್ಲಿ ಅಭಿಷೇಕ ಮಾಡುವನು (೧೮-೧೯). ಆಹಾ! ಸೀತೆ, ನಾನು ಬೇಗನೆ ಹೋಗಿ ಮಹಾರಾಜನ ದರ್ಶನವನ್ನು ತೆಗೆದುಕೊಳ್ಳುತ್ತೇನೆ. ನೀನು ಪರಿಜನಸಹಿತಳಾಗಿ ಇಲ್ಲಿಯೇ ಸಂತೋಷದಿಂದಿರು" ಎಂದು ನುಡಿದು ಶ್ರೀರಾಮನು ಹೊರಟನು (೨೦). ಹೀಗೆ ಪ್ರೇಮದಿಂದ ನುಡಿದ ಪತಿಯ ಮಾತನ್ನು ಕೇಳಿ ನೀಲನೇತ್ರೆಯಾದ ಸೀತೆಯು ಪತಿಗೆ ಮಂಗಳವಾಗಲೆಂದು ಹಾರೈಸುತ್ತ ಬಾಗಿಲವರೆಗೆ ಶ್ರೀರಾಮನನ್ನು ಹಿಂಬಾಲಿಸಿ ಹೋದಳು (೨೧). ಅವಳು ಶ್ರೀರಾಮನನ್ನು ಕುರಿತು "ಮಹಾರಾಜನು ನಿನಗೆ ಬ್ರಾಹ್ಮಣ

ದೀಕ್ಷಿತಂ ವ್ರತಸಂಪನ್ನಂ ವರಾಜಿನಧರಂ ಶುಚಿಮ್ ।
ಕುರಂಗಶೃಂಗಪಾಣಿಂ ಚ ಪಶ್ಯಂತೀ ತ್ವಾಂ ಭಜಾಮ್ಯಹಮ್ ॥ ೨೩

ಪೂರ್ವಾಂ ದಿಶಂ ವಜ್ರಧರೋ ದಕ್ಷಿಣಾಂ ಪಾತು ತೇ ಯಮಃ ।
ವರುಣಃ ಪಶ್ಚಿಮಾಮಾಶಾಂ ಧನೇಶಸ್ತ್ವುತ್ತರಾಂ ದಿಶಮ್ ॥ ೨೪

ಅಥ ಸೀತಾಮನುಜ್ಞಾಪ್ಯ ಕೃತಕೌತುಕಮಂಗಲಃ ।
ನಿಶ್ಚಕ್ರಾಮ ಸುಮಂತ್ರೇಣ ಸಹ ರಾಮೋ ನಿವೇಶನಾತ್ ॥ ೨೫

ಪರ್ವತಾದಿವ ನಿಷ್ಕ್ರಮ್ಯ ಸಿಂಹೋ ಗಿರಿಗುಹಾಶಯಃ ।
ಲಕ್ಷ್ಮಣಂ ದ್ವಾರಿ ಸೋಽಪಶ್ಯತ್ ಪ್ರಹ್ವಾಂಜಲಿಪುಟಂ ಸ್ಥಿತಮ್ ॥ ೨೬

ಅಥ ಮಧ್ಯಮಕಕ್ಷ್ಯಾಯಾಂ ಸಮಾಗಚ್ಛತ್ ಸುಹೃಜ್ಜನೈಃ ।
ಸ ಸರ್ವಾನರ್ಥಿನೋ ದೃಷ್ಟ್ವಾ ಸಮೇತ್ಯ ಪ್ರತಿನಂದ್ಯ ಚ ॥ ೨೭

---

ರಿಂದ ಯುವರಾಜಾಭಿಷೇಕವನ್ನು ನಡೆಸಲಿ. ಮುಂದೆ ರಾಜಸೂಯಯಾಗವನ್ನು ನಡೆಸಲು ಯೋಗ್ಯವಾದ ಮಹಾರಾಜಪಟ್ಟಾಭಿಷೇಕವೂ ನಡೆಯಲಿ! ಬ್ರಹ್ಮದೇವನು ದೇವೇಂದ್ರನನ್ನು ಸ್ವರ್ಗಾಧಿಪತ್ಯದಲ್ಲಿ ಸ್ಥಾಪಿಸಿದಂತೆ ಮಹಾರಾಜನು ನಿನ್ನನ್ನು ರಾಜ್ಯದಲ್ಲಿ ಸ್ಥಾಪಿಸುವಂತಾಗಲಿ ! (೨೨). ನೀನು ಯಜ್ಞದೀಕ್ಷಿತನಾಗಿ ವ್ರತನಿಷ್ಠೆಯಿಂದ ಕೃಷ್ಣಾಜಿನವನ್ನು ಧರಿಸಿ ಮೃಗಶೃಂಗವನ್ನು ಕೈಯಲ್ಲಿ ಹಿಡಿದು ಮಡಿಯಲ್ಲಿ ಕುಳಿತಿರುವುದನ್ನು ನೋಡುತ್ತ ನಿನ್ನ ಸಮೀಪದಲ್ಲಿ ಕುಳಿತಿರಬೇಕೆಂದು ನನಗೆ ಆಸೆಯಾಗಿದೆ (೨೩). ಪೂರ್ವದಿಕ್ಕಿನಲ್ಲಿ ವಜ್ರಧಾರಿಯಾದ ಇಂದ್ರನೂ ದಕ್ಷಿಣದಿಕ್ಕಿನಲ್ಲಿ ಯಮನೂ ನಿನ್ನನ್ನು ಕಾಪಾಡಲಿ. ಪಶ್ಚಿಮದಲ್ಲಿ ವರುಣನೂ ಉತ್ತರದಲ್ಲಿ ಕುಬೇರನೂ ನಿನ್ನನ್ನು ಕಾಪಾಡಲಿ" ಎಂದು ಹೇಳಿದಳು (೨೪). ಅನಂತರ ಶ್ರೀರಾಮನು ಹೋಗಿ ಬರುತ್ತೇನೆಂದು ಸೀತೆಗೆ ತಿಳಿಸಿ ಅಭಿಷೇಕಾರ್ಥವಾದ ಮಂಗಳಕಾರ್ಯವನ್ನು ಮುಗಿಸಿಕೊಂಡು ಸುಮಂತ್ರನೊಡನೆ ತನ್ನ ಭವನದಿಂದ ಹೊರಟನು (೨೫). ಪರ್ವತದ ಗುಹೆಯಲ್ಲಿ ಮಲಗಿದ್ದ ಸಿಂಹವು ಹೊರಗೆ ಬರುವಂತೆ ರಾಮನು . ತನ್ನ ಗೃಹದಿಂದ ಹೊರಗೆ ಬರುವಷ್ಟರಲ್ಲಿ, ಲಕ್ಷ್ಮಣನು ಕೈಮುಗಿದುಕೊಂಡು ಬಾಗಿಲಲ್ಲಿ ನಿಂತಿರುವುದು ಕಾಣಿಸಿತು (೨೬). ರಾಮನು ಅವನೊಡನೆ ನಡುವಿನ ಕಕ್ಷ್ಯೆಗೆ ಬಂದು ಅಲ್ಲಿ ತನ್ನ ಆಗಮನವನ್ನು ಪ್ರತೀಕ್ಷಿಸು

ತತಃ ಪರ್ವತಸಂಕಾಶಮಾರುರೋಹ ರಥೋತ್ತಮಮ್ ।
ವ್ಯಾಘ್ರಂ ಪುರುಷವ್ಯಾಘ್ರೋ ರಾಜತಂ ರಾಜನಂದನಃ ॥ ೨೮
ಮೇಘನಾದಮಸಂಬಾಧಂ ಮಣಿವಿದ್ರುಮಭೂಷಿತಮ್ ।
ಮುಷ್ಣಂತಮಿವ ಚಕ್ಷೂಂಷಿ ಪ್ರಭಯಾ ಸೂರ್ಯವರ್ಚಸಮ್ ॥ ೨೯
ಕರೇಣುಶಿಶುಕಲ್ಪೈಶ್ಚ ಯುಕ್ತಂ ಪರಮವಾಜಿಭಿಃ ।
ಹರಿಯುಕ್ತಂ ಸಹಸ್ರಾಕ್ಷೋ ರಥಮಿಂದ್ರ ಇವಾಶುಗಮ್ ॥ ೩೦
ಪ್ರಯಯೌ ತೂರ್ಣಮಾಸ್ಥಾಯ ರಾಘವೋ ಜ್ವಲಿತಃ ಶ್ರಿಯಾ ।
ಸ ಪರ್ಜನ್ಯ ಇವಾಕಾಶೇ ಸ್ವನವಾನಭಿನಾದಯನ್ ॥ ೩೧
ನಿಕೇತಾನ್ನಿರ್ಯಯೌ ಶ್ರೀಮಾನ್ ಮಹಾಭ್ರಾದಿವ ಚಂದ್ರಮಾಃ ।
ಛತ್ರಚಾಮರಪಾಣಿಸ್ತು ಲಕ್ಷ್ಮಣೋ ರಾಘವಾನುಜಃ ॥ ೩೨
ಜುಗೋಪ ಭ್ರಾತರಂ ಭ್ರಾತಾ ರಥಮಾಸ್ಥಾಯ ಪೃಷ್ಠತಃ ।
ತತೋ ಹಲಹಲಾಶಬ್ದಸ್ತುಮುಲಃ ಸಮಜಾಯತ ॥ ೩೩

---

ತ್ತಿದ್ದ ಮಿತ್ರರೊಡನೆ ಕೂಡಿಕೊಂಡನು. ಅನಂತರ ತನಗಾಗಿ ಕಾದಿದ್ದ ಜನರನ್ನು ಕಂಡು ಸಮೀಪಕ್ಕೆ ಹೋಗಿ ಅವರನ್ನು ಅಭಿನಂದಿಸಿದನು (೨೭). ತರುವಾಯ ಆ ರಾಜಪುತ್ರನು ವ್ಯಾಘ್ರಚರ್ಮದಿಂದ ಪರಿವೃತವಾಗಿ ಉನ್ನತವಾಗಿದ್ದ ಒಂದು ಬೆಳ್ಳಿಯ ರಥವನ್ನೇರಿದನು. ರತ್ನ ಮತ್ತು ಹವಳಗಳಿಂದ ಭೂಷಿತವಾಗಿದ್ದ ವಿಶಾಲವಾದ ಆ ರಥವು ಮೇಘದಂತೆ ಗಂಭೀರವಾಗಿ ಧ್ವನಿಗೈಯುತ್ತಿತ್ತು. ತನ್ನ ಪ್ರಭೆಯಿಂದ ಸೂರ್ಯನಂತೆ ಕಣ್ಣುಗಳನ್ನು ಕೋರೈಸುತ್ತಿತ್ತು (೨೮-೨೯). ಆ ರಥವು ಆನೆಯ ಮರಿಗಳಂತಿರುವ ಉತ್ತಮಾಶ್ವಗಳಿಂದ ಯೋಜಿತವಾಗಿತ್ತು. ದೇವೇಂದ್ರನು ವೇಗಶಾಲಿಯಾದ ತನ್ನ ದಿವ್ಯರಥದಲ್ಲಿ ಕುಳಿತುಕೊಳ್ಳುವಂತೆ ಶ್ರೀರಾಮನು ಆ ರಥದಲ್ಲಿ ಕುಳಿತು ಹೊರಟನು (೩೦). ಆ ರಥವು ಗುಡುಗುವ ಮೇಘದಂತೆ ಧ್ವನಿಗೈಯುತ್ತ ಅರಮನೆಯಿಂದ ಹೊರಟಿತು. ಅದು ಹೊರಟಾಗ ಮೇಘಮಂಡಲದ ಮರೆಯಿಂದ ಈಚೆಗೆ ಬರುವ ಚಂದ್ರಮನಂತೆ ಕಂಗೊಳಿಸಿತು. ಲಕ್ಷ್ಮಣನು ರಾಮನ ಹಿಂದೆ ರಥದಲ್ಲಿ ಕುಳಿತು ಒಂದು ಕೈಯಲ್ಲಿ ಛತ್ರವನ್ನೂ ಇನ್ನೊಂದು ಕೈಯಲ್ಲಿ ಚಾಮರವನ್ನೂ ಹಿಡಿದು ಅಣ್ಣನನ್ನು ಸೇವಿಸುತ್ತಿದ್ದನು (೩೧-೩೨). ರಥವು ಹೊರಟಕೂಡಲೆ ಬೀದಿಯ ಇಕ್ಕೆಡೆಯಲ್ಲಿಯೂ ನಿಂತಿದ್ದ ಜನ

ತಸ್ಯ ನಿಷ್ಕ್ರಮಮಾಣಸ್ಯ ಜನೌಘಸ್ಯ ಸಮಂತತಃ ।
ತತೋ ಹಯವರಾ ಮುಖ್ಯಾ ನಾಗಾಶ್ಚ ಗಿರಿಸಂನಿಭಾಃ ॥ ೩೪
ಅನುಜಗ್ಮುಸ್ತದಾ ರಾಮಂ ಶತಶೋಽಥ ಸಹಸ್ರಶಃ ।
ಅಗ್ರತಶ್ಚಾಸ್ಯ ಸಂನದ್ಧಾಶ್ಚಂದನಾಗರುರೂಷಿತಾಃ ॥ ೩೫
ಖಡ್ಗಚಾಪಧರಾಃ ಶೂರಾ ಜಗ್ಮುರಾಶಂಸವೋ ಜನಾಃ ।
ತತೋ ವಾದಿತ್ರಶಬ್ದಾಶ್ಚ ಸ್ತುತಿಶಬ್ದಾಶ್ಚ ವಂದಿನಾಮ್ ॥ ೩೬
ಸಿಂಹನಾದಾಶ್ಚ ಶೂರಾಣಾಂ ತಥಾ ಶುಶ್ರುವಿರೇ ಪಥಿ ।
ಹರ್ಮ್ಯವಾತಾಯನಸ್ಥಾಭಿರ್ಭೂಷಿತಾಭಿಃ ಸಮಂತತಃ ॥ ೩೭
ಕೀರ್ಯಮಾಣಃ ಸುಪುಷ್ಪೌಘೈರ್ಯಯೌ ಸ್ತ್ರೀಭಿರರಿಂದಮಃ ।
ರಾಮಂ ಸರ್ವಾನವದ್ಯಾಂಗ್ಯೋ ರಾಮಪಿಪ್ರೀಷಯಾ ತತಃ ॥ ೩೮
ವಚೋಭಿರಗ್ರ್ಯೈರ್ಹರ್ಮ್ಯಸ್ಥಾಃ ಕ್ಷಿತಿಸ್ಥಾಶ್ಚ ವವಂದಿರೇ ।
ನೂನಂ ನಂದತಿ ತೇ ಮಾತಾ ಕೌಸಲ್ಯಾ ಮಾತೃನಂದನ ॥ ೩೯
ಪಶ್ಯಂತೀ ಸಿದ್ಧಯಾತ್ರಂ ತ್ವಾಂ ಪಿತ್ರ್ಯಂ ರಾಜ್ಯಮವಸ್ಥಿತಮ್ ।
ಸರ್ವಸೀಮಂತಿನೀಭ್ಯಶ್ಚ ಸೀತಾಂ ಸೀಮಂತಿನೀಂ ವರಾಮ್ ॥ ೪೦

---

ಸಮೂಹದಿಂದ ಕೋಲಾಹಲಶಬ್ದವೆದ್ದಿತು. ಶ್ರೀರಾಮನ ರಥವನ್ನು ಹಿಂಬಾಲಿಸಿ ಸಾವಿರಾರು ಉತ್ತಮಾಶ್ವಗಳೂ ಪರ್ವತಾಕಾರದ ಆನೆಗಳೂ ಹೋಗುತ್ತಿದ್ದವು (೩೩-೩೪). ರಥದ ಮುಂಭಾಗದಲ್ಲಿ ವೀರಯೋಧರು ಚಂದನಾಗರುಗಳನ್ನು ಲೇಪಿಸಿಕೊಂಡು ಕವಚಧಾರಿಗಳಾಗಿ ಕತ್ತಿಗಳನ್ನೂ ಬಿಲ್ಲುಗಳನ್ನೂ ಹಿಡಿದು ಶ್ರೀರಾಮನಿಗೆ ಶ್ರೇಯಸ್ಸನ್ನು ಕೋರುತ್ತ ಹೋಗುತ್ತಿದ್ದರು. ವಾದ್ಯಗಳು ಮೊಳಗುತ್ತಿದ್ದವು. ವಂದಿಗಳು ಸ್ತೋತ್ರಮಾಡುತ್ತಿದ್ದರು (೩೫-೩೬). ವೀರಭಟರು ಸಿಂಹನಾದಗೈಯುತ್ತಿದ್ದರು. ಅಲಂಕೃತರಾದ ಸ್ತ್ರೀಯರು ಬೀದಿಯ ಎರಡು ಪಾರ್ಶ್ವಗಳಲ್ಲಿಯೂ ಇರುವ ಮಹಡಿಗಳಲ್ಲಿ ಕಿಟಕಿಯ ಬಳಿ ನಿಂತು ಶ್ರೀರಾಮನ ಮೇಲೆ ಹೂಗಳನ್ನು ಎರಚುತ್ತಿದ್ದರು. ಆ ಸುಂದರಿಯರು ಮನೆಯ ಬಾಗಿಲುಗಳಲ್ಲಿಯೂ ಉಪ್ಪರಿಗೆಗಳಲ್ಲಿಯೂ ನಿಂತು ಶ್ರೀರಾಮನನ್ನು ಕೊಂಡಾಡಿದರು (೩೭-೩೮) ; "ಮಾತೃವತ್ಸಲ! ನಿನ್ನ ತಾಯಿಯಾದ ಕೌಸಲ್ಯೆಯು ಎಷ್ಟು ಆನಂದಪಡುವಳೊ! ನಿನ್ನ ಯಾತ್ರೆಯು ಫಲಿಸಿದಾಗ ಎಷ್ಟು ಸಂತೋಷಪಡುವಳೊ! ತಂದೆಯ ರಾಜ್ಯವನ್ನು ಪಡೆದ ನಿನ್ನನ್ನು

ಅಮಂಸ್ಯಂತ ಹಿ ತಾ ನಾರ್ಯೋ ರಾಮಸ್ಯ ಹೃದಯಪ್ರಿಯಾಮ್ ।
ತಯಾ ಸುಚರಿತಂ ದೇವ್ಯಾ ಪುರಾ ನೂನಂ ಮಹತ್ತಪಃ ॥ ೪೧

ರೋಹಿಣೀವ ಶಶಾಂಕೇನ ರಾಮಸಂಯೋಗಮಾಪ ಯಾ ।
ಇತಿ ಪ್ರಾಸಾದಶೃಂಗೇಷು ಪ್ರಮದಾಭಿರ್ನರೋತ್ತಮಃ ॥ ೪೨

ಶುಶ್ರಾವ ರಾಜಮಾರ್ಗಸ್ಥಃ ಪ್ರಿಯಾ ವಾಚ ಉದಾಹೃತಾಃ ।
ಆತ್ಮಸಂಪೂಜನೈಃ ಶೃಣ್ವನ್ ಯಯೌ ರಾಮೋ ಮಹಾಪಥಮ್ ॥ ೪೩

ಸ ರಾಘವಸ್ತತ್ರ ಕಥಾಪ್ರಪಂಚಾನ್
ಶುಶ್ರಾವ ಲೋಕಸ್ಯ ಸಮಾಗತಸ್ಯ ।
ಆತ್ಮಾಧಿಕಾರಾ ವಿವಿಧಾಶ್ಚ ವಾಚಃ
ಪ್ರಹೃಷ್ಟರೂಪಸ್ಯ ಪುರೇ ಜನಸ್ಯ ॥ ೪೪

ಏಷ ಶ್ರಿಯಂ ಗಚ್ಛತಿ ರಾಘವೋಽದ್ಯ
ರಾಜಪ್ರಸಾದಾದ್ವಿಪುಲಾಂ ಗಮಿಷ್ಯನ್ ।
ಏತೇ ವಯಂ ಸರ್ವಸಮೃದ್ಧಕಾಮಾ
ಯೇಷಾಮಯಂ ನೋ ಭವಿತಾ ಪ್ರಶಾಸ್ತಾ ॥ ೪೫

---

ನೋಡುತ್ತ ಎಷ್ಟು ಹಿಗ್ಗುವಳೊ!" ಎಂದು ಹೇಳುತ್ತಿದ್ದರು (೩೯-೪೦). ಕೆಲವು ಸ್ತ್ರೀಯರು ಶ್ರೀರಾಮನ ಪ್ರೇಯಸಿಯಾದ ಸೀತೆಯನ್ನುದ್ದೇಶಿಸಿ "ಸಮಸ್ತ ನಾರಿಯರಲ್ಲಿಯೂ ಸೀತೆಯೇ ಉತ್ತಮಳಾದ ನಾರೀಮಣಿ. ಆ ದೇವಿಯು ಜನ್ಮಾಂತರದಲ್ಲಿ ಮಹತ್ತರವಾದ ತಪಸ್ಸನ್ನಾಚರಿಸಿರಬೇಕು. ಚಂದ್ರನೊಡ ಗೂಡಿದ ರೋಹಿಣಿಯಂತೆ ಅವಳು ಶ್ರೀರಾಮನ ಕೈಹಿಡಿದಳು" ಎಂದು ಮಾತನಾಡಿಕೊಳ್ಳುತ್ತಿದ್ದರು. ಹೀಗೆ ತನ್ನ ಸ್ತುತಿಪರವಾದ ವಾಕ್ಯಗಳನ್ನು ಕೇಳಿಸಿಕೊಳ್ಳುತ್ತ ಶ್ರೀರಾಮನು ರಾಜಬೀದಿಯಲ್ಲಿ ಪ್ರಯಾಣ ಮಾಡಿದನು (೪೧-೪೩). ಸಂತುಷ್ಟರಾಗಿದ್ದ ಪುರಜನರು ದಾರಿಯಲ್ಲಿ ಶ್ರೀರಾಮನಿಗೆ ಸಂಬಂಧಿಸಿದ ವೃತ್ತಾಂತಗಳನ್ನು ಹೇಳಿಕೊಳ್ಳುತ್ತ ಅವನನ್ನು ಶ್ಲಾಘಿಸು ತ್ತಿದ್ದರು: "ಈ ರಘುಕುಲೋತ್ಪನ್ನನು ಮಹಾರಾಜನ ಅನುಗ್ರಹದಿಂದ ರಾಜ್ಯಲಕ್ಷ್ಮಿಯನ್ನು ಪಡೆಯುವನು. ಈತನು ನಮಗೆ ದೊರೆಯಾಗುವುದರಿಂದ

ಲಾಭೋ ಜನಸ್ಯಾಸ್ಯ ಯದೇಷ ಸರ್ವಂ
ಪ್ರಪತ್ಸ್ಯತೇ ರಾಷ್ಟ್ರಮಿದಂ ಚಿರಾಯ ।
ನ ಹ್ಯಪ್ರಿಯಂ ಕಿಂಚನ ಜಾತು ಕಶ್ಚಿತ್
ಪಶ್ಯೇನ್ನ ದುಃಖಂ ಮನುಜಾಧಿಪೇಽಸ್ಮಿನ್ ॥ ೪೬
ಸ ಘೋಷವದ್ಭಿಶ್ಚ ಹಯೈರ್ಮತಂಗಜೈಃ
ಪುರಃಸರೈಃ ಸ್ವಸ್ತಿಕಸೂತಮಾಗಧೈಃ ।
ಮಹೀಯಮಾನಃ ಪ್ರವರೈಶ್ಚ ವಾದಕೈ-
ರಭಿಷ್ಟುತೋ ವೈಶ್ರವಣೋ ಯಥಾ ಯಯೌ ॥ ೪೭
ಕರೇಣುಮಾತಂಗರಥಾಶ್ವಸಂಕುಲಂ
ಮಹಾಜನೌಘಪ್ರತಿಪೂರ್ಣಚತ್ವರಮ್ ।
ಪ್ರಭೂತರತ್ನಂ ಬಹುಪುಣ್ಯಸಂಚಯಂ
ದದರ್ಶ ರಾಮೋ ರುಚಿರಂ ಮಹಾಪಥಮ್ ॥ ೪೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷೋಡಶಃ ಸರ್ಗಃ

---

ನಮ್ಮ ಸಕಲ ಇಷ್ಟಾರ್ಥಗಳೂ ಕೈಗೂಡುತ್ತವೆ (೪೪-೪೫). ಈತನು ಚಿರಕಾಲದವರೆಗೆ ಈ ರಾಷ್ಟ್ರವನ್ನು ಆಳುವುದರಿಂದ ಪ್ರಜೆಗಳಿಗೇ ಲಾಭವಾಗುತ್ತದೆ. ರಾಮನು ರಾಜನಾದಾಗ ಯಾವನೂ ಯಾವ ಬಗೆಯ ಕಷ್ಟವನ್ನೂ ನೋಡಬೇಕಾಗುವುದಿಲ್ಲ" ಎಂದು ಹೇಳುತ್ತಿದ್ದರು (೪೬).ರಥದ ಹಿಂದೆ ಆನೆಕುದುರೆಗಳು ಧ್ವನಿಗೈಯುತ್ತಿದ್ದವು. ಮುಂದೆ ಹೊಗಳುಭಟರು 'ಜಯಜಯ' ಎಂದು ಘೋಷಿಸುತ್ತಿದ್ದರು. ನಿಪುಣರಾದ ವಾದ್ಯಗಾರರು ವಾದ್ಯವನ್ನು ನುಡಿಸುತ್ತ ಹಾಡಿ ಹೊಗಳುತ್ತಿದ್ದರು. ಹೀಗೆ ಕುಬೇರನ ವೈಭವದೊಡನೆ ಶ್ರೀರಾಮನು ರಾಜಬೀದಿಯಲ್ಲಿ ಹೋದನು (೪೭). ವಿಶಾಲವಾದ ಆ ರಾಜಬೀದಿಯಲ್ಲಿ ಹೆಣ್ಣಾನೆಗಳೂ ಗಂಡಾನೆಗಳೂ ರಥಗಳೂ ಅಶ್ವಗಳೂ ಕಿಕ್ಕಿರಿದು ಹೋಗುತ್ತಿದ್ದವು. ಚೌಕಗಳಲ್ಲಿ ನಗರದ ಮಹಾಜನರು ಗುಂಪುಗುಂಪಾಗಿ ಕಾದು ನಿಂತಿದ್ದರು. ಬೀದಿಗಳನ್ನು ಬಹು ಬಗೆಯ ರತ್ನಗಳಿಂದ ಅಲಂಕರಿಸಿದ್ದರು. ಅಂಗಡಿಗಳಲ್ಲಿ ವಿವಿಧ ಪದಾರ್ಥಗಳನ್ನು ಸಮೃದ್ಧವಾಗಿ ಪ್ರದರ್ಶಿಸಿದ್ದರು. ಇಂಥ ಸುಂದರವಾದ ರಾಜಬೀದಿಯನ್ನು ನೋಡುತ್ತ ಶ್ರೀರಾಮನು ರಥದಲ್ಲಿ ಪ್ರಯಾಣ ಮಾಡಿದನು (೪೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹದಿನಾರನೆಯ ಸರ್ಗ

## ಸಪ್ತದಶಃ ಸರ್ಗಃ

### ರಾಮಾಗಮನಮ್

ಸ ರಾಮೋ ರಥಮಾಸ್ಥಾಯ ಸಂಪ್ರಹೃಷ್ಟಸುಹೃಜ್ಜನಃ ।
ಪತಾಕಾಧ್ವಜಸಂಪನ್ನಂ ಮಹಾರ್ಹಾಗರುಧೂಪಿತಮ್ ॥ ೧

ಅಪಶ್ಯನ್ನಗರಂ ಶ್ರೀಮಾನ್ನಾನಾಜನಸಮಾಕುಲಮ್ ।
ಸ ಗೃಹೈರಭ್ರಸಂಕಾಶೈಃ ಪಾಂಡರೈರುಪಶೋಭಿತಮ್ ॥ ೨

ರಾಜಮಾರ್ಗಂ ಯಯೌ ರಾಮೋ ಮಧ್ಯೇನಾಗರುಧೂಪಿತಮ್ ।
ಚಂದನಾನಾಂ ಚ ಮುಖ್ಯಾನಾಮಗರೂಣಾಂ ಚ ಸಂಚಯೈಃ ॥ ೩

ಉತ್ತಮಾನಾಂ ಚ ಗಂಧಾನಾಂ ಕ್ಷೌಮಕೌಶಾಂಬರಸ್ಯ ಚ ।
ಅವಿದ್ಧಾಭಿಶ್ಚ ಮುಕ್ತಾಭಿರುತ್ತಮೈಃ ಸ್ಫಟಿಕೈರಪಿ ॥ ೪

ಶೋಭಮಾನಮಸಂಬಾಧಂ ತಂ ರಾಜಪಥಮುತ್ತಮಮ್ ।
ಸಂವೃತಂ ವಿವಿಧೈಃ ಪಣ್ಯೈರ್ಭಕ್ಷ್ಯೈರುಚ್ಚಾವಚೈರಪಿ ॥ ೫

## ಸರ್ಗ ೧೭

### ಶ್ರೀರಾಮನು ದಶರಥನ ಬಳಿಗೆ ಹೋಗುವುದು.

ಶ್ರೀರಾಮನು ಹೀಗೆ ರಥವನ್ನೇರಿ ಬರುತ್ತಿರಲು ಅವನ ಮಿತ್ರರು ಆನಂದಿಸುತ್ತಿದ್ದರು. ನಗರದಲ್ಲಿ ಪತಾಕೆಗಳನ್ನೇರಿಸಿ ಧೂಪದ ಸುಗಂಧವು ಎಲ್ಲೆಲ್ಲಿಯೂ ಹರಡುವಂತೆ ಮಾಡಿದ್ದರು. ನಾನಾ ಜಾತಿಯ ಜನರು ತುಂಬಿದ್ದರು. ಬೀದಿಯ ಎರಡು ಪಾರ್ಶ್ವಗಳಲ್ಲಿಯೂ ಮೇಘದಂತೆ ಉನ್ನತವಾಗಿ ಬಿಳಿಯ ಸೌಧಗಳು ವಿರಾಜಿಸುತ್ತಿದ್ದವು (೧-೨). ಸುಗಂಧದ್ರವ್ಯಗಳಿಂದ ಘಮಘಮಿಸುತ್ತಿದ್ದ ರಾಜಮಾರ್ಗದಲ್ಲಿ ನಗರಸೌಂದರ್ಯವನ್ನು ನೋಡುತ್ತ ರಾಮನು ಪ್ರಯಾಣ ಮಾಡಿದನು. ಆ ಸಮಯದಲ್ಲಿ ವರ್ತಕರು ವ್ಯಾಪಾರಕ್ಕೋಸ್ಕರ ಉತ್ತಮವಾದ ಶ್ರೀಗಂಧ, ನಾರು ಮತ್ತು ರೇಷ್ಮೆಯ ವಸ್ತ್ರಗಳು, ವೆಜ್ಜಮಾಡದ ಮುತ್ತುಗಳು, ಸ್ಫಟಿಕ ಮುಂತಾದವುಗಳನ್ನು ಪ್ರದರ್ಶಿಸಿದ್ದರು (೩-೪). ವಿಶಾಲವಾದ ಆ ರಾಜಬೀದಿಯ ಪಾರ್ಶ್ವಗಳಲ್ಲಿ ನಾನಾಬಗೆಯ

ದದರ್ಶ ತಂ ರಾಜಪಥಂ ದಿವಿ ದೇವಪಥಂ ಯಥಾ ।
ದಧ್ಯಕ್ಷತಹವಿರ್ಲಾಜೈರ್ಧೂಪೈರಗರುಚಂದನೈಃ ॥ ೬

ನಾನಾಮಾಲ್ಯೋಪಗಂಧೈಶ್ಚ ಸದಾಭ್ಯರ್ಚಿತಚತ್ವರಮ್ ।
ಆಶೀರ್ವಾದಾನ್ ಬಹೂನ್ ಶೃಣ್ವನ್ ಸುಹೃದ್ಭಿಃ ಸಮುದೀರಿತಾನ್ ॥

ಯಥಾರ್ಹಂ ಚಾಪಿ ಸಂಪೂಜ್ಯ ಸರ್ವಾನೇವ ನರಾನ್ ಯಯೌ ।
ಪಿತಾಮಹೈರಾಚರಿತಂ ತಥೈವ ಪ್ರಪಿತಾಮಹೈಃ ॥ ೮

ಅದ್ಯೋಪಾದಾಯ ತಂ ಮಾರ್ಗಮಭಿಷಿಕ್ತೋಽನುಪಾಲಯ ।
ಯಥಾ ಸ್ಮ ಲಾಲಿತಾಃ ಪಿತ್ರಾ ಯಥಾ ಪೂರ್ವೈಃ ಪಿತಾಮಹೈಃ ॥ ೯

ತತಃ ಸುಖತರಂ ರಾಮೇ ವತ್ಸ್ಯಾಮಃ ಸತಿ ರಾಜನಿ ।
ಅಲಮದ್ಯ ಹಿ ಭುಕ್ತೇನ ಪರಮಾರ್ಥೈರಲಂ ಚ ನಃ ॥ ೧೦

---

ಭಕ್ಷ್ಯಗಳನ್ನು ಮಾರಾಟಕ್ಕಾಗಿ ಇಟ್ಟಿದ್ದರು. ಸ್ವರ್ಗದಲ್ಲಿರುವ ದೇವಮಾರ್ಗವೋ ಎಂಬಂತೆ ಭವ್ಯವಾದ ರಾಜಮಾರ್ಗವನ್ನು ನೋಡುತ್ತ ಶ್ರೀರಾಮನು ಮುಂದೆ ಹೋದನು. ಮಂಗಳಾರ್ಥವಾಗಿ ಮೊಸರು, ಅಕ್ಷತೆ, ಹವಿಸ್ಸು, ಅರಳು, ಧೂಪ, ಚಂದನಗಳನ್ನಿಟ್ಟು ಚೌಕಗಳನ್ನು ಹೂಮಾಲೆಗಳಿಂದ ಸಿಂಗರಿಸಿದ್ದರು (೫-೬). ಮಿತ್ರರು ಅಲ್ಲಲ್ಲಿ ಬಂದು ಹೇಳುತ್ತಿದ್ದ ಆಶೀರ್ವಚನಗಳನ್ನು ಕೇಳುತ್ತ ಅವರೆಲ್ಲರನ್ನೂ ಯಥೋಚಿತವಾಗಿ ಮನ್ನಿಸುತ್ತ ಶ್ರೀರಾಮನು ಮುಂದೆ ಹೋಗುತ್ತಿದ್ದನು. ಕೆಲವರು ಮುಂದೆ ಬಂದು "ರಾಜಕುಮಾರ, ನಿನ್ನ ತಾತ-ಮುತ್ತಾತಂದಿರು ಈ ರಾಜ್ಯವನ್ನು ಹೇಗೆ ಪಾಲಿಸಿಕೊಂಡು ಬಂದರೊ, ಹಾಗೆಯೆ ನೀನು ಪಟ್ಟಾಭಿಷಿಕ್ತನಾಗಿ ಅದೇ ಮಾರ್ಗದಲ್ಲಿ ಪಾಲಿಸು" ಎಂದು ಹೇಳುತ್ತಿದ್ದರು (೭-೮). ಕೆಲವರು "ಈತನ ತಂದೆಯಾಗಲಿ ತಾತಂದಿರಾಗಲಿ ನಮ್ಮನ್ನು ಲಾಲಿಸಿದುದಕ್ಕಿಂತಲೂ ಹೆಚ್ಚಾಗಿ ರಾಮನು ನಮ್ಮನ್ನು ಲಾಲಿಸುವನು. ನಾವು ಮೊದಲಿಗಿಂತಲೂ ಹೆಚ್ಚು ಸುಖದಲ್ಲಿರುತ್ತೇವೆ. ರಾಮನು ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ ಅರಮನೆಯಿಂದ ಹೊರಟು ಬರುವುದನ್ನು ಈದಿನ ನಾವು ನೋಡಿದರೆ ಸಾಕು. ಅದಕ್ಕಿಂತ ಸಂತೋಷಕರವಾದದ್ದು ಇನ್ನು ಯಾವುದು ? ನಮಗೆ ಊಟವೂ

ಯಥಾ ಪಶ್ಯೇಮ ನಿರ್ಯಾಂತಂ ರಾಮಂ ರಾಜ್ಯೇ ಪ್ರತಿಷ್ಠಿತಮ್ ।
ತತೋ ಹಿ ನಃ ಪ್ರಿಯತರಂ ನಾನ್ಯತ್ಕಿಂಚಿದ್ಭವಿಷ್ಯತಿ ॥ ೧೧

ಯಥಾಭಿಷೇಕೋ ರಾಮಸ್ಯ ರಾಜ್ಯೇನಾಮಿತತೇಜಸಃ ।
ಏತಾಶ್ಚಾನ್ಯಾಶ್ಚ ಸುಹೃದಮುದಾಸೀನಃ ಕಥಾಃ ಶುಭಾಃ ॥ ೧೨

ಆತ್ಮಸಂಪೂಜನೀಃ ಶೃಣ್ವನ್ ಯಯೌ ರಾಮೋ ಮಹಾಪಥಮ್ ।
ನ ಹಿ ತಸ್ಮಾನ್ಮನಃ ಕಶ್ಚಿತ್ ಚಕ್ಷುಷೀ ವಾ ನರೋತ್ತಮಾತ್ ॥ ೧೩

ನರಃ ಶಕ್ನೋತ್ಯಪಾಕ್ರಷ್ಟುಮತಿಕ್ರಾಂತೇಽಪಿ ರಾಘವೇ ।
ಯಶ್ಚ ರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ ॥ ೧೪

ನಿಂದಿತಃ ಸ ಭವೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ ।
ಸರ್ವೇಷಾಂ ಹಿ ಸ ಧರ್ಮಾತ್ಮಾ ವರ್ಣಾನಾಂ ಕುರುತೇ ದಯಾಮ್ ॥

ಚತುರ್ಣಾಂ ಹಿ ವಯಃಸ್ಥಾನಾಂ ತೇನ ತೇ ತಮನುವ್ರತಾಃ ।
ಚತುಷ್ಪಥಾನ್ ದೇವಪಥಾಂಶ್ಚೈತ್ಯಾನ್ಯಾಯತನಾನಿ ಚ ॥ ೧೬

---

ಬೇಡ; ನಿತ್ಯಕರ್ಮಾದಿಗಳೂ ಬೇಡ (೯-೧೦). ಮಹಾತೇಜಸ್ವಿಯಾದ ರಾಮನ ಅಭಿಷೇಕಕ್ಕಿಂತ ನಮಗೆ ಪ್ರಿಯವಾದದ್ದು ಯಾವುದೂ ಇಲ್ಲ" ಎಂಬುದಾಗಿ ಮಾತನಾಡಿಕೊಳ್ಳುತ್ತಿದ್ದರು. ಶ್ರೀರಾಮನು ತನ್ನನ್ನು ಶ್ಲಾಘಿಸುವ ಆ ಸಂಭಾಷಣೆಗಳನ್ನು ಕೇಳಿದರೂ ಕೇಳದಂತೆ ಗಂಭೀರಸ್ವಭಾವದಿಂದ ಮುಂದೆ ಸಾಗುತ್ತಿದ್ದನು (೧೧-೧೨). ಆ ಪುರುಷಶ್ರೇಷ್ಠನನ್ನು ನೋಡುತ್ತಿದ್ದ ಜನರೆಲ್ಲರ ಕಣ್ಮನಗಳೂ ಅವನಲ್ಲಿ ನೆಟ್ಟುಹೋದವು. ಆತನು ಮುಂದೆ ಮುಂದೆ ಹೊರಟುಹೋದರೂ ಆ ಜನರಲ್ಲಿ ಒಬ್ಬರಾದರೂ ತಮ್ಮ ದೃಷ್ಟಿಯನ್ನಾಗಲಿ ಮನಸ್ಸನ್ನಾಗಲಿ ಬೇರೆ ಕಡೆಗೆ ತಿರುಗಿಸಲಾರದೆ ಶ್ರೀರಾಮನನ್ನೇ ಧ್ಯಾನಿಸುತ್ತ ಅವನು ಹೋದ ಕಡೆಯನ್ನೇ ನೋಡುತ್ತಿದ್ದರು (೧೩-೧೪). ಯಾವ ಮನುಷ್ಯನು ರಾಮನನ್ನು ನೋಡಿಲ್ಲವೊ ಯಾವನು ರಾಮನ ದೃಷ್ಟಿಗೆ ಗೋಚರಿಸುವುದಿಲ್ಲವೊ ಆ ಮನುಷ್ಯನು ಲೋಕದಲ್ಲಿ ನಿಂದಿತನೇ ಸರಿ! ಅಂಥ ಮನುಷ್ಯನನ್ನು ಅವನ ಆತ್ಮವೇ ನಿಂದಿಸುವುದು! (೧೫). ಆ ಧರ್ಮಾತ್ಮನು ನಾಲ್ಕು ವರ್ಣದ ಜನರಲ್ಲಿಯೂ ಅವರ ವಯಸ್ಸಿಗೆ ಅನುಗುಣವಾಗಿ ದಯೆಯನ್ನು ತೋರಿಸುತ್ತಿದ್ದನು. ಆದ್ದರಿಂದ ಸಕಲಜಾತಿಯವರೂ ಶ್ರೀರಾಮನಿಗೆ

ಪ್ರದಕ್ಷಿಣಂ ಪರಿಹರನ್ ಜಗಾಮ ನೃಪತೇಃ ಸುತಃ ।
ಸ ರಾಜಕುಲಮಾಸಾದ್ಯ ಮೇಘಸಂಘೋಪಮೈಃ ಶುಭೈಃ ॥ ೧೭

ಪ್ರಾಸಾದಶೃಂಗೈರ್ವಿವಿಧೈಃ ಕೈಲಾಸಶಿಖರೋಪಮೈಃ ।
ಆವಾರಯದ್ಭಿರ್ಗಗನಂ ವಿಮಾನೈರಿವ ಪಾಂಡರೈಃ ॥ ೧೮

ವರ್ಧಮಾನಗೃಹೈಶ್ಚಾಪಿ ರತ್ನಜಾಲಪರಿಶ್ಕೃತೈಃ ।
ತತ್ ಪೃಥಿವ್ಯಾಂ ಗೃಹವರಂ ಮಹೇಂದ್ರಭವನೋಪಮಮ್ ॥ ೧೯

ರಾಜಪುತ್ರಃ ಪಿತುರ್ವೇಶ್ಮ ಪ್ರವಿವೇಶ ಶ್ರಿಯಾ ಜ್ವಲನ್ ।
ಸ ಕಕ್ಷ್ಯಾ ಧನ್ವಿಭಿರ್ಗುಪ್ತಾಸ್ತಿಸ್ರೋಽತ್ಯಕ್ರಮ್ಯ ವಾಜಿಭಿಃ ॥ ೨೦

ಪದಾತಿರಪರೇ ಕಕ್ಷ್ಯೇ ದ್ವೇ ಜಗಾಮ ನರೋತ್ತಮಃ ।
ಸ ಸರ್ವಾಃ ಸಮತಿಕ್ರಮ್ಯ ಕಕ್ಷ್ಯಾ ದಶರಥಾತ್ಮಜಃ ॥ ೨೧

---

ಅನುಕೂಲರಾಗಿ ನಡೆದುಕೊಳ್ಳುತ್ತಿದ್ದರು (೧೬). ಶ್ರೀರಾಮನು ರಾಜಬೀದಿಯಲ್ಲಿ ಹೋಗುತ್ತಿರುವಾಗ ದಾರಿಯಲ್ಲಿ ಸಿಗುವ ಚೌಕಗಳನ್ನೂ ದೇವಾಲಯಗಳನ್ನೂ ಗ್ರಾಮದೇವತೆಯ ಗುಡಿಗಳನ್ನೂ ಪಾಠಶಾಲೆಗಳನ್ನೂ ಪ್ರದಕ್ಷಿಣಾಕಾರವಾಗಿ ಬಳಸಿಕೊಂಡು ಹೋಗುತ್ತಿದ್ದನು (೧೭). ಹೀಗೆ ಹೋಗುತ್ತ ಆ ರಾಜಕುಮಾರನು ದಶರಥನ ಅರಮನೆಯ ಬಳಿಗೆ ಹೋದನು. ಅರಮನೆಯಾದರೊ ಮೇಘರಾಜಿಯಂತೆ ವಿಸ್ತಾರವಾಗಿ ಕೈಲಾಸಶಿಖರದಂತೆ ಉನ್ನತವಾದ ಉಪ್ಪರಿಗೆಗಳಿಂದ ಶೋಭಿಸುತ್ತಿತ್ತು. ಉಪ್ಪರಿಗೆಯ ಮೇಲಿರುವ ಶಿಖರಗಳು ಆಕಾಶವನ್ನು ತುಡುಕುವ ಶುಭ್ರವರ್ಣದ ವಿಮಾನಗಳಂತೆ ಶೋಭಿಸುತ್ತಿದ್ದವು. ರತ್ನಗಳಿಂದ ಅಲಂಕರಿಸಿದ ಕ್ರೀಡಾಗೃಹಗಳು ವಿರಾಜಿಸುತ್ತಿದ್ದವು. ಆ ರಾಜಗೃಹವು ಭೂಲೋಕದಲ್ಲಿರುವ ದೇವೇಂದ್ರನ ಅರಮನೆಯಂತೆ ಕಂಗೊಳಿಸುತ್ತಿದ್ದಿತು (೧೮-೧೯). ತೇಜಸ್ವಿಯಾದ ಆ ರಾಜಪುತ್ರನು ತಂದೆಯ ಅರಮನೆಯನ್ನು ಪ್ರವೇಶಿಸಿ ಧನುರ್ಧಾರಿಗಳಿಂದ ರಕ್ಷಿತವಾದ ಮೂರು ಕಕ್ಷ್ಯಗಳನ್ನು, ಕುದುರೆಗಳನ್ನು ಹೂಡಿದ ರಥದಲ್ಲಿಯೇ ದಾಟಿದನು. ಅನಂತರ ರಥದಿಂದಿಳಿದು ನಡೆಯುತ್ತ ಎರಡು ಕಕ್ಷ್ಯಗಳನ್ನು ದಾಟಿ ಹೋದನು. ಅಲ್ಲಿ ತನ್ನೊಡನೆ ಬಂದ ಜನರೆಲ್ಲರನ್ನೂ ಹಿಂದಿರುಗುವಂತೆ ಹೇಳಿ ಶ್ರೀರಾಮನು ತಾನೊಬ್ಬನೇ ಅಂತಃಪುರವನ್ನು ಪ್ರವೇಶಿಸಿದನು

ಸಂನಿವರ್ತ್ಯ ಜನಂ ಸರ್ವಂ ಶುದ್ಧಾಂತಂ ಪುನರಭ್ಯಗಾತ್ ॥

ತತಃ ಪ್ರವಿಷ್ಟೇ ಪಿತುರಂತಿಕಂ ತದಾ
ಜನಃ ಸ ಸರ್ವೋ ಮುದಿತೋ ನೃಪಾತ್ಮಜೇ ।
ಪ್ರತೀಕ್ಷತೇ ತಸ್ಯ ಪುನರ್ವಿನಿರ್ಗಮಂ
ಯಥೋದಯಂ ಚಂದ್ರಮಸಃ ಸರಿತ್ಪತಿಃ ॥ ೨೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತದಶಃ ಸರ್ಗಃ

---

## ಅಷ್ಟಾದಶಃ ಸರ್ಗಃ

### ವನವಾಸನಿದೇಶಃ

ಸ ದದರ್ಶಾಸನೇ ರಾಮೋ ವಿಷಣ್ಣಂ ಪಿತರಂ ಶುಭೇ ।
ಕೈಕೇಯೀಸಹಿತಂ ದೀನಂ ಮುಖೇನ ಪರಿಶುಷ್ಯತಾ ॥ ೧

ಸ ಪಿತುಶ್ಚರಣೌ ಪೂರ್ವಮಭಿವಾದ್ಯ ವಿನೀತವತ್ ।
ತತೋ ವವಂದೇ ಚರಣೌ ಕೈಕೇಯ್ಯಾಃ ಸುಸಮಾಹಿತಃ ॥ ೨

---

(೨೦-೨೧). ಹೀಗೆ ಶ್ರೀರಾಮನು ತಂದೆಯ ಬಳಿಗೆ ಹೋಗಲು ಸಂತೋಷದಲ್ಲಿದ್ದ ಸಮಸ್ತ ಜನರೂ, ಚಂದ್ರೋದಯವನ್ನು ನಿರೀಕ್ಷಿಸುವ ಮಹಾಸಾಗರದಂತೆ, ಶ್ರೀರಾಮನ ಆಗಮನವನ್ನು ನಿರೀಕ್ಷಿಸುತ್ತ ನಿಂತಿದ್ದರು (೨೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹದಿನೇಳನೆಯ ಸರ್ಗ.

## ಸರ್ಗ ೧೮

**ದಶರಥನು ಶೋಕಿಸುವ ಕಾರಣವೇನೆಂದು ಶ್ರೀರಾಮನು ಕೈಕೇಯಿಯನ್ನು ಕೇಳುವುದು. ಅವಳು ತನ್ನ ವರಗಳ ವೃತ್ತಾಂತವನ್ನು ರಾಮನಿಗೆ ಹೇಳುವುದು.**

ಶ್ರೀರಾಮನು ಒಳಗೆ ಪ್ರವೇಶಿಸಿದೊಡನೆ ತನ್ನ ತಂದೆಯು ದೈನ್ಯದಿಂದ ಒಂದು ಪೀಠದ ಮೇಲೆ ಕುಳಿತಿರುವುದನ್ನು ಕಂಡನು. ತಂದೆಯ ಮುಖವು ಬಾಡಿಹೋಗಿತ್ತು. ಬಳಿಯಲ್ಲಿ ಕೈಕೇಯಿ ಇದ್ದಳು. ರಾಮನು ಧೈರ್ಯವನ್ನು ತಂದುಕೊಂಡು ತಂದೆಯ ಪಾದಗಳಿಗೆ ವಿನಯದಿಂದ ವಂದಿಸಿ

ರಾಮೇತ್ಯುಕ್ತ್ವಾ ಚ ವಚನಂ ಬಾಷ್ಪಪರ್ಯಾಕುಲೇಕ್ಷಣಃ ।
ಶಶಾಕ ನೃಪತಿರ್ದೀನೋ ನೇಕ್ಷಿತುಂ ನಾಭಿಭಾಷಿತುಮ್ ॥ ೩

ತದಪೂರ್ವಂ ನರಪತೇರ್ದೃಷ್ಟ್ವಾ ರೂಪಂ ಭಯಾವಹಮ್ ।
ರಾಮೋಽಪಿ ಭಯಮಾಪನ್ನಃ ಪದಾ ಸ್ಪೃಷ್ಟ್ವೇವ ಪನ್ನಗಮ್ ॥ ೪

ಇಂದ್ರಿಯೈರಪ್ರಹೃಷ್ಟೈಸ್ತಂ ಶೋಕಸಂತಾಪಕರ್ಶಿತಮ್ ।
ನಿಶ್ವಸಂತಂ ಮಹಾರಾಜಂ ವ್ಯಥಿತಾಕುಲಚೇತಸಮ್ ॥ ೫

ಊರ್ಮಿಮಾಲಿನಕ್ಷೋಭ್ಯಂ ಕ್ಷುಭ್ಯಂತಮಿವ ಸಾಗರಮ್ ।
ಉಪಪ್ಲುತಮಿವಾದಿತ್ಯಮುಕ್ತಾನೃತಮೃಷಿಂ ಯಥಾ ॥ ೬

ಅಚಿಂತ್ಯಕಲ್ಪಂ ಹಿ ಪಿತುಸ್ತಂ ಶೋಕಮುಪಧಾರಯನ್ ।
ಬಭೂವ ಸಂರಬ್ಧತರಃ ಸಮುದ್ರ ಇವ ಪರ್ವಣಿ ॥ ೭

ಚಿಂತಯಾಮಾಸ ಚ ತದಾ ರಾಮಃ ಪಿತೃಹಿತೇ ರತಃ ।
ಕಿಂಸ್ವಿದದ್ಯೈವ ನೃಪತಿರ್ನ ಮಾಂ ಪ್ರತ್ಯಭಿನಂದತಿ ॥ ೮

---

ಕೈಕೇಯಿಯ ಪಾದಗಳಿಗೆ ನಮಸ್ಕರಿಸಿದನು (೧-೨). ದಶರಥರಾಜನು ದೈನ್ಯದಿಂದ ಕಣ್ಣಲ್ಲಿ ನೀರು ಸುರಿಸುತ್ತ 'ರಾಮ' ಎಂದು ಹೇಳಿದನು. ಅವನಿಗೆ ರಾಮನನ್ನು ನೋಡಲೂ ಆಗಲಿಲ್ಲ. ಮುಂದೆ ಮಾತನಾಡಲೂ ಆಗಲಿಲ್ಲ. ನೋಡಿದರೆ ಭಯವಾಗುವಂತಿದ್ದ ದಶರಥನ ಆ ದುರವಸ್ಥೆಯನ್ನು ರಾಮನು ಹಿಂದೆ ಎಂದೂ ಕಂಡಿರಲಿಲ್ಲ. ಕಾಲಿನಿಂದ ಹಾವನ್ನು ತುಳಿದಂತೆ ರಾಮನಿಗೆ ಗಾಬರಿಯಾಯಿತು (೩-೪). ದಶರಥನ ಇಂದ್ರಿಯಗಳೆಲ್ಲವೂ ದುಃಖದಿಂದ ಕುಸಿದುಹೋಗಿದ್ದವು. ಅತ್ತು ಅತ್ತು ಅವನ ದೇಹವು ಕೃಶವಾಗಿತ್ತು. ವ್ಯಥೆಯಿಂದ ಮನಸ್ಸಿಗೆ ದಿಕ್ಕುಗಾಣದಾಗಿತ್ತು. ಗಂಭೀರವಾದ ಸಮುದ್ರವು ಅಲೆಗಳಿಂದ ಕಲಕಿಹೋದಂತೆ ದಶರಥನ ಚಿತ್ತವು ಕದಡಿಹೋಗಿತ್ತು. ಗ್ರಹಣ ಹಿಡಿದ ಸೂರ್ಯನಂತೆ ಅವನು ಕಂದಿಹೋಗಿದ್ದನು. ಸುಳ್ಳುಹೇಳಿದ ಋಷಿಯಂತೆ ಪರಿತಪಿಸುತ್ತಿದ್ದನು (೫-೬). ಊಹೆಗೂ ನಿಲುಕದ ತಂದೆಯ ಶೋಕವನ್ನು ಗಮನಿಸಿ ಶ್ರೀರಾಮನು ಪರ್ವಕಾಲದ ಸಮುದ್ರದಂತೆ ತಳಮಳಗೊಂಡನು. ತಂದೆಯ ಹಿತವನ್ನು ಸದಾ ಬಯಸುವ ರಾಮನು ಹೇಗೆ ಚಿಂತಿಸಿದನು : 'ಮಹಾರಾಜನು ಈ ದಿನವೇ ನನ್ನನ್ನು ಪ್ರೀತಿಪೂರ್ವಕವಾಗಿ

ಅನ್ಯದಾ ಮಾಂ ಪಿತಾ ದೃಷ್ಟ್ವಾ ಕುಪಿತೋಽಪಿ ಪ್ರಸೀದತಿ ।
ತಸ್ಯ ಮಾಮದ್ಯ ಸಂಪ್ರೇಕ್ಷ್ಯ ಕಿಮಾಯಾಸಃ ಪ್ರವರ್ತತೇ ॥ ೯
ಸ ದೀನ ಇವ ಶೋಕಾರ್ತೋ ವಿಷಣ್ಣವದನದ್ಯುತಿಃ ।
ಕೈಕೇಯೀಮಭಿವಾದ್ಯೈವ ರಾಮೋ ವಚನಮಬ್ರವೀತ್ ॥ ೧೦
ಕಚ್ಚಿನ್ಮಯಾ ನಾಪರಾದ್ಧಮಜ್ಞಾನಾದ್ಯೇನ ಮೇ ಪಿತಾ ।
ಕುಪಿತಸ್ತನ್ಮಮಾಚಕ್ಷ್ವ ತ್ವಂ ಚೈವೈನಂ ಪ್ರಸಾದಯ ॥ ೧೧
ಅಪ್ರಸನ್ನಮನಾಃ ಕಿಂ ನು ಸದಾ ಮಾಂ ಪ್ರತಿ ವತ್ಸಲಃ ।
ವಿವರ್ಣವದನೋ ದೀನೋ ನ ಹಿ ಮಾನಭಿಭಾಷತೇ ॥ ೧೨
ಶಾರೀರೋ ಮಾನಸೋ ವಾಪಿ ಕಚ್ಚಿದೇನಂ ನ ಬಾಧತೇ ।
ಸಂತಾಪೋ ವಾಭಿತಾಪೋ ವಾ ದುರ್ಲಭಂ ಹಿ ಸದಾ ಸುಖಮ್ ॥ ೧೩
ಕಚ್ಚಿನ್ನ ಕಿಂಚಿದ್ಭರತೇ ಕುಮಾರೇ ಪ್ರಿಯದರ್ಶನೇ ।
ಶತ್ರುಘ್ನೇ ವಾ ಮಹಾಸತ್ತ್ವೇ ಮಾತ್ಯಾಣಾಂ ವಾ ಮಮಾಶುಭಮ್ ॥ ೧೪

---

ಮಾತನಾಡಿಸದಿರುವನು. ಏಕಿರಬಹುದು ? (೭-೮). ಇತರ ವೇಳೆಯಲ್ಲಿ ತಂದೆಗೆ ಕೋಪ ಬಂದಿದ್ದರೂ ನನ್ನನ್ನು ಕಂಡೊಡನೆ ಪ್ರಸನ್ನನಾಗುತ್ತಿದ್ದನು. ಅಂಥವನಿಗೆ ಈ ದಿನ ನನ್ನನ್ನು ನೋಡಿದರೆ ಇಷ್ಟು ಆಯಾಸವಾಗುವುದೇಕೆ ?' ಎಂದು ಚಿಂತಿಸಿ ಸರ್ವಸ್ವವನ್ನೂ ಕಳೆದುಕೊಂಡವನಂತೆ ರಾಮನು ಶೋಕಾವಿಷ್ಟನಾದನು. ಮುಖದ ಕಾಂತಿಯು ಕುಂದಿತು. ಅವನು ಕೈಕೇಯಿಗೆ ಕಾಲುಮುಟ್ಟಿ ನಮಸ್ಕರಿಸಿ ಈ ರೀತಿ ಹೇಳಿದನು(೯-೧೦): "ಅಮ್ಮ, ನಾನು ಅಜ್ಞಾನದಿಂದ ತಂದೆಗೆ ಯಾವುದಾದರೂ ಅಪರಾಧವನ್ನು ಮಾಡಿದೆನೆ ? ತಂದೆಗೆ ಇಷ್ಟು ಕೋಪ ಬರಲು ಕಾರಣವೇನು ? ತಂದೆಗೆ ನೀನಾದರೂ ಸಮಾಧಾನವನ್ನು ಹೇಳು. ನನ್ನನ್ನು ಸದಾ ಪ್ರೀತಿಯಿಂದ ಕಾಣುತ್ತಿದ್ದ ಮಹಾರಾಜನು ನನ್ನಲ್ಲಿ ಏಕೆ ಅಸಮಾಧಾನಗೊಂಡಿದ್ದಾನೆ ? ಮುಖದ ಕಾಂತಿಯು ಬೇರೆಯಾಗಿದೆ; ದುಃಖಿತನಾಗಿದ್ದಾನೆ; ನನ್ನೊಡನೆ ಮಾತನಾಡುವುದಿಲ್ಲ (೧೧-೧೨). ದೇಹದಲ್ಲೇನಾದರೂ ಬಾಧೆಯಾಗಿದೆಯೆ ? ಮನಸ್ಸಿಗೆ ಖೇದ ವಾಗಿದೆಯೆ ? ಯಾವಾಗಲೂ ಸುಖದಲ್ಲಿರುವುದು ಮನುಷ್ಯನಿಗೆ ಶಕ್ಯವಿಲ್ಲ. ಕುಮಾರನಾದ ಭರತನಿಗಾಗಲಿ ವೀರನಾದ ಶತ್ರುಘ್ನನಿಗಾಗಲಿ ಯಾವ

ಅತೋಷಯನ್ ಮಹಾರಾಜಮಕುರ್ವನ್ ವಾ ಪಿತುರ್ವಚಃ ।
ಮುಹೂರ್ತಮಪಿ ನೇಚ್ಛೇಯಂ ಜೀವಿತಂ ಕುಪಿತೇ ನಪೇ ॥ ೧೫

ಯತೋ ಮೂಲಂ ನರಃ ಪಶ್ಯೇತ್ ಪ್ರಾದುರ್ಭಾವಮಿಹಾತ್ಮನಃ ।
ಕಥಂ ತಸ್ಮಿನ್ನ ವರ್ತೇತ ಪ್ರತ್ಯಕ್ಷೇ ಸತಿ ದೈವತೇ ॥ ೧೬

ಕಚ್ಚಿತ್ತ್ವೇ ಪರುಷಂ ಕಿಂಚಿದಭಿಮಾನಾತ್ ಪಿತಾ ಮಮ ।
ಉಕ್ತೋ ಭವತ್ಯಾ ಕೋಪೇನ ಯೇನಾಸ್ಯ ಲುಲಿತಂ ಮನಃ ॥ ೧೭

ಏತದಾಚಕ್ಷ್ವ ಮೇ ದೇವಿ ತತ್ತ್ವೇನ ಪರಿಪೃಚ್ಛತಃ ।
ಕಿಂ ನಿಮಿತ್ತಮಪೂರ್ವೋಽಯಂ ವಿಕಾರೋ ಮನುಜಾಧಿಪೇ ॥ ೧೮

ಏವಮುಕ್ತಾ ತು ಕೈಕೇಯೀ ರಾಘವೇಣ ಮಹಾತ್ಮನಾ ।
ಉವಾಚೇದಂ ಸುನಿರ್ಲಜ್ಜಾ ಧೃಷ್ಟಮಾತ್ಮಹಿತಂ ವಚಃ ॥ ೧೯

ನ ರಾಜಾ ಕುಪಿತೋ ರಾಮ ವ್ಯಸನಂ ನಾಸ್ಯ ಕಿಂಚನ ।
ಕಿಂಚಿನ್ಮನೋಗತಂ ತ್ವಸ್ಯ ತ್ವದ್ಭಯಾನ್ನಾಭಿಭಾಷತೇ ॥ ೨೦

---

ತೊಂದರೆಯೂ ಆಗಿಲ್ಲವಷ್ಟೆ ? ನನ್ನ ತಾಯಂದಿರಲ್ಲಿ ಯಾರಿಗೂ ಕೆಡುಕು ಸಂಭವಿಸಿಲ್ಲವಷ್ಟೆ? (೧೩-೧೪). ಮಹಾರಾಜನಾದ ನನ್ನ ತಂದೆಗೆ ಸಂತೋಷವನ್ನುಂಟು ಮಾಡದೆ, ಅವನ ಆಜ್ಞೆಯನ್ನು ನಡೆಸದೆ, ಅವನಿಗೆ ಕೋಪಬರುವಂತೆ ಮಾಡಿ ಒಂದು ನಿಮಿಷ ಕೂಡ ನನಗೆ ಬದುಕಿರಲು ಇಚ್ಛೆಯಿಲ್ಲ. ತನ್ನ ಜನ್ಮಕ್ಕೆ ಕಾರಣನಾದ ತಂದೆಯು ಮನುಷ್ಯನಿಗೆ ಪ್ರತ್ಯಕ್ಷ ದೇವತೆ. ಅಂಥ ತಂದೆಯಲ್ಲಿ ಯಾವನು ಹೇಗೆತಾನೆ ವಿಧೇಯನಾಗಿ ವರ್ತಿಸದೆ ಇರಲು ಸಾಧ್ಯ? (೧೫-೧೬). ಅಮ್ಮ, ಸಲಿಗೆಯಿಂದಲೊ ಕೋಪದಿಂದಲೊ ನನ್ನ ತಂದೆಗೆ ನೀನು ಯಾವುದಾದರೂ ಕಠೋರವಾದ ಮಾತನ್ನಾಡಿರಬಹುದೆ? ಅದರಿಂದ ಮಹಾರಾಜನ ಚಿತ್ತವು ಕ್ಷೋಭೆಗೊಂಡಿರಬಹುದೆ? ದೇವಿ, ನಿಜವಾದ ಸಂಗತಿಯೇನೆಂಬುದನ್ನು ನನಗೆ ತಿಳಿಸು. ಮಹಾರಾಜನಲ್ಲಿ ಎಂದೂ ಇಲ್ಲದ ಈ ಚಿತ್ತವಿಕಾರಕ್ಕೆ ನಿಮಿತ್ತವೇನು?" ಎಂದನು (೧೭-೧೮). ಮಹಾತ್ಮನಾದ ರಾಘವನು ಹೀಗೆ ಕೇಳಲಾಗಿ, ಲಜ್ಜೆಗೆಟ್ಟ ಕೈಕೇಯಿಯು ಹಿಂದೆ ಮುಂದೆ ನೋಡದೆ ಧೈರ್ಯದಿಂದ ಈ ರೀತಿಯಲ್ಲಿ ತನ್ನ ಸ್ವಾರ್ಥವನ್ನು ಹೇಳಿಬಿಟ್ಟಳು: "ರಾಮ, ಮಹಾರಾಜನಿಗೆ ಕೋಪವೂ ಬಂದಿಲ್ಲ, ಯಾವ ಕಷ್ಟವೂ ಕೂಡಿಲ್ಲ.

ಪ್ರಿಯಂ ತ್ವಾಮಪ್ರಿಯಂ ವಕ್ತುಂ ವಾಣೀ ನಾಸ್ಯೋಪವರ್ತತೇ ।
ತದವಶ್ಯಂ ತ್ವಯಾ ಕಾರ್ಯಂ ಯದನೇನಾಶ್ರುತಂ ಮಮ ॥ ೨೧

ಏಷ ಮಹ್ಯಂ ವರಂ ದತ್ತ್ವಾ ಪುರಾ ಮಾಮಭಿಪೂಜ್ಯ ಚ ।
ಸ ಪಶ್ಚಾತ್ತಪ್ಯತೇ ರಾಜಾ ಯಥಾನ್ಯಃ ಪ್ರಾಕೃತಸ್ತಥಾ ॥ ೨೨

ಅತಿಸೃಜ್ಯ ದದಾನೀತಿ ವರಂ ಮಮ ವಿಶಾಂಪತಿಃ ।
ಸ ನಿರರ್ಥಂ ಗತಜಲೇ ಸೇತುಂ ಬಂಧಿತುಮಿಚ್ಛತಿ ॥ ೨೩

ಧರ್ಮಮೂಲಮಿದಂ ರಾಮ ವಿದಿತಂ ಚ ಸತಾಮಪಿ ।
ತತ್ ಸತ್ಯಂ ನ ತ್ಯಜೇದ್ರಾಜಾ ಕುಪಿತಸ್ತ್ವತ್ಕೃತೇ ಯಥಾ ॥ ೨೪

ಯದಿ ತದ್ವಕ್ಷ್ಯತೇ ರಾಜಾ ಶುಭಂ ವಾ ಯದಿ ವಾಽಶುಭಮ್ ।
ಕರಿಷ್ಯಸಿ ತತಃ ಸರ್ವಮಾಖ್ಯಾಸ್ಯಾಮಿ ಪುನಸ್ತ್ವಹಮ್ ॥ ೨೫

ಯದಿ ತ್ವಭಿಹಿತಂ ರಾಜ್ಞಾ ತ್ವಯಿ ತನ್ನ ವಿಪತ್ಸ್ಯತೇ ।
ತತೋಽಹಮಭಿಧಾಸ್ಯಾಮಿ ನ ಹ್ಯೇಷ ತ್ವಯಿ ವಕ್ಷ್ಯತಿ ॥ ೨೬

---

ತನ್ನ ಮನಸ್ಸಿನಲ್ಲಿರುವ ಒಂದು ವಿಷಯವನ್ನು ನಿನಗೆ ಅಂಜಿಕೊಂಡು ಹೇಳುತ್ತಿಲ್ಲ (೧೯-೨೦). ನೀನು ಪ್ರೀತಿಪಾತ್ರನಾದ್ದರಿಂದ ಅಪ್ರಿಯವಾದದ್ದನ್ನು ಹೇಳಲು ಅವನಿಗೆ ಮಾತು ಹೊರಡುವುದಿಲ್ಲ. ಆತನು ನನಗೆ ಕೊಟ್ಟ ಮಾತನ್ನು ನೀನು ಅವಶ್ಯವಾಗಿ ನಡೆಸಬೇಕಾಗುತ್ತದೆ. ಈ ರಾಜನು ಹಿಂದೆ ನನಗೆ ಒಂದು ವರವನ್ನು ಕೊಟ್ಟು ಮನ್ನಿಸಿದ್ದನು. ಈಗ ಅದನ್ನು ಸಲ್ಲಿಸಬೇಕಾಗಿ ಬಂದಿತೆಂದು ಸಾಮಾನ್ಯ ಮನುಷ್ಯನಂತೆ ಪಶ್ಚಾತ್ತಾಪ ಪಡುತ್ತಿದ್ದಾನೆ (೨೧-೨೨). ಮಾತಿನಂತೆ ವರವನ್ನು ಸಲ್ಲಿಸುತ್ತೇನೆಂದು ಶಪಥ ಮಾಡಿ, ಈಗ ನೀರು ಹರಿದುಹೋದ ಮೇಲೆ ವ್ಯರ್ಥವಾಗಿ ಸೇತುವೆಯನ್ನು ಕಟ್ಟಲು ಬಯಸುತ್ತಿದ್ದಾನೆ. ರಾಮ, ಸತ್ಯವೇ ಧರ್ಮದ ಮೂಲವೆಂದು ಸಜ್ಜನರಿಗೆ ತಿಳಿದ ವಿಷಯವೇ ಸರಿ. ಅಂಥ ಸತ್ಯವನ್ನು ರಾಜನು ನಿನಗೋಸ್ಕರ ನನ್ನ ಮೇಲೆ ಕೋಪಿಸಿಕೊಂಡು ಬಿಟ್ಟುಬಿಡುವುದು ಯುಕ್ತವಲ್ಲ (೨೩-೨೪). ನಿನಗೆ ಹಿತವಾಗಲಿ - ಅಹಿತವಾಗಲಿ, ರಾಜನು ಹೇಳಿದ್ದನ್ನು ನೀನು ನಡೆಸುವುದಾದರೆ ಅದೇನೆಂಬುದನ್ನು ನಾನು ಹೇಳುತ್ತೇನೆ. ರಾಜನು ಹೇಳಬೇಕೆಂದಿರುವುದು ನಿನ್ನಲ್ಲಿ ವಿಫಲವಾಗುವುದಿಲ್ಲವೆಂದು ದೃಢವಾದರೆ ಮಾತ್ರ, ಅದನ್ನು

ಏತತ್ತು ವಚನಂ ಶ್ರುತ್ವಾ ಕೈಕೇಯ್ಯಾ ಸಮುದಾಹೃತಮ್ ।
ಉವಾಚ ವ್ಯಥಿತೋ ರಾಮಸ್ತಾಂ ದೇವೀಂ ನೃಪಸನ್ನಿಧೌ ॥ ೨೭

ಅಹೋ ಧಿಙ್ನಾರ್ಹಸೇ ದೇವಿ ವಕ್ತುಂ ಮಾಮೀದೃಶಂ ವಚಃ ।
ಅಹಂ ಹಿ ವಚನಾದ್ರಾಜ್ಞಃ ಪತೇಯಮಪಿ ಪಾವಕೇ ॥ ೨೮

ಭಕ್ಷಯೇಯಂ ವಿಷಂ ತೀಕ್ಷ್ಣಂ ಮಜ್ಜೇಯಮಪಿ ಚಾರ್ಣವೇ ।
ನಿಯುಕ್ತೋ ಗುರುಣಾ ಪಿತ್ರಾ ನೃಪೇಣ ಚ ಹಿತೇನ ಚ ॥ ೨೯

ತದ್ಬ್ರೂಹಿ ವಚನಂ ದೇವಿ ರಾಜ್ಞೋ ಯದಭಿಕಾಂಕ್ಷಿತಮ್ ।
ಕರಿಷ್ಯೇ ಪ್ರತಿಜಾನೇ ಚ ರಾಮೋ ದ್ವಿರ್ನಾಭಿಭಾಷತೇ ॥ ೩೦

ತಮಾರ್ಜವಸಮಾಯುಕ್ತಮನಾರ್ಯಾ ಸತ್ಯವಾದಿನಮ್ ।
ಉವಾಚ ರಾಮಂ ಕೈಕೇಯೀ ವಚನಂ ಭೃಶದಾರುಣಮ್ ॥ ೩೧

ಪುರಾ ದೈವಾಸುರೇ ಯುದ್ಧೇ ಪಿತ್ರಾ ತೇ ಮಮ ರಾಘವ ।
ರಕ್ಷಿತೇನ ವರೌ ದತ್ತೌ ಸಶಲ್ಯೇನ ಮಹಾರಣೇ ॥ ೩೨

---

ನಾನು ತಿಳಿಸುತ್ತೇನೆ. ಈತನು ಆ ವಿಷಯವನ್ನು ನಿನಗೆ ಹೇಳುವುದಿಲ್ಲ" ಎಂದಳು (೨೫-೨೬). ಕೈಕೇಯಿಯ ನುಡಿಯನ್ನು ಕೇಳಿ ರಾಮನಿಗೆ ವ್ಯಥೆಯಾಯಿತು. ಅವನು ದಶರಥನೆದುರಿಗೇ ಕೈಕೇಯಿಯನ್ನು ಕುರಿತು "ಅಯ್ಯೊ! ದೇವಿ, ನೀನು ಈ ರೀತಿಯಲ್ಲಿ ನನಗೆ ಹೇಳಬಹುದೆ? ಮಹಾರಾಜನು ಆಜ್ಞೆಮಾಡಿದರೆ ನಾನು ಬೆಂಕಿಯಲ್ಲಾದರೂ ಧುಮುಕುವೆನು (೨೭-೨೮). ಘೋರವಿಷವನ್ನಾದರೂ ತಿನ್ನುವೆನು. ಸಮುದ್ರದಲ್ಲಾದರೂ ಮುಳುಗುವೆನು. ನನಗೆ ಗುರುವಾಗಿ, ತಂದೆಯಾಗಿ, ದೊರೆಯಾಗಿ, ಹಿತಕಾರಿಯಾಗಿರುವ ಈತನು ಅಪ್ಪಣೆ ಮಾಡಿದಂತೆ ನಡೆಯುವೆನು. ಆದ್ದರಿಂದ, ತಾಯಿ, ಮಹಾರಾಜನ ಇಷ್ಟವೇನೆಂಬುದನ್ನು ಹೇಳು. ಅದರಂತೆ ನಡೆಯುತ್ತೇನೆಂದು ಪ್ರತಿಜ್ಞೆಮಾಡುತ್ತೇನೆ. ರಾಮನು ಎರಡು ಮಾತನಾಡ ತಕ್ಕವನಲ್ಲ" ಎಂದು ಹೇಳಿದನು (೨೯-೩೦). ಹೀಗೆ ಆರ್ಜವಯುಕ್ತನಾಗಿ ಮಾತನಾಡಿದ ಸತ್ಯಸಂಧನಾದ ಶ್ರೀರಾಮನನ್ನು ನೋಡಿ ಅನಾರ್ಯಳಾದ ಕೈಕೇಯಿಯು ಅತಿ ಕಠೋರವಾದ ವಾಕ್ಯವನ್ನು ಹೇಳಿದಳು : "ರಾಮ, ಹಿಂದೆ ದೇವಾಸುರರಿಗೆ ಸಂಗ್ರಾಮವು ನಡೆದಾಗ ಗಾಯಗೊಂಡ ನಿನ್ನ ತಂದೆಯನ್ನು ನಾನು

ತತ್ರ ಮೇ ಯಾಚಿತೋ ರಾಜಾ ಭರತಸ್ಯಾಭಿಷೇಚನಮ್ ।
ಗಮನಂ ದಂಡಕಾರಣ್ಯೇ ತವ ಚಾದ್ಯೈವ ರಾಘವ ॥ ೩೩

ಯದಿ ಸತ್ಯಪ್ರತಿಜ್ಞಂ ತ್ವಂ ಪಿತರಂ ಕರ್ತುಮಿಚ್ಛಸಿ ।
ಆತ್ಮಾನಂ ಚ ನರಶ್ರೇಷ್ಠ ಮಮ ವಾಕ್ಯಮಿದಂ ಶೃಣು ॥ ೩೪

ಸಂನಿದೇಶೇ ಪಿತುಸ್ತಿಷ್ಠ ಯಥಾನೇನ ಪ್ರತಿಶ್ರುತಮ್ ।
ತ್ವಯಾರಣ್ಯಂ ಪ್ರವೇಷ್ಟವ್ಯಂ ನವ ವರ್ಷಾಣಿ ಪಂಚ ಚ ॥ ೩೫

ಭರತಸ್ತ್ವಭಿಷಿಚ್ಯೇತ ಯದೇತದಭಿಷೇಚನಮ್ ।
ತ್ವದರ್ಥೇ ವಿಹಿತಂ ರಾಜ್ಞಾ ತೇನ ಸರ್ವೇಣ ರಾಘವ ॥ ೩೬

ಸಪ್ತ ಸಪ್ತ ಚ ವರ್ಷಾಣಿ ದಂಡಕಾರಣ್ಯಮಾಶ್ರಿತಃ ।
ಅಭಿಷೇಕಮಿಮಂ ತ್ಯಕ್ತ್ವಾ ಜಟಾಚೀರಧರೋ ವಸ ॥ ೩೭

ಭರತಃ ಕೋಸಲಪುರೇ ಪ್ರಶಾಸ್ತು ವಸುಧಾಮಿಮಾಮ್ ।
ನಾನಾರತ್ನಸಮಾಕೀರ್ಣಾಂ ಸವಾಜಿರಥಕುಂಜರಾಮ್ ॥ ೩೮

---

ರಕ್ಷಿಸಿದೆನು. ಅದರಿಂದ ಸಂಪ್ರೀತನಾಗಿ ಈ ರಾಜನು ನನಗೆ ಎರಡು ವರಗಳನ್ನು ಕೊಟ್ಟಿದ್ದನು (೩೧-೩೨). ಅವುಗಳನ್ನು ಸಲ್ಲಿಸಬೇಕೆಂದು ನಾನು ಈಗ ಬೇಡಿದೆನು. ಅದರ ಪ್ರಕಾರ ಭರತನಿಗೆ ಪಟ್ಟಾಭಿಷೇಕವಾಗಬೇಕು. ನೀನು ಈ ದಿನವೇ ದಂಡಕಾರಣ್ಯಕ್ಕೆ ಹೊರಡಬೇಕು. ಎಲೈ ಪುರುಷಶ್ರೇಷ್ಠನೆ, ನಿನ್ನ ತಂದೆಯನ್ನೂ ನಿನ್ನನ್ನೂ ಸತ್ಯಸಂಧರನ್ನಾಗಿಯೇ ಉಳಿಸಿಕೊಳ್ಳಬೇಕೆಂದಿದ್ದರೆ ನನ್ನ ಮಾತನ್ನು ಕೇಳು (೩೩-೩೪). ನಿನ್ನ ತಂದೆಯು ನನಗೆ ಮಾತುಕೊಟ್ಟಂತೆ ನಡೆದುಕೊ. ನೀನು ಹದಿನಾಲ್ಕು ವರ್ಷಗಳವರೆಗೆ ಅರಣ್ಯದಲ್ಲಿರಬೇಕು. ರಾಜನು ನಿನಗೋಸ್ಕರ ಏರ್ಪಡಿಸಿದ ಈ ಸಾಮಗ್ರಿಗಳಿಂದಲೇ ಭರತನಿಗೆ ಪಟ್ಟಾಭಿಷೇಕವಾಗಬೇಕು (೩೫-೩೬). ನೀನು ಈಗ ಪಟ್ಟಾಭಿಷೇಕವನ್ನು ಮಾಡಿಸಿ ಕೊಳ್ಳಕೂಡದು. ಹದಿನಾಲ್ಕು ವರ್ಷಗಳ ಕಾಲ ನೀನು ಜಟೆಯನ್ನು ಧರಿಸಿ ನಾರುಬಟ್ಟೆಯನ್ನುಟ್ಟು ದಂಡಕಾರಣ್ಯದಲ್ಲಿ ವಾಸವಾಗಿರು. ಭರತನು ಈ ಕೋಸಲ ರಾಜಧಾನಿಯಲ್ಲಿದ್ದು ರಾಜ್ಯವನ್ನಾಳಲಿ. ನಾನಾ ರತ್ನಗಳಿಂದಲೂ ಅಶ್ವರಥ ಗಜಾದಿಗಳಿಂದಲೂ ಸಮೃದ್ಧವಾದ ಈ ರಾಜ್ಯವನ್ನು

ಏತೇನ ತ್ವಾಂ ನರೇಂದ್ರೋಽಯಂ ಕಾರುಣ್ಯೇನ ಸಮಾಪ್ತುತಃ ।
ಶೋಕಸಂಕ್ಲಿಷ್ಟವದನೋ ನ ಶಕ್ನೋತಿ ನಿರೀಕ್ಷಿತುಮ್ ॥ ೩೯

ಏತತ್ ಕುರು ನರೇಂದ್ರಸ್ಯ ವಚನಂ ರಘುನಂದನ ।
ಸತ್ಯೇನ ಮಹತಾ ರಾಮ ತಾರಯಸ್ವ ನರಾಧಿಪಮ್ ॥ ೪೦

ಇತೀವ ತಸ್ಯಾಂ ಪರುಷಂ ವದಂತ್ಯಾಂ
ನ ಚೈವ ರಾಮಃ ಪ್ರವಿವೇಶ ಶೋಕಮ್ ।
ಪ್ರವಿವ್ಯಥೇ ಚಾಪಿ ಮಹಾನುಭಾವೋ
ರಾಜಾ ತು ಪುತ್ರವ್ಯಸನಾಭಿತಪ್ತಃ ॥ ೪೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾದಶಃ ಸರ್ಗಃ

ಭರತನು ಅನುಭವಿಸಲಿ (೩೭-೩೮). ಈ ಎರಡು ವರಗಳನ್ನು ನನಗೆ ಸಲ್ಲಿಸಬೇಕಾಗಿರುವುದರಿಂದಲೇ ಈ ನರೇಂದ್ರನು ನಿನ್ನ ಮೇಲಿನ ಕಾರುಣ್ಯದಲ್ಲಿ ಮುಳುಗಿ ಶೋಕದಿಂದ ಮುಖವನ್ನು ಒಣಗಿಸಿಕೊಂಡು ನಿನ್ನನ್ನು ತಲೆಯೆತ್ತಿ ನೋಡಲಾರದೆ ಇದ್ದಾನೆ. ರಘುಕುಲೋತ್ಪನ್ನನಾದ ನೀನು ಮಹಾರಾಜನ ಈ ಆಜ್ಞೆಯನ್ನು ನಡೆಸಬೇಕು. ಸತ್ಯವನ್ನು ಪರಿಪಾಲಿಸಿ ರಾಜನನ್ನು ಉದ್ಧರಿಸಬೇಕು" ಎಂದಳು (೩೯-೪೦). ಹೀಗೆ ಕೈಕೇಯಿಯು ಕಠೋರವಾದ ಮಾತನ್ನಾಡುತ್ತಿದ್ದರೂ ರಾಮನಿಗೆ ಯಾವ ಅಸಮಾಧಾನವೂ ಆಗಲಿಲ್ಲ. ಆ ಮಹಾನುಭಾವನು ಸ್ವಲ್ಪವೂ ವ್ಯಥೆಪಡಲಿಲ್ಲ. ದಶರಥನು ಮಾತ್ರ ಮಗನಿಗೆ ಕಷ್ಟವು ಬಂದಿತೆಂದು ಸಂಕಟದಿಂದ ಬೆಂದುಹೋದನು (೪೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹದಿನೆಂಟನೆಯ ಸರ್ಗ

## ಏಕೋನವಿಂಶಃ ಸರ್ಗಃ

### ರಾಮಪ್ರತಿಜ್ಞಾ

ತದಪ್ರಿಯಾಮಮಿತ್ರಘ್ನೋ ವಚನಂ ಮರಣೋಪಮಮ್ ।
ಶ್ರುತ್ವಾ ನ ವಿವ್ಯಥೇ ರಾಮಃ ಕೈಕೇಯೀಂ ಚೇದಮಬ್ರವೀತ್ ॥ ೧

ಏವಮಸ್ತು ಗಮಿಷ್ಯಾಮಿ ವನಂ ವಸ್ತುಮಹಂ ತ್ವಿತಃ ।
ಜಟಾಚೀರಧರೋ ರಾಜ್ಞಃ ಪ್ರತಿಜ್ಞಾಮನುಪಾಲಯನ್ ॥ ೨

ಇದಂ ತು ಜ್ಞಾತುಮಿಚ್ಛಾಮಿ ಕಿಮರ್ಥಂ ಮಾಂ ಮಹೀಪತಿಃ ।
ನಾಭಿನಂದತಿ ದುರ್ಧರ್ಷೋ ಯಥಾಪೂರ್ವಮರಿಂದಮಃ ॥ ೩

ಮನ್ಯುರ್ನ ಚ ತ್ವಯಾ ಕಾರ್ಯೋ ದೇವಿ ಬ್ರೂಮಿ ತವಾಗ್ರತಃ ।
ಯಾಸ್ಯಾಮಿ ಭವ ಸುಪ್ರೀತಾ ವನಂ ಚೀರಜಟಾಧರಃ ॥ ೪

ಹಿತೇನ ಗುರುಣಾ ಪಿತ್ರಾ ಕೃತಜ್ಞೇನ ನೃಪೇಣ ಚ ।
ನಿಯುಜ್ಯಮಾನೋ ವಿಸ್ರಬ್ಧಃ ಕಿಂ ನ ಕುರ್ಯಾಮಹಂ ಪ್ರಿಯಮ್ ॥

## ಸರ್ಗ ೧೯

**ಶ್ರೀರಾಮನು ಕಾಡಿಗೆ ಹೋಗಲು ಒಪ್ಪಿ ಆ ವಿಷಯವನ್ನು ತನ್ನ ತಾಯಿಗೆ ತಿಳಿಸಲು ಹೋಗುವುದು.**

ಶತ್ರುಸಂಹಾರಕನಾದ ಶ್ರೀರಾಮನು ಮೃತ್ಯುವಿನಂತೆ ಕ್ರೂರವಾದ ಕೈಕೇಯಿಯ ಮಾತನ್ನು ಕೇಳಿ ಸ್ವಲ್ಪವೂ ವ್ಯಥೆಪಡಲಿಲ್ಲ. ಅವನು ಕೈಕೇಯಿಯನ್ನು ನೋಡಿ ಹೀಗೆಂದನು : "ಹಾಗೆಯೇ ಆಗಲಿ, ನಾನು ವನವಾಸಕ್ಕಾಗಿ ಹೋಗುವೆನು. ಮಹಾರಾಜನು ಮಾತುಕೊಟ್ಟುದನ್ನು ಪೂರೈಸುವುದಕ್ಕಾಗಿ ಜಟೆಯನ್ನು ಧರಿಸಿ ನಾರು ಬಟ್ಟೆಯನ್ನುಡುವೆನು (೧-೨). ಆದರೆ ಒಂದು ವಿಷಯವನ್ನು ನಾನು ತಿಳಿದುಕೊಳ್ಳ ಬೇಕಾಗಿದೆ. ಧೀರನಾದ ಮಹಾರಾಜನು ಮೊದಲಿನಂತೆ ನನ್ನೊಡನೆ ಮಾತನಾಡ ದಿರಲು ಕಾರಣವೇನು? ದೇವಿ, ನೀನು ಚಿಂತಿಸಬೇಡ. ನಿನ್ನೆದುರಿಗೇ ಹೇಳುತ್ತಿದ್ದೇನೆ; ನಾನು ಜಟಾವಲ್ಕಲಗಳನ್ನು ಧರಿಸಿ ನಿಶ್ಚಯವಾಗಿಯೂ ಅರಣ್ಯಕ್ಕೆ ಹೋಗುತ್ತೇನೆ. ನೀನು ಸಂತುಷ್ಟಳಾಗು (೩-೪). ಮಹಾರಾಜನು ನಿನ್ನ ಉಪಕಾರವನ್ನು ಸ್ಮರಿಸುವಷ್ಟು

ಅಲೀಕಂ ಮಾನಸಂ ತ್ವೇಕಂ ಹೃದಯಂ ದಹತೀವ ಮೇ ।
ಸ್ವಯಂ ಯನ್ನಾಹ ಮಾಂ ರಾಜಾ ಭರತಸ್ಯಾಭಿಷೇಚನಮ್ ॥ ೬

ಅಹಂ ಹಿ ಸೀತಾಂ ರಾಜ್ಯಂ ಚ ಪ್ರಾಣಾನಿಷ್ಟಾನ್ ಧನಾನಿ ಚ ।
ಹೃಷ್ಟೋ ಭ್ರಾತ್ರೇ ಸ್ವಯಂ ದದ್ಯಾಂ ಭರತಾಯಾಪ್ರಚೋದಿತಃ ॥ ೭

ಕಿಂ ಪುನರ್ಮಾನುಜೇಂದ್ರೇಣ ಸ್ವಯಂ ಪಿತ್ರಾ ಪ್ರಚೋದಿತಃ ।
ತವ ಚ ಪ್ರಿಯಕಾಮಾರ್ಥಂ ಪ್ರತಿಜ್ಞಾಮನುಪಾಲಯನ್ ॥ ೮

ತದಾಶ್ವಾಸಯ ಹ್ರೀಮಂತಂ ಕಿಂ ನ್ವಿದಂ ಯನ್ಮಹೀಪತಿಃ ।
ವಸುಧಾಸಕ್ತನಯನೋ ಮಂದಮಶ್ರೂಣಿ ಮುಂಚತಿ ॥ ೯

ಗಚ್ಛಂತು ಚೈವಾನಯಿತುಂ ದೂತಾಃ ಶೀಘ್ರಜವೈರ್ಹಯೈಃ ।
ಭರತಂ ಮಾತುಲಕುಲಾದದ್ಯೈವ ನೃಪಶಾಸನಾತ್ ॥ ೧೦

---

ಕೃತಜ್ಞನಲ್ಲವೆ ? ನನ್ನ ಶ್ರೇಯಸ್ಸನ್ನು ಕೋರುತ್ತ ನನಗೆ ಗುರುವಾಗಿ ತಂದೆಯಾಗಿ ರಾಜನಾದವನು ಆಜ್ಞೆಮಾಡಿದರೆ ಅವನ ಸಂತೋಷಕ್ಕಾಗಿ ಯಾವ ಕಾರ್ಯವನ್ನು ನಾನು ಮಾಡದೆ ಇದ್ದೇನು? ನಿಶ್ಶಂಕೆಯಿಂದ ಮಾಡುತ್ತೇನೆ (೫). ಆದರೆ ಭರತನಿಗೆ ಪಟ್ಟಾಭಿಷೇಕಮಾಡುತ್ತೇನೆಂದು ಮಹಾರಾಜನೇ ನನಗೆ ಏಕೆ ಹೇಳುವುದಿಲ್ಲ ವೆಂದು ನನಗೆ ಸಂಕಟವಾಗಿದೆ. ಇದು ನನ್ನ ಮನಸ್ಸಿನಲ್ಲಿ ನಿಂತು ನನ್ನನ್ನು ಕೊರೆಯುತ್ತಿದೆ (೬). ಯಾರು ಹೇಳದಿದ್ದರೂ ನನ್ನ ತಮ್ಮನಾದ ಭರತನಿಗೋಸ್ಕರ ರಾಜ್ಯವನ್ನೇ ಏಕೆ, ನನ್ನ ಪ್ರಾಣವನ್ನೂ ಸಕಲ ಐಶ್ವರ್ಯವನ್ನೂ ನಾನಾಗಿ ಸಂತೋಷದಿಂದ ಬಿಟ್ಟುಕೊಡಬಲ್ಲೆ. ಸೀತೆಯನ್ನಾದರೂ ತೊರೆದೇನು. ಹೀಗಿರುವಾಗ ನರೇಂದ್ರನಾದ ನನ್ನ ತಂದೆಯೇ ಆಜ್ಞಾಪಿಸಿದರೆ ಹೇಳಬೇಕಾದ್ದೇನು? ಇದರಿಂದ ನಿನಗೂ ಸಂತೋಷವಾಗುತ್ತದೆ, ನನ್ನ ತಂದೆಯ ಪ್ರತಿಜ್ಞೆಯೂ ನೆರವೇರುತ್ತದೆ - ಎಂದ ಮೇಲೆ ಅವಶ್ಯವಾಗಿ ರಾಜ್ಯವನ್ನು ಬಿಟ್ಟು ಹೋಗುತ್ತೇನೆ (೨-೮). ಆದ್ದರಿಂದ, ತಾಯಿ, ಮಾತಾಡಲು ಸಂಕೋಚಪಡುತ್ತಿರುವ ಮಹಾರಾಜನಿಗೆ ಸಮಾಧಾನ ವನ್ನು ಹೇಳು. ಆತನು ನೆಲವನ್ನು ನೋಡುತ್ತ ಕಣ್ಣೀರು ಸುರಿಸುವುದೇಕೆ? ಈಗಲೇ ರಾಜಾಜ್ಞೆಯಂತೆ ದೂತರು ಶೀಘ್ರಗಾಮಿಗಳಾದ ಅಶ್ವಗಳನ್ನೇರಿ ಭರತನನ್ನು ಸೋದರಮಾವನ ಮನೆಯಿಂದ ಕರೆತರುವುದಕ್ಕೆ ಹೋಗಲಿ (೯-೧೦).

ದಂಡಕಾರಣ್ಯಮೇಷೋಽಹಮಿತೋ ಗಚ್ಛಾಮಿ ಸತ್ವರಃ ।
ಅವಿಚಾರ್ಯ ಪಿತುರ್ವಾಕ್ಯಂ ಸಮಾ ವಸ್ತುಂ ಚತುರ್ದಶ ॥ ೧೧

ಸಾ ಹೃಷ್ಟಾ ತಸ್ಯ ತದ್ವಾಕ್ಯಂ ಶ್ರುತ್ವಾ ರಾಮಸ್ಯ ಕೈಕಯೀ ।
ಪ್ರಸ್ಥಾನಂ ಶ್ರದ್ಧಧಾನಾ ಹಿ ತ್ವರಯಾಮಾಸ ರಾಘವಮ್ ॥ ೧೨

ಏವಂ ಭವತು ಯಾಸ್ಯಂತಿ ದೂತಾಃ ಶೀಘ್ರಜವೈರ್ಹಯೈಃ ।
ಭರತಂ ಮಾತುಲಕುಲಾದುಪಾವರ್ತಯಿತುಂ ನರಾಃ ॥ ೧೩

ತವ ತ್ವಹಂ ಕ್ಷಮಂ ಮನ್ಯೇ ನೋತ್ಸುಕಸ್ಯ ವಿಲಂಬನಮ್ ।
ರಾಮ ತಸ್ಮಾದಿತಃ ಶೀಘ್ರಂ ವನಂ ತ್ವಂ ಗಂತುಮರ್ಹಸಿ ॥ ೧೪

ವ್ರೀಡಾನ್ವಿತಃ ಸ್ವಯಂ ಯಚ್ಚ ನೃಪಸ್ತ್ವಾಂ ನಾಭಿಭಾಷತೇ ।
ನೈತತ್ಕಿಂಚಿನ್ನರಶ್ರೇಷ್ಠ ಮನ್ಯುರೇಷೋಽಪನೀಯತಾಮ್ ॥ ೧೫

ಯಾವತ್ತ್ವಂ ನ ವನಂ ಯಾತಃ ಪುರಾದಸ್ಮಾದಭಿತ್ವರನ್ ।
ಪಿತಾ ತಾವನ್ನ ತೇ ರಾಮ ಸ್ನಾಸ್ಯತೇ ಭೋಕ್ಷ್ಯತೇಽಪಿ ವಾ ॥ ೧೬

---

ಇಗೊ, ನಾನು ತಡಮಾಡದೆ ದಂಡಕಾರಣ್ಯಕ್ಕೆ ಹೊರಡುತ್ತೇನೆ. ಹಿಂದು ಮುಂದು ನೋಡದೆ, ತಂದೆಯ ಮಾತಿನಂತೆ ಹದಿನಾಲ್ಕು ವರ್ಷ ಅರಣ್ಯದಲ್ಲಿರುತ್ತೇನೆ" ಎಂದನು (೧೧). ರಾಮನ ವಚನವನ್ನು ಕೇಳಿ ಕೈಕೇಯಿಯು ಹರ್ಷದಿಂದ ಉಬ್ಬಿದಳು. ರಾಮನು ಕಾಡಿಗೆ ಹೋಗುವುದು ನಿಶ್ಚಯವೆಂದು ತಿಳಿದುಕೊಂಡಳು. ಅವನನ್ನು ಇನ್ನೂ ತ್ವರೆಪಡಿಸುತ್ತ ಈ ಪ್ರಕಾರ ಹೇಳಿದಳು : "ಹಾಗೆಯೇ ಆಗಲಿ; ರಾಮ, ದೂತರು ಶೀಘ್ರಗಾಮಿಗಳಾದ ಅಶ್ವಗಳನ್ನೇರಿ ಭರತನನ್ನು ಕರೆತರಲು ಹೋಗುವರು (೧೨-೧೩). ಆದರೆ ತಂದೆಯ ಮಾತನ್ನು ನಡೆಸಲು ಉತ್ಸಾಹದಿಂದಿರುವ ನೀನು ತಡಮಾಡುವುದು ಸರಿಯಲ್ಲ. ನೀನು ಕೂಡಲೆ ಇಲ್ಲಿಂದ ಕಾಡಿಗೆ ಹೊರಟುಹೋಗಬೇಕು. ನೀನು ಪುರುಷರಲ್ಲಿ ಶ್ರೇಷ್ಠನಾದವನು. ರಾಜನು ಸಂಕೋಚದಿಂದ ನಿನ್ನೊಡನೆ ಮಾತನಾಡುತ್ತಿಲ್ಲ; ಅದೇನೂ ದೊಡ್ಡ ವಿಷಯವಲ್ಲ. ನೀನು ಚಿಂತಿಸಬೇಡ (೧೪-೧೫). ನೀನು ಈ ನಗರವನ್ನು ಬಿಟ್ಟು ಕಾಡಿಗೆ ಹೊರಟುಹೋಗುವವರೆಗೂ, ರಾಮ, ನಿನ್ನ ತಂದೆ ಸ್ನಾನವನ್ನೂ ಮಾಡುವುದಿಲ್ಲ;

ಧಿಕ್ಕಷ್ಟಮಿತಿ ನಿಃಶ್ವಸ್ಯ ರಾಜಾ ಶೋಕಪರಿಪ್ಲುತಃ ।
ಮೂರ್ಛಿತೋ ನ್ಯಪತತ್ತಸ್ಮಿನ್ ಪರ್ಯಂಕೇ ಹೇಮಭೂಷಿತೇ ॥ ೧೭

ರಾಮೋಽಪ್ಯುತ್ಥಾಯ ರಾಜಾನಂ ಕೈಕೇಯ್ಯಾಭಿಪ್ರಚೋದಿತಃ ।
ಕಶಯೇವಾಹತೋ ವಾಜೀ ವನಂ ಗಂತುಂ ಕೃತತ್ವರಃ ॥ ೧೮

ತದಪ್ರಿಯಮನಾರ್ಯಾಯಾ ವಚನಂ ದಾರುಣೋದಯಮ್ ।
ಶ್ರುತ್ವಾ ಗತವ್ಯಥೋ ರಾಮಃ ಕೈಕೇಯೀಂ ವಾಕ್ಯಮಬ್ರವೀತ್ ॥ ೧೯

ನಾಹಮರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ ।
ವಿದ್ಧಿ ಮಾಮೃಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಮ್ ॥ ೨೦

ಯದತ್ರಭವತಃ ಕಿಂಚಿತ್ ಶಕ್ಯಂ ಕರ್ತುಂ ಪ್ರಿಯಂ ಮಯಾ ।
ಪ್ರಾಣಾನಪಿ ಪರಿತ್ಯಜ್ಯ ಸರ್ವಥಾ ಕೃತಮೇವ ತತ್ ॥ ೨೧

ನ ಹ್ಯತೋ ಧರ್ಮಚರಣಂ ಕಿಂಚಿದಸ್ತಿ ಮಹತ್ತರಮ್ ।
ಯಥಾ ಪಿತರಿ ಶುಶ್ರೂಷಾ ತಸ್ಯ ವಾ ವಚನಕ್ರಿಯಾ ॥ ೨೨

---

ಊಟವನ್ನೂ ಮಾಡುವುದಿಲ್ಲ" ಎಂದು ನುಡಿದಳು (೧೬). ಅಷ್ಟರಲ್ಲಿ ದಶರಥನು ಉಮ್ಮಳಿಸುವ ದುಃಖವನ್ನು ತಡೆಯಲಾರದೆ "ಅಯ್ಯೊ ಕಷ್ಟವೆ!" ಎನ್ನುತ್ತ ಉಸಿರೆಳೆದು ಸುವರ್ಣಮಯವಾದ ಮಂಚದಲ್ಲಿ ಎಚ್ಚರದಪ್ಪಿ ಬಿದ್ದನು. ರಾಮನು ದಶರಥನನ್ನು ಎತ್ತಿ ಕುಳ್ಳಿರಿಸಿದನು. ಇತ್ತ ಕೈಕೇಯಿಯ ಒತ್ತಾಯವು, ಕುದುರೆಯನ್ನು ಚಾಟಿಯಿಂದ ಹೊಡೆದಂತೆ ಕಾಡಿಗೆ ಹೋಗಲು ರಾಮನನ್ನು ತ್ವರೆಪಡಿಸುತ್ತಿತ್ತು (೧೭-೧೮). ಅಯೋಗ್ಯಳಾದ ಆಕೆಯ ನಿಷ್ಠುರವಾದ ಮಾತನ್ನು ಕೇಳಿಯೂ ರಾಮನು ನಿಶ್ಚಿಂತೆಯಿಂದ ಕೈಕೇಯಿಗೆ ಈ ರೀತಿ ಹೇಳಿದನು : "ದೇವಿ, ನಾನು ಐಶ್ವರ್ಯ ಕಾಮನೆಯಿಂದ ಈ ಲೋಕದಲ್ಲಿರಲು ಬಯಸುತ್ತಿಲ್ಲ. ನಾನು ಋಷಿಗಳಂತೆ ಕೇವಲ ಧರ್ಮವನ್ನು ನಂಬಿದ್ದೇನೆಂದು ತಿಳಿದುಕೊ (೧೯-೨೦). ಪೂಜ್ಯನಾದ ನನ್ನ ತಂದೆಗೆ ಪ್ರಿಯವಾದ್ದನ್ನು ಮಾಡಲು ನನಗೆ ಶಕ್ಯವಾದರೆ, ನನ್ನ ಪ್ರಾಣ ವನ್ನಾದರೂ ಕೊಟ್ಟು ಅದನ್ನು ಮಾಡಿಯೇ ತೀರುತ್ತೇನೆ. ತಂದೆಯ ಸೇವೆಯನ್ನು ಮಾಡುವುದು, ತಂದೆಯ ಮಾತಿನಂತೆ ಆಚರಿಸುವುದು - ಇದಕ್ಕಿಂತಲೂ

ಅನುಕ್ತೋಽಪ್ಯತ್ರಭವತಾ ಭವತ್ಯಾ ವಚನಾದಹಮ್ ।
ವನೇ ವತ್ಸ್ಯಾಮಿ ವಿಜನೇ ವರ್ಷಾಣೀಹ ಚತುರ್ದಶ ॥ ೨೩

ನ ನೂನಂ ಮಯಿ ಕೈಕೇಯಿ ಕಿಂಚಿದಾಶಂಸಸೇ ಗುಣಮ್ ।
ಯದ್ರಾಜಾನಮವೋಚಸ್ತ್ವಂ ಮಮೇಶ್ವರತರಾ ಸತೀ ॥ ೨೪

ಯಾವನ್ನಾತರಮಾಪೃಚ್ಛೇ ಸೀತಾಂ ಚಾನುನಯಾಮ್ಯಹಮ್ ।
ತತೋಽದ್ಯೈವ ಗಮಿಷ್ಯಾಮಿ ದಂಡಕಾನಾಂ ಮಹದ್ವನಮ್ ॥ ೨೫

ಭರತಃ ಪಾಲಯೇದ್ರಾಜ್ಯಂ ಶುಶ್ರೂಷೇಚ್ಚ ಪಿತುರ್ಯಥಾ ।
ತಥಾ ಭವತ್ಯಾ ಕರ್ತವ್ಯಂ ಸ ಹಿ ಧರ್ಮಃ ಸನಾತನಃ ॥ ೨೬

ಸ ರಾಮಸ್ಯ ವಚಃ ಶ್ರುತ್ವಾ ಭೃಶಂ ದುಃಖಹತಃ ಪಿತಾ ।
ಶೋಕಾದಶಕ್ನುವನ್ ವಕ್ತುಂ ಪ್ರರುರೋದ ಮಹಾಸ್ವನಮ್ ॥ ೨೭

ವಂದಿತ್ವಾ ಚರಣೌ ರಾಮೋ ವಿಸಂಜ್ಞಸ್ಯ ಪಿತುಸ್ತಥಾ ।
ಕೈಕೇಯ್ಯಾಶ್ಚಾಪ್ಯನಾರ್ಯಾಯಾ ನಿಶ್ಚಕ್ರಾಮ ಮಹಾದ್ಯುತಿಃ ॥ ೨೮

---

ಹೆಚ್ಚಿನ ಧರ್ಮ ಯಾವುದೂ ಇಲ್ಲ (೨೧-೨೨). ನನ್ನ ತಂದೆಯು ಹೇಳದಿದ್ದರೂ ಪೂಜ್ಯಳಾದ ನಿನ್ನ ಮಾತನ್ನೇ ನಂಬಿ ನಿರ್ಜನವಾದ ವನದಲ್ಲಿ ಹದಿನಾಲ್ಕು ವರ್ಷ ವಾಸಮಾಡುವೆನು. ಕೇಕಯರಾಜಪುತ್ರಿಯಾದ ನೀನು ನನ್ನಲ್ಲಿ ಯಾವ ಸದ್ಗುಣವನ್ನೂ ನಿರೀಕ್ಷಿಸಲಿಲ್ಲವೆಂದು ಕಾಣುತ್ತದೆ. ನನಗೆ ನೇರವಾಗಿ ಅಪ್ಪಣೆಮಾಡಲು ನಿನಗೆ ಅಧಿಕಾರವಿದ್ದರೂ ಮಹಾರಾಜನಿಗೆ ಈ ವಿಷಯವನ್ನು ಹೇಳಿದೆಯಲ್ಲ! (೨೩-೨೪). ಇನ್ನು ನಾನು ತಾಯಿಯನ್ನು ಬೀಳ್ಕೊಂಡು ಸೀತೆಗೆ ಸಮಾಧಾನ ಹೇಳುವುದೊಂದೇ ತಡ - ಈ ದಿನವೇ ವಿಶಾಲವಾದ ದಂಡಕಾರಣ್ಯಕ್ಕೆ ಹೊರಡುವೆನು. ಭರತನು ರಾಜ್ಯವನ್ನು ಪಾಲಿಸುತ್ತ ತಂದೆಯ ಶುಶ್ರೂಷೆಯಲ್ಲಿ ನಿರತನಾಗಿರುವಂತೆ ನೀನು ನೋಡಿಕೊಳ್ಳಬೇಕು. ಏಕೆಂದರೆ, ಪಿತೃಶುಶ್ರೂಷೆಯು ಶಾಶ್ವತವಾದ ಧರ್ಮ" ಎಂದು ಹೇಳಿದನು (೨೫-೨೬). ರಾಮನ ಮಾತನ್ನು ಕೇಳಿ ಅವನ ತಂದೆಗೆ ದುಃಖವು ಉಕ್ಕಿಬಂದಿತು; ಮಾತು ಹೊರಡಲಿಲ್ಲ. ಅವನು ಗಟ್ಟಿಯಾಗಿ 'ಹೋ' ಎಂದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು. ಆಗ ಶ್ರೀರಾಮನು ಬಾಹ್ಯಪ್ರಜ್ಞೆಯಿಲ್ಲದ ತಂದೆಯ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಅಯೋಗ್ಯಳಾದ

ಸ ರಾಮಃ ಪಿತರಂ ಕೃತ್ವಾ ಕೈಕೇಯೀಂ ಚ ಪ್ರದಕ್ಷಿಣಮ್ ।
ನಿಷ್ಕ್ರಮ್ಯಾಂತಃಪುರಾತ್ತಸ್ಮಾತ್ ಸ್ವಂ ದದರ್ಶ ಸುಹೃಜ್ಜನಮ್ ॥ ೨೯
ತಂ ಬಾಷ್ಪಪರಿಪೂರ್ಣಾಕ್ಷಃ ಪೃಷ್ಠತೋಽನುಜಗಾಮ ಹ ।
ಲಕ್ಷ್ಮಣಃ ಪರಮಕ್ರುದ್ಧಃ ಸುಮಿತ್ರಾನಂದವರ್ಧನಃ ॥ ೩೦
ಆಭಿಷೇಚನಿಕಂ ಭಾಂಡಂ ಕೃತ್ವಾ ರಾಮಃ ಪ್ರದಕ್ಷಿಣಮ್ ।
ಶನೈರ್ಜಗಾಮ ಸಾಪೇಕ್ಷೋ ದೃಷ್ಟಿಂ ತತ್ರಾವಿಚಾಲಯನ್ ॥ ೩೧
ನ ಚಾಸ್ಯ ಮಹತೀಂ ಲಕ್ಷ್ಮೀಂ ರಾಜ್ಯನಾಶೋಽಪಕರ್ಷತಿ ।
ಲೋಕಕಾಂತಸ್ಯ ಕಾಂತತ್ವಾಚ್ಛೀತರಶ್ಮೇರಿವ ಕ್ಷಪಾ ॥ ೩೨
ನ ವನಂ ಗಂತುಕಾಮಸ್ಯ ತ್ಯಜತಶ್ಚ ವಸುಂಧರಾಮ್ ।
ಸರ್ವಲೋಕಾತಿಗಸ್ಯೇವ ಲಕ್ಷ್ಯತೇ ಚಿತ್ತವಿಕ್ರಿಯಾ ॥ ೩೩
ಪ್ರತಿಷಿದ್ಧ್ಯ ಶುಭಂ ಛತ್ರಂ ವ್ಯಜನೇ ಚ ಸ್ವಲಂಕೃತೇ ।
ವಿಸರ್ಜಯಿತ್ವಾ ಸ್ವಜನಂ ರಥಂ ಪೌರಾಂಸ್ತಥಾ ಜನಾನ್ ॥ ೩೪

---

ಕೈಕೇಯಿಯ ಪಾದಗಳಿಗೂ ವಂದಿಸಿದನು. ಅನಂತರ ಆ ತೇಜಸ್ವಿಯು ತನ್ನ ತಂದೆಗೂ ಕೈಕೇಯಿಗೂ ಪ್ರದಕ್ಷಿಣೆಯನ್ನು ಮಾಡಿ, ಅಂತಃಪುರದಿಂದ ಹೊರಟನು (೨೭-೨೮). ಹೊರಗೆ ನಿಂತಿದ್ದ ತನ್ನ ಮಿತ್ರರನ್ನು ಕಂಡು ನಡೆದ ವೃತ್ತಾಂತವನ್ನು ತಿಳಿಸಲು, ಅದನ್ನು ಕೇಳಿ ಸುಮಿತ್ರಾತನಯನಾದ ಲಕ್ಷ್ಮಣನು ಸಿಟ್ಟಿನಿಂದ ಉರಿದೆದ್ದನು. ಆಮೇಲೆ ಅವನು ಕಣ್ಣೀರನ್ನು ತುಂಬಿಕೊಂಡು ರಾಮನ ಹಿಂದೆ ಹೊರಟನು (೨೯-೩೦). ಶ್ರೀರಾಮನು ಅಲ್ಲಿ ಸಿದ್ಧಪಡಿಸಿದ್ದ ಪಟ್ಟಾಭಿಷೇಕದ ಉಪಕರಣಗಳಿಗೆ ಪ್ರದಕ್ಷಿಣಾಕಾರವಾಗಿ ಮೆಲ್ಲಗೆ ಬೆಳಸಿಬಂದನು. ಅವುಗಳನ್ನು ಕಣ್ಣೆತ್ತಿಯೂ ನೋಡಲಿಲ್ಲ. ಅವನಿಗೆ ವನಕ್ಕೆ ಹೋಗಬೇಕೆಂಬ ಅಪೇಕ್ಷೆಯೊಂದೇ ಮನಸ್ಸಿನಲ್ಲಿತ್ತು (೩೧). ರಾತ್ರಿಯಲ್ಲಿ ಕತ್ತಲು ಕವಿದರೆ ಚಂದ್ರನ ಕಾಂತಿಗೆ ಚ್ಯುತಿಯಿಲ್ಲವಷ್ಟೆ ? ಹಾಗೆ ರಾಜ್ಯಭ್ರಂಶವು ಕತ್ತಲೆಯಂತೆ ಆವರಿಸಿದ್ದರೂ ಪರಮರಮಣೀಯನಾದ ಶ್ರೀರಾಮಚಂದ್ರನ ಕಾಂತಿಯು ಸ್ವಲ್ಪವೂ ಕಂದಲಿಲ್ಲ (೩೨). ರಾಜ್ಯಲಕ್ಷ್ಮಿಯನ್ನು ತ್ಯಜಿಸಿ ಕಾಡಿಗೆ ಹೊರಟಿದ್ದರೂ ಅವನ ಮನಸ್ಸಿನಲ್ಲಿ ಯಾವ ವಿಕಾರವೂ ತೋರಲಿಲ್ಲ. ಲೋಕಾತೀತನಾದ ಯೋಗೀಶ್ವರನಂತೆ ಅವನು ಒಂದೇ ರೀತಿಯಲ್ಲಿದ್ದನು (೩೩). (ತನ್ನನ್ನು ಗೌರವಿಸುವುದಕ್ಕಾಗಿ ಸೇವಕರು ತಂದ)

ಧಾರಯನ್ಮನಸಾ ದುಃಖಮಿಂದ್ರಿಯಾಣಿ ನಿಗೃಹ್ಯ ಚ ।
ಪ್ರವಿವೇಶಾತ್ಮವಾನ್ ವೇಶ್ಮ ಮಾತುರಪ್ರಿಯಶಂಸಿವಾನ್ ॥ ೩೫

ಸರ್ವೋ ಹ್ಯಭಿಜನಃ ಶ್ರೀಮಾನ್ ಶ್ರೀಮತಃ ಸತ್ಯವಾದಿನಃ ।
ನಾಲಕ್ಷಯತ ರಾಮಸ್ಯ ಕಿಂಚಿದಾಕಾರಮಾನನೇ ॥ ೩೬

ಉಚಿತಂ ಚ ಮಹಾಬಾಹುರ್ನ ಜಹೌ ಹರ್ಷಮಾತ್ಮನಃ ।
ಶಾರದಃ ಸಮುದೀರ್ಣಾಂಶುಶ್ಚಂದ್ರಸ್ತೇಜ ಇವಾತ್ಮಜಮ್ ॥ ೩೭

ವಾಚಾ ಮಧುರಯಾ ರಾಮಃ ಸರ್ವಂ ಸಂಮಾನಯನ್ ಜನಮ್ ।
ಮಾತುಃ ಸಮೀಪಂ ಧರ್ಮಾತ್ಮಾ ಪ್ರವಿವೇಶ ಮಹಾಯಶಾಃ ॥ ೩೮

ತಂ ಗುಣೈಃ ಸಮತಾಂ ಪ್ರಾಪ್ತೋ ಭ್ರಾತಾ ವಿಪುಲವಿಕ್ರಮಃ ।
ಸೌಮಿತ್ರಿರನುವವ್ರಾಜ ಧಾರಯನ್ ದುಃಖಮಾತ್ಮಜಮ್ ॥ ೩೯

ಪ್ರವಿಶ್ಯ ವೇಶ್ಮಾತಿಭೃಶಂ ಮುದಾನ್ವಿತಂ
ಸಮೀಕ್ಷ್ಯ ತಾಂ ಚಾರ್ಥವಿಪತ್ತಿಮಾಗತಾಮ್ ।

---

ಛತ್ರಚಾಮರಗಳು ಬೇಡವೆಂದು ಹೇಳಿ, ಮಿತ್ರರನ್ನೂ ಪೌರಜನರನ್ನೂ ನಿಲ್ಲಿಸಿ, ರಥವನ್ನು ತಿರಸ್ಕರಿಸಿ, ದುಃಖವನ್ನು ಅದುಮಿ, ಇಂದ್ರಿಯಗಳನ್ನು ನಿಗ್ರಹಿಸಿ, ಆ ಧೀರೋದಾತ್ತನು ತನ್ನ ತಾಯಿಗೆ ಈ ಕೆಟ್ಟ ಸುದ್ದಿಯನ್ನು ತಿಳಿಸುವುದಕ್ಕಾಗಿ ಅವಳ ಅಂತಃಪುರವನ್ನು ಪ್ರವೇಶಿಸಿದನು (೩೪-೩೫). ಆ ಸಮಯದಲ್ಲಿ ಶ್ರೀರಾಮನ ಬಂಧು ಮಿತ್ರರೂ ಕೂಡ ಆ ಸತ್ಯಸಂಧನ ಮುಖದಲ್ಲಿ ಯಾವ ವ್ಯತ್ಯಾಸವನ್ನೂ ಕಾಣಲಿಲ್ಲ. ಶ್ರೀರಾಮನು ಹರ್ಷಭರಿತನಾಗಿಯೇ ಇದ್ದನು. ಶರತ್ಕಾಲದ ಚಂದ್ರನಿಗೆ ಕಾಂತಿಯು ಹೇಗೆ ಸಹಜವೋ ಹಾಗೆ ಆ ವೀರನಿಗೆ ಹರ್ಷವು ಸಹಜವಾದ ಗುಣವಾಗಿತ್ತು (೩೬-೩೭). ಆ ಧರ್ಮಾತ್ಮನು ಮಧುರವಾದ ನುಡಿಯಿಂದ ಎಲ್ಲರನ್ನೂ ಸಮ್ಮಾನಿಸುತ್ತ ತಾಯಿಯ ಬಳಿಗೆ ಹೋದನು. ಮಹಾಪರಾಕ್ರಮಿಯಾದ ಲಕ್ಷ್ಮಣನು ಅಣ್ಣನ ಸುಖದುಃಖಗಳಿಗೆ ಸಮಭಾಗಿಯಾಗಿದ್ದನು. ಅವನು ತನ್ನ ದುಃಖವನ್ನು ಮನಸ್ಸಿನಲ್ಲಿಯೇ ನುಂಗಿಕೊಳ್ಳುತ್ತ ರಾಮನನ್ನು ಹಿಂಬಾಲಿಸಿ ಹೋದನು (೩೮-೩೯). ಅತ್ತ ಕೌಸಲ್ಯೆಯ ಅಂತಃಪುರವು ರಾಮಾಭಿಷೇಕದ ಹರ್ಷಸಂಭ್ರಮಗಳಲ್ಲಿ ಮುಳುಗಿತ್ತು. ಇತ್ತ ರಾಮನಿಗೆ ಈ ಆಪತ್ತು ಬಂದಿತ್ತು. ತನ್ನ ಆಪ್ತಜನರಿಗೆ

ನ ಚೈವ ರಾಮೋಽತ್ರ ಜಗಾಮ ವಿಕ್ರಿಯಾಂ
ಸುಹೃಜ್ಜನಸ್ಯಾತ್ಮವಿಪತ್ತಿಶಂಕಯಾ ॥ ೪೦

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನವಿಂಶಃ ಸರ್ಗಃ

---

## ವಿಂಶಃ ಸರ್ಗಃ

### ಕೌಸಲ್ಯಾಕ್ರಂದಃ

ತಸ್ಮಿಂಸ್ತು ಪುರುಷವ್ಯಾಘ್ರೇ ನಿಷ್ಕ್ರಾಮತಿ ಕೃತಾಂಜಲೌ ।
ಆರ್ತಶಬ್ದೋ ಮಹಾನ್ ಜಜ್ಞೇ ಸ್ತ್ರೀಣಾಮಂತಃಪುರೇ ತದಾ ॥ ೧

ಕೃತ್ಯೇಷ್ವಚೋದಿತಃ ಪಿತ್ರಾ ಸರ್ವಸ್ಯಾಂತಃಪುರಸ್ಯ ಚ ।
ಗತಿರ್ಯಃ ಶರಣಂ ಚಾಪಿ ಸ ರಾಮೋಽದ್ಯ ಪ್ರವತ್ಸ್ಯತಿ ॥ ೨

---

ಆಶಾಭಂಗವಾಗಿ ಏನಾದರೂ ವಿಪತ್ತು ಸಂಭವಿಸೀತೆಂದು ಅವನಿಗೆ ಅಂಜಿಕೆಯಿತ್ತು. ಅದನ್ನು ಚಿಂತಿಸಿ ಶ್ರೀರಾಮನು ಯಾವ ಚಿತ್ತವಿಕಾರವನ್ನೂ ತೋರಿಸದೆ ಉತ್ಸಾಹದಿಂದಿದ್ದನು (೪೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹತ್ತೊಂಬತ್ತನೆಯ ಸರ್ಗ

---

## ಸರ್ಗ ೨೦

### ಶ್ರೀರಾಮನು ಕೌಸಲ್ಯೆಗೆ ತನ್ನ ವನವಾಸವೃತ್ತಾಂತವನ್ನು ಹೇಳುವುದು. ಕೌಸಲ್ಯೆಯ ವಿಲಾಪ.

ಪುರುಷೋತ್ತಮನಾದ ಶ್ರೀರಾಮನು ದಶರಥನಿಗೂ ಕೈಕೇಯಿಗೂ ವಂದಿಸಿ ಕೈಮುಗಿದುಕೊಂಡೇ ಹೊರಟುಹೋಗಲು, ಒಡನೆಯೇ ಅಂತಃಪುರದಲ್ಲಿ ಹೆಂಗಸರ ದೊಡ್ಡ ಹಾಹಾಕಾರವೆದ್ದಿತು. ರಾಜಸ್ತ್ರೀಯರು ಗೋಳಾಡಿದರು : "ಅಯ್ಯೊ! ನಮ್ಮ ರಾಮನು ಹೊರಟುಹೋಗುವನು. ತಂದೆಯು ಹೇಳದಿದ್ದರೂ ತಾನಾಗಿ ನಮ್ಮೆಲ್ಲರ ಕೆಲಸಗಳನ್ನು ಮಾಡಿಕೊಡುತ್ತಿದ್ದನಲ್ಲ!

ಕೌಸಲ್ಯಾಯಾಂ ಯಥಾ ಯುಕ್ತೋ ಜನನ್ಯಾಂ ವರ್ತತೇ ಸದಾ ।
ತಥೈವ ವರ್ತತೇಽಸ್ಮಾಸು ಜನ್ಮಪ್ರಭೃತಿ ರಾಘವಃ ॥ ೩

ನ ಕ್ರುಧ್ಯತ್ಯಭಿಶಪ್ತೋಽಪಿ ಕ್ರೋಧನೀಯಾನಿ ವರ್ಜಯನ್ ।
ಕ್ರುದ್ಧಾನ್ ಪ್ರಸಾದಯನ್ ಸರ್ವಾನ್ ಸ ಇತೋಽದ್ಯ ಪ್ರವತ್ಸ್ಯತಿ ॥ ೪

ಅಬುದ್ಧಿರ್ಬತ ನೋ ರಾಜಾ ಜೀವಲೋಕಂ ಚರತ್ಯಯಮ್ ।
ಯೋ ಗತಿಂ ಸರ್ವಲೋಕಾನಾಂ ಪರಿತ್ಯಜತಿ ರಾಘವಮ್ ॥ ೫

ಇತಿ ಸರ್ವಾ ಮಹಿಷ್ಯಸ್ತಾ ವಿವತ್ಸಾ ಇವ ಧೇನವಃ ।
ಪತಿಮಾಚುಕ್ರುಶುಶ್ಚೈವ ಸಸ್ವರಂ ಚಾಪಿ ಚುಕ್ರುಶುಃ ॥ ೬

ಸ ಹಿ ಚಾಂತಃಪುರೇ ಘೋರಮಾರ್ತಶಬ್ದಂ ಮಹೀಪತಿಃ ।
ಪುತ್ರಶೋಕಾಭಿಸಂತಪ್ತಃ ಶ್ರುತ್ವಾ ವ್ಯಾಲೀಯತಾಸನೇ ॥ ೭

---

ನಮ್ಮ ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತ ನಮಗೆ ಗತಿಯಾಗಿದ್ದನಲ್ಲ! (೧-೨). ತನ್ನ ಸಡೆದ ತಾಯಿ ಕೌಸಲ್ಯೆಯಲ್ಲಿ ಹೇಗೆ ಭಕ್ತಿವಿಶ್ವಾಸಗಳಿಂದ ನಡೆದು ಕೊಳ್ಳುತ್ತಿದ್ದನೋ, ಹಾಗೆಯೇ ನಮ್ಮಲ್ಲಿಯೂ ಅವನು ಯಟ್ಟಿದಂದಿನಿಂದಲೂ ಒಂದೇ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದನಲ್ಲ! ಬಯ್ದರೂ ಕೋಪಿಸಿಕೊಳ್ಳುವವನಲ್ಲ. ನಮಗೆ ಅಸಮಾಧಾನವಾಗುವ ಒಂದು ಕೆಲಸವನ್ನೂ ಮಾಡಿದವನಲ್ಲ. ನಾವು ಕೋಪಗೊಂಡರೆ ಬಂದು ಸಂತೈಸುತ್ತಿದ್ದನು. ಅಂಥ ರಾಮನು ಇಂದು ಹೊರಟುಹೋಗುವನು (೩-೪). ಅಯ್ಯೊ! ನಮ್ಮ ರಾಜನಿಗೆ ಬುದ್ಧಿಯಿಲ್ಲ. ಸಮಸ್ತ ಜನರಿಗೂ ದಿಕ್ಕಾಗಿದ್ದ ಶ್ರೀರಾಮನನ್ನು ಮನೆಯಿಂದ ಹೊರಡಿಸುತ್ತಿದ್ದಾನೆ. ಈ ರಾಜನು ಎಲ್ಲರನ್ನೂ ಹಾಳುಮಾಡಬೇಕೆಂದು ಹವಣಿಸಿದ್ದಾನೆ" ಎಂದು ಹೇಳಿಕೊಳ್ಳುತ್ತ ಗೋಳಾಡಿದರು (೫). ಆ ರಾಜಪತ್ನಿಯರು ಕರುವನ್ನು ಕಳೆದುಕೊಂಡ ಹಸುಗಳಂತೆ ಪರಿತಪಿಸುತ್ತ ದಶರಥನನ್ನು ಬಯ್ಯುತ್ತ ಗಟ್ಟಿಯಾಗಿ ಅಳತೊಡಗಿದರು. ಹೀಗೆ ಅಂತಃಪುರದಲ್ಲೆದ್ದ ಘೋರವಾದ ಹಾಹಾಕಾರವು ಮಹಾರಾಜನಿಗೆ ಕೇಳಿಸಿತು. ಪುತ್ರಶೋಕದಿಂದ ಕಂಗೆಟ್ಟಿದ್ದ ಆತನು ಈ ಗೋಳಾಟವನ್ನು ಕೇಳಿ ಮಂಚದಲ್ಲಿಯೇ

ರಾಮಸ್ತು ಭೃಶಮಾಯಸ್ತೋ ನಿಃಶ್ವಸನ್ನಿವ ಕುಂಜರಃ ।
ಜಗಾಮ ಸಹಿತೋ ಭ್ರಾತ್ರಾ ಮಾತುರಂತಃಪುರಂ ವಶೀ । ೮

ಸೋಽಪಶ್ಯತ್ ಪುರುಷಂ ತತ್ರ ವೃದ್ಧಂ ಪರಮಪೂಜಿತಮ್ ।
ಉಪವಿಷ್ಟಂ ಗೃಹದ್ವಾರಿ ತಿಷ್ಠತಶ್ಚಾಪರಾನ್ ಬಹೂನ್ ॥ ೯

ದೃಷ್ಟ್ವೈವ ತು ತದಾ ರಾಮಂ ತೇ ಸರ್ವೇ ಸಹಸೋತ್ಥಿತಾಃ ।
ಜಯೇನ ಜಯತಾಂ ಶ್ರೇಷ್ಠಂ ವರ್ಧಯಂತಿ ಸ್ಮ ರಾಘವಮ್ ॥ ೧೦

ಪ್ರವಿಶ್ಯ ಪ್ರಥಮಾಂ ಕಕ್ಷ್ಯಾಂ ದ್ವಿತೀಯಾಯಾಂ ದದರ್ಶ ಸಃ ।
ಬ್ರಾಹ್ಮಣಾನ್ ವೇದಸಂಪನ್ನಾನ್ ವೃದ್ಧಾನ್ ರಾಜ್ಞಾಭಿಸತ್ಕೃತಾನ್ ॥

ಪ್ರಣಮ್ಯ ರಾಮಸ್ತಾನ್ ವೃದ್ಧಾಂಸ್ತೃತೀಯಾಯಾಂ ದದರ್ಶ ಸಃ ।
ಸ್ತ್ರಿಯೋ ವೃದ್ಧಾಶ್ಚ ಬಾಲಾಶ್ಚ ದ್ವಾರರಕ್ಷಣತತ್ಪರಾಃ ॥ ೧೨

ವರ್ಧಯಿತ್ವಾ ಪ್ರಹೃಷ್ಟಾಸ್ತಾಃ ಪ್ರವಿಶ್ಯ ಚ ಗೃಹಂ ಸ್ತ್ರಿಯಃ ।
ನ್ಯವೇದಯಂತ ತ್ವರಿತಾ ರಾಮಮಾತುಃ ಪ್ರಿಯಂ ತದಾ ॥ ೧೩

---

ಸುರುಟಿಕೊಂಡನು (೬-೭). ಇತ್ತ ಶ್ರೀರಾಮನಿಗೆ ಬಾಂಧವರ ಶೋಕವನ್ನು ನೋಡಿ ಬಹಳ ಖೇದವಾಯಿತು. ಆದರೂ ಜಿತೇಂದ್ರಿಯನಾದ್ದರಿಂದ ದುಃಖವನ್ನು ನುಂಗಿಕೊಂಡು ಆನೆಯಂತೆ ನಿಟ್ಟುಸಿರುಬಿಡುತ್ತ ತಮ್ಮನೊಡನೆ ತಾಯಿಯ ಅಂತಃಪುರಕ್ಕೆ ಬಂದನು (೮). ಅಂತಃಪುರದ ಬಾಗಿಲಿನಲ್ಲಿ ವೃದ್ಧನೂ ದ್ವಾರಪಾಲಕರಲ್ಲಿ ಮುಖ್ಯನೂ ಮಾನ್ಯನೂ ಆದ ಒಬ್ಬ ಪುರುಷನೂ ಅವನೊಡನೆ ಇನ್ನೂ ಅನೇಕ ಕಾವಲುಗಾರರೂ ಕುಳಿತಿರುವುದನ್ನು ಶ್ರೀರಾಮನು ಕಂಡನು. ಅವರೆಲ್ಲರೂ ರಾಘವನನ್ನು ಕಂಡೊಡನೆ ಥಟ್ಟನೆ ಎದ್ದುನಿಂತು ಜಯಕಾರವನ್ನು ಮಾಡಿದರು (೯-೧೦). ಶ್ರೀರಾಮನು ಒಂದನೆಯ ಕಕ್ಷ್ಯವನ್ನೂ ಎರಡನೆಯ ಕಕ್ಷ್ಯವನ್ನೂ ಪ್ರವೇಶಿಸಲು, ಅಲ್ಲಿ ವೇದಪಾರಂಗತರೂ ದಶರಥನಿಗೆ ಪೂಜ್ಯರೂ ಆದ ಕೆಲವು ವೃದ್ಧಬ್ರಾಹ್ಮಣರು ಗೋಚರಿಸಿದರು. ಶ್ರೀರಾಮನು ಅವರಿಗೆ ನಮಸ್ಕರಿಸಿ ಮೂರನೆಯ ಕಕ್ಷ್ಯವನ್ನು ಪ್ರವೇಶಿಸಲು, ಅಲ್ಲಿ ಬಾಗಿಲನ್ನು ಕಾಯುತ್ತಿದ್ದ ಕೆಲವು ವೃದ್ಧ ಸ್ತ್ರೀಯರೂ ಬಾಲಿಕೆಯರೂ ಕಾಣಿಸಿದರು (೧೧-೧೨). ಆ ಸ್ತ್ರೀಯರು ಸಂತೋಷದಿಂದ ಶ್ರೀರಾಮನಿಗೆ ಜಯಕಾರವನ್ನು ಹೇಳಿ ತ್ವರೆಯಿಂದ ಒಳಗೆ

ಕೌಸಲ್ಯಾಪಿ ತದಾ ದೇವೀ ರಾತ್ರಿಂ ಸ್ಥಿತ್ವಾ ಸಮಾಹಿತಾ ।
ಪ್ರಭಾತೇ ತ್ವಕರೋತ್ ಪೂಜಾಂ ವಿಷ್ಣೋಃ ಪುತ್ರಹಿತೈಷಿಣೀ ॥ ೧೪

ಸಾ ಕ್ಷೌಮವಸನಾ ಹೃಷ್ಟಾ ನಿತ್ಯಂ ವ್ರತಪರಾಯಣಾ ।
ಅಗ್ನಿಂ ಜುಹೋತಿ ಸ್ಮ ತದಾ ಮಂತ್ರವತ್ ಕೃತಮಂಗಲಾ ॥ ೧೫

ಪ್ರವಿಶ್ಯ ಚ ತದಾ ರಾಮೋ ಮಾತುರಂತಃಪುರಂ ಶುಭಮ್ ।
ದದರ್ಶ ಮಾತರಂ ತತ್ರ ಹಾವಯಂತೀಂ ಹುತಾಶನಮ್ ॥ ೧೬

ದೇವಕಾರ್ಯನಿಮಿತ್ತಂ ಚ ತತ್ರಾಪಶ್ಯತ್ ಸಮುದ್ಯತಾಮ್ ।
ದಧ್ಯಕ್ಷತಘೃತಂ ಚೈವ ಮೋದಕಾನ್ ಹವಿಷಸ್ತಥಾ ॥ ೧೭

ಲಾಜಾನ್ ಮಾಲ್ಯಾನಿ ಶುಕ್ಲಾನಿ ಪಾಯಸಂ ಕೃಸರಂ ತಥಾ ।
ಸಮಿಧಃ ಪೂರ್ಣಕುಂಭಾಂಶ್ಚ ದದರ್ಶ ರಘುನಂದನಃ ॥ ೧೮

ತಾಂ ಶುಕ್ಲಕ್ಷೌಮಸಂವೀತಾಂ ವ್ರತಯೋಗೇನ ಕರ್ಶಿತಾಮ್ ।
ತರ್ಪಯಂತೀಂ ದದರ್ಶಾದ್ಭಿರ್ದೇವತಾಂ ವರವರ್ಣಿನೀಮ್ ॥ ೧೯

---

ಹೋಗಿ, ಕೌಸಲ್ಯೆಗೆ ಶ್ರೀರಾಮನು ಬಂದನೆಂಬ ಹರ್ಷದ ಸುದ್ದಿಯನ್ನು ಅರಿಕೆ ಮಾಡಿದರು. ಕೌಸಲ್ಯಾದೇವಿಯಾದರೊ ರಾತ್ರಿಯೆಲ್ಲವೂ ನಿಯಮಯುಕ್ತಳಾಗಿದ್ದು ತನ್ನ ಮಗನಿಗೆ ಶ್ರೇಯಸ್ಸಾಗಲೆಂದು ಪ್ರಾತಃಕಾಲದಲ್ಲಿ ಶ್ರೀಮನ್ನಾರಾಯಣನ ಪೂಜೆಯನ್ನು ನಡೆಸಿದ್ದಳು (೧೩-೧೪). ಆ ದೇವಿಯು ಬಿಳಿಯ ದುಕೂಲವನ್ನುಟ್ಟು ಮಂಗಳಾಲಂಕಾರವನ್ನು ಧರಿಸಿ ಹರ್ಷದಿಂದ ವ್ರತನಿಷ್ಠಳಾಗಿದ್ದಳು. ಅಲ್ಲದೆ ಆ ಸಮಯದಲ್ಲಿ ಬ್ರಾಹ್ಮಣರಿಂದ ಮಂತ್ರ ಪೂರ್ವಕವಾಗಿ ಅಗ್ನಿಯಲ್ಲಿ ಹೋಮವನ್ನು ಮಾಡಿಸುತ್ತಿದ್ದಳು (೧೫). ರಾಮನು ತಾಯಿಯ ಅಂತಃಪುರಕ್ಕೆ ಹೋಗಿ ಹೋಮಮಾಡಿಸುತ್ತಿದ್ದ ತಾಯಿಯನ್ನೂ ದೇವಕಾರ್ಯಕ್ಕೋಸ್ಕರ ಸಿದ್ಧಪಡಿಸಿದ್ದ ಮೊಸರು, ಅಕ್ಷತೆ, ತುಪ್ಪ, ಸಿಹಿಯಾದ ಭಕ್ಷ್ಯಗಳು, ಹವಿಸ್ಸು, ಅರಳು, ಬಿಳಿಯ ಹೂಮಾಲೆಗಳು, ಪಾಯಸ, ಹುಗ್ಗಿ, ಸಮಿತ್ತು, ಪೂರ್ಣಕುಂಭ ಮುಂತಾದವುಗಳನ್ನೂ ನೋಡಿದನು (೧೬-೧೮). ಕೌಸಲ್ಯೆಯು ಬಿಳಿಯ ದುಕೂಲವನ್ನುಟ್ಟು ಜಲದಿಂದ ದೇವತಾತರ್ಪಣವನ್ನು ಕೊಡುತ್ತಿದ್ದಳು. ಅವಳು ಬಹಳ ಹೊತ್ತಿನಿಂದ ಮಗನ

ಸಾ ಚಿರಸ್ಯಾತ್ಮಜಂ ದೃಷ್ಟ್ವಾ ಮಾತೃನಂದನಮಾಗತಮ್ ।
ಅಭಿಚಕ್ರಾಮ ಸಂಹೃಷ್ಟಾ ಕಿಶೋರಂ ಬಡಬಾ ಯಥಾ ॥ ೨೦

ಸ ಮಾತರಮಭಿಕ್ರಾಂತಾಮುಪಸಂಗೃಹ್ಯ ರಾಘವಃ ।
ಪರಿಷ್ವಕ್ತಶ್ಚ ಬಾಹುಭ್ಯಾಮುಪಾಘ್ರಾತಶ್ಚ ಮೂರ್ಧನಿ ॥ ೨೧

ತಮುವಾಚ ದುರಾಧರ್ಷಂ ರಾಘವಂ ಸುತಮಾತ್ಮನಃ ।
ಕೌಸಲ್ಯಾ ಪುತ್ರವಾತ್ಸಲ್ಯಾದಿದಂ ಪ್ರಿಯಹಿತಂ ವಚಃ ॥ ೨೨

ವೃದ್ಧಾನಾಂ ಧರ್ಮಶೀಲಾನಾಂ ರಾಜರ್ಷೀಣಾಂ ಮಹಾತ್ಮನಾಮ್ ।
ಪ್ರಾಪ್ನುಹ್ಯಾಯುಶ್ಚ ಕೀರ್ತಿಂ ಚ ಧರ್ಮಂ ಚಾಪ್ಯುಚಿತಂ ಕುಲೇ ॥

ಸತ್ಯಪ್ರತಿಜ್ಞಂ ಪಿತರಂ ರಾಜಾನಂ ಪಶ್ಯ ರಾಘವ ।
ಅದ್ಯೈವ ಹಿ ತ್ವಾಂ ಧರ್ಮಾತ್ಮಾ ಯೌವರಾಜ್ಯೇಭಿಷೇಕ್ಷ್ಯತಿ ॥ ೨೪

ದತ್ತಮಾಸನಮಾಲಭ್ಯ ಭೋಜನೇನ ನಿಮಂತ್ರಿತಃ ।
ಮಾತರಂ ರಾಘವಃ ಕಿಂಚಿತ್ ಪ್ರಾಸಾರ್ಯಾಂಜಲಿ ಮಬ್ರವೀತ್ ॥ ೨೫

---

ನಿರೀಕ್ಷಣೆಯಲ್ಲಿದ್ದಳು. ಈಗ ತಾಯಿಯಾದ ತನ್ನನ್ನು ಸಂತೋಷಗೊಳಿಸಲು ಬಂದನೆಂದು ಭಾವಿಸಿ, ಹೆಣ್ಣುಕುದುರೆಗೆ ತನ್ನ ಮರಿಯನ್ನು ಕಂಡಂತಾಗಿ, ಕೌಸಲ್ಯೆಯು ರಾಮನೆದುರಿಗೆ ಸಂಭ್ರಮದಿಂದ ಎದ್ದು ಬಂದಳು (೧೯-೨೦). ರಾಮನು ತಾಯಿಗೆ ಅಭಿವಾದನೆಮಾಡಲು, ಅವಳು ತೋಳುಗಳಿಂದ ಮಗನನ್ನು ಅಪ್ಪಿಕೊಂಡು ಶಿರಸ್ಸನ್ನು ಆಘ್ರಾಣಿಸಿದಳು. ಆಮೇಲೆ ಕೌಸಲ್ಯೆಯು ಪುತ್ರವಾತ್ಸಲ್ಯದಿಂದ ಧೀರೋದಾತ್ತನಾದ ತನ್ನ ಮಗನಿಗೆ ಪ್ರೀತಿಪೂರ್ವಕವಾಗಿ ಹೀಗೆಂದಳು (೨೧-೨೨) : "ರಾಮ, ಜ್ಞಾನವೃದ್ಧರೂ ಧರ್ಮಶೀಲರೂ ಮಹಾತ್ಮರೂ ಆದ ರಾಜರ್ಷಿಗಳಂತೆ ನಿನಗೆ ದೀರ್ಘಾಯುಸ್ಸೂ ಕೀರ್ತಿಯೂ ಲಭಿಸಲಿ. ಕುಲೋಚಿತವಾದ ಧರ್ಮದಲ್ಲಿ ನಡೆಯುತ್ತಿರು. ನಿನ್ನ ತಂದೆ ಎಂಥ ಸತ್ಯಸಂಧನೆಂಬುದನ್ನು ನೋಡು! ಆ ಧರ್ಮಾತ್ಮನು ಈ ದಿನವೇ ನಿನಗೆ ಯುವರಾಜಪದವಿಯಲ್ಲಿ ಪಟ್ಟಾಭಿಷೇಕಮಾಡುವನು" ಎಂದಳು (೨೩-೨೪). ಆಮೇಲೆ ರಾಮನನ್ನು ಭೋಜನಕ್ಕೆ ಕರೆದು ಕುಳಿತು ಕೊಳ್ಳಲು ಆಸನವನ್ನು ಕೊಟ್ಟಳು. ರಾಮನು ಆಸನವನ್ನು ಸ್ಪರ್ಶಿಸಿ ತಾಯಿಯ

ಸ ಸ್ವಭಾವವಿನೀತಶ್ಚ ಗೌರವಾಚ್ಚ ತದಾನತಃ ।
ಪ್ರಸ್ಥಿತೋ ದಂಡಕಾರಣ್ಯಮಾಪ್ರಷ್ಟುಮುಪಚಕ್ರಮೇ ॥ ೨೬

ದೇವಿ ನೂನಂ ನ ಜಾನೀಷೇ ಮಹದ್ಭಯಮುಪಸ್ಥಿತಮ್ ।
ಇದಂ ತವ ಚ ದುಃಖಾಯ ವೈದೇಹ್ಯಾ ಲಕ್ಷ್ಮಣಸ್ಯ ಚ ॥ ೨೭

ಗಮಿಷ್ಯೇ ದಂಡಕಾರಣ್ಯಂ ಕಿಮನೇನಾಸನೇನ ಮೇ ।
ವಿಷ್ಟರಾಸನಯೋಗ್ಯೋ ಹಿ ಕಾಲೋಽಯಂ ಮಾಮುಪಸ್ಥಿತಃ ॥ ೨೮

ಚತುರ್ದಶ ಹಿ ವರ್ಷಾಣಿ ವತ್ಸ್ಯಾಮಿ ವಿಜನೇ ವನೇ ।
ಮಧುಮೂಲಫಲೈರ್ಜೀವನ್ ಹಿತ್ವಾ ಮುನಿವದಾಮಿಷಮ್ ॥ ೨೯

ಭರತಾಯ ಮಹಾರಾಜೋ ಯೌವರಾಜ್ಯಂ ಪ್ರಯಚ್ಛತಿ ।
ಮಾಂ ಪುನರ್ದಂಡಕಾರಣ್ಯೇ ವಿವಾಸಯತಿ ತಾಪಸಮ್ ॥ ೩೦

ಸ ಷಟ್ ಚಾಷ್ಟೌ ಚ ವರ್ಷಾಣಿ ವತ್ಸ್ಯಾಮಿ ವಿಜನೇ ವನೇ ।
ಆಸೇವಮಾನೋ ವನ್ಯಾನಿ ಫಲಮೂಲೈಶ್ಚ ವರ್ತಯನ್ ॥ ೩೧

---

ಕಡೆಗೆ ಸ್ವಲ್ಪ ಬಾಗಿ ಕೈಮುಗಿದನು. ಅವನು ಸಹಜವಾಗಿಯೇ ವಿನೀತ. ತಾಯಿಯೆಂಬ ಗೌರವದಿಂದ ಇನ್ನೂ ತಲೆಬಾಗಿ ತಾನು ದಂಡಕಾರಣ್ಯಕ್ಕೆ ಹೊರಟಿರುವೆನೆಂದೂ ಬೀಳ್ಕೊಡಲು ಬಂದೆನೆಂದೂ ಹೇಳಲಾರಂಭಿಸಿದನು (೨೫-೨೬) : "ಅಮ್ಮ, ನಿನಗೆ ನಿಜವಾಗಿಯೂ ಗೊತ್ತಿಲ್ಲ. ಈಗ ದೊಡ್ಡ ವಿಪತ್ತು ಬಂದಿದೆ. ನಿನಗೂ ಸೀತೆಗೂ ಲಕ್ಷ್ಮಣನಿಗೂ ದುಃಖವು ಕಾದಿದೆ. ನಾನು ದಂಡಕಾರಣ್ಯಕ್ಕೆ ಹೋಗುವೆನು. ಈ (ರತ್ನಮಯವಾದ) ಆಸನವು ನನಗೇಕೆ ? ನಾನು ದರ್ಭಾಸನದಲ್ಲಿ ಕುಳಿತುಕೊಳ್ಳಬೇಕಾದ ಕಾಲ ಬಂದಿದೆ (೨೭-೨೮). ನಿರ್ಜನವಾದ ವನದಲ್ಲಿ ಹದಿನಾಲ್ಕು ವರ್ಷಗಳವರೆಗೆ ವಾಸಮಾಡುವೆನು. ಜೇನು, ಗಡ್ಡೆಗೆಣಸು, ಹಣ್ಣುಹಂಪಲುಗಳನ್ನು ತಿಂದು ಜೀವಿಸುವೆನು. ಮೃಷ್ಟಾನ್ನವನ್ನು ತ್ಯಜಿಸಿ ಮುನಿಗಳಂತಿರುವೆನು (೨೯). ಮಹಾರಾಜನು ಭರತನಿಗೆ ಯುವರಾಜಪದವಿಯನ್ನು ಕೊಡುತ್ತಾನೆ. ನಾನು ತಾಪಸನಾಗಿ ದಂಡಕಾರಣ್ಯದಲ್ಲಿರಬೇಕೆಂದು ಆಜ್ಞಾಪಿಸಿದ್ದಾನೆ. ಆದ್ದರಿಂದ ನಾನು ಆರೆಂಟು ವರ್ಷ ನಿರ್ಜನವಾದ ಅರಣ್ಯದಲ್ಲಿರುವೆನು. ಕಾಡಿನಲ್ಲಿ ದೊರೆಯುವ ವಸ್ತುಗಳನ್ನು ಬಳಸುತ್ತ ಹಣ್ಣು ನಾರು ಬೇರುಗಳನ್ನು

ಸಾ ನಿಕೃತ್ತೇವ ಸಾಲಸ್ಯ ಯಷ್ಟಿಃ ಪರಶುನಾ ವನೇ ।
ಪಪಾತ ಸಹಸಾ ದೇವೀ ದೇವತೇವ ದಿವಶ್ಚ್ಯುತಾ ॥ ೩೨

ತಾಮದುಃಖೋಚಿತಾಂ ದೃಷ್ಟ್ವಾ ಪತಿತಾಂ ಕದಲೀಮಿವ ।
ರಾಮಸ್ತ್ವುತ್ಥಾಪಯಾಮಾಸ ಮಾತರಂ ಗತಚೇತಸಮ್ ॥ ೩೩

ಉಪಾವೃತ್ಯೋತ್ಥಿತಾಂ ದೀನಾಂ ಬಡಬಾಮಿವ ವಾಹಿತಾಮ್ ।
ಪಾಂಸುಕುಂಠಿತಸರ್ವಾಂಗೀಂ ವಿಮಮರ್ಶ ಚ ಪಾಣಿನಾ ॥ ೩೪

ಸಾ ರಾಘವಮುಪಾಸೀನಮದುಃಖಾರ್ಹಾ ಸುಖೋಚಿತಾ ।
ಉವಾಚ ಪುರುಷವ್ಯಾಘ್ರಮುಪಶೃಣ್ವತಿ ಲಕ್ಷ್ಮಣೇ ॥ ೩೫

ಯದಿ ಪುತ್ರ ನ ಜಾಯೇಥಾ ಮಮ ಶೋಕಾಯ ರಾಘವ ।
ನ ಸ್ಮ ದುಃಖಮತೋ ಭೂಯಃ ಪಶ್ಯೇಯಮಹಮಪ್ರಜಾಃ ॥ ೩೬

ಏಕ ಏವ ಹಿ ವಂಧ್ಯಾಯಾಃ ಶೋಕೋ ಭವತಿ ಮಾನಸಃ ।
ಅಪ್ರಜಾಸ್ಮೀತಿ ಸಂತಾಪೋ ನ ಹ್ಯನ್ಯಃ ಪುತ್ರ ವಿದ್ಯತೇ ॥ ೩೭

---

ತಿಂದುಕೊಂಡಿರುತ್ತೇನೆ" ಎಂದನು (೩೦-೩೧). ಆ ಮಾತನ್ನು ಕೇಳಿದೊಡನೆ ಕೌಸಲ್ಯಾದೇವಿಯು ಕೊಡಲಿಯಿಂದ ಕಡಿದ ಸಾಲವೃಕ್ಷದಂತೆ, ದೇವಲೋಕದಿಂದ ಬಿದ್ದ ಅಪ್ಸರೆಯಂತೆ, ನೆಲದ ಮೇಲೆ ಕುಸಿದಳು. ಪಡಬಾರದ ದುಃಖಕ್ಕೆ ಸಿಲುಕಿ ಬಾಳೆಯಮರದಂತೆ ಉರುಳಿದಳು. ಎಚ್ಚರದಪ್ಪಿ ಬಿದ್ದ ತಾಯಿಯನ್ನು ರಾಮನು ಎತ್ತಿ ಕುಳ್ಳಿರಿಸಿ ಸಂತೈಸಿದನು (೩೨-೩೩). ಬಹಳ ಆಯಾಸದಿಂದ ನೆಲದ ಮೇಲೆ ಹೊರಳುವ ಹೆಣ್ಣುಕುದುರೆಯಂತೆ ಹೊರಳಿ ಧೂಳಾದ ಅವಳ ಮೈಯನ್ನು ರಾಮನು ಕೈಯಿಂದ ಒರಸುತ್ತ ಸವರುತ್ತ ಬಳಿಯಲ್ಲಿ ಕುಳಿತನು. ಕೌಸಲ್ಯೆಯು ದೈನ್ಯದಿಂದ ಶ್ರೀರಾಮನನ್ನು ಕುರಿತು ಲಕ್ಷ್ಮಣನಿಗೆ ಕೇಳಿಸುವಂತೆ ಹೀಗೆಂದಳು (೩೪-೩೫) : "ಅಪ್ಪಾ ಮಗನೆ! ನೀನು ಹುಟ್ಟಿದ್ದರಿಂದ ನನಗೆ ಶೋಕವೇ ಪ್ರಾಪ್ತವಾಯಿತು. ನನಗೆ ಸಂತಾನವೇ ಇಲ್ಲದಿದ್ದರೆ ಇಂಥ ಕಷ್ಟ ಬರುತ್ತಿರಲಿಲ್ಲ. ಬಂಜೆಗೆ ಸಂತತಿಯಿಲ್ಲವೆಂಬ ಒಂದೇ ಕೊರಗು ಮನಸ್ಸಿನಲ್ಲಿರುತ್ತದೆ. ಮಗನೆ, ಅವಳಿಗೆ ಇನ್ನು

ನ ದೃಷ್ಟಪೂರ್ವಂ ಕಲ್ಯಾಣಂ ಸುಖಂ ವಾ ಪತಿಪೌರುಷೇ ।
ಅಪಿ ಪುತ್ರೇ ತು ಪಶ್ಯೇಯಮಿತಿ ರಾಮಾಸ್ಥಿತಂ ಮಯಾ ॥ ೩೮

ಸಾ ಬಹೂನ್ಯಮನೋಜ್ಞಾನಿ ವಾಕ್ಯಾನಿ ಹೃದಯಚ್ಛಿದಾಮ್ ।
ಅಹಂ ಶ್ರೋಷ್ಯೇ ಸಪತ್ನೀನಾಮವರಾಣಾಂ ವರಾ ಸತೀ ॥ ೩೯

ಅತೋ ದುಃಖತರಂ ಕಿಂ ನು ಪ್ರಮುದಾನಾಂ ಭವಿಷ್ಯತಿ ।
ಮಮ ಶೋಕೋ ವಿಲಾಪಶ್ಚ ಯಾದೃಶೋಽಯಮನಂತಕಃ ॥ ೪೦

ತ್ವಯಿ ಸಂನಿಹಿತೇಽಪ್ಯೇವಮಪಮಾಸಂ ನಿರಾಕೃತಾ ।
ಕಿಂ ಪುನಃ ಪ್ರೋಷಿತೇ ತಾತ ಧ್ರುವಂ ಮರಣಮೇವ ಮೇ ॥ ೪೧

ಅತ್ಯಂತಂ ನಿಗೃಹೀತಾಸ್ಮಿ ಭರ್ತುರ್ನಿತ್ಯಮತಂತ್ರಿತಾ ।
ಪರಿವಾರೇಣ ಕೈಕೇಯ್ಯಾಃ ಸಮಾ ವಾಪ್ಯಥವಾವರಾ ॥ ೪೨

ಯೋ ಹಿ ಮಾಂ ಸೇವತೇ ಕಶ್ಚಿದಥವಾಪ್ಯನುವರ್ತತೇ ।
ಕೈಕೇಯ್ಯಾಃ ಪುತ್ರಮನ್ವೀಕ್ಷ್ಯ ಸ ಜನೋ ನಾಭಿಭಾಷತೇ ॥ ೪೩

---

ಯಾವ ಚಿಂತೆಯೂ ಇರುವುದಿಲ್ಲ (೩೬-೩೭). ಪತಿಯಿಂದ ನಾನು ಯಾವ ಶುಭವನ್ನೂ ಸುಖವನ್ನೂ ಕಾಣಲಿಲ್ಲ. ಮಗನಿಂದಲಾದರೂ ಒಳ್ಳೆಯದನ್ನು ಕಂಡೇನೆಂದು ನಂಬಿಕೊಂಡಿದ್ದೆನು. ಇನ್ನು ಮೇಲೆ ಸವತಿಯರು ಮರ್ಮಭೇದಕವಾದ ನಾನಾ ಬಗೆಯ ಕೆಟ್ಟ ಮಾತುಗಳನ್ನು ನನಗೆ ಹೇಳುವರು. ಹೆಸರಿಗೆ ನಾನು ಪಟ್ಟದ ರಾಣಿಯಾಗಿದ್ದರೂ ಅಲ್ಪಜನರು ಮಾತನ್ನು ಕೇಳಬೇಕಾಗುವುದು. ಹೇಗೆ ಕೇಳಿಕೊಂಡಿರಲಿ? (೩೮-೩೯). ಹೆಂಗಸರಿಗೆ ಸವತಿಯರಾಡುವ ಚುಚ್ಚುಮಾತು ಗಳನ್ನು ಕೇಳುವುದಕ್ಕಿಂತ ಹೆಚ್ಚಿನ ದುಃಖ ಯಾವುದು ? ನನ್ನ ಕಷ್ಟಕ್ಕೆ-ನಾನು ಅಳುವುದಕ್ಕೆ ಅಂತ್ಯವೇ ಇಲ್ಲದೆ ಹೋಯಿತು. ಮಗು, ನೀನು ಹತ್ತಿರ ಇರುವಾಗಲೇ ನಾನು ಇಷ್ಟು ಅಸಡ್ಡೆಗೆ ಗುರಿಯಾಗಿದ್ದೆ. ಇನ್ನು ನೀನು ಹೊರಟುಹೋದರೆ ಏನು ಹೇಳಲಿ? ನನಗೆ ಉಳಿಗಾಲವಿಲ್ಲ (೪೦-೪೧). ಪತಿಯ ಉಪೇಕ್ಷೆಗೆ ಗುರಿಯಾಗಿ ಆತನಿಗೇ ನಾನು ಬೇಡವಾಗಿದ್ದೇನೆ. ಕೈಕೇಯಿಯ ದಾಸಿಗೆ ನಾನು ಸಮಾನಳೊ ಅಥವಾ ದಾಸಿಗಿಂತ ನಿಕೃಷ್ಟಳೊ ಆಗಿದ್ದೇನೆ. ಈಗ ನನ್ನನ್ನು ಸೇವಿಸತಕ್ಕವರೊ ಅನುಸರಿಸತಕ್ಕವರೊ ಕೆಲವರು ಇದ್ದಾರು. ಇನ್ನುಮೇಲೆ

ನಿತ್ಯಕ್ರೋಧತಯಾ ತಸ್ಯಾಃ ಕಥಂ ನು ಖರವಾದಿ ತತ್ ।
ಕೈಕೇಯ್ಯಾ ವದನಂ ದ್ರಷ್ಟುಂ ಪುತ್ರ ಶಕ್ಷ್ಯಾಮಿ ದುರ್ಗತಾ ॥ ೪೪
ದಶ ಸಪ್ತ ಚ ವರ್ಷಾಣಿ ತವ ಜಾತಸ್ಯ ರಾಘವ ।
ಆಸಿತಾನಿ ಪ್ರಕಾಂಕ್ಷಂತ್ಯಾ ಮಯಾ ದುಃಖಪರಿಕ್ಷಯಮ್ ॥ ೪೫
ತದಕ್ಷಯಮಹಂ ದುಃಖಂ ನೋತ್ಸಹೇ ಸಹಿತುಂ ಚಿರಮ್ ।
ವಿಪ್ರಕಾರಂ ಸಪತ್ನೀನಾಮೇವಂ ಜೀರ್ಣಾಪಿ ರಾಘವ ॥ ೪೬
ಅಪಶ್ಯಂತೀ ತವ ಮುಖಂ ಪರಿಪೂರ್ಣಶಶಿಪ್ರಭಮ್ ।
ಕೃಪಣಾ ವರ್ತಯಿಷ್ಯಾಮಿ ಕಥಂ ಕೃಪಣಜೀವಿಕಾಮ್ ॥ ೪೭
ಉಪವಾಸೈಶ್ಚ ಯೋಗೈಶ್ಚ ಬಹುಭಿಶ್ಚ ಪರಿಶ್ರಮೈಃ ।
ದುಃಖಂ ಸಂವರ್ಧಿತೋ ಮೋಘಂ ತ್ವಂ ಹಿ ದುರ್ಗತಯಾ ಮಯಾ ॥
ಸ್ಥಿರಂ ತು ಹೃದಯಂ ಮನ್ಯೇ ಮಮೇದಂ ಯನ್ನ ದೀರ್ಯತೇ ।
ಪ್ರಾವೃಷೀವ ಮಹಾನದ್ಯಾಃ ಸ್ಪೃಷ್ಟಂ ಕೂಲಂ ನವಾಂಭಸಾ ॥ ೪೯

---

ಕೈಕೇಯಿಯ ಮಗನನ್ನು ನೋಡಿ ಭಯದಿಂದ ಅವರೂ ನನ್ನೊಡನೆ ಮಾತನಾಡುವುದನ್ನೇ ಬಿಡುತ್ತಾರೆ (೪೨-೪೩). ಆ ಕೈಕೇಯಿ ಯಾವಾಗಲೂ ಸಿಡುಕಿನವಳು. ಅವಳು ಸಿಡಿಮಿಡಿಗೊಳ್ಳುತ್ತಿದ್ದರೆ ಅವಳ ಮುಖವನ್ನು ನೋಡುತ್ತ ಹೇಗೆ ಸಹಿಸಕೊಂಡಿರಲಿ? ನಾನು ದುರವಸ್ಥೆಗೆ ಸಿಕ್ಕಿದೆ (೪೪). ರಾಮ, ನೀನು ಹುಟ್ಟಿದ ಮೇಲೆ, ನನ್ನ ದುಃಖವು ಪರಿಹಾರವಾದೀತೆಂದು ಕಳೆದ ಹದಿನೇಳು *ವರ್ಷಗಳಿಂದ ಕಾದಿದ್ದೆನು. ಆದರೆ ನನ್ನ ದುಃಖವು ಅಕ್ಷಯವಾಯಿತು. ಇನ್ನು ಹೆಚ್ಚುಕಾಲ ಇದನ್ನು ಸಹಿಸಿಕೊಳ್ಳಲಾರೆ. ನನಗೆ ಇಷ್ಟು ವಯಸ್ಸಾದ ಮೇಲೆ ಇನ್ನು ಸವತಿಯರ ನಿಂದೆಯನ್ನು ತಡೆದುಕೊಳ್ಳಲಾರೆ (೪೫-೪೬). ಪೂರ್ಣಚಂದ್ರನಂತೆ ಬೆಳಗುವ ನಿನ್ನ ಮುಖವನ್ನು ಕಾಣದೆ, ದಿಕ್ಕಿಲ್ಲದ ನಾನು ಈ ಹಾಳು ಬಾಳನ್ನು ಹೇಗೆ ಕಳೆಯಲಿ ? ನಿನಗೋಸ್ಕರ ಎಷ್ಟು ಉಪವಾಸಗಳನ್ನು ಮಾಡಿದೆನೊ! ಭಗವಂತನನ್ನು ಎಷ್ಟು ಧ್ಯಾನಿಸಿದೆನೊ! ಬಹುಕಷ್ಟದಿಂದ ನಿನ್ನನ್ನು ಸಾಕಿದೆ. ಭಾಗ್ಯಹೀನಳಾದ ನನಗೆ ಎಲ್ಲವೂ ವ್ಯರ್ಥವಾಯಿತು (೪೭-೪೮). ನನ್ನ ಎದೆ

---

* ಅನುಬಂಧವನ್ನು ನೋಡಿ.

ಮಮೈವ ನೂನಂ ಮರಣಂ ನ ವಿದ್ಯತೇ
ನ ಚಾವಕಾಶೋಽಸ್ತಿ ಯಮಕ್ಷಯೇ ಮಮ ।
ಯದಂತಕೋಽದ್ಯೈವ ನ ಮಾಂ ಜಿಹೀರ್ಷತಿ
ಪ್ರಸಹ್ಯ ಸಿಂಹೋ ರುದತೀಂ ಮೃಗೀಮಿವ ॥ ೫೦

ಸ್ಥಿರಂ ಹಿ ನೂನಂ ಹೃದಯಂ ಮಮಾಯಸಂ
ನ ಭಿದ್ಯತೇ ಯದ್ಭುವಿ ನಾವದೀರ್ಯತೇ ।
ಅನೇನ ದುಃಖೇನ ಚ ದೇಹಮರ್ಪಿತಂ
ಧ್ರುವಂ ಹ್ಯಕಾಲೇ ಮರಣಂ ನ ವಿದ್ಯತೇ ॥ ೫೧

ಇದಂ ತು ದುಃಖಂ ಯದನರ್ಥಕಾನಿ ಮೇ
ವ್ರತಾನಿ ದಾನಾನಿ ಚ ಸಂಯಮಾಶ್ಚ ಹಿ ।
ತಪಶ್ಚ ತಪ್ತಂ ಯದಪತ್ಯಕಾರಣಾತ್
ಸುನಿಷ್ಫಲಂ ಬೀಜಮಿವೋಪ್ತಮೂಷರೇ ॥ ೫೨

ಯದಿ ಹ್ಯಕಾಲೇ ಮರಣಂ ಸ್ವಯೇಚ್ಛಯಾ
ಲಭೇತ ಕಶ್ಚಿದ್ಗುರುದುಃಖಕರ್ಶಿತಃ । ೫೩

---

ಕಲ್ಲಾಗಿರಬೇಕು. ಮಳೆಗಾಲದಲ್ಲಿ ಹೊಸ ನೀರು ಬಂದು ನದಿಯ ದಂಡೆ ಒಡೆದುಹೋಗುವಂತೆ ಇದು ಒಡೆದುಹೋಗಬೇಡವೆ ? ನನಗೆ ಮರಣವೇ ಇಲ್ಲವೆಂದು ಕಾಣುತ್ತದೆ. ಯಮನ ಮನೆಯಲ್ಲಿಯೂ ನನಗೆ ಜಾಗವಿಲ್ಲ. ಗೋಳಿಡುವ ಜಿಂಕೆಯನ್ನು ಸಿಂಹವು ಎಳೆದುಕೊಂಡು ಹೋಗುವಂತೆ ಯಮಧರ್ಮರಾಜನು ನನ್ನನ್ನು ಎಳೆದುಕೊಂಡು ಹೋಗಬಾರದೆ ? (೪೯-೫೦). ಗಟ್ಟಿಯಾದ ನನ್ನ ಮನಸ್ಸು, ನನ್ನ ದೇಹ-ಇವೆರಡೂ ಕಬ್ಬಿಣದಿಂದ ಆಗಿರಬೇಕು. ಇಂಥ ದುಃಖದಲ್ಲಿಯೂ ಇದು ಸೀಳಿಹೋಗುವುದಿಲ್ಲ - ನೆಲದ ಮೇಲೆ ಬಿದ್ದರೂ ಒಡೆದು ಚೂರಾಗುವುದಿಲ್ಲವಲ್ಲ ! ಕಾಲ ಬರದೆ ಎಂದಿಗೂ ಮರಣವು ಬರದು (೫೧). ನನ್ನ ಮಗನಿಗೋಸ್ಕರ ನಾನು ಮಾಡಿದ ವ್ರತ, ದಾನ, ಧ್ಯಾನ - ಎಲ್ಲವೂ ವ್ಯರ್ಥವಾಯಿತಲ್ಲ, ನನ್ನ ತಪಸ್ಸು ನಿಷ್ಫಲವಾಯಿತಲ್ಲ ಎಂದು ನನಗೆ ದುಃಖವಾಗುತ್ತಿದೆ. ಉಪ್ಪುನೆಲದಲ್ಲಿ ಬೀಜವನ್ನು ಬಿತ್ತಿದಂತಾಯಿತು (೫೨). ಮಗನೆ, ಕರುವನ್ನು ಕಾಣದ ಹಸುವಿನಂತೆ

ಗತಾಹಮದ್ಯೈವ ಪರೇತಸಂಸದಂ
ವಿನಾ ತ್ವಯಾ ಧೇನುರಿವಾತ್ಮಜೇನ ವೈ ॥ ೫೩
ಅಥಾಪಿ ಕಿಂ ಜೀವಿತಮದ್ಯ ಮೇ ವೃಥಾ
ತ್ವಯಾ ವಿನಾ ಚಂದ್ರನಿಭಾನನಪ್ರಭ ।
ಅನುವ್ರಜಿಷ್ಯಾಮಿ ವನಂ ತ್ವಯೈವ ಗೌಃ
ಸುದುರ್ಬಲಾ ವತ್ಸಮಿವಾನುಕಾಂಕ್ಷಯಾ ॥ ೫೪
ಭೃಶಮಸುಖಮಮರ್ಷಿತಾ ತದಾ
ಬಹು ವಿಲಲಾಪ ಸಮೀಕ್ಷ್ಯ ರಾಘವಮ್ ।
ವ್ಯಸನಮುಪನಿಶಾಮ್ಯ ಸಾ ಮಹತ್
ಸುತಮಿವ ಬದ್ಧಮವೇಕ್ಷ್ಯ ಕಿಂನರೀ ॥ ೫೫

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ವಿಂಶಃ ಸರ್ಗಃ

---

ನಿನ್ನನ್ನು ನಾನು ಬಿಟ್ಟಿರಲಾರೆ. ಮಹಾಸಂಕಟ ಬಂದಾಗ ಮನುಷ್ಯನಿಗೆ ಅಕಾಲದಲ್ಲಿ ಸ್ವೇಚ್ಛೆಯಿಂದ ಸಾಯಲು ಸಾಧ್ಯವಾದರೆ, ನಾನು ಈಗಲೆ ಯಮಲೋಕಕ್ಕೆ ಹೋಗಿಬಿಡುತ್ತಿದ್ದೆ (೫೩). ನಾನು ಸಾಯದಿದ್ದರೂ, ರಾಮ, ನೀನಿಲ್ಲದ ಮೇಲೆ ಈ ಹಾಳು ಬದುಕಿನಿಂದ ಏನು ಪ್ರಯೋಜನ? ಹಸು ತನ್ನ ಕರುವನ್ನು ವಾತ್ಸಲ್ಯದಿಂದ ಹಿಂಬಾಲಿಸಿ ಹೋಗುವಂತೆ, ನಾನು ನಿನ್ನ ಹಿಂದೆ ಕಾಡಿಗೆ ಬರುತ್ತೇನೆ. ಚಂದ್ರನಂತೆ ಸುಂದರವಾದ ನಿನ್ನ ಮುಖವನ್ನು ನೋಡದೆ ಇರಲು ನನಗೆ ಶಕ್ತಿಯಿಲ್ಲ" ಎಂದು ಹಲುಬಿದಳು (೫೪). ಕೌಸಲ್ಯೆಗೆ ಪುತ್ರವಿರಹದ ಮಹಾದುಃಖವನ್ನು ತಡೆದುಕೊಳ್ಳಲಾಗಲಿಲ್ಲ. ಶ್ರೀರಾಮನಿಗೆ ದೊಡ್ಡ ವಿಪತ್ತು ಬಂದುದನ್ನು ಪರ್ಯಾಲೋಚಿಸಿ, ಸೆರೆಸಿಕ್ಕಿದ ಮಗನನ್ನು ಕಂಡ ಕಿನ್ನರಿಯಂತೆ, ಆಕೆಯು ಗೋಳಾಡಿದಳು (೫೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತನೆಯ ಸರ್ಗ

## ಏಕವಿಂಶಃ ಸರ್ಗಃ

### ಕೌಸಲ್ಯಾಲಕ್ಷ್ಮಣಪ್ರತಿಬೋಧನಮ್

ತಥಾ ತು ವಿಲಪಂತೀಂ ತಾಂ ಕೌಸಲ್ಯಾಂ ರಾಮಮಾತರಮ್ ।
ಉವಾಚ ಲಕ್ಷ್ಮಣೋ ದೀನಸ್ತತ್ಕಾಲಸದೃಶಂ ವಚ ॥ ೧

ನ ರೋಚತೇ ಮಮಾಪ್ಯೇತದಾರ್ಯೇ ಯದ್ರಾಘವೋ ವನಮ್ ।
ತ್ಯಕ್ತ್ವಾ ರಾಜ್ಯಶ್ರಿಯಂ ಗಚ್ಛೇತ್ ಸ್ತ್ರಿಯಾ ವಾಕ್ಯವಶಂಗತಃ ॥ ೨

ವಿಪರೀತಶ್ಚ ವೃದ್ಧಶ್ಚ ವಿಷಯೈಶ್ಚ ಪ್ರಧರ್ಷಿತಃ ।
ನೃಪಃ ಕಿಮಿವ ನ ಬ್ರೂಯಾಚ್ಚೋದ್ಯಮಾನಃ ಸಮನ್ಮಥಃ ॥ ೩

ನಾಸ್ಯಾಪರಾಧಂ ಪಶ್ಯಾಮಿ ನಾಪಿ ದೋಷಂ ತಥಾವಿಧಮ್ ।
ಯೇನ ನಿರ್ವಾಸ್ಯತೇ ರಾಷ್ಟ್ರಾದ್ವನವಾಸಾಯ ರಾಘವಃ ॥ ೪

## ಸರ್ಗ ೨೧

**ಲಕ್ಷ್ಮಣನು ಕೌಸಲ್ಯೆಗೆ ಸಮಾಧಾನವನ್ನು ಹೇಳುವುದು. ಶ್ರೀರಾಮನು ತಂದೆಯ ಮಾತನ್ನು ಮೀರುವುದು ಅಧರ್ಮವೆಂದು ಹೇಳಿ ವನಗಮನಕ್ಕೆ ಅನುಮತಿಯನ್ನು ಕೇಳುವುದು.**

ಹೀಗೆ ಶೋಕಿಸುತ್ತಿದ್ದ ಕೌಸಲ್ಯೆಯನ್ನು ನೋಡಿ ದೈನ್ಯದಿಂದ ನಿಂತಿದ್ದ ಲಕ್ಷ್ಮಣನು ಕಾಲೋಚಿತವಾದ ಒಂದು ಮಾತನ್ನು ಹೇಳಿದನು : "ಅಮ್ಮ, ಶ್ರೀರಾಮನು ಒಬ್ಬ ಹೆಂಗಸಿನ ಮಾತಿಗೊಳಗಾಗಿ ರಾಜ್ಯಲಕ್ಷ್ಮಿಯನ್ನು ಪರಿತ್ಯಜಿಸಿ ಅರಣ್ಯಕ್ಕೆ ಹೋಗುವುದು ನನಗೂ ಹಿಡಿಸುವುದಿಲ್ಲ (೧-೨). ಕಾಮಿಯಾದ ಮಹಾರಾಜನು ಹೆಂಗಸಿನ ಒತ್ತಾಯಕ್ಕೆ ಮಣಿದು ಏನನ್ನು ತಾನೆ ಹೇಳಲಾರ? ಅವನು ಮುದುಕ; ವಿಷಯಭೋಗದ ಜಗ್ಗಾಟಕ್ಕೆ ಸಿಕ್ಕಿದವನು; ಅವನಿಗೆ ಎಲ್ಲವೂ ತಲೆಕೆಳಗಾಗಿ ಕಾಣುತ್ತದೆ. ರಾಘವನನ್ನು ದೇಶಭ್ರಷ್ಟನನ್ನಾಗಿ ಮಾಡಿ ವನವಾಸಕ್ಕೆ ಕಳಿಸಲು ಇವನು ಮಾಡಿದ ಅಂಥ ಅಪರಾಧವೇನು ? ಇವನಲ್ಲಿ ಯಾವ ದೋಷವೂ ನನಗೆ ಕಾಣಿಸದು (೩-೪).

ನ ತಂ ಪಶ್ಯಾಮ್ಯಹಂ ಲೋಕೇ ಪರೋಕ್ಷಮಪಿ ಯೋ ನರಃ ।
ಸ್ವಮಿತ್ರೋಽಪಿ ನಿರಸ್ತೋಽಪಿ ಯೋಽಸ್ಯ ದೋಷಮುದಾಹರೇತ್ ॥ ೫

ದೇವಕಲ್ಪಮೃಜುಂ ದಾಂತಂ ರಿಪೂಣಾಮಪಿ ವತ್ಸಲಮ್ ।
ಅವೇಕ್ಷಮಾಣಃ ಕೋ ಧರ್ಮಂ ತ್ಯಜೇತ್ ಪುತ್ರಮಕಾರಣಾತ್ ॥ ೬

ತದಿದಂ ವಚನಂ ರಾಜ್ಞಃ ಪುನರ್ಬಾಲ್ಯಮುಪೇಯುಷಃ ।
ಪುತ್ರಃ ಕೋ ಹೃದಯೇ ಕುರ್ಯಾತ್ ರಾಜವೃತ್ತಮನುಸ್ಮರನ್ ॥ ೭

ಯಾವದೇವ ನ ಜಾನಾತಿ ಕಶ್ಚಿದರ್ಥಮಿಮಂ ನರಃ ।
ತಾವದೇವ ಮಯಾ ಸಾರ್ಧಮಾತ್ಮಸ್ಥಂ ಕುರು ಶಾಸನಮ್ ॥ ೮

ಮಯಾ ಪಾರ್ಶ್ವೇ ಸಧನುಷಾ ತವ ಗುಪ್ತಸ್ಯ ರಾಘವ ।
ಕಃ ಸಮರ್ಥೋಽಧಿಕಂ ಕರ್ತುಂ ಕೃತಾಂತಸ್ಯೇವ ತಿಷ್ಠತಃ ॥ ೯

ನಿರ್ಮನುಷ್ಯಾಮಿಮಾಂ ಸರ್ವಾಮಯೋಧ್ಯಾಂ ಮನುಜರ್ಷಭ ।
ಕರಿಷ್ಯಾಮಿ ಶರೈಸ್ತೀಕ್ಷ್ಣೈರ್ಯದಿ ಸ್ಥಾಸ್ಯತಿ ವಿಪ್ರಿಯೇ ॥ ೧೦

---

ಈ ಲೋಕದಲ್ಲಿ ರಾಮನಿಗೆ ಮಹಾಶತ್ರುವಾಗಿದ್ದರೂ ರಾಮನಿಂದ ತಿರಸ್ಕೃತನಾಗಿದ್ದರೂ, ಒಬ್ಬನೂ ಪರೋಕ್ಷದಲ್ಲಿ ಕೂಡ ಇವನಲ್ಲಿ ಒಂದು ತಪ್ಪನ್ನಾದರೂ ಹುಡುಕಿ ಹೇಳಲಾರನು. ತಪ್ಪನ್ನು ಹೇಳಬಲ್ಲ ಒಬ್ಬ ಮನುಷ್ಯನನ್ನೂ ನಾನು ಕಾಣೆ (೫). ಈತನು ಕಪಟವನ್ನರಿಯದ ಋಜುಸ್ವಭಾವದವನೂ ಜಿತೇಂದ್ರಿಯನೂ ಶತ್ರುಗಳಲ್ಲಿ ಕೂಡ ಕಾರುಣ್ಯವುಳ್ಳವನೂ ಆಗಿ ದೇವತೆಯಂತೆ ಇದ್ದಾನೆ. ಧರ್ಮಬುದ್ಧಿಯುಳ್ಳ ಯಾವ ಮನುಷ್ಯನು ಇಂಥ ಮಗನನ್ನು ನಿಷ್ಕಾರಣವಾಗಿ ತ್ಯಜಿಸಿಯಾನು ? (೬). ಇಷ್ಟು ವಯಸ್ಸಾದರೂ ಹುಡುಗನಂತೆ ಆಡುವ ಈ ರಾಜನ ವಚನವನ್ನು ರಾಜನೀತಿಜ್ಞನಾದ ಯಾವ ಪುತ್ರನು ತಾನೆ ಮನಸ್ಸಿಗೆ ಹಚ್ಚಿಕೊಂಡಾನು? ಅಣ್ಣ, ಈ ವಿಷಯವು ಜನರಿಗೆ ಗೊತ್ತಾಗುವುದಕ್ಕೆ ಮೊದಲೆ ರಾಜ್ಯಾಧಿಕಾರವನ್ನು ನೀನು ವಹಿಸಿಕೊಂಡುಬಿಡು. ನಾನು ನಿನಗೆ ಸಹಾಯಕ ನಾಗಿರುತ್ತೇನೆ (೭-೮). ನಾನು ಧನುಸ್ಸನ್ನು ಹಿಡಿದು ನಿನ್ನ ಪಾರ್ಶ್ವದಲ್ಲಿ ಬೆಂಬಲವಾಗಿ ಯಮನ ಹಾಗೆ ನಿಂತಿರಲು ಯಾವನಿಗೆ ಅಧಿಕಪ್ರಸಂಗ ಮಾಡಲು ಶಕ್ತಿಯುಂಟು? ನಮಗೆ ವಿರೋಧಿಸಿದರೆ ನನ್ನ ತೀಕ್ಷ್ಣಾಸ್ತ್ರಗಳಿಂದ ಅಯೋಧ್ಯಾನಗರವೇ ನಿರ್ಮಾನುಷವಾಗುವಂತೆ

ಭರತಸ್ಯಾಥ ಪಕ್ಷ್ಯೋ ವಾ ಯೋ ವಾಸ್ಯ ಹಿತಮಿಚ್ಛತಿ ।
ಸರ್ವಾನೇವ ಹನಿಷ್ಯಾಮಿ ಮೃದುರ್ಹಿ ಪರಿಭೂಯತೇ ॥ ೧೧

ಪ್ರೋತ್ಸಾಹಿತೋಽಯಂ ಕೈಕೇಯ್ಯಾ ಸ ದುಷ್ಟೋ ಯದಿ ನಃ ಪಿತಾ ।
ಅಮಿತ್ರಭೂತೋ ನಿಃಸಂಗಂ ವಧ್ಯತಾಂ ಬಧ್ಯತಾಮಪಿ ॥ ೧೨

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ಕಾರ್ಯಂ ಭವತಿ ಶಾಸನಮ್ ॥ ೧೩

ಬಲಮೇಷ ಕಿಮಾಶ್ರಿತ್ಯ ಹೇತುಂ ವಾ ಪುರುಷರ್ಷಭ ।
ದಾತುಮಿಚ್ಛತಿ ಕೈಕೇಯ್ಯೈ ರಾಜ್ಯಂ ಸ್ಥಿತಮಿದಂ ತವ ॥ ೧೪

ತ್ವಯಾ ಚೈವ ಮಯಾ ಚೈವ ಕೃತ್ವಾ ವೈರಮನುತ್ತಮಮ್ ।
ಕಾಸ್ಯ ಶಕ್ತಿಃ ಶ್ರಿಯಂ ದಾತುಂ ಭರತಾಯಾರಿನಾಶನ ॥ ೧೫

ಅನುರಕ್ತೋಽಸ್ಮಿ ಭಾವೇನ ಭ್ರಾತರಂ ದೇವಿ ತತ್ತ್ವತಃ ।
ಸತ್ಯೇನ ಧನುಷಾ ಚೈವ ದತ್ತೇನೇಷ್ಟೇನ ತೇ ಶಪೇ ॥ ೧೬

---

ಮಾಡುತ್ತೇನೆ (೯-೧೦). ಇಲ್ಲಿ ಯಾರಾದರೂ ಭರತನ ಪಕ್ಷವನ್ನು ವಹಿಸಿದವರಿದ್ದರೆ - ಅವನಿಗೆ ಹಿತವನ್ನು ಕೋರತಕ್ಕವರಿದ್ದರೆ - ಅವರೆಲ್ಲರನ್ನೂ ಕೊಂದುಹಾಕುತ್ತೇನೆ. ಸಾಧುವಾಗಿರತಕ್ಕವನನ್ನು ಕಂಡರೆ ಜನರಿಗೆ ತಿರಸ್ಕಾರ (೧೧). ನಮ್ಮ ತಂದೆಯೆನಿಸಿಕೊಂಡ ಆ ದುಷ್ಟನೇನಾದರೂ ಕೈಕೇಯಿಯಿಂದ ಪ್ರೋತ್ಸಾಹಗೊಂಡು ನಮ್ಮನ್ನು ವಿರೋಧಿಸಿದರೆ, ನಿರ್ದಾಕ್ಷಿಣ್ಯವಾಗಿ ಅವನನ್ನು ಕೊಂದುಹಾಕೋಣ! ಅವನನ್ನು ಹಿಡಿದು ಸೆರೆಯಲ್ಲಿಡೋಣ! (೧೨). ದುರಹಂಕಾರಿಯಾಗಿ ಕಾರ್ಯಾಕಾರ್ಯವಿವೇಚನೆಯನ್ನು ಕಳೆದುಕೊಂಡು ಉನ್ಮಾರ್ಗಪ್ರವರ್ತಕನಾದವನು ಗುರುವಾಗಿದ್ದರೂ ಅವನನ್ನು ದಂಡಿಸಲೇಬೇಕು (೧೩). ಶ್ರೀರಾಮ, ನಿನಗೆ ಸೇರಬೇಕಾದ ಈ ರಾಜ್ಯವನ್ನು ಈತನು ಯಾವ ಬಲದಿಂದ - ಯಾವ ಕಾರಣದಿಂದ - ಕೈಕೇಯಿಗೆ ಕೊಡಲು ಹೊರಟಿದ್ದಾನೆ ? ಶತ್ರುಗಳನ್ನು ಧ್ವಂಸಮಾಡಬಲ್ಲ ವೀರನಾದ ನಿನ್ನೊಡನೆಯೂ ನನ್ನೊಡನೆಯೂ ದೊಡ್ಡ ವೈರವನ್ನು ಬೆಳೆಸಿ ಭರತನಿಗೆ ಐಶ್ವರ್ಯವನ್ನೊಪ್ಪಿಸಲು ಈತನಿಗೆ ಶಕ್ತಿಯುಂಟೆ? (೧೪-೧೫). ಅಮ್ಮ, ನಾನು ಮನಃಪೂರ್ವಕವಾಗಿ ಅಣ್ಣನಲ್ಲಿ ಅನುರಕ್ತನಾಗಿದ್ದೇನೆ. ಈ ವಿಷಯದಲ್ಲಿ

ದೀಪ್ತಮಗ್ನಿಮರಣ್ಯಂ ವಾ ಯದಿ ರಾಮಃ ಪ್ರವೇಕ್ಷ್ಯತಿ ।
ಪ್ರವಿಷ್ಟಂ ತತ್ರ ಮಾಂ ದೇವಿ ತ್ವಂ ಪೂರ್ವಮವಧಾರಯ ॥ ೧೭

ಹರಾಮಿ ವೀರ್ಯಾದ್ದುಃಖಂ ತೇ ತಮಃ ಸೂರ್ಯ ಇವೋದಿತಃ ।
ದೇವೀ ಪಶ್ಯತು ಮೇ ವೀರ್ಯಂ ರಾಘವಶ್ಚೈವ ಪಶ್ಯತು ॥ ೧೮

ಹನಿಷ್ಯೇ ಪಿತರಂ ವೃದ್ಧಂ ಕೈಕೇಯ್ಯಾಸಕ್ತಮಾನಸಮ್ ।
ಕೃಪಣಂ ಚಾಸ್ಥಿರಂ ಬಾಲಂ ವೃದ್ಧಭಾವೇನ ಗರ್ಹಿತಮ್ ॥ ೧೯

ಏತತ್ತು ವಚನಂ ಶ್ರುತ್ವಾ ಲಕ್ಷ್ಮಣಸ್ಯ ಮಹಾತ್ಮನಃ ।
ಉವಾಚ ರಾಮಂ ಕೌಸಲ್ಯಾ ರುದಂತೀ ಶೋಕಲಾಲಸಾ ॥ ೨೦

ಭ್ರಾತುಸ್ತೇ ವದತಃ ಪುತ್ರ ಲಕ್ಷ್ಮಣಸ್ಯ ಶ್ರುತಂ ತ್ವಯಾ ।
ಯದತ್ರಾನಂತರಂ ಕಾರ್ಯಂ ಕುರುಷ್ವ ಯದಿ ರೋಚತೇ ॥ ೨೧

ನ ಚಾಧರ್ಮ್ಯಂ ವಚಃ ಶ್ರುತ್ವಾ ಸಪತ್ನ್ಯಾ ಮಮ ಭಾಷಿತಮ್ ।
ವಿಹಾಯ ಶೋಕಸಂತಪ್ತಾಂ ಮಾಂ ವನಂ ಗಂತುಮರ್ಹಸಿ ॥ ೨೨

---

ಸತ್ಯದ ಮೇಲೆ - ಈ ಧನುಸ್ಸಿನ ಮೇಲೆ - ನನ್ನ ಸುಕೃತದಮೇಲೆ ಆಣೆ ಮಾಡುತ್ತೇನೆ. ಶ್ರೀರಾಮನು ಉರಿಯುವ ಅಗ್ನಿಯನ್ನಾಗಲಿ, ಅರಣ್ಯವನ್ನಾಗಲಿ ಪ್ರವೇಶಿಸಬೇಕಾದರೆ, ಅವನಿಗಿಂತ ಮೊದಲು - ದೇವಿ, ನಾನು ಪ್ರವೇಶಿಸಿರುತ್ತೇನೆಂದು ತಿಳಿ (೧೬-೧೭). ಉದಿತನಾದ ಸೂರ್ಯನು ಕತ್ತಲೆಯನ್ನು ನಾಶಪಡಿಸುವಂತೆ, ನಿನ್ನ ಕಷ್ಟವನ್ನು ನನ್ನ ಪರಾಕ್ರಮದಿಂದ ನೀಗಿಸುತ್ತೇನೆ. ನನ್ನ ಸಾಮರ್ಥ್ಯವೇನೆಂಬುದನ್ನಾದರೂ ನೋಡು. ಶ್ರೀರಾಮನೂ ನೋಡಲಿ. ಈ ತಂದೆಯೆನಿಸಿಕೊಂಡವನು ವೃದ್ಧನಾದರೂ ಕೈಕೇಯಿಯ ವ್ಯಾಮೋಹದಿಂದ ಹುಡುಗಾಟವಾಡುತ್ತಿದ್ದಾನೆ. ಚಂಚಲಚಿತ್ತನಾದ ಈ ಕ್ಷುದ್ರಮನುಷ್ಯನನ್ನು ಕೊಂದು ಹಾಕುತ್ತೇನೆ" ಎಂದು ಹೇಳಿದನು (೧೮-೧೯). ಮಹಾತ್ಮನಾದ ಲಕ್ಷ್ಮಣನು ಹೀಗೆ ಹೇಳಲು, ಕೌಸಲ್ಯೆಯು ದುಃಖದಿಂದ ಅಳುತ್ತ ನುಡಿದಳು : "ವತ್ಸ, ನಿನ್ನ ತಮ್ಮ ಲಕ್ಷ್ಮಣನು ಹೇಳುವ ಮಾತನ್ನು ಕೇಳಿದೆಯಾ? ಮುಂದೆ ನಿನಗೆ ಇಷ್ಟವಿದ್ದಂತೆ ಮಾಡು (೨೦-೨೧). ನನ್ನ ಸವತಿಯಾಡಿದ ಅಧರ್ಮದ ಮಾತನ್ನು ಕೇಳಿಕೊಂಡು, ನನ್ನ ಮಾತನ್ನು ತಿರಸ್ಕರಿಸಿ ನನ್ನನ್ನು ಸಂಕಟದಲ್ಲಿ ಬಿಟ್ಟುಹೋಗುವುದು ನಿನಗೆ ತರವಲ್ಲ.

ಧರ್ಮಜ್ಞ ಯದಿ ಧರ್ಮಿಷ್ಠೋ ಧರ್ಮಂ ಚರಿತುಮಿಚ್ಛಸಿ ।
ಶುಶ್ರೂಷ ಮಾಮಿಹಸ್ಥಸ್ತ್ವಂ ಚರ ಧರ್ಮಮನುತ್ತಮಮ್ ॥ ೨೩

ಶುಶ್ರೂಷುರ್ಜನನೀಂ ಪುತ್ರಃ ಸ್ವಗೃಹೇ ನಿಯತೋ ವಸನ್ ।
ಪರೇಣ ತಪಸಾ ಯುಕ್ತಃ ಕಾಶ್ಯಪಸ್ತ್ರಿದಿವಂ ಗತಃ ॥ ೨೪

ಯಥೈವ ರಾಜಾ ಪೂಜ್ಯಸ್ತೇ ಗೌರವೇಣ ತಥಾ ಹ್ಯಹಮ್ ।
ತ್ವಾಂ ನಾಹಮನುಜಾನಾಮಿ ನ ಗಂತವ್ಯಮಿತೋ ವನಮ್ ॥ ೨೫

ತ್ವದ್ವಿಯೋಗಾನ್ನ ಮೇ ಕಾರ್ಯಂ ಜೀವಿತೇನ ಸುಖೇನ ವಾ ।
ತ್ವಯಾ ಸಹ ಮಮ ಶ್ರೇಯಸ್ತೃಣಾನಾಮಪಿ ಭಕ್ಷಣಮ್ ॥ ೨೬

ಯದಿ ತ್ವಂ ಯಾಸ್ಯಸಿ ವನಂ ತ್ಯಕ್ತ್ವಾ ಮಾಂ ಶೋಕಲಾಲಸಾಮ್ ।
ಅಹಂ ಪ್ರಾಯಮಿಹಾಸಿಷ್ಯೇ ನ ಹಿ ಶಕ್ಷ್ಯಾಮಿ ಜೀವಿತುಮ್ ॥ ೨೭

ತತಸ್ತ್ವಂ ಪ್ರಾಪ್ಸ್ಯಸೇ ಪುತ್ರ ನಿರಯಂ ಲೋಕವಿಶ್ರುತಮ್ ।
ಬ್ರಹ್ಮಹತ್ಯಾಮಿವಾಧರ್ಮಾತ್ ಸಮುದ್ರಃ ಸರಿತಾಂ ಪತಿಃ ॥ ೨೮

---

ನೀನು ಧರ್ಮದ ಸ್ವರೂಪವನ್ನು ಬಲ್ಲವನು. ನೀನು ಧರ್ಮಶೀಲನಾಗಿ ಇರಬೇಕೆಂದಿದ್ದರೆ, ಇಲ್ಲಿಯೇ ಇದ್ದು ನನ್ನ ಶುಶ್ರೂಷೆಯನ್ನು ಮಾಡಬಹುದಲ್ಲ? ಈ ಶ್ರೇಷ್ಠವಾದ ಧರ್ಮವನ್ನು ಆಚರಿಸಬಹುದಲ್ಲ? (೨೨-೨೩). ಪೂರ್ವದಲ್ಲಿ ಕಾಶ್ಯಪನು ತನ್ನ ಮನೆಯಲ್ಲಿಯೇ ಇದ್ದು ತಾಯಿಯನ್ನು ಉಪಚರಿಸುತ್ತಿದ್ದನು. ಮಾತೃಶುಶ್ರೂಷೆಯೆಂಬ ಮಹಾತಪಸ್ಸಿನಿಂದ ಅವನು ಸ್ವರ್ಗವನ್ನು ಪಡೆದನು. ನಿನಗೆ ತಂದೆಯಾದ ಮಹಾರಾಜನು ಹೇಗೆ ಪೂಜ್ಯನೊ, ಹಾಗೆ ತಾಯಿಯಾದ ನಾನೂ ಪೂಜ್ಯಳೇ ಅಲ್ಲವೆ? ನೀನು ಹೋಗಲು ನಾನು ಒಪ್ಪಿಗೆ ಕೊಡುವುದಿಲ್ಲ. ನೀನು ಕಾಡಿಗೆ ಹೋಗಕೂಡದು (೨೪-೨೫). ನಿನ್ನನ್ನು ಅಗಲಿದ ಮೇಲೆ ನನಗೆ ಈ ಜೀವಿತದಿಂದೇನಾಗಬೇಕು ? ಈ ಸುಖಸಾಮಗ್ರಿಯಿಂದೇನಾಗಬೇಕು ? ನಿನ್ನ ಜೊತೆಗಿದ್ದು ಹುಲ್ಲನ್ನಾದರೂ ತಿಂದು ಬದುಕಿರುವುದು ಮೇಲು. ಸಂಕಟದಿಂದ ತಲ್ಲಣಗೊಂಡಿರುವ ನನ್ನನ್ನು ಬಿಟ್ಟು ನೀನು ವನಕ್ಕೆ ಹೋದರೆ ನಾನು ಉಪವಾಸಮಾಡಿ ಪ್ರಾಣ ಬಿಡುತ್ತೇನೆ. ನನ್ನಿಂದ ಬದುಕಿರಲು ಸಾಧ್ಯವಿಲ್ಲ (೨೬-೨೭). ವತ್ಸ, ಸಮುದ್ರರಾಜನು ತನ್ನ ತಾಯಿಗೆ ದುಃಖವನ್ನುಂಟುಮಾಡಿದ್ದರಿಂದ ಪಿಪ್ಪಲಾದನೆಂಬ ಬ್ರಾಹ್ಮಣನಿಂದ

ವಿಲಪಂತೀಂ ತಥಾ ದೀನಾಂ ಕೌಸಲ್ಯಾಂ ಜನನೀಂ ತತಃ ।
ಉವಾಚ ರಾಮೋ ಧರ್ಮಾತ್ಮಾ ವಚನಂ ಧರ್ಮಸಂಹಿತಮ್ ॥ ೨೯

ನಾಸ್ತಿ ಶಕ್ತಿಃ ಪಿತುರ್ವಾಕ್ಯಂ ಸಮತಿಕ್ರಮಿತುಂ ಮಮ ।
ಪ್ರಸಾದಯೇ ತ್ವಾಂ ಶಿರಸಾ ಗಂತುಮಿಚ್ಛಾಮ್ಯಹಂ ವನಮ್ ॥ ೩೦

ಋಷಿಣಾ ಚ ಪಿತುರ್ವಾಕ್ಯಂ ಕುರ್ವತಾ ವ್ರತಚಾರಿಣಾ ।
ಗೌರ್ಹತಾ ಜಾನತಾ ಧರ್ಮಂ ಕಂಡುನಾಪಿ ವಿಪಶ್ಚಿತಾ ॥ ೩೧

ಅಸ್ಮಾಕಂ ಚ ಕುಲೇ ಪೂರ್ವಂ ಸಗರಸ್ಯಾಜ್ಞಯಾ ಪಿತುಃ ।
ಖನದ್ಭಿಃ ಸಾಗರೈರ್ಭೂಮಿಮುಪಾಪ್ತಃ ಸುಮಹಾನ್ ವಧಃ ॥ ೩೨

ಜಾಮದಗ್ನ್ಯೇನ ರಾಮೇಣ ರೇಣುಕಾ ಜನನೀ ಸ್ವಯಮ್ ।
ಕೃತ್ವಾ ಪರಶುನಾರಣ್ಯೇ ಪಿತುರ್ವಚನಕಾರಿಣಾ ॥ ೩೩

---

* ಹಿಂಸೆಗೆ ಗುರಿಯಾದನು. ಹಾಗೆ ನೀನು ನನಗೆ ದುಃಖವನ್ನುಂಟುಮಾಡಿದರೆ ನರಕವನ್ನು ಪಡೆಯುತ್ತೀಯೆ" ಎಂದಳು (೨೮). ಹೀಗೆ ದೈನ್ಯದಿಂದ ಹಲುಬುತ್ತಿದ್ದ ತಾಯಿಯಾದ ಕೌಸಲ್ಯೆಯನ್ನು ಕುರಿತು ಧರ್ಮಾತ್ಮನಾದ ಶ್ರೀರಾಮನು ಧರ್ಮಯುಕ್ತವಾದ ಮಾತನ್ನು ಹೇಳಿದನು : "ಅಮ್ಮ, ತಂದೆಯ ಮಾತನ್ನು ಮೀರಿ ನಡೆಯಲು ನನಗೆ ಶಕ್ತಿಯಿಲ್ಲ. ನಿನಗೆ ತಲೆಬಾಗಿ ಬೇಡಿಕೊಳ್ಳುತ್ತೇನೆ; ಪ್ರಸನ್ನಳಾಗು. ನಾನು ಕಾಡಿಗೆ ಹೋಗಬೇಕೆಂದು ಉದ್ದೇಶಿಸಿದ್ದೇನೆ (೨೯-೩೦). ಪೂರ್ವದಲ್ಲಿ ವಿದ್ವಾಂಸನೂ ವ್ರತನಿಷ್ಠನೂ ಆದ ಕಂಡುಮಹರ್ಷಿಯು ತಂದೆಯ ಮಾತಿನಂತೆ ಗೋಹತ್ಯೆಯನ್ನು ಮಾಡಿದ್ದಾನೆ. ನಮ್ಮ ಇಕ್ಷ್ವಾಕುವಂಶದಲ್ಲಿಯೇ ತಂದೆಯಾದ ಸಗರನ ಆಜ್ಞೆಯಂತೆ ಅವನ ಪುತ್ರರು ಭೂಮಿಯನ್ನು ಅಗೆದು ಮೃತ್ಯುವಿಗೆ ಗುರಿಯಾಗಿದ್ದಾರೆ (೩೧-೩೨). ಜಮದಗ್ನಿ ಪುತ್ರನಾದ ಪರಶುರಾಮನು ಪಿತೃವಾಕ್ಯವನ್ನು ಪರಿಪಾಲಿಸುವುದಕ್ಕಾಗಿ ಅರಣ್ಯದಲ್ಲಿ ಕೊಡಲಿಯಿಂದ ತಾಯಿಯಾದ ರೇಣುಕೆಯನ್ನು

---

* ಇದಕ್ಕೆ ಸಂಬಂಧಿಸಿದ ಪೂರ್ವಕಥೆಯು ಯಾವ ಗ್ರಂಥದಲ್ಲಿದೆಯೆಂಬುದು ತಿಳಿದಿಲ್ಲ.

ಏತೈರನ್ಯೈಶ್ಚ ಬಹುಭಿರ್ದೇವಿ ದೇವಸಮೈಃ ಕೃತಮ್ ।
ಪಿತುರ್ವಚನಮಕ್ಲೀಬಂ ಕರಿಷ್ಯಾಮಿ ಪಿತುರ್ಹಿತಮ್ ॥ ೩೪

ನ ಖಲ್ವೇತನ್ಮಯ್ಯೇಕೇನ ಕ್ರಿಯತೇ ಪಿತೃಶಾಸನಮ್ ।
ಏತೈರಪಿ ಕೃತಂ ದೇವಿ ಯೇ ಮಯಾ ತವ ಕೀರ್ತಿತಾಃ ॥ ೩೫

ನಾಹಂ ಧರ್ಮಮಪೂರ್ವಂ ತೇ ಪ್ರತಿಕೂಲಂ ಪ್ರವರ್ತಯೇ ।
ಪೂರ್ವೈರಯಮಭಿಪ್ರೇತೋ ಗತೋ ಮಾರ್ಗೋಽನುಗಮ್ಯತೇ ॥ ೩೬

ತದೇತತ್ತು ಮಯಾ ಕಾರ್ಯಂ ಕ್ರಿಯತೇ ಭುವಿ ನಾನ್ಯಥಾ ।
ಪಿತುರ್ಹಿ ವಚನಂ ಕುರ್ವನ್ ನ ಕಶ್ಚಿನ್ನಾಮ ಹೀಯತೇ ॥ ೩೭

ತಾಮೇವಮುಕ್ತ್ವಾ ಜನನೀಂ ಲಕ್ಷ್ಮಣಂ ಪುನರಬ್ರವೀತ್ ।
ವಾಕ್ಯಂ ವಾಕ್ಯವಿದಾಂ ಶ್ರೇಷ್ಠಃ ಶ್ರೇಷ್ಠಃ ಸರ್ವಧನುಷ್ಮತಾಮ್ ॥ ೩೮

ತವ ಲಕ್ಷ್ಮಣ ಜಾನಾಮಿ ಮಯಿ ಸ್ನೇಹಮನುತ್ತಮಮ್ ।
ವಿಕ್ರಮಂ ಚೈವ ಸತ್ತ್ವಂ ಚ ತೇಜಶ್ಚ ಸುದುರಾಸದಮ್ ॥ ೩೯

---

ಕತ್ತರಿಸಿದ್ದಾನೆ. ಹೀಗೆ ದೇವತಾಸದೃಶರಾದ ಎಷ್ಟೋ ಮಹಾತ್ಮರು ಪಿತೃವಾಕ್ಯವನ್ನು ಸಫಲವಾಗಿ ಮಾಡಿದ್ದಾರೆ. ಆದ್ದರಿಂದ ತಂದೆಯ ಹಿತವನ್ನು ಅನುಸರಿಸಿ ಅವನ ಆಜ್ಞೆಯನ್ನು ಪಾಲಿಸುತ್ತೇನೆ (೩೩-೩೪). ಅಮ್ಮ, ನಾನೊಬ್ಬನೇ ತಂದೆಯ ಆಜ್ಞೆಯಂತೆ ನಡೆದು ಯಾರೂ ಮಾಡದ ಕೆಲಸವನ್ನು ಮಾಡಲು ಹೊರಟಿಲ್ಲ. ನಾನು ಈಗ ಹೇಳಿದ ಅನೇಕ ಮಹಾತ್ಮರು ಇಂಥ ಕಾರ್ಯಗಳನ್ನು ಮಾಡಿದ್ದಾರೆ. ನಿನಗೆ ಪ್ರತಿಕೂಲವಾಗಿ ಹಿಂದೆ ಎಂದೂ ಇಲ್ಲದ ಹೊಸ ಧರ್ಮವನ್ನು ನಾನು ಆಚರಿಸಿಲು ಉದ್ದೇಶಿಸಿಲ್ಲ. ಪೂರ್ವದಲ್ಲಿ ಹಿರಿಯರು ಹೋದ ದಾರಿಯಲ್ಲಿ ನಾನು ಹೋಗುತ್ತಿದ್ದೇನೆ (೩೫-೩೬). ಆದ್ದರಿಂದ ನಾನು ಈ ಲೋಕದಲ್ಲಿ ಯಾವುದು ಧರ್ಮವೊ - ಯಾವುದು ಕರ್ತವ್ಯವೊ ಅದನ್ನು ಮಾಡುತ್ತೇನಲ್ಲದೆ ಬೇರೆಯಲ್ಲ. ತಂದೆಯ ಮಾತನ್ನು ನಡೆಸಿದರೆ ಯಾರಿಗೂ ಧರ್ಮಹಾನಿಯಿಲ್ಲ" ಎಂದನು (೩೭). ಅನಂತರ ಮಹಾವಾಗ್ಮಿಯೂ ಧನುರ್ಧಾರಿಗಳಲ್ಲಿ ಸರ್ವೋತ್ತಮನೂ ಆದ ಶ್ರೀರಾಮನು ಲಕ್ಷ್ಮಣನ ಕಡೆಗೆ ತಿರುಗಿ ಹೀಗೆಂದನು : "ಲಕ್ಷ್ಮಣ, ನಿನಗೆ ನನ್ನಲ್ಲಿರುವ ಸ್ನೇಹಾತಿಶಯವನ್ನು ನಾನು ಬಲ್ಲೆನು. ನಿನ್ನ ಪರಾಕ್ರಮ, ಸಾಮರ್ಥ್ಯ,

ಮಮ ಮಾತುರ್ಮಹದ್ದುಃಖಮತುಲಂ ಶುಭಲಕ್ಷಣ ।
ಅಭಿಪ್ರಾಯಮವಿಜ್ಞಾಯ ಸತ್ಯಸ್ಯ ಚ ಶಮಸ್ಯ ಚ ॥ ೪೦

ಧರ್ಮೋ ಹಿ ಪರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಮ್ ।
ಧರ್ಮಸಂಶ್ರಿತಮೇತಚ್ಚ ಪಿತುರ್ವಚನಮುತ್ತಮಮ್ ॥ ೪೧

ಸಂಶ್ರುತ್ಯ ಚ ಪಿತುರ್ವಾಕ್ಯಂ ಮಾತುರ್ವಾ ಬ್ರಾಹ್ಮಣಸ್ಯ ವಾ ।
ನ ಕರ್ತವ್ಯಂ ವೃಥಾ ವೀರ ಧರ್ಮಮಾಶ್ರಿತ್ಯ ತಿಷ್ಠತಾ ॥ ೪೨

ಸೋಽಹಂ ನ ಶಕ್ಷ್ಯಾಮಿ ಪಿತುರ್ನಿಯೋಗಮತಿವರ್ತಿತುಮ್ ।
ಪಿತುರ್ಹಿ ವಚನಾದ್ವೀರ ಕೈಕೇಯ್ಯಾಹಂ ಪ್ರಚೋದಿತಃ ॥ ೪೩

ತದೇನಾಂ ವಿಸೃಜಾನಾರ್ಯಾಂ ಕ್ಷತ್ರಧರ್ಮಾಶ್ರಿತಾಂ ಮತಿಮ್ ।
ಧರ್ಮಮಾಶ್ರಯ ಮಾ ತ್ವೈಕ್ಷ್ಯಂ ಮದ್ಬುದ್ಧಿರನುಗಮ್ಯತಾಮ್ ॥ ೪೪

ತಮೇವಮುಕ್ತ್ವಾ ಸೌಹಾರ್ದಾದ್ಭ್ರಾತರಂ ಲಕ್ಷ್ಮಣಾಗ್ರಜಃ ।
ಉವಾಚ ಭೂಯಃ ಕೌಸಲ್ಯಾಂ ಪ್ರಾಂಜಲಿಃ ಶಿರಸಾ ನತಃ ॥ ೪೫

---

ದುರ್ಧರ್ಷವಾದ ತೇಜಸ್ಸುಗಳನ್ನೂ ಬಲ್ಲೆನು (೩೮-೩೯). ನನ್ನ ತಾಯಿಗೆ ಸತ್ಯ ಮತ್ತು ಇಂದ್ರಿಯನಿಗ್ರಹಗಳ ರಹಸ್ಯವು ಗೊತ್ತಿಲ್ಲವಾದ್ದರಿಂದ ಅವಳಿಗೆ ಬಹಳ ದುಃಖವಾಗಿದೆ. ಲೋಕದಲ್ಲಿ ಧರ್ಮವೇ ಶ್ರೇಷ್ಠವಾದದ್ದು. ಧರ್ಮದಲ್ಲಿಯೇ ಸತ್ಯವು ನೆಲೆಸಿದೆ. ಪಿತೃವಾಕ್ಯಪರಿಪಾಲನವು ಧರ್ಮವನ್ನಾಶ್ರಯಿಸಿದೆ (೪೦-೪೧). ಲಕ್ಷ್ಮಣ, ಧರ್ಮಶೀಲನಾದವನು ತಂದೆ, ತಾಯಿ ಮತ್ತು ಬ್ರಾಹ್ಮಣ - ಇವರಿಗೆ ಮಾತುಕೊಟ್ಟ ಮೇಲೆ ಎಂದಿಗೂ ತಪ್ಪಿ ನಡೆಯಬಾರದು. ಆದ್ದರಿಂದ ತಂದೆಯ ಆಜ್ಞೆಯನ್ನು ಮೀರಲು ನನಗೆ ಸಾಧ್ಯವಿಲ್ಲ. ತಂದೆಯ ಸೂಚನೆಯನ್ನನುಸರಿಸಿಯೇ ಕೈಕೇಯಿಯು ನನಗೆ ಈ ಆಜ್ಞೆಯನ್ನು ಮಾಡಿರುವಳು (೪೨-೪೩). ಆದ್ದರಿಂದ ಕೇವಲ ಕ್ಷತ್ರಿಯೋಚಿತವಾದ ಈ ಬುದ್ಧಿಯು ನಿನಗೆ ಯೋಗ್ಯವಲ್ಲ. ಅದನ್ನು ಬಿಡು. ಧರ್ಮದ ಕಡೆ ಗಮನವಿಡು. ಕ್ರೌರ್ಯವನ್ನು ತ್ಯಜಿಸು. ತಂದೆಯ ಮಾತಿನಂತೆ ನಡೆಯಬೇಕೆಂಬ ನನ್ನ ನಿಶ್ಚಯವನ್ನು ಅನುಸರಿಸು" ಎಂದನು (೪೪). ಹೀಗೆ ಶ್ರೀರಾಮನು ವಾತ್ಸಲ್ಯದಿಂದ ತಮ್ಮನಿಗೆ ಬುದ್ಧಿವಾದವನ್ನು ಹೇಳಿ ತಾಯಿಗೆ

ಅನುಮನ್ಯಸ್ವ ಮಾಂ ದೇವಿ ಗಮಿಷ್ಯಂತಮಿತೋ ವನಮ್ ।
ಶಾಪಿತಾಸಿ ಮಮ ಪ್ರಾಣೈಃ ಕುರು ಸ್ವಸ್ತ್ಯಯನಾನಿ ಮೇ ॥ ೪೬

ತೀರ್ಣಪ್ರತಿಜ್ಞಶ್ಚ ವನಾತ್ ಪುನರೇಷ್ಯಾಮ್ಯಹಂ ಪುರೀಮ್ ।
ಯಯಾತಿರಿವ ರಾಜರ್ಷಿಃ ಪುರಾ ಹಿತ್ವಾ ಪುನರ್ದಿವಮ್ ॥ ೪೭

ಶೋಕಃ ಸಂಧಾರ್ಯತಾಂ ಮಾತರ್ಹೃದಯೇ ಸಾಧು ಮಾ ಶುಚಃ ।
ವನವಾಸಾದಿಹೈಷ್ಯಾಮಿ ಪುನಃ ಕೃತ್ವಾ ಪಿತುರ್ವಚಃ ॥ ೪೮

ತ್ವಯಾ ಮಯಾ ಚ ವೈದೇಹ್ಯಾ ಲಕ್ಷ್ಮಣೇನ ಸುಮಿತ್ರಯಾ ।
ಪಿತುರ್ನಿಯೋಗೇ ಸ್ಥಾತವ್ಯಮೇಷ ಧರ್ಮಃ ಸನಾತನಃ ॥ ೪೯

ಅಂಬ ಸಂಹೃತ್ಯ ಸಂಭಾರಾನ್ ದುಃಖಂ ಹೃದಿ ನಿಗೃಹ್ಯ ಚ ।
ವನವಾಸಕೃತಾ ಬುದ್ಧಿರ್ಮಮ ಧರ್ಮ್ಯಾನುವರ್ತ್ಯತಾಮ್ ॥ ೫೦

ಏತದ್ವಚಸ್ತಸ್ಯ ನಿಶಮ್ಯ ಮಾತಾ
ಸುಧರ್ಮ್ಯಮವ್ಯಗ್ರಮವಿಕ್ಲಬಂ ಚ ।

---

ವಿನಯದಿಂದ ತಲೆಬಾಗಿ ಕೈಮುಗಿದು ಅರಿಕೆ ಮಾಡಿದನು : "ಅಮ್ಮ, ಅರಣ್ಯಕ್ಕೆ ಹೋಗಲು ನನಗೆ ಅನುಜ್ಞೆಯನ್ನು ಕೊಡು. ನನ್ನ ಪ್ರಾಣದ ಮೇಲೆ ಆಣೆಯಿಟ್ಟು ಬೇಡುತ್ತೇನೆ. ನನಗೆ ಆಶೀರ್ವಾದವನ್ನು ಮಾಡು (೪೫-೪೬). ನನ್ನ ಪ್ರತಿಜ್ಞೆಯನ್ನು ನಡೆಸಿ ಕಾಡಿನಿಂದ ಪುನಃ ಅಯೋಧ್ಯೆಗೆ ಬರುತ್ತೇನೆ. ಸ್ವರ್ಗಲೋಕವನ್ನು ತ್ಯಜಿಸಿ ಬಂದ ಯಯಾತಿಯು ಪುನಃ ಸ್ವರ್ಗವನ್ನು ಸೇರಿದಂತೆ, ನಾನು ಪುನಃ ಇಲ್ಲಿಗೆ ಬರುವೆನು. ಅಮ್ಮ, ಶೋಕವನ್ನು ಹೇಗಾದರೂ ಸಹಿಸಿಕೊ. ಮತ್ತೆ ಮತ್ತೆ ಮನಸ್ಸಿನಲ್ಲಿ ಕೊರಗಬೇಡ. ತಂದೆಯ ಅಪ್ಪಣೆಯನ್ನು ನೆರವೇರಿಸಿ ಪುನಃ ಇಲ್ಲಿಗೆ ಬರುತ್ತೇನೆ (೪೭-೪೮). ತಂದೆಯ ಆಜ್ಞೆಯನ್ನು ನಾವೆಲ್ಲರೂ ಪಾಲಿಸಬೇಕು. ನೀನು, ನಾನು, ಸೀತೆ, ಲಕ್ಷ್ಮಣ, ಸುಮಿತ್ರಾದೇವಿ - ನಮ್ಮೆಲ್ಲರಿಗೂ ಆತನ ಆಜ್ಞೆಯನ್ನು ಪಾಲಿಸುವುದೇ ಸನಾತನ ಧರ್ಮ. ಅಮ್ಮ, ಈ ಪೂಜಾಸಾಮಗ್ರಿಗಳನ್ನು ತೆಗೆದಿಡು. ವ್ಯಸನವನ್ನು ಮನಸ್ಸಿನಲ್ಲಿಯೇ ತಡೆದುಕೊ. ವನವಾಸಕ್ಕೆ ಹೋಗಬೇಕೆಂಬ ಧರ್ಮಯುಕ್ತವಾದ ನನ್ನ ನಿಶ್ಚಯವನ್ನು ಅನುಮೋದಿಸು" ಎಂದು ಪ್ರಾರ್ಥಿಸಿದನು (೪೯-೫೦). ಅದುವರೆಗೆ ಮೃತಳಂತೆ ನಿಶ್ಚೇಷ್ಟಿತಳಾಗಿದ್ದ

ಮೃತೇವ ಸಂಜ್ಞಾಂ ಪ್ರತಿಲಭ್ಯ ದೇವೀ
ಸಮೀಕ್ಷ್ಯ ರಾಮಂ ಪುನರಿತ್ಯುವಾಚ ॥ ೫೧
ಯಥೈವ ತೇ ಪುತ್ರ ಪಿತಾ ತಥಾಹಂ
ಗುರುಃ ಸ್ವಧರ್ಮೇಣ ಸುಹೃತ್ತಯಾ ಚ ।
ನ ತ್ವಾನುಜಾನಾಮಿ ನ ಮಾಂ ವಿಹಾಯ
ಸುದುಃಖಿತಾಮರ್ಹಸಿ ಗಂತುಮೇವಮ್ ॥ ೫೨
ಕಿಂ ಜೀವಿತೇನೇಹ ವಿನಾ ತ್ವಯಾ ಮೇ
ಲೋಕೇನ ವಾ ಕಿಂ ಸ್ವಧಯಾಮೃತೇನ ।
ಶ್ರೇಯೋ ಮುಹೂರ್ತಂ ತವ ಸನ್ನಿಧಾನಂ
ಮಮೇಹ ಕೃತ್ಸ್ನಾದಪಿ ಜೀವಲೋಕಾತ್ ॥ ೫೩
ನರೈರಿವೋಲ್ಕಾಭಿರಪೋಹ್ಯಮಾನೋ
ಮಹಾಗಜೋಽಧ್ವಾನಮನುಪ್ರವಿಷ್ಟಃ ।
ಭೂಯಃ ಪ್ರಜಜ್ವಾಲ ವಿಲಾಪಮೇನಂ
ನಿಶಮ್ಯ ರಾಮಃ ಕರುಣಂ ಜನನ್ಯಾಃ ॥ ೫೪

---

ಕೌಸಲ್ಯೆಯು ಶ್ರೀರಾಮನ ಧರ್ಮಯುಕ್ತವೂ ದೃಢನಿರ್ಧಾರವುಳ್ಳದ್ದೂ ಆದ ಧೀರವಾಕ್ಯವನ್ನು ಕೇಳಿ ಚೇತರಿಸಿಕೊಂಡು ರಾಮನನ್ನು ನೋಡುತ್ತ ಹೇಳಿದಳು (೫೧): "ವತ್ಸ, ನಾನು ತಾಯಿಯಾಗಿ ನಿನ್ನನ್ನು ಲಾಲಿಸಿ ಪಾಲಿಸಿದ್ದೇನೆ. ಈ ಮಾತೃಧರ್ಮದಿಂದಲೂ ವಾತ್ಸಲ್ಯದಿಂದಲೂ ನಿನ್ನ ತಂದೆಯಂತೆ ನಾನೂ ನಿನಗೆ ಪೂಜ್ಯಳು. ವನವಾಸಕ್ಕೆ ಹೋಗಲು ನಾನು ಸಮ್ಮತಿಸುವುದಿಲ್ಲ. ದುಃಖಿತಳಾದ ನನ್ನನ್ನು ಬಿಟ್ಟು ಹೀಗೆ ಹೊರಟುಹೋಗುವುದು ನಿನಗೆ ತರವಲ್ಲ (೫೨). ನೀನಿಲ್ಲದ ಮೇಲೆ ನನಗೆ ಈ ಪ್ರಾಣದಿಂದೇನು ? ಬಂಧುಗಳಿಂದೇನು? ಪಿತೃಲೋಕದಲ್ಲಿ ಸ್ವಧೆಯು ಸಿಕ್ಕಿದರೂ ದೇವಲೋಕದಲ್ಲಿ ಅಮೃತವೇ ಲಭಿಸಿದರೂ ನನಗೆ ಬೇಡ. ಈ ಸಮಸ್ತ ಜಗತ್ತನ್ನೂ ತೊರೆದು ಒಂದು ಕ್ಷಣಕಾಲ ನಿನ್ನ ಸಮೀಪದಲ್ಲಿರುವುದೇ ನನಗೆ ಉತ್ತಮ" ಎಂದಳು (೫೨). ಜನರು ಬೆಂಕಿಯ ಕೊಳ್ಳಿಗಳಿಂದ ಎಷ್ಟು ತೊಂದರೆಪಡಿಸಿದರೂ ಮದ್ದಾನೆಯು ತನ್ನ ದಾರಿಯನ್ನು ಹಿಡಿದು ಸಾಗುವಂತೆ,

ಸ ಮಾತರಂ ಚೈವ ವಿಸಂಜ್ಞಕಲ್ಪಾ-
ಮಾರ್ತಂ ಚ ಸೌಮಿತ್ರಿಮಭಿಪ್ರತಪ್ತಮ್ ।
ಧರ್ಮೇ ಸ್ಥಿತೋ ಧರ್ಮ್ಯಮುವಾಚ ವಾಕ್ಯಂ
ಯಥಾ ಸ ಏವಾರ್ಹತಿ ತತ್ರ ವಕ್ತುಮ್ ॥ ೫೫

ಅಹಂ ಹಿ ತೇ ಲಕ್ಷ್ಮಣ ನಿತ್ಯಮೇವ
ಜಾನಾಮಿ ಭಕ್ತಿಂ ಚ ಪರಾಕ್ರಮಂ ಚ ।
ಮಮ ತ್ವಭಿಪ್ರಾಯಮಸಂನಿರೀಕ್ಷ್ಯ
ಮಾತ್ರಾ ಸಹಾಭ್ಯರ್ದಸಿ ಮಾಂ ಸುದುಃಖಮ್ ॥ ೫೬

ಧರ್ಮಾರ್ಥಕಾಮಾಃ ಕಿಲ ಜೀವಲೋಕೇ
ಸಮೀಕ್ಷಿತಾ ಧರ್ಮಫಲೋದಯೇಷು ।
ಯೇ ತತ್ರ ಸರ್ವೇ ಸ್ಯುರಸಂಶಯಂ ಮೇ
ಭಾರ್ಯೇವ ವಶ್ಯಾಭಿಮತಾ ಸಪುತ್ರಾ ॥ ೫೭

---

ತಾಯಿಯು ಕರುಣಾಪೂರ್ಣವಾಗಿ ಗೋಳಾಡಿದರೂ ರಾಮನು ತನ್ನ ನಿಶ್ಚಿತಮಾರ್ಗದಿಂದ ಚಲಿಸಲಿಲ್ಲ. ತನ್ನ ನಿಲುವಿನಲ್ಲಿ ಇನ್ನೂ ಬಿಗಿಯಾದನು (೫೪). ಆ ಧರ್ಮನಿಷ್ಠನು ಎಚ್ಚರದಪ್ಪಿದಂತಿದ್ದ ತಾಯಿಗೂ ದುಃಖಾರ್ತನಾದ ಸೌಮಿತ್ರಿಗೂ ಧರ್ಮಸಂಹಿತವಾದ ಮಾತನ್ನು ಹೇಳಿದನು. ಹಾಗೆ ಮಾತನಾಡಲು ಶ್ರೀರಾಮನಿಗೆ ಮಾತ್ರವೇ ಸಾಧ್ಯ (೫೫). ಆತನು "ಲಕ್ಷ್ಮಣ, ನನ್ನ ವಿಷಯದಲ್ಲಿ ನಿನಗಿರುವ ಭಕ್ತಿಯೂ ನಿನ್ನ ಪರಾಕ್ರಮವೂ ನನಗೆ ಮೊದಲಿನಿಂದ ಗೊತ್ತಿದೆ. ನನ್ನ ಆಶಯವೇನೆಂಬುದನ್ನು ನೀನು ಸರಿಯಾಗಿ ಅರಿತುಕೊಳ್ಳಲಿಲ್ಲ. ನನ್ನ ತಾಯಿಯೊಡನೆ ಸೇರಿ ನೀನೂ ನನಗೆ ಬಹಳ ದುಃಖವನ್ನುಂಟುಮಾಡುತ್ತಿದ್ದೀಯೆ (೫೬). ಪುಣ್ಯ, ಅರ್ಥ, ಕಾಮ - ಈ ಮೂರು ಲೋಕದಲ್ಲಿ ಧರ್ಮದ ಫಲಗಳೆಂದು ಪ್ರಸಿದ್ಧವಾದ ವಿಷಯ. ಇದರಲ್ಲಿ ನನಗೆ ಸಂದೇಹವಿಲ್ಲ. ಅನುಕೂಲಳಾದ ಪತ್ನಿಯು ಧರ್ಮಾಚರಣೆಯಲ್ಲಿ ಸಹಾಯಕಳಾಗಿ ಧರ್ಮವನ್ನೂ ಪ್ರಿಯಳಾಗಿ ಕಾಮವನ್ನೂ ಪುತ್ರವತಿಯಾಗಿ ಪುತ್ರನ ಮೂಲಕ ಧನವನ್ನೂ ಸಂಪಾದಿಸಿಕೊಡುವಳು. ಹಾಗೆ

ಯಸ್ಮಿಂಸ್ತು ಸರ್ವೇ ಸ್ಯುರಸಂನಿವಿಷ್ಟಾ
ಧರ್ಮೋ ಯತಃ ಸ್ಯಾತ್ತದುಪಕ್ರಮೇತ ।
ದ್ವೇಷ್ಯೋ ಭವತ್ಯರ್ಥಪರೋ ಹಿ ಲೋಕೇ
ಕಾಮಾತ್ಮತಾ ಖಲ್ವಪಿ ನ ಪ್ರಶಸ್ತಾ ॥ ೫೮

ಗುರುಶ್ಚ ರಾಜಾ ಚ ಪಿತಾ ಚ ವೃದ್ಧಃ
ಕ್ರೋಧಾತ್ ಪ್ರಹರ್ಷಾದ್ಯದಿ ವಾಪಿ ಕಾಮಾತ್ ।
ಯದ್ಯಾದಿಶೇತ್ ಕಾರ್ಯಮವೇಕ್ಷ್ಯ ಧರ್ಮಂ
ಕಸ್ತಂ ನ ಕುರ್ಯಾದನೃಶಂಸವೃತ್ತಿಃ ॥ ೫೯

ಸ ವೈ ನ ಶಕ್ನೋಮಿ ಪಿತುಃ ಪ್ರತಿಜ್ಞಾ -
ಮಿಮಾಮಕರ್ತುಂ ಸಕಲಾಂ ಯಥಾವತ್ ।
ಸ ಹ್ಯಾವಯೋಸ್ತಾತ ಗುರುರ್ನಿಯೋಗೇ
ದೇವ್ಯಾಶ್ಚ ಭರ್ತಾ ಸ ಗತಿಃ ಸ ಧರ್ಮಃ ॥ ೬೦

---

ಧರ್ಮವೂ ತ್ರಿವರ್ಗವನ್ನು ಸಂಪಾದಿಸಿಕೊಡುತ್ತದೆ (೫೭). ನಮ್ಮ ಕಾರ್ಯವು ಧರ್ಮ, ಅರ್ಥ, ಕಾಮ - ಈ ಮೂರನ್ನೂ ದೊರಕಿಸಿದರೆ ಉತ್ತಮ, ಇಲ್ಲದಿದ್ದರೆ ಕೇವಲ ಧರ್ಮವನ್ನಾದರೂ ಸಂಪಾದಿಸುವ ಕಾರ್ಯವನ್ನು ಆಚರಿಸಬೇಕು. ಬರಿಯ ಅರ್ಥಾಭಿಲಾಷಿಯು ಲೋಕವಿರೋಧಿಯಾಗುವನು. ಕಾಮಪರಾಯಣನಾಗುವುದೂ ಯೋಗ್ಯವಲ್ಲ (೫೮). ನಮ್ಮ ತಂದೆ ನಮಗೆ ಗುರು; ರಾಜ; ವಯೋವೃದ್ಧ. ಆತನು ತನ್ನ ಪ್ರತಿಜ್ಞೆಯನ್ನು ಪಾಲಿಸುವುದು ಧರ್ಮವೆಂದೆಣಿಸಿ ನನಗೆ ಈ ರೀತಿಯಲ್ಲಿ ಆಜ್ಞೆ ಮಾಡಿದ್ದಾನೆ. ಈ ಆಜ್ಞೆಯನ್ನು ಕೋಪದಿಂದಲೊ ಸಂತೋಷದಿಂದಲೊ ಕಾಮದಿಂದಲೊ ಮಾಡಿರಬಹುದು. ಅಂಥ ಆಜ್ಞೆಯನ್ನು ಕೆಟ್ಟ ನಡತೆಯಿಲ್ಲದ ಯಾವ ಪುತ್ರನು ತಾನೆ ನಡೆಸದೆ ಇದ್ದಾನು ? (೫೯). ಆದ್ದರಿಂದ ತಂದೆಯ ಅಪ್ಪಣೆಯನ್ನು ಲೋಪವಿಲ್ಲದಂತೆ ಪೂರ್ಣವಾಗಿ ನಾನು ಪಾಲಿಸುತ್ತೇನೆ. ತಪ್ಪಿ ನಡೆಯಲು ನನಗೆ ಸಾಧ್ಯವಿಲ್ಲ. ವತ್ಸ, ಲಕ್ಷ್ಮಣ, ಮಹಾರಾಜನು ನಮ್ಮಿಬ್ಬರಿಗೂ ಆಜ್ಞೆ ಮಾಡಲು ಪ್ರಭುವಾಗಿದ್ದಾನೆ. ಅವನು ತನ್ನ ತಾಯಿಗೆ ಪತಿ. ನಮ್ಮೆಲ್ಲರಿಗೂ

ತಸ್ಮಿನ್ ಪುನರ್ಜೀವತಿ ಧರ್ಮರಾಜೇ
ವಿಶೇಷತಃ ಸ್ವೇ ಪಥಿ ವರ್ತಮಾನೇ ।
ದೇವೀ ಮಯಾ ಸಾರ್ಧಮಿತೋಽಪಗಚ್ಛೇತ್
ಕಥಂಸ್ವಿದನ್ಯಾ ವಿಧವೇವ ನಾರೀ ॥ ೬೧

ಸಾ ಮಾನುಮನ್ಯಸ್ವ ವನಂ ವ್ರಜಂತಂ
ಕುರುಷ್ವ ನಃ ಸ್ವಸ್ತ್ಯಯನಾನಿ ದೇವಿ ।
ಯಥಾ ಸಮಾಪ್ತೇ ಪುನರಾವ್ರಜೇಯಂ
ಯಥಾ ಹಿ ಸತ್ಯೇನ ಪುನರ್ಯಯಾತಿಃ ॥ ೬೨

ಯಶೋ ಹ್ಯಹಂ ಕೇವಲರಾಜ್ಯಕಾರಣಾತ್
ನ ಪೃಷ್ಠತಃ ಕರ್ತುಮಲಂ ಮಹೋದಯಮ್ ।
ಅದೀರ್ಘಕಾಲೇ ನ ತು ದೇವಿ ಜೀವಿತೇ
ವೃಣೇಽವರಾಮದ್ಯ ಮಹೀಮಧರ್ಮತಃ ॥ ೬೩

ಪ್ರಸಾದಯನ್ನರವೃಷಭಃ ಸ್ವಮಾತರಂ
ಪರಾಕ್ರಮಾಜ್ಜಿಗಮಿಷುರೇವ ದಂಡಕಾನ್ ।

---

ಆತನೇ ಗತಿ. ಆತನೇ ಧರ್ಮಸ್ವರೂಪನು (೬೦). ತನ್ನ ಕ್ಷತ್ರಿಯ ಧರ್ಮೋಚಿತವಾದ ಮಾರ್ಗದಲ್ಲಿ ಹೋಗುತ್ತ ಧರ್ಮರಾಜನಾಗಿರುವ ನಮ್ಮ ತಂದೆ ಬದುಕಿರುವಾಗ, ಅವನನ್ನು ಬಿಟ್ಟು ನನ್ನ ತಾಯಿ ನನ್ನೊಡನೆ ಕಾಡಿಗೆ ಬರಬಹುದೆ ? ಇನ್ನೊಬ್ಬ ವಿಧವೆಯಾದ ನಾರಿಯಂತೆ ವರ್ತಿಸಬಹುದೆ ? (೬೧). ಅಮ್ಮ, ನನಗೆ ಕಾಡಿಗೆ ಹೋಗಲು ಅನುಮತಿಯನ್ನು ಕೊಡು. ನಮಗೆ ಮಂಗಳಾಶೀರ್ವಾದಗಳನ್ನು ಮಾಡು. ಸ್ವರ್ಗವನ್ನು ಬಿಟ್ಟು ಬಂದ ಯಯಾತಿಯು ತನ್ನ ದೌಹಿತ್ರನ ಸತ್ಯವಾಕ್ಯದಿಂದ ಪುನಃ ಸ್ವರ್ಗಕ್ಕೆ ಹೋಗಲಿಲ್ಲವೇ? ಹಾಗೆ ನಿನ್ನ ಆಶೀರ್ವಾದ ಬಲದಿಂದ ಪುನಃ ನಾನು ಅಯೋಧ್ಯೆಗೆ ಬರುವಂತಾಗಲಿ (೬೨). ಕೇವಲ ಒಂದು ರಾಜ್ಯಕ್ಕಾಗಿ ಮಹಾಫಲವನ್ನು ಕೊಡುವ ಕೀರ್ತಿಯನ್ನು ನಾನು ಧಿಕ್ಕರಿಸಲಾರೆ. ಅಮ್ಮ, ಈ ಜೀವಿತವು ಕ್ಷಣಿಕವಾದದ್ದು. ತುಚ್ಛವಾದ ಈ ರಾಜ್ಯವನ್ನು ಅಧರ್ಮಮಾರ್ಗದಿಂದ ಸಂಪಾದಿಸಲು ನಾನು ಬಯಸುವುದಿಲ್ಲ" ಎಂದು ನುಡಿದನು (೬೩). ಹೀಗೆ ಆ ಪುರುಷಶ್ರೇಷ್ಠನು ದಂಡಕಾರಣ್ಯಕ್ಕೆ ಹೋಗಲೇಬೇಕೆಂದು

ಅಥಾನುಜಂ ಭೃಶಮನುಶಾಸ್ಯ ದರ್ಶನಂ
ಚಕಾರ ತಾಂ ಹೃದಿ ಜನನೀಂ ಪ್ರದಕ್ಷಿಣಮ್ ॥ ೬೪

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕವಿಂಶಃ ಸರ್ಗಃ

---

## ದ್ವಾವಿಂಶಃ ಸರ್ಗಃ

### ದೈವಪ್ರಾಬಲ್ಯಮ್

ಅಥ ತಂ ವ್ಯಥಯಾ ದೀನಂ ಸವಿಶೇಷಮಮರ್ಷಿತಮ್ ।
ಶ್ವಸಂತಮಿವ ನಾಗೇಂದ್ರಂ ರೋಷವಿಸ್ಫಾರಿತೇಕ್ಷಣಮ್ ॥ ೧

ಆಸಾದ್ಯ ರಾಮಃ ಸೌಮಿತ್ರಿಂ ಸುಹೃದಂ ಭ್ರಾತರಂ ಪ್ರಿಯಮ್ ।
ಉವಾಚೇದಂ ಸ ಧೈರ್ಯೇಣ ಧಾರಯನ್ ಸತ್ತ್ವಮಾತ್ಮವಾನ್ ॥ ೨

---

ಧೈರ್ಯದಿಂದ ನಿರ್ಧರಿಸಿದನು. ಅವನು ತನ್ನ ತಾಯಿಗೆ ಸಮಾಧಾನದ ಮಾತುಗಳನ್ನು ಹೇಳುತ್ತ ತಮ್ಮನಿಗೆ ಧರ್ಮರಹಸ್ಯವನ್ನು ಬೋಧಿಸಿ, ತನ್ನ ಜನನಿಗೆ ಪ್ರದಕ್ಷಿಣೆಯನ್ನು ಮಾಡಿ ಬೀಳ್ಕೊಡಬೇಕೆಂದು ಸಂಕಲ್ಪಿಸಿದನು (೬೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತೊಂದನೆಯ ಸರ್ಗ

---

## ಸರ್ಗ ೨೨

ಶ್ರೀರಾಮನು ಲಕ್ಷ್ಮಣನಿಗೆ ದೈವಪ್ರಾಬಲ್ಯವನ್ನು ನಿರೂಪಿಸುವುದು.

ಆ ಸಮಯದಲ್ಲಿ ಲಕ್ಷ್ಮಣನು ವ್ಯಥೆಯಿಂದ ಕಂಗೆಟ್ಟಿದ್ದನು. ಅವನ ತಾಳ್ಮೆಯನ್ನು ಮೀರಿ ಕೋಪವು ಉಕ್ಕಿಬರುತ್ತಿತ್ತು. ರೋಷದಿಂದ ಕಣ್ಣನ್ನರಳಿಸಿ ಸರ್ಪದಂತೆ ಬುಸುಗುಟ್ಟುತ್ತಿದ್ದನು (೧). ಆಗ ರಾಮನು ತನ್ನ ತಮ್ಮನೂ ಪ್ರಿಯಮಿತ್ರನೂ ಆದ ಲಕ್ಷ್ಮಣನ ಸ್ಥಿತಿಯನ್ನು ಕಂಡು, ಧೀರತನದಿಂದ ತನ್ನ ಮನಸ್ಸಿನ ತಳಮಳವನ್ನು ನಿಗ್ರಹಿಸಿ, ಅವನ ಹತ್ತಿರಕ್ಕೆ

ನಿಗೃಹ್ಯ ರೋಷಂ ಶೋಕಂ ಚ ಧೈರ್ಯಮಾಶ್ರಿತ್ಯ ಕೇವಲಮ್ ।
ಅವಮಾನಂ ನಿರಸ್ಯೇಮಂ ಗೃಹೀತ್ವಾ ಹರ್ಷಮುತ್ತಮಮ್ ॥ ೩

ಉಪಕ್ಲೃಪ್ತಂ ಹಿ ಯತ್ಕಿಂಚಿದಭಿಷೇಕಾರ್ಥಮದ್ಯ ಮೇ ।
ಸರ್ವಂ ವಿಸರ್ಜಯ ಕ್ಷಿಪ್ರಂ ಕುರು ಕಾರ್ಯಂ ನಿರತ್ಯಯಮ್ ॥ ೪

ಸೌಮಿತ್ರೇ ಯೋಽಭಿಷೇಕಾರ್ಥೇ ಮಮ ಸಂಭಾರಸಂಭ್ರಮಃ ।
ಅಭಿಷೇಕನಿವೃತ್ತ್ಯರ್ಥೇ ಸೋಽಸ್ತು ಸಂಭಾರಸಂಭ್ರಮಃ ॥ ೫

ಯಸ್ಯಾ ಮದಭಿಷೇಕಾರ್ಥೇ ಮಾನಸಂ ಪರಿತಪ್ಯತೇ ।
ಮಾತಾ ಸಾ ಮೇ ಯಥಾ ನ ಸ್ಯಾತ್ ಸವಿಶಂಕಾ ತಥಾ ಕುರು ॥ ೬

ತಸ್ಯಾಃ ಶಂಕಾಮಯಂ ದುಃಖಂ ಮುಹೂರ್ತಮಪಿ ನೋತ್ಸಹೇ ।
ಮನಸಿ ಪ್ರತಿಸಂಜಾತಂ ಸೌಮಿತ್ರೇಽಹಮುಪೇಕ್ಷಿತುಮ್ ॥ ೭

ನ ಬುದ್ಧಿಪೂರ್ವಂ ನಾಬುದ್ಧಂ ಸ್ಮರಾಮೀಹ ಕದಾಚನ ।
ಮಾತ್ರಾಣಾಂ ವಾ ಪಿತುರ್ವಾಹಂ ಕೃತಮಲ್ಪಂ ಚ ವಿಪ್ರಿಯಮ್ ॥ ೮

---

ಹೋಗಿ ಈ ರೀತಿ ಹೇಳಿದನು (೨) : "ಲಕ್ಷ್ಮಣ, ನಿನ್ನ ಕೋಪವನ್ನೂ ಶೋಕವನ್ನೂ ತಡೆದುಕೊ. ಧೈರ್ಯವನ್ನವಲಂಬಿಸು. ನಮಗೆ ಅವಮಾನವಾಯಿತೆಂದು ತಿಳಿಯಬೇಡ. ಸಂತೋಷದಲ್ಲಿರು (೩). ನನ್ನ ಅಭಿಷೇಕಕ್ಕೋಸ್ಕರ ನಡೆದಿರುವ ಎಲ್ಲಾ ಸನ್ನಾಹವನ್ನೂ ಕೂಡಲೆ ನಿಲ್ಲಿಸಬೇಕೆಂದು ತಿಳಿಸು. ಯಾವ ಆತಂಕವೂ ಇಲ್ಲದೆ ಈ ಕೆಲಸವನ್ನು ಮಾಡು. ಲಕ್ಷ್ಮಣ, ನನ್ನ ಪಟ್ಟಾಭಿಷೇಕಕ್ಕಾಗಿ ಸಿದ್ಧತೆಯು ಎಷ್ಟು ಸಂಭ್ರಮದಿಂದ ನಡೆಯಿತೊ, ಆ ಪಟ್ಟಾಭಿಷೇಕವನ್ನು ನಿಲ್ಲಿಸುವ ಏರ್ಪಾಡೂ ಅಷ್ಟೇ ಸಂಭ್ರಮದಿಂದ ನಡೆಯಲಿ! (೪-೫). ನನಗೆ ಪಟ್ಟಾಭಿಷೇಕವಾಗಿಬಿಟ್ಟೇತೆಂದು ಮನಸ್ಸಿನಲ್ಲಿ ಕೊರಗುತ್ತಿರುವ ನನ್ನ ತಾಯಿ ಕೈಕೇಯಿಗೆ ಸ್ವಲ್ಪವೂ ಶಂಕೆಗೆ ಅವಕಾಶವಿಲ್ಲದಂತೆ ಮುಂದಿನ ಕಾರ್ಯವನ್ನು ಮಾಡು (೬). ಲಕ್ಷ್ಮಣ, ಕೈಕೇಯಿಯು ಸಂದೇಹದಿಂದ ಕೊರಗುವುದನ್ನು ಒಂದು ಕ್ಷಣವೂ ನಾನು ಸಹಿಸಿಕೊಳ್ಳಲಾರೆ. ಅವಳ ಮನಸ್ಸಿನಲ್ಲಾಗುವ ದುಃಖವನ್ನು ಉಪೇಕ್ಷಿಸಲಾರೆ .(೭). ತಾಯಂದಿರಿಗಾಗಲಿ ತಂದೆಗಾಗಲಿ ನಾನು ಅಪ್ರಿಯವಾಗಿ ನಡೆದುಕೊಂಡ ಒಂದು ಚಿಕ್ಕ ಸಂದರ್ಭವೂ ಇರಲಾರದು. ಬುದ್ಧಿಪೂರ್ವಕವಾಗಾಗಲಿ ಪ್ರಮಾದದಿಂದಾಗಲಿ

ಸತ್ಯಃ ಸತ್ಯಾಭಿಸಂಧಶ್ಚ ನಿತ್ಯಂ ಸತ್ಯಪರಾಕ್ರಮಃ ।
ಪರಲೋಕಭಯಾದ್ಭೀತೋ ನಿರ್ಭಯೋಽಸ್ತು ಪಿತಾ ಮಮ ॥ ೯

ತಸ್ಯಾಪಿ ಹಿ ಭವೇದಸ್ಮಿನ್ ಕರ್ಮಣ್ಯಪ್ರತಿಸಂಹೃತೇ ।
ಸತ್ಯಂ ನೇತಿ ಮನಸ್ತಾಪಸ್ತಸ್ಯ ತಾಪಸ್ತಪೇಚ್ಚ ಮಾಮ್ ॥ ೧೦

ಅಭಿಷೇಕವಿಧಾನಂ ತು ತಸ್ಮಾತ್ ಸಂಹೃತ್ಯ ಲಕ್ಷ್ಮಣ ।
ಅನ್ವಗೇವಾಹಮಿಚ್ಛಾಮಿ ವನಂ ಗಂತುಮಿತಃ ಪುನಃ ॥ ೧೧

ಮಮ ಪ್ರವ್ರಾಜನಾದದ್ಯ ಕೃತಕೃತ್ಯಾ ನೃಪಾತ್ಮಜಾ ।
ಸುತಂ ಭರತಮವ್ಯಗ್ರಮಭಿಷೇಚಯತಾಂ ತತಃ ॥ ೧೨

ಮಯಿ ಚೀರಾಜಿನಧರೇ ಜಟಾಮಂಡಲಧಾರಿಣಿ ।
ಗತೇಽರಣ್ಯಂ ಚ ಕೈಕೇಯ್ಯಾ ಭವಿಷ್ಯತಿ ಮನಃಸುಖಮ್ ॥ ೧೩

ಬುದ್ಧಿಃ ಪ್ರಣೀತಾ ಯೇನೇಯಂ ಮನಶ್ಚ ಸುಸಮಾಹಿತಮ್ ।
ತಂ ತು ನಾರ್ಹಾಮಿ ಸಂಕ್ಲೇಷ್ಟುಂ ಪ್ರವ್ರಜಿಷ್ಯಾಮಿ ಮಾ ಚಿರಮ್ ॥

---

ಹಾಗೆ ನಡೆದುಕೊಂಡುದು ನನಗೆ ನೆನಪಿಲ್ಲ (೮). ನಮ್ಮ ತಂದೆ ಯಾವಾಗಲೂ ಸತ್ಯವನ್ನೇ ನುಡಿದಿದ್ದಾನೆ. ಕೊಟ್ಟ ಮಾತಿನಂತೆ ನಡೆದು ಸತ್ಯವನ್ನು ಪಾಲಿಸಿದ್ದಾನೆ. ಸತ್ಯಮಾರ್ಗದಲ್ಲಿ ತನ್ನ ಪರಾಕ್ರಮವನ್ನು ತೋರಿಸಿದ್ದಾನೆ. ಈಗ ಸತ್ಯಭಂಗ ವಾದೀತೆಂದು ಪರಲೋಕಕ್ಕೆ ಅಂಜುವುದೇಕೆ ? ನನ್ನ ತಂದೆ ನಿರ್ಭೀತನಾಗಿರಲಿ (೯). ಈ ಪಟ್ಟಾಭಿಷೇಕ ಪ್ರಯತ್ನವು ನಿಲ್ಲದಿದ್ದರೆ, ಸತ್ಯಕ್ಕೆ ತಪ್ಪಿದೆನೆಂದು ಆತನ ಮನಸ್ಸಿಗೆ ಸಂಕಟವಾಗಬಹುದು. ಅದು ನನ್ನನ್ನು ಕೊರೆಯುವುದು. ಆದ್ದರಿಂದ, ಲಕ್ಷ್ಮಣ, ಈ ಪಟ್ಟಾಭಿಷೇಕದ ಏರ್ಪಾಡನ್ನು ನಿಲ್ಲಿಸಿ, ನಾನು ಈ ಕ್ಷಣವೇ ಅರಣ್ಯಕ್ಕೆ ಹೋಗಲು ಅಪೇಕ್ಷಿಸುತ್ತೇನೆ (೧೦-೧೧). ಈ ದಿನ ನಾನು ಹೊರಟುಹೋದರೆ ರಾಜಕುಮಾರಿಯಾದ ಕೈಕೇಯಿಯು ತನ್ನ ಉದ್ದೇಶ ಸಾಧಿಸಿತೆಂದು ಮಗನಾದ ಭರತನಿಗೆ ನಿರಾತಂಕವಾಗಿ ಪಟ್ಟಾಭಿಷೇಕ ಮಾಡಬಹುದು (೧೨). ನಾರುಬಟ್ಟೆ ಕೃಷ್ಣಾಜಿನಗಳನ್ನು ಧರಿಸಿ ಜಟೆಯನ್ನು ಬಿಡಿಸಿ, ನಾನು ಅರಣ್ಯಕ್ಕೆ ಹೋದರೆ ಕೈಕೇಯಿಯ ಮನಸ್ಸಿಗೆ ಶಾಂತಿಯಾಗುವುದು (೧೩). ವನವಾಸಕ್ಕೆ ಹೋಗಬೇಕೆಂಬ ಬುದ್ಧಿ ನನಗೆ ದೃಢವಾಗಿದೆ. ಮನಸ್ಸು ಶಾಂತವಾಗಿದೆ. ಇದಕ್ಕೆ ಪ್ರೇರಕನಾದ

ಕೃತಾಂತಸ್ತ್ವೇವ ಸೌಮಿತ್ರೇ ದ್ರಷ್ಟವ್ಯೋ ಮತ್ಪ್ರವಾಸನೇ ।
ರಾಜ್ಯಸ್ಯ ಚ ವಿತೀರ್ಣಸ್ಯ ಪುನರೇವ ನಿವರ್ತನೇ ॥ ೧೫

ಕೈಕೇಯ್ಯಾಃ ಪ್ರತಿಪತ್ತಿರ್ಹಿ ಕಥಂ ಸ್ಯಾನ್ಮಮ ಪೀಡನೇ ।
ಯದಿ ಭಾವೋ ನ ದೈವೋಽಯಂ ಕೃತಾಂತವಿಹಿತೋ ಭವೇತ್ ॥ ೧೬

ಜಾನಾಸಿ ಹಿ ಯಥಾ ಸೌಮ್ಯ ನ ಮಾತೃಷು ಮಮಾಂತರಮ್ ।
ಭೂತಪೂರ್ವೋ ವಿಶೇಷೋ ವಾ ತಸ್ಯಾ ಮಯಿ ಸುತೇಽಪಿ ವಾ ॥ ೧೭

ಸೋಽಭಿಷೇಕನಿವೃತ್ತ್ಯರ್ಥೈಃ ಪ್ರವಾಸಾರ್ಥೈಶ್ಚ ದುರ್ವಚೈಃ ।
ಉಗ್ರೈರ್ವಾಕ್ಯೈರಹಂ ತಸ್ಯಾ ನಾನ್ಯದ್ದೈವಾತ್ ಸಮರ್ಥಯೇ ॥ ೧೮

ಕಥಂ ಪ್ರಕೃತಿಸಂಪನ್ನಾ ರಾಜಪುತ್ರೀ ತಥಾಗುಣಾ ।
ಬ್ರೂಯಾತ್ ಸಾ ಪ್ರಾಕೃತೇವ ಸ್ತ್ರೀ ಮತ್ಪೀಡಾಂ ಭರ್ತೃಸಂನಿಧೌ ॥ ೧೯

---

ಅಂತರಾತ್ಮನಿಗೆ, ಅನಂತರ ಪಶ್ಚಾತ್ತಾಪಗೊಂಡು ಕ್ಲೇಶಪಡಿಸಲು ನನಗೆ ಇಷ್ಟವಿಲ್ಲ. ತಡಮಾಡದೆ ನಾನು ಹೊರಟುಹೋಗುವೆನು. (೧೪). ಲಕ್ಷ್ಮಣ, ನನ್ನನ್ನು ವನವಾಸಕ್ಕೆ ಕಳಿಸಲು ವಿಧಿಯೇ ಸಂಕಲ್ಪಿಸಿದೆಯೆಂದು ತಿಳಿ. ಕೈಗೆ ಬಂದ ರಾಜ್ಯವನ್ನು ಪುನಃ [illegible]ರಣ. ವಿಧಿಯ ಪ್ರೇರಣೆಯಿಂದ ಕೈಕೇಯಿಗೆ ಧೈರ್ಯವಾಗಿ ಇಂಥ ಭಾವನೆ ಬಂದಿತು. ಇಲ್ಲದಿದ್ದರೆ ನನಗೆ ತೊಂದರೆ ಕೊಡಲು ಅವಳಿಗೆ ಬುದ್ಧಿಯೇಕೆ ಬರುತ್ತಿತ್ತು ? (೧೫-೧೬). ತಾಯಂದಿರಲ್ಲಿ ಇವಳು ಹೆತ್ತತಾಯಿಯೆಂದೂ ಇವಳು ಮಲತಾಯಿಯೆಂದೂ ನಾನು ಯಾವ ಭೇದಭಾವನೆಯನ್ನೂ ಇಟ್ಟವನಲ್ಲ. ಕೈಕೇಯಿಯೂ ನನ್ನನ್ನಾಗಲಿ ಭರತ ನನ್ನಾಗಲಿ ಯಾವ ವಿಶೇಷವೂ ಇಲ್ಲದೆ ಒಂದೇ ರೀತಿಯಲ್ಲಿ ಕಾಣುತ್ತಿದ್ದಳು. ಇದು ನಿನಗೆ ಗೊತ್ತಿದೆ (೧೭). ಅಂಥವಳು ಈಗ ನನ್ನ ಪಟ್ಟಾಭಿಷೇಕವನ್ನು ನಿಲ್ಲಿಸಬೇಕೆಂದೂ ನಾನು ಕಾಡಿಗೆ ಹೋಗಬೇಕೆಂದೂ ಆಡಬಾರದ ಉಗ್ರವಾದ ಮಾತುಗಳನ್ನಾಡುವುದಕ್ಕೆ ದೈವವೇ ಕಾರಣವಲ್ಲದೆ ಇನ್ನೊಂದು ಕಾರಣವನ್ನು ನಾನು ಸಮರ್ಥಿಸಲಾರೆ (೧೮). ಇಲ್ಲದಿದ್ದರೆ ಸಾಧುಸ್ವಭಾವದವಳಾಗಿ ನನ್ನಲ್ಲಿ ಅಂಥ ವಾತ್ಸಲ್ಯವನ್ನಿಟ್ಟಿದ್ದ ಆ ರಾಜಪುತ್ರಿಯು, ನನಗೆ ಆ ವಿಧವಾದ ಕ್ರೂರವಾಕ್ಯವನ್ನು ಹೇಳುತ್ತಿದ್ದಳೆ? ಸಂಸ್ಕೃತಿಯಿಲ್ಲದ ಸಾಮಾನ್ಯ ಹೆಂಗಸಿನಂತೆ

ಯದಚಿಂತ್ಯಂ ತು ತದ್ದೈವಂ ಭೂತೇಷ್ವಪಿ ನ ಹನ್ಯತೇ ।
ವ್ಯಕ್ತಂ ಮಯಿ ಚ ತಸ್ಯಾಂ ಚ ಪತಿತೋ ಹಿ ವಿಪರ್ಯಯಃ ॥ ೨೦

ಕಶ್ಚ ದೈವೇನ ಸೌಮಿತ್ರೇ ಯೋದ್ಧುಮುತ್ಸಹತೇ ಪುಮಾನ್ ।
ಯಸ್ಯ ನ ಗ್ರಹಣಂ ಕಿಂಚಿತ್ ಕರ್ಮಣೋಽನ್ಯನ್ನ ದೃಶ್ಯತೇ ॥ ೨೧

ಸುಖದುಃಖೇ ಭಯಕ್ರೋಧೌ ಲಾಭಾಲಾಭೌ ಭವಾಭವೌ ।
ಯಚ್ಚ ಕಿಂಚಿತ್ ತಥಾಭೂತಂ ನನು ದೈವಸ್ಯ ಕರ್ಮ ತತ್ ॥ ೨೨

ಋಷಯೋಽಪ್ಯುಗ್ರತಪಸೋ ದೈವೇನಾಭಿಪ್ರಪೀಡಿತಾಃ ।
ಉತ್ಸೃಜ್ಯ ನಿಯಮಾಂಸ್ತೀವ್ರಾನ್ ಭ್ರಶ್ಯಂತೇ ಕಾಮಮನ್ಯುಭಿಃ ॥

ಅಸಂಕಲ್ಪಿತಮೇವೇಹ ಯದಕಸ್ಮಾತ್ ಪ್ರವರ್ತತೇ ।
ನಿವರ್ತ್ಯಾರಂಭಮಾರಬ್ಧಂ ನನು ದೈವಸ್ಯ ಕರ್ಮ ತತ್ ॥ ೨೪

ಏತಯಾ ತತ್ತ್ವಯಾ ಬುದ್ಧ್ಯಾ ಸಂಸ್ತಭ್ಯಾತ್ಮಾನಮಾತ್ಮನಾ ।
ವ್ಯಾಹತೇಽಪ್ಯಭಿಷೇಕೇ ಮೇ ಪರಿತಾಪೋ ನ ವಿದ್ಯತೇ ॥ ೨೫

---

ತನ್ನ ಪತಿಯ ಎದುರಿಗೆ ಹಾಗೆ ಮಾತನಾಡುತ್ತಿದ್ದಳೆ ? (೧೯). ದೈವದ ಪ್ರಭಾವ ಅಚಿಂತ್ಯವಾದದ್ದು. ಸಮಸ್ತ ಜಂತುಗಳಲ್ಲಿಯೂ ಅದರ ಗತಿಗೆ ತಡೆಯಿಲ್ಲ. ಆ ದೈವವು ನನ್ನಲ್ಲಿಯೂ ಅವಳಲ್ಲಿಯೂ ವಿಪರೀತವಾಗಿ ಬೊಂದು ಎರಗಿತೆಂಬುದು ಸ್ಪಷ್ಟ (೨೦). ಲಕ್ಷ್ಮಣ ಅದೃಷ್ಟದೊಡನೆ ಯಾವ ಪುರುಷನು ಹೋರಾಡಿಯಾನು? ಫಲದಿಂದ ಮಾತ್ರ ಅದನ್ನು ಊಹಿಸಿ ನಿಶ್ಚಯಿಸಬಹುದೇ ಹೊರತು ಅದೃಷ್ಟವು ನಮಗೆ ಗೋಚರಿಸುವುದಿಲ್ಲ. ಸುಖ ದುಃಖ, ಭಯ ಕ್ರೋಧ, ಲಾಭ ನಷ್ಟ, ಜನನ ಮರಣ - ಹೀಗೆ ಯಾವುದರ ಕಾರಣ ತಿಳಿಯದೊ ಅದೆಲ್ಲವೂ ಅದೃಷ್ಟದ ಆಟ (೨೧-೨೨). ಉಗ್ರವಾದ ತಪಸ್ಸನ್ನಾಚರಿಸುವ ಋಷಿಗಳೂ ಸಹ ದೈವಕ್ಕೆ ಅಧೀನರಾಗಿ ಕಠೋರ ನಿಯಮಗಳನ್ನು ಬಿಡಿಗೊತ್ತಿ ಕಾಮಕ್ರೋಧಗಳಿಗೆ ವಶರಾಗುತ್ತಾರೆ. ಲೋಕದಲ್ಲಿ ಆರಂಭಿಸಿದ ಕಾರ್ಯವು ಥಟ್ಟನೆ ನಿಂತುಹೋಗಿ ಊಹಾತೀತವಾದ ಇನ್ನೊಂದು ಘಟನೆಯು ಸಂಭವಿಸಿದರೆ, ಅದು ದೈವದ ಕೆಲಸವಲ್ಲದೆ ಇನ್ನೇನು ? (೨೩-೨೪). ಈ ಪರಮಾರ್ಥ ತತ್ತ್ವವನ್ನರಿತು ನನ್ನನ್ನು ನಾನೇ ಸಮಾಧಾನಪಡಿಸಿಕೊಂಡಿದ್ದೇನೆ. ಆದ್ದರಿಂದ ಪಟ್ಟಾಭಿಷೇಕವು ತಪ್ಪಿ

ತಸ್ಮಾದಪರಿತಾಪಃ ಸಂಸ್ತ್ವಮಪ್ಯನುವಿಧಾಯ ಮಾಮ್ ।
ಪ್ರತಿಸಂಹಾರಯ ಕ್ಷಿಪ್ರಮಾಭಿಷೇಚನಿಕೀಂ ಕ್ರಿಯಾಮ್ ॥ ೨೬
ಏಭಿರೇವ ಘಟೈಃ ಸರ್ವೈರಭಿಷೇಚನಸಂಭೃತೈಃ ।
ಮಮ ಲಕ್ಷ್ಮಣ ತಾಪಸ್ಯೇ ವ್ರತಸ್ನಾನಂ ಭವಿಷ್ಯತಿ ॥ ೨೭
ಅಥವಾ ಕಿಂ ಮಮೈತೇನ ರಾಜ್ಯದ್ರವ್ಯಮಯೇನ ತು ।
ಉದ್ಧೃತಂ ಮೇ ಸ್ವಯಂ ತೋಯಂ ವ್ರತಾದೇಶಂ ಕರಿಷ್ಯತಿ ॥ ೨೮
ಮಾ ಚ ಲಕ್ಷ್ಮಣ ಸಂತಾಪಂ ಕಾರ್ಷೀರ್ಲಕ್ಷ್ಮ್ಯಾ ವಿಪರ್ಯಯೇ ।
ರಾಜ್ಯಂ ವಾ ವನವಾಸೋ ವಾ ವನವಾಸೋ ಮಹೋದಯಃ ॥ ೨೯
ನ ಲಕ್ಷ್ಮಣಾಸ್ಮಿನ್ ಖಲು ಕರ್ಮವಿಘ್ನೇ
ಮಾತಾ ಯವೀಯಸ್ಯತಿಶಂಕನೀಯಾ ।
ದೈವಾಭಿಪನ್ನಾ ಹಿ ವದತ್ಯನಿಷ್ಟಂ
ಜಾನಾಸಿ ದೈವಂ ಚ ತಥಾಪ್ರಭಾವಮ್ ॥ ೩೦

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾವಿಂಶಃ ಸರ್ಗಃ

---

ಹೋದರೂ ನನಗೆ ಖೇದವಿಲ್ಲ. ನೀನು ಸಹ ನನ್ನಂತೆ ವಿಷಾದವನ್ನು ಬಿಟ್ಟು ಅಭಿಷೇಕದ ಏರ್ಪಾಡನ್ನು ಕೂಡಲೆ ನಿಲ್ಲಿಸಿಬಿಡು (೨೫-೨೬). ಲಕ್ಷ್ಮಣ, ಪಟ್ಟಾಭಿಷೇಕಕ್ಕಾಗಿ ಸಿದ್ಧಪಡಿಸಿದ ಈ ಸಮಸ್ತ ಜಲಕುಂಭಗಳಿಂದಲೇ ತಾಪಸಯೋಗ್ಯವಾದ ವ್ರತವನ್ನಾಚರಿಸಲು ನನಗೆ ಮಂಗಳಸ್ನಾನವಾಗಲಿ! ಅಥವಾ ರಾಜ್ಯಾಭಿಷೇಕಕ್ಕಾಗಿ ತಂದ ಈ ವಸ್ತುಗಳು ನನಗೇಕೆ? ನಾನೇ ಕೈಯಿಂದ ಹೊತ್ತು ತಂದ ತೀರ್ಥಜಲವು ಮುಂದೆ ನನಗೆ ವ್ರತಸ್ನಾನವನ್ನು ಮಾಡಿಸುವುದು (೨೭-೨೮). ಲಕ್ಷ್ಮಣ, ರಾಜ್ಯಲಕ್ಷ್ಮಿಯು ಒಲಿಯಲಿಲ್ಲವೆಂದು ವಿಷಾದಿಸಬೇಡ. ರಾಜ್ಯವಾದರೇನು? ವನವಾಸವಾದರೇನು ? ಒಂದು ರೀತಿಯಲ್ಲಿ ವನವಾಸದಲ್ಲಿಯೇ ಹೆಚ್ಚು ಫಲವುಂಟು (೨೯). ಲಕ್ಷ್ಮಣ, ಪಟ್ಟಾಭಿಷೇಕಕ್ಕೆ ವಿಘ್ನವನ್ನೊಡ್ಡಿದಳೆಂದು ನನ್ನ ಚಿಕ್ಕಮ್ಮನನ್ನು ನಿಂದಿಸಬಾರದು. ದೈವಪ್ರೇರಣೆಗೆ ಸಿಕ್ಕಿ ಅವಳು ಕ್ರೂರವಾದ ಮಾತನ್ನಾಡುತ್ತಿದ್ದಾಳೆ. ದೈವವು ಅಂಥ ಪ್ರಭಾವಶಾಲಿಯೆಂಬುದು ನಿನಗೆ ತಿಳಿದಿರಬೇಕು" ಎಂದು ಹೇಳಿದನು (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತೆರಡನೆಯ ಸರ್ಗ

## ತ್ರಯೋವಿಂಶಃ ಸರ್ಗಃ

### ಲಕ್ಷ್ಮಣಕ್ರೋಧಃ

ಇತಿ ಬ್ರುವತಿ ರಾಮೇ ತು ಲಕ್ಷ್ಮಣೋಽಧಃಶಿರಾ ಮುಹುಃ ।
ಶ್ರುತ್ವಾ ಮಧ್ಯಂ ಜಗಾಮೇವ ಮನಸಾ ದುಃಖಹರ್ಷಯೋಃ ॥ ೧
ತದಾ ತು ಬದ್ಧ್ವಾ ಭ್ರುಕುಟೀಂ ಭ್ರುವೋರ್ಮಧ್ಯೇ ನರರ್ಷಭಃ ।
ನಿಶಶ್ವಾಸ ಮಹಾಸರ್ಪೋ ಬಿಲಸ್ಥ ಇವ ರೋಷಿತಃ ॥ ೨
ತಸ್ಯ ದುಷ್ಪ್ರತಿವೀಕ್ಷ್ಯಂ ತದ್ಭ್ರುಕುಟೀಸಹಿತಂ ತದಾ ।
ಬಭೌ ಕ್ರುದ್ಧಸ್ಯ ಸಿಂಹಸ್ಯ ಮುಖಸ್ಯ ಸದೃಶಂ ಮುಖಮ್ ॥ ೩
ಅಗ್ರಹಸ್ತಂ ವಿಧುನ್ವಂಸ್ತು ಹಸ್ತಿಹಸ್ತಮಿವಾತ್ಮನಃ ।
ತಿರ್ಯಗೂರ್ಧ್ವಂ ಶರೀರೇ ಚ ಪಾತಯಿತ್ವಾ ಶಿರೋಧರಾಮ್ ॥ ೪
ಅಗ್ರಾಕ್ಷ್ಣಾ ವೀಕ್ಷಮಾಣಸ್ತು ತಿರ್ಯಗ್ಭ್ರಾತರಮಬ್ರವೀತ್ ।
ಅಸ್ಥಾನೇ ಸಂಭ್ರಮೋ ಯಸ್ಯ ಜಾತೋ ವೈ ಸುಮಹಾನಯಮ್ ॥ ೫

## ಸರ್ಗ ೨೩

ಲಕ್ಷ್ಮಣನು ಕ್ರುದ್ಧನಾಗಿ ದೈವಬಲಕ್ಕಿಂತ ಪೌರುಷವೇ ಪ್ರಬಲವೆಂದು ವಾದಿಸುವುದು.

ಹೀಗೆ ಶ್ರೀರಾಮನು ಸಮಾಧಾನವನ್ನು ಹೇಳುತ್ತಿರುವಾಗ ಲಕ್ಷ್ಮಣನು ಸುಮ್ಮನೆ ತಲೆಯನ್ನು ತಗ್ಗಿಸಿಕೊಂಡು ಕೇಳುತ್ತಿದ್ದನು. ರಾಮನ ವನವಾಸವನ್ನು ನೆನೆದು ದುಃಖ, ಧರ್ಮದಲ್ಲಿ ಅವನಿಗಿದ್ದ ಸ್ಥಿರಬುದ್ಧಿಯನ್ನು ನೋಡಿ ಹರ್ಷ-ಇವೆರಡರ ಮಧ್ಯದಲ್ಲಿ ಲಕ್ಷ್ಮಣನ ಮನಸ್ಸು ತೂಗುವಂತಾಗಿತ್ತು (೧). ಅನಂತರ ಆ ವೀರನ ಹುಬ್ಬುಗಳು ಗಂಟಿಕ್ಕಿದವು. ಬಿಲದಲ್ಲಿದ್ದ ಮಹಾಸರ್ಪವನ್ನು ಕೆಣಕಿದಂತಾಗಿ ಲಕ್ಷ್ಮಣನು ರೋಷದಿಂದ ಬುಸುಗುಟ್ಟಿದನು. ಹುಬ್ಬುಗಂಟಿಕ್ಕಿದ ಆತನ ಮುಖವು ಕೆರಳಿದ ಸಿಂಹದ ಮುಖದಂತೆ ನೋಡಲು ಭಯಂಕರವಾಯಿತು (೨-೩). ಆನೆಯ ಸೊಂಡಿಲಿನಂತೆ ತನ್ನ ಹಸ್ತಾಗ್ರವನ್ನು ಕೊಡಹುತ್ತ, ಕೊರಳನ್ನು ಅಡ್ಡಲಾಗಿ ಮೇಲೆ ಕೆಳಗೆ ತಿರುಗಿಸುತ್ತ, ಓರೆಗಣ್ಣಿನಿಂದ ನೋಡುತ್ತ ಅಣ್ಣನನ್ನು ಕುರಿತು ಹೀಗೆಂದನು (೪) : "ಅಣ್ಣ, ಧರ್ಮಕ್ಕೆ ಲೋಪ ಬರುವುದೆಂದೂ ಜನರಿಂದ ಅಪವಾದ ಬರುವುದೆಂದೂ

ಧರ್ಮದೋಷಪ್ರಸಂಗೇನ ಲೋಕಸ್ಯಾನತಿಶಂಕಯಾ ।
ಕಥಂ ಹ್ಯೇತದಸಂಭ್ರಾಂತಸ್ತ್ವದ್ವಿಧೋ ವಕ್ತುಮರ್ಹತಿ ॥ ೬

ಯಥಾ ದೈವಮಶೌಂಡೀರಂ ಶೌಂಡೀರ ಕ್ಷತ್ರಿಯರ್ಷಭ ।
ಕಿಂ ನಾಮ ಕೃಪಣಂ ದೈವಮಶಕ್ತಮಭಿಶಂಸಸಿ ॥ ೭

ಪಾಪಯೋಸ್ತೇ ಕಥಂ ನಾಮ ತಯೋಃ ಶಂಕಾ ನ ವಿದ್ಯತೇ ।
ಸಂತಿ ಧರ್ಮೋಪದಾಃ ಶ್ಲಕ್ಷ್ಣಾ ಧರ್ಮಾತ್ಮನ್ ಕಿಂ ನ ಬುಧ್ಯಸೇ ॥ ೮

ತಯೋಃ ಸುಚರಿತಂ ಸ್ವಾರ್ಥಂ ಶಾಠ್ಯಾತ್ ಪರಿಜಿಹೀರ್ಷತೋಃ ।
ಯದಿ ನೈವಂ ವ್ಯವಸಿತಂ ಸ್ಯಾದ್ಧಿ ಪ್ರಾಗೇವ ರಾಘವ ॥ ೯

ತಯೋಃ ಪ್ರಾಗೇವ ದತ್ತಶ್ಚ ಸ್ಯಾದ್ವರಃ ಪ್ರಕೃತಶ್ಚ ಸಃ ।
ಲೋಕವಿದ್ವಿಷ್ಟಮಾರಬ್ಧಂ ತ್ವದನ್ಯಸ್ಯಾಭಿಷೇಚನಮ್ ॥ ೧೦

ನೋತ್ಸಹೇ ಸಹಿತುಂ ವೀರ ತತ್ರ ಮೇ ಕ್ಷಂತುಮರ್ಹಸಿ ।
ಯೇನೇಯಮಾಗತಾ ದ್ವೈಧಂ ತವ ಬುದ್ಧಿರ್ಮಹಾಮತೇ ॥ ೧೧

---

ಕಾಡಿಗೆ ಹೋಗಲು ದೊಡ್ಡ ಸಂಭ್ರಮವನ್ನು ತೋರಿಸುತ್ತಿದ್ದೀಯೆ. ಇದು ಸರ್ವಥಾ ಅಯುಕ್ತ. ನಿನ್ನಂಥವನು - ಭ್ರಾಂತಿಯಿಲ್ಲದವನು ಹೀಗೆ ಹೇಳಬಾರದು (೫-೬). ಮಹಾವೀರನೂ ಕ್ಷತ್ರಿಯೋತ್ತಮನೂ ಆದ ನೀನು ಹೇಡಿಯಾದ - ದಿಕ್ಕಿಲ್ಲದ - ಕೈಲಾಗದ ಈ ದೈವವನ್ನು ಯಾವ ದೊಡ್ಡ ವಿಷಯವೆಂದು ಹೊಗಳುತ್ತಿದ್ದೀಯೆ ? (೭). ಪಾಪಿಗಳಾದ ಅವರಿಬ್ಬರೂ ಅಧರ್ಮಿಗಳೆಂದು ನಿನಗೆ ಶಂಕೆಯೇಕೆ ಬರಲಿಲ್ಲ? ಹೊರಗೆ ಧರ್ಮಿಷ್ಠರಂತೆ ನಟಿಸುತ್ತ ಒಳಗೆ ಸ್ವಾರ್ಥವನ್ನು ಸಾಧಿಸುವ ಡಂಭಾಚಾರ ಚತುರರೂ ಇದ್ದಾರೆಂದು ಧರ್ಮಾತ್ಮನಾದ ನಿನಗೆ ಏಕೆ ತಿಳಿಯಬಾರದು? (೮). ಕೈಕೇಯೀ-ದಶರಥರಿಬ್ಬರೂ ತಮ್ಮ ಹೊಣೆಯನ್ನು ವಂಚನೆಮಾಡಿ ತಪ್ಪಿಸಿಕೊಳ್ಳುವುದಕ್ಕೋಸ್ಕರ ಚೆನ್ನಾಗಿ ಯೋಚಿಸಿ ಹೂಡಿದ ಕುಟಿಲತಂತ್ರ ಇದು. ರಾಘವ, ಈ ಪಟ್ಟಾಭಿಷೇಕದ ಸುದ್ದಿಯನ್ನು ಹುಟ್ಟಿಸುವುದಕ್ಕೆ ಮೊದಲೇ ಈ ದುರಾಲೋಚನೆ ನಡೆದಿದೆ. ವರವನ್ನು ಕೊಟ್ಟದ್ದು ಸತ್ಯವಾದರೆ, ಹಿಂದೆಯೇ ವರವು ಸಂದು ಹೋಗಿರಬೇಕು. ನಿನ್ನನ್ನು ಬಿಟ್ಟು ಇನ್ನೊಬ್ಬನಿಗೆ ಪಟ್ಟಾಭಿಷೇಕ ಮಾಡುವುದು ಲೋಕನಿಂದಿತವಾದದ್ದು (೯-೧೦). ಇಂಥ ಕೆಲಸವನ್ನು ನಾನೆಂದಿಗೂ

ಸ ಹಿ ಧರ್ಮೋ ಮಮ ದ್ವೇಷ್ಯಃ ಪ್ರಸಂಗಾದ್ಯಸ್ಯ ಮುಹ್ಯಸಿ ।
ಕಥಂ ತ್ವಂ ಕರ್ಮಣಾ ಶಕ್ತಃ ಕೈಕೇಯೀವಶವರ್ತಿನಃ ॥ ೧೨

ಕರಿಷ್ಯಸಿ ಪಿತುರ್ವಾಕ್ಯಮಧರ್ಮಿಷ್ಠಂ ವಿಗರ್ಹಿತಮ್ ।
ಯದ್ಯಯಂ ಕಿಲ್ಬಿಷಾದ್ಭೇದಃ ಕೃತೋಽಪ್ಯೇವಂ ನ ಗೃಹ್ಯತೇ ॥ ೧೩

ಜಾಯತೇ ತತ್ರ ಮೇ ದುಃಖಂ ಧರ್ಮಸಂಗಶ್ಚ ಗರ್ಹಿತಃ ।
ತವಾಯಂ ಧರ್ಮಸಂಯೋಗೋ ಲೋಕಸ್ಯಾಸ್ಯ ವಿಗರ್ಹಿತಃ ॥ ೧೪

ಮನಸಾಪಿ ಕಥಂ ಕಾಮಂ ಕುರ್ಯಾತ್ ಸ್ವಂ ಕಾಮವೃತ್ತಯೋಃ ।
ತಯೋಸ್ತ್ವಹಿತಯೋರ್ನಿತ್ಯಂ ಶತ್ರ್ವೋಃ ಪಿತ್ರಭಿಧಾನಯೋಃ ॥ ೧೫

ಯದ್ಯಪಿ ಪ್ರತಿಪತ್ತಿಸ್ತೇ ದೈವೀ ಚಾಪಿ ತಯೋರ್ಮತಮ್ ।
ತಥಾಪ್ಯುಪೇಕ್ಷಣೀಯಂ ತೇ ನ ಮೇ ತದಪಿ ರೋಚತೇ ॥ ೧೬

---

ಸಹಿಸಲಾರೆ. ಈ ವಿಷಯದಲ್ಲಿ ನನ್ನನ್ನು ಕ್ಷಮಿಸು. ಮಹಾಮೇಧಾವಿಯಾದ ನಿನ್ನ ಬುದ್ಧಿಗೂ ಬಿಕ್ಕಟ್ಟನ್ನು ತಂದೊಡ್ಡಿರುವುದು ಈ ಧರ್ಮ. ಈ ಧರ್ಮವೇ ನನಗೆ ಶತ್ರು. ಈ ಧರ್ಮವೇ ನಿನ್ನ ವಿವೇಚನಾಶಕ್ತಿಯನ್ನು ಕಳೆದುಬಿಟ್ಟಿದೆ (೧೧-೧೨). ತಂದೆಯು ಕೈಕೇಯಿಗೆ ವಶನಾಗಿ ಧರ್ಮಬಾಹಿರವೂ ಲೋಕಗರ್ಹಿತವೂ ಆದ ಮಾತನ್ನು ಹೇಳಿದ್ದಾನೆ. ನೀನು ಅದಕ್ಕೆ ಪ್ರತೀಕಾರಮಾಡಲು ಸಮರ್ಥನಾಗಿರುವಾಗ ಆ ಮಾತನ್ನು ಏಕೆ ನಡೆಸಬೇಕು? ಸುಳ್ಳುಸುಳ್ಳಾಗಿ ವರವನ್ನು ಕೊಟ್ಟ ಕುಂಟುನೆವದಿಂದ ಅವರಿಬ್ಬರೂ ಸೇರಿ ಪಟ್ಟಾಭಿಷೇಕಕ್ಕೆ ವಿಘಾತವನ್ನು ತಂದಿದ್ದಾರೆ. ಇದು ನಿನಗೆ ತಿಳಿಯದೆ ಹೋಯಿತಲ್ಲ ಎಂದು ನನಗೆ ವ್ಯಥೆಯಾಗುತ್ತದೆ. ಇದಕ್ಕೆ ಧರ್ಮದೊಡನೆ ಗಂಟುಹಾಕುವುದು ತಪ್ಪು. ಈ ಬಗೆಯ ಧರ್ಮಾಚರಣೆಯನ್ನು ಲೋಕವು ಮೆಚ್ಚದು (೧೩-೧೪). ಅವರಿಬ್ಬರೂ ಕಾಮಿಗಳಾಗಿ ಮನಸ್ಸಿಗೆ ತೋರಿದಂತೆ ನಡೆದುಕೊಳ್ಳುತ್ತ ನಿನಗೆ ಕೆಡುಕನ್ನು ಚಿಂತಿಸುತ್ತಿದ್ದಾರೆ. ಅವರು ತಂದೆತಾಯಿಗಳೆಂಬ ಹೆಸರಿನ ವೈರಿಗಳು. ತಮ್ಮದೇ ಆದ ಅವರ ಇಚ್ಛೆಯನ್ನು ಮನಸ್ಸಿನಲ್ಲಾದರೂ ಹೇಗೆ ನಡೆಸಲು ಸಾಧ್ಯ? (೧೫). ಅವರಿಬ್ಬರಿಗೆ ದೈವಿಕವಾಗಿ ಇಂಥ ಬುದ್ಧಿ ಹುಟ್ಟಿತೆಂದು ನಿನ್ನ ಅಭಿಪ್ರಾಯವಿರಬಹುದು. (ಆದರೂ ಅವರ ಮಾತು ಅಯುಕ್ತವಾದ್ದರಿಂದ) ನೀನು ಉಪೇಕ್ಷಿಸಬೇಕು.

ವಿಕ್ಲಿಷ್ಟೋ ವೀರ್ಯಹೀನೋ ಯಃ ಸ ದೈವಮನುವರ್ತತೇ ।
ವೀರಾಃ ಸಂಭಾವಿತಾತ್ಮಾನೋ ನ ದೈವಂ ಪರ್ಯುಪಾಸತೇ ॥ ೧೭

ದೈವಂ ಪುರುಷಕಾರೇಣ ಯಃ ಸಮರ್ಥಃ ಪ್ರಬಾಧಿತುಮ್ ।
ನ ದೈವೇನ ವಿಪನ್ನಾರ್ಥಃ ಪುರುಷಃ ಸೋಽವಸೀದತಿ ॥ ೧೮

ದ್ರಕ್ಷ್ಯಂತಿ ತ್ವದ್ಯ ದೈವಸ್ಯ ಪೌರುಷಂ ಪುರುಷಸ್ಯ ಚ ।
ದೈವಮಾನುಷಯೋರದ್ಯ ವ್ಯಕ್ತಾ ವ್ಯಕ್ತಿರ್ಭವಿಷ್ಯತಿ ॥ ೧೯

ಅದ್ಯ ಮತ್ಪೌರುಷಹತಂ ದೈವಂ ದ್ರಕ್ಷ್ಯಂತಿ ವೈ ಜನಾಃ ।
ಯದ್ವೈವಾದಾಹತಂ ತೇಽದ್ಯ ದೃಷ್ಟಂ ರಾಜ್ಯಾಭಿಷೇಚನಮ್ ॥ ೨೦

ಅತ್ಯಂಕುಶಮಿವೋದ್ದಾಮಂ ಗಜಂ ಮದಬಲೋದ್ಧತಮ್ ।
ಪ್ರಧಾವಿತಮಹಂ ದೈವಂ ಪೌರುಷೇಣ ನಿವರ್ತಯೇ ॥ ೨೧

ಲೋಕಪಾಲಾಃ ಸಮಸ್ತಾಸ್ತೇ ನಾದ್ಯ ರಾಮಾಭಿಷೇಚನಮ್ ।
ನ ಚ ಕೃತ್ಸ್ನಾಸ್ತ್ರಯೋ ಲೋಕಾ ವಿಹನ್ಯುಃ ಕಿಂ ಪುನಃ ಪಿತಾ ॥ ೨೨

---

ದೈವ ಎಂಬುದೂ ನನಗೆ ಹಿಡಿಸುವುದಿಲ್ಲ (೧೬). ಕೈಲಾಗದ ಹೇಡಿಯು ದೈವವನ್ನು ನಂಬುತ್ತಾನೆ. ವೀರರು-ಧೀರರು ದೈವವನ್ನು ಲೆಕ್ಕಿಸುವುದಿಲ್ಲ. ಯಾವ ಪುರುಷನು ತನ್ನ ಪೌರುಷದಿಂದ ದೈವವನ್ನು ತುಳಿಯಬಲ್ಲನೊ ಅವನು ಎಂದಿಗೂ ಕಷ್ಟಕ್ಕೆ ಸಿಕ್ಕುವುದಿಲ್ಲ. ದೈವವು ಅವನ ಕಾರ್ಯವನ್ನು ಕೆಡಿಸುವುದಿಲ್ಲ (೧೭-೧೮). ಈ ದಿನ ದೈವದ ಬಲವೇನೆಂಬುದನ್ನೂ ಪುರುಷನ ಪೌರುಷವೇನೆಂಬುದನ್ನೂ ಜನರು ಕಾಣಲಿ! ದೈವ-ಪೌರುಷಗಳ ಬಲಾಬಲಗಳು ಈಗ ಸ್ಪಷ್ಟವಾಗುತ್ತವೆ. ಈ ದಿನ ನನ್ನ ಪೌರುಷದಿಂದ ದೈವವು ಉರುಳಿಬೀಳುವುದನ್ನು ಜನರು ನೋಡಲಿ! ಅಣ್ಣ, ಈ ಪಟ್ಟಾಭಿಷೇಕವು ದೈವದಿಂದ ನಿಂತುಹೋಯಿತೆಂದು ನೀನು ಭಾವಿಸಿದ್ದೀಯಷ್ಟೆ (೧೯-೨೦). ಅಂಕುಶಕ್ಕೆ ಬಗ್ಗದೆ ಸರಪಳಿಯನ್ನು ಹರಿದೆಸೆದು ಬಲಗರ್ವಿತವಾದ ಮದ್ದಾನೆಯಂತೆ ಓಡುತ್ತಿರುವ ಈ ದೈವವನ್ನು, ನನ್ನ ಪೌರುಷದಿಂದ ಜಗ್ಗಿ ನಿಲ್ಲಿಸಿ ಎಳೆದು ತರುತ್ತೇನೆ (೨೧). ದಿಕ್ಪಾಲಕರೆಲ್ಲರೂ ಒಟ್ಟಾಗಿ ಬಂದರೂ ಮೂರು ಲೋಕವೇ ಅಡ್ಡಗಟ್ಟಿದರೂ, ರಾಮ, ನಿನ್ನ ಪಟ್ಟಾಭಿಷೇಕವನ್ನು ತಡೆದು ನಿಲ್ಲಿಸಲಾರರು. ಇನ್ನು ನಮ್ಮ ತಂದೆ ಏನು ಮಾಡಿಯಾನು? ಈ ದೇಶಕ್ಕೆ

ಯೈರ್ವಿವಾಸಸ್ತ್ವಾರಣ್ಯೇ ಮಿಥೋ ರಾಜನ್ ಸಮರ್ಥಿತಃ ।
ಅರಣ್ಯೇ ತೇ ವಿವತ್ಸ್ಯಂತಿ ಚತುರ್ದಶ ಸಮಾಸ್ತಥಾ ॥ ೨೩

ಅಹಂ ತದಾಶಾಂ ಛೇತ್ಸ್ಯಾಮಿ ಪಿತುಸ್ತಸ್ಯಾಶ್ಚ ಯಾ ತವ ।
ಅಭಿಷೇಕವಿಧಾನೇನ ಪುತ್ರರಾಜ್ಯಾಯ ವರ್ತತೇ ॥ ೨೪

ಮದ್ಬಲೇನ ವಿರುದ್ಧಾಯ ನ ಸ್ಯಾದ್ದೈವಬಲಂ ತಥಾ ।
ಪ್ರಭವಿಷ್ಯತಿ ದುಃಖಾಯ ಯೋಽಧೋಗ್ರಂ ಪೌರುಷಂ ಮಮ ॥

ಊರ್ಧ್ವಂ ವರ್ಷಸಹಸ್ರಾಂತೇ ಪ್ರಜಾಪಾಲ್ಯಮನಂತರಮ್ ।
ಆರ್ಯಪುತ್ರಾಃ ಕರಿಷ್ಯಂತಿ ವನವಾಸಂ ಗತೇ ತ್ವಯಿ ॥ ೨೬

ಪೂರ್ವಂ ರಾಜರ್ಷಿವೃತ್ತ್ಯಾ ಹಿ ವನವಾಸೋ ವಿಧೀಯತೇ ।
ಪ್ರಜಾ ನಿಕ್ಷಿಪ್ಯ ಪುತ್ರೇಷು ಪುತ್ರವತ್ ಪರಿಪಾಲನೇ ॥ ೨೭

ಸ ಚೇದ್ರಾಜನ್ಯನೇಕಾಗ್ರೇ ರಾಜ್ಯವಿಭ್ರಮಶಂಕಯಾ ।
ನೈವಮಿಚ್ಛಸಿ ಧರ್ಮಾತ್ಮನ್ ರಾಜ್ಯಂ ರಾಮ ತ್ವಮಾತ್ಮನಿ ॥ ೨೮

---

ನೀನೇ ಮಹಾರಾಜ. ಯಾರು ನಿನ್ನನ್ನು ಕಾಡಿಗೆ ಹೊರಡಿಸಲು ಗುಟ್ಟಾಗಿ ಸಂಚು ಹೂಡಿದರೊ, ಅವರೇ ಹದಿನಾಲ್ಕು ವರ್ಷ ಕಾಡಿಗೆ ಹೊರಟುಹೋಗುವಂತೆ ಮಾಡುತ್ತೇನೆ (೨೨-೨೩). ತಂದೆಯ ದುರುದ್ದೇಶವನ್ನು ತುಂಡರಿಸುತ್ತೇನೆ. ಯಾವಳು ನಿನ್ನ ಪಟ್ಟಾಭಿಷೇಕಕ್ಕೆ ಕಲ್ಲುಹಾಕಿ ತನ್ನ ಮಗನಿಗೆ ರಾಜ್ಯವನ್ನು ಕೊಡಿಸಬೇಕೆಂದಿದ್ದಾಳೊ ಅವಳ ದುರಾಸೆಯನ್ನು ಕತ್ತರಿಸಿ ಹಾಕುತ್ತೇನೆ (೨೪). ನನ್ನನ್ನು ಎದುರಿಸಿದವನಿಗೆ ನನ್ನ ಉಗ್ರವಾದ ಪೌರುಷವು ದುಃಖವನ್ನೇ ತಂದಿಡುವುದು. ಅವನಿಗೆ ದೈವಬಲವು ಏನನ್ನೂ ಮಾಡಲಾರದು. ಅಣ್ಣ, ನೀನು ಸಾವಿರಾರು ವರ್ಷಪರ್ಯಂತ ರಾಜ್ಯವನ್ನಾಳಿ ವಾನಪ್ರಸ್ಥನಾಗಿ ಅರಣ್ಯಕ್ಕೆ ಹೋಗಬಹುದು. ಆಗಲೂ ನಿನ್ನ ಪುತ್ರರೇ ನಿರಂತರವಾಗಿ ರಾಜ್ಯವನ್ನಾಳುವರು (೨೫-೨೬). ಮೊದಲು ರಾಜರ್ಷಿಯಾಗಿ ರಾಜ್ಯಭಾರವನ್ನು ನಡೆಸಬೇಕು. ಕಡೆಯಲ್ಲಿ ತನ್ನ ಪುತ್ರರಿಗೆ ಪ್ರಜೆಗಳನ್ನು ಪುತ್ರವಾತ್ಸಲ್ಯದಿಂದ ರಕ್ಷಿಸಬೇಕೆಂದು ರಾಜ್ಯವನ್ನು ಒಪ್ಪಿಸಬೇಕು. ಆಮೇಲೆ ತಾನೆ ವನವಾಸಕ್ಕೆ ಹೋಗಬೇಕಾದದ್ದು ? (೨೭). ಒಂದು ವೇಳೆ 'ಆ ಸಂದರ್ಭದಲ್ಲಿ ದಶರಥರಾಜನ ಮನಸ್ಸು ಚಂಚಲವಾಗಬಹುದು. ಆಗ

ಪ್ರತಿಜಾನೇ ಚ ತೇ ವೀರ ಮಾ ಭೂವಂ ವೀರಲೋಕಭಾಕ್ ।
ರಾಜ್ಯಂ ಚ ತವ ರಕ್ಷೇಯಮಹಂ ವೇಲೇವ ಸಾಗರಮ್ ॥ ೨೯

ಮಂಗಲೈರಭಿಷಿಂಚಸ್ವ ತತ್ರ ತ್ವಂ ವ್ಯಾಪೃತೋ ಭವ ।
ಅಹಮೇಕೋ ಮಹೀಪಾಲಾನಲಂ ವಾರಯಿತುಂ ಬಲಾತ್ ॥ ೩೦

ನ ಶೋಭಾರ್ಥಾವಿಮೌ ಬಾಹೂ ನ ಧನುರ್ಭೂಷಣಾಯ ಮೇ ।
ನಾಸಿರಾಬಂಧನಾರ್ಥಾಯ ನ ಶರಾಃ ಸ್ತಂಭಹೇತವಃ ॥ ೩೧

ಅಮಿತ್ರದಮನಾರ್ಥಂ ಮೇ ಸರ್ವಮೇತಚ್ಚತುಷ್ಟಯಮ್ ।
ನ ಚಾಹಂ ಕಾಮಯೇಽತ್ಯರ್ಥಃ ಯಃ ಸ್ಯಾಚ್ಛತ್ರುರ್ಮತೋ ಮಮ ॥ ೩೨

ಅಸಿನಾ ತೀಕ್ಷ್ಣಧಾರೇಣ ವಿದ್ಯುಚ್ಚಲಿತವರ್ಚಸಾ ।
ಪ್ರಗೃಹೀತೇನ ವೈ ಶತ್ರುಂ ವಜ್ರಿಣಂ ವಾ ನ ಕಲ್ಪಯೇ ॥ ೩೩

---

ರಾಜ್ಯದಲ್ಲಿ ಕ್ಷೋಭೆಯಾದೀತು - ಅಂತಃಕಲಹವೆದ್ದೀತು' ಎಂಬ ಶಂಕೆಯಿಂದ ನೀನು ರಾಜ್ಯವನ್ನು ನಿರಾಕರಿಸುವುದಾದರೆ, ಧರ್ಮಾತ್ಮ, ಸಮುದ್ರತೀರವು ಸಮುದ್ರವನ್ನು ತಡೆಯುವಂತೆ ರಾಜ್ಯಕ್ಷೋಭೆಯನ್ನು ತಡೆದು ನಿನ್ನ ರಾಜ್ಯವನ್ನು ನಾನು ರಕ್ಷಿಸಿಕೊಡುತ್ತೇನೆ. ವೀರನಾದ ನಿನಗೆ ನಾನು ಮಾತು ಕೊಡುತ್ತೇನೆ. ನಾನು ಮಾತಿಗೆ ತಪ್ಪಿದರೆ ವೀರಲೋಕಗಳು ನನಗೆ ಲಭಿಸದೆ ಹೋಗಲಿ ! (೨೮-೨೯). ಈಗಲೆ ಮಂಗಳದ್ರವ್ಯಗಳಿಂದ ಪಟ್ಟಾಭಿಷೇಕವನ್ನು ನಡೆಸಿಕೊ. ನೀನು ಆ ಕಾರ್ಯದಲ್ಲಿ ಉದ್ಯುಕ್ತನಾಗು. ಸಾಮಂತರಾಜರು ದಂಗೆಯೆದ್ದರೆ ನಾನೊಬ್ಬನೇ ಬಲಪ್ರಯೋಗದಿಂದ ಅವರನ್ನು ನಿಗ್ರಹಿಸಲು ಸಮರ್ಥನಾಗಿದ್ದೇನೆ (೩೦). ಈ ನನ್ನ ಭುಜಗಳು ದೇಹಸೌಂದರ್ಯಕ್ಕಾಗಿ ಅಲ್ಲ. ಈ ಧನುಸ್ಸು ನನಗೆ ಭೂಷಣವಾಗಿ ಇರುವುದಕ್ಕಲ್ಲ. ಖಡ್ಗವು ನಡುವಿಗೆ ಸಿಕ್ಕಿಸಿಕೊಳ್ಳುವುದಕ್ಕಲ್ಲ. ನನ್ನ ಬಾಣಗಳು (ಬತ್ತಳಿಕೆಯಲ್ಲಿ) ತೆಪ್ಪಗೆ ಇರುವುದಕ್ಕಲ್ಲ (೩೧). ಇವೆಲ್ಲವೂ ಶತ್ರುಗಳನ್ನು ಮರ್ದಿಸುವುದಕ್ಕಾಗಿ. ನಾನು ಯಾವ ದುರಾಸೆಯನ್ನೂ ಇಟ್ಟುಕೊಂಡಿಲ್ಲ. ಆದರೆ ನನ್ನ ಶತ್ರುವನ್ನು ಮಾತ್ರ ತಿಳಿದೂ ಉಪೇಕ್ಷಿಸಲಾರೆ (೩೨). ಮಿಂಚಿನಂತೆ ಮಿಂಚುವ ತೀಕ್ಷ್ಣಾಗ್ರವಾದ ಖಡ್ಗವನ್ನು ಹಿಡಿದು ನಿಂತರೆ, ಯಾವ ಶತ್ರುವನ್ನೂ ನಾನು ಉಳಿಸುವುದಿಲ್ಲ. ಇಂದ್ರನೇ ವಜ್ರಧಾರಿಯಾಗಿ ಬಂದರೂ ಲೆಕ್ಕಿಸುವುದಿಲ್ಲ (೩೩).

ಖಡ್ಗನಿಷ್ಪೇಷನಿಷ್ಪಿಷ್ಟೈರ್ಗಹನಾ ದುಶ್ಚರಾ ಚ ಮೇ ।
ಹಸ್ತ್ಯಶ್ವರಥಿಹಸ್ತೋರುಶಿರೋಭಿರ್ಭವಿತಾ ಮಹೀ ॥ ೩೪

ಖಡ್ಗಧಾರಾಹತಾ ಮೇಽದ್ಯ ದೀಪ್ಯಮಾನಾ ಇವಾಗ್ನಯಃ ।
ಪತಿಷ್ಯಂತಿ ದ್ವಿಷೋ ಭೂಮೌ ಮೇಘಾ ಇವ ಸವಿದ್ಯುತಃ ॥ ೩೫

ಬದ್ಧಗೋಧಾಂಗುಳಿತ್ರಾಣೇ ಪ್ರಗೃಹೀತಶರಾಸನೇ ।
ಕಥಂ ಪುರುಷಮಾನೀ ಸ್ಯಾತ್ ಪುರುಷಾಣಾಂ ಮಯಿ ಸ್ಥಿತೇ ॥ ೩೬

ಬಹುಭಿಶ್ಚೈಕಮತ್ಯಸ್ಯನ್ನೇಕೇನ ಚ ಬಹೂನ್ ಜನಾನ್ ।
ವಿನಿಯೋಕ್ಷ್ಯಾಮ್ಯಹಂ ಬಾಣಾನ್ ನೃವಾಜಿಗಜಮರ್ಮಸು ॥ ೩೭

ಅದ್ಯ ಮೇಽಸ್ತ್ರಪ್ರಭಾವಸ್ಯ ಪ್ರಭಾವಃ ಪ್ರಭವಿಷ್ಯತಿ ।
ರಾಜ್ಞಶ್ಚಾಪ್ರಭುತಾಂ ಕರ್ತುಂ ಪ್ರಭುತ್ವಂ ಚ ತವ ಪ್ರಭೋ ॥ ೩೮

ಅದ್ಯ ಚಂದನಸಾರಸ್ಯ ಕೇಯೂರಾಮೋಕ್ಷಣಸ್ಯ ಚ ।
ವಸೂನಾಂ ಚ ವಿಮೋಕ್ಷಸ್ಯ ಸುಹೃದಾಂ ಪಾಲನಸ್ಯ ಚ ॥ ೩೯

---

ಖಡ್ಗದ ಹೊಡೆತಗಳಿಂದ ತುಂಡುತುಂಡಾಗಿ ಖಂಡಿಸಿ ಚೆಲ್ಲಿದ ಆನೆ, ಕುದುರೆ ರಥಿಕರ ಕೈಕಾಲು-ತಲೆಗಳಿಂದ ಹೆಜ್ಜೆಯಿಡಲೂ ಸ್ಥಳವಿಲ್ಲದಂತೆ ಪೃಥ್ವಿಯು ತುಂಬಿಹೋಗಲಿ! (೩೪). ಈ ದಿನ ನನ್ನ ಖಡ್ಗದ ಅಲಗಿನಿಂದ ತುಂಡರಿಸಲ್ಪಟ್ಟ ಶತ್ರುಗಳು ಅಗ್ನಿಜ್ವಾಲೆಯಂತೆ (ನೆತ್ತರನ್ನು ಸುರಿಸುತ್ತ) ನೆಲದಲ್ಲಿ ಉರುಳುವರು! ಮಿಂಚಿನಿಂದ ಕೂಡಿದ ಮೇಘಖಂಡಗಳಂತೆ ಬೀಳುವರು! (೩೫). ನಾನು ಬೆರಳುಗಳಿಗೆ ರಕ್ಷಾಕವಚವನ್ನು ಧರಿಸಿ ಧನುಸ್ಸನ್ನು ಹಿಡಿದು ಎದುರಿಸಿ ನಿಂತರೆ, ಯಾವನು ತನ್ನನ್ನು ಗಂಡಸೆಂದು ಕರೆದುಕೊಂಡು ಬಂದಾನು ? (೩೬). ಬಹುಜನರ ಮೇಲೆ ಒಂದು ಬಾಣವನ್ನು ಬಿಟ್ಟು ಒಂದೇ ಬಾಣದಿಂದ ಬಹುಜನರನ್ನು ಸಂಹರಿಸಬಲ್ಲೆ! ಈ ರೀತಿಯಲ್ಲಿ ಪದಾತಿಗಳನ್ನು, ಅಶ್ವಗಳನ್ನು, ಗಜಗಳನ್ನು ಮರ್ಮಸ್ಥಳದಲ್ಲಿ ಹೊಡೆದು ಹೊಡೆದು ಉರುಳಿಸುವೆನು (೩೭). ಅಣ್ಣ, ಈ ದಿನ ನನ್ನ ಅಸ್ತ್ರಗಳ ಸಾಮರ್ಥ್ಯ - ಪ್ರಭಾವ ಏನು ಮಾಡುವುದೆಂಬುದನ್ನು ನೋಡುತ್ತಿರು. ಅದು ಈ ರಾಜನನ್ನು ಪ್ರಭುತ್ವದಿಂದ ಉರುಳಿಸಿ ನಿನಗೆ ಪ್ರಭುತ್ವವನ್ನು ತಂದು ಕೊಡುವುದು (೩೮). ಇದುವರೆಗೆ ನನ್ನ ತೋಳುಗಳು ಶ್ರೀಗಂಧವನ್ನು ತೊಡೆದು

ಅನುರೂಪಾವಿಮೌ ಬಾಹೂ ರಾಮ ಕರ್ಮ ಕರಿಷ್ಯತಃ ।
ಅಭಿಷೇಚನವಿಘ್ನಸ್ಯ ಕರ್ತ್ಯಾಣಾಂ ತೇ ನಿವಾರಣೇ ॥ ೪೦

ಬ್ರವೀಹಿ ಕೋಽದ್ಯೈವ ಮಯಾ ವಿಯುಜ್ಯತಾಂ
ತವಾಸುಹೃತ್ಪ್ರಾಣಯಶಃಸುಹೃಜ್ಜನೈಃ ।
ಯಥಾ ತವೇಯಂ ವಸುಧಾ ವಶೇ ಭವೇತ್
ತಥೈವ ಮಾಂ ಶಾಧಿ ತವಾಸ್ಮಿ ಕಿಂಕರಃ ॥ ೪೧

ವಿಮೃಜ್ಯ ಬಾಷ್ಪಂ ಪರಿಸಾಂತ್ವ್ಯ ಚಾಸಕೃತ್
ಸ ಲಕ್ಷ್ಮಣಂ ರಾಘವವಂಶವರ್ಧನಃ ।
ಉವಾಚ ಪಿತ್ರ್ಯೇ ವಚನೇ ವ್ಯವಸ್ಥಿತಂ
ನಿಬೋಧ ಮಾಮೇಷ ಹಿ ಸೌಮ್ಯ ಸತ್ಪಥಃ ॥ ೪೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯೋವಿಂಶಃ ಸರ್ಗಃ

---

ಕೊಳ್ಳುತ್ತ, ಕೇಯೂರಗಳನ್ನು ಧರಿಸುತ್ತ, ಐಶ್ವರ್ಯವನ್ನು ದಾನಮಾಡುತ್ತ, ಮಿತ್ರರನ್ನು ಪಾಲಿಸುತ್ತ ಇದ್ದವು. ರಾಮ, ಈ ತೋಳುಗಳೇ ಇಂದು ನಿನ್ನ ಕಾರ್ಯವನ್ನು ಸಾಧಿಸುತ್ತವೆ. ನಿನ್ನ ಪಟ್ಟಾಭಿಷೇಕಕ್ಕೆ ಅಡ್ಡಿಪಡಿಸುವವರನ್ನು ಅಡ್ಡಗಟ್ಟುತ್ತವೆ (೩೯-೪೦). ಅಣ್ಣ, ನಿನ್ನ ಯಾವ ಹಗೆಯನ್ನು ಧ್ವಂಸಮಾಡಲಿ, ಹೇಳು. ಅವನ ಪ್ರಾಣವನ್ನು ಈಗಲೆ ಹೀರಿಬಿಡುವೆನು. ಅವನ ಕೀರ್ತಿಯನ್ನು ಮಣ್ಣುಗೂಡಿಸಿ ಅವನ ಮಿತ್ರರನ್ನು ತಲೆಯೆತ್ತದಂತೆ ಮಾಡುವೆನು. ಈ ಭೂಮಂಡಲವು ನಿನಗೆ ಅಧೀನವಾಗುವಂತೆ ಯಾವ ಕೆಲಸವನ್ನಾದರೂ ಸಾಧಿಸುವೆನು. ನನಗೆ ಅಪ್ಪಣೆ ಮಾಡು. ನಾನು ನಿನ್ನ ಸೇವಕನೆಂದು ತಿಳಿ" ಎಂದನು (೪೧). ಆಗ ರಘುವಂಶತಿಲಕನಾದ ಶ್ರೀರಾಮಚಂದ್ರನು ಲಕ್ಷ್ಮಣನಿಗೆ ಅನೇಕ ವಿಧದಲ್ಲಿ ಸಮಾಧಾನವನ್ನು ಹೇಳುತ್ತ ಆತನ ಕಣ್ಣೀರನ್ನೊರಸಿ "ಲಕ್ಷ್ಮಣ, ನಾನು ತಂದೆಯ ಆಜ್ಞೆಯನ್ನು ಮೀರತಕ್ಕವನಲ್ಲ. ಇದು ನನ್ನ ನಿರ್ಧಾರವೆಂದು ತಿಳಿ. ಇದೇ ಸಜ್ಜನರು ಅನುಸರಿಸಬೇಕಾದ ಮಾರ್ಗ" ಎಂದು ಹೇಳಿದನು (೪೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತುಮೂರನೆಯ ಸರ್ಗ

## ಚತುರ್ವಿಂಶಃ ಸರ್ಗಃ

### ಕೌಸಲ್ಯಾರ್ತಿಸಮಾಶ್ವಾಸನಮ್

ತಂ ಸಮೀಕ್ಷ್ಯ ತ್ವವಹಿತಂ ಪಿತುರ್ನಿರ್ದೇಶಪಾಲನೇ ।
ಕೌಸಲ್ಯಾ ಬಾಷ್ಪಸಂರುದ್ಧಾ ವಚೋ ಧರ್ಮಿಷ್ಠಮಬ್ರವೀತ್ ॥ ೧

ಅದೃಷ್ಟದುಃಖೋ ಧರ್ಮಾತ್ಮಾ ಸರ್ವಭೂತಪ್ರಿಯಂವದಃ ।
ಮಯಿ ಜಾತೋ ದಶರಥಾತ್ ಕಥಮುಂಛೇನ ವರ್ತಯೇತ್ ॥ ೨

ಯಸ್ಯ ಭೃತ್ಯಾಶ್ಚ ದಾಸಾಶ್ಚ ಮೃಷ್ಟಾನ್ಯನ್ನಾನಿ ಭುಂಜತೇ ।
ಕಥಂ ಸ ಭೋಕ್ಷ್ಯತೇ ನಾಥೋ ವನೇ ಮೂಲಫಲಾನ್ಯಯಮ್ ॥ ೩

ಕ ಏತಚ್ಛ್ರದ್ದಧೇಚ್ಛ್ರುತ್ವಾ ಕಸ್ಯ ವಾ ನ ಭವೇದ್ಭಯಮ್ ।
ಗುಣವಾನ್ ದಯಿತೋ ರಾಜ್ಞೋ ರಾಘವೋ ಯದ್ವಿವಾಸ್ಯತೇ ॥ ೪

## ಸರ್ಗ ೨೪

### ಶ್ರೀರಾಮನು ಕೌಸಲ್ಯೆಯನ್ನು ಸಂತೈಸಿ ವನವಾಸಕ್ಕೆ ಹೋಗಲು ಅವಳ ಅನುಜ್ಞೆಯನ್ನು ಪಡೆಯುವುದು.

ಹೀಗೆ ಶ್ರೀರಾಮನು ತಂದೆಯ ಆಜ್ಞೆಯನ್ನು ಪಾಲಿಸಬೇಕೆಂದು ದೃಢವಾಗಿ ನಿರ್ಧರಿಸಿರುವುದನ್ನು ಕಂಡು, ಕೌಸಲ್ಯೆಯು ಕಣ್ಣೀರು ತುಂಬಿ ಬಿಕ್ಕುತ್ತ ಧರ್ಮಶೀಲನಾದ ರಾಮನಿಗೆ ಈ ರೀತಿ ಹೇಳಿದಳು (೧) : "ನೀನು ಕಷ್ಟವನ್ನು ಕಂಡವನಲ್ಲ. ಸಮಸ್ತ ಜನರೊಡನೆ ಪ್ರಿಯವಾಗಿ ಮಾತನಾಡುತ್ತ ಧರ್ಮಾತ್ಮನಾಗಿದ್ದವನು. ದಶರಥಮಹಾರಾಜನಿಗೆ ಮಗನಾಗಿ ನನ್ನ ಹೊಟ್ಟೆಯಲ್ಲಿ ಹುಟ್ಟಿದವನು ಉಂಛವೃತ್ತಿಯಿಂದ* ಜೀವಿಸಬೇಕಾಯಿತೆ? (೨). ಯಾವ ರಾಜಕುಮಾರನ ಊಳಿಗದವರೂ ದಾಸರೂ ಮೃಷ್ಟಾನ್ನವನ್ನು ಭುಂಜಿಸುವರೊ, ಅಂಥ ನನ್ನ ಕಂದನು ಕಾಡಿನಲ್ಲಿ ನಾರು ಬೇರುಗಳನ್ನೂ ಕಾಡಿನ ಹಣ್ಣುಗಳನ್ನೂ ತಿಂದುಕೊಂಡಿರಬೇಕೆ ? (೩). ಗುಣವಂತನಾಗಿ, ಮಹಾರಾಜನಿಗೆ ಪ್ರಿಯಪುತ್ರನೆನಿಸಿಕೊಂಡು, ರಘುಕುಲೋತ್ಪನ್ನ

---

ಉಂಛವೃತ್ತಿ=ತಾನಾಗಿ ಉದುರಿದ ಧಾನ್ಯಗಳನ್ನು ಆರಿಸಿಕೊಳ್ಳುವುದು.

ನೂನಂ ತು ಬಲವಾನ್ ಲೋಕೇ ಕೃತಾಂತಃ ಸರ್ವಮಾದಿಶೇತ್ ।
ಲೋಕೇ ರಾಮಾಭಿರಾಮಸ್ತ್ವಂ ವನಂ ಯತ್ರ ಗಮಿಷ್ಯಸಿ ॥ ೫

ಅಯಂ ತು ಮಾಮಾತ್ಮಭವಸ್ತ್ವದಾದರ್ಶನಮಾರುತಃ ।
ವಿಲಾಪದುಃಖಸಮಿಧೋ ರುದಿತಾಶ್ರುಹುತಾಹುತಿಃ ॥ ೬

ಚಿಂತಾಬಾಷ್ಪಮಹಾಧೂಮಸ್ತ್ವಾಗಮನಚಿಂತಜಃ ।
ಕರ್ಶಯಿತ್ವಾ ಭೃಶಂ ಪುತ್ರ ನಿಃಶ್ವಾಸಾಯಾಸಸಂಭವಃ ॥ ೭

ತ್ವಯಾ ವಿಹೀನಾಮಿಹ ಮಾಂ ಶೋಕಾಗ್ನಿರತುಲೋ ಮಹಾನ್ ।
ಪ್ರಧಕ್ಷ್ಯತಿ ಯಥಾ ಕಕ್ಷಂ ಚಿತ್ರಭಾನುರ್ಹಿಮಾತ್ಯಯೇ ॥ ೮

ಕಥಂ ಧೇನುಃ ಸ್ವಕಂ ವತ್ಸಂ ಗಚ್ಛಂತಂ ನಾನುಗಚ್ಛತಿ ।
ಅಹಂ ತ್ವಾನುಗಮಿಷ್ಯಾಮಿ ಪುತ್ರ ಯತ್ರ ಗಮಿಷ್ಯಸಿ ॥ ೯

ತಥಾ ನಿಗದಿತಂ ಮಾತ್ರಾ ತದ್ವಾಕ್ಯಂ ಪುರುಷರ್ಷಭಃ ।
ಶ್ರುತ್ವಾ ರಾಮೋಽಬ್ರವೀದ್ವಾಕ್ಯಂ ಮಾತರಂ ಭೃಶದುಃಖಿತಾಮ್ ॥

---

ನಾದವನು ರಾಜ್ಯಭ್ರಷ್ಟನಾಗಿ ಕಾಡಿಗೆ ಹೋಗಬೇಕಾಯಿತೆಂದರೆ, ಈ ಮಾತನ್ನು ಯಾರು ನಂಬಬಹುದು ? ಇದನ್ನು ಕೇಳಿ ಯಾರಿಗೆ ಹೆದರಿಕೆಯಾಗದಿದ್ದೀತು? (೪). ನಿಜವಾಗಿಯೂ ಲೋಕದಲ್ಲಿ ದೈವವೇ ಬಲಶಾಲಿ. ಸಕಲವನ್ನೂ ಅದೇ ನಿಯಮಿಸುತ್ತದೆ. ರಾಮ, ಲೋಕಾಭಿರಾಮನಾದ ನೀನು ವನಕ್ಕೆ ಹೋಗುವೆ. ಮಗು, ನನ್ನ ಹೃದಯದಲ್ಲಿ ಶೋಕಾಗ್ನಿ ಎದ್ದಿತು. ಆ ಬೆಂಕಿಗೆ ನಿನ್ನ ವಿರಹವೇ ಗಾಳಿಯಾಗಿ ನನ್ನ ಗೋಳಾಟವೇ ಸೌದೆಯಾಗಿ ಕಣ್ಣೀರೇ ಆಜ್ಯಾಹುತಿಯಾಗುವುದು (೫-೬). ಘೋರಚಿಂತೆಯೆಂಬ ಹೊಗೆಯು ಕವಿಯುವುದು. ನೀನು ಯಾವಾಗ ಬರುವೆಯೆಂಬ ಚಿಂತೆಯಿಂದ ಬೆಳೆಯುವುದು. ಈ ಶೋಕಾಗ್ನಿಯು ನಿಟ್ಟುಸಿರಿನಿಂದ ಗಾಳಿ ಹಾಕಿದಂತಾಗಿ ಜ್ವಲಿಸುವುದು. ನೀನಿಲ್ಲದಾಗ ಈ ಬೆಂಕಿ ನನ್ನನ್ನು ಇಲ್ಲಿ ಸುಟ್ಟುಹಾಕುವುದು. ಹಿಮವಿಲ್ಲದಾಗ ಬೇಸಿಗೆಯಲ್ಲಿ ಕಾಳ್ಗಿಚ್ಚು ಒಣಹುಲ್ಲನ್ನು ಸುಟ್ಟಂತಾಗುವುದು (೭-೮). ಮಗು, ಹಸು ತನ್ನ ಕರು ಹೋದದಾರಿಯನ್ನು ಹಿಡಿದು ಹೋಗದೆ ಇದ್ದೀತೆ? ನೀನು ಎಲ್ಲಿಗೆ ಹೋದರೂ ನಾನು ಹಿಂದೆ ಬರುವೆನು" ಎಂದು ನುಡಿದಳು. ಹೀಗೆ ತಾಯಿಯು ನುಡಿದ

ಕೈಕೇಯ್ಯಾ ವಂಚಿತೋ ರಾಜಾ ಮಯಿ ಚಾರಣ್ಯಮಾಶ್ರಿತೇ ।
ಭವತ್ಯಾ ಚ ಪರಿತ್ಯಕ್ತೋ ನ ನೂನಂ ವರ್ತಯಿಷ್ಯತಿ ॥ ೧೧

ಭರ್ತುಃ ಕಿಲ ಪರಿತ್ಯಾಗೋ ನೃಶಂಸಃ ಕೇವಲಂ ಸ್ತ್ರಿಯಾಃ ।
ಸ ಭವತ್ಯಾ ನ ಕರ್ತವ್ಯೋ ಮನಸಾಪಿ ವಿಗರ್ಹಿತಃ ॥ ೧೨

ಯಾವಜ್ಜೀವತಿ ಕಾಕುತ್ಸ್ಥಃ ಪಿತಾ ಮೇ ಜಗತೀಪತಿಃ ।
ಶುಶ್ರೂಷಾ ಕ್ರಿಯತಾಂ ತಾವತ್ ಸ ಹಿ ಧರ್ಮಃ ಸನಾತನಃ ॥ ೧೩

ಏವಮುಕ್ತಾ ತು ಕೌಸಲ್ಯಾ ರಾಮೇಣ ಶುಭದರ್ಶನಾ ।
ತಥೇತ್ಯುವಾಚ ಸುಪ್ರೀತಾ ರಾಮಮಕ್ಲಿಷ್ಟಕಾರಿಣಮ್ ॥ ೧೪

ಏವಮುಕ್ತಸ್ತು ವಚನಂ ರಾಮೋ ಧರ್ಮಭೃತಾಂ ವರಃ ।
ಭೂಯಸ್ತಾಮಬ್ರವೀದ್ವಾಕ್ಯಂ ಮಾತರಂ ಭೃಶದುಃಖಿತಾಮ್ ॥ ೧೫

---

ವಾಕ್ಯವನ್ನು ಕೇಳಿ ಶ್ರೀರಾಮನು ಅತ್ಯಂತ ದುಃಖಿತಳಾದ ಅವಳಿಗೆ ಈ ಪ್ರಕಾರ ತಿಳಿಸಿದನು (೯-೧೦) : "ಅಮ್ಮ, ಮಹಾರಾಜನು ಕೈಕೇಯಿಯ ವಂಚನೆಗೆ ಸಿಕ್ಕಿದ್ದಾನೆ. ನಾನು ಕಾಡಿಗೆ ಹೋದಾಗ ನೀನೂ ಬಿಟ್ಟುಬಂದರೆ, ಅವನು ಎಂದಿಗೂ ಬದುಕಿ ಉಳಿಯಲಾರ. ಮತ್ತು ಪತಿಯನ್ನು ತ್ಯಜಿಸಿ ಹೋಗುವುದು ಸ್ತ್ರೀಗೆ ಯೋಗ್ಯವಲ್ಲ. ಅದು ಕ್ರೂರವಾದ ನಡತೆ. ಅದನ್ನು ಮನಸ್ಸಿನಲ್ಲಿಯೂ ನೀನು ಯೋಚಿಸಬಾರದು. ಪತಿಯನ್ನು ಬಿಡುವುದೆಂದರೆ, ಅತ್ಯಂತ ಗರ್ಹಿತವಾದ ಕಾರ್ಯ (೧೧-೧೨). ಕಕುತ್ಸ್ಥವಂಶದಲ್ಲಿ ಜನಿಸಿ, ಭೂಮಂಡಲಾಧಿಪತಿಯಾಗಿರುವ ನಮ್ಮ ತಂದೆಯು ಬದುಕಿರುವವರೆಗೂ ನೀನು ಅವನ ಸೇವೆಯನ್ನು ಮಾಡಿಕೊಂಡಿರಬೇಕು. ಅದೇ ನಿನಗೆ ಸನಾತನವಾದ ಧರ್ಮ" ಎಂದನು (೧೩). ಆಗ ಸಹಜವಾಗಿಯೇ ಧರ್ಮಬುದ್ಧಿಯುಳ್ಳ ಕೌಸಲ್ಯೆಯು "ನೀನು ಹೇಳುವುದು ಸರಿ" ಎಂದಳು. ರಾಮನು ಕಷ್ಟವಿಲ್ಲದೆ ಲೀಲೆಯಿಂದ ಸಮಸ್ಯೆಯನ್ನು ಬಗೆಹರಿಸುವುದನ್ನು ಕಂಡು ಅವಳ ಮನಸ್ಸಿಗೆ ನೆಮ್ಮದಿಯಾಯಿತು (೧೪). ಅನಂತರ ಧಾರ್ಮಿಕರಲ್ಲಿ ಅಗ್ರಗಣ್ಯನಾದ ರಾಮನು ಶೋಕದಿಂದ ಪರಿತಪಿಸುತ್ತಿದ್ದ ತಾಯಿಯನ್ನು ಕುರಿತು "ಅಮ್ಮ, ತಂದೆಯ ಮಾತನ್ನು ನಾವಿಬ್ಬರೂ ನಡೆಸಬೇಕಾದದ್ದು ನಮ್ಮ

ಮಯಾ ಚೈವ ಭವತ್ಯಾ ಚ ಕರ್ತವ್ಯಂ ವಚನಂ ಪಿತುಃ ।
ರಾಜಾ ಭರ್ತಾ ಗುರುಃ ಶ್ರೇಷ್ಠಃ ಸರ್ವೇಷಾಮೀಶ್ವರಃ ಪ್ರಭುಃ ॥ ೧೬

ಇಮಾನಿ ತು ಮಹಾರಣ್ಯೇ ವಿಹೃತ್ಯ ನವ ಪಂಚ ಚ ।
ವರ್ಷಾಣಿ ಪರಮಪ್ರೀತಃ ಸ್ಥಾಸ್ಯಾಮಿ ವಚನೇ ತವ ॥ ೧೭

ಏವಮುಕ್ತಾ ಪ್ರಿಯಂ ಪುತ್ರಂ ಬಾಷ್ಪಪೂರ್ಣಾನನಾ ತದಾ ।
ಉವಾಚ ಪರಮಾರ್ತಾ ತು ಕೌಸಲ್ಯಾ ಪುತ್ರವತ್ಸಲಾ ॥ ೧೮

ಆಸಾಂ ರಾಮ ಸಪತ್ನೀನಾಂ ವಸ್ತುಂ ಮಧ್ಯೇ ನ ಮೇ ಕ್ಷಮಮ್ ।
ನಯ ಮಾಮಪಿ ಕಾಕುತ್ಸ್ಥ ವನಂ ವನ್ಯಾಂ ಮೃಗೀಂ ಯಥಾ ॥ ೧೯

ಯದಿ ತೇ ಗಮನೇ ಬುದ್ಧಿಃ ಕೃತಾ ಪಿತುರಪೇಕ್ಷಯಾ ।
ತಾಂ ತಥಾ ರುದತೀಂ ರಾಮೋ ರುದನ್ ವಚನಮಬ್ರವೀತ್ ॥ ೨೦

ಜೀವಂತ್ಯಾ ಹಿ ಸ್ತ್ರಿಯಾ ಭರ್ತಾ ದೈವತಂ ಪ್ರಭುರೇವ ಚ ।
ಭವತ್ಯಾ ಮಮ ಚೈವಾದ್ಯ ರಾಜಾ ಪ್ರಭವತಿ ಪ್ರಭುಃ ॥ ೨೧

---

ಕರ್ತವ್ಯ. ಅವನು ನಮಗೆ ರಾಜನೂ ಪೋಷಕನೂ ಗುರುವೂ ಪೂಜ್ಯನೂ ಆಗಿದ್ದಾನೆ; ಸಮಸ್ತರನ್ನೂ ನಿಯಮಿಸತಕ್ಕ ಪ್ರಭುವಾಗಿದ್ದಾನೆ (೧೫-೧೬). ಕೇವಲ ಹದಿನಾಲ್ಕು ವರ್ಷಗಳವರೆಗೆ ನಾನು ಅರಣ್ಯದಲ್ಲಿ ವಿಹರಿಸಿಕೊಂಡಿದ್ದು ಪುನಃ ಹಿಂದಿರುಗಿ ಬಂದು ನಿನ್ನ ಆಜ್ಞೆಯನ್ನು ಪಾಲಿಸುತ್ತಿರುವೆನು" ಎಂದನು. ಆಗ ಕೌಸಲ್ಯೆಯು ಪುತ್ರವಾತ್ಸಲ್ಯದಿಂದ ಸಂಕಟವನ್ನು ತಡೆಯಲಾರದೆ ಕಣ್ಣೀರುಬಿಡುತ್ತ "ರಾಮ, ಈ ಸವತಿಯರ ಮಧ್ಯದಲ್ಲಿ ನಾನು ಇರಲಾರೆ. ತಂದೆಯ ಅಪೇಕ್ಷೆಯಂತೆ ನೀನು ಹೋಗಲೇಬೇಕೆಂದು ನಿಶ್ಚಯಿಸಿದ್ದಾದರೆ, ನನ್ನನ್ನೂ ವನಕ್ಕೆ ಕರೆದುಕೊಂಡು ಹೋಗು. ವನದಲ್ಲಿರುವ ಜಿಂಕೆಯಂತೆ ಅಲ್ಲಿರುವೆನು" ಎಂದು ನುಡಿದಳು (೧೭-೧೯). ತಾಯಿಯು ಅಳುತ್ತಿರುವುದನ್ನು ನೋಡಿ ರಾಮನಿಗೂ ಅಳು ಬಂದಿತು. ಅವನು ಅಳುತ್ತಲೇ ಹೇಳಿದನು : "ಅಮ್ಮ, ಹೆಂಗಸು ತಾನು ಬದುಕಿರುವವರೆಗೂ ಗಂಡನೇ ದೈವವೆಂದು ತಿಳಿಯಬೇಕು. ಅವನೇ ಪ್ರಭು. ನಿನಗೂ ನನಗೂ ಮಹಾರಾಜನೇ ಪ್ರಭುವಾಗಿ ನಿಯಮಿಸತಕ್ಕವನು (೨೦-೨೧).

ನ ಹ್ಯನಾಥಾ ವಯಂ ರಾಜ್ಞಾ ಲೋಕನಾಥೇನ ಧೀಮತಾ ।
ಭರತಶ್ಚಾಪಿ ಧರ್ಮಾತ್ಮಾ ಸರ್ವಭೂತಪ್ರಿಯಂವದಃ ॥ ೨೨

ಭವತೀಮನುವರ್ತೇತ ಸ ಹಿ ಧರ್ಮರತಃ ಸದಾ ।
ಯಥಾ ಮಯಿ ತು ನಿಷ್ಕ್ರಾಂತೇ ಪುತ್ರಶೋಕೇನ ಪಾರ್ಥಿವಃ ॥ ೨೩

ಶ್ರಮಂ ನಾವಾಪ್ನುಯಾತ್ಕಿಂಚಿದಪ್ರಮತ್ತಾ ತಥಾ ಕುರು ।
ದಾರುಣಶ್ಚಾಪ್ಯಯಂ ಶೋಕೋ ಯಥೈನಂ ನ ವಿನಾಶಯೇತ್ ॥

ರಾಜ್ಞೋ ವೃದ್ಧಸ್ಯ ಸತತಂ ಹಿತಂ ಚರ ಸಮಾಹಿತಾ ।
ವ್ರತೋಪವಾಸನಿರತಾ ಯಾ ನಾರೀ ಪರಮೋತ್ತಮಾ ॥ ೨೫

ಭರ್ತಾರಂ ನಾನುವರ್ತೇತ ಸಾ ತು ಪಾಪಗತಿರ್ಭವೇತ್ ।
ಭರ್ತುಃ ಶುಶ್ರೂಷಯಾ ನಾರೀ ಲಭತೇ ಸ್ವರ್ಗಮುತ್ತಮಮ್ ॥ ೨೬

ಅಪಿ ಯಾ ನಿರ್ನಮಸ್ಕಾರಾ ನಿವೃತ್ತಾ ದೇವಪೂಜನಾತ್ ।
ಶುಶ್ರೂಷಾಮೇವ ಕುರ್ವೀತ ಭರ್ತುಃ ಪ್ರಿಯಹಿತೇ ರತಾ ॥ ೨೭

---

ಪ್ರಾಜ್ಞನೂ ಲೋಕನಾಥನೂ ಆದ ದಶರಥರಾಜನಿರುವಾಗ ನಾವು ಅನಾಥರಲ್ಲ. ಭರತನಾದರೂ ಧರ್ಮಶೀಲ. ಸರ್ವರಲ್ಲಿಯೂ ಪ್ರಿಯವಾಗಿ ಮಾತನಾಡುತ್ತ ವ್ಯವಹರಿಸುತ್ತಾನೆ. ಅವನು ನಿನ್ನನ್ನು ಅನುಸರಿಸಿ ನಮ್ರತೆಯಿಂದ ನಡೆದು ಕೊಳ್ಳುತ್ತಾನೆ. ಅವನು ಎಂದಿಗೂ ಧರ್ಮಮಾರ್ಗವನ್ನು ತಪ್ಪಿಹೋಗತಕ್ಕವನಲ್ಲ (೨೨-೨೩). ನಾನು ನಿರ್ಗಮಿಸಿದ ಮೇಲೆ ಮಹಾರಾಜನು ಪುತ್ರಶೋಕದಿಂದ ಖಿನ್ನನಾಗಬಹುದು. ಅವನಿಗೆ ಸ್ವಲ್ಪವೂ ಖೇದವಾಗದಂತೆ ನೀನು ಜಾಗರೂಕತೆಯಿಂದ ನೋಡಿಕೊ. ನನ್ನ ವಿರಹಶೋಕವು ಭೀಕರವಾಗಿ ಅವನಿಗೆ ದುರಂತವನ್ನು ತಂದುಬಿಟ್ಟೀತು (೨೪). ವೃದ್ಧನಾದ ಮಹಾರಾಜನಿಗೆ ಯಾವಾಗಲೂ ಹಿತಕರವಾದ ಕಾರ್ಯವನ್ನು ಸಾವಧಾನದಿಂದ ಮಾಡು. ಸ್ತ್ರೀಯು ವ್ರತೋಪವಾಸಗಳಲ್ಲಿ ನಿರತಳಾಗಿ ಉತ್ತಮಳೆನಿಸಿಕೊಂಡಿದ್ದರೂ ಪತಿಯನ್ನು ನಮ್ರಳಾಗಿ ಸೇವಿಸದಿದ್ದರೆ, ದುರ್ಗತಿಯನ್ನು ಪಡೆಯುತ್ತಾಳೆ. ಪತಿಶುಶ್ರೂಷೆಯಿಂದ ಉತ್ತಮವಾದ ಸ್ವರ್ಗವನ್ನು ಪಡೆಯುತ್ತಾಳೆ (೨೫-೨೬). ನಾರಿಯು ಗುರುಹಿರಿಯರಿಗೆ ನಮಸ್ಕರಿಸದಿದ್ದರೂ ದೇವಪೂಜೆಯನ್ನು ಆಚರಿಸದಿದ್ದರೂ ಚಿಂತೆಯಿಲ್ಲ.

ಏಷ ಧರ್ಮಃ ಪುರಾ ದೃಷ್ಟೋ ಲೋಕೇ ವೇದೇ ಶ್ರುತಃ ಸ್ಮೃತಃ ।
ಅಗ್ನಿಕಾರ್ಯೇಷು ಚ ಸದಾ ಸಮನೋಭಿಶ್ಚ ದೇವತಾಃ ॥ ೨೮

ಪೂಜ್ಯಾಸ್ತೇ ಮತ್ಕೃತೇ ದೇವಿ ಬ್ರಾಹ್ಮಣಾಶ್ಚೈವ ಸುವ್ರತಾಃ ।
ಏವಂ ಕಾಲಂ ಪ್ರತೀಕ್ಷಸ್ವ ಮಮಾಗಮನಕಾಂಕ್ಷಿಣೀ ॥ ೨೯

ನಿಯತಾ ನಿಯತಾಹಾರಾ ಭರ್ತೃಶುಶ್ರೂಷಣೇ ರತಾ ।
ಪ್ರಾಪ್ಸ್ಯಸೇ ಪರಮಂ ಕಾಮಂ ಮಯಿ ಪ್ರತ್ಯಾಗತೇ ಸತಿ ॥ ೩೦

ಯದಿ ಧರ್ಮಭೃತಾಂ ಶ್ರೇಷ್ಠೋ ಧಾರಯಿಷ್ಯತಿ ಜೀವಿತಮ್ ।
ಏವಮುಕ್ತಾ ತು ರಾಮೇಣ ಬಾಷ್ಪಪರ್ಯಾಕುಲೇಕ್ಷಣಾ ॥ ೩೧

ಕೌಸಲ್ಯಾ ಪುತ್ರಶೋಕಾರ್ತಾ ರಾಮಂ ವಚನಮಬ್ರವೀತ್ ।
ಗಮನೇ ಸುಕೃತಾಂ ಬುದ್ಧಿಂ ನ ತೇ ಶಕ್ನೋಮಿ ಪುತ್ರಕ ॥ ೩೨

ವಿನಿವರ್ತಯಿತುಂ ವೀರ ನೂನಂ ಕಾಲೋ ದುರತ್ಯಯಃ ।
ಗಚ್ಛ ಪುತ್ರ ತ್ವಮೇಕಾಗ್ರೋ ಭದ್ರಂ ತೇಽಸ್ತು ಸದಾ ವಿಭೋ ॥ ೩೩

---

ಆದರೆ ಅವಳು ಪತಿಯ ಹಿತವನ್ನು ಚಿಂತಿಸುತ್ತ ಅವನ ಶುಶ್ರೂಷೆಯನ್ನು ಮಾಡಲೇಬೇಕು (೨೭). ಪುರಾತನ ಕಾಲದಿಂದ ಈ ಧರ್ಮವು ಲೋಕದಲ್ಲಿ ನಡೆಯುತ್ತ ಬಂದಿದೆ. ವೇದದಲ್ಲಿ ಶ್ರುತವಾಗಿದೆ. ಧರ್ಮಶಾಸ್ತ್ರದಲ್ಲಿ ಸ್ಮೃತವಾಗಿದೆ. ದೇವಿ, ಹೋಮಗಳನ್ನು ಮಾಡುವಾಗ ಪುಷ್ಪಗಂಧಾದಿಗಳಿಂದ ದೇವತೆಗಳನ್ನೂ ಆಚಾರನಿಷ್ಠರಾದ ಬ್ರಾಹ್ಮಣರನ್ನೂ ನನಗೋಸ್ಕರ ಪೂಜಿಸುತ್ತಿರು. ಹೀಗೆ ನಾನು ಬರುವ ನಿರೀಕ್ಷಣೆಯಲ್ಲಿ ಕಾಲವನ್ನು ಕಳೆಯುತ್ತಿರು (೨೮-೨೯). ಸ್ನಾನಾದಿ ನಿಯಮಗಳಲ್ಲಿದ್ದು ಆಹಾರನಿಯಮವನ್ನು ಕೈಕೊಂಡು ಪತಿಶುಶ್ರೂಷೆಯಲ್ಲಿ ನಿರತಳಾಗಿರು. ನಾನು ಹಿಂದಿರುಗಿ ಬಂದಾಗ ಧರ್ಮಶೀಲರಲ್ಲಿ ಶ್ರೇಷ್ಠನಾದ ಮಹಾರಾಜನು ಜೀವವನ್ನು ಹಿಡಿದಿದ್ದರೆ, ನಿನ್ನ ಇಷ್ಟಾರ್ಥಗಳೆಲ್ಲವೂ ಫಲಿಸುತ್ತವೆ" ಎಂದು ಹೇಳಿದನು (೩೦-೩೧). ಆಗ ಕೌಸಲ್ಯೆಯು ಅಶ್ರುಪೂರ್ಣನಯನೆಯಾಗಿ ಪುತ್ರನನ್ನು ಅಗಲಬೇಕಾಯಿತೆಂಬ ದುಃಖದಿಂದ ತಳಮಳಿಸುತ್ತ ಹೇಳಿದಳು : "ವತ್ಸ, ಹೊರಟುಹೋಗಲು ನೀನು ದೃಢವಾಗಿ ಸಂಕಲ್ಪಿಸಿದ್ದೀಯೆ. ನಿನ್ನನ್ನು ತಡೆಯಲು ನನಗೆ ಶಕ್ತಿಯಿಲ್ಲ. ಕಾಲಗತಿಯನ್ನು ಮೀರಲು ಯಾರಿಗೂ ಸಾಧ್ಯವಿಲ್ಲವೆಂಬುದು

ಪುನಸ್ತ್ವಯಿ ನಿವೃತ್ತೇ ತು ಭವಿಷ್ಯಾಮಿ ಗತಕ್ಲಮಾ ।
ಪ್ರತ್ಯಾಗತೇ ಮಹಾಭಾಗೇ ಕೃತಾರ್ಥೇ ಚರಿತವ್ರತೇ ॥ ೩೪

ಪಿತುರಾನೃಣ್ಯತಾಂ ಪ್ರಾಪ್ತೇ ತ್ವಯಿ ಲಪ್ಸ್ಯೇ ಪರಂ ಸುಖಮ್ ।
ಕೃತಾಂತಸ್ಯ ಗತಿಃ ಪುತ್ರ ದುರ್ವಿಭಾವ್ಯಾ ಸದಾ ಭುವಿ ॥ ೩೫

ಯಸ್ತ್ವಾಂ ಸಂಚೋದಯತಿ ಮೇ ವಚ ಆಚ್ಛಿದ್ಯ ರಾಘವ ।
ಗಚ್ಛೇದಾನೀಂ ಮಹಾಬಾಹೋ ಕ್ಷೇಮೇಣ ಪುನರಾಗತಃ ॥ ೩೬

ನಂದಯಿಷ್ಯಸಿ ಮಾಂ ಪುತ್ರ ಸಾಮ್ನಾ ವಾಕ್ಯೇನ ಚಾರುಣಾ ।
ಅಪೀದಾನೀಂ ಸ ಕಾಲಃ ಸ್ಯಾದ್ವನಾತ್ಪ್ರತ್ಯಾಗತಂ ಪುನಃ ॥ ೩೭

ಯತ್ತ್ವಾಂ ಪುತ್ರಕ ಪಶ್ಯೇಯಂ ಜಟಾವಲ್ಕಲಧಾರಿಣಮ್ ॥

ತಥಾ ಹಿ ರಾಮಂ ವನವಾಸನಿಶ್ಚಿತಂ
ಸಮೀಕ್ಷ್ಯ ದೇವೀ ಪರಮೇಣ ಚೇತಸಾ ।

---

ನಿಶ್ಚಯ. ಅಪ್ಪಾ ಮಗನೆ, ನೀನು ಒಂದೇ ಮನಸ್ಸಿನಿಂದ ಹೋಗಿ ಬಾ. ನಿನಗೆ ಸರ್ವದಾ ಮಂಗಳವಾಗಲಿ! (೩೨-೩೩). ನೀನು ಕಾಡಿನಿಂದ ಬಂದ ಮೇಲೆ ನನ್ನ ಕಷ್ಟವು ಪರಿಹಾರವಾಗುವುದು. ಮಹಾಭಾಗನಾದ ನೀನು ಪಿತೃವಾಕ್ಯ ಪರಿಪಾಲನವೆಂಬ ವ್ರತವನ್ನು ನಡೆಸಿ, ತಂದೆಯ ಋಣವನ್ನು ತೀರಿಸಿ, ಕೃತಾರ್ಥನಾಗಿ ಬಂದ ಮೇಲೆ ನಾನು ಸಂತೋಷವನ್ನು ಅನುಭವಿಸುವೆನು. ಪ್ರಪಂಚದಲ್ಲಿ ವಿಧಿಯ ಸಂಕಲ್ಪವು ಯಾರಿಗೂ ತಿಳಿಯದು (೩೪-೩೫). ಆ ವಿಧಿಯು ನನ್ನ ಮಾತನ್ನು ಕಟ್ಟಿಸಿ ವನಕ್ಕೆ ಹೋಗೆಂದು ನಿನ್ನನ್ನು ಪ್ರೇರಿಸುತ್ತಿದೆ. ಕಂದ, ಈಗ ನೀನು ಹೋಗಬಹುದು. ಮಹಾಬಾಹುವಾದ ನೀನು ಕ್ಷೇಮವಾಗಿ ಪುನಃ ಬಂದು ಸವಿಮಾತುಗಳಿಂದ ನನ್ನನ್ನು ಆನಂದಪಡಿಸುವಂತಾಗಲಿ! ನೀನು ಜಟಾವಲ್ಕಲ ಧಾರಿಯಾಗಿ ವನದಿಂದ ಹಿಂದಿರುಗಿ ಬಂದುದನ್ನು ನಾನು ನೋಡುವ ಕಾಲ ಈಗಲೆ ಬಂದುಬಿಡಬಾರದೆ!" ಎಂದು ಹಲುಬಿದಳು (೩೬-೩೭). ಅನಂತರ ಕೌಸಲ್ಯಾ ದೇವಿಯು ವನವಾಸಕ್ಕಾಗಿ ನಿಶ್ಚಯಿಸಿದ ಶುಭಲಕ್ಷಣಾಂಕಿತನಾದ ಶ್ರೀರಾಮ

ಉವಾಚ ರಾಮಂ ಶುಭಲಕ್ಷಣಂ ವಚೋ
ಬಭೂವ ಚ ಸ್ವಸ್ತ್ಯಯನಾಭಿಕಾಂಕ್ಷಿಣೇ ॥ ೩೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ವಿಂಶಃ ಸರ್ಗಃ

---

## ಪಂಚವಿಂಶಃ ಸರ್ಗಃ

### ಮಾತೃಸ್ವಸ್ತ್ಯಯನಮ್

ಸಾಽಪನೀಯ ತಮಾಯಾಸಮುಪಸ್ಪೃಶ್ಯ ಜಲಂ ಶುಚಿ ।
ಚಕಾರ ಮಾತಾ ರಾಮಸ್ಯ ಮಂಗಲಾನಿ ಮನಸ್ವಿನೀ ॥ ೧
ನ ಶಕ್ಯಸೇ ವಾರಯಿತುಂ ಗಚ್ಛೇದಾನೀಂ ರಘೂತ್ತಮ ।
ಶೀಘ್ರಮೇವ ನಿವರ್ತಸ್ವ ವರ್ತಸ್ವ ಚ ಸತಾಂ ಕ್ರಮೇ ॥ ೨

---

ನನ್ನು ಆದರದಿಂದ ಈಕ್ಷಿಸುತ್ತ ಮಂಗಳಾಶೀರ್ವಾದಗಳನ್ನು ಹೇಳಲಾರಂಭಿಸಿದಳು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತುನಾಲ್ಕನೆಯ ಸರ್ಗ

---

## ಸರ್ಗ ೨೫

### ಕೌಸಲ್ಯೆಯು ಶ್ರೀರಾಮನಿಗೆ ಮಂಗಳಾಶೀರ್ವಾದಗಳನ್ನು ಮಾಡುವುದು.

ಕೌಸಲ್ಯೆಯು ಧೈರ್ಯವನ್ನು ತಂದುಕೊಂಡು ಅಳುವುದನ್ನು ನಿಲ್ಲಿಸಿದಳು. ಆ ತಾಯಿಯು ಶುದ್ಧವಾದ ಜಲದಿಂದ ಮುಖವನ್ನು ತೊಳೆದು ಆಚಮನಮಾಡಿ ರಾಮನಿಗೆ ಮಂಗಳವಾಗಲೆಂದು ಹಾರೈಸುತ್ತ ಹೀಗೆಂದಳು (೧) : "ರಾಮ, ನಿನ್ನನ್ನು ತಡೆಯಲು ನನಗೆ ಶಕ್ತಿಯಿಲ್ಲ. ಈಗ ನೀನು ಹೋಗಿ ಬಾ. ಅವಧಿಯು ಕಳೆದ ಕೂಡಲೆ ತಡಮಾಡದೆ ಹಿಂದಿರುಗಿ ಬಾ.

ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನ ಚ ।
ಸ ವೈ ರಾಘವಶಾರ್ದೂಲ ಧರ್ಮಸ್ತ್ವಾಮಭಿರಕ್ಷತು ॥ ೩

ಯೇಭ್ಯಃ ಪ್ರಣಮಸೇ ಪುತ್ರ ಚೈತ್ಯೇಷ್ವಾಯತನೇಷು ಚ ।
ತೇ ಚ ತ್ವಾಮಭಿರಕ್ಷಂತು ವನೇ ಸಹ ಮಹರ್ಷಿಭಿಃ ॥ ೪

ಯಾನಿ ದತ್ತಾನಿ ತೇಽಸ್ತ್ರಾಣಿ ವಿಶ್ವಾಮಿತ್ರೇಣ ಧೀಮತಾ ।
ತಾನಿ ತ್ವಾಮಭಿರಕ್ಷಂತು ಗುಣೈಃ ಸಮುದಿತಂ ಸದಾ ॥ ೫

ಪಿತೃಶುಶ್ರೂಷಯಾ ಪುತ್ರ ಮಾತೃಶುಶ್ರೂಷಯಾ ತಥಾ ।
ಸತ್ಯೇನ ಚ ಮಹಾಬಾಹೋ ಚಿರಂ ಜೀವಾಭಿರಕ್ಷಿತಃ ॥ ೬

ಸಮಿತ್ಕುಶಪವಿತ್ರಾಣಿ ವೇದ್ಯಶ್ಚಾಯತನಾನಿ ಚ ।
ಸ್ಥಂಡಿಲಾನಿ ಚ ವಿಪ್ರಾಣಾಂ ಶೈಲಾ ವೃಕ್ಷಾಃ ಕ್ಷಪಾ ಹ್ರದಾಃ ॥ ೭

ಪತಂಗಾಃ ಪನ್ನಗಾಃ ಸಿಂಹಾಸ್ತ್ವಾಂ ರಕ್ಷಂತು ನರೋತ್ತಮ ।
ಸ್ವಸ್ತಿ ಸಾಧ್ಯಾಶ್ಚ ವಿಶ್ವೇ ಚ ಮರುತಶ್ಚ ಮಹರ್ಷಯಃ ॥ ೮

---

ಸಜ್ಜನರು ಹೋದ ದಾರಿಯಲ್ಲಿರು. ಯಾವ ಧರ್ಮವನ್ನು ನೀನು ಧೈರ್ಯದಿಂದಲೂ ನಿಯಮದಿಂದಲೂ ಕಾಪಾಡುತ್ತಿರುವೆಯೊ ಆ ಧರ್ಮವೇ ನಿನ್ನನ್ನು ಕಾಪಾಡಲಿ ! (೨-೩). ವತ್ಸ, ಗುಡಿಗಳಲ್ಲಿ - ದೇವಾಲಯಗಳಲ್ಲಿ ನೀನು ಯಾರಿಗೆ ವಂದಿಸುತ್ತಿರುವೆಯೊ ಆ ದೇವತೆಗಳೂ ಮಹರ್ಷಿಗಳೂ ವನದಲ್ಲಿ ನಿನ್ನನ್ನು ಕಾಪಾಡಲಿ ! ಪ್ರಾಜ್ಞರಾದ ವಿಶ್ವಾಮಿತ್ರ ಮುನಿಗಳು ನಿನಗೆ ಯಾವ ಮಂತ್ರಾಸ್ತ್ರಗಳನ್ನು ಉಪದೇಶಿಸಿದರೊ, ಅವು ಗುಣಶಾಲಿಯಾದ ನಿನ್ನನ್ನು ಸದಾ ಕಾಪಾಡಲಿ! (೪-೫). ಮಗು, ನೀನು ಮಾಡಿದ ಪಿತೃಸೇವೆ, ನಿನ್ನ ಮಾತೃಸೇವೆ, ನಿನ್ನ ಸತ್ಯ - ಇವೆಲ್ಲವೂ ನಿನ್ನನ್ನು ರಕ್ಷಿಸಿ ದೀರ್ಘಕಾಲ ಬದುಕುವಂತೆ ಮಾಡಲಿ! ನೀನು ಅರಣ್ಯದಲ್ಲಿರುವಾಗ ಅಲ್ಲಿರುವ ಸಮಿತ್ತುಗಳು,* ದರ್ಭೆಗಳು, ಪವಿತ್ರಗಳು, ಅಗ್ನಿವೇದಿಕೆಗಳು, ಆಶ್ರಮಗಳು, ಬ್ರಾಹ್ಮಣರು ಮಾಡಿಕೊಂಡಿರುವ ಪೂಜಾಸ್ಥಳಗಳು, ಬೆಟ್ಟಗಳು, ವೃಕ್ಷಗಳು, ಗಿಡಗಳು ಮತ್ತು ಕೊಳಗಳು ನಿನ್ನನ್ನು ಕಾಪಾಡಲಿ! (೬-೭). ಹಕ್ಕಿ

---

* ಸಮಿತ್ತು ಮೊದಲಾದ ಶಬ್ದಗಳಿಂದ ಅವುಗಳ ಅಧಿಷ್ಠಾತೃದೇವತೆಗಳನ್ನು ಗ್ರಹಿಸಬೇಕು.

ಸ್ವಸ್ತಿ ಧಾತಾ ವಿಧಾತಾ ಚ ಸ್ವಸ್ತಿ ಪೂಷಾ ಭಗೋಽರ್ಯಮಾ ।
ಲೋಕಪಾಲಾಶ್ಚ ತೇ ಸರ್ವೇ ವಾಸವಪ್ರಮುಖಾಸ್ತಥಾ ॥ ೯

ಋತವಶ್ಚೈವ ಪಕ್ಷಾಶ್ಚ ಮಾಸಾಃ ಸಂವತ್ಸರಾಃ ಕ್ಷಪಾಃ ।
ದಿನಾನಿ ಚ ಮುಹೂರ್ತಾಶ್ಚ ಸ್ವಸ್ತಿ ಕುರ್ವಂತು ತೇ ಸದಾ ॥ ೧೦

ಸ್ಮೃತಿರ್ಧೃತಿಶ್ಚ ಧರ್ಮಶ್ಚ ಪಾತು ತ್ವಾಂ ಪುತ್ರ ಸರ್ವತಃ ।
ಸ್ಕಂದಶ್ಚ ಭಗವಾನ್ದೇವಃ ಸೋಮಶ್ಚ ಸಬೃಹಸ್ಪತಿಃ ॥ ೧೧

ಸಪ್ತರ್ಷಯೋ ನಾರದಶ್ಚ ತೇ ತ್ವಾಂ ರಕ್ಷಂತು ಸರ್ವತಃ ।
ಯೇ ಚಾಪಿ ಸರ್ವತಃ ಸಿದ್ಧಾ ದಿಶಶ್ಚ ಸದಿಗೀಶ್ವರಾಃ ॥ ೧೨

ಸ್ತುತಾ ಮಯಾ ವನೇ ತಸ್ಮಿನ್ ಪಾಂತು ತ್ವಾಂ ಪುತ್ರ ನಿತ್ಯಶಃ ।
ಶೈಲಾಃ ಸರ್ವೇ ಸಮುದ್ರಾಶ್ಚ ರಾಜಾ ವರುಣ ಏವ ಚ ॥ ೧೩

ದ್ಯೌರಂತರಿಕ್ಷಂ ಪೃಥಿವೀ ನದ್ಯಃ ಸರ್ವಾಸ್ತಥೈವ ಚ ।
ನಕ್ಷತ್ರಾಣಿ ಚ ಸರ್ವಾಣಿ ಗ್ರಹಾಶ್ಚ ಸಹದೇವತಾಃ ॥ ೧೪

---

ಹಾವು ಸಿಂಹಗಳು ನಿನ್ನನ್ನು ಕಾಪಾಡಲಿ! ಸಾಧ್ಯರೂ ವಿಶ್ವೇದೇವತೆಗಳೂ ಮರುತ್ತುಗಳೂ ಮಹರ್ಷಿಗಳೂ ನಿನಗೆ ಮಂಗಳವನ್ನು ಮಾಡಲಿ! ಧಾತ, ವಿಧಾತ , ಪೂಷ, ಭಗ, ಅರ್ಯಮ ಮತ್ತು ಇಂದ್ರಾದಿ ದಿಕ್ಪಾಲಕರು ನಿನಗೆ ಮಂಗಳವನ್ನುಂಟು ಮಾಡಲಿ! (೮-೯). ಋತು ಪಕ್ಷ ಮಾಸ ಸಂವತ್ಸರಗಳು, ಹಗಲು ರಾತ್ರಿಗಳು, ಮುಹೂರ್ತಗಳು ನಿನಗೆ ಸರ್ವದಾ ಮಂಗಳವನ್ನುಂಟು ಮಾಡಲಿ! ಧ್ಯಾನ ಏಕಾಗ್ರತೆ ಧರ್ಮ ಇವು ನಿನ್ನನ್ನು ಕಾಪಾಡಲಿ! ಭಗವಾನ್ ಕುಮಾರಸ್ವಾಮಿಯೂ ಸೋಮನೂ ಬೃಹಸ್ಪತಿಯೂ ಕಾಪಾಡಲಿ! (೧೦-೧೧). ಸಪ್ತರ್ಷಿಗಳೂ ನಾರದ ಮುನಿಗಳೂ ನಿನ್ನನ್ನು ರಕ್ಷಿಸಲಿ! ಸಿದ್ಧಪುರುಷರನ್ನೂ ದಿಕ್ಕುಗಳನ್ನೂ ದಿಕ್ಪಾಲಕರನ್ನೂ ಬೇಡಿಕೊಳ್ಳುತ್ತೇನೆ - ಅವರು ನಿನ್ನನ್ನು ಕಾಡಿನಲ್ಲಿ ರಕ್ಷಿಸಲಿ! ಸಕಲ ನಕ್ಷತ್ರಗಳೂ ಗ್ರಹಗಳೂ ದೇವತೆಗಳೂ ರಕ್ಷಿಸಲಿ! ಹಗಲು ರಾತ್ರಿಗಳು ಸಂಧ್ಯಾದೇವತೆಗಳು

ಅಹೋರಾತ್ರೇ ತಥಾ ಸಂಧ್ಯೇ ಪಾಂತು ತ್ವಾಂ ವನಮಾಶ್ರಿತಮ್ ।
ಋತವಶ್ಚೈವ ಷಟ್ ಪುಣ್ಯಾ ಮಾಸಾಃ ಸಂವತ್ಸರಾಸ್ತಥಾ ॥ ೧೫

ಕಲಾಶ್ಚ ಕಾಷ್ಠಾಶ್ಚ ತಥಾ ತವ ಶರ್ಮ ದಿಶಂತು ತೇ ।
ಮಹಾವನೇ ವಿಚರತೋ ಮುನಿವೇಷಸ್ಯ ಧೀಮತಃ ॥ ೧೬

ತವಾದಿತ್ಯಾಶ್ಚ ದೈತ್ಯಾಶ್ಚ ಭವಂತು ಸುಖದಾಃ ಸದಾ ।
ರಾಕ್ಷಸಾನಾಂ ಪಿಶಾಚಾನಾಂ ರೌದ್ರಾಣಾಂ ಕ್ರೂರಕರ್ಮಣಾಮ್ ॥

ಕ್ರವ್ಯಾದಾನಾಂ ಚ ಸರ್ವೇಷಾಂ ಮಾ ಭೂತ್ಪುತ್ರಕ ತೇ ಭಯಮ್ ।
ಪ್ಲವಗಾ ವೃಶ್ಚಿಕಾ ದಂಶಾ ಮಶಕಾಶ್ಚೈವ ಕಾನನೇ ॥ ೧೮

ಸರೀಸೃಪಾಶ್ಚ ಕೀಟಾಶ್ಚ ಮಾ ಭೂವನ್ ಗಹನೇ ತವ ।
ಮಹಾದ್ವಿಪಾಶ್ಚ ಸಿಂಹಾಶ್ಚ ವ್ಯಾಘ್ರಾ ಋಕ್ಷಾಶ್ಚ ದಂಷ್ಟ್ರಿಣಃ ॥ ೧೯

ಮಹಿಷಾಃ ಶೃಂಗಿಣೋ ರೌದ್ರಾ ನ ತೇ ದ್ರುಹ್ಯಂತು ಪುತ್ರಕ ।
ನೃಮಾಂಸಭೋಜಿನೋ ರೌದ್ರಾ ಯೇ ಚಾನ್ಯೇ ಸತ್ತ್ವಜಾತಯಃ ॥

---

ಆರು ಋತುಗಳು ಮಾಸಗಳು ಸಂವತ್ಸರಗಳು ಕಲೆಗಳು ಮತ್ತು ಕಾಷ್ಠಗಳು* ಮಹಾರಣ್ಯದಲ್ಲಿ ಮುನಿವೇಷಧಾರಿಯಾಗಿ ಸಂಚರಿಸುವ ನಿನಗೆ ಸೌಖ್ಯವನ್ನುಂಟು ಮಾಡಲಿ ! (೧೨-೧೬). ಆದಿತ್ಯರೂ ದೈತ್ಯರೂ ನಿನಗೆ ಸುಖವನ್ನುಂಟುಮಾಡಲಿ! ರಾಕ್ಷಸರು ಪಿಶಾಚಗಳು ಕ್ರೂರರಾದ ಇತರ ಮಾಂಸಾಹಾರಿಗಳು - ಇವರಿಂದ ನಿನಗೆ ಆಪತ್ತು ಬರದಿರಲಿ! ವತ್ಸ, ಕಪಿ ಚೇಳು ಹಾವು ಹುಳು ಹುಪ್ಪಟೆಗಳಿಂದ ಯಾವ ಭಯವೂ ಇಲ್ಲದಿರಲಿ! ಕಾಡಾನೆ ಸಿಂಹ ಹುಲಿ ಕರಡಿ ಕಾಡುಹಂದಿ ಕಾಡುಕೋಣ - ಮೊದಲಾದವು ನಿನಗೆ ತೊಂದರೆಯನ್ನು ಮಾಡದಂತಾಗಲಿ! ನರಮಾಂಸವನ್ನು ತಿನ್ನುವ ಭಯಂಕರ ಪ್ರಾಣಿಗಳನ್ನೆಲ್ಲ ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಅವು ನಿನಗೆ

---

* ಹದಿನೆಂಟು ನಿಮಿಷಗಳಿಗೆ ಒಂದು ಕಾಷ್ಠ; ಮೂವತ್ತು ಕಾಷ್ಠಗಳಿಗೆ ಒಂದು ಕಲೆ. ನಿಮಿಷವೆಂದರೆ ಸುಮಾರು ನಾಲ್ಕು ಸೆಕೆಂಡಿನಷ್ಟು ಕಾಲವಾಗಬಹುದು.

ದುಃಖದಿಂದ ವ್ಯಾಕುಲಳಾದ ಕೌಸಲ್ಯೆ ಪುತ್ರನ ಮೇಲಿನ ಪ್ರೇಮಾತಿಶಯದಿಂದ ಬಹುವಿಧದಲ್ಲಿ ಮಂಗಳವನ್ನು ಕೋರಿದ್ದಾಳೆ; ಪುನರುಕ್ತಿಯನ್ನಾಡಿದ್ದಾಳೆ. ಇದು ಕಾವ್ಯಕ್ಕೆ ದೂಷಣವಲ್ಲ; ಭೂಷಣ.

ಮಾ ಚ ತ್ವಾಂ ಹಿಂಸಿಷುಃ ಪುತ್ರ ಮಯಾ ಸಂಪೂಜಿತಾಸ್ತ್ವಿಹ ।
ಆಗಮಾಸ್ತೇ ಶಿವಾಃ ಸಂತು ಸಿಧ್ಯಂತು ಚ ಪರಾಕ್ರಮಾಃ ॥ ೨೧

ಸರ್ವಸಂಪತ್ತಯೇ ರಾಮ ಸ್ವಸ್ತಿಮಾನ್ ಗಚ್ಛ ಪುತ್ರಕ ।
ಸ್ವಸ್ತಿ ತೇಽಸ್ತ್ವಂತರಿಕ್ಷೇಭ್ಯಃ ಪಾರ್ಥಿವೇಭ್ಯಃ ಪುನಃ ಪುನಃ ॥ ೨೨

ಸರ್ವೇಭ್ಯಶ್ಚೈವ ದೇವೇಭ್ಯೋ ಯೇ ಚ ತೇ ಪರಿಪಂಥಿನಃ ।
ಶುಕ್ರಃ ಸೋಮಶ್ಚ ಸೂರ್ಯಶ್ಚ ಧನದೋಽಥ ಯಮಸ್ತಥಾ ॥ ೨೩

ಪಾಂತು ತ್ವಾಮರ್ಚಿತಾ ರಾಮ ದಂಡಕಾರಣ್ಯವಾಸಿನಮ್ ।
ಅಗ್ನಿರ್ವಾಯುಸ್ತಥಾ ಧೂಮೋ ಮಂತ್ರಾಶ್ಚರ್ಷಿಮುಖಾಚ್ಚ್ಯುತಾಃ ॥ ೨೪

ಉಪಸ್ಪರ್ಶನಕಾಲೇ ತು ಪಾಂತು ತ್ವಾಂ ರಘುನಂದನ ।
ಸರ್ವಲೋಕಪ್ರಭುರ್ಬ್ರಹ್ಮಾ ಭೂತಭರ್ತಾ ತಥರ್ಷಯಃ ॥ ೨೫

ಯೇ ಚ ಶೇಷಾಃ ಸುರಾಃ ಸರ್ವೇ ರಕ್ಷಂತು ವನವಾಸಿನಮ್ ।
ಇತಿ ಮಾಲ್ಯೈಃ ಸುರಗಣಾನ್ ಗಂಧೈಶ್ಚಾಪಿ ಯಶಸ್ವಿನೀ ॥ ೨೬

---

ಯಾವ ಬಾಧೆಯನ್ನೂ ಕೊಡದಿರಲಿ! ನೀನು ಸಂಚರಿಸುವ ಮಾರ್ಗಗಳೆಲ್ಲವೂ ನಿನಗೆ ಶುಭವನ್ನು ತರಲಿ! ನಿನ್ನ ಪರಾಕ್ರಮವು ಫಲಿಸಲಿ ! (೧೭-೨೧). ರಾಮ, ನನ್ನ ಕಂದ, ನಿನ್ನ ಸಮಸ್ತ ಇಷ್ಟಾರ್ಥವೂ ಸಿದ್ಧಿಸಲಿ! ನಿನಗೆ ಕಲ್ಯಾಣವಾಗಲಿ! ಅಂತರಿಕ್ಷದಲ್ಲಿರುವ, ಭೂಮಿಯಲ್ಲಿರುವ - ಸಕಲ ದೇವತೆಗಳೂ ನಿನಗೆ ಒಳ್ಳೆಯದನ್ನು ಮಾಡಲಿ! ಕ್ರೂರಗ್ರಹಗಳೆಲ್ಲವೂ ಶಾಂತವಾಗಲಿ! ಶುಕ್ರ ಚಂದ್ರ ಸೂರ್ಯ ಕುಬೇರ ಯಮ - ಇವರನ್ನು ನಾನು ಅರ್ಚಿಸುತ್ತೇನೆ. ಇವರೆಲ್ಲರೂ ದಂಡಕಾರಣ್ಯದಲ್ಲಿ ನಿನ್ನನ್ನು ಪಾಲಿಸಲಿ! (೨೨-೨೩). ನೀನು ಸ್ನಾನಮಾಡುವಾಗ ಅಗ್ನಿ, ವಾಯು, ಅಗ್ನಿಹೋತ್ರ ಧೂಮ, ಋಷಿಗಳು, ನಿನಗೆ ಉಪದೇಶಿಸಿದ ಮಂತ್ರಗಳು ನಿನ್ನನ್ನು ರಕ್ಷಿಸಲಿ! ರಘುನಂದನ, ಸಕಲಪ್ರಾಣಿಗಳಿಗೆ ರಕ್ಷಕನೂ ಸರ್ವಲೋಕಗಳಿಗೆ ಸ್ವಾಮಿಯೂ ಆದ ಬ್ರಹ್ಮದೇವನೂ ಋಷಿಗಳೂ ನಾನು ಹೇಳದೆ ಬಿಟ್ಟಿರುವ ಸಮಸ್ತ ದೇವತೆಗಳೂ ಅರಣ್ಯವಾಸಿಯಾದ ನಿನ್ನನ್ನು ರಕ್ಷಿಸಲಿ" ಎಂದು ಹೇಳಿ ಕೌಸಲ್ಯೆಯು ಗಂಧಪುಷ್ಪಾದಿಗಳಿಂದ ದೇವತೆಗಳನ್ನು ಪೂಜಿಸಿದಳು; ಸ್ತೋತ್ರ

ಸ್ತುತಿಭಿಶ್ಚಾನುರೂಪಾಭಿರಾನರ್ಚಾಯತಲೋಚನಾ ।
ಜ್ವಲನಂ ಸಮುಪಾದಾಯ ಬ್ರಾಹ್ಮಣೇನ ಮಹಾತ್ಮನಾ ॥ ೨೭

ಹಾವಯಾಮಾಸ ವಿಧಿನಾ ರಾಮಮಂಗಲಕಾರಣಾತ್ ।
ಘೃತಂ ಶ್ವೇತಾನಿ ಮಾಲ್ಯಾನಿ ಸಮಿಧಃ ಶ್ವೇತಸರ್ಷಪಾನ್ ॥ ೨೮

ಉಪಸಂಪಾದಯಾಮಾಸ ಕೌಸಲ್ಯಾ ಪರಮಾಂಗನಾ ।
ಉಪಾಧ್ಯಾಯಃ ಸ ವಿಧಿನಾ ಹುತ್ವಾ ಶಾಂತಿಮನಾಮಯಮ್ ॥ ೨೯

ಹುತದ್ರವ್ಯಾವಶೇಷೇಣ ಬಾಹ್ಯಂ ಬಲಿಮಕಲ್ಪಯತ್ ।
ಮಧುದಧ್ಯಕ್ಷತಘೃತೈಃ ಸ್ವಸ್ತಿ ವಾಚ್ಯ ದ್ವಿಜಾಂಸ್ತತಃ ॥ ೩೦

ವಾಚಯಾಮಾಸ ರಾಮಸ್ಯ ವನೇ ಸ್ವಸ್ತ್ಯಯನಕ್ರಿಯಾಃ ।
ತತಸ್ತಸ್ಮೈ ದ್ವಿಜೇಂದ್ರಾಯ ರಾಮಮಾತಾ ಯಶಸ್ವಿನೀ ॥ ೩೧

ದಕ್ಷಿಣಾಂ ಪ್ರದದೌ ಕಾಮ್ಯಾಂ ರಾಘವಂ ಚೇದಮಬ್ರವೀತ್ ।
ಯನ್ಮಂಗಲಂ ಸಹಸ್ರಾಕ್ಷೇ ಸರ್ವದೇವನಮಸ್ಕೃತೇ ॥ ೩೨

---

ಗಳಿಂದ ಸ್ತುತಿಸಿದಳು (೨೪-೨೬). ಮತ್ತು ಶ್ರೀರಾಮನಿಗೆ ಮಂಗಳವಾಗಲೆಂದು ಮಹಾತ್ಮನಾದ ಬ್ರಾಹ್ಮಣನಿಂದ ಅಗ್ನಿಯಲ್ಲಿ ವಿಧಿವತ್ತಾಗಿ ಹವನ ಮಾಡಿಸಿದಳು. ಇದಕ್ಕೋಸ್ಕರ ತುಪ್ಪ, ಬಿಳಿಯ ಹೂಗಳು, ಸಮಿತ್ತುಗಳು, ಬಿಸಿಯ ಸಾಸಿವೆ - ಮುಂತಾದ ದ್ರವ್ಯಗಳನ್ನು ತರಿಸಿದಳು (೨೭-೨೮). ಪುರೋಹಿತನು ಶ್ರೀರಾಮನಿಗೆ ಕ್ಷೇಮವಾಗಲೆಂದು ಶಾಂತಿಹೋಮವನ್ನು ಮಾಡಿ ಅವಶಿಷ್ಟವಾದ ಹವಿಸ್ಸಿನಿಂದ ಹೊರಗಡೆ ಬಲಿಹರಣವನ್ನು ಮಾಡಿದನು. ಅನಂತರ ಕೌಸಲ್ಯಾದೇವಿಯು ಜೇನುತುಪ್ಪ, ಮೊಸರು, ಅಕ್ಷತೆ, ತುಪ್ಪಗಳನ್ನು ಬ್ರಾಹ್ಮಣರ ಬಳಿಯಲ್ಲಿಟ್ಟು ಪುಣ್ಯಾಹವನ್ನು ಹೇಳಿಸಿ ರಾಮನಿಗೆ ವನದಲ್ಲಿ ಕ್ಷೇಮವಾಗಲೆಂದು ಅವರಿಂದ ಸ್ವಸ್ತಿಯನು ಹೇಳಿಸಿ ಆಶೀರ್ವಾದ ಮಾಡಿಸಿದಳು (೨೯-೩೦). ಆಮೇಲೆ ರಾಮಮಾತೆಯು ಹೋಮಮಾಡಿದ ಬ್ರಾಹ್ಮಣ ಶ್ರೇಷ್ಠನಿಗೆ ಯಥೇಷ್ಟವಾಗಿ ದಕ್ಷಿಣೆಯನ್ನು ಕೊಟ್ಟು ಶ್ರೀರಾಮನನ್ನು ನೋಡಿ ಹೀಗೆಂದಳು : "ರಾಮ, ಸಮಸ್ತ ದೇವತೆಗಳಿಂದ ವಂದಿತನಾದ ದೇವೇಂದ್ರನಿಗೆ ವೃತ್ರಾಸುರಸಂಹಾರಕ್ಕೆ ಹೊರಟಾಗ ಯಾವ ಮಂಗಳವಾಯಿತೊ, ಅದೇ

ವೃತ್ರನಾಶೇ ಸಮಭವತ್ತತ್ತೇ ಭವತು ಮಂಗಲಮ್ ।
ಯನ್ಮಂಗಲಂ ಸುಪರ್ಣಸ್ಯ ವಿನತಾಕಲ್ಪಯತ್ ಪುರಾ ॥ ೩೩

ಅಮೃತಂ ಪ್ರಾರ್ಥಯಾನಸ್ಯ ತತ್ತೇ ಭವತು ಮಂಗಲಮ್ ।
ಅಮೃತೋತ್ಪಾದನೇ ದೈತ್ಯಾನ್ ಘ್ನತೋ ವಜ್ರಧರಸ್ಯ ಯತ್ ॥ ೨೪

ಅದಿತಿರ್ಮಂಗಲಂ ಪ್ರಾದಾತ್ತತ್ತೇ ಭವತು ಮಂಗಲಮ್ ।
ತ್ರೀನ್ ವಿಕ್ರಮಾನ್ ಪ್ರಕ್ರಮತೋ ವಿಷ್ಣೋರಮಿತತೇಜಸಃ ॥ ೩೫

ಯದಾಸೀನ್ಮಂಗಲಂ ರಾಮ ತತ್ತೇ ಭವತು ಮಂಗಲಮ್ ।
ಋತವಃ ಸಾಗರಾ ದ್ವೀಪಾ ವೇದಾ ಲೋಕಾ ದಿಶಶ್ಚ ತೇ ॥ ೩೬

ಮಂಗಲಾನಿ ಮಹಾಬಾಹೋ ದಿಶಂತು ಶುಭಮಂಗಲಾಃ ।
ಇತಿ ಪುತ್ರಸ್ಯ ಶೇಷಾಂಶ್ಚ ಕೃತ್ವಾ ಶಿರಸಿ ಭಾಮಿನೀ ॥ ೩೭

ಗಂಧೈಶ್ಚಾಪಿ ಸಮಾಲಭ್ಯ ರಾಮಮಾಯತಲೋಚನಾ ।
ಓಷಧೀಂ ಚಾಪಿ ಸಿದ್ಧಾರ್ಥಾಂ ವಿಶಲ್ಯಕರಣೀಂ ಶುಭಾಮ್ ॥ ೩೮

---

ಮಂಗಳವು ನಿನಗಾಗಲಿ! (೩೧-೩೨). ಹಿಂದೆ ಗರುತ್ಮಂತನು ಅಮೃತವನ್ನು ತರಲು ಹೊರಟಾಗ ವಿನತೆಯು ಯಾವ ಮಂಗಳವನ್ನು ಮಾಡಿದಳೊ, ಅದೇ ಮಂಗಳವು ನಿನಗಾಗಲಿ! ಅಮೃತವನ್ನು ತೆಗೆದಾಗ ಇಂದ್ರನು ವಜ್ರಧಾರಿಯಾಗಿ ದೈತ್ಯರನ್ನು ಸಂಹರಿಸುವುದಕ್ಕೆ ಹೊರಡಲು ಅದಿತಿಯು ಯಾವ ಮಂಗಳವನ್ನು ಮಾಡಿದಳೊ, ಅದೇ ಮಂಗಳವು ನಿನಗಾಗಲಿ! (೩೩-೩೪). (ವಾಮನಾವತಾರದಲ್ಲಿ ಜಗತ್ತನ್ನು ಅಳೆಯಲು) ಮೂರು ಹೆಜ್ಜೆಗಳನ್ನಿಡುವುದಕ್ಕೆ ಹೊರಟಾಗ ಮಹಾತೇಜಸ್ವಿಯಾದ ವಿಷ್ಣುವಿಗೆ ಯಾವ ಮಂಗಳವಾಯಿತೊ, ಅದೇ ಮಂಗಳವು ನಿನಗಾಗಲಿ! ಎಲೈ ಮಹಾಬಾಹು, ಸಮಸ್ತ ಋತುಗಳೂ ಸಾಗರಗಳೂ ದ್ವೀಪಗಳೂ ವೇದಗಳೂ ಲೋಕಗಳೂ ದಿಕ್ಕುಗಳೂ ಮಂಗಳಮೂರ್ತಿಗಳಾಗಿ ನಿನಗೆ ಮಂಗಳ ಪರಂಪರೆಯನ್ನು ಅನುಗ್ರಹಿಸಲಿ!" ಎಂದು ಕೌಸಲ್ಯೆಯು ಶ್ರೀರಾಮನ ಶಿರಸ್ಸಿನ ಮೇಲೆ ಅಕ್ಷತೆಯನ್ನು ಹಾಕಿ ಆಶೀರ್ವದಿಸಿದಳು (೩೫-೩೭). ಕಣ್ಣನ್ನರಳಿಸಿ ಕೊಂಡು ರಾಮನನ್ನು ನೋಡುತ್ತ ಅವನ ಮೈಗೆ ಸುಗಂಧವನ್ನು ಲೇಪಿಸಿದಳು. ಅನಂತರ ಅಮೋಘವಾದ ವಿಶಲ್ಯಕರಣಿಯೆಂಬ ಶುಭಕರವಾದ ಮೂಲಿಕೆ

ಚಕಾರ ರಕ್ಷಾಂ ಕೌಸಲ್ಯಾ ಮಂತ್ರೈರಭಿಜಜಾಪ ಚ ।
ಉವಾಚಾತಿಪ್ರಹೃಷ್ಟೇವ ಸಾ ದುಃಖವಶವರ್ತಿನೀ ॥ ೩೯

ವಾಚ್ಯಾತ್ರೇಣ ನ ಭಾವೇನ ವಾಚಾ ಸಂಸಜ್ಜಮಾನಯಾ ।
ಆನಮ್ಯ ಮೂರ್ಧ್ನಿ ಚಾಘ್ರಾಯ ಪರಿಷ್ವಜ್ಯ ಯಶಸ್ವಿನೀ ॥ ೪೦

ಅವದತ್ ಪುತ್ರ ಸಿದ್ಧಾರ್ಥೋ ಗಚ್ಛ ರಾಮ ಯಥಾಸುಖಮ್ ।
ಅರೋಗಂ ಸರ್ವಸಿದ್ಧಾರ್ಥಮಯೋಧ್ಯಾಂ ಪುನರಾಗತಮ್ ॥ ೪೧

ಪಶ್ಯಾಮಿ ತ್ವಾಂ ಸುಖಂ ವತ್ಸ ಸುಸ್ಥಿತಂ ರಾಜವರ್ತ್ಮನಿ ।
ಪ್ರನಷ್ಟದುಃಖಸಂಕಲ್ಪಾ ಹರ್ಷವಿದ್ಯೋತಿತಾನನಾ ॥ ೪೨

ದ್ರಕ್ಷ್ಯಾಮಿ ತ್ವಾಂ ವನಾತ್ ಪ್ರಾಪ್ತಂ ಪೂರ್ಣಚಂದ್ರಮಿವೋದಿತಮ್ ।
ಭದ್ರಾಸನಗತಂ ರಾಮ ವನವಾಸಾದಿಹಾಗತಮ್ ॥ ೪೩

ದ್ರಕ್ಷ್ಯಾಮಿ ಚ ಪುನಸ್ತ್ವಾಂತು ತೀರ್ಣವಂತಂ ಪಿತುರ್ವಚಃ ।
ಮಂಗಲೈರುಪಸಂಪನ್ನೋ ವನವಾಸಾದಿಹಾಗತಃ ॥ ೪೪

---

ಯಿಂದ ಅವನಿಗೆ ರಕ್ಷೆಯನ್ನು ಕಟ್ಟಿ ಅಭಿಮಂತ್ರಿಸಿದಳು (೩೮). ಆಗ ಕೌಸಲ್ಯೆಯು ಹೃದಯದಲ್ಲಿ ದುಃಖದಿಂದ ಕುಸಿದುಹೋಗುತ್ತಿದ್ದರೂ ಮಾತಿನಲ್ಲಿ ಮಾತ್ರ ಹರ್ಷದಿಂದ ಇರುವವಳಂತೆ ತೋರಿಸಿಕೊಳ್ಳುತ್ತಿದ್ದಳು. ಆ ಯಶಸ್ವಿನಿಯು ಮಗನನ್ನು ಸೆಳೆದಪ್ಪಿಕೊಂಡು ಶಿರಸ್ಸನ್ನಾಘ್ರಾಣಿಸಿ ತಡವರಿಸುತ್ತ ತೊದಲುತ್ತ ಹೇಳಿದಳು (೩೯-೪೦) : "ಮಗು, ರಾಮ, ನಿನ್ನ ಇಷ್ಟ ನೆರವೇರಲಿ. ಸುಖವಾಗಿ ಹೋಗಿಬಾ. ಯಾವ ಬಾಧೆಯೂ ಇಲ್ಲದೆ ನಿನ್ನ ಉದ್ದೇಶವು ಸಿದ್ಧಿಸಲಿ. ನೀನು ಅಯೋಧ್ಯೆಗೆ ಸುಖವಾಗಿ ಹಿಂದಿರುಗಿ ಬಂದು ರಾಜ್ಯಯೋಗ್ಯವಾದ ಮಾರ್ಗದಲ್ಲಿ ಸ್ಥಿರವಾಗಿ ನಿಲ್ಲುವುದನ್ನು ನಾನು ಕಣ್ಣಾರೆ ನೋಡುವಂತಾಗಲಿ ! (೪೧). ಆಗ ನನ್ನ ದುಃಖವು ನೀಗಿ ಚಿಂತೆಯು ದೂರವಾಗುವುದು. ಪೂರ್ಣಚಂದ್ರನು ಉದಯಿಸಿದಂತೆ ನೀನು ಕಾಡಿನಿಂದ ಬಂದುದನ್ನು ನೋಡಿ ನಾನು ಹರ್ಷದಿಂದ ಹಿಗ್ಗುವಂತಾಗಲಿ! ರಾಮ, ತಂದೆಯ ಆಜ್ಞೆಯನ್ನು ಪಾಲಿಸಿ ವನವಾಸದಿಂದ ಇಲ್ಲಿಗೆ ಬಂದು ನೀನು ಸಿಂಹಾಸನದಲ್ಲಿ ಕುಳಿತಿರುವುದನ್ನು ನಾನು ನೋಡಬೇಕು. ಮಂಗಳಕರವಾಗಿ ವನವಾಸವನ್ನು ಮುಗಿಸಿ ಬಂದು ನನ್ನ ಸೊಸೆಯ ಮತ್ತು ನನ್ನ

ವಧ್ವಾ ಮಮ ಚ ನಿತ್ಯಂ ತ್ವಂ ಕಾಮಾನ್ ಸಂವರ್ದಯ ಪ್ರಭೋ ॥
ಮಯಾರ್ಚಿತಾ ದೇವಗಣಾಃ ಶಿವಾದಯೋ
ಮಹರ್ಷಯೋ ಭೂತಮಹಾಸುರೋರಗಾಃ ।
ಅಭಿಪ್ರಯಾತಸ್ಯ ವನಂ ಚಿರಾಯ ತೇ
ಹಿತಾನಿ ಕಾಂಕ್ಷಂತು ದಿಶಶ್ಚ ರಾಘವ ॥ ೪೫
ಇತೀವ ಚಾಶ್ರುಪ್ರತಿಪೂರ್ಣಲೋಚನಾ
ಸಮಾಪ್ಯ ಚ ಸ್ವಸ್ತ್ಯಯನಂ ಯಥಾವಿಧಿ ।
ಪ್ರದಕ್ಷಿಣಂ ಚೈವ ಚಕಾರ ರಾಘವಂ
ಪುನಃ ಪುನಶ್ಚಾಪಿ ನಿಪೀಡ್ಯ ಸಸ್ವಜೇ ॥ ೪೬
ತಥಾ ತು ದೇವ್ಯಾ ಸ ಕೃತಪ್ರದಕ್ಷಿಣೋ
ನಿಪೀಡ್ಯ ಮಾತುಶ್ಚರಣೌ ಪುನಃ ಪುನಃ ।
ಜಗಾಮ ಸೀತಾನಿಲಯಂ ಮಹಾಯಶಾಃ
ಸ ರಾಘವಃ ಪ್ರಜ್ವಲಿತಃ ಸ್ವಯಾ ಶ್ರಿಯಾ ॥ ೪೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚವಿಂಶಃ ಸರ್ಗಃ

---

ಕೋರಿಕೆಗಳನ್ನು ನಡೆಸು, ಮಗನೆ (೪೨-೪೪). ರಾಮ, ನಾನು ಪೂಜಿಸುವ ಈಶ್ವರನೇ ಮೊದಲಾದ ದೇವತೆಗಳೂ ಮಹರ್ಷಿಗಳೂ ಭೂತಾಸುರಪನ್ನಗರೂ ದಿಗ್ದೇವತೆಗಳೂ ಅರಣ್ಯಕ್ಕೆ ಹೋದ ನಿನಗೆ ಯಾವಾಗಲೂ ಒಳ್ಳೆಯದನ್ನು ಮಾಡುತ್ತಿರಲಿ" ಎಂದು ನುಡಿದಳು (೪೫).ಹೀಗೆ ಕೌಸಲ್ಯೆಯು ಬಾಷ್ಪಪೂರಿತನಯನೆಯಾಗಿ ಕ್ರಮವರಿತು ಆಶೀರ್ವಾದವನ್ನು ಮಾಡಿದಳು. ಅನಂತರ ರಕ್ಷಾರ್ಥವಾಗಿ ರಾಮನನ್ನು ಒಂದು ಸಲ ಸುತ್ತಿ ಬಂದು ಅವನನ್ನು ಮತ್ತೆ ಮತ್ತೆ ಬಿಗಿಯಾಗಿ ಅಪ್ಪಿಕೊಂಡಳು (೪೬). ರಘುವಂಶತಿಲಕನಾದ ಶ್ರೀರಾಮನು ತಾಯಿಯ ಎರಡು ಕಾಲುಗಳನ್ನೂ ಹಿಡಿದು ಬಾರಿಬಾರಿಗೂ ನಮಸ್ಕರಿಸಿದನು. ಆಮೇಲೆ ಮಹಾತೇಜಸ್ವಿಯಾದ ಆ ಕೀರ್ತಿವಂತನು ಸೀತೆಯ ಅಂತಃಪುರಕ್ಕೆ ಹೋದನು (೪೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತೈದನೆಯ ಸರ್ಗ

## ಷಡ್ವಿಂಶಃ ಸರ್ಗಃ

### ಸೀತಾ ಪ್ರತ್ಯವಸ್ಥಾಪನಮ್

ಅಭಿವಾದ್ಯ ಚ ಕೌಸಲ್ಯಾಂ ರಾಮಃ ಸಂಪ್ರಸ್ಥಿತೋ ವನಮ್ ।
ಕೃತಸ್ವಸ್ತ್ಯಯನೋ ಮಾತ್ರಾ ಧರ್ಮಿಷ್ಠೇ ವರ್ತ್ಮನಿ ಸ್ಥಿತಃ ॥ ೧

ವಿರಾಜಯನ್ ರಾಜಸುತೋ ರಾಜಮಾರ್ಗಂ ನರೈರ್ವೃತಮ್ ।
ಹೃದಯಾನಿ ಮಮಂಥೇವ ಜನಸ್ಯ ಗುಣವತ್ತಯಾ ॥ ೨

ವೈದೇಹೀ ಚಾಪಿ ತತ್ಸರ್ವಂ ನ ಶುಶ್ರಾವ ತಪಸ್ವಿನೀ ।
ತದೇವ ಹೃದಿ ತಸ್ಯಾಶ್ಚ ಯೌವರಾಜ್ಯಾಭಿಷೇಚನಮ್ ॥ ೩

ದೇವಕಾರ್ಯಂ ಸ್ವಯಂ ಕೃತ್ವಾ ಕೃತಜ್ಞಾ ಹೃಷ್ಟಚೇತನಾ ।
ಅಭಿಜ್ಞಾ ರಾಜಧರ್ಮಾಣಾಂ ರಾಜಪುತ್ರಂ ಪ್ರತೀಕ್ಷತೇ ॥ ೪

## ಸರ್ಗ ೨೬

**ಶ್ರೀರಾಮನು ಸೀತೆಗೆ ತನ್ನ ವನವಾಸ ವೃತ್ತಾಂತವನ್ನು ಹೇಳಿ ಅವಳನ್ನು ಸಮಾಧಾನ ಪಡಿಸುವುದು.**

ಈ ಪ್ರಕಾರ ವನವಾಸಕ್ಕೆ ಹೊರಟ ಶ್ರೀರಾಮನು ತಾಯಿಗೆ ಅಭಿವಾದನೆಮಾಡಿ ಅವಳ ಆಶೀರ್ವಾದಗಳನ್ನು ಪಡೆದನು. ಧರ್ಮ ಮಾರ್ಗದಲ್ಲಿಯೇ ನಡೆಯುತಕ್ಕ ಆ ರಾಜಕುಮಾರನು ಸೀತೆಯನ್ನು ಕಾಣಲು ಬರುತ್ತಿರುವಾಗ ಜನಭರಿತವಾದ ರಾಜಬೀದಿಗೆ ಒಂದು ಅಪೂರ್ವ ಶೋಭೆಯುಂಟಾಯಿತು. (ಅರಮನೆಯಲ್ಲಿ ಯಾವುದೋ ಅನೀರೀಕ್ಷಿತ ಘಟನೆ ನಡೆಯುತ್ತಿದೆಯೆಂದು ಜನರಿಗೆ ತಿಳಿಯಿತು.) ಆದ್ದರಿಂದ ಶ್ರೀರಾಮನನ್ನು ನೋಡಿದಾಗ ಅವನ ಸದ್ಗುಣಗಳನ್ನು ಬಲ್ಲ ಅವರ ಹೃದಯಗಳು ಕ್ಷೋಭೆಗೊಂಡವು (೧-೨). ಇತ್ತ ಏನೂ ಅರಿಯದ ಸೀತೆಗೆ ಇದೆಲ್ಲವೂ ಗೊತ್ತೇ ಇರಲಿಲ್ಲ. ಅವಳ ಮನಸ್ಸಿನಲ್ಲಿ ರಾಮನ ಪಟ್ಟಾಭಿಷೇಕದ ವಿಷಯವೇ ಸುಳಿದಾಡುತ್ತಿತ್ತು. ಅವಳು ಕೃತಜ್ಞತೆಯಿಂದ ದೇವತಾರ್ಚನೆಯನ್ನು ಮಾಡಿ ಉಲ್ಲಾಸದಿಂದಿದ್ದಳು. ರಾಜಧರ್ಮವನ್ನು ಬಲ್ಲವಳಾದ್ದರಿಂದ ಸಂಪ್ರದಾಯಕ್ಕೆ ತಕ್ಕ ಸನ್ನಾಹಗಳನ್ನು ಮಾಡಿಕೊಂಡು ಶ್ರೀರಾಮನ ಬರವನ್ನು ಕಾಯುತ್ತಿದ್ದಳು (೩-೪).

ಪ್ರವಿವೇಶಾಥ ರಾಮಸ್ತು ಸ್ವಂ ವೇಶ್ಮ ಸುವಿಭೂಷಿತಮ್ ।
ಪ್ರಹೃಷ್ಟಜನಸಂಪೂರ್ಣಂ ಹ್ರಿಯಾ ಕಿಂಚಿದವಾಙ್ಮುಖಃ ॥ ೫

ಅಥ ಸೀತಾ ಸಮುತ್ಪತ್ಯ ವೇಪಮಾನಾ ಚ ತಂ ಪತಿಮ್ ।
ಅಪಶ್ಯಚ್ಛೋಕಸಂತಪ್ತಂ ಚಿಂತಾವ್ಯಾಕುಲಿತೇಂದ್ರಿಯಮ್ ॥ ೬

ತಾಂ ದೃಷ್ಟ್ವಾ ಸ ಹಿ ಧರ್ಮಾತ್ಮಾ ನ ಶಶಾಕ ಮನೋಗತಮ್ ।
ತಂ ಶೋಕಂ ರಾಘವಃ ಸೋಢುಂ ತತೋ ವಿವೃತತಾಂ ಗತಃ ॥ ೭

ವಿವರ್ಣವದನಂ ದೃಷ್ಟ್ವಾ ತಂ ಪ್ರಸ್ವಿನ್ನಮಮರ್ಷಣಮ್ ।
ಆಹ ದುಃಖಾಭಿಸಂತಪ್ತಾ ಕಿಮಿದಾನೀಮಿದಂ ಪ್ರಭೋ ॥ ೮

ಅದ್ಯ ಬಾರ್ಹಸ್ಪತಃ ಶ್ರೀಮಾನ್ ಉಕ್ತಃ ಪುಷ್ಯೋ ನು ರಾಘವ ।
ಪ್ರೋಚ್ಯತೇ ಬ್ರಾಹ್ಮಣೈಃ ಪ್ರಾಜ್ಞೈಃ ಕೇನ ತ್ವಮಸಿ ದುರ್ಮನಾಃ ॥ ೯

ನ ತೇ ಶತಶಲಾಕೇನ ಜಲಫೇನನಿಭೇನ ಚ ।
ಆವೃತಂ ವದನಂ ವಲ್ಗು ಛತ್ರೇಣಾಪಿ ವಿರಾಜತೇ ॥ ೧೦

---

ಶ್ರೀರಾಮನ ಆ ಭವನವು ಅಲಂಕೃತವಾಗಿತ್ತು. ಜನರು ಸಂಭ್ರಮದಿಂದ ತುಂಬಿದ್ದರು. ರಾಮನು ಅಲ್ಲಿಗೆ ಬಂದು ಸಂಕೋಚದಿಂದ ಸ್ವಲ್ಪ ತಲೆತಗ್ಗಿಸಿ ಒಳಕ್ಕೆ ಪ್ರವೇಶಿಸಿದನು (೫). ರಾಮನು ಒಳಗೆ ಬಂದಕೂಡಲೆ ಸೀತೆಯು ಎದ್ದುನಿಂತಳು. ಪತಿಯನ್ನು ನೋಡಿ ನಡುಗಿದಳು. ಶ್ರೀರಾಮನಿಗೆ ಶೋಕವು ಆವರಿಸಿತು. ಚಿಂತೆಯಿಂದ ಇಂದ್ರಿಯಗಳು ಬಸವಳಿದವು (೬). ಏಕೆಂದರೆ, ಸೀತೆಯನ್ನು ಕಂಡಮೇಲೆ ಆ ಧರ್ಮಾತ್ಮನಿಗೆ ಮನಸ್ಸಿನಲ್ಲಿದ್ದ ಶೋಕವನ್ನು ತಡೆದುಕೊಳ್ಳಲಾಗಲಿಲ್ಲ. ಅದು ಪ್ರಕಟವಾಗಿ ಹೋಯಿತು. ಅವನ ಮುಖದ ಬಣ್ಣ ಕಂದಿತು. ದೇಹವು ಬೆವರಿತು. ದುಃಖವನ್ನು ತಡೆಯಲಾರದೆ ಹೋದನು (೭-೮). ಸೀತೆಯು ತತ್ತಳಿಸುತ್ತ ಮಾತನಾಡಿಸಿದಳು. "ನನ್ನೊಡೆಯ, ಇದೇನಿದು? ಇಂದು ಮಂಗಳಕರವಾದ ಪುಷ್ಯನಕ್ಷತ್ರವಲ್ಲವೆ? ಬೃಹಸ್ಪತಿದೇವತಾಕವೆಂದು ಪ್ರಾಜ್ಞರಾದ ಬ್ರಾಹ್ಮಣರು ಹೇಳುತ್ತಿದ್ದಾರೆ. ಏಕೆ ವಿಷಣ್ಣನಾಗಿದ್ದೀಯೆ ? (೯). ನೊರೆಯಂತೆ ಬೆಳ್ಳಗಿರುವ ಶತಶಲಾಕಾವೃತವಾದ ಛತ್ರದ ನೆರಳಿನಲ್ಲಿ ನಿನ್ನ ಸುಂದರವದನವು

ವ್ಯಜನಾಭ್ಯಾಂ ತ ಮುಖ್ಯಾಭ್ಯಾಂ ಶತಪತ್ರನಿಭೇಕ್ಷಣಮ್ ।
ಚಂದ್ರಹಂಸಪ್ರಕಾಶಾಭ್ಯಾಂ ವೀಜ್ಯತೇ ನ ತವಾನನಮ್ ॥ ೧೧

ವಾಗ್ಮಿನೋ ವಂದಿನಶ್ಚಾಪಿ ಪ್ರಹೃಷ್ಟಾಸ್ತ್ವಾಂ ನರರ್ಷಭ ।
ಸ್ತುವಂತೋ ನಾತ್ರ ದೃಶ್ಯಂತೇ ಮಂಗಲೈಃ ಸೂತಮಾಗಧಾಃ ॥ ೧೨

ನ ತೇ ಕ್ಷೌದ್ರಂ ಚ ದಧಿ ಚ ಬ್ರಾಹ್ಮಣಾ ವೇದಪಾರಗಾಃ ।
ಮೂರ್ಧ್ನಿ ಮೂರ್ಧಾಭಿಷಿಕ್ತಸ್ಯ ದಧತಿ ಸ್ಮ ವಿಧಾನತಃ॥ ೧೩

ನ ತ್ವಾಂ ಪ್ರಕೃತಯಃ ಸರ್ವಾಃ ಶ್ರೇಣೀಮುಖ್ಯಾಶ್ಚ ಭೂಷಿತಾಃ ।
ಅನುವ್ರಜಿತುಮಿಚ್ಛಂತಿ ಪೌರಜಾನಪದಾಸ್ತಥಾ ॥ ೧೪

ಚತುರ್ಭಿರ್ವೇಗಸಂಪನ್ನೈರ್ಹರ್ಯೈಃ ಕಾಂಚನಭೂಷಿತೈಃ ।
ಮುಖ್ಯಃ ಪುಷ್ಯರಥೋ ಯುಕ್ತಃ ಕಿಂ ನ ಗಚ್ಛತಿ ತೇಽಗ್ರತಃ ॥ ೧೫

ನ ಹಸ್ತಿ ಚಾಗ್ರತಃ ಶ್ರೀಮಾಂಸ್ತವ ಲಕ್ಷಣಪೂಜಿತಃ ।
ಪ್ರಯಾಣೇ ಲಕ್ಷ್ಯತೇ ವೀರ ಕೃಷ್ಣಮೇಘಗಿರಿಪ್ರಭಃ ॥ ೧೬

---

ಶೋಭಿಸುತ್ತಿಲ್ಲವೇಕೆ? ತಾವರೆಯಂತೆ ಚಂದವಾದ ಕಣ್ಣುಗಳಿರುವ ನಿನ್ನ ಮುಖದ ಇಕ್ಕೆಲದಲ್ಲಿ ಚಂದ್ರನಂತೆ-ಹಂಸದಂತೆ-ಕಾಣುವ ಉತ್ತಮ ಚಾಮರಗಳನ್ನು ಬೀಸುತ್ತಿಲ್ಲವೇಕೆ? (೧೦-೧೧). ವಾಗ್ಮಿಗಳಾದ ವಂದಿಸೂತ ಮಾಗಧರು ಸಂತುಷ್ಟರಾಗಿ ಮಂಗಳಸ್ತೋತ್ರಗಳಿಂದ ಹೊಗಳುವುದೂ ಕಾಣಿಸುದಿಲ್ಲ. ವೇದಪಾರಂಗತರಾದ ಬ್ರಾಹ್ಮಣರು ನಿನಗೆ ಶಿರಃಸ್ನಾನಮಾಡಿಸಿ, ಜೇನು, ಮೊಸರು ಮುಂತಾದ ಮಂಗಳದ್ರವ್ಯಗಳಿಂದ ವಿಧಿವತ್ತಾಗಿ ಶಿರಸ್ಸಿನ ಮೇಲೆ ಇನ್ನೂ ಅಭಿಷೇಕ ಮಾಡಿಲ್ಲ (೧೨-೧೩). ಅಧಿಕಾರಿಗಳೂ ರಾಜಸಭಾಸದರೂ ಪ್ರಜೆಗಳೂ ವಸ್ತ್ರಾಭರಣಭೂಷಿತರಾಗಿ ನಿನ್ನ ಹಿಂದೆ ಮೆರವಣಿಗೆಯಲ್ಲಿ ಇನ್ನೂ ಹೊರಟಿಲ್ಲವೇಕೆ? ಸ್ವರ್ಣಾಭರಣಗಳಿಂದ ಅಲಂಕರಿಸಲ್ಪಟ್ಟ ವೇಗಶಾಲಿಗಳಾದ ನಾಲ್ಕು ಅಶ್ವಗಳನ್ನು ಹೂಡಿದ ಪುಷ್ಯರಥವೆಂಬ ರಾಜರಥವು ನಿನ್ನೆದುರಿಗೆ ಏಕೆ ಹೊರಟಿಲ್ಲ ? (೧೪-೧೫). ವೀರಾಗ್ರಣಿ, ನೀಲಮೇಘದಂತೆ ಶೋಭಿಸುತ್ತ ಪರ್ವತದಂತೆ ಉನ್ನತವಾಗಿ ಲಕ್ಷಣಯುಕ್ತವಾದ ನಮ್ಮ ಪಟ್ಟದಾನೆಯು ಅಲಂಕೃತವಾಗಿ ಪ್ರಯಾಣ ಹೊರಟಿರುವುದೂ ಕಾಣಿಸುವುದಿಲ್ಲ.

ನ ಚ ಕಾಂಚನಚಿತ್ರಂ ತೇ ಪಶ್ಯಾಮಿ ಪ್ರಿಯದರ್ಶನ ।
ಭದ್ರಾಸನಂ ಪುರಸ್ಕೃತ್ಯ ಯಾಂತಂ ವೀರಪುರಸ್ಕೃತಮ್ ॥ ೧೭

ಅಭಿಷೇಕೋ ಯದಾ ಸಜ್ಜಃ ಕಿಮಿದಾನೀಮಿದಂ ತವ ।
ಅಪೂರ್ವೋ ಮುಖವರ್ಣಶ್ಚ ನ ಪ್ರಹರ್ಷಶ್ಚ ಲಕ್ಷ್ಯತೇ ॥ ೧೮

ಇತೀವ ವಿಲಪಂತೀಂ ತಾಂ ಪ್ರೋವಾಚ ರಘುನಂದನಃ ।
ಸೀತೇ ತತ್ರಭವಾಂಸ್ತಾತಃ ಪ್ರವ್ರಾಜಯತಿ ಮಾಂ ವನಮ್ ॥ ೧೯

ಕುಲೇ ಮಹತಿ ಸಂಭೂತೇ ಧರ್ಮಜ್ಞೇ ಧರ್ಮಚಾರಿಣಿ ।
ಶೃಣು ಜಾನಕಿ ಯೇನೇದಂ ಕ್ರಮೇಣಾಭ್ಯಾಗತಂ ಮಮ ॥ ೨೦

ರಾಜ್ಞಾ ಸತ್ಯಪ್ರತಿಜ್ಞೇನ ಪಿತ್ರಾ ದಶರಥೇನ ಚ ।
ಕೈಕೇಯ್ಯೈ ಮಮ ಮಾತ್ರೇ ತು ಪುರಾ ದತ್ತೌ ಮಹಾವರೌ ॥ ೨೧

ತಯಾದ್ಯ ಮಮ ಸಜ್ಜೇಽಸ್ಮಿನ್ನಭಿಷೇಕೇ ನೃಪೋದ್ಯತೇ ।
ಪ್ರಚೋದಿತಃ ಸ ಸಮಯೋ ಧರ್ಮೇಣ ಪ್ರತಿನಿರ್ಜಿತಃ ॥ ೨೨

---

ಚಿನ್ನದ ಪ್ರತಿಮೆಗಳಿಂದ ಭೂಷಿತವಾದ ನಿನ್ನ ಸಿಂಹಾಸನವನ್ನು ವೀರಭಟರೆದುರಿಗೆ ಹೊತ್ತು ತರುವ ಪುರುಷನೂ ನನಗೆ ಗೋಚರಿಸುವುದಿಲ್ಲ (೧೬-೧೭). ನಿನಗೆ ಪಟ್ಟಾಭಿಷೇಕವು ನಡೆಯಬೇಕಾಗಿರುವಾಗ ಇದೇನಿದು ಈಗ? ಮುಖದಲ್ಲಿ ಎಂದೂ ಇಲ್ಲದ ಕಾಂತಿಹೀನತೆಯುಂಟಾಗಿದೆ. ಹರ್ಷವು ತೋರುವುದಿಲ್ಲ" ಎಂದಳು (೧೮). ಹೀಗೆ ವಿಲಪಿಸುತ್ತಿದ್ದ ಸೀತೆಯನ್ನು ನೋಡಿ ಶ್ರೀರಾಮನು ಹೇಳಿದನು : "ಸೀತೆ, ನನ್ನ ಪೂಜ್ಯನಾದ ಪಿತನು ನನ್ನನ್ನು ಕಾಡಿಗೆ ಕಳಿಸಬೇಕೆಂದಿದ್ದಾನೆ. ಜಾನಕಿ, ನೀನು ಉತ್ತಮ ವಂಶದಲ್ಲಿ ಜನಿಸಿದ್ದೀಯೆ. ಧರ್ಮದ ಸ್ವರೂಪವನ್ನು ಬಲ್ಲೆ. ಧರ್ಮಮಾರ್ಗದಲ್ಲಿ ನಡೆಯುತ್ತಿದ್ದೀಯೆ. ನನಗೆ ವನವಾಸವು ಹೇಗೆ ಒದಗಿತೆಂಬುದನ್ನು ಸಾವಧಾನವಾಗಿ ಕೇಳು (೧೯-೨೦). ಸತ್ಯಸಂಧನಾದ ನನ್ನ ತಂದೆ ದಶರಥ ಮಹಾರಾಜನು ನನ್ನ ತಾಯಿಯಾದ ಕೈಕೇಯೀದೇವಿಗೆ ಹಿಂದೆ ಎರಡು ವರಗಳನ್ನು ಕೊಟ್ಟಿದ್ದನು. ಆತನು ಈಗ ನನಗೆ ಪಟ್ಟಾಭಿಷೇಕಮಾಡಲೆಂದು ಉದ್ಯುಕ್ತನಾಗಲು, ಮಾತುಕೊಟ್ಟಂತೆ ಆ ವರಗಳನ್ನು ಸಲ್ಲಿಸಬೇಕೆಂದು ಅವಳು ನಿರ್ಬಂಧಿಸಿದ್ದಾಳೆ. ಧರ್ಮಪಾಶಕ್ಕೆ ಸಿಕ್ಕಿಸಿ ಅವನನ್ನು ಕೈವಶ

ಚತುರ್ದಶ ಹಿ ವರ್ಷಾಣಿ ವಸ್ತವ್ಯಂ ದಂಡಕೇ ಮಯಾ ।
ಪಿತ್ರಾ ಮೇ ಭರತಶ್ಚಾಪಿ ಯೌವರಾಜ್ಯೇ ನಿಯೋಜಿತಃ ॥ ೨೩

ಸೋಽಹಂ ತ್ವಾಮಾಗತೋ ದ್ರಷ್ಟುಂ ಪ್ರಸ್ಥಿತೋ ವಿಜನಂ ವನಮ್ ।
ಭರತಸ್ಯ ಸಮೀಪೇ ತು ನಾಹಂ ಕಥ್ಯಃ ಕದಾಚನ ॥ ೨೪

ಋದ್ಧಿಯುಕ್ತಾ ಹಿ ಪುರುಷಾ ನ ಸಹಂತೇ ಪರಸ್ತವಮ್ ।
ತಸ್ಮಾನ್ನ ತೇ ಗುಣಾಃ ಕಥ್ಯಾ ಭರತಸ್ಯಾಗ್ರತೋ ಮಮ ॥ ೨೫

ಅಹಂ ತೇ ನಾನುವಕ್ತವ್ಯೋ ವಿಶೇಷೇಣ ಕದಾಚನ ।
ಅನುಕೂಲತಯಾ ಶಕ್ಯಂ ಸಮೀಪೇ ತಸ್ಯ ವರ್ತಿತುಮ್ ॥ ೨೬

ತಸ್ಮೈ ದತ್ತಂ ನೃಪತಿನಾ ಯೌವರಾಜ್ಯಂ ಸನಾತನಮ್ ।
ಸ ಪ್ರಸಾದ್ಯಸ್ತ್ವಯಾ ಸೀತೇ ನೃಪತಿಶ್ಚ ವಿಶೇಷತಃ ॥ ೨೭

ಅಹಂ ಚಾಪಿ ಪ್ರತಿಜ್ಞಾಂ ತಾಂ ಗುರೋಃ ಸಮನುಪಾಲಯನ್ ।
ವನಮದ್ಯೈವ ಯಾಸ್ಯಾಮಿ ಸ್ಥಿರಾ ಭವ ಮನಸ್ವಿನೀ ॥ ೨೮

---

ಮಾಡಿಕೊಂಡಿದ್ದಾಳೆ (೨೧-೨೨). ಅದರ ಪ್ರಕಾರ ನಾನು ಹದಿನಾಲ್ಕು ವರ್ಷ ದಂಡಕಾರಣ್ಯದಲ್ಲಿರಬೇಕು; ಭರತನು ಯುವರಾಜನಾಗಬೇಕು. ಹೀಗೆಂದು ತಂದೆಯು ಆಜ್ಞೆಮಾಡಿದ್ದಾನೆ. ಆದ್ದರಿಂದ ನಿರ್ಜನವಾದ ವನಕ್ಕೆ ಹೊರಟಿರುವ ನಾನು ನಿನ್ನನ್ನು ನೋಡಿ ಹೋಗೋಣವೆಂದು ಬಂದೆ. ಸೀತೆ, ಭರತನ ಮುಂದೆ ಎಂದಿಗೂ ನನ್ನನ್ನು ಹೊಗಳಿ ಮಾತನಾಡಬೇಡ (೨೩-೨೪). ಏಕೆಂದರೆ, ಐಶ್ವರ್ಯವಂತರು ಪರಸ್ತುತಿಯನ್ನು ಕೇಳಿ ಸಹಿಸಲಾರರು. ಆದ್ದರಿಂದ ಭರತನೆದುರಿಗೆ ನನ್ನ ಗುಣಗಳನ್ನು ವರ್ಣಿಸಬೇಡ. ನನ್ನ ವಿಷಯವನ್ನೇ ಕುರಿತು ಯಾರೊಡನೆಯೂ ಹೆಚ್ಚಾಗಿ ಮಾತನಾಡುತ್ತಿರಬೇಡ. ಭರತನಿಗೆ ನಮ್ರಳಾಗಿ ನಡೆದು ಕೊಂಡರೆ ಮಾತ್ರ ಅವನ ಹತ್ತಿರ ನಿನಗೆ ಇರಲು ಸಾಧ್ಯವಾಗುವುದು (೨೫-೨೬). ಸ್ಥಿರವಾದ ಯುವರಾಜ ಪದವಿಯನ್ನು ಮಹಾರಾಜನು ಭರತನಿಗೆ ಕೊಟ್ಟಿದ್ದಾನೆ. ಆದ್ದರಿಂದ, ಸೀತೆ, ನೀನು ಭರತನಿಗೂ ವಿಶೇಷವಾಗಿ ಮಹಾರಾಜನಿಗೂ ತೃಪ್ತಿಯಾಗು ವಂತೆ ವಿನಯದಿಂದ ನಡೆದುಕೊ (೨೭). ನಾನೂ ಕೂಡ ತಂದೆಯ ಪ್ರತಿಜ್ಞೆಯನ್ನು ಪಾಲಿಸುವುದಕ್ಕಾಗಿ ಈ ದಿನವೇ ಅರಣ್ಯಕ್ಕೆ ಹೊರಡುವೆನು. ನೀನು ಧೈರ್ಯದಿಂದ

ಯಾತೇ ಚ ಮಯಿ ಕಲ್ಯಾಣಿ ವನಂ ಮುನಿನಿಷೇವಿತಮ್ ।
ವ್ರತೋಪವಾಸಪರಯಾ ಭವಿತವ್ಯಂ ತ್ವಯಾನಘೇ ॥ ೨೯

ಕಲ್ಯಮುತ್ಥಾಯ ದೇವಾನಾಂ ಕೃತ್ವಾ ಪೂಜಾಂ ಯಥಾವಿಧಿ ।
ವಂದಿತವ್ಯೋ ದಶರಥಃ ಪಿತಾ ಮಮ ನರೇಶ್ವರಃ ॥ ೩೦

ಮಾತಾ ಚ ಮಮ ಕೌಸಲ್ಯಾ ವೃದ್ಧಾ ಸಂತಾಪಕರ್ಶಿತಾ ।
ಧರ್ಮಮೇವಾಗ್ರತಃ ಕೃತ್ವಾ ತ್ವತ್ತಃ ಸಂಮಾನಮರ್ಹತಿ ॥ ೩೧

ವಂದಿತವ್ಯಾಶ್ಚ ತೇ ನಿತ್ಯಂ ಯಾಃ ಶೇಷಾ ಮಮ ಮಾತರಃ ।
ಸ್ನೇಹಪ್ರಣಯಸಂಭೋಗೈಃ ಸಮಾ ಹಿ ಮಮ ಮಾತರಃ ॥ ೩೨

ಭ್ರಾತೃಪುತ್ರಸಮೌ ಚಾಪಿ ದ್ರಷ್ಟವ್ಯೌ ಚ ವಿಶೇಷತಃ ।
ತ್ವಯಾ ಭರತಶತ್ರುಘ್ನೌ ಪ್ರಾಣೈಃ ಪ್ರಿಯತರೌ ಮಮ ॥ ೩೩

ವಿಪ್ರಿಯಂ ನ ಚ ಕರ್ತವ್ಯಂ ಭರತಸ್ಯ ಕದಾಚನ ।
ಸ ಹಿ ರಾಜಾ ಪ್ರಭುಶ್ಚೈವ ದೇಶಸ್ಯ ಚ ಕುಲಸ್ಯ ಚ ॥ ೩೪

---

ಮನಸ್ಸನ್ನು ಗಟ್ಟಿಮಾಡಿಕೊಂಡಿರು. ಮಂಗಳಾಂಗಿ, ನಾನು ಮುನಿಸೇವಿತವಾದ ವನದಲ್ಲಿರುವಾಗ ನೀನು ವ್ರತೋಪವಾಸಗಳನ್ನು ಆಚರಿಸುತ್ತ ನಿಯಮದಲ್ಲಿರು (೨೮-೨೯). ಉಷಃಕಾಲದಲ್ಲೆದ್ದು ವಿಧಿವತ್ತಾಗಿ ದೇವಪೂಜೆಯನ್ನು ಮಾಡಿ ನನ್ನ ತಂದೆಯಾದ ದಶರಥಮಹಾರಾಜನ ಬಳಿಗೆ ಹೋಗಿ ಅಭಿವಾದನೆ ಮಾಡು. ನನ್ನ ತಾಯಿ ಕೌಸಲ್ಯಾದೇವಿಯು ವೃದ್ಧೆಯಾಗಿದ್ದಾಳೆ. ದುಃಖದಿಂದ ಬೆಂದುಹೋಗಿದ್ದಾಳೆ. ಧರ್ಮವನ್ನೇ ನಂಬಿ ಜೀವ ಹಿಡಿದಿದ್ದಾಳೆ. ನೀನು ಅವಳನ್ನು ಗೌರವದಿಂದ ನೋಡಿಕೊ (೩೦-೩೧). ಅಲ್ಲದೆ ನನ್ನ ಉಳಿದ ಎಲ್ಲ ತಾಯಂದಿರಿಗೂ ತಪ್ಪದೆ ನೀನು ವಂದಿಸುತ್ತ ಅವರಲ್ಲಿ ವಿನಯದಿಂದ ನಡೆದುಕೊಳ್ಳಬೇಕು. ಅವರು ನನ್ನನ್ನು ಪ್ರೀತಿವಾತ್ಸಲ್ಯಗಳಿಂದ ಪೋಷಿಸಿದ್ದಾರೆ. ನನಗೆ ಅವರೆಲ್ಲರೂ ಸಮಾನರಾದ ಮಾತೆಯರು (೩೨). ಭರತಶತ್ರುಘ್ನರು ನನಗೆ ಪ್ರಾಣಕ್ಕಿಂತಲೂ ಪ್ರಿಯರಾದವರು. ನೀನು ಅವರನ್ನು ಒಡಹುಟ್ಟಿದವರಂತೆಯೂ ಮಕ್ಕಳಂತೆಯೂ ಭಾವಿಸಿ ನೋಡಿಕೊಳ್ಳಬೇಕು. ಭರತನಿಗೆ ಅಪ್ರಿಯವಾದ ಕಾರ್ಯದಲ್ಲಿ ಎಂದಿಗೂ ಪ್ರವರ್ತಿಸಬೇಡ. ಅವನು ನಮ್ಮ ದೇಶಕ್ಕೂ ವಂಶಕ್ಕೂ ರಾಜ; ಪ್ರಭು (೩೩-೩೪).

ಆರಾಧಿತಾ ಹಿ ಶೀಲೇನ ಪ್ರಯತ್ನೈಶ್ಚೋಪಸೇವಿತಾಃ ।
ರಾಜಾನಃ ಸಂಪ್ರಸೀದಂತಿ ಪ್ರಕುಪ್ಯಂತಿ ವಿಪರ್ಯಯೇ ॥ ೩೫

ಔರಸಾನಪಿ ಪುತ್ರಾನ್ ಹಿ ತ್ಯಜಂತ್ಯಹಿತಕಾರಿಣಃ ।
ಸಮರ್ಥಾನ್ ಸಂಪ್ರಗೃಹ್ಣಂತಿ ಪರಾನಪಿ ನರಾಧಿಪಾಃ ॥ ೩೬

ಸಾ ತ್ವಂ ವಸೇಹ ಕಲ್ಯಾಣಿ ರಾಜ್ಞಃ ಸಮನುವರ್ತಿನೀ ।
ಭರತಸ್ಯ ರತಾ ಧರ್ಮೇ ಸತ್ಯವ್ರತಪರಾಯಣಾ ॥ ೩೭

ಅಹಂ ಗಮಿಷ್ಯಾಮಿ ಮಹಾವನಂ ಪ್ರಿಯೇ
ತ್ವಯಾ ಹಿ ವಸ್ತವ್ಯಮಿಹೈವ ಭಾಮಿನಿ ।
ಯಥಾ ವ್ಯಲೀಕಂ ಕುರುಷೇ ನ ಕಸ್ಯಚಿತ್
ತಥಾ ತ್ವಯಾ ಕಾರ್ಯಮಿದಂ ವಚೋ ಮಮ ॥ ೩೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಡ್ವಿಂಶಃ ಸರ್ಗಃ

ರಾಜರನ್ನು ಒಳ್ಳೆಯ ನಡತೆಯಿಂದ ಸಂತೋಷಪಡಿಸುತ್ತ ಕಷ್ಟಪಟ್ಟು ಸೇವಿಸುತ್ತಿದ್ದರೆ, ಅವರು ಪ್ರಸನ್ನರಾಗುತ್ತಾರೆ. ಇಲ್ಲದಿದ್ದರೆ ಕುಪಿತರಾಗುತ್ತಾರೆ. ಅಹಿತವಾಗಿ ವರ್ತಿಸಿದರೆ, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನೂ ಕೂಡ ನರೇಂದ್ರರು ತ್ಯಜಿಸಿಬಿಡುತ್ತಾರೆ. ಹಿತವಾಗಿ ನಡೆಯುತ್ತ ಕಾರ್ಯದಕ್ಷರಾಗಿದ್ದರೆ, ಹೊರಗಿನವರನ್ನೂ ಸೇರಿಸಿಕೊಳ್ಳುತ್ತಾರೆ (೩೫-೩೬). ಆದ್ದರಿಂದ, ಸೀತೆ, ನೀನು ರಾಜನಾದ ಭರತನನ್ನು ಅನುಸರಿಸಿಕೊಂಡು ಧರ್ಮಮಾರ್ಗದಲ್ಲಿ ನಿರತಳಾಗಿರು. ಸತ್ಯವೆಂಬ ವ್ರತದಲ್ಲಿಯೇ ನಡೆಯುತ್ತಿರು (೩೭). ಪ್ರಿಯೆ, ಇನ್ನು ನಾನು ಅರಣ್ಯಕ್ಕೆ ಹೊರಡುವೆನು. ನೀನು ಇಲ್ಲಿಯೇ ಇರಬೇಕಾದ್ದರಿಂದ ಯಾರ ಮನಸ್ಸಿಗೂ ನೋವಾಗದಂತೆ ನಡೆದುಕೊಳ್ಳುತ್ತಿರು. ಇದು ನಾನು ಹೇಳುವ ಬುದ್ಧಿವಾದ" ಎಂದನು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತಾರನೆಯ ಸರ್ಗ

## ಸಪ್ತವಿಂಶಃ ಸರ್ಗಃ

### ಪತಿವ್ರತಾಧ್ಯವಸಾಯಃ

ಏವಮುಕ್ತಾ ತು ವೈದೇಹೀ ಪ್ರಿಯಾರ್ಹಾ ಪ್ರಿಯವಾದಿನೀ ।
ಪ್ರಣಯಾದೇವ ಸಂಕ್ರುದ್ಧಾ ಭರ್ತಾರಮಿದಮಬ್ರವೀತ್ ॥ ೧

ಕಿಮಿದಂ ಭಾಷಸೇ ರಾಮ ವಾಕ್ಯಂ ಲಘುತಯಾ ಧ್ರುವಮ್ ।
ತ್ವಯಾ ಯದಪಹಾಸ್ಯಂ ಮೇ ಶ್ರುತ್ವಾ ನರವರಾತ್ಮಜ ॥ ೨

ಆರ್ಯಪುತ್ರ ಪಿತಾ ಮಾತಾ ಭ್ರಾತಾ ಪುತ್ರಸ್ತಥಾ ಸ್ನುಷಾ ।
ಸ್ವಾನಿ ಪುಣ್ಯಾನಿ ಭುಂಜಾನಾಃ ಸ್ವಂ ಸ್ವಂ ಭಾಗ್ಯಮುಪಾಸತೇ ॥ ೩

ಭರ್ತುರ್ಭಾಗ್ಯಂ ತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ ।
ಅತಶ್ಚೈವಾಹಮಾದಿಷ್ಟಾ ವನೇ ವಸ್ತವ್ಯಮಿತ್ಯಪಿ ॥ ೪

## ಸರ್ಗ ೨೭

### ಸೀತೆಯು ತಾನೂ ವನಕ್ಕೆ ಹೋಗಬೇಕೆಂದು ನಿಶ್ಚಯಿಸಿ ಶ್ರೀರಾಮನೊಡನೆ ಹೇಳುವುದು.

ವೈದೇಹಿಯು ಯಾವಾಗಲೂ ರಾಮನೊಡನೆ ಪ್ರಿಯವಾದ ಮಾತನ್ನಾಡುತ್ತ ಅವನಿಂದ ಪ್ರಿಯವಾದ ಮಾತನ್ನೇ ಕೇಳುತ್ತಿದ್ದಳು. ಈ ದಿನ ರಾಮನು ಹೀಗೆ ಹೇಳಲು ಅವಳು ಪ್ರಣಯದಿಂದಲೇ ಕುಪಿತಳಾಗಿ ತನ್ನ ಪತಿಗೆ ಈ ರೀತಿ ಹೇಳಿದಳು (೧) : "ರಾಜಪುತ್ರ, ನೀನು ಇಂಥ ಹಗುರವಾದ ಮಾತನ್ನಾಡಬಹುದೆ? ಇದನ್ನು ಕೇಳಿ ನನಗೆ ನಗು ಬರುತ್ತಿದೆ. ಆರ್ಯಪುತ್ರ, ಲೋಕದಲ್ಲಿ ತಂದೆ ತಾಯಿ ಸೋದರ ಮಗ ಸೊಸೆ - ಇವರೆಲ್ಲರೂ ತಮ್ಮ ಪುಣ್ಯಪಾಪಗಳನ್ನು ತಾವು ಅನುಭವಿಸುತ್ತಾರೆ. ತಮ್ಮ ತಮ್ಮ ಭಾಗ್ಯವನ್ನು ತಾವು ಪಡೆಯುತ್ತಾರೆ (೨-೩). ಆದರೆ ಹೆಂಡತಿಯೊಬ್ಬಳೇ ತನ್ನ ಗಂಡನ ಕರ್ಮಾನುಸಾರವಾದ ಫಲವನ್ನು ಹಂಚಿಕೊಳ್ಳುತ್ತಾಳೆ. ಆದ್ದರಿಂದ ವನದಲ್ಲಿ ವಾಸಮಾಡಬೇಕೆಂದು ನನಗೂ ಆಜ್ಞೆಯಾದಂತೆಯೇ ಸರಿ. ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಹೆಂಗಸರಿಗೆ ಗಂಡನೊಬ್ಬನೇ

ನ ಪಿತಾ ನಾತ್ಮಜೋ ನಾತ್ಮಾ ನ ಮಾತಾ ನ ಸಖೀಜನಃ ।
ಇಹ ಪ್ರೇತ್ಯ ಚ ನಾರೀಣಾಂ ಪತಿರೇಕೋ ಗತಿಃ ಸದಾ ॥ ೫

ಯದಿ ತ್ವಂ ಪ್ರಸ್ಥಿತೋ ದುರ್ಗಂ ವನಮದ್ಯೈವ ರಾಘವ ।
ಅಗ್ರತಸ್ತೇ ಗಮಿಷ್ಯಾಮಿ ಮೃದ್ನಂತೀ ಕುಶಕಂಟಕಾನ್ ॥ ೬

ಈರ್ಷ್ಯಾರೋಷೌ ಬಹಿಷ್ಕೃತ್ಯ ಪೀತಶೇಷಮಿವೋದಕಮ್ ।
ನಯ ಮಾಂ ವೀರ ವಿಸ್ರಬ್ಧಃ ಪಾಪಂ ಮಯಿ ನ ವಿದ್ಯತೇ ॥ ೭

ಪ್ರಾಸಾದಾಗ್ರ್ಯೈರ್ವಿಮಾನೈರ್ವಾ ವೈಹಾಯಸಗತೇನ ವಾ ।
ಸರ್ವಾವಸ್ಥಾಗತಾ ಭರ್ತುಃ ಪಾದಚ್ಛಾಯಾ ವಿಶಿಷ್ಯತೇ ॥ ೮

ಅನುಶಿಷ್ಟಾಸ್ಮಿ ಮಾತ್ರಾ ಚ ಪಿತ್ರಾ ಚ ವಿವಿಧಾಶ್ರಯಮ್ ।
ನಾಸ್ಮಿ ಸಂಪ್ರತಿವಕ್ತವ್ಯಾ ವರ್ತಿತವ್ಯಂ ಯಥಾ ಮಯಾ ॥ ೯

ಅಹಂ ದುರ್ಗಂ ಗಮಿಷ್ಯಾಮಿ ವನಂ ಪುರುಷವರ್ಜಿತಮ್ ।
ನಾನಾಮೃಗಗಣಾಕೀರ್ಣಂ ಶಾರ್ದೂಲವೃಕಸೇವಿತಮ್ ॥ ೧೦

---

ಗತಿ. ತಂದೆಯೂ ಅಲ್ಲ; ಮಗನೂ ಅಲ್ಲ; ತಾಯಿ ಗೆಳತಿ - ಒಬ್ಬರೂ ಆಗುವುದಿಲ್ಲ (೪-೫). ರಾಘವ, ನೀನು ಈಗಲೇ ವನಕ್ಕೆ ಹೊರಡುವುದಾದರೆ, ನಾನು ನಿನಗಿಂತ ಮುಂದೆ ಹೊರಟು ಮುಳ್ಳುಕಡ್ಡಿಗಳನ್ನು ತುಳಿದು ನಿನಗೆ ದಾರಿಮಾಡಿಕೊಡುತ್ತ ಹೋಗುವೆನು. ನನ್ನ ಮೇಲೆ ಏನಾದರೂ ಈರ್ಷ್ಯೆಯಿದ್ದರೆ - ಕೋಪವಿದ್ದರೆ - ಅದೆಲ್ಲವನ್ನೂ ಮರೆತು ನನ್ನನ್ನು ಕರೆದುಕೊಂಡು ಹೋಗು. ಪಥಿಕನು ಕುಡಿದು ಉಳಿಸಿದ ನೀರನ್ನು ಜೊತೆಯಲ್ಲಿ ಒಯ್ಯುವಂತೆ, ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗು. ನಾನು ಯಾವ ಅಪರಾಧವನ್ನೂ ಮಾಡಿಲ್ಲ (೬-೭). ಉಪ್ಪರಿಗೆಗಳಲ್ಲಿ ವಾಸಮಾಡುವುದಕ್ಕಿಂತಲೂ ವಿಮಾನಗಳಲ್ಲಿ ಕುಳಿತು ಆಕಾಶಯಾನ ಮಾಡುವುದಕ್ಕಿಂತಲೂ ಸ್ತ್ರೀಯರಿಗೆ ಸರ್ವಾವಸ್ಥೆಗಳಲ್ಲಿಯೂ ಪತಿಯ ಪಾದದ ನೆರಳನ್ನು ಅನುಸರಿಸಿ ನಡೆಯುವುದೇ ಸರ್ವೋತ್ತಮ (೮). ನನ್ನ ತಾಯಿಯೂ ತಂದೆಯೂ ಪತಿಯನ್ನು ವಿವಿಧ ಸಂದರ್ಭಗಳಲ್ಲಿ ಹೇಗೆ ಸೇವಿಸಬೇಕೆಂದು ನನಗೆ ಚೆನ್ನಾಗಿ ಬೋಧಿಸಿದ್ದಾರೆ. ಈಗ ಹೇಗೆ ನಡೆದುಕೊಳ್ಳಬೇಕೆಂದು ನನಗೆ ಯಾರೂ ಹೇಳಿಕೊಡಬೇಕಾಗಿಲ್ಲ (೯). ನಾನು ದುರ್ಗಮವಾದ ನಿರ್ಜನಾರಣ್ಯಕ್ಕೆ

ಸುಖಂ ವನೇ ವಿವತ್ಸ್ಯಾಮಿ ಯಥೈವ ಭವನೇ ಪಿತುಃ ।
ಅಚಿಂತಯಂತೀ ತ್ರೀನ್ಲೋಕಾಂಶ್ಚಿಂತಯಂತೀ ಪತಿವ್ರತಮ್ ॥ ೧೧

ಶುಶ್ರೂಷಮಾಣಾ ತೇ ನಿತ್ಯಂ ನಿಯತಾ ಬ್ರಹ್ಮಚಾರಿಣೀ ।
ಸಹ ರಂಸ್ಯೇ ತ್ವಯಾ ವೀರ ವನೇಷು ಮಧುಗಂಧಿಷು ॥ ೧೨

ತ್ವಂ ಹಿ ಕರ್ತುಂ ವನೇ ಶಕ್ತೋ ರಾಮ ಸಂಪರಿಪಾಲನಮ್ ।
ಅನ್ಯಸ್ಯಾಪಿ ಜನಸ್ಯೇಹ ಕಿಂ ಪುನರ್ಮಮ ಮಾನದ ॥ ೧೩

ಸಹ ತ್ವಯಾ ಗಮಿಷ್ಯಾಮಿ ವನಮದ್ಯ ನ ಸಂಶಯಃ ।
ನಾಹಂ ಶಕ್ಯಾ ಮಹಾಭಾಗ ನಿವರ್ತಯಿತುಮುದ್ಯಮಾತ್ ॥ ೧೪

ಫಲಮೂಲಾಶನಾ ನಿತ್ಯಂ ಭವಿಷ್ಯಾಮಿ ನ ಸಂಶಯಃ ।
ನ ತೇ ದುಃಖಂ ಕರಿಷ್ಯಾಮಿ ನಿವಸಂತೀ ಸಹ ತ್ವಯಾ ॥ ೧೫

ಅಗ್ರತಸ್ತೇ ಗಮಿಷ್ಯಾಮಿ ಭೋಕ್ಷ್ಯೇ ಭುಕ್ತವತಿ ತ್ವಯಿ ।
ಇಚ್ಛಾಮಿ ಸರಿತಃ ಶೈಲಾನ್ ಪಲ್ವಲಾನಿ ವನಾನಿ ಚ ॥ ೧೬

---

ಬರುತ್ತೇನೆ. ಅಲ್ಲಿ ಬೇಕಾದಷ್ಟು ಕಾಡುಮೃಗಗಳಿರಲಿ, ಹುಲಿಗಳಿರಲಿ, ತೋಳಗಳಿರಲಿ, ತವರುಮನೆಯಲ್ಲಿರುವಂತೆ ಸುಖವಾಗಿ ಅಲ್ಲಿರುತ್ತೇನೆ. ಮೂರುಲೋಕಗಳನ್ನೂ ಮರೆತಿರುತ್ತೇನೆ. ಪತಿಸೇವೆಯೊಂದನ್ನು ಮಾತ್ರ ನಾನು ಗಮನಿಸತಕ್ಕವಳು (೧೦-೧೧). ನಿನ್ನ ಸೇವೆಯನ್ನು ಮಾಡುತ್ತ ಸದಾ ನಿಯಮದಿಂದ ವ್ರತನಿಷ್ಠಳಾಗಿರುವೆನು; ಮಕರಂದಸುಗಂಧಿಯಾದ ವನದಲ್ಲಿ ನಿನ್ನೊಡನೆ ವಿಹರಿಸುವೆನು. ವನದಲ್ಲಿ ನೀನು ಇತರ ಜನಸಮೂಹವನ್ನೇ ರಕ್ಷಿಸುವ ಸಾಮರ್ಥ್ಯವುಳ್ಳವನು. ಪ್ರಾಣಕಾಂತ, ನನ್ನೊಬ್ಬಳನ್ನು ಪಾಲಿಸಲಾರೆಯಾ? (೧೨-೧೩). ನಿನ್ನೊಡನೆ ನಾನು ಈಗ ಕಾಡಿಗೆ ಬರುವುದು ನಿಶ್ಚಯ. ಸಂದೇಹವೇ ಇಲ್ಲ. ನನ್ನನ್ನು ತಡೆಯಲು ಸಾಧ್ಯವಿಲ್ಲ. ಕಾಡುಹಣ್ಣು, ಗೆಡ್ಡೆಗೆಣಸುಗಳನ್ನು ತಿಂದುಕೊಂಡಿರುತ್ತೇನೆ. ಅದಕ್ಕಾಗಿ ಯಾವ ತೊಂದರೆಯನ್ನೂ ಕೊಡುವುದಿಲ್ಲ. ನಿನ್ನ ಜೊತೆಯಲ್ಲಿ ನಾನು ಇದ್ದರೆ ಸಾಕು (೧೪-೧೫). ನಿನ್ನ ಮುಂದೆ ತಿರುಗಾಡಿಕೊಂಡಿರುತ್ತೇನೆ. ನಿನಗೆ ಆಹಾರವು ದೊರಕಿದಾಗಲೇ ನಾನು ಆಹಾರವನ್ನು ತೆಗೆದುಕೊಳ್ಳುತ್ತೇನೆ. ನದಿಗಳನ್ನೂ ಬೆಟ್ಟಗಳನ್ನೂ ಕೊಳಗಳನ್ನೂ ವನಾಂತರಗಳನ್ನೂ ನೋಡಬೇಕೆಂದು ನನಗೆ

ದ್ರಷ್ಟುಂ ಸರ್ವತ್ರ ನಿರ್ಭೀತಾ ತ್ವಯಾ ನಾಥೇನ ಧೀಮತಾ ।
ಹಂಸಕಾರಂಡವಾಕೀರ್ಣಾಃ ಪದ್ಮಿನೀಃ ಸಾಧು ಪುಷ್ಪಿತಾಃ ॥ ೧೭

ಇಚ್ಛೇಯಂ ಸುಖಿನೀ ದ್ರಷ್ಟುಂ ತ್ವಯಾ ವೀರೇಣ ಸಂಗತಾ ।
ಅಭಿಷೇಕಂ ಕರಿಷ್ಯಾಮಿ ತಾಸು ನಿತ್ಯಂ ಯತವ್ರತಾ ॥ ೧೮

ಸಹ ತ್ವಯಾ ವಿಶಾಲಾಕ್ಷ ರಂಸ್ಯೇ ಪರಮನಂದಿನೀ ।
ಏವಂ ವರ್ಷಸಹಸ್ರಾಣಿ ಶತಂ ವಾಽಹಂ ತ್ವಯಾ ಸಹ ॥ ೧೯

ವ್ಯತಿಕ್ರಮಂ ನ ವೇತ್ಸ್ಯಾಮಿ ಸ್ವರ್ಗೋಽಪಿ ನ ಹಿ ಮೇ ಮತಃ ।
ಸ್ವರ್ಗೇಽಪಿ ಚ ವಿನಾ ವಾಸೋ ಭವಿತಾ ಯದಿ ರಾಘವ ॥ ೨೦

ತ್ವಯಾ ಮಮ ನರವ್ಯಾಘ್ರ ನಾಹಂ ತಮಪಿ ರೋಚಯೇ ॥

ಅಹಂ ಗಮಿಷ್ಯಾಮಿ ವನಂ ಸುದುರ್ಗಮಂ
ಮೃಗಾಯುತಂ ವಾನರವಾರಣೈರ್ಯುತಮ್ ।
ವನೇ ನಿವತ್ಸ್ಯಾಮಿ ಯಥಾ ಪಿತುರ್ಗೃಹೇ
ತವೈವ ಪಾದಾವುಪಗೃಹ್ಯ ಸಂಯತಾ ॥ ೨೧

---

ಆಸೆ ಇದೆ (೧೬). ಧೀಮಂತನಾದ ನೀನು ನನಗೆ ನಾಥನಾಗಿರುವಾಗ ಎಲ್ಲೆಲ್ಲಿಯೂ ನನಗೆ ಭಯವಿಲ್ಲ. ಹೂಗಳಿಂದ ತುಂಬಿದ ತಾವರೆಯ ಕೊಳಗಳಲ್ಲಿ ಹಂಸ, ನೀರುಕೋಳಿಗಳು ಸಂಚರಿಸುವುದನ್ನು ನಾನು ನೋಡಿ ಸಂತೋಷಿಸಬೇಕು - ಜೊತೆಯಲ್ಲಿ ನೀನಿರಬೇಕು - ಎಂದು ನನ್ನ ಆಸೆ. ಆ ಕೊಳಗಳಲ್ಲಿ ವ್ರತನಿಷ್ಠೆಯಿಂದ ಪ್ರತಿದಿನ ಸ್ನಾನಮಾಡುವೆನು (೧೭-೧೮). ಪರಮಾನಂದಭರಿತಳಾಗಿ ನಿನ್ನೊಡನೆ ಸಂಚರಿಸುವೆನು. ನಿನ್ನ ಸಮೀಪದಲ್ಲಿ ಈ ರೀತಿ ನೂರು ವರ್ಷಗಳನ್ನಾದರೂ ಸಾವಿರ ವರ್ಷಗಳನ್ನಾದರೂ ಕಳೆಯಬಲ್ಲೆ. ಅಷ್ಟು ವರ್ಷ ಕಳೆದುಹೋದರೂ ನನಗೆ ಗೊತ್ತಾಗುವುದಿಲ್ಲ. ನೀನಿಲ್ಲದ ಸ್ವರ್ಗವೂ ನನಗೆ ಬೇಡ. ಶ್ರೀರಾಮ, ನಿನ್ನನ್ನು ಬಿಟ್ಟು ಇಂದ್ರಲೋಕದಲ್ಲಿ ವಾಸಮಾಡೆಂದರೂ ನಾನು ಬಯಸುವುದಿಲ್ಲ (೧೯-೨೦). ಕಾಡುಮೃಗಗಳೂ ಕಪಿಗಳೂ ಆನೆಗಳೂ ಇರತಕ್ಕ ಗೊಂಡಾರಣ್ಯಕ್ಕಾದರೂ ನಾನು ಹೋಗುತ್ತೇನೆ. ನನ್ನ ತಂದೆಯ ಮನೆಯಲ್ಲಿರುವಂತೆ ಅರಣ್ಯದಲ್ಲಿರುತ್ತೇನೆ. ನಿನ್ನ

ಅನನ್ಯಭಾವಾಮನುರಕ್ತಚೇತಸಂ
ತ್ವಯಾ ವಿಯುಕ್ತಾಂ ಮರಣಾಯ ನಿಶ್ಚಿತಾಮ್ ।
ನಯಸ್ವ ಮಾಂ ಸಾಧು ಕುರುಷ್ವ ಯಾಚನಾಂ
ನ ತೇ ಮಯಾತೋ ಗುರುತಾ ಭವಿಷ್ಯತಿ ॥ ೨೨

ತಥಾ ಬ್ರುವಾಣಾಮಪಿ ಧರ್ಮವತ್ಸಲೋ
ನ ಚ ಸ್ಮ ಸೀತಾಂ ನೃವರೋ ನಿನೀಷತಿ ।
ಉವಾಚ ಸೀತಾಂ ಬಹು ಸಂನಿವರ್ತನೇ
ವನೇ ನಿವಾಸಸ್ಯ ಚ ದುಃಖಿತಾಂ ಪ್ರತಿ ॥ ೨೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತವಿಂಶಃ ಸರ್ಗಃ

ಪಾದಗಳನ್ನು ಹಿಡಿದು ಸಂಯಮದಿಂದ ಬಾಳುತ್ತೇನೆ. ಇನ್ನು ಯಾವ ಅಭಿಲಾಷೆಯೂ ನನಗಿಲ್ಲ. ನಿನ್ನಲ್ಲಿ ಅನುರಕ್ತಳಾಗಿದ್ದೇನೆ. ಬಿಟ್ಟುಹೋದರೆ ನಾನು ಸಾಯುವುದು ನಿಶ್ಚಯ. ನನ್ನನ್ನು ಕರೆದುಕೊಂಡು ಹೋಗೆಂದು ಬೇಡಿಕೊಳ್ಳುತ್ತೇನೆ. ನನ್ನ ಪ್ರಾರ್ಥನೆಯನ್ನು ನಡೆಸು. ನನ್ನಿಂದ ನಿನಗೆ 'ಭಾರವಾಗುವುದಿಲ್ಲ" ಎಂದಳು (೨೧-೨೨). ಈ ಪ್ರಕಾರ ಸೀತೆಯು ಕೇಳಿಕೊಂಡರೂ ಧರ್ಮವತ್ಸಲನಾದ ಆ ಪುರುಷೋತ್ತಮನು ಅವಳನ್ನು ಕರೆದುಕೊಂಡುಹೋಗಲು ಇಷ್ಟಪಡಲಿಲ್ಲ. ಅವಳನ್ನು ತಡೆಯುವುದಕ್ಕಾಗಿ ವನವಾಸದಲ್ಲಿರುವ ಕಷ್ಟಗಳನ್ನು ವಿವರಿಸಿ ಹೇಳಿದನು (೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತೇಳನೆಯ ಸರ್ಗ

## ಅಷ್ಟಾವಿಂಶಃ ಸರ್ಗಃ

### ವನದುಃಖಪ್ರತಿಬೋಧನಮ್

ಸ ಏವಂ ಬ್ರುವತೀಂ ಸೀತಾಂ ಧರ್ಮಜ್ಞೋ ಧರ್ಮವತ್ಸಲಃ ।
ನ ನೇತುಂ ಕುರುತೇ ಬುದ್ಧಿಂ ವನೇ ದುಃಖಾನಿ ಚಿಂತಯನ್ ॥ ೧

ಸಾಂತ್ವಯಿತ್ವಾ ಪುನಸ್ತಾಂ ತು ಬಾಷ್ಪಪರ್ಯಾಕುಲೇಕ್ಷಣಾಮ್ ।
ನಿವರ್ತನಾರ್ಥೇ ಧರ್ಮಾತ್ಮಾ ವಾಕ್ಯಮೇತದುವಾಚ ಹ ॥ ೨

ಸೀತೇ ಮಹಾಕುಲೀನಾಸಿ ಧರ್ಮೇ ಚ ನಿರತಾ ಸದಾ ।
ಇಹಾಚರಸ್ವ ಧರ್ಮಂ ತ್ವಂ ಯಥಾ ಮೇ ಮನಸಃ ಸುಖಮ್ ॥ ೩

ಸೀತೇ ಯಥಾ ತ್ವಾಂ ವಕ್ಷ್ಯಾಮಿ ತಥಾ ಕಾರ್ಯಂ ತ್ವಯಾಬಲೇ ।
ವನೇ ದೋಷಾ ಹಿ ಬಹವೋ ವದತಸ್ತಾನ್ನಿಬೋಧ ಮೇ ॥ ೪

ಸೀತೇ ವಿಮುಚ್ಯತಾಮೇಷಾ ವನವಾಸಕೃತಾ ಮತಿಃ ।
ಬಹುದೋಷಂ ಹಿ ಕಾಂತಾರಂ ವನಮಿತ್ಯಭಿಧೀಯತೇ ॥ ೫

## ಸರ್ಗ ೨೮

**ಶ್ರೀರಾಮನು ವನವಾಸದ ಕಷ್ಟಗಳನ್ನು ಸೀತೆಗೆ ವಿವರಿಸಿ ಹೇಳುವುದು.**

ಹೀಗೆ ಸೀತೆಯು ಹೇಳಿದರೂ ಧರ್ಮಜ್ಞನಾದ ಶ್ರೀರಾಮನು ಕಾಡಿನಲ್ಲಿ ಸಂಭವಿಸುವ ಕಷ್ಟಗಳನ್ನು ಚಿಂತಿಸಿ ಅವಳನ್ನು ಕರೆದುಕೊಂಡು ಹೋಗಲು ಬಯಸಲಿಲ್ಲ. ಸೀತೆಯ ಕಣ್ಣಲ್ಲಿ ನೀರು ತುಂಬಿತ್ತು. ಆ ಧರ್ಮಾತ್ಮನು ಅವಳನ್ನು ಸಂತೈಸುತ್ತ ಹೀಗೆಂದನು (೧-೨) : "ಸೀತೆ, ಮಹಾಕುಲದಲ್ಲಿ ಹುಟ್ಟಿದ್ದೀಯೆ. ಧರ್ಮನಿರತಳಾಗಿದ್ದೀಯೆ. ನೀನು ಇಲ್ಲಿಯೇ ಇದ್ದು ಧರ್ಮವನ್ನಾಚರಿಸುತ್ತಿದ್ದರೆ, ನನ್ನ ಮನಸ್ಸಿಗೆ ಶಾಂತಿ ಇರುವುದು. ಸೀತೆ, ನೀನು ಹೆಂಗಸು - ಅಬಲೆ. ನಾನು ಹೇಳಿದಂತೆ ಮಾಡು. ವನದಲ್ಲಿ ಬಹಳ ಕಷ್ಟಗಳಿವೆ. ನಾನು ಹೇಳುತ್ತೇನೆ, ಕೇಳು (೩-೪) : ವನವಾಸಮಾಡುತ್ತೇನೆಂಬ ಈ ಬುದ್ಧಿಯನ್ನು ತ್ಯಜಿಸು. ವನವೆಂದರೆ ಕಷ್ಟಪರಂಪರೆಗಳಿರುವ ಗೊಂಡಾರಣ್ಯ.

ಹಿತಬುದ್ಧ್ಯಾ ಖಲು ವಚೋ ಮಯೈತದಭಿಧೀಯತೇ ।
ಸದಾ ಸುಖಂ ನ ಜಾನಾಮಿ ದುಃಖಮೇವ ಸದಾ ವನಮ್ ॥ ೬

ಗಿರಿನಿರ್ಝರಸಂಭೂತಾ ಗಿರಿಕಂದರವಾಸಿನಾಮ್ ।
ಸಿಂಹಾನಾಂ ನಿನದಾ ದುಃಖಾಃ ಶ್ರೋತುಂ ದುಃಖಮತೋ ವನಮ್ ॥ ೭

ಕ್ರೀಡಮಾನಾಶ್ಚ ವಿಸ್ರಬ್ಧಾ ಮತ್ತಾಃ ಶೂನ್ಯೇ ಮಹಾಮೃಗಾಃ ।
ದೃಷ್ಟ್ವಾ ಸಮಭಿವರ್ತಂತೇ ಸೀತೇ ದುಃಖಮತೋ ವನಮ್ ॥ ೮

ಸಗ್ರಾಹಾಃ ಸರಿತಶ್ಚೈವ ಪಂಕವತ್ಯಃ ಸುದುಸ್ತರಾಃ ।
ಮತ್ತೈರಪಿ ಗಜೈರ್ನಿತ್ಯಮತೋ ದುಃಖತರಂ ವನಮ್ ॥ ೯

ಲತಾಕಂಟಕಸಂಕೀರ್ಣಾಃ ಕೃಕವಾಕೂಪನಾದಿತಾಃ ।
ನಿರಪಾಶ್ಚ ಸುದುರ್ಗಾಶ್ಚ ಮಾರ್ಗಾ ದುಃಖಮತೋ ವನಮ್ ॥ ೧೦

ಸುಪ್ಯತೇ ಪರ್ಣಶಾಲಾಸು ಸ್ವಯಂ ಭಗ್ನಾಸು ಭೂತಲೇ ।
ರಾತ್ರಿಷು ಶ್ರಮಖಿನ್ನೇನ ತಸ್ಮಾದ್ದುಃಖತರಂ ವನಮ್ ॥ ೧೧

ಅಹೋರಾತ್ರಂ ಚ ಸಂತೋಷಃ ಕರ್ತವ್ಯೋ ನಿಯತಾತ್ಮನಾ ।
ಫಲೈರ್ವೃಕ್ಷಾವಪತಿತೈಃ ಸೀತೇ ದುಃಖಮತೋ ವನಮ್ ॥ ೧೨

---

ನಿನ್ನ ಹಿತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ವನದಲ್ಲಿ ಸುಖದ ಲೇಶವನ್ನೂ ಕಾಣೆ. ಅಲ್ಲಿರುವುದು ದುಃಖ ಒಂದೇ (೫-೬). ಅಲ್ಲಿ ಕೇಳಿಸುವುದು ಪರ್ವತಗಳಿಂದ ಧುಮುಕುವ ಗಿರಿನದಿಗಳ ಭೋರೆಂಬ ಶಬ್ದ, ಗುಹಾವಾಸಿಗಳಾದ ಸಿಂಹಗಳ ಗರ್ಜನೆ. ಸೀತೆ, ನಿರ್ಜನವಾದ ಅರಣ್ಯದಲ್ಲಿ ನಿರ್ಭಯವಾಗಿ ಸಂಚರಿಸುವ ಘೋರಮೃಗಗಳು ಜನರನ್ನು ಕಂಡರೆ ಅಟ್ಟಿಸಿಕೊಂಡು ಬರುತ್ತವೆ (೭-೮). ನದಿಗಳಲ್ಲಿ ಮೊಸಳೆಗಳಿರುತ್ತವೆ; ಕೆಸರು ತುಂಬಿರುತ್ತದೆ. ಮದ್ದಾನೆಗಳಿಗೂ ಕೂಡ ಆ ನದಿಗಳನ್ನು ದಾಟುವುದು ಕಷ್ಟ. ಆದ್ದರಿಂದ ವನವಾಸ ದುಃಖಮಯ. ಬಳ್ಳಿಗಳೂ ಮುಳ್ಳುಗಳೂ ಹರಡಿರುತ್ತವೆ. ಕಾಡುಕೋಳಿಗಳು ವಿಕಾರವಾಗಿ ಕೂಗುತ್ತವೆ. ದಾರಿಯಲ್ಲಿ ನೀರು ಸಿಗುವುದೇ ದುರ್ಲಭ. ದಾರಿಯನ್ನು ನಡೆಯುವುದೇ ಕಷ್ಟ (೯-೧೦). ಅರಣ್ಯದಲ್ಲಿ ನೆಲದ ಮೇಲೆ ಉದುರಿದ ಎಲೆಗಳೇ ಹಾಸಿಗೆ. ಆಯಾಸದಿಂದ ಬಳಲಿದವನು ರಾತ್ರಿಯ ಹೊತ್ತು ಅದರಲ್ಲಿ ಮಲಗಬೇಕು. ಮರದಿಂದ ಬಿದ್ದ ಕಾಡುಹಣ್ಣುಗಳನ್ನೇ ಹಗಲುರಾತ್ರಿಯೂ ಮನಸ್ಸನ್ನು ಬಿಗಿಹಿಡಿದು ತಿನ್ನಬೇಕು.

ಉಪವಾಸಶ್ಚ ಕರ್ತವ್ಯೋ ಯಥಾಪ್ರಾಣೇನ ಮೈಥಿಲಿ ।
ಜಟಾಭಾರಶ್ಚ ಕರ್ತವ್ಯೋ ವಲ್ಕಲಾಂಬರಧಾರಿಣಾ ॥ ೧೩

ದೇವತಾನಾಂ ಪಿತೄಣಾಂ ಚ ಕರ್ತವ್ಯಂ ವಿಧಿಪೂರ್ವಕಮ್ ।
ಪ್ರಾಪ್ತಾನಾಮತಿಥೀನಾಂ ಚ ನಿತ್ಯಶಃ ಪ್ರತಿಪೂಜನಮ್ ॥ ೧೪

ಕಾರ್ಯಸ್ತ್ರಿರಭಿಷೇಕಶ್ಚ ಕಾಲೇ ಕಾಲೇ ಚ ನಿತ್ಯಶಃ ।
ಚರತಾ ನಿಯಮೇನೈವ ತಸ್ಮಾದ್ದುಃಖತರಂ ವನಮ್ ॥ ೧೫

ಉಪಹಾರಶ್ಚ ಕರ್ತವ್ಯಃ ಕುಸುಮೈಃ ಸ್ವಯಮಾಹೃತೈಃ ।
ಆರ್ಷೇಣ ವಿಧಿನಾ ವೇದ್ಯಾಂ ಬಾಲೇ ದುಃಖಮತೋ ವನಮ್ ॥ ೧೬

ಯಥಾಲಬ್ಧೇನ ಸಂತೋಷಃ ಕರ್ತವ್ಯಸ್ತೇನ ಮೈಥಿಲಿ ।
ಯತಾಹಾರೈರ್ವನಚರೈರ್ನಿತ್ಯಂ ದುಃಖಮತೋ ವನಮ್ ॥ ೧೭

ಅತೀವ ವಾತಾಸ್ತಿಮಿರಂ ಬುಭುಕ್ಷಾ ಚಾತ್ರ ನಿತ್ಯಶಃ ।
ಭಯಾನಿ ಚ ಮಹಾಂತ್ಯತ್ರ ತತೋ ದುಃಖತರಂ ವನಮ್ ॥ ೧೮

---

ಅದರಿಂದಲೇ ತೃಪ್ತಿಪಡಬೇಕು. ಸೀತೆ, ವನವಾಸ ಕಷ್ಟ (೧೧-೧೨). ಕಾಡಿನಲ್ಲಿ ಯಥಾಶಕ್ತಿ ಉಪವಾಸವಿರಬೇಕಾಗುತ್ತದೆ. ಜಟೆಯನ್ನು ಬೆಳೆಸಿ ನಾರುಬಟ್ಟೆಯನ್ನುಡ ಬೇಕಾಗುತ್ತದೆ. ಅಂಥ ಸ್ಥಳದಲ್ಲಿಯೂ ದೇವಪಿತೃಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ನಡೆಸಲೇಬೇಕು. ಬಂದ ಅತಿಥಿಗಳನ್ನು ಸತ್ಕರಿಸಲೇಬೇಕು (೧೩-೧೪). ಮತ್ತು ಅಲ್ಲಿ ನಿಯಮಪೂರ್ವಕವಾಗಿ ಇರಬೇಕಾದ್ದರಿಂದ ಪ್ರತಿದಿನ ಮೂರುಹೊತ್ತು ಸರಿಯಾದ ಕಾಲದಲ್ಲಿ ಸ್ನಾನಮಾಡಬೇಕು. ನಿತ್ಯವೂ ತಾನೇ ಹೂಗಳನ್ನು ಬಿಡಿಸಿ ತಂದು ವೇದೋಕ್ತವಿಧಿಯಿಂದ ವೇದಿಕೆಯಲ್ಲಿ ಅಗ್ನಿಯನ್ನು ಪೂಜಿಸಬೇಕು. ಬಾಲೆ! ನಿನಗೆ ತಿಳಿಯದು. ವನವಾಸ ಬಹಳ ಕಷ್ಟ (೧೫-೧೬). ಮೈಥಿಲಿ, ಕಾಡಿನಲ್ಲಿರುವವರು ಮಿತವಾಗಿ ದೊರಕಿದಷ್ಟು ಆಹಾರದಿಂದಲೇ ತೃಪ್ತರಾಗಬೇಕಾಗುತ್ತದೆ. ಅಲ್ಲಿ ಗಾಳಿಯ ಹೊಡೆತ ಹೆಚ್ಚು. ರಾತ್ರಿಯೆಲ್ಲ ಘೋರ ಕತ್ತಲೆ. ಹಸಿವು ತಪ್ಪಿದ್ದೇ ಅಲ್ಲ. ಭಯಪಡಬೇಕಾದ ಸಂದರ್ಭಗಳು ಬಹಳ ಬರುತ್ತವೆ. ಆದ್ದರಿಂದ

ಸರೀಸೃಪಾಶ್ಚ ಬಹವೋ ಬಹುರೂಪಾಶ್ಚ ಭಾಮಿನಿ ।
ಚರಂತಿ ಪೃಥಿವೀಂ ದರ್ಪಾತತ್ತೋ ದುಃಖತರಂ ವನಮ್ ॥ ೧೯

ನದೀನಿಲಯನಾಃ ಸರ್ಪಾ ನದೀಕುಟಿಲಗಾಮಿನಃ ।
ತಿಷ್ಠಂತ್ಯಾವೃತ್ಯ ಪಂಥಾನಂ ತತೋ ದುಃಖತರಂ ವನಮ್ ॥ ೨೦

ಪತಂಗಾ ವೃಶ್ಚಿಕಾಃ ಕೀಟಾ ದಂಶಾಶ್ಚ ಮಶಕೈಃ ಸಹ ।
ಬಾಧಂತೇ ನಿತ್ಯಮಬಲೇ ತಸ್ಮಾದ್ದುಃಖತರಂ ವನಮ್ ॥ ೨೧

ದ್ರುಮಾಃ ಕಂಟಕಿನಶ್ಚೈವ ಕುಶಕಾಶಾಶ್ಚ ಭಾಮಿನಿ ।
ವನೇ ವ್ಯಾಕುಲಶಾಖಾಗ್ರಾಸ್ತೇನ ದುಃಖತರಂ ವನಮ್ ॥ ೨೨

ಕಾರ್ಯಕ್ಲೇಶಾಶ್ಚ ಬಹವೋ ಭಯಾನಿ ವಿವಿಧಾನಿ ಚ ।
ಅರಣ್ಯವಾಸೇ ವಸತೋ ದುಃಖಮೇವ ತತೋ ವನಮ್ ॥ ೨೩

ಕ್ರೋಧಲೋಭೌ ವಿಮೋಕ್ತವ್ಯೌ ಕರ್ತವ್ಯಾ ತಪಸೇ ಮತಿಃ ।
ನ ಭೇತವ್ಯಂ ಚ ಭೇತವ್ಯೇ ನಿತ್ಯಂ ದುಃಖಮತೋ ವನಮ್ ॥ ೨೪

---

ವನವಾಸ ಅತ್ಯಂತ ದುಃಖಕರವಾದದ್ದು (೧೭-೧೮). ನಾನಾ ಬಗೆಯ ಹಾವುಗಳು ದರ್ಪದಿಂದ ವನಪ್ರದೇಶದಲ್ಲಿ ಸಂಚರಿಸುತ್ತವೆ. ನದಿಗಳಲ್ಲಿ ವಾಸ ಮಾಡುವ ಸರ್ಪಗಳು ನದಿಗಳಂತೆ ಡೊಂಕಾಗಿ ತಿರುಗುತ್ತ ದಾರಿಯನ್ನು ಅಡ್ಡಗಟ್ಟಿ ನಿಲ್ಲುತ್ತವೆ. ವನವಾಸವೆಂಬುದು ದುಃಖಮಯ (೧೯-೨೦). ಮಿಡತೆ, ಚೇಳು, ಹುಳು, ಕಾಡುನೊಣ, ಸೊಳ್ಳೆ, ಇವುಗಳ ಕಾಟ ನಿತ್ಯವೂ ತಪ್ಪಿದ್ದಲ್ಲ. ಆದ್ದರಿಂದ ಸೀತೆ, ವನವಾಸದಲ್ಲಿ ಸುಖವಿಲ್ಲ. ಕಾಡಿನಲ್ಲಿ ಮುಳ್ಳು ಮರಗಳ ಕೊಂಬೆಗಳು ಕೆಳಗೆ ಜೋತುಬಿದ್ದು ಹರಡಿರುತ್ತವೆ. (ಕಾಲಿಗೆ ಚುಚ್ಚುವ ಒರಟಾದ) ದರ್ಭೆಗಳೂ ಚಾಪೆಯ ಹುಲ್ಲುಗಳೂ ಬೆಳೆದಿರುತ್ತವೆ (೨೧-೨೨). ಕಾಡಿನಲ್ಲಿ ಇರತಕ್ಕವರಿಗೆ ಶರೀರಶ್ರಮವು ಅತಿಯಾಗಿ ಸಂಭವಿಸುತ್ತದೆ. ನಾನಾ ಬಗೆಯ ಆಪತ್ತುಗಳು ಕಾದಿರುತ್ತವೆ. ಅಲ್ಲಿ ದುಃಖವನ್ನು ಬಿಟ್ಟರೆ ಇನ್ನೇನೂ ಇಲ್ಲ. ವನದಲ್ಲಿ ಎಂಥ ಸನ್ನಿವೇಶ ಒದಗಿದರೂ ಕೋಪ ಮಾಡಿಕೊಳ್ಳುವಂತಿಲ್ಲ. ಲೋಭದಿಂದ ಪ್ರಯೋಜನವಿಲ್ಲ. ಇವೆರಡನ್ನೂ ವರ್ಜಿಸಿ ಕೇವಲ ತಪಸ್ಸಿನಲ್ಲಿ ಬುದ್ಧಿಯನ್ನಿಡಬೇಕು. ಭಯಕ್ಕೆ ಬೇಕಾದಷ್ಟು ಕಾರಣವಿರುತ್ತದೆ. ಆದರೂ ಹೆದರದೆ ಇರಬೇಕು. ವನವಾಸ ಬಹಳ ಕಷ್ಟ

ತದಲಂ ತೇ ವನಂ ಗತ್ವಾ ಕ್ಷಮಂ ನ ಹಿ ವನಂ ತವ ।
ವಿಮೃಶನ್ನಿಹ ಪಶ್ಯಾಮಿ ಬಹುದೋಷಕರಂ ವನಮ್ ॥ ೨೫

ವನಂ ತು ನೇತುಂ ನ ಕೃತಾ ಮತಿಸ್ತದಾ
ಬಭೂವ ರಾಮೇಣ ಯದಾ ಮಹಾತ್ಮನಾ ।
ನ ತಸ್ಯ ಸೀತಾ ವಚನಂ ಚಕಾರ ತತ್
ತತೋಽಬ್ರವೀದ್ರಾಮಮಿದಂ ಸುದುಃಖಿತಾ ॥ ೨೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾವಿಂಶಃ ಸರ್ಗಃ

(೨೩-೨೪). ಆದ್ದರಿಂದ ಸೀತೆ, ನೀನು ವನಕ್ಕೆ ಬರಬೇಡ. ವನವು ನಿನಗೆ ಯೋಗ್ಯವಲ್ಲ. ಎಷ್ಟು ಆಲೋಚಿಸಿದರೂ ವನವಾಸದಲ್ಲಿ ದೋಷಗಳೇ ನನಗೆ ಕಂಡುಬರುತ್ತವೆ" ಎಂದು ನುಡಿದನು (೨೫). ಸೀತೆಯನ್ನು ಕಾಡಿಗೆ ಕರೆದುಕೊಂಡು ಹೋಗಲು ಸಮ್ಮತಿಸದೆ ಮಹಾತ್ಮನಾದ ಶ್ರೀರಾಮನು ಈ ಪ್ರಕಾರ ಹೇಳಲಾಗಿ ಸೀತೆಯು ಅದಕ್ಕೆ ಒಪ್ಪಲಿಲ್ಲ. ಅವಳು ತಾನು ಕಾಡಿಗೆ ಬರುತ್ತೇನೆಂದು ಅಳುತ್ತಾ ರಾಮನಿಗೆ ಹೇಳಿದಳು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತೆಂಟನೆಯ ಸರ್ಗ

## ಏಕೋನತ್ರಿಂಶಃ ಸರ್ಗಃ

### ವನಾನುಗಮನಯಾಚ್ಞಾನಿರ್ಬಂಧಃ

ಏತತ್ತು ವಚನಂ ಶ್ರುತ್ವಾ ಸೀತಾ ರಾಮಸ್ಯ ದುಃಖಿತಾ ।
ಪ್ರಸಕ್ತಾಶ್ರುಮುಖೀ ಮಂದಮಿದಂ ವಚನಮಬ್ರವೀತ್ ॥ ೧

ಯೇ ತ್ವಯಾ ಕೀರ್ತಿತಾ ದೋಷಾ ವನೇ ವಸ್ತವ್ಯತಾಂ ಪ್ರತಿ ।
ಗುಣಾನಿತ್ಯೇವ ತಾನ್ವಿದ್ಧಿ ತವ ಸ್ನೇಹಪುರಸ್ಕೃತಾನ್ ॥ ೨

ಮೃಗಾಃ ಸಿಂಹಾ ಗಜಾಶ್ಚೈವ ಶಾರ್ದೂಲಾಃ ಶರಭಾಸ್ತಥಾ ।
ಚಮರಾಃ ಸೃಮರಾಶ್ಚೈವ ಯೇ ಚಾನ್ಯೇ ವನಚಾರಿಣಃ ॥ ೩

ಅದೃಷ್ಟರೂಪಪೂರ್ವತ್ವಾತ್ ಸರ್ವೇ ತೇ ತವ ರಾಘವ ।
ರೂಪಂ ದೃಷ್ಟ್ವಾಪಸರ್ಪೇಯುರ್ಭಯೇ ಸರ್ವೇ ಹಿ ಬಿಭ್ಯತಿ ॥ ೪

ತ್ವಯಾ ಚ ಸಹ ಗಂತವ್ಯಂ ಮಯಾ ಗುರುಜನಾಜ್ಞಯಾ ।
ತ್ವದ್ವಿಯೋಗೇನ ಮೇ ರಾಮ ತ್ಯಕ್ತವ್ಯಮಿಹ ಜೀವಿತಮ್ ॥ ೫

## ಸರ್ಗ ೨೯

### ಸೀತೆಯು ತನ್ನನ್ನು ವನವಾಸಕ್ಕೆ ಕರೆದುಕೊಂಡು ಹೋಗಬೇಕೆಂದು ಶ್ರೀರಾಮನನ್ನು ನಿರ್ಬಂಧಿಸುವುದು.

ಶ್ರೀರಾಮನ ವಚನವನ್ನು ಕೇಳಿ ಸೀತೆಯು ದುಃಖಿತಳಾದಳು. ಕಣ್ಣೀರು ಹರಿಯಿತು. ಅವಳು ಮೆಲ್ಲಗೆ ಹೇಳತೊಡಗಿದಳು. "ಶ್ರೀರಾಮ, ವನವಾಸದಲ್ಲಿ ಸಂಭವಿಸುವ ಕಷ್ಟಗಳನ್ನು ನೀನು ಹೇಳಿದೆ. ನಿನ್ನ ಪ್ರೇಮವು ನನ್ನಲ್ಲಿರುವಾಗ ಅವೆಲ್ಲವೂ ನನಗೆ ಗುಣಗಳಾಗಿಯೇ ತೋರುತ್ತವೆಯೆಂದು ತಿಳಿ (೧-೨). ಸಿಂಹ ಆನೆ ಹುಲಿ ಶರಭ ಚಮರೀಮೃಗ ಕಡವ ಮುಂತಾದ ಕಾಡುಮೃಗಗಳೆಲ್ಲವೂ ಎಂದೂ ಕಾಣದ ನಿನ್ನ ಮನುಷ್ಯರೂಪವನ್ನು ಕಂಡೊಡನೆ ಹೆದರಿ ಓಡಿಹೋಗುತ್ತವೆ. ಭಯದ ಕಾರಣವಿದ್ದಾಗ ಎಲ್ಲರಿಗೂ ಭಯವಾಗುತ್ತದೆ (೩-೪). ಗುರುಜನರು ನಿನಗೆ ಆಜ್ಞೆಮಾಡಿದ ಮೇಲೆ ನಿನ್ನೊಡನೆ ನಾನೂ ಹೋಗಲೇಬೇಕು. ಇಲ್ಲದಿದ್ದರೆ ನಿನ್ನ ವಿಯೋಗದಿಂದ

ನ ಚ ಮಾಂ ತ್ವತ್ಸಮೀಪಸ್ಥಾಮಪಿ ಶಕ್ನೋತಿ ರಾಘವ ।
ಸುರಾಣಾಮೀಶ್ವರಃ ಶಕ್ರಃ ಪ್ರಧರ್ಷಯಿತುಮೋಜಸಾ ॥ ೬

ಪತಿಹೀನಾ ತು ಯಾ ನಾರೀ ನ ಸಾ ಶಕ್ಷ್ಯತಿ ಜೀವಿತುಮ್ ।
ಕಾಮಮೇವಂವಿಧಂ ರಾಮ ತ್ವಯಾ ಮಮ ವಿದರ್ಶಿತಮ್ ॥ ೭

ಅಥವಾಪಿ ಮಹಾಪ್ರಾಜ್ಞ ಬ್ರಾಹ್ಮಣಾನಾಂ ಮಯಾ ಶ್ರುತಮ್ ।
ಪುರಾ ಪಿತೃಗೃಹೇ ಸತ್ಯಂ ವಸ್ತವ್ಯಂ ಕಿಲ ಮೇ ವನೇ ॥ ೮

ಲಕ್ಷಣಜ್ಞೋ ದ್ವಿಜಾತಿಭ್ಯಃ ಶ್ರುತ್ವಾಹಂ ವಚನಂ ಪುರಾ ।
ವನವಾಸಕೃತೋತ್ಸಾಹಾ ನಿತ್ಯಮೇವ ಮಹಾಬಲ ॥ ೯

ಆದೇಶೋ ವನವಾಸಸ್ಯ ಪ್ರಾಪ್ತವ್ಯಃ ಸ ಮಯಾ ಕಿಲ ।
ಸಾ ತ್ವಯಾ ಸಹ ತತ್ರಾಹಂ ಯಾಸ್ಯಾಮಿ ಪ್ರಿಯ ನಾನ್ಯಥಾ ॥ ೧೦

ಕೃತಾದೇಶಾ ಭವಿಷ್ಯಾಮಿ ಗಮಿಷ್ಯಾಮಿ ಸಹ ತ್ವಯಾ ।
ಕಾಲಶ್ಚಾಯಂ ಸಮುತ್ಪನ್ನಃ ಸತ್ಯವಾಗ್ಭವತು ದ್ವಿಜಃ ॥ ೧೧

---

ನಾನಿಲ್ಲಿ ಪ್ರಾಣವನ್ನು ಬಿಡಬೇಕು. ನಿನ್ನ ಸಮೀಪದಲ್ಲಿರುವಾಗ ನನಗೆ ಯಾರಿಂದಲೂ ತೊಂದರೆ ಇಲ್ಲ. ದೇವೇಶ್ವರನಾದ ಇಂದ್ರನಿಗೂ ನನಗೆ ತೊಂದರೆ ಕೊಡುವ ಸಾಮರ್ಥ್ಯವಿಲ್ಲ (೫-೬). ಗಂಡನನ್ನಗಲಿದ ಹೆಂಗಸು ಪ್ರಾಣವನ್ನು ಧರಿಸಿರಲಾರಳು. ಈ ವಿಷಯದಲ್ಲಿ ಎಷ್ಟೋ ಸಲ ನೀನೇ ನಿದರ್ಶನಗಳನ್ನು ಕೊಟ್ಟು ಹೇಳಿದ್ದೀಯೆ. ಮಹಾಪ್ರಾಜ್ಞನಾದ ನಿನಗೆ ಇದು ತಿಳಿಯದೆ? ಅಲ್ಲದೆ ಹಿಂದೆ ನಾನು ತಂದೆಯ ಮನೆಯಲ್ಲಿರುವಾಗ ಬ್ರಾಹ್ಮಣರು ಹೇಳಿದ ಸತ್ಯವಾಕ್ಯವನ್ನು ಕೇಳಿದ್ದೆನು. ನನಗೆ ವನವಾಸದ ಯೋಗವಿದೆಯೆಂದು ಅವರು ಹೇಳಿದ್ದರು (೭-೮). ಜ್ಯೋತಿಃಶಾಸ್ತ್ರಜ್ಞರಾದ ಆ ಬ್ರಾಹ್ಮಣರ ಮಾತನ್ನು ಕೇಳಿ ವನವಾಸವು ಯಾವಾಗ ಸಂಭವಿಸುವುದೆಂದು ನಾನು ಉತ್ಸಾಹಪೂರ್ಣಳಾಗಿಯೇ ಇದ್ದೇನೆ. ನಾನು ವನವಾಸವನ್ನನುಭವಿಸಬೇಕೆಂಬ ದೈವಸಂಕಲ್ಪವು ನಡೆಯಲೇಬೇಕಲ್ಲವೆ ? ಪ್ರಾಣಕಾಂತ, ನಾನು ನಿನ್ನೊಡನೆ ಕಾಡಿಗೆ ಬರುತ್ತೇನೆ. ನನಗೆ ಬೇರೆ ದಾರಿಯಿಲ್ಲ (೯-೧೦). ನಿನ್ನೊಡನೆ ಬಂದು ದೈವಸಂಕಲ್ಪವನ್ನನುಭವಿಸುತ್ತೇನೆ. ಅದಕ್ಕೆ ತಕ್ಕ ಸಮಯವೀಗ ಪ್ರಾಪ್ತವಾಗಿದೆ. ಆ ಬ್ರಾಹ್ಮಣನ ಮಾತು ಸತ್ಯವಾಗಲಿ !

ವನವಾಸೇ ಹಿ ಜಾನಾಮಿ ದುಃಖಾನಿ ಬಹುಧಾ ಕಿಲ ।
ಪ್ರಾಪ್ಯಂತೇ ನಿಯತಂ ವೀರ ಪುರುಷೈರಕೃತಾತ್ಮಭಿಃ ॥ ೧೨

ಕನ್ಯಯಾ ಚ ಪಿತುರ್ಗೇಹೇ ವನವಾಸಃ ಶ್ರುತೋ ಮಯಾ ।
ಭಿಕ್ಷಿಣ್ಯಾಃ ಸಾಧುವೃತ್ತಾಯ ಮಮ ಮಾತುರಿಹಾಗ್ರತಃ ॥ ೧೩

ಪ್ರಸಾದಿತಶ್ಚ ವೈ ಪೂರ್ವಂ ತ್ವಂ ವೈ ಬಹುವಿಧಂ ಪ್ರಭೋ ।
ಗಮನಂ ವನವಾಸಸ್ಯ ಕಾಂಕ್ಷಿತಂ ಹಿ ಸಹ ತ್ವಯಾ ॥ ೧೪

ಕೃತಕ್ಷಣಾಹಂ ಭದ್ರಂ ತೇ ಗಮನಂ ಪ್ರತಿ ರಾಘವ ।
ವನವಾಸಸ್ಯ ಶೂರಸ್ಯ ಚರ್ಯಾ ಹಿ ಮಮ ರೋಚತೇ ॥ ೧೫

ಶುದ್ಧಾತ್ಮನ್ ಪ್ರೇಮಭಾವಾದ್ಧಿ ಭವಿಷ್ಯಾಮಿ ವಿಕಲ್ಮಷಾ ।
ಭರ್ತಾರಮನುಗಚ್ಛಂತೀ ಭರ್ತಾ ಹಿ ಮಮ ದೈವತಮ್ ॥ ೧೬

---

ಕಾಡಿನಲ್ಲಿರುವಾಗ ನಾನಾ ಬಗೆಯ ಕಷ್ಟಗಳು ಬರುತ್ತವೆಯೆಂಬುದನ್ನು ನಾನೂ ಬಲ್ಲೆನು. ಅವೆಲ್ಲವೂ ದೃಢನಿಶ್ಚಯವಿಲ್ಲದ ಹೇಡಿಗಳಿಗೆ ಮಾತ್ರ (೧೧-೧೨). ನಾನು ಕನ್ಯೆಯಾಗಿ ತಂದೆಯ ಮನೆಯಲ್ಲಿದ್ದಾಗ ಒಂದು ಸಲ ತಾಯಿಯ* ಹತ್ತಿರ ಕುಳಿತಿದ್ದೆನು. ಆಗ ಸಾಧುಸ್ವಭಾವದ ಒಬ್ಬ ತಾಪಸಿಯು ನನಗೆ ವನವಾಸದ ಯೋಗವಿದೆಯೆಂದು ಹೇಳಿದ್ದನ್ನು ಕೇಳಿದ್ದೇನೆ (೧೩). ಎಷ್ಟೋ ಸಲ ನಿನ್ನೊಡನೆ ನಾವಿಬ್ಬರೂ ಕಾಡಿಗೆ ಹೋಗಿ ಕೆಲವು ಕಾಲ ವಿಹರಿಸಿಕೊಂಡಿದ್ದು ಬರೋಣವೆಂದು ಬೇಡಿಕೊಂಡಿದ್ದೇನೆ. ಆಗಲೆಂದು ನೀನೂ ಒಪ್ಪಿದ್ದೀಯೆ! ನಾಥ, ನಿನ್ನೊಡನೆ ವನವಾಸ ನನಗೆ ಇಷ್ಟವಾಗಿದ್ದೇ ಸರಿ (೧೪). ವನಕ್ಕೆ ಹೋಗುವುದೆಂದರೆ ನನಗೆ ಒಂದು ಉತ್ಸವ. ಶ್ರೀರಾಮ, ನಿನಗೆ ಮಂಗಳವಾಗಲಿ! ಕಾಡಿನಲ್ಲಿ ವಾಸ ಮಾಡುವಾಗ ಶೂರನಾದ ನಿನ್ನ ಪರಿಚರ್ಯೆ ಮಾಡಲು ನನಗೆ ಬಹಳ ಪ್ರೀತಿ (೧೫). ನಿನ್ನ ಆತ್ಮ ಪರಿಶುದ್ಧವಾದದ್ದು. ಪ್ರೇಮಭಾವದಿಂದ ನಿನ್ನ ಸೇವೆ ಮಾಡಿ ಪಾಪವನ್ನು ತೊಳೆದುಕೊಳ್ಳುತ್ತೇನೆ. ಪತಿಯೇ ನನ್ನ ದೇವರು. ಪರಲೋಕದಲ್ಲಿಯೂ ನಿನ್ನ

---

* ಸೀತೆಯ ತಾಯಿಯ ಹೆಸರು ವಾಲ್ಮೀಕಿ ರಾಮಾಯಣದಲ್ಲಿ ಉಕ್ತವಾಗಿಲ್ಲ. ಅವಳ ಹೆಸರು ಸುನಯನೆ ಎಂದು ತುಳಸೀದಾಸ ರಾಮಾಯಣದಲ್ಲಿ ಹೇಳಿದೆಯಂತೆ.

ಪ್ರೇತ್ಯಭಾವೇಽಪಿ ಕಲ್ಯಾಣಃ ಸಂಗಮೋ ಮೇ ಸಹ ತ್ವಯಾ ।
ಶ್ರುತಿರ್ಹಿ ಶ್ರೂಯತೇ ಪುಣ್ಯಾ ಬ್ರಾಹ್ಮಣಾನಾಂ ತಪಸ್ವಿನಾಮ್ ॥ ೧೭

ಇಹ ಲೋಕೇ ಚ ಪಿತೃಭಿರ್ಯಾ ಸ್ತ್ರೀ ಯಸ್ಯ ಮಹಾಮತೇ ।
ಅದ್ಭಿರ್ದತ್ತಾ ಸ್ವಧರ್ಮೇಣ ಪ್ರೇತ್ಯಭಾವೇಽಪಿ ತಸ್ಯ ಸಾ ॥ ೧೮

ಏವಮಸ್ಮಾತ್ ಸ್ವಕಾಂ ನಾರೀಂ ಸುವೃತ್ತಾಂ ಹಿಂ ಪತಿವ್ರತಾಮ್ ।
ನಾಭಿರೋಚಯಸೇ ನೇತುಂ ತ್ವಂ ಮಾಂ ಕೇನೇಹ ಹೇತುನಾ ॥ ೧೯

ಭಕ್ತಾಂ ಪತಿವ್ರತಾಂ ದೀನಾಂ ಮಾಂ ಸಮಾಂ ಸುಖದುಃಖಯೋಃ ।
ನೇತುಮರ್ಹಸಿ ಕಾಕುತ್ಸ್ಥ ಸಮಾನಸುಖದುಃಖಿನೀಮ್ ॥ ೨೦

ಯದಿ ಮಾಂ ದುಃಖಿತಾಮೇವಂ ವನಂ ನೇತುಂ ನ ಚೇಚ್ಛಸಿ ।
ವಿಷಮಗ್ನಿಂ ಜಲಂ ವಾಹಮಾಸ್ಥಾಸ್ಯೇ ಮೃತ್ಯುಕಾರಣಾತ್ ॥ ೨೧

---

ಸಂಗಮ ನನಗಾಗಲಿ! ಅದೇ ನನಗೆ ಕಲ್ಯಾಣವನ್ನು ತರುವುದು. ಈ ವಿಷಯದಲ್ಲಿ ತಪಸ್ವಿಗಳಾದ ಬ್ರಾಹ್ಮಣರು ಉಚ್ಚರಿಸುವ ಪುಣ್ಯಕರವಾದ ವೇದವಚನವಿದೆ (೧೬-೧೭). 'ಈ ಲೋಕದಲ್ಲಿ ತಂದೆತಾಯಿಗಳು ಸ್ವಧರ್ಮವನ್ನನುಸರಿಸಿ ಜಲಧಾರಾಪೂರ್ವಕವಾಗಿ ಯಾವ ಕನ್ಯೆಯನ್ನು ಯಾವ ಪುರುಷನಿಗೆ ಕೊಟ್ಟು ಮದುವೆ ಮಾಡುವರೋ ಪರಲೋಕದಲ್ಲಿಯೂ ಅವಳಿಗೆ ಆ ಪುರುಷನೇ ಪತಿಯಾಗುವನು' ಎಂದು ವೇದವು ಹೇಳುತ್ತದೆ (೧೮). ಹೀಗಿರುವಾಗ ನಿನ್ನ ಕೈಹಿಡಿದ ಪತ್ನಿಯಾಗಿ ನಿರ್ದೋಷಳಾಗಿ ಪತಿವ್ರತೆಯಾಗಿರುವ ನನ್ನನ್ನು ಯಾವ ಕಾರಣದಿಂದ ನಿನ್ನೊಡನೆ ಕರೆದುಕೊಂಡು ಹೋಗುವುದಿಲ್ಲ ? ನಿನಗೆ ಏಕೆ ಮನಸ್ಸಿಲ್ಲ? ಶ್ರೀರಾಮ, ನಾನು ನಿನ್ನ ಭಕ್ತಳಾಗಿದ್ದೇನೆ; ಪತಿಯಾದ ನಿನ್ನನ್ನೇ ನಂಬಿದ್ದೇನೆ; ದೀನಳಾಗಿದ್ದೇನೆ; ನಿನ್ನ ಸುಖದುಃಖಗಳಿಗೆ ಸಮಭಾಗಿಯಾಗಿದ್ದೇನೆ. ನನ್ನನ್ನು ಕರೆದುಕೊಂಡು ಹೋಗು (೧೯-೨೦). ಇಷ್ಟು ದುಃಖಿತಳಾದ ನನ್ನನ್ನು ಬಿಟ್ಟುಹೋದರೆ ನನಗೆ ಮರಣವೇ ಗತಿ. ವಿಷವನ್ನು ಕುಡಿದೊ ಬೆಂಕಿಗೆ ಬಿದ್ದೊ ನೀರಿಗೆ

ಏವಂ ಬಹುವಿಧಂ ತಂ ಸಾ ಯಯಾಚೇ ಗಮನಂ ಪ್ರತಿ ।
ನಾನುಮೇನೇ ಮಹಾಬಾಹುಸ್ತಾಂ ನೇತುಂ ವಿಜನಂ ವನಮ್ ॥ ೨೨

ಏವಮುಕ್ತಾ ತು ಸಾ ಚಿಂತಾಂ ಮೈಥಿಲೀ ಸಮುಪಾಗತಾ ।
ಸ್ನಾಪಯಂತೀವ ಗಾಮುಷ್ಣೈರಶ್ರುಭಿರ್ನಯನಚ್ಯುತೈಃ ॥ ೨೩

ಚಿಂತಯಂತೀಂ ತಥಾ ತಾಂ ತು ನಿವರ್ತಯಿತುಮಾತ್ಮವಾನ್ ।
ಕ್ರೋಧಾವಿಷ್ಟಾಂ ತು ವೈದೇಹೀಂ ಕಾಕುತ್ಸ್ಥೋ ಬಹ್ವಸಾಂತ್ವಯತ್ ॥

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನತ್ರಿಂಶಃ ಸರ್ಗಃ

ಧುಮುಕಿಯೊ ಪ್ರಾಣವನ್ನು ಬಿಡುತ್ತೇನೆ" ಎಂದಳು (೨೧). ಹೀಗೆ ಬಹುವಿಧದಲ್ಲಿ ಅವಳು ಬೇಡಿಕೊಂಡರೂ ನಿರ್ಜನವಾದ ವನಕ್ಕೆ ಅವಳನ್ನು ಕರೆದೊಯ್ಯಲು ಶ್ರೀರಾಮನು ಒಪ್ಪಲಿಲ್ಲ. ಬೇಡವೆಂದೇ ಅವನು ಹೇಳುತ್ತಿರುವುದನ್ನು ಕೇಳಿ ಮೈಥಿಲಿಗೆ ಚಿಂತೆಯು ಆವರಿಸಿತು. ಅವಳ ನೇತ್ರಗಳಿಂದ ಬಿಸಿಯಾದ ಕಣ್ಣೀರು ಸುರಿದು ಸುರಿದು ಭೂಮಿಗೆ ಸ್ನಾನವಾಯಿತು (೨೨-೨೩). ವೈದೇಹಿಯು ವ್ಯಥೆಪಡುತ್ತ ಕುಪಿತಳಾದಳು. ಆಗಲೂ ಸ್ಥಿರಚಿತ್ತನಾದ ಶ್ರೀರಾಮನು ಅವಳ ಪ್ರಯತ್ನವನ್ನು ತಪ್ಪಿಸುವುದಕ್ಕಾಗಿ ಅನೇಕ ವಿಧದಲ್ಲಿ ಸಮಾಧಾನ ಹೇಳಿದನು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಇಪ್ಪತ್ತೊಂಬತ್ತನೆಯ ಸರ್ಗ

## ತ್ರಿಂಶಃ ಸರ್ಗಃ

### ವನಗಮನಾಭ್ಯುಪಪತ್ತಿಃ

ಸಾಂತ್ವ್ಯಮಾನಾ ತು ರಾಮೇಣ ಮೈಥಿಲೀ ಜನಕಾತ್ಮಜಾ ।
ವನವಾಸನಿಮಿತ್ತಾಯ ಭರ್ತಾರಮಿದಮಬ್ರವೀತ್ ॥ ೧

ಸಾ ತಮುತ್ತಮಸಂವಿಗ್ನಾ ಸೀತಾ ವಿಪುಲವಕ್ಷಸಮ್ ।
ಪ್ರಣಯಾಚ್ಚಾಭಿಮಾನಾಚ್ಚ ಪರಿಚಿಕ್ಷೇಪ ರಾಘವಮ್ ॥ ೨

ಕಿಂ ತ್ವಾಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ ।
ರಾಮ ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಮ್ ॥ ೩

ಅನೃತಂ ಬತ ಲೋಕೋಽಯಮಜ್ಞಾನಾದ್ಯದ್ಧಿ ವಕ್ಷ್ಯತಿ ।
ತೇಜೋ ನಾಸ್ತಿ ಪರಂ ರಾಮೇ ತಪತೀವ ದಿವಾಕರೇ ॥ ೪

ಕಿಂ ಹಿ ಕೃತ್ವಾ ವಿಷಣ್ಣಸ್ತ್ವಂ ಕುತೋ ವಾ ಭಯಮಸ್ತಿ ತೇ ।
ಯತ್ ಪರಿತ್ಯಕ್ತುಕಾಮಸ್ತ್ವಂ ಮಾಮನನ್ಯಪರಾಯಣಾಮ್ ॥ ೫

## ಸರ್ಗ ೩೦

**ಸೀತೆಯು ಕಾಡಿಗೆ ಬರುವುದಕ್ಕೆ ಶ್ರೀ ರಾಮನು ಗತ್ಯಂತರವಿಲ್ಲದೆ ಸಮ್ಮತಿಸುವುದು.**

ಶ್ರೀರಾಮನು ಅನೇಕ ವಿಧದಲ್ಲಿ ಸಮಾಧಾನ ಹೇಳಿದರೂ ಗಣಿಸದೆ ಜಾನಕಿಯು ವನವಾಸಕ್ಕೆ ಹೋಗುವ ಉದ್ದೇಶದಿಂದ ಪತಿಯನ್ನು ನೋಡಿ ಪುನಃ ಹೇಳಿದಳು. ಬಹಳ ಉದ್ವೇಗಹೊಂದಿದ್ದ ಸೀತೆಯು ಶ್ರೀರಾಮನಲ್ಲಿದ್ದ ಪ್ರೇಮದಿಂದಲೂ ಸಲಿಗೆಯಿಂದಲೂ ಅವನನ್ನು ನಿಂದಿಸಿ ನುಡಿದಳು (೧-೨): "ನನ್ನ ತಂದೆಯಾದ ಮಿಥಿಲೇಶ್ವರನು ನೀನೊಬ್ಬ ಗಂಡುವೇಷದ ಹೆಣ್ಣು ಅಳಿಯನಾದೆಯೆಂದು ತಿಳಿದಿದ್ದನೆ? ಪ್ರಜ್ವಲಿಸುವ ಸೂರ್ಯನಂತೆ ಶ್ರೀರಾಮನು ಮಹಾತೇಜಸ್ವಿ ಎಂದು ಜನರಾಡಿಕೊಳ್ಳುವುದೆಲ್ಲ ಬರಿಯ ಸುಳ್ಳು. ಅಜ್ಞಾನದಿಂದ ಜನರು ಹಾಗೆ ಹೇಳಿಕೊಳ್ಳುತ್ತಾರೆ (೩-೪). ನಿನ್ನನ್ನೇ ನಂಬಿರುವ ನನ್ನನ್ನು ಬಿಟ್ಟುಹೋಗುವೆನೆಂದು ಹೇಳುತ್ತೀಯಲ್ಲ, ಯಾವ ಕಾರಣ

ದ್ಯುಮತ್ಸೇನಸುತಂ ವೀರ ಸತ್ಯವಂತಮನುವ್ರತಾಮ್ ।
ಸಾವಿತ್ರೀಮಿವ ಮಾಂ ವಿದ್ಧಿ ತ್ವಮಾತ್ಮವಶವರ್ತಿನೀಮ್ ॥ ೬

ನ ತ್ವಹಂ ಮನಸಾಪ್ಯನ್ಯಂ ದ್ರಷ್ಟಾಸ್ಮಿ ತ್ವದೃತೇಽನಘ ।
ತ್ವಯಾ ರಾಘವ ಗಚ್ಛೇಯಂ ಯಥಾನ್ಯಾಽಕುಲಪಾಂಸನೀ ॥ ೭

ಸ್ವಯಂ ತು ಭಾರ್ಯಾಂ ಕೌಮಾರೀಂ ಚಿರಮಧ್ಯುಷಿತಾಂ ಸತೀಮ್ ।
ಶೈಲೂಷ ಇವ ಮಾಂ ರಾಮ ಪರೇಭ್ಯೋ ದಾತುಮಿಚ್ಛಸಿ ॥ ೮

ಯಸ್ಯ ಪಥ್ಯಂ ಚ ರಾಮಾತ್ಥ ಯಸ್ಯ ಚಾರ್ಥೇಽವರುಧ್ಯಸೇ ।
ತ್ವಂ ತಸ್ಯ ಭವ ವಶ್ಯಶ್ಚ ವಿಧೇಯಶ್ಚ ಸದಾನಘ ॥ ೯

---

ದಿಂದ ನಿನಗೆ ವಿಷಾದ? ಯಾವ ಕಾರಣದಿಂದ ನಿನಗೆ ಭಯ? ವೀರಾಗ್ರಣಿ, ದ್ಯುಮತ್ಸೇನನ ಮಗನಾದ ಸತ್ಯವಂತನನ್ನು ಸೇವೆಮಾಡಿಕೊಂಡಿದ್ದ ಸಾವಿತ್ರಿಯಂತೆ ನಾನು ನಿನಗೆ ಅಧೀನಳಾಗಿ ನಿನ್ನ ಸೇವೆಮಾಡುತ್ತ ಇರತಕ್ಕವಳೆಂದು ತಿಳಿ (೫-೬). ಶ್ರೀರಾಮ, ನಾನು ಮನಸ್ಸಿನಲ್ಲಿಯೂ ಇನ್ನೊಬ್ಬನನ್ನು ಸ್ಮರಿಸಿಕೊಳ್ಳತಕ್ಕವಳಲ್ಲ. ನಾನು ನಿನ್ನೊಡನೆ ಬಂದೇ ಬರುತ್ತೇನೆ. ಕುಲಕ್ಕೆ ಕೆಟ್ಟಹೆಸರನ್ನು ತರಬಾರದೆಂಬ ಇನ್ನೊಬ್ಬ ಸ್ತ್ರೀಯಾದರೂ ಹೀಗೆಯೇ ಮಾಡುವಳು (೭). ಕುಮಾರಿಯಾಗಿ ನಿನ್ನ ಕೈಹಿಡಿದು ನಿನ್ನ ಸತಿಯಾಗಿ ಇಷ್ಟುಕಾಲ ಬಾಳಿದ್ದೇನೆ. ಈಗ ನನ್ನನ್ನು ನಾಟಕದಲ್ಲಿ ಕುಣಿಯುವ ನಟನಂತೆ ಕಂಡವರಿಗೆ ಒಪ್ಪಿಸಬೇಕೆಂದಿದ್ದೀಯಾ ? (೮). ಯಾವ ಧರ್ಮಕ್ಕೆ ಅನುಕೂಲವಾಗಿ ಆಚರಿಸಬೇಕೆಂದು ಸದಾ ಹೇಳುತ್ತಿರುವೆಯೋ, ಯಾವ ಧರ್ಮದ ಪಾಲನೆಗಾಗಿ ನೀನು ಇಂಥ ದಂಡನೆಗೆ ಒಳಗಾಗಿದ್ದೀಯೋ, ಆ ಧರ್ಮಕ್ಕೆ ನೀನು ಅಧೀನನಾಗಿರು. ಆ ಧರ್ಮಕ್ಕೆ ವಿಧೇಯನಾಗಿ ನಡೆದುಕೊ* (೯).

---

* ಈ ೯ನೆಯ ಶ್ಲೋಕಕ್ಕೆ ಅನೇಕ ವಿಧವಾಗಿ ತಾತ್ಪರ್ಯವನ್ನು ಹೇಳುತ್ತಾರೆ :

೧. ಯಾವ ಧರ್ಮಕ್ಕೆ ಅನುಕೂಲವಾಗಿ ಆಚರಿಸಬೇಕೆಂದು ಹೇಳುತ್ತೀಯೊ, ಯಾವ ಭರತನಿಗೋಸ್ಕರ ನೀನು ಈ ದಂಡನೆಗೆ ಸಿಕ್ಕಿದ್ದೀಯೊ, ಆ ಧರ್ಮಕ್ಕೆ ಅಧೀನನಾಗಿರು, ಆ ಭರತನಿಗೆ ನೀನೇ ವಿಧೇಯನಾಗಿ ನಡೆದುಕೊ.

೨. ಯಾರಿಗೆ ಅನುಕೂಲವಾಗಿ ನಾನಿರಬೇಕೆಂದು ಹೇಳುತ್ತೀಯೊ, ಯಾರ ಹಿತಕ್ಕಾಗಿ ನಾನು ಇಲ್ಲಿರಬೇಕೆಂದು ನನ್ನನ್ನು ತಡೆಯುತ್ತೀಯೊ, ಆ ತಾಯಂದಿರ ಶುಶ್ರೂಷೆಯನ್ನು ಮಾಡಿಕೊಂಡು ನೀನು ಇಲ್ಲಿಯೇ ಏಕಿರಬಾರದು ? ಇತ್ಯಾದಿ.

ಸ ಮಾಮನಾದಾಯ ವನಂ ನ ತ್ವಂ ಪ್ರಸ್ಥಾತುಮರ್ಹಸಿ ।
ತಪೋ ವಾ ಯದಿ ವಾರಣ್ಯಂ ಸ್ವರ್ಗೋ ವಾ ಸ್ಯಾತ್ತ್ವಯಾ ಸಹ ॥ ೧೦

ನ ಚ ಮೇ ಭವಿತಾ ತತ್ರ ಕಶ್ಚಿತ್ ಪಥಿ ಪರಿಶ್ರಮಃ ।
ಪೃಷ್ಠತಸ್ತವ ಗಚ್ಛಂತ್ಯಾ ವಿಹಾರಶಯನೇಷ್ವಿವ ॥ ೧೧

ಕುಶಕಾಶಶರೇಷೀಕಾ ಯೇ ಚ ಕಂಟಕಿನೋ ದ್ರುಮಾಃ ।
ತೂಲಾಜಿನಸಮಸ್ಪರ್ಶಾ ಮಾರ್ಗೇ ಮಮ ಸಹ ತ್ವಯಾ ॥ ೧೨

ಮಹಾವಾತಸಮುದ್ಧೂತಂ ಯನ್ಮಾಮವಕರಿಷ್ಯತಿ ।
ರಜೋ ರಮಣ ತನ್ಮನ್ಯೇ ಪರಾರ್ಧ್ಯಮಿವ ಚಂದನಮ್ ॥ ೧೩

ಶಾದ್ವಲೇಷು ಯಥಾ ಶಿಶ್ಯೇ ವನಾಂತೇ ವನಗೋಚರ ।
ಕುಥಾಸ್ತರಣತಲ್ಪೇಷು ಕಿಂ ಸ್ಯಾತ್ ಸುಖಕರಂ ತತಃ ॥ ೧೪

ಪತ್ರಂ ಮೂಲಂ ಫಲಂ ಯತ್ತ್ವಮಲ್ಪಂ ವಾ ಯದಿ ವಾ ಬಹು ।
ದಾಸ್ಯಸಿ ಸ್ವಯಮಾಹೃತ್ಯ ತನ್ಮೇಽಮೃತರಸೋಪಮಮ್ ॥ ೧೫

---

ನನ್ನನ್ನು ಇಲ್ಲಿ ಬಿಟ್ಟು ನೀನು ಹೋಗಲು ಸಾಧ್ಯವಿಲ್ಲ. **ತಪಸ್ಸೊ ಅರಣ್ಯವೋ ಸ್ವರ್ಗವೊ** - ಯಾವುದಾದರೂ ನಿನ್ನ ಜೊತೆಗೇ ನನಗೆ ಪ್ರಾಪ್ತವಾಗಲಿ. ನಿನ್ನ ಹಿಂದೆ ಬರುತ್ತಿದ್ದರೆ ನನಗೆ ಮಾರ್ಗಾಯಾಸವೂ ಆಗುವುದಿಲ್ಲ. ಉದ್ಯಾನದಲ್ಲಿ ವಿಹರಿಸಿದಂತೆಯೂ ಹಾಸಿಗೆಯಲ್ಲಿ ಮಲಗಿದಂತೆಯೂ ನಾನು ಭಾವಿಸುತ್ತೇನೆ (೧೦-೧೧). ನಿನ್ನ ಸಂಗಡ ಇದ್ದರೆ ದಾರಿಯಲ್ಲಿ ಹುಲ್ಲುದರ್ಭೆ ನೊದೆ ಪೊದೆ ಮುಳ್ಳುಮರಗಳು - ಎಲ್ಲವೂ ನನಗೆ **ಹತ್ತಿಯಂತೆ, ಚರ್ಮದಂತೆ ಮೃದುವಾಗಿ ತೋರುತ್ತವೆ.** ಕಾಂತ, ಬಿರುಗಾಳಿಯಿಂದ ತೂರಿಬಂದು ನನ್ನ ಮೇಲೆ ಎರಗುವ ಧೂಳಿಯನ್ನು **ಅತ್ಯುತ್ತಮವಾದ ಚಂದನಚೂರ್ಣದಂತೆ ತಿಳಿಯುತ್ತೇನೆ** (೧೨-೧೩). ಅರಣ್ಯದ ಹುಲ್ಲುಗಾವಲಿನಲ್ಲಿ ಮಲಗುವುದಕ್ಕಿಂತ ಇಲ್ಲಿ ರತ್ನಗಂಬಳಿಯನ್ನು ಹಾಸಿದ ಹಾಸಿಗೆಯಲ್ಲಿ ಮಲಗಿದರೆ ನನಗೆ ಸುಖವಾದೀತೆ? ಸೊಪ್ಪು ಗಡ್ಡೆ ಹಣ್ಣುಗಳು **ಸ್ವಲ್ಪವಿರಲಿ - ಬೇಕಾದಷ್ಟಿರಲಿ,** ನೀನು ಕೈಯಿಂದ ಕೊಟ್ಟರೆ ಅವೇ ನನಗೆ ಅಮೃತರಸದಂತಿರುವವು (೧೪-೧೫).

ನ ಮಾತುರ್ನ ಪಿತುಸ್ತತ್ರ ಸ್ಮರಿಷ್ಯಾಮಿ ನ ವೇಶ್ಮನಃ ।
ಆರ್ತವಾನ್ಯುಪಭುಂಜಾನಾ ಪುಷ್ಪಾಣಿ ಚ ಫಲಾನಿ ಚ ॥ ೧೬

ನ ಚ ತತ್ರ ಗತಃ ಕಿಂಚಿದ್ದ್ರಷ್ಟುಮರ್ಹಸಿ ವಿಪ್ರಿಯಮ್ ।
ಮತ್ಪ್ರತೇ ನ ಚ ತೇ ಶೋಕೋ ನ ಭವಿಷ್ಯಾಮಿ ದುರ್ಭರಾ ॥ ೧೭

ಯಸ್ತ್ವಯಾ ಸಹ ಸ ಸ್ವರ್ಗೋ ನಿರಯೋ ಯಸ್ತ್ವಯಾ ವಿನಾ ।
ಇತಿ ಜಾನನ್ ಪರಾಂ ಪ್ರೀತಿಂ ಗಚ್ಛ ರಾಮ ಮಯಾ ಸಹ ॥ ೧೮

ಅಥ ಮಾಮೇವಮವ್ಯಗ್ರಾಂ ವನಂ ನೈವ ನಯಿಷ್ಯಸಿ ।
ವಿಷಮದ್ಯೈವ ಪಾಸ್ಯಾಮಿ ಮಾ ವಿಶಂ ದ್ವಿಷತಾಂ ವಶಮ್ ॥ ೧೯

ಪಶ್ಚಾದಪಿ ಹಿ ದುಃಖೇನ ಮಮ ನೈವಾಸ್ತಿ ಜೀವಿತಮ್ ।
ಉಜ್ಝಿತಾಯಾಸ್ತ್ವಯಾ ನಾಥ ತದೈವ ಮರಣಂ ವರಮ್ ॥ ೨೦

ಇಮಂ ಹಿ ಸಹಿತುಂ ಶೋಕಂ ಮುಹೂರ್ತಮಪಿ ನೋತ್ಸಹೇ ।
ಕಿಂ ಪುನರ್ದಶ ವರ್ಷಾಣಿ ತ್ರೀಣಿ ಚೈಕಂ ಚ ದುಃಖಿತಾ ॥ ೨೧

---

ಅರಣ್ಯದಲ್ಲಿರುವಾಗ ನನ್ನ ತಾಯಿ ತಂದೆ ಮನೆ - ಒಂದನ್ನೂ ನಾನು ನೆನೆಸಿಕೊಳ್ಳುವುದಿಲ್ಲ. ಆಯಾ ಕಾಲದಲ್ಲಿ ದೊರಕುವ ಹೂಗಳನ್ನು ಮುಡಿದು ಹಣ್ಣುಗಳನ್ನು ತಿಂದು ಸಂತೋಷದಲ್ಲಿರುತ್ತೇನೆ. ವನದಲ್ಲಿರುವಾಗ ನೀನು ನನಗೋಸ್ಕರ ಯಾವ ಕಷ್ಟವನ್ನೂ ಕಾಣಬೇಕಾಗಿಲ್ಲ. ನನ್ನಿಂದ ನಿನಗೆ ಯಾವ ತೊಂದರೆಯೂ ಬರುವುದಿಲ್ಲ. ನಾನೆಂದಿಗೂ ನಿನಗೆ ಹೊರೆಯಾಗುವುದಿಲ್ಲ (೧೬-೧೭). ನಿನ್ನ ಜೊತೆಯಲ್ಲಿರುವುದೇ ನನಗೆ ಸ್ವರ್ಗ. ನಿನ್ನನ್ನು ಅಗಲಿರುವುದೇ ನನ್ನ ಪಾಲಿಗೆ ನರಕ. ಶ್ರೀರಾಮ, ನನ್ನ ಈ ಅತಿಶಯವಾದ ಪ್ರೇಮಕ್ಕೆ ಬೆಲೆಕೊಟ್ಟು ನನ್ನನ್ನು ಕರೆದುಕೊಂಡು ಹೋಗು. (೧೮).ವನವಾಸಕ್ಕೋಸ್ಕರ ನಿರ್ಭೀತಳಾಗಿ ನಿಂತಿರುವ ನನ್ನನ್ನು ಕರೆದೊಯ್ಯದಿದ್ದರೆ, ಈ ದಿನವೇ ವಿಷವನ್ನು ಕುಡಿಯುತ್ತೇನೆ. ಆಗದವರ ವಶಕ್ಕೆ ಎಂದಿಗೂ ಸಿಗಲಾರೆ. ನಾಥ, ನೀನು ಬಿಟ್ಟುಹೋದರೆ ಕಡೆಗಾದರೂ ಕೊರಗಿ ಕೊರಗಿ ಸಂಕಟದಿಂದ ನಾನು ಸಾಯುವುದು ನಿಶ್ಚಯ. ಅದಕ್ಕಿಂತ ಈಗಲೇ ನಿನ್ನೆದುರಿಗೆ ಪ್ರಾಣಬಿಡುವುದು ಉತ್ತಮ (೧೯-೨೦). ನಿನ್ನ ವಿರಹಶೋಕವನ್ನು ಒಂದು ಕ್ಷಣಕಾಲವೂ ನಾನು ತಡೆದುಕೊಳ್ಳಲಾರೆ. ಹೀಗಿರುವಾಗ

ಇತಿ ಸಾ ಶೋಕಸಂತಪ್ತಾ ವಿಲಪ್ಯ ಕರುಣಂ ಬಹು ।
ಚುಕ್ರೋಶ ಪತಿಮಾಯಸ್ತಾ ಭೃಶಮಾಲಿಂಗ್ಯ ಸಸ್ವರಮ್ ॥ ೨೨
ಸಾ ವಿದ್ಧಾ ಬಹುಭಿರ್ವಾಕ್ಯೈರ್ವಿಗ್ಧೇರಿವ ಗಜಾಂಗನಾ ।
ಚಿರಸಂನಿಯತಂ ಬಾಷ್ಪಂ ಮುಮೋಚಾಗ್ನಿಮಿವಾರಣಿಃ ॥ ೨೩
ತಸ್ಯಾಃ ಸ್ಫಟಿಕಸಂಕಾಶಂ ವಾರಿ ಸಂತಾಪಸಂಭವಮ್ ।
ನೇತ್ರಾಭ್ಯಾಂ ಪರಿಸುಸ್ರಾವ ಪಂಕಜಾಭ್ಯಾಮಿವೋದಕಮ್ ॥ ೨೪
ತತ್ಸಿತಾಮಲಚಂದ್ರಾಭಂ ಮುಖಮಾಯತಲೋಚನಮ್ ।
ಪರ್ಯಶುಷ್ಯತ ಬಾಷ್ಪೇಣ ಜಲೋದ್ಧೃತಮಿವಾಂಬುಜಮ್ ॥ ೨೫
ತಾಂ ಪರಿಷ್ವಜ್ಯ ಬಾಹುಭ್ಯಾಂ ವಿಸಂಜ್ಞಾಮಿವ ದುಃಖಿತಾಮ್ ।
ಉವಾಚ ವಚನಂ ರಾಮಃ ಪರಿವಿಶ್ವಾಸಯಂಸ್ತದಾ ॥ ೨೬
ನ ದೇವಿ ತವ ದುಃಖೇನ ಸ್ವರ್ಗಮಪ್ಯಭಿರೋಚಯೇ ।
ನ ಹಿ ಮೇಽಸ್ತಿ ಭಯಂ ಕಿಂಚಿತ್ ಸ್ವಯಂಭೋರಿವ ಸರ್ವತಃ ॥ ೨೭

---

ಹತ್ತು ವರ್ಷ, ಆಮೇಲೆ ಎರಡು ವರ್ಷ, ಅದರ ಮೇಲೆ ಇನ್ನೊಂದು ವರ್ಷ! ಇಷ್ಟು ಕಾಲ ಈ ಶೋಕವನ್ನು ಅನುಭವಿಸಲು ಹೇಗೆ ಸಾಧ್ಯ ?" ಎಂದಳು (೨೧). ಹೀಗೆ ಸೀತೆಯು ದುಃಖದಿಂದ ಬೆಂದು ಬಸವಳಿದು ಗೋಳಿಟ್ಟಳು. ಶ್ರೀರಾಮನನ್ನು ಬಿಗಿದಪ್ಪಿಕೊಂಡು ಗಟ್ಟಿಯಾಗಿ ಅಳತೊಡಗಿದಳು. ವಿಷಾಕ್ತಬಾಣಗಳಿಂದ ಹೊಡೆಯಲ್ಪಟ್ಟ ಹೆಣ್ಣಾನೆಯಂತೆ ಶ್ರೀರಾಮನ ಸಮಾಧಾನದ ಮಾತುಗಳಿಂದ ಅವಳು ನೊಂದಿದ್ದಳು. ಅರಣಿಯನ್ನು ಉಜ್ಜಿದಾಗ ಬೆಂಕಿಯು ಹೊರಡುವಂತೆ ಅವಳ ಕಣ್ಣುಗಳಿಂದ ಬಿಸಿಯಾದ ಬಾಷ್ಪವು ಉಕ್ಕಿತು (೨೨-೨೩). ಸ್ಫಟಿಕದಂತೆ ಸ್ವಚ್ಛವಾದ ಕಣ್ಣೀರು ಕಮಲದಂತಿದ್ದ ಎರಡು ಕಣ್ಣುಗಳಿಂದಲೂ ಬಳಬಳನೆ ಉಕ್ಕಿ ಹರಿಯಿತು. ವಿಶಾಲ ನೇತ್ರೆಯಾದ ಸೀತೆಯ ನಿರ್ಮಲ ಪೂರ್ಣಿಮಾಚಂದ್ರನಂತಿದ್ದ ಮುಖವು ನೀರಿನಿಂದ ಕಿತ್ತೆಸೆದ ತಾವರೆಯಂತೆ ಕಣ್ಣೀರಿನಿಂದ ಕಂದಿತು (೨೪-೨೫). ಆಗ ಶ್ರೀರಾಮನು ದುಃಖಾರ್ತಳಾಗಿ ಎಚ್ಚರದಪ್ಪಿದಂತಿದ್ದ ಸೀತೆಯನ್ನು ಆಲಿಂಗಿಸಿಕೊಂಡು ಹೀಗೆ ಸಂತೈಸಿದನು : "ಸೀತೆ, ನಿನಗೆ ದುಃಖವನ್ನು ಕೊಟ್ಟು ನಾನು ಸ್ವರ್ಗಸುಖವನ್ನಾದರೂ ಬಯಸೆನು. ಸಾಕ್ಷಾತ್ ಬ್ರಹ್ಮನಿಗೆ ಹೇಗೋ ಹಾಗೆ ನನಗೆ ಎಲ್ಲಿಯೂ ಯಾರಿಂದಲೂ ಭಯವಿಲ್ಲ (೨೬-೨೭).

ತವ ಸರ್ವಮಭಿಪ್ರಾಯಮವಿಜ್ಞಾಯ ಶುಭಾನನೇ ।
ವಾಸಂ ನ ರೋಚಯೇಽರಣ್ಯೇ ಶಕ್ತಿಮಾನಪಿ ರಕ್ಷಣೇ ॥ ೨೮

ಯತ್ ಸೃಷ್ಟಾಸಿ ಮಯಾ ಸಾರ್ಧಂ ವನವಾಸಾಯ ಮೈಥಿಲಿ ।
ನ ವಿಹಾತುಂ ಮಯಾ ಶಕ್ಯಾ ಕೀರ್ತಿರಾತ್ಮವತಾ ಯಥಾ ॥ ೨೯

ಧರ್ಮಸ್ತು ಗಜನಾಸೋರು ಸದ್ಭಿರಾಚರಿತಃ ಪುರಾ ।
ತಂ ಚಾಹಮನುವರ್ತೇಽದ್ಯ ಯಥಾ ಸೂರ್ಯಂ ಸುವರ್ಚಲಾ ॥ ೩೦

ನ ಖಲ್ವಹಂ ನ ಗಚ್ಛೇಯಂ ವನಂ ಜನಕನಂದಿನಿ ।
ವಚನಂ ತನ್ನಯತಿ ಮಾಂ ಪಿತುಃ ಸತ್ಯೋಪಬೃಂಹಿತಮ್ ॥ ೩೧

ಏಷ ಧರ್ಮಸ್ತು ಸುಶ್ರೋಣಿ ಪಿತುರ್ಮಾತುಶ್ಚ ವಶ್ಯತಾ ।
ಅತಶ್ಚ ತಂ ವ್ಯತಿಕ್ರಮ್ಯ ನಾಹಂ ಜೀವಿತುಮುತ್ಸಹೇ ॥ ೩೨

ಸ್ವಾಧೀನಂ ಸಮತಿಕ್ರಮ್ಯ ಮಾತರಂ ಪಿತರಂ ಗುರುಮ್ ।
ಅಸ್ವಾಧೀನಂ ಕಥಂ ದೈವಂ ಪ್ರಕಾರೈರಭಿರಾಧ್ಯತೇ ॥ ೩೩

---

ನಿನ್ನ ಹೃದ್ಗತವಾದ ಅಭಿಪ್ರಾಯವೆಲ್ಲವೂ ನನಗೆ ತಿಳಿದಿರಲಿಲ್ಲ. ಆದ್ದರಿಂದ ನಿನ್ನನ್ನು ರಕ್ಷಿಸಿಕೊಂಡಿರಲು ಸಮರ್ಥನಾದರೂ ಕಾಡಿಗೆ ಕರೆದೊಯ್ಯಲು ಇಷ್ಟಪಡಲಿಲ್ಲ. ಮೈಥಿಲಿ, ನನ್ನೊಡನೆ ವನವಾಸಮಾಡುವುದಕ್ಕಾಗಿ ನೀನು ಜನ್ಮವೆತ್ತಿದ್ದೀಯೆ. ಧೀರನಾದ ಪುರುಷನು ತನ್ನ ಕೀರ್ತಿಯನ್ನು ಹೇಗೆ ಬಿಡಲಾರನೊ, ಹಾಗೆ ನಾನು ನಿನ್ನನ್ನು ಬಿಟ್ಟಿರಲಾರೆ (೨೮-೨೯). ಪೂರ್ವದಲ್ಲಿ ಸಜ್ಜನರು ಆಚರಿಸಿದ ಧರ್ಮವನ್ನು ನಾನು ಅನುಸರಿಸಿ ಹೋಗುತ್ತಿದ್ದೇನೆ. ನೀನು ನನ್ನನ್ನು, ಸುವರ್ಚಲೆಯು ಸೂರ್ಯನನ್ನು ಅನುಸರಿಸುವಂತೆ, ಅನುಸರಿಸಿ ಬಾ. ಜಾನಕಿ, ನಾನು ಕಾಡಿಗೆ ಹೋಗದಿರಲು ಸಾಧ್ಯವಿಲ್ಲ. ಸತ್ಯಕ್ಕೆ ಕಟ್ಟುಬಿದ್ದ ನನ್ನ ತಂದೆಯ ಆಜ್ಞೆಯು ನನ್ನನ್ನು ಕಾಡಿಗೆ ಒಯ್ಯುತ್ತಿದೆ (೩೦-೩೧). ಸುಂದರಿ, ತಂದೆ ತಾಯಿಗಳ ಮಾತಿಗೆ ವಿಧೇಯನಾಗಿರುವುದು ಮೊದಲನೆಯ ಧರ್ಮ. ಅದನ್ನು ಅತಿಕ್ರಮಿಸಿ ಬಾಳುವುದಕ್ಕೆ ನನಗೆ ಇಚ್ಛೆಯಿಲ್ಲ. ತಾಯಿ ತಂದೆ ಗುರು - ಈ ಮೂವರೂ ಪ್ರತ್ಯಕ್ಷವಾಗಿರುವ ದೇವರು. ಇವರನ್ನು ಉಲ್ಲಂಘಿಸಿ ಕಣ್ಣಿಗೆ ಕಾಣದ ದೇವರನ್ನು ಆರಾಧಿಸುವ

ಯತ್ತ್ರಯಂ ತತ್ತ್ರಯೋ ಲೋಕಾಃ ಪವಿತ್ರಂ ತತ್ಸಮಂ ಭುವಿ ।
ನಾನ್ಯದಸ್ತಿ ಶುಭಾಪಾಂಗೇ ತೇನೇದಮಭಿರಾಧ್ಯತೇ ॥ ೩೪

ನ ಸತ್ಯಂ ದಾನಮಾನೌ ವಾ ನ ಯಜ್ಞಾಶ್ಚಾಪ್ತದಕ್ಷಿಣಾಃ ।
ತಥಾ ಬಲಕರಾಃ ಸೀತೇ ಯಥಾ ಸೇವಾ ಪಿತುರ್ಹಿತಾ ॥ ೩೫

ಸ್ವರ್ಗೋ ಧನಂ ವಾ ಧಾನ್ಯಂ ವಾ ವಿದ್ಯಾಃ ಪುತ್ರಾಃ ಸುಖಾನಿ ಚ ।
ಗುರುವೃತ್ತ್ಯನುರೋಧೇನ ನ ಕಿಂಚಿದಪಿ ದುರ್ಲಭಮ್ ॥ ೩೬

ದೇವಗಂಧರ್ವಗೋಲೋಕಾನ್ ಬ್ರಹ್ಮಲೋಕಾಂಸ್ತಥಾ ನರಾಃ ।
ಪ್ರಾಪ್ನುವಂತಿ ಮಹಾತ್ಮಾನೋ ಮಾತಾಪಿತೃಪರಾಯಣಾಃ ॥ ೩೭

ಸ ಮಾಂ ಪಿತಾ ಯತಾ ಶಾಸ್ತಿ ಸತ್ಯಧರ್ಮಪಥೇ ಸ್ಥಿತಃ ।
ತಥಾ ವರ್ತಿತುಮಿಚ್ಛಾಮಿ ಸ ಹಿ ಧರ್ಮಃ ಸನಾತನಃ ॥ ೩೮

ಮಮ ಸನ್ನಾ ಮತಿಃ ಸೀತೇ ತ್ವಾಂ ನೇತುಂ ದಂಡಕಾವನಮ್ ।
ವಸಿಷ್ಯಾಮೀತಿ ಸಾ ತ್ವಂ ಮಾಮನುಯಾತುಂ ಸುನಿಶ್ಚಿತಾ ॥ ೩೯

---

ಪ್ರಕಾರವಾದರೂ ಯಾವುದು ? (೩೨-೩೩). ಈ ಮೂವರ ಸೇವೆಯಲ್ಲಿ ಮೂರು ಲೋಕಗಳೂ ಅಡಗಿವೆ. ಇವರ ಸೇವೆಯಷ್ಟು ಪವಿತ್ರವಾದದ್ದು ಇನ್ನೊಂದಿಲ್ಲ. ಆದ್ದರಿಂದ ಸಜ್ಜನರು ತಾಯಿ ತಂದೆ ಗುರುಗಳ ಸೇವೆಗೆ ಮಹತ್ತ್ವವನ್ನು ಕೊಟ್ಟಿದ್ದಾರೆ. ಸೀತೆ, ಸತ್ಯವಾಗಲಿ ದಾನಮಾನಗಳಾಗಲಿ ಬೇಕಾದಷ್ಟು ದಕ್ಷಿಣೆಯನ್ನು ಕೊಟ್ಟು ಆಚರಿಸುವ ಯಜ್ಞಗಳಾಗಲಿ ತಂದೆಗೆ ಹಿತಕರವಾಗಿ ಮಾಡುವ ಸೇವೆಯಷ್ಟು ಸತ್ತ್ವಪೂರ್ಣವಾದವುಗಳಲ್ಲ (೩೪-೩೫). ಸ್ವರ್ಗ ಧನ ಧಾನ್ಯ ಪುತ್ರಸಂತಾನ ಸೌಖ್ಯಗಳೆಲ್ಲವೂ ಗುರು ಶುಶ್ರೂಷೆಯೊಂದರಿಂದಲೇ ಲಭಿಸುತ್ತವೆ. ಅದಕ್ಕೆ ದುರ್ಲಭವಾದುದೇ ಇಲ್ಲ. ಮಾತಾಪಿತೃಗಳನ್ನು ಭಕ್ತಿಯಿಂದ ಸೇವಿಸುವ ಪುಣ್ಯಾತ್ಮರಿಗೆ ದೇವಗಂಧರ್ವಲೋಕಗಳೂ ಉಂಟು. ಗೋಲೋಕಬ್ರಹ್ಮಲೋಕಗಳೂ ಉಂಟು (೩೬-೩೭). ಸತ್ಯಸಂಧನೂ ಧರ್ಮಿಷ್ಠನೂ ಆಗಿರುವ ತಂದೆಯು ನನಗೆ ಯಾವ ಆದೇಶವನ್ನು ಕೊಡುವನೊ, ಹಾಗೆ ನಡೆದುಕೊಳ್ಳುವುದು ನನ್ನ ಉದ್ದೇಶ. ಅದೇ ಸನಾತನ ಧರ್ಮ. ಸೀತೆ, ಈಗ ವನದಲ್ಲಿ ವಾಸಮಾಡುವೆನೆಂದೂ ನನ್ನೊಡನೆ ಬರುವೆನೆಂದೂ ನೀನು ದೃಢವಾಗಿ ನಿಶ್ಚಯಿಸಿದ್ದೀಯೆ. ನಿನ್ನನ್ನು ದಂಡಕಾವನಕ್ಕೆ

ಸಾ ಹಿ ಸ್ವಪ್ನಾನವದ್ಯಾಂಗೀ ವನಾಯ ಮದಿರೇಕ್ಷಣೇ ।
ಅನುಗಚ್ಛಸ್ವ ಮಾಂ ಭೀರು ಸಹಧರ್ಮಚರೀ ಭವ ॥ ೪೦

ಸರ್ವಥಾ ಸದೃಶಂ ಸೀತೇ ಮಮ ಸ್ವಸ್ಯ ಕುಲಸ್ಯ ಚ ।
ವ್ಯವಸಾಯಮನುಕ್ರಾಂತಾ ಸೀತೇ ತ್ವಮತಿಶೋಭನಮ್ ॥ ೪೧

ಆರಭಸ್ವ ಗುರುಶ್ರೋಣಿ ವನವಾಸಕ್ಷಮಾಃ ಕ್ರಿಯಾಃ ।
ನೇದಾನೀಂ ತ್ವದೃತೇ ಸೀತೇ ಸ್ವರ್ಗೋಽಪಿ ಮಮ ರೋಚತೇ ॥ ೪೨

ಬ್ರಾಹ್ಮಣೇಭ್ಯಶ್ಚ ರತ್ನಾನಿ ಭಿಕ್ಷುಕೇಭ್ಯಶ್ಚ ಭೋಜನಮ್ ।
ದೇಹಿ ಚಾಶಂಸಮಾನೇಭ್ಯಃ ಸಂತ್ವರಸ್ವ ಚ ಮಾ ಚಿರಮ್ ॥ ೪೩

ಭೂಷಣಾನಿ ಮಹಾರ್ಹಾಣಿ ವರವಸ್ತ್ರಾಣಿ ಯಾನಿ ಚ ।
ರಮಣೀಯಾಶ್ಚ ಯೇ ಕೇಚಿತ್ ಕ್ರೀಡಾರ್ಥಾಶ್ಚಾಪ್ಯುಪಸ್ಕರಾಃ ॥ ೪೪

ಶಯನೀಯಾನಿ ಯಾನಾನಿ ಮಮ ಚಾನ್ಯಾನಿ ಯಾನಿ ಚ ।
ದೇಹಿ ಸ್ವಭೃತ್ಯವರ್ಗಸ್ಯ ಬ್ರಾಹ್ಮಣಾನಾಮನಂತರಮ್ ॥ ೪೫

---

ಕರೆದೊಯ್ಯಲು ನನಗೆ ಮನಸ್ಸಾಗಿದೆ (೩೮-೩೯). ಪ್ರಿಯೆ, ಕೋಮಲಾಂಗಿಯಾದ ನೀನು ವನವಾಸಕ್ಕಾಗಿ ಜನಿಸಿದಂತಾಯಿತು. ನನ್ನೊಡನೆ ಬಂದು ಸಹಧರ್ಮಚಾರಿಣಿಯಾಗಿರು. ಸೀತೆ, ಒಟ್ಟಿನಲ್ಲಿ ನಮ್ಮೀರ್ವರ ವಂಶಕ್ಕೆ ಯೋಗ್ಯವಾದ ನಿರ್ಧಾರವನ್ನು ಕೈಗೊಂಡಿದ್ದೀಯೆ. ಬಹಳ ಒಳ್ಳೆಯದಾಯಿತು (೪೦-೪೧). ಮನೋಹರೆ, ನೀನಿಲ್ಲದ ಸ್ವರ್ಗವೂ ನನಗೆ ರುಚಿಸದು. ಇನ್ನು ಅರಣ್ಯಗಮನಕ್ಕೆ ಬೇಕಾದ ಸನ್ನಾಹಗಳನ್ನು ಮಾಡು. ಬ್ರಾಹ್ಮಣರಿಗೆ ಐಶ್ವರ್ಯವನ್ನು ದಾನಮಾಡು. ಭಿಕ್ಷುಕರಿಗೆ ಭೋಜನಮಾಡಿಸು. ಯಾರಿಗೆ ಏನು ಬೇಕೋ ಅದೆಲ್ಲವನ್ನೂ ಅವರಿಗೆ ಕೊಟ್ಟುಬಿಡು. ಎಲ್ಲವೂ ಬೇಗನೆ ನಡೆಯಲಿ; ತಡಮಾಡಬೇಡ (೪೨-೪೩). ನಮ್ಮಿಬ್ಬರ ಅಮೂಲ್ಯವಾದ ಒಡವೆಗಳು, ಉತ್ತಮವಸ್ತ್ರಗಳು, ರಮಣೀಯವಾದ ವಿಹಾರಸಾಮಗ್ರಿಗಳು, ಹಾಸಿಗೆ ಬಟ್ಟೆಗಳು, ವಾಹನಗಳು ಇನ್ನೂ ಇತರ ವಸ್ತುಗಳೆಲ್ಲವನ್ನೂ ಬ್ರಾಹ್ಮಣರಿಗೂ ಭೃತ್ಯವರ್ಗದವರಿಗೂ ಹಂಚಿಬಿಡು" ಎಂದು ಹೇಳಿದನು (೪೪-೪೫).

ಅನುಕೂಲಂ ತು ಸಾ ಭರ್ತುರ್ಜ್ಞಾತ್ವಾ ಗಮನಮಾತ್ಮನಃ ।
ಕ್ಷಿಪ್ರಂ ಪ್ರಮುದಿತಾ ದೇವೀ ದಾತುಮೇವೋಪಚಕ್ರಮೇ ॥ ೪೬

ತತಃ ಪ್ರಹೃಷ್ಟಾ ಪರಿಪೂರ್ಣಮಾನಸಾ
ಯಶಸ್ವಿನೀ ಭರ್ತುರವೇಕ್ಷ್ಯ ಭಾಷಿತಮ್ ।
ಧನಾನಿ ರತ್ನಾನಿ ಚ ದಾತುಮಂಗನಾ
ಪ್ರಚಕ್ರಮೇ ಧರ್ಮಭೃತಾಂ ಮನಸ್ವಿನೀ ॥ ೪೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಂಶಃ ಸರ್ಗಃ

ಆಗ ಸೀತಾದೇವಿಯು ತಾನು ಕಾಡಿಗೆ ಬರಲು ಪತಿಯು ಸಮ್ಮತಿಸಿದನೆಂದೂ ತನಗೆ ಅನುಕೂಲವಾಯಿತೆಂದೂ ಸಂತೋಷದಿಂದ ಹಿಗ್ಗುತ್ತ, ಅವನು ಹೇಳಿದಂತೆ ವಸ್ತುಗಳನ್ನು ದಾನಮಾಡುವುದಕ್ಕೆ ಆರಂಭಿಸಿಯೇ ಬಿಟ್ಟಳು (೪೬). ಕೀರ್ತಿವಂತಳೂ ಧೀರಳೂ ಆದ ಆ ದೇವಿಯು ಪತಿಯು ಹೇಳಿದ್ದನ್ನು ಕೇಳಿ ತನ್ನ ಇಷ್ಟವು ಸಿದ್ಧಿಸಿತೆಂದು ಹರ್ಷದಿಂದ ಉಬ್ಬಿದಳು. ತನ್ನಲ್ಲಿದ್ದ ಧನವನ್ನೂ ಶ್ರೇಷ್ಠವಸ್ತುಗಳನ್ನೂ ಧರ್ಮಿಷ್ಠರಾದ ಜನರಿಗೆ ಕೊಡಲು ಪ್ರಾರಂಭಿಸಿದಳು (೪೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತನೆಯ ಸರ್ಗ

## ಏಕತ್ರಿಂಶಃ ಸರ್ಗಃ

### ಲಕ್ಷ್ಮಣವನಾನುಗಮನಾಭ್ಯನುಜ್ಞಾ

ಏವಂ ಶ್ರುತ್ವಾ ತು ಸಂವಾದಂ ಲಕ್ಷ್ಮಣಃ ಪೂರ್ವಮಾಗತಃ ।
ಬಾಷ್ಪಪರ್ಯಾಕುಲಮುಖಃ ಶೋಕಂ ಸೋಢುಮಶಕ್ನುವನ್ ॥ ೧

ಸ ಭ್ರಾತುಶ್ಚರಣೌ ಗಾಢಂ ನಿಪೀಡ್ಯ ರಘುನಂದನಃ ।
ಸೀತಾಮುವಾಚಾತಿಯಶಾ ರಾಘವಂ ಚ ಮಹಾವ್ರತಮ್ ॥ ೨

ಯದಿ ಗಂತುಂ ಕೃತಾ ಬುದ್ಧಿರ್ವನಂ ಮೃಗಗಜಾಯುತಮ್ ।
ಅಹಂ ತ್ವಾನುಗಮಿಷ್ಯಾಮಿ ವನಮಗ್ರೇ ಧನುರ್ಧರಃ ॥ ೩

ಮಯಾ ಸಮೇತೋಽರಣ್ಯಾನಿ ಬಹೂನಿ ವಿಚರಿಷ್ಯಸಿ ।
ಪಕ್ಷಿಭಿರ್ಮೃಗಯೂಥೈಶ್ಚ ಸಂಘುಷ್ಟಾನಿ ಸಮಂತತಃ ॥ ೪

ನ ದೇವಲೋಕಾಕ್ರಮಣಂ ನಾಮರತ್ವಮಹಂ ವೃಣೇ ।
ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇ ನ ತ್ವಯಾ ವಿನಾ ॥ ೫

## ಸರ್ಗಃ ೩೧

### ಶ್ರೀರಾಮನು ಲಕ್ಷ್ಮಣನ ಪ್ರಾರ್ಥನೆಯನ್ನು ಮನ್ನಿಸಿ ಅವನು ವನಕ್ಕೆ ಬರಲು ಸಮ್ಮತಿಸುವುದು.

ಶ್ರೀರಾಮನು ಕೌಸಲ್ಯೆಯ ಭವನದಿಂದ ಬರುವಾಗ ಅವನೊಡನೆ ಲಕ್ಷ್ಮಣನೂ ಬಂದಿದ್ದನು. ಅವನು ಸೀತಾರಾಮರ ಸಂಭಾಷಣೆಯನ್ನು ಕೇಳಿ ದುಃಖವನ್ನು ತಡೆದುಕೊಳ್ಳಲಾರದೆ ಹೋದನು. ಕಣ್ಣೀರು ಉಕ್ಕಿ ಬಂದಿತು. ಆ ಕೀರ್ತಿಶಾಲಿಯು ಅಣ್ಣನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಸೀತೆಯನ್ನೂ ರಾಮನನ್ನೂ ನೋಡುತ್ತ ಹೀಗೆಂದನು (೧-೨) : "ಅಣ್ಣ, ಕ್ರೂರಮೃಗಗಳೂ ಕಾಡಾನೆಗಳೂ ತುಂಬಿರುವ ಅರಣ್ಯಕ್ಕೆ ಹೋಗಬೇಕೆಂದು ನೀವಿಬ್ಬರೂ ನಿಶ್ಚಯಿಸಿದಿರಿ. ಹಾಗಾದರೆ ನಾನು ಧನುರ್ಧಾರಿಯಾಗಿ ಮುಂದೆ ಹೋಗುತ್ತ ನಿಮ್ಮೊಡನೆ ಅರಣ್ಯಕ್ಕೆ ಬರುವೆನು. ಮೃಗಪಕ್ಷಿಗಳು ಕೂಗುತ್ತ ವ್ಯಾಪಿಸಿಕೊಂಡಿರುವ ವಿವಿಧಾರಣ್ಯಗಳಲ್ಲಿ ನನ್ನಿಂದ ಸಮೇತನಾಗಿ ನೀನು ಸಂಚರಿಸಬಹುದು (೩-೪). ನಿನ್ನನ್ನು ಬಿಟ್ಟು ದೇವಲೋಕವೇ ಲಭಿಸಿದರೂ

ಏವಂ ಬ್ರುವಾಣಃ ಸೌಮಿತ್ರಿರ್ವನವಾಸಾಯ ನಿಶ್ಚಿತಃ ।
ರಾಮೇಣ ಬಹುಭಿಃ ಸಾಂತ್ವೈರ್ನಿಷಿದ್ಧಃ ಪುನರಬ್ರವೀತ್ ॥ ೬

ಅನುಜ್ಞಾತಶ್ಚ ಭವತಾ ಪೂರ್ವಮೇವ ಯದಸ್ಮ್ಯಹಮ್ ।
ಕಿಮಿದಾನೀಂ ಪುನರಿದಂ ಕ್ರಿಯತೇ ಮೇ ನಿವಾರಣಮ್ ॥ ೭

ಯದರ್ಥಂ ಪ್ರತಿಷೇಧೋ ಮೇ ಕ್ರಿಯತೇ ಗಂತುಮಿಚ್ಛತಃ ।
ಏತದಿಚ್ಛಾಮಿ ವಿಜ್ಞಾತುಂ ಸಂಶಯೋಽಯಂ ಮಮಾನಘ ॥ ೮

ತತೋಽಬ್ರವೀನ್ಮಹಾತೇಜಾ ರಾಮೋ ಲಕ್ಷ್ಮಣಮಗ್ರತಃ ।
ಸ್ಥಿತಂ ಪ್ರಾಗ್ಗಾಮಿನಂ ವೀರಂ ಯಾಚಮಾನಂ ಕೃತಾಂಜಲಿಮ್ ॥ ೯

ಸ್ನಿಗ್ಧೋ ಧರ್ಮರತೋ ವೀರ ಸತತಂ ಸತ್ಪಥೇ ಸ್ಥಿತಃ ।
ಪ್ರಿಯಃ ಪ್ರಾಣಸಮೋ ವಶ್ಯೋ ಭ್ರಾತಾ ಚಾಪಿ ಸಖಾ ಚ ಮೇ ॥ ೧೦

---

ನನಗೆ ಬೇಡ. ಅಮರನಾಗುವುದೂ ಬೇಡ. ಮೂರು ಲೋಕದ ಪ್ರಭುತ್ವವಾದರೂ ನನಗೆ ಬೇಡ" ಎಂದನು. ಸೌಮಿತ್ರಿಯು ವನವಾಸಕ್ಕಾಗಿ ನಿರ್ಧರಿಸಿ ಈ ಪ್ರಕಾರ ಹೇಳಲು, ಶ್ರೀರಾಮನು ಅವನಿಗೆ ನಾನಾವಿಧದಲ್ಲಿ ಸಮಾಧಾನವನ್ನು ಹೇಳುತ್ತ ನೀನು ಬರುವುದು ಸರಿಯಲ್ಲವೆಂದು ತಿಳಿಸಿದನು. ಲಕ್ಷ್ಮಣನು ಅದಕ್ಕೆ ಒಪ್ಪದೆ ಪುನಃ ಹೇಳಿದನು (೫-೬) : "ಅಣ್ಣ, ಸದಾ ನಿನ್ನ ಜೊತೆಗೆ ಬರುತ್ತಿರಬಹುದೆಂದು ನನಗೆ ಎಂದೋ ಅನುಮತಿಯನ್ನು ಕೊಟ್ಟಿದ್ದೀಯೆ. ಹೀಗಿರುವಾಗ ಈಗ ನನ್ನನ್ನು ತಡೆಯುವುದೇಕೆ? ಅರಣ್ಯಕ್ಕೆ ಬರಲು ನನಗೆ ಅಪೇಕ್ಷೆಯಾಗಿರುವಾಗ ನೀನು ಬೇಡವೆನ್ನಬೇಕಾದರೆ ನಾನು ಯಾವ ತಪ್ಪುಮಾಡಿದೆನೊ ಎಂದು ಸಂದೇಹವಾಗುತ್ತದೆ. ಅದೇನೆಂದು ನಾನು ತಿಳಿಯಬೇಕು" ಎಂದನು (೭-೮). ಆಗ ಮಹಾತೇಜಸ್ವಿಯಾದ ಶ್ರೀರಾಮನು ತನಗಿಂತ ಮುಂದೆ ವನಕ್ಕೆ ಹೊರಡಲು ಸಿದ್ಧನಾಗಿ ಕೈಮುಗಿದು ಬೇಡುತ್ತ ನಿಂತಿದ್ದ ಆ ವೀರಾಗ್ರಣಿಯನ್ನು ಕುರಿತು ಹೀಗೆಂದನು : "ಲಕ್ಷ್ಮಣ, ನಿನಗೆ ನನ್ನಲ್ಲಿ ಪೂರ್ಣವಾದ ಸ್ನೇಹವಿದೆ. ಧರ್ಮನಿಷ್ಠನಾಗಿ ಸದಾ ಸನ್ಮಾರ್ಗದಲ್ಲಿ ನಡೆದುಕೊಳ್ಳುತ್ತೀಯೆ. ನನ್ನ ಪ್ರಾಣದಂತೆ ಪ್ರೀತಿಪಾತ್ರನಾಗಿದ್ದೀಯೆ. ನಾನು ಹೇಳಿದಂತೆ ಕೇಳತಕ್ಕ

ಮಯಾದ್ಯ ಸಹ ಸೌಮಿತ್ರೇ ತ್ವಯಿ ಗಚ್ಛತಿ ತದ್ವನಮ್ ।
ಕೋ ಭರಿಷ್ಯತಿ ಕೌಸಲ್ಯಾಂ ಸುಮಿತ್ರಾಂ ವಾ ಯಶಸ್ವಿನೀಮ್ ॥ ೧೧

ಅಭಿವರ್ಷತಿ ಕಾಮೈರ್ಯಃ ಪರ್ಜನ್ಯಃ ಪೃಥಿವೀಮಿವ ।
ಸ ಕಾಮಪಾಶಪರ್ಯಸ್ತೋ ಮಹಾತೇಜಾ ಮಹೀಪತಿಃ ॥ ೧೨

ಸಾ ಹಿ ರಾಜ್ಯಮಿದಂ ಪ್ರಾಪ್ಯ ನೃಪಸ್ಯಾಶ್ವಪತೇಃ ಸುತಾ ।
ದುಃಖಿತಾನಾಂ ಸಪತ್ನೀನಾಂ ನ ಕರಿಷ್ಯತಿ ಶೋಭನಮ್ ॥ ೧೩

ನ ಸ್ಮರಿಷ್ಯತಿ ಕೌಸಲ್ಯಾಂ ಸುಮಿತ್ರಾಂ ಚ ಸುದುಃಖಿತಾಮ್ ।
ಭರತೋ ರಾಜ್ಯಮಾಸಾದ್ಯ ಕೈಕೇಯ್ಯಾಂ ಪರ್ಯವಸ್ಥಿತಃ ॥ ೧೪

ತಾಮಾರ್ಯಾಂ ಸ್ವಯಮೇವೇಹ ರಾಜಾನುಗ್ರಹಣೇನ ವಾ ।
ಸೌಮಿತ್ರೇ ಭರ ಕೌಸಲ್ಯಾಮುಕ್ತಮರ್ಥಮಿಮಂ ಚರ ॥ ೧೫

ಏವಂ ಮಯಿ ಚ ತೇ ಭಕ್ತಿರ್ಭವಿಷ್ಯತಿ ಸುದರ್ಶಿತಾ ।
ಧರ್ಮಜ್ಞ ಗುರುಪೂಜಾಯಾಂ ಧರ್ಮಶ್ಚಾಪ್ಯತುಲೋ ಮಹಾನ್ ॥ ೧೬

---

ತಮ್ಮನಾಗಿ ಸ್ನೇಹಿತನಾಗಿದ್ದೀಯೆ (೯-೧೦). ಲಕ್ಷ್ಮಣ, ನನ್ನ ಸಂಗಡ ನೀನೂ ಕಾಡಿಗೆ ಬಂದುಬಿಟ್ಟರೆ ಕೌಸಲ್ಯೆಯನ್ನಾಗಲಿ ಯಶಸ್ವಿನಿಯಾದ ಸುಮಿತ್ರೆಯನ್ನಾಗಲಿ ನೋಡಿಕೊಳ್ಳುವವರಾರು ? ಪರ್ಜನ್ಯನು ಪೃಥ್ವಿಯ ಮೇಲೆ ಮಳೆ ಸುರಿಸುವಂತೆ, ಸಮಸ್ತ ಇಷ್ಟಾರ್ಥಗಳನ್ನೂ ತಂದು ಸುರಿದು ಪೋಷಿಸಬಲ್ಲ ತೇಜಸ್ವಿಯಾದ ಮಹಾರಾಜನು ಇಂದು ಕಾಮಪಾಶಕ್ಕೆ ಸಿಕ್ಕಿ ದಿಕ್ಕುತೋರದವನಾಗಿದ್ದಾನೆ (೧೧-೧೨). ಅಶ್ವಪತಿರಾಜನ ಮಗಳಾದ ಆ ಕೈಕೇಯಿಯ ವಶಕ್ಕೆ ರಾಜ್ಯವು ಬಂದಮೇಲೆ ಅವಳು ಸವತಿಯರಿಗೆ ಒಳ್ಳೆಯದನ್ನು ಮಾಡುವ ಸಂಭವವಿಲ್ಲ. ಭರತನಿಗೆ ರಾಜ್ಯಾಧಿಕಾರವು ಬಂದಾಗ ಅವನು ಕೈಕೇಯಿಯ ಮಾತಿನಂತೆ ನಡೆಯಬೇಕಾಗುತ್ತದೆ. ಅವನು ಕೌಸಲ್ಯೆಯನ್ನೂ ಅತ್ಯಂತದುಃಖಿತಳಾದ ಸುಮಿತ್ರೆಯನ್ನೂ ಸ್ಮರಣೆಗೇ ತಂದುಕೊಳ್ಳಲಾರನು (೧೩-೧೪). ಆದ್ದರಿಂದ ಲಕ್ಷ್ಮಣ, ನೀನು ಇಲ್ಲಿಯೇ ಇದ್ದು ನಿನ್ನ ಸಾಮರ್ಥ್ಯದಿಂದಲೊ ರಾಜಾನುಗ್ರಹವನ್ನು ದೊರಕಿಸುವುದರಿಂದಲೊ ನಿನ್ನ ತಾಯಿ ಮತ್ತು ಕೌಸಲ್ಯೆಯರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರು. ಹೀಗೆ ಮಾಡು. ನೀನು ಧರ್ಮವನ್ನು ಬಲ್ಲವನು. ಹೀಗೆ ಮಾಡಿದರೆ ನನ್ನಲ್ಲಿ

ಏವಂ ಕುರುಷ್ವ ಸೌಮಿತ್ರೇ ಮತ್ಪ್ರಿಯೇ ರಘುನಂದನ ।
ಅಸ್ಮಾಭಿರ್ವಿಪ್ರಹೀಣಾಯಾ ಮಾತುರ್ನೋ ನ ಭವೇತ್ ಸುಖಮ್ ॥
ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಶ್ಲಕ್ಷ್ಣಯಾ ಗಿರಾ ।
ಪ್ರತ್ಯುವಾಚ ತದಾ ರಾಮಂ ವಾಕ್ಯಜ್ಞೋ ವಾಕ್ಯಕೋವಿದಮ್ ॥ ೧೮
ತವೈವ ತೇಜಸಾ ವೀರ ಭರತಃ ಪೂಜಯಿಷ್ಯತಿ ।
ಕೌಸಲ್ಯಾಂ ಚ ಸುಮಿತ್ರಾಂ ಚ ಪ್ರಯತೋ ನಾತ್ರ ಸಂಶಯಃ ॥ ೧೯
ಯದಿ ದುಃಸ್ಥೋ ನ ರಕ್ಷೇತ ಭರತೋ ರಾಜ್ಯಮುತ್ತಮಮ್ ।
ಪ್ರಾಪ್ಯ ದುರ್ಮನಸಾ ವೀರ ಗರ್ವೇಣ ಚ ವಿಶೇಷತಃ ॥ ೨೦
ತಮಹಂ ದುರ್ಮತಿಂ ಕ್ರೂರಂ ವಧಿಷ್ಯಾಮಿ ನ ಸಂಶಯಃ ।
ತತ್ಪಕ್ಷ್ಯಾನಪಿ ತಾನ್ ಸರ್ವಾಂಸ್ತ್ರೀಲೋಕ್ಯಮಪಿ ಕಿಂ ತು ಸಾ ॥ ೨೧
ಕೌಸಲ್ಯಾ ಬಿಭೃಯಾದಾರ್ಯಾ ಸಹಸ್ರಮಪಿ ಮದ್ವಿಧಾನ್ ।
ಯಸ್ಯಾಃ ಸಹಸ್ರಂ ಗ್ರಾಮಾಣಾಂ ಸಂಪ್ರಾಪ್ತಮುಪಜೀವಿನಾಮ್ ॥ ೨೨

---

ಭಕ್ತಿಯಿಂದ ನಡೆದುಕೊಂಡಂತಾಗುವುದು. ನನಗೂ ಸಹ ಪೂಜ್ಯರಾದ ಅವರನ್ನು ಸೇವಿಸಿದರೆ ನಿನಗೆ ಅಧಿಕವಾದ ಶ್ರೇಯಸ್ಸುಂಟು (೧೫-೧೬). ನನಗೋಸ್ಕರ ಹೀಗೆ ಮಾಡು, ಲಕ್ಷ್ಮಣ. ನಾವು ಬಿಟ್ಟುಹೋದರೆ ನಮ್ಮ ಮಾತೆಯರಿಗೆ ಎಂದಿಗೂ ಸೌಖ್ಯವಿರುವುದಿಲ್ಲ" ಎಂದು ಹೇಳಿದನು. ಹೀಗೆ ಶ್ರೀರಾಮನು ಮೃದುವಾದ ಮಾತಿನಿಂದ ಸಮಾಧಾನ ಹೇಳುವುದನ್ನು ನೋಡಿ ವಾಗ್ವಿಶಾರದನಾದ ಲಕ್ಷ್ಮಣನು ಪ್ರತಿಯಾಗಿ ನುಡಿದನು (೧೭-೧೮) : "ಹೇ ವೀರಾಗ್ರಣಿ, ನಿನ್ನ ತೇಜೋಮಹಿಮೆಯಿಂದಲೇ ಭರತನು ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ಎಚ್ಚರಿಕೆಯಿಂದ ಗೌರವಿಸಿ ನೋಡಿಕೊಳ್ಳುವನು. ಇದರಲ್ಲಿ ಸಂದೇಹಬೇಡ (೧೯). ಒಂದು ವೇಳೆ ಅವನಿಗೆ ದೊಡ್ಡ ರಾಜ್ಯವು ಸಿಕ್ಕಿತೆಂಬ ಗರ್ವದಿಂದ ದುರ್ಬುದ್ಧಿ ಬಂದು ದುರ್ಮಾರ್ಗಕ್ಕಿಳಿದು ಅವರನ್ನು ಸರಿಯಾಗಿ ಪೋಷಿಸದೆ ಹೋದರೆ, ಕ್ರೂರನಾದ ಆ ದುಷ್ಟನನ್ನು ನಿಸ್ಸಂದೇಹವಾಗಿ ಕೊಂದುಹಾಕುತ್ತೇನೆ. ಅವನ ಪಕ್ಷವನ್ನು ವಹಿಸಿ ಮೂರು ಲೋಕದವರೆಲ್ಲರು ಬಂದರೂ ಅವರ ಹುಟ್ಟಡಗಿಸುವೆನು (೨೦-೨೧). ಆದರೆ ಕೌಸಲ್ಯಾದೇವಿಯು ನನ್ನಂಥ ಸಾವಿರ ಜನರನ್ನಾದರೂ ಸಾಕಬಲ್ಲಳು.

ತದಾತ್ಮಭರಣೇ ಚೈವ ಮಮ ಮಾತುಸ್ತಥೈವ ಚ ।
ಪರ್ಯಾಪ್ತಾ ಮದ್ವಿಧಾನಾಂ ಚ ಭರಣಾಯ ಮನಸ್ವಿನೀ ॥ ೨೩

ಕುರುಷ್ವ ಮಾಮನುಚರಂ ವೈಧರ್ಮ್ಯಂ ನೇಹ ವಿದ್ಯತೇ ।
ಕೃತಾರ್ಥೋಽಹಂ ಭವಿಷ್ಯಾಮಿ ತವ ಚಾರ್ಥಃ ಪ್ರಕಲ್ಪತೇ ॥ ೨೪

ಧನುರಾದಾಯ ಸಶರಂ ಖನಿತ್ರಪಿಟಕಾಧರಃ ।
ಅಗ್ರತಸ್ತೇ ಗಮಿಷ್ಯಾಮಿ ಪಂಥಾನಮನುದರ್ಶಯನ್ ॥ ೨೫

ಆಹರಿಷ್ಯಾಮಿ ತೇ ನಿತ್ಯಂ ಮೂಲಾನಿ ಚ ಫಲಾನಿ ಚ ।
ವನ್ಯಾನಿ ಯಾನಿ ಚಾನ್ಯಾನಿ ಸ್ವಾಹಾರಾಣಿ ತಪಸ್ವಿನಾಮ್ ॥ ೨೬

ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷು ರಂಸ್ಯತೇ ।
ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚ ತೇ ॥ ೨೭

ರಾಮಸ್ತ್ವನೇನ ವಾಕ್ಯೇನ ಸುಪ್ರೀತಃ ಪ್ರತ್ಯುವಾಚ ತಮ್ ।
ವ್ರಜಾಪೃಚ್ಛಸ್ವ ಸೌಮಿತ್ರೇ ಸರ್ವಮೇವ ಸುಹೃಜ್ಜನಮ್ ॥ ೨೮

---

ಆಕೆಗೆ ಜೀವನಾರ್ಥವಾಗಿ ಒಂದು ಸಾವಿರ ಗ್ರಾಮಗಳಿವೆ. ಆ ಮಾತೆಯು ತನ್ನ ಯೋಗಕ್ಷೇಮವನ್ನು ನೋಡಿಕೊಳ್ಳಲು ಸಮರ್ಥಳು. ನನ್ನ ತಾಯಿಯನ್ನೂ ನನ್ನಂಥ ಎಷ್ಟೋ ಜನರನ್ನೂ ಪೋಷಿಸಬಲ್ಲಳು (೨೨-೨೩). ಶ್ರೀರಾಮ, ನನ್ನನ್ನು ನಿನ್ನ ಪರಿಚಾರಕನನ್ನಾಗಿ ಮಾಡಿಕೊ. ಧರ್ಮಕ್ಕೆ ಯಾವ ಹಾನಿಯೂ ಇಲ್ಲ. ನಾನೂ ಕೃತಾರ್ಥನಾಗುತ್ತೇನೆ. ನಿನಗೂ ಅನುಕೂಲವಾಗುತ್ತದೆ. ಧನುರ್ಬಾಣಗಳನ್ನು ಧರಿಸಿ ಹಾರೆ ಬುಟ್ಟಿಗಳನ್ನು ಹಿಡಿದು ನಿನ್ನ ಮುಂದೆ ದಾರಿಯನ್ನು ತೋರಿಸುತ್ತ ಹೋಗುತ್ತೇನೆ (೨೪-೨೫). ಪ್ರತಿದಿನವೂ ತಪಸ್ವಿಗಳಿಗೆ ಯೋಗ್ಯವಾದ ಫಲಮೂಲಗಳನ್ನೂ ವನದಲ್ಲಿ ಸುಲಭವಾಗಿ ದೊರೆಯುವ ಇತರ ಪದಾರ್ಥಗಳನ್ನೂ ನಿನಗೆ ತಂದುಕೊಡುತ್ತೇನೆ. ನೀನು ಬೆಟ್ಟದ ತಪ್ಪಲುಗಳಲ್ಲಿ ವೈದೇಹಿಯೊಡನೆ ವಿಹರಿಸುತ್ತಿರಬಹುದು! ನೀನು ಎಚ್ಚರದಲ್ಲಿರುವಾಗಲೂ ನಿದ್ರಿಸುವಾಗಲೂ ನಾನು ಸಮಸ್ತಕಾರ್ಯವನ್ನೂ ನೋಡಿಕೊಳ್ಳುವೆನು" ಎಂದನು (೨೬-೨೭). ಆಗ ಶ್ರೀರಾಮನು ಸಂತುಷ್ಟನಾಗಿ "ಸೌಮಿತ್ರಿ, ಹಾಗೆಯೇ ಆಗಲಿ, ನೀನು ಹೋಗಿ ಆಪ್ತರೆಲ್ಲರಿಗೂ ಈ ವಿಷಯವನ್ನು ತಿಳಿಸಿ ಅವರ ಅನುಮತಿಯನ್ನು

ಯೇ ಚ ರಾಜ್ಞೋ ದದೌ ದಿವ್ಯೇ ಮಹಾತ್ಮಾ ವರುಣಃ ಸ್ವಯಮ್ ।
ಜನಕಸ್ಯ ಮಹಾಯಜ್ಞೇ ಧನುಷೀ ರೌದ್ರದರ್ಶನೇ ॥ ೨೯

ಅಭೇದ್ಯಕವಚೇ ದಿವ್ಯೇ ತೂಣೀ ಚಾಕ್ಷಯಸಾಯಕೌ ।
ಆದಿತ್ಯವಿಮಲೌ ಚೋಭೌ ಖಡ್ಗೌ ಹೇಮಪರಿಷ್ಕೃತೌ ॥ ೩೦

ಸತ್ಕೃತ್ಯ ನಿಹಿತಂ ಸರ್ವಮೇತದಾಚಾರ್ಯಸದ್ಮನಿ ।
ಸರ್ವಮಾಯುಧಮಾದಾಯ ಕ್ಷಿಪ್ರಮಾವ್ರಜ ಲಕ್ಷ್ಮಣ ॥ ೩೧

ಸ ಸುಹೃಜ್ಜನಮಾಮಂತ್ರ್ಯ ವನವಾಸಾಯ ನಿಶ್ಚಿತಃ ।
ಇಕ್ಷ್ವಾಕುಗುರುಮಾಗಮ್ಯ ಜಗ್ರಾಹಾಯುಧಮುತ್ತಮಮ್ ॥ ೩೨

ತದ್ದಿವ್ಯಂ ರಘುಶಾರ್ದೂಲಃ ಸತ್ಕೃತಂ ಮಾಲ್ಯಭೂಷಿತಮ್ ।
ರಾಮಾಯ ದರ್ಶಯಾಮಾಸ ಸೌಮಿತ್ರಿಃ ಸರ್ವಮಾಯುಧಮ್ ॥ ೩೩

ತಮುವಾಚಾತ್ಮವಾನ್ ರಾಮಃ ಪ್ರೀತ್ಯಾ ಲಕ್ಷ್ಮಣಮಾಗತಮ್ ।
ಕಾಲೇ ತ್ವಮಾಗತಃ ಸೌಮ್ಯ ಕಾಂಕ್ಷಿತೇ ಮಮ ಲಕ್ಷ್ಮಣ ॥ ೩೪

---

ಪಡೆದು ಬಾ. ಹಿಂದೆ ಮಹಾತ್ಮನಾದ ವರುಣನು ಜನಕಮಹಾರಾಜನಿಗೆ ಯಜ್ಞಕಾಲದಲ್ಲಿ ಕೆಲವು ದಿವ್ಯಾಯುಧಗಳನ್ನು ಕೊಟ್ಟಿದ್ದನು. (ಅವನ್ನು ಜನಕರಾಜನು ನಮಗೆ ಕೊಟ್ಟಿದ್ದಾನಷ್ಟೆ ) (೨೮-೨೯). ರೌದ್ರಾಕಾರದ ಎರಡು ದಿವ್ಯಧನುಸ್ಸುಗಳು, ಅಭೇದ್ಯಕವಚಗಳೆರಡು, ಅಕ್ಷಯಬಾಣಗಳಿರುವ ಎರಡು ಬತ್ತಳಿಕೆಗಳು, ಸೂರ್ಯನಂತೆ ಥಳಥಳಿಸುವ ಚಿನ್ನದ ಹಿಡಿಯುಳ್ಳ ಖಡ್ಗಗಳೆರಡು - ಇವಿಷ್ಟನ್ನು ತೆಗೆದುಕೊಂಡು ಬಾ. ಇವೆಲ್ಲವನ್ನೂ ಗಂಧಮಾಲ್ಯಾದಿಗಳಿಂದ ಪೂಜಿಸಿ ನಮ್ಮ ಗುರುಗಳ ಮನೆಯಲ್ಲಿ ಇರಿಸಿದ್ದೇನೆ; ಲಕ್ಷ್ಮಣ, ನೀನು ಬೇಗನೆ ಬರಬೇಕು" ಎಂದು ಹೇಳಿದನು (೩೦-೩೧). ಅನಂತರ ಲಕ್ಷ್ಮಣನು ವನವಾಸಕ್ಕಾಗಿ ನಿರ್ಧರಿಸಿ ತನ್ನ ಆಪ್ತರೆಲ್ಲರನ್ನೂ ಕಂಡು ಅವರ ಅನುಮತಿಯನ್ನು ಪಡೆದನು. ಆಮೇಲೆ ಕುಲಗುರುಗಳಾದ ವಸಿಷ್ಠರ ಬಳಿಗೆ ಹೋಗಿ ಗಂಧಮಾಲ್ಯಾದಿಗಳಿಂದ ಅರ್ಚಿಸಲ್ಪಟ್ಟ ಆ ದಿವ್ಯಾಯುಧಗಳನ್ನು ತಂದು ಶ್ರೀರಾಮನಿಗೆ ತೋರಿಸಿದನು (೩೨-೩೩). ಆಗ ಶ್ರೀರಾಮನು ಪ್ರೀತಿಯಿಂದ ಲಕ್ಷ್ಮಣನನ್ನು ನೋಡಿ "ಸೌಮ್ಯ, ಲಕ್ಷ್ಮಣ, ನಿನ್ನನ್ನು ಎದುರು ನೋಡುತ್ತಿದ್ದೆನು. ಸರಿಯಾದ ಕಾಲಕ್ಕೆ ಬಂದೆ. ಈಗ

ಅಹಂ ಪ್ರದಾತುಮಿಚ್ಛಾಮಿ ಯದಿದಂ ಮಾಮಕಂ ಧನಮ್ ।
ಬ್ರಾಹ್ಮಣೇಭ್ಯಸ್ತಪಸ್ವಿಭ್ಯಸ್ತ್ವಯಾ ಸಹ ಪರಂತಪ ॥ ೩೫

ವಸಂತೀಹ ದೃಢಂ ಭಕ್ತ್ಯಾ ಗುರುಷು ದ್ವಿಜಸತ್ತಮಾಃ ।
ತೇಷಾಮಪಿ ಚ ಮೇ ಭೂಯಃ ಸರ್ವೇಷಾಂ ಚೋಪಜೀವಿನಾಮ್ ॥

ವಸಿಷ್ಠಪುತ್ರಂ ತು ಸುಯಜ್ಞಮಾರ್ಯಂ
ತ್ವಮಾನಯಾಶು ಪ್ರವರಂ ದ್ವಿಜಾನಾಮ್ ।
ಅಭಿಪ್ರಯಾಸ್ಯಾಮಿ ವನಂ ಸಮಸ್ತಾನ್
ಅಭ್ಯರ್ಚ್ಯ ಶಿಷ್ಟಾನಪರಾನ್ ದ್ವಿಜಾತೀನ್ ॥ ೩೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕತ್ರಿಂಶಃ ಸರ್ಗಃ

ನನ್ನಲ್ಲಿರುವ ಧನವೆಲ್ಲವನ್ನೂ ತಪಸ್ವಿಗಳಾದ ಬ್ರಾಹ್ಮಣರಿಗೆ ನಿನ್ನ ಸಹಾಯದಿಂದ ದಾನಮಾಡುತ್ತೇನೆ. ವಿಶೇಷವಾಗಿ ಗುರುಭಕ್ತಿಯುಳ್ಳ ದ್ವಿಜೋತ್ತಮರಿಗೂ ನಮ್ಮನ್ನು ನಂಬಿ ಜೀವಿಸುತ್ತಿರುವ ಸಮಸ್ತ ಭೃತ್ಯರಿಗೂ ಕೊಟ್ಟುಬಿಡುತ್ತೇನೆ (೩೪-೩೬). ವಿಪ್ರೋತ್ತಮನಾಗಿ ಪೂಜ್ಯನಾಗಿರುವ ವಸಿಷ್ಠಪುತ್ರನಾದ ಸುಯಜ್ಞನನ್ನು ತ್ವರೆಯಿಂದ ಕರೆದುಕೊಂಡು ಬಾ. ಅವನನ್ನೂ ಶಿಷ್ಟರಾದ ಇತರ ವಿಪ್ರರನ್ನೂ ಪೂಜಿಸಿ ಅರಣ್ಯಕ್ಕೆ ಹೊರಡೋಣ" ಎಂದನು (೩೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತೊಂದನೆಯ ಸರ್ಗ

## ದ್ವಾತ್ರಿಂಶಃ ಸರ್ಗಃ

### ವಿತ್ತವಿಶ್ರಾಣನಮ್

ತತಃ ಶಾಸನಮಾಜ್ಞಾಯ ಭ್ರಾತುಃ ಶುಭತರಂ ಪ್ರಿಯಮ್ ।
ಗತ್ವಾ ಸ ಪ್ರವಿವೇಶಾಶು ಸುಯಜ್ಞಸ್ಯ ನಿವೇಶನಮ್ ॥ ೧

ತಂ ವಿಪ್ರಮಗ್ನ್ಯಗಾರಸ್ಥಂ ವಂದಿತ್ವಾ ಲಕ್ಷ್ಮಣೋಽಬ್ರವೀತ್ ।
ಸಖೇಽಭ್ಯಾಗಚ್ಛ ಪಶ್ಯ ತ್ವಂ ವೇಶ್ಮ ದುಷ್ಕರಕಾರಿಣಃ ॥ ೨

ತತಃ ಸಂಧ್ಯಾಮುಪಾಸ್ಯಾಶು ಗತ್ವಾ ಸೌಮಿತ್ರಿಣಾ ಸಹ ।
ಜುಷ್ಟಂ ತತ್ರಾವಿಶಲ್ಲಕ್ಷ್ಮ್ಯಾ ರಮ್ಯಂ ರಾಮನಿವೇಶನಮ್ ॥ ೩

ತಮಾಗತಂ ವೇದವಿದಂ ಪ್ರಾಂಜಲಿಃ ಸೀತಯಾ ಸಹ ।
ಸುಯಜ್ಞಮಭಿಚಕ್ರಾಮ ರಾಘವೋಽಗ್ನಿಮಿವಾರ್ಚಿತಮ್ ॥ ೪

ಜಾತರೂಪಮಯೈರ್ಮುಖ್ಯೈರಂಗದೈಃ ಕುಂಡಲೈಃ ಶುಭೈಃ ।
ಸಹೇಮಸೂತ್ರೈರ್ಮಣಿಭಿಃ ಕೇಯೂರೈರ್ವಲಯೈರಪಿ ॥ ೫

## ಸರ್ಗ ೩೨

**ವನವಾಸಕ್ಕೆ ಹೊರಡುವ ಮೊದಲು ಶ್ರೀರಾಮನು ದಾನಧರ್ಮಗಳನ್ನು ಮಾಡುವುದು.**

ಹೀಗೆ ಶ್ರೀರಾಮನು ಶ್ರೇಯಸ್ಕರವೂ ಪ್ರಿಯವೂ ಆದ ಆದೇಶವನ್ನು ಈಯಲು, ಲಕ್ಷ್ಮಣನು ತ್ವರೆಯಿಂದ ಸುಯಜ್ಞನ ಗೃಹಕ್ಕೆ ಹೋದನು. ಅಗ್ನಿಶಾಲೆಯಲ್ಲಿದ್ದ ಆ ವಿಪ್ರನಿಗೆ ವಂದಿಸಿ "ಮಿತ್ರ, ಶ್ರೀರಾಮನು ಇತರರಿಗೆ ಅಸಾಧ್ಯವಾದ ಒಂದು ದೊಡ್ಡಕಾರ್ಯಕ್ಕೆ ಕೈಹಾಕಿರುವನು. ಅವನ ಭವನಕ್ಕೆ ಬಂದು ನೋಡು" ಎಂದನು (೧-೨). ಆಗ ಸುಯಜ್ಞನು ಮಾಧ್ಯಾಹ್ನಿಕವನ್ನು ಮುಗಿಸಿ ಲಕ್ಷ್ಮಣನೊಡನೆ ಬಂದು ಸಂಪತ್ಸಮೃದ್ಧವಾಗಿ ವೈಭವದಿಂದ ರಂಜಿಸುತ್ತಿದ್ದ ಶ್ರೀರಾಮನ ಭವನವನ್ನು ಪ್ರವೇಶಿಸಿದನು. ಆಗ ಹವಿಸ್ಸನ್ನು ಸ್ವೀಕರಿಸಿ ಜ್ವಲಿಸುವ ಅಗ್ನಿಯಂತಿದ್ದ ಆ ವೇದಪಾರಂಗತ ನನ್ನು ಶ್ರೀರಾಮನು ಸೀತೆಯೊಡನೆ ಎದ್ದುನಿಂತು ಸ್ವಾಗತಿಸಿದನು (೩-೪). ಅನಂತರ ಭುಜಗಳಲ್ಲಿ ಧರಿಸುವ ಅಂಗದ ಕೇಯೂರಗಳೆಂಬ ಎರಡು ಬಗೆಯ

ಅನ್ಯೈಶ್ಚ ರತ್ನೈರ್ಬಹುಭಿಃ ಕಾಕುತ್ಸ್ಥಃ ಪ್ರತ್ಯಪೂಜಯತ್ ।
ಸುಯಜ್ಞಂ ಸ ತದೋವಾಚ ರಾಮಃ ಸೀತಾಪ್ರಚೋದಿತಃ ॥ ೬

ಹಾರಂ ಚ ಹೇಮಸೂತ್ರಂ ಚ ಭಾರ್ಯಾಯೈ ಸೌಮ್ಯ ಹಾರಯ ।
ರಶನಾಂ ಚಾಧುನಾ ಸೀತಾ ದಾತುಮಿಚ್ಛತಿ ತೇ ಸಖೇ ॥ ೭

ಅಂಗದಾನಿ ವಿಚಿತ್ರಾಣಿ ಕೇಯೂರಾಣಿ ಶುಭಾನಿ ಚ ।
ಪ್ರಯಚ್ಛತಿ ಸಖೇ ತುಭ್ಯಂ ಭಾರ್ಯಾಯೈ ಗಚ್ಛತೀ ವನಮ್ ॥ ೮

ಪರ್ಯಂಕಮಗ್ರ್ಯಾಸ್ತರಣಂ ನಾನಾರತ್ನವಿಭೂಷಿತಮ್ ।
ತಮಪೀಚ್ಛತಿ ವೈದೇಹೀ ಪ್ರತಿಷ್ಠಾಪಯಿತುಂ ತ್ವಯಿ ॥ ೯

ನಾಗಃ ಶತ್ರುಂಜಯೋ ನಾಮ ಮಾತುಲೋ ಯಂ ದದೌ ಮಮ ।
ತಂ ತೇ ನಿಷ್ಕಸಹಸ್ರೇಣ ದದಾಮಿ ದ್ವಿಜಪುಂಗವ ॥ ೧೦

ಇತ್ಯುಕ್ತಃ ಸ ಹಿ ರಾಮೇಣ ಸುಯಜ್ಞಃ ಪ್ರತಿಗೃಹ್ಯ ತತ್ ।
ರಾಮಲಕ್ಷ್ಮಣಸೀತಾನಾಂ ಪ್ರಯುಯೋಜಾಶಿಷಃ ಶಿವಾಃ ॥ ೧೧

---

ಚಿನ್ನದ ಆಭರಣಗಳನ್ನೂ ಸುಂದರವಾದ ಕುಂಡಲಗಳನ್ನೂ ಮಣಿಖಚಿತವಾದ ಬಂಗಾರದ ಸರಗಳನ್ನೂ ನಾನಾ ಬಗೆಯ ರತ್ನಗಳನ್ನೂ ಸುಯಜ್ಞನಿಗೆ ಅರ್ಪಿಸಿ ಪೂಜಿಸಿದನು. ಆಮೇಲೆ ಸೀತೆಯ ಪ್ರೇರಣೆಯಂತೆ ಹೀಗೆಂದನು (೫-೬) : "ಸೌಮ್ಯ, ಸೀತೆಯು ನಿನ್ನ ಪತ್ನಿಗೋಸ್ಕರ ತನ್ನ ಮುತ್ತಿನ ಸರ, ಚಿನ್ನದ ಸರದಾಳಿ, ಡಾಬುಗಳನ್ನು ಕೊಡಬೇಕೆಂದಿದ್ದಾಳೆ. ಅಲ್ಲದೆ ವಿವಿಧಾಕಾರದಲ್ಲಿ ಅಂದವಾಗಿರುವ ಅಂಗದ ಕೇಯೂರಗಳನ್ನು ನಿನ್ನ ಪತ್ನಿಗೆ ಕೊಡುತ್ತಾಳೆ; ಸೀತೆಯು ಈಗ ವನಕ್ಕೆ ಹೊರಟಿದ್ದಾಳೆ (೭-೮). ಮಿತ್ರ, ಉತ್ತಮವಾದ ಹೊದಿಕೆಗಳಿಂದ ಕೂಡಿ ನಾನಾ ರತ್ನಭೂಷಿತವಾದ ಒಂದು ಮಂಚವಿದೆ. ಅದನ್ನೂ ಸೀತೆಯು ನಿನಗೆ ಒಪ್ಪಿಸಬೇಕೆಂದಿದ್ದಾಳೆ. ನನ್ನ ಸೋದರಮಾವನು ನನಗೆ ಶತ್ರುಂಜಯವೆಂಬ ಆನೆಯನ್ನು ಕೊಟ್ಟಿದ್ದನು. ಬ್ರಾಹ್ಮಣೋತ್ತಮ, ಸಾವಿರ ಸುವರ್ಣನಾಣ್ಯಗಳನ್ನು ಜೊತೆಗೆ ಇಟ್ಟು ಆನೆಯನ್ನು ನಿನಗೆ ಕೊಟ್ಟು ಬಿಡುತ್ತೇನೆ" ಎಂದನು (೯-೧೦). ಆಗ ಸುಯಜ್ಞನು ಅವುಗಳನ್ನು ಸ್ವೀಕರಿಸಿ ರಾಮಲಕ್ಷ್ಮಣರಿಗೂ ಸೀತೆಗೂ ಶುಭವಾಗಲೆಂದು ಆಶೀರ್ವದಿಸಿದನು.

ಅಥ ಭ್ರಾತರಮವ್ಯಗ್ರಂ ಪ್ರಿಯಂ ರಾಮಃ ಪ್ರಿಯಂವದಮ್ ।
ಸೌಮಿತ್ರಿಂ ತಮುವಾಚೇದಂ ಬ್ರಹ್ಮೇವ ತ್ರಿದಶೇಶ್ವರಮ್ ॥ ೧೨

ಅಗಸ್ತ್ಯಂ ಕೌಶಿಕಂ ಚೈವ ತಾವುಭೌ ಬ್ರಾಹ್ಮಣೋತ್ತಮೌ ।
ಅರ್ಚಯಾಹೂಯ ಸೌಮಿತ್ರೇ ರತ್ನೈಃ ಸಸ್ಯಮಿವಾಂಬುಭಿಃ ॥ ೧೩

ತರ್ಪಯಸ್ವ ಮಹಾಬಾಹೋ ಗೋಸಹಸ್ರೈಶ್ಚ ಮಾನದ ।
ಸುವರ್ಣೈ ರಾಜತೈಶ್ಚೈವ ಮಣಿಭಿಶ್ಚ ಮಹಾಧನೈಃ ॥ ೧೪

ಕೌಸಲ್ಯಾಂ ಚ ಸುಮಿತ್ರಾಂ ಚ ಭಕ್ತಃ ಪರ್ಯುಪತಿಷ್ಠತಿ ।
ಆಚರ್ಯಸ್ತೈತ್ತಿರೀಯಾಣಾಮಭಿರೂಪಶ್ಚ ವೇದವಿತ್ ॥ ೧೫

ತಸ್ಯ ಯಾನಂ ಚ ದಾಸೀಶ್ಚ ಸೌಮಿತ್ರೇ ಸಂಪ್ರದಾಪಯ ।
ಕೌಶೇಯಾನಿ ಚ ವಸ್ತ್ರಾಣಿ ಯಾವತ್ತುಷ್ಯತಿ ಸ ದ್ವಿಜಃ ॥ ೧೬

ಸೂತಶ್ಚಿತ್ರರಥಶ್ಚಾರ್ಯಃ ಸವಯಾಃ ಸುಚಿರೋಷಿತಃ ।
ತೋಷಯೈನಂ ಮಹಾರ್ಹೈಶ್ಚ ರತ್ನೈರ್ವಸ್ತ್ರೈರ್ಧನೈಸ್ತಥಾ ॥ ೧೭

---

ಅನಂತರ ಶ್ರೀರಾಮನು ಕಾರ್ಯದಕ್ಷನೂ ಪ್ರಿಯಸೋದರನೂ ಆದ ಸೌಮಿತ್ರಿಯನ್ನುದ್ದೇಶಿಸಿ, ಬ್ರಹ್ಮನು ಇಂದ್ರನಿಗೆ ಹೇಳುವಂತೆ ಹೀಗೆ ಸೂಚಿಸಿದನು (೧೧-೧೨) : "ಲಕ್ಷ್ಮಣ, ಅಗಸ್ತ್ಯ ಕೌಶಿಕರೆಂಬ ಆ ಇಬ್ಬರು ಬ್ರಾಹ್ಮಣೋತ್ತಮರನ್ನು ಕರೆದುಕೊಂಡು ಬಾ. ಸಸ್ಯಕ್ಕೆ ನೀರನ್ನೆರೆಯುವಂತೆ ಅವರಿಗೆ ರತ್ನಗಳನ್ನು ಕೊಟ್ಟು ಗೌರವಿಸು. ಅವರಿಗೆ ಸಾವಿರಾರು ಗೋವುಗಳನ್ನೂ ಬೆಳ್ಳಿಬಂಗಾರಗಳನ್ನೂ ಧನವನ್ನೂ ಕೊಟ್ಟು ಸಂತೋಷಪಡಿಸು (೧೩-೧೪). ತೈತ್ತಿರೀಯಶಾಖೆಯ ವಿದ್ಯಾರ್ಥಿಗಳಿಗೆ ಆಚಾರ್ಯನಾದ ಒಬ್ಬ ವೇದವಿದ್ವಾಂಸನು ನಮ್ಮ ಈರ್ವರು ತಾಯಂದಿರನ್ನು ಆಶ್ರಯಿಸಿಕೊಂಡಿದ್ದಾನೆ. ಆಗಾಗ ಬಂದು ಅವರಿಗೆ ಆಶೀರ್ವದಿಸಿ ಹೋಗುತ್ತಾನೆ. ಅವನು ಒಳ್ಳೆಯ ಗುಣಶಾಲಿ. ಆ ಬ್ರಾಹ್ಮಣನಿಗೆ ವಾಹನ, ಸೇವಕರು ಮತ್ತು ರೇಶ್ಮೆಯ ಬಟ್ಟೆಗಳನ್ನು ತೃಪ್ತಿಯಾಗುವಷ್ಟು ಕೊಡಿಸು (೧೫-೧೬). ಚಿತ್ರರಥನೆಂಬ ಸಾರಥಿಯು ನಮಗೆ ಮಿತ್ರನಾಗಿ ಬಹುಕಾಲದಿಂದ ಇದ್ದಾನೆ. ಅವನಿಗೆ ಅಮೂಲ್ಯವಾದ ರತ್ನವಸ್ತ್ರಧನಗಳನ್ನೂ ಒಂದು ಸಾವಿರ ಗೋವುಗಳನ್ನೂ

ಪಶುಕಾಭಿಶ್ಚ ಸರ್ವಾಭಿರ್ಗವಾಂ ದಶಶತೇನ ಚ ।
ಯೇ ಚೇಮೇ ಕಠಕಾಲಾಪಾ ಬಹವೋ ದಂಡಮಾಣವಾಃ ॥ ೧೮

ನಿತ್ಯಸ್ವಾಧ್ಯಾಯಶೀಲತ್ವಾನ್ನಾನ್ಯತ್ ಕುರ್ವಂತಿ ಕಿಂಚನ ।
ಅಲಸಾಃ ಸ್ವಾದುಕಾಮಾಶ್ಚ ಮಹತಾಂ ಚಾಪಿ ಸಂಮತಾಃ ॥ ೧೯

ತೇಷಾಮಶೀತಿಯಾನಾನಿ ರತ್ನಪೂರ್ಣಾನಿ ದಾಪಯ ।
ಶಾಲಿವಾಹಸಹಸ್ರಂ ಚ ದ್ವೇ ಶತೇ ಭದ್ರಕಾಂಸ್ತಥಾ ॥ ೨೦

ವ್ಯಂಜನಾರ್ಥಂ ಚ ಸೌಮಿತ್ರೇ ಗೋಸಹಸ್ರಮುಪಾಕುರು ।
ಮೇಖಲೀನಾಂ ಮಹಾಸಂಘಃ ಕೌಸಲ್ಯಾಂ ಸಮುಪಸ್ಥಿತಃ ॥ ೨೧

ತೇಷಾಂ ಸಹಸ್ರಂ ಸೌಮಿತ್ರೇ ಪ್ರತ್ಯೇಕಂ ಸಂಪ್ರದಾಪಯ ।
ಅಂಬಾ ಯಥಾ ಚ ಸಾ ನಂದೇತ್ ಕೌಸಲ್ಯಾ ಮಮ ದಕ್ಷಿಣಾಮ್ ।

ತಥಾ ದ್ವಿಜಾತೀಂಸ್ತಾನ್ ಸರ್ವಾನ್ ಲಕ್ಷ್ಮಣಾರ್ಚಯ ಸರ್ವಶಃ ।
ತತಃ ಸ ಪುರುಷವ್ಯಾಘ್ರಸ್ತದ್ಧನಂ ಲಕ್ಷ್ಮಣಃ ಸ್ವಯಮ್ ॥ ೨೩

---

ನಮ್ಮ ಬಳಿ ಇರುವ ಮೇಕೆ ಮೊದಲಾದ ಸಮಸ್ತ ಪಶುಗಳನ್ನೂ ಕೊಟ್ಟು ಸಂತೋಷಪಡಿಸು. ಅಲ್ಲದೆ ಕಠಕಲಾಪಶಾಖೆಗಳನ್ನು ಅಧ್ಯಯನ ಮಾಡುತ್ತ ದಂಡಧಾರಿಗಳಾದ ಕೆಲವು ಬ್ರಹ್ಮಚಾರಿಗಳಿದ್ದಾರಷ್ಟೆ. ಅವರು ಸರ್ವದಾ ವೇದಾಧ್ಯಯನದಲ್ಲಿ ಮುಳುಗಿರುತ್ತಾರೆ. ಅದನ್ನು ಬಿಟ್ಟು ಇನ್ನೇನನ್ನೂ ಮಾಡುವುದಿಲ್ಲ. ಒಂದು ಬಗೆಯಲ್ಲಿ ಸೋಮಾರಿಗಳು. ಅವರಿಗೆ ಮೃಷ್ಟಾನ್ನ ಭೋಜನವೆಂದರೆ ಬಹಳ ಪ್ರೀತಿ. ಮಹಾತ್ಮರೂ ಅವರಿಗೆ ಮಾನ್ಯತೆಯನ್ನು ಕೊಡುತ್ತಾರೆ (೧೭-೧೯). ಅವರಿಗೆ ರತ್ನಪೂರ್ಣವಾದ ಎಂಬತ್ತು ವಾಹನಗಳನ್ನೂ ಸಾವಿರ ಗಾಡಿ ಬತ್ತ ಇನ್ನೂರು ಗಾಡಿ ಕಡಲೆ ಮೊದಲಾದ ಧಾನ್ಯಗಳನ್ನು ಕೊಡಿಸು. ಹಾಲು ಮೊಸರು ಮುಂತಾದ್ದಕ್ಕಾಗಿ ಸಾವಿರ ಗೋವುಗಳನ್ನು ಅವರಿಗೆ ಕೊಡಿಸು. ವಟುಗಳ ಒಂದು ದೊಡ್ಡ ಗುಂಪೇ ಕೌಸಲ್ಯೆಯನ್ನು ಆಶ್ರಯಿಸಿಕೊಂಡಿದೆ (೨೦-೨೧. ಅವರಲ್ಲಿ ಪ್ರತಿಯೊಬ್ಬನಿಗೂ ಸಾವಿರ ನಾಣ್ಯಗಳನ್ನೂ ಕೊಡು. ಲಕ್ಷ್ಮಣ, ನನ್ನ ತಾಯಿಗೆ ಸಂತೋಷವಾಗುವಂತೆ ಆ ಬ್ರಾಹ್ಮಣರಿಗೆ ಬೇಕಾದಷ್ಟು ದಕ್ಷಿಣೆಯನ್ನು ಕೊಡು" ಎಂದು ಹೇಳಿದನು. ಆಗ ಪುರುಷಶ್ರೇಷ್ಠನಾದ

ಯಥೋಕ್ತಂ ಬ್ರಾಹ್ಮಣೇಂದ್ರಾಣಾಮದದಾದ್ಧನದೋ ಯಥಾ ।
ಅಥಾಬ್ರವೀದ್ಬಾಷ್ಪಕಲಾಂಸ್ತಿಷ್ಠತಶ್ಚೋಪಜೀವಿನಃ ॥ ೨೪

ಸಂಪ್ರದಾಯ ಬಹು ದ್ರವ್ಯಮೇಕೈಕಸ್ಯೋಪಜೀವನಮ್ ।
ಲಕ್ಷ್ಮಣಸ್ಯ ಚ ತದ್ವೇಶ್ಮ ಗೃಹಂ ಚ ಯದಿದಂ ಮಮ ॥ ೨೫

ಅಶೂನ್ಯಂ ಕಾರ್ಯಮೇಕೈಕಂ ಯಾವದಾಗಮನಂ ಮಮ ।
ಇತ್ಯುಕ್ತ್ವಾ ದುಃಖಿತಂ ಸರ್ವಂ ಜನಂ ತಮುಪಜೀವಿನಮ್ ॥ ೨೬

ಉವಾಚೇದಂ ಧನಾಧ್ಯಕ್ಷಂ ಧನಮಾನೀಯತಾಮಿತಿ ।
ತತೋಽಸ್ಯ ಧನಮಾಜಹ್ರುಃ ಸರ್ವಮೇವೋಪಜೀವಿನಃ ॥ ೨೭

ಸ ರಾಶಿಃ ಸುಮಹಾಂಸ್ತತ್ರ ದರ್ಶನೀಯೋ ಹ್ಯದೃಶ್ಯತ ।
ತತಃ ಸ ಪುರುಷವ್ಯಾಘ್ರಸ್ತದ್ಧನಂ ಸಹಲಕ್ಷ್ಮಣಃ ॥ ೨೮

ದ್ವಿಜೇಭ್ಯೋ ಬಾಲವೃದ್ಧೇಭ್ಯಃ ಕೃಪಣೇಭ್ಯೋ ಹ್ಯದಾಪಯತ್ ।
ತತ್ರಾಸೀತ್ಪಿಂಗಲೋ ಗಾರ್ಗ್ಯಸ್ತ್ರಿಜಟೋ ನಾಮ ವೈ ದ್ವಿಜಃ ॥ ೨೯

---

ಲಕ್ಷ್ಮಣನು ತಾನೇ ಮುಂದೆ ನಿಂತು ಬ್ರಾಹ್ಮಣರನ್ನು ಕರೆಸಿ ಶ್ರೀರಾಮನ ಸೂಚನೆಯಂತೆ ಕುಬೇರನ ಹಾಗೆ ದಾನಧರ್ಮಗಳನ್ನು ಮಾಡಿದನು (೨೨-೨೩). ಶ್ರೀರಾಮನು ತನ್ನ ಮುಂದೆ ವ್ಯಥೆಯಿಂದ ಕಣ್ಣೀರನ್ನು ಸುರಿಸುತ್ತ ನಿಂತಿದ್ದ ಅನುಜೀವಿಗಳಿಗೆ ಬೇಕಾದಷ್ಟು ಹಣವನ್ನು ಕೊಟ್ಟು "ನಾವು ಹಿಂದಿರುಗಿ ಬರುವವರೆಗೆ ಲಕ್ಷ್ಮಣನ ಮನೆಯನ್ನೂ ನನ್ನ ಮನೆಯನ್ನೂ ಒಪ್ಪವಾಗಿರಿಸಿ ಶೂನ್ಯವಾಗದಂತೆ ನೀವೆಲ್ಲರೂ ನೋಡಿಕೊಳ್ಳುತ್ತಿರಬೇಕು" ಎಂದು ಅವರಿಗೆ ಸೂಚಿಸಿದನು (೨೪-೨೫). ಅನಂತರ ಕೋಶಾಧ್ಯಕ್ಷನನ್ನು ಕರೆದು ತನ್ನ ಬೊಕ್ಕಸದಲ್ಲಿರುವ ಧನವೆಲ್ಲವನ್ನೂ ತರುವಂತೆ ಆಜ್ಞಾಪಿಸಿದನು. ಆಗ ಭೃತ್ಯರು ಹೋಗಿ ಬೊಕ್ಕಸದಿಂದ ಕೋಶಾಧ್ಯಕ್ಷನು ಕೊಟ್ಟ ಧನವೆಲ್ಲವನ್ನೂ ತಂದು ರಾಶಿಹಾಕಿದರು. ಆ ಧನರಾಶಿಯು ನೋಡತಕ್ಕುದಾಗಿತ್ತು (೨೬-೨೭). ಶ್ರೀರಾಮನು ಲಕ್ಷ್ಮಣನೊಡಗೂಡಿ ಅದನ್ನು ದ್ವಿಜರಿಗೂ ದೀನರಾದ ಬಾಲವೃದ್ಧರಿಗೂ ಹಂಚಿದನು. ಆಗ ಅಯೋಧ್ಯೆಯಲ್ಲಿ ಗರ್ಗಗೋತ್ರದಲ್ಲಿ ಜನಿಸಿದ ತ್ರಿಜಟನೆಂಬ ಬ್ರಾಹ್ಮಣನೊಬ್ಬನಿದ್ದನು. ಅವನು (ಬಡತನದಿಂದಲೂ ವ್ರತೋಪವಾಸಗಳಿಂದಲೂ)

ಉಂಛವೃತ್ತಿರ್ವನೇ ನಿತ್ಯಂ ಫಾಲಕುದ್ದಾಲಲಾಂಗಲೀ ।
ತಂ ವೃದ್ಧಂ ತರುಣೀ ಭಾರ್ಯಾ ಬಾಲಾನಾದಾಯ ದಾರಕಾನ್ ॥ ೩೦

ಅಬ್ರವೀದ್ಬ್ರಾಹ್ಮಣಂ ವಾಕ್ಯಂ ದಾರಿದ್ರ್ಯೇಣಾಭಿಪೀಡಿತಾ ।
ಅಪಾಸ್ಯ ಫಾಲಂ ಕುದ್ದಾಲಂ ಕುರುಷ್ವ ವಚನಂ ಮಮ ॥ ೩೧

ರಾಮಂ ದರ್ಶಯ ಧರ್ಮಜ್ಞಂ ಯದಿ ಕಿಂಚಿದವಾಪ್ಸ್ಯಸಿ ।
ಭಾರ್ಯಾಯಾ ವಚನಂ ಶ್ರುತ್ವಾ ಶಾಟೀಮಾಚ್ಛಾದ್ಯ ದುಶ್ಛದಾಮ್ ॥

ಸ ಪ್ರಾತಿಷ್ಠತ ಪಂಥಾನಂ ಯತ್ರ ರಾಮನಿವೇಶನಮ್ ।
ಭೃಗ್ವಂಗಿರಃಸಮಂ ದೀಪ್ತ್ಯಾ ತ್ರಿಜಟಂ ಜನಸಂಸದಿ ॥ ೩೩

ಆ ಪಂಚಮಾಯಾಃ ಕಕ್ಷ್ಯಾಯಾ ನೈನಂ ಕಶ್ಚಿದವಾರಯತ್ ।
ಸ ರಾಜಪುತ್ರಮಾಸಾದ್ಯ ತ್ರಿಜಟೋ ವಾಕ್ಯಮಬ್ರವೀತ್ ॥ ೩೪

---

ಬಿಳಚಿಕೊಂಡಿದ್ದನು (೨೮-೨೯). ಉದುರಿದ ಧಾನ್ಯಗಳನ್ನು ಆರಿಸಿ ಉಂಛವೃತ್ತಿಯಿಂದ ಜೀವಿಸುತ್ತಿದ್ದನು. (ಕಾಡಿನಿಂದ ಗಡ್ಡೆಗೆಣಸುಗಳನ್ನು ತರುವುದಕ್ಕಾಗಿ) ಹಾರೆ ಗುದ್ದಲಿ ಕೊಕ್ಕೆಗಳನ್ನು ಹಿಡಿದು ತಿರುಗುತ್ತಿದ್ದನು. ಅವನಿಗೆ ವಯಸ್ಸಾಗಿತ್ತು. ಅವನ ಹೆಂಡತಿ ಇನ್ನೂ ಚಿಕ್ಕವಳು (೩೦). ಆಕೆಯು ಬಡತನವನ್ನು ಸಹಿಸಲಾರದೆ ತನ್ನ ಎಳೆಯ ಮಕ್ಕಳನ್ನು ಎತ್ತಿಕೊಂಡು ಆ ಬ್ರಾಹ್ಮಣನಿಗೆ "ಆರ್ಯ, ಈ ಹಾರೆ ಗುದ್ದಲಿಗಳನ್ನು ತೆಗೆದಿಟ್ಟು ನನ್ನ ಒಂದು ಮಾತನ್ನು ನಡೆಸು. ಧರ್ಮಜ್ಞನಾದ ಶ್ರೀರಾಮನನ್ನು ಹೋಗಿ ನೋಡು. ನಿನಗೆ ಏನಾದರೂ ದೊರೆಯಬಹುದು" ಎಂದು ನುಡಿದಳು. ಆಗ ತ್ರಿಜಟನು ತನ್ನಲ್ಲಿದ್ದ ಒಂದು ಹರಕು ಬಟ್ಟೆಯನ್ನೇ ಹೊದೆದು ಪತ್ನಿಯ ಮಾತಿನಂತೆ ರಾಮನ ಬಳಿಗೆ ಹೊರಟನು (೩೧-೩೨). ಭೃಗ್ವಂಗಿರಸ್ಸೆಂಬ ಋಷಿಯಂತೆ ತೇಜೋವಂತನಾದ ಆ ಬ್ರಾಹ್ಮಣನನ್ನು ಶ್ರೀರಾಮನ ಭವನದಲ್ಲಿ ಯಾರೂ ತಡೆಯಲಿಲ್ಲ. ಆ ತ್ರಿಜಟನು ಐದು ಕಕ್ಷ್ಯಗಳನ್ನು ದಾಟಿ ಒಳಗೆ ಹೋದನು. ಅಲ್ಲಿ ಶ್ರೀರಾಮನನ್ನು ಕಂಡು "ರಾಜಪುತ್ರ, ನೀನು ಮಹಾಕೀರ್ತಿಯನ್ನು ಗಳಿಸಿದ್ದೀಯೆ. ನಾನು ದರಿದ್ರನಾಗಿದ್ದೇನೆ. ನನಗೆ ಬಹುಮಂದಿ ಮಕ್ಕಳಿದ್ದಾರೆ. ಪ್ರತಿದಿನವೂ ಕಾಡನ್ನು ಅಲೆಯುತ್ತ ಉಂಛವೃತ್ತಿ

ನಿರ್ಧನೋ ಬಹುಪುತ್ರೋಽಸ್ಮಿ ರಾಜಪುತ್ರ ಮಹಾಯಶಃ ।
ಉಂಛವೃತ್ತಿರ್ವನೇ ನಿತ್ಯಂ ಪ್ರತ್ಯವೇಕ್ಷಸ್ವ ಮಾಮಿತಿ ॥ ೩೫
ತಮುವಾಚ ತದಾ ರಾಮಃ ಪರಿಹಾಸಸಮನ್ವಿತಮ್ ।
ಗವಾಂ ಸಹಸ್ರಮಪ್ಯೇಕಂ ನ ತು ವಿಶ್ರಾಣಿತಂ ಮಯಾ ॥ ೩೬
ಪರಿಕ್ಷಿಪಸಿ ದಂಡೇನ ಯಾವತ್ತಾವದವಾಪ್ಸ್ಯಸಿ ।
ಸ ಶಾಟೀಂ ತ್ವರಿತಃ ಕಟ್ಯಾಂ ಸಂಭ್ರಾಂತಃ ಪರಿವೇಷ್ಟ್ಯತಾಮ್ ॥ ೩೭
ಆವಿಧ್ಯ ದಂಡಂ ಚಿಕ್ಷೇಪ ಸರ್ವಪ್ರಾಣೇನ ವೇಗಿತಃ ।
ಸ ತೀರ್ತ್ವಾ ಸರಯೂಪಾರಂ ದಂಡಸ್ತಸ್ಯ ಕರಾಚ್ಚ್ಯುತಃ ॥ ೩೮
ಗೋವ್ರಜೇ ಬಹುಸಾಹಸ್ರೇ ಪಪಾತೋಕ್ಷಣಸಂನಿಧೌ ।
ತಂ ಪರಿಷ್ವಜ್ಯ ಧರ್ಮಾತ್ಮಾ ಆ ತಸ್ಮಾತ್ ಸರಯೂತಟಾತ್ ॥ ೩೯
ಆನಯಾಮಾಸ ತಾ ಗೋಪೈಸ್ತ್ರಿಜಟಾಯಾಶ್ರಮಂ ಪ್ರತಿ ।
ಉವಾಚ ಚ ತತೋ ರಾಮಸ್ತಂ ಗಾರ್ಗ್ಯಮಭಿಸಾಂತ್ವಯನ್ ॥ ೪೦

---

ಯಿಂದ ಜೀವಿಸುತ್ತಿದ್ದೇನೆ. ನನ್ನನ್ನು ಕೃಪೆಯಿಂದ ನೋಡು" ಎಂದು ಹೇಳಿದನು (೩೩-೩೫). ಆಗ ಶ್ರೀರಾಮನು ನಗುತ್ತ ವಿನೋದಪೂರ್ವಕವಾಗಿ "ಬ್ರಾಹ್ಮಣೋತ್ತಮ, 'ನಿನಗೆ ಒಂದು ಸಾವಿರ ಗೋವುಗಳನ್ನು ಕೊಡುತ್ತೇನೆ' ಎಂದು ಸಂಖ್ಯೆಯನ್ನು ನಾನು ಹೇಳುವುದಿಲ್ಲ. ಈ ದಂಡವನ್ನು ನೀನು ಎಷ್ಟು ದೂರ ಎಸೆಯುವೆಯೊ ಅಷ್ಟು ದೂರದವರೆಗೆ ನಿಂತಿರುವ ಹಸುಗಳನ್ನು ನಿನಗೆ ಕೊಡುತ್ತೇನೆ" ಎಂದನು (೩೬-೩೭). ಕೂಡಲೆ ಆ ಬ್ರಾಹ್ಮಣನು ಸಂಭ್ರಮದಿಂದ ತನ್ನ ಹರಕುವಲ್ಲಿಯನ್ನು ಸೊಂಟಕ್ಕೆ ಬಿಗಿದುಕಟ್ಟಿ ಆ ದೊಣ್ಣೆಯನ್ನು ಗಿರ್ರನೆ ತಿರುಗಿಸಿ ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ವೇಗದಿಂದ ಬೀಸಿ ಎಸೆದನು. ಅವನು ಕೈಯಿಂದ ಬೀಸಿದ ಆ ದೊಣ್ಣೆಯು ಸರಯೂನದಿಯನ್ನು ದಾಟಿ ಸಾವಿರಾರು ಹಸುಗಳ ಆಚೆಗೆ ಎತ್ತುಗಳನ್ನು ನಿಲ್ಲಿಸಿದ ಸ್ಥಳದಲ್ಲಿ ಹೋಗಿಬಿದ್ದಿತು (೩೮-೩೯). ಆಗ ಧರ್ಮಾತ್ಮನಾದ ಶ್ರೀರಾಮನು ತ್ರಿಜಟನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು ಸರಯೂತೀರದಲ್ಲಿ ದೊಣ್ಣೆಯು ಬಿದ್ದ ಸ್ಥಳದವರೆಗಿದ್ದ ಗೋವುಗಳೆಲ್ಲವನ್ನೂ ಗೋಪಾಲರ ಮೂಲಕ ತ್ರಿಜಟನ ಆಶ್ರಮಕ್ಕೆ ಕಳಿಸಿದನು. ಅನಂತರ ಆ ಬ್ರಾಹ್ಮಣನನ್ನು ಸಂತೈಸುತ್ತ "ವಿಪ್ರೋತ್ತಮ, ಕೋಪಿಸಿ

ಮನ್ಯುರ್ನ ಖಲು ಕರ್ತವ್ಯಃ ಪರಿಹಾಸೋ ಹ್ಯಯಂ ಮಮ ॥

ಇದಂ ಹಿ ತೇಜಸ್ತವ ಯದ್ದುರತ್ಯಯಂ
ತದೇವ ಜಿಜ್ಞಾಸಿತುಮಿಚ್ಛತಾ ಮಯಾ ।
ಇಮಂ ಭವಾನರ್ಥಮಭಿಪ್ರಚೋದಿತೋ
ವೃಣೀಷ್ವ ಕಿಂ ಚೇದಪರಂ ವ್ಯವಸ್ಯತಿ ॥ ೪೧

ಬ್ರವೀಮಿ ಸತ್ಯೇನ ನ ತೇಽಸ್ತಿ ಯಂತ್ರಣಾ
ಧನಂ ಹಿ ಯದ್ಯನ್ಮಮ ವಿಪ್ರಕಾರಣಾತ್ ।
ಭವತ್ಸು ಸಮ್ಯಕ್ಪ್ರತಿಪಾದನೇನ ತತ್
ಮಯಾರ್ಜಿತಂ ಪ್ರೀತಿಯಶಸ್ಕರಂ ಭವೇತ್ ॥ ೪೨

ತತಃ ಸಭಾರ್ಯಸ್ತ್ರಿಜಟೋ ಮಹಾಮುನಿಃ
ಗವಾಮನೀಕಂ ಪ್ರತಿಗೃಹ್ಯ ಮೋದಿತಃ ।
ಯಶೋಬಲಪ್ರೀತಿಸುಖೋಪಬೃಂಹಿಣೀಃ
ತದಾಶಿಷಃ ಪ್ರತ್ಯವದನ್ಮಹಾತ್ಮನಃ ॥ ೪೩

---

ಕೊಳ್ಳಬೇಡ; ವಿನೋದಕ್ಕಾಗಿ ಹೀಗೆ ಹೇಳಿದೆನು (೪೦). ನಿನ್ನ ಅತಿಶಯವಾದ ಶಕ್ತಿ ಎಷ್ಟೆಂದು ತಿಳಿಯಲಿಚ್ಛಿಸಿ ದಂಡವನ್ನೆಸೆಯುವಂತೆ ಪ್ರೇರಿಸಿದೆನು. ಇನ್ನೂ ಏನಾದರೂ ಬೇಕಾದರೆ ಕೇಳಿಕೊ. ಸತ್ಯವಾಗಿ ನುಡಿಯುತ್ತಿದ್ದೇನೆ. ಯಾವ ತಡೆಯೂ ಇಲ್ಲದೆ ಕೇಳಬಹುದು. ನಮ್ಮಲ್ಲಿರುವ ಧನವೆಲ್ಲವೂ ನಿಮ್ಮಂಥ ಬ್ರಾಹ್ಮಣರಿಗೋಸ್ಕರವೇ. ನಾನು ಸಂಪಾದಿಸಿದ್ದನ್ನು ನಿಮಗೆ ಕೊಟ್ಟು ಸದ್ವಿನಿಯೋಗ ಮಾಡುವುದರಿಂದ ನನಗೆ ಸಂತೋಷವಾಗುತ್ತದೆ. ಅದರಿಂದ ನನಗೆ ಕೀರ್ತಿಯೂ ಉಂಟು" ಎಂದನು (೪೧-೪೨). ಆಗ ತ್ರಿಜಟಮಹರ್ಷಿಯು ಇನ್ನೇನನ್ನೂ ಅಪೇಕ್ಷಿಸದೆ ಆ ಗೋಸಮೂಹವನ್ನು ಪತ್ನೀಸಮೇತನಾಗಿ ಪ್ರತಿಗ್ರಹಿಸಿ ಸಂತೃಪ್ತನಾದನು. ಶ್ರೀರಾಮನಿಗೆ ಯಶಸ್ಸು, ಬಲ, ಸಂತೋಷ, ಸೌಖ್ಯಗಳು ಹೆಚ್ಚಲೆಂದು ಆಶೀರ್ವದಿಸಿದನು. ಹೀಗೆ ಶ್ರೀರಾಮನು ಧರ್ಮಾತಿಕ್ರಮವಿಲ್ಲದೆ ಸಾಮರ್ಥ್ಯದಿಂದ ಆರ್ಜಿಸಿದ ಐಶ್ವರ್ಯವನ್ನು ದಾನಮಾಡಿ ತನ್ನ ಇಷ್ಟಾರ್ಥವು ಕೈಗೂಡಿತೆಂದು ಸಂತುಷ್ಟ

ಸ ಚಾಪಿ ರಾಮಃ ಪರಿಪೂರ್ಣಮಾನಸೋ
ಮಹಾಧನಂ ಧರ್ಮಬಲೈರುಪಾರ್ಜಿತಮ್ ।
ನಿಯೋಜಯಾಮಾಸ ಸುಹೃನ್ಜನೇ ಚಿರಾತ್
ಯಥಾರ್ಹಸಂಮಾನವಚಃ ಪ್ರಚೋದಿತಃ ॥ ೪೪

ದ್ವಿಜಃ ಸುಹೃದ್ಭೃತ್ಯಜನೋಽಥವಾ ತದಾ
ದರಿದ್ರಭಿಕ್ಷಾಚರಣಶ್ಚ ಯೋಽಭವತ್ ।
ನ ತತ್ರ ಕಶ್ಚಿನ್ನ ಬಭೂವ ತರ್ಪಿತೋ
ಯಥಾರ್ಹಸಂಮಾನನದಾನಸಂಭ್ರಮೈಃ ॥ ೪೫

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾತ್ರಿಂಶಃ ಸರ್ಗಃ

ನಾದನು. ಒಳ್ಳೆಯ ಮಾತುಗಳನ್ನಾಡಿ ಗೌರವಿಸಿ ಮಿತ್ರರಿಗೆ ಅದನ್ನು ಬಹಳ ಹೊತ್ತಿನವರೆಗೆ ಹಂಚಿಕೊಟ್ಟನು (೪೩-೪೪). ಆ ಸಮಯದಲ್ಲಿ ಅಲ್ಲಿದ್ದ ಬ್ರಾಹ್ಮಣ, ಸ್ನೇಹಿತ, ಭೃತ್ಯ, ಬಡವ, ಭಿಕ್ಷುಕರೆಲ್ಲರೂ ಶ್ರೀರಾಮನಿಂದ ಪ್ರಯೋಜನವನ್ನು ಪಡೆದರು. ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ದಾನಮಾನಾದಿ ಸತ್ಕಾರಗಳನ್ನು ಹೊಂದಿ ಸಂತೃಪ್ತರಾಗದವರು ಒಬ್ಬರೂ ಇರಲಿಲ್ಲ (೪೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತೆರಡನೆಯ ಸರ್ಗ

## ತ್ರಯಸ್ತ್ರಿಂಶಃ ಸರ್ಗಃ

### ಪೌರವಾಕ್ಯಮ್

ದತ್ತ್ವಾ ತು ಸಹ ವೈದೇಹ್ಯಾ ಬ್ರಾಹ್ಮಣೇಭ್ಯೋ ಧನಂ ಬಹು ।
ಜಗ್ಮತುಃ ಪಿತರಂ ದ್ರಷ್ಟುಂ ಸೀತಯಾ ಸಹ ರಾಘವೌ ॥ ೧

ತತೋ ಗೃಹೀತೇ ದುಷ್ಪ್ರೇಕ್ಷ್ಯೇ ತ್ವಶೋಭೇತಾಂ ತದಾಯುಧೇ।
ಮಾಲಾದಾಮಭಿರಾಬದ್ಧೇ ಸೀತಯಾ ಸಮಲಂಕೃತೇ ॥ ೨

ತತಃ ಪ್ರಾಸಾದಹರ್ಮ್ಯಾಣಿ ವಿಮಾನಶಿಖರಾಣಿ ಚ ।
ಅಧಿರುಹ್ಯ ಜನಃ ಶ್ರೀಮಾನುದಾಸೀನೋ ವ್ಯಲೋಕಯತ್ ॥ ೩

ನ ಹಿ ರಥ್ಯಾಃ ಸ್ಮ ಶಕ್ಯಂತೇ ಗಂತುಂ ಬಹುಜನಾಕುಲಾಃ ।
ಆರುಹ್ಯ ತಸ್ಮಾತ್ ಪ್ರಾಸಾದಾದ್ದೀನಾಃ ಪಶ್ಯಂತಿ ರಾಘವಮ್ ॥ ೪

ಪದಾತಿಂ ಸಾನುಜಂ ದೃಷ್ಟ್ವಾ ಸಸೀತಂ ಚ ಜನಾಸ್ತದಾ ।
ಊಚುರ್ಬಹುವಿಧಾ ವಾಚಃ ಶೋಕೋಪಹತಚೇತಸಃ ॥ ೫

## ಸರ್ಗ ೩೩

**ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಶರಥನ ಬಳಿಗೆ ಹೋಗುವುದು. ಅವರನ್ನು ನೋಡಿ ಶೋಕಸಂತಪ್ತರಾದ ಪೌರರ ವಿಲಾಪ.**

ಹೀಗೆ ರಾಮಲಕ್ಷ್ಮಣರಿಬ್ಬರೂ ಸೀತೆಯೊಡನೆ ದ್ವಿಜರಿಗೆ ಧನಧಾನ್ಯಗಳನ್ನು ದಾನಮಾಡಿ ತಮ್ಮ ತಂದೆಯನ್ನು ನೋಡುವುದಕ್ಕಾಗಿ ಹೊರಟರು. ಅವರು ಹಿಡಿದಿದ್ದ ಆಯುಧಗಳನ್ನು ಸೀತೆಯು ಪುಷ್ಪಮಾಲೆಗಳಿಂದ ಅಲಂಕರಿಸಿದ್ದಳು. ಆ ದಿವ್ಯಾಯುಧಗಳು ಕಣ್ಣು ಕೋರೈಸುವಂತೆ ಪ್ರಜ್ವಲಿಸುತ್ತಿದ್ದವು (೧-೨). ಜನರು ಪ್ರಾಸಾದ ಹರ್ಮ್ಯ ವಿಮಾನ*ಗಳನ್ನೇರಿ ನಿರುತ್ಸಾಹಗೊಂಡು ವ್ಯಸನದಿಂದ ಅವರನ್ನು ನೋಡುತ್ತಿದ್ದರು. ರಸ್ತೆಗಳಲ್ಲಿ ಜನರು ಕಿಕ್ಕಿರಿದು ತುಂಬಿಹೋದ್ದರಿಂದ ಸ್ಥಳವಿಲ್ಲದೆ ಅವರು ಮಹಡಿಗಳನ್ನು ಹತ್ತಿ ನಿಂತಿದ್ದರು (೩-೪). ಶ್ರೀರಾಮನು ತಮ್ಮನನ್ನೂ ಸೀತೆಯನ್ನೂ

---

* ಪ್ರಾಸಾದ = ಅರಮನೆ, ದೇವಾಲಯ. ಹರ್ಮ್ಯ=ಶ್ರೀಮಂತರ ವಿಶಾಲ ಭವನ. ವಿಮಾನ=ಏಳು ಮಹಡಿಗಳಿರುವ ಉನ್ನತ ಗೃಹ.

ಯಂ ಯಾಂತಮನುಯಾತಿ ಸ್ಮ ಚತುರಂಗಬಲಂ ಮಹತ್ ।
ತಮೇಕಂ ಸೀತಯಾ ಸಾರ್ಧಮನುಯಾತಿ ಸ್ಮ ಲಕ್ಷ್ಮಣಃ ॥ ೬

ಐಶ್ವರ್ಯಸ್ಯ ರಸಜ್ಞಃ ಸನ್ ಕಾಮಿನಾಂ ಚೈವ ಕಾಮದಃ ।
ನೇಚ್ಛತ್ಯೇವಾನೃತಂ ಕರ್ತುಂ ಪಿತರಂ ಧರ್ಮಗೌರವಾತ್ ॥ ೭

ಯಾ ನ ಶಕ್ಯಾ ಪುರಾ ದ್ರಷ್ಟುಂ ಭೂತೈರಾಕಾಶಗೈರಪಿ ।
ತಾಮದ್ಯ ಸೀತಾಂ ಪಶ್ಯಂತಿ ರಾಜಮಾರ್ಗಗತಾಂ ಜನಾಃ ॥ ೮

ಅಂಗರಾಗೋಚಿತಾಂ ಸೀತಾಂ ರಕ್ತಚಂದನಸೇವಿನೀಮ್ ।
ವರ್ಷಮುಷ್ಣಂ ಚ ಶೀತಂ ಚ ನೇಷ್ಯತ್ಯಾಶು ವಿವರ್ಣತಾಮ್ ॥ ೯

ಅದ್ಯ ಮಾನಂ ದಶರಥಃ ಸತ್ತ್ವಮಾವಿಶ್ಯ ಭಾಷತೇ ।
ನ ಹಿ ರಾಜಾ ಪ್ರಿಯಂ ಪುತ್ರಂ ವಿವಾಸಯಿತುಮಿಚ್ಛತಿ ॥ ೧೦

---

ಕರೆದುಕೊಂಡು ಕಾಲುನಡಿಗೆಯಲ್ಲಿ ಹೋಗುತ್ತಿರುವುದನ್ನು ಕಂಡು ಶೋಕಸಂತಪ್ತರಾದ ಪ್ರಜೆಗಳು ನಾನಾ ವಿಧದಲ್ಲಿ ಮಾತನಾಡಿಕೊಳ್ಳುತ್ತಿದ್ದರು. "(ಈ ದಿನ ಪ್ರಾತಃಕಾಲ) ಯಾರು ಹೋಗುತ್ತಿರುವಾಗ ಮಹತ್ತರವಾದ ಚತುರಂಗ ಸೈನ್ಯವು ಹಿಂದೆ ಹೋಯಿತೊ, ಆತನ ಹಿಂದೆ ಈಗ ಸೀತೆ ಲಕ್ಷ್ಮಣ-ಇಬ್ಬರೇ ಹೋಗುತ್ತಿದ್ದಾರೆ (೫-೬). ರಾಮನು ಐಶ್ವರ್ಯದ ಸವಿಯನ್ನು ಬಲ್ಲವನಾದರೂ ಬೇಡಿದವರಿಗೆ ಇಷ್ಟಾರ್ಥಗಳನ್ನು ಸಲ್ಲಿಸಲು ಶಕ್ತನಾದರೂ ಧರ್ಮದ ಅಭಿಮಾನದಿಂದ, ತಂದೆಯನ್ನು ಮಾತಿಗೆ ತಪ್ಪಿದವನೆಂದು ಮಾಡಲು ಸರ್ವಥಾ ಬಯಸುವುದಿಲ್ಲ (೭). ಇದುವರೆಗೆ ಆಕಾಶದಲ್ಲಿ ಸಂಚರಿಸುವ ಪ್ರಾಣಿಗಳಿಗೂ ಯಾರನ್ನು ನೋಡುವುದು ಅಶಕ್ಯವಾಗಿದ್ದಿತೊ, ಅಂಥ ಸೀತೆಯನ್ನು ಬೀದಿಯಲ್ಲಿರುವ ಜನರೂ ನೋಡುವ ಹಾಗಾಯಿತು. ಕಸ್ತೂರಿ ಮುಂತಾದ ಸುಗಂಧದ್ರವ್ಯಗಳಿಂದಲೂ ರಕ್ತ ಚಂದನದಿಂದಲೂ ಸೀತೆಯು ತನ್ನನ್ನು ಅಲಂಕರಿಸಿಕೊಳ್ಳುತ್ತಿದ್ದಳು. ಇನ್ನು ಮೇಲೆ ಮಳೆ ಬಿಸಿಲು ಚಳಿಗಳಿಗೆ ಸಿಕ್ಕಿ ಇವಳ ದೇಹಕಾಂತಿಯು ಬೇಗನೆ ಕಂದಿ ಹೋಗುವುದು (೮-೯). ನಿಜವಾಗಿಯೂ ದಶರಥನನ್ನು ಯಾವುದೋ ಪಿಶಾಚವು ಬಂದು ಹಿಡಿದುಕೊಂಡಿರಬೇಕು. ಆದ್ದರಿಂದಲೇ ಹೀಗೆ ಹೇಳುತ್ತಿದ್ದಾನೆ. ಇಲ್ಲದಿದ್ದರೆ ರಾಜನು ತನ್ನ ಪ್ರಿಯಪುತ್ರನನ್ನು ಕಾಡಿಗೆ ಕಳಿಸಲು ಬಯಸುತ್ತಿದ್ದನೆ ? ಮಗನು

ನಿರ್ಗುಣಸ್ಯಾಪಿ ಪುತ್ರಸ್ಯ ಕಥಂ ಸ್ಯಾದ್ವಿಪ್ರವಾಸನಮ್ ।
ಕಿಂ ಪುನರ್ಯಸ್ಯ ಲೋಕೋಽಯಂ ಜಿತೋ ವೃತ್ತೇನ ಕೇವಲಮ್ ॥

ಆನೃಶಂಸ್ಯಮನುಕ್ರೋಶಃ ಶ್ರುತಂ ಶೀಲಂ ದಮಃ ಶಮಃ ।
ರಾಘವಂ ಶೋಭಯಂತ್ಯೇತೇ ಷಡ್ಗುಣಾಃ ಪುರುಷರ್ಷಭಮ್ ॥ ೧೨

ತಸ್ಮಾತ್ತಸ್ಯೋಪಘಾತೇನ ಪ್ರಜಾಃ ಪರಮಪೀಡಿತಾಃ ।
ಔದಕಾನೀವ ಸತ್ತ್ವಾನಿ ಗ್ರೀಷ್ಮೇ ಸಲಿಲಸಂಕ್ಷಯಾತ್ ॥ ೧೩

ಪೀಡಯಾ ಪೀಡಿತಂ ಸರ್ವಂ ಜಗದಸ್ಯ ಜಗತ್ಪತೇಃ ।
ಮೂಲಸ್ಯೇವೋಪಘಾತೇನ ವೃಕ್ಷಃ ಪುಷ್ಪಫಲೋಪಗಃ ॥ ೧೪

ಮೂಲಂ ಹ್ಯೇಷ ಮನುಷ್ಯಾಣಾಂ ಧರ್ಮಸಾರೋ ಮಹಾದ್ಯುತಿಃ ।
ಪುಷ್ಪಂ ಫಲಂ ಚ ಪತ್ರಂ ಚ ಶಾಖಾಶ್ಚಾಸ್ಯೇತರೇ ಜನಾಃ ॥ ೧೫

ತೇ ಲಕ್ಷ್ಮಣ ಇವ ಕ್ಷಿಪ್ರಂ ಸಪತ್ನ್ಯಃ ಸಹಬಾಂಧವಾಃ ।
ಗಚ್ಛಂತಮನುಗಚ್ಛಾಮೋ ಯೇನ ಗಚ್ಛತಿ ರಾಘವಃ ॥ ೧೬

---

ಗುಣಹೀನನಾಗಿದ್ದರೂ ಅವನನ್ನು ಮನೆಯಿಂದ ಹೊರಡಿಸಲು ಯಾರೂ ಬಯಸುವುದಿಲ್ಲ. ಹೀಗಿರುವಾಗ ತನ್ನ ಸದ್ಗುಣದಿಂದ ಲೋಕವನ್ನೇ ಮೆಚ್ಚಿಸಿರುವ ಮಗನನ್ನು ಯಾವನು ತಾನೆ ಹೊರಡಿಸುವನು? (೧೦-೧೧). ಅಹಿಂಸೆ ದಯೆ ವಿದ್ಯೆ ಸದಾಚಾರ ಇಂದ್ರಿಯನಿಗ್ರಹ ಮನಶ್ಶಾಂತಿ - ಈ ಆರು ಗುಣಗಳು ಪುರುಷೋತ್ತಮನಾದ ಈ ರಘುವಂಶತಿಲಕನಿಗೆ ಭೂಷಣಪ್ರಾಯವಾಗಿವೆ. ಆದ್ದರಿಂದ ಈತನಿಗೆ ಕಷ್ಟಬಂದರೆ ಪ್ರಜೆಗಳು ಮಹಾಸಂಕಟಕ್ಕೆ ಈಡಾಗುವರು. ಬೇಸಿಗೆಯಲ್ಲಿ ನೀರು ಒಣಗಿದಾಗ ಕೊಳದಲ್ಲಿರುವ ಜಲಜಂತುಗಳಂತಾಗುವರು (೧೨-೧೩). ಈ ಲೋಕನಾಥನಿಗೆ ಪೀಡೆಯಾದ್ದರಿಂದ ಜನರೆಲ್ಲರೂ ಪೀಡೆಗೆ ಸಿಕ್ಕಿದರು. ಬುಡಕ್ಕೆ ಪೆಟ್ಟುತಾಕಿದರೆ ಹೂ ಹಣ್ಣುಗಳಿರುವ ಮರಕ್ಕೆ ಪೆಟ್ಟಾಗುವಂತಾಯಿತು. ಧರ್ಮವೇ ಅಂತಃಸಾರವಾಗಿರುವ ಈ ಮಹಾತೇಜಸ್ವಿಯು ಜನರೆಂಬ ವೃಕ್ಷಕ್ಕೆ ಬೇರಿನಂತಿದ್ದಾನೆ. ಜನರೆಲ್ಲರೂ ಹೂ ಹಣ್ಣು ಎಲೆಗಳಂತೆಯೂ ಕೊಂಬೆಗಳಂತೆಯೂ ಇದ್ದಾರೆ (೧೪-೧೫). ನಾವು ನಮ್ಮ ಪತ್ನಿಯರನ್ನೂ ಬಂಧುಗಳನ್ನೂ ಕರೆದುಕೊಂಡು ಲಕ್ಷ್ಮಣನಂತೆ ರಾಮನನ್ನು ಹಿಂಬಾಲಿಸಿ ಅವನು ಹೋದ ದಾರಿಯಲ್ಲಿ ಹೋಗಿ

ಉದ್ಯಾನಾನಿ ಪರಿತ್ಯಜ್ಯ ಕ್ಷೇತ್ರಾಣಿ ಚ ಗೃಹಾಣಿ ಚ ।
ಏಕದುಃಖಸುಖಾ ರಾಮಮನುಗಚ್ಛಾಮ ಧಾರ್ಮಿಕಮ್ ॥ ೧೭

ಸಮುದ್ಧೃತನಿಧಾನಾನಿ ಪರಿಧ್ವಸ್ತಾಜಿರಾಣಿ ಚ ।
ಉಪಾತ್ತಧನಧಾನ್ಯಾನಿ ಹೃತಸಾರಾಣಿ ಸರ್ವಶಃ ॥ ೧೮

ರಜಸಾಭ್ಯವಕೀರ್ಣಾನಿ ಪರಿತ್ಯಕ್ತಾನಿ ದೈವತೈಃ ।
ಮೂಷಕೈಃ ಪರಿಧಾವದ್ಭಿರುದ್ಬಿಲೈರಾವೃತಾನಿ ಚ ॥ ೧೯

ಅಪೇತೋದಕಧೂಮಾನಿ ಹೀನಸಂಮಾರ್ಜನಾನಿ ಚ ।
ಪ್ರನಷ್ಟಬಲಿಕರ್ಮೇಜ್ಯಾಮಂತ್ರಹೋಮಜಪಾನಿ ಚ ॥ ೨೦

ದುಷ್ಕಾಲೇನೇವ ಭಗ್ನಾನಿ ಭಿನ್ನಭಾಜನವಂತಿ ಚ ।
ಅಸ್ಮತ್ತ್ಯಕ್ತಾನಿ ವೇಶ್ಮಾನಿ ಕೈಕೇಯೀ ಪ್ರತಿಪದ್ಯತಾಮ್ ॥ ೨೧

ವನಂ ನಗರಮೇವಾಸ್ತು ಯೇನ ಗಚ್ಛತಿ ರಾಘವಃ ।
ಅಸ್ಮಾಭಿಶ್ಚ ಪರಿತ್ಯಕ್ತಂ ಪುರಂ ಸಂಪದ್ಯತಾಂ ವನಮ್ ॥ ೨೨

---

ಬಿಡೋಣ. ನಮ್ಮ ತೋಟ ಹೊಲ ಮನೆಗಳನ್ನು ಬಿಟ್ಟು ಧಾರ್ಮಿಕನಾದ ರಾಮನನ್ನು ಹಿಂಬಾಲಿಸೋಣ. ಅವನ ಸುಖದುಃಖಗಳಲ್ಲಿ ಸಮಭಾಗಿಗಳಾಗೋಣ (೧೬-೧೭). ನಾವು ಪರಿತ್ಯಜಿಸಿದ ಮನೆಗಳಲ್ಲಿ ನಿಧಿನಿಕ್ಷೇಪಗಳು ಪರರ ಪಾಲಾಗಿ ಅಂಗಳಗಳು ಹಾಳುಬೀಳುವವು. ಧನಧಾನ್ಯಗಳೂ ಸೂರೆಯಾಗಿ ಬೆಲೆಬಾಳುವ ವಸ್ತುಗಳೊಂದೂ ಇಲ್ಲದಂತಾಗುವುದು. ಮನೆಗಳಲ್ಲಿ ಧೂಳಿತುಂಬಿ ಗೃಹದೇವತೆಗಳು ಬಿಟ್ಟುಹೋಗುವುವು. ಇಲಿಗಳು ಬಿಲಗಳನ್ನು ಕೊರೆದು ಎಲ್ಲೆಲ್ಲಿಯೂ ಓಡಾಡುವುವು (೧೮-೧೯). ಈ ಮನೆಗಳಿಗೆ ಇನ್ನು ಜಲಸೇಚನವಿಲ್ಲ. ಇಲ್ಲಿ ಹೊಗೆಯಾಡುವುದಿಲ್ಲ. ಬಲಿಕರ್ಮ, ಯಜ್ಞ, ಮಂತ್ರಪಾಠ, ಅಗ್ನಿಹೋತ್ರ, ಜಪ - ಯಾವುವೂ ಇಲ್ಲದೆ ಹೋಗುತ್ತವೆ. ಬರಗಾಲದಲ್ಲಿ ಹಾಳುಬಿದ್ದಂತೆ ಒಡಕುಮಡಕೆಗಳಿಂದ ತುಂಬಿದ ಈ ಗೃಹಗಳನ್ನು ಕೈಕೇಯಿಯು ಅನುಭವಿಸಲಿ! (೨೦-೨೧). ಶ್ರೀರಾಮನು ಹೋಗುವ ಕಾಡುನಗರವಾಗಲಿ! ನಾವು ಬಿಟ್ಟುಹೋದ ಈ ನಗರವೇ ಕಾಡಾಗಲಿ! ನಾವೆಲ್ಲರೂ ಕಾಡಿಗೆ ಹೋದರೆ ನಮಗೆ ಹೆದರಿ, ಹಾವುಗಳು ಬಿಲದಿಂದ ಹೊರಟು

ಬಿಲಾನಿ ದಂಷ್ಟ್ರಿಣಃ ಸರ್ವೇ ಸಾನೂನಿ ಮೃಗಪಕ್ಷಿಣಃ ।
ತ್ಯಜಂತ್ಯಸ್ಮದ್ಭಯಾದ್ಭೀತಾ ಗಜಾಃ ಸಿಂಹಾ ವನಾನ್ಯಪಿ ॥ ೨೩

ಅಸ್ಮತ್ತ್ಯಕ್ತಂ ಪ್ರಪದ್ಯಂತಾಂ ಸೇವ್ಯಮಾನಂ ತ್ಯಜಂತು ಚ ।
ತೃಣಮಾಂಸಫಲಾದಾನಾಂ ದೇಶಂ ವ್ಯಾಲಮೃಗದ್ವಿಜಮ್ ॥ ೨೪

ಪ್ರಪದ್ಯತಾಂ ಹಿ ಕೈಕೇಯೀ ಸಪುತ್ರಾ ಸಹ ಬಾಂಧವೈ
ರಾಘವೇಣ ವನೇ ಸರ್ವೇ ಸಹ ವತ್ಸ್ಯಾಮ ನಿರ್ವೃತಾಃ ॥ ೨೫

ಇತ್ಯೇವಂ ವಿವಿಧಾ ವಾಚೋ ನಾನಾಜನಸಮೀರಿತಾಃ ।
ಶುಶ್ರಾವ ರಾಘವಃ ಶ್ರುತ್ವಾ ನ ವಿಚಕ್ರೇಽಸ್ಯ ಮಾನಸಮ್ ॥ ೨೬

ಸ ತು ವೇಶ್ಮ ಪಿತುರ್ದೂರಾತ್ ಕೈಲಾಸಶಿಖರಪ್ರಭಮ್ ।
ಅಭಿಚಕ್ರಾಮ ಧರ್ಮಾತ್ಮಾ ಮತ್ತಮಾತಂಗವಿಕ್ರಮಃ ॥ ೨೭

ವಿನೀತವೀರಪುರುಷಂ ಸ ಪ್ರವಿಶ್ಯ ನೃಪಾಲಯಮ್ ।
ದದರ್ಶಾವಸ್ಥಿತಂ ದೀನಂ ಸುಮಂತ್ರಮವಿದೂರತಃ ॥ ೨೮

---

ಹೋಗುತ್ತವೆ. ಮೃಗಪಕ್ಷಿಗಳು ಬೆಟ್ಟದ ತಪ್ಪಲುಗಳಿಂದ ಓಡಿಹೋಗುತ್ತವೆ. ಆನೆ ಸಿಂಹಗಳು ಕಾಡನ್ನೇ ತ್ಯಜಿಸಿ ಬಿಡುತ್ತವೆ (೨೨-೨೩). ಆ ಕ್ರೂರಜಂತುಗಳೆಲ್ಲವೂ ನಾವು ಹೋಗಿ ಸೇರುವ ಕಾಡನ್ನು ಪರಿತ್ಯಜಿಸಲಿ. ನಾವು ಪರಿತ್ಯಜಿಸುವ ಈ ಪಟ್ಟಣಕ್ಕೆ ಅವು ಬಂದು ಸೇರಿಕೊಳ್ಳಲಿ! ಈ ದೇಶದಲ್ಲಿ ಹುಲ್ಲು ಹಣ್ಣು ಮಾಂಸಗಳನ್ನು ತಿನ್ನುವ ಮೃಗಪಕ್ಷಿಗಳೂ ಕ್ರೂರಜಂತುಗಳೂ ಬಂದು ನೆಲೆಸಲಿ. ಇಂಥ ರಾಜ್ಯವನ್ನು ಪಡೆದು ಕೈಕೇಯಿಯು ತನ್ನ ಮಗನನ್ನೂ ಬಂಧುಗಳನ್ನೂ ಕಟ್ಟಿಕೊಂಡು ರಾಜ್ಯಭಾರ ನಡೆಸಲಿ! ನಾವೆಲ್ಲರೂ ಶ್ರೀರಾಮನೊಡನೆ ಅರಣ್ಯದಲ್ಲಿ ಸುಖವಾಗಿ ವಾಸಮಾಡೋಣ" ಎಂದು ಹೇಳಿಕೊಳ್ಳುತ್ತಿದ್ದರು (೨೪-೨೫). ಹೀಗೆ ನಾನಾ ಜನರು ನಾನಾ ವಿಧದಲ್ಲಿ ಆಡಿಕೊಳ್ಳುವುದು ಶ್ರೀರಾಮನಿಗೆ ಕೇಳಿಸಿತು. ಕೇಳಿದರೂ ಅವನ ಮನಸ್ಸು ಒಂದೇ ರೀತಿಯಲ್ಲಿ ಶಾಂತವಾಗಿತ್ತು. ಕೈಲಾಸಶಿಖರದಂತಿದ್ದ ತಂದೆಯ ಅರಮನೆಯು ದೂರದಲ್ಲಿ ಅವನಿಗೆ ಗೋಚರಿಸಿತು. ಶ್ರೀರಾಮನು ಮದ್ದಾನೆಯಂತೆ ಗಂಭೀರವಾಗಿ ನಡೆಯುತ್ತ ಮುಂದೆ ಹೋದನು (೨೬-೨೭). ಅಲ್ಲಿ ಅನೇಕ ವೀರಪುರುಷರು ವಿನೀತರಾಗಿ ಅರಮನೆಯನ್ನು ಕಾಯುತ್ತಿದ್ದರು.

ಪ್ರತೀಕ್ಷಮಾಣೋಽಭಿಜನಂ ತದಾರ್ತಂ
ಅನಾರ್ತರೂಪಃ ಪ್ರಹಸನ್ನಿವಾಥ ।
ಜಗಾಮ ರಾಮಃ ಪಿತರಂ ದಿದೃಕ್ಷುಃ
ಪಿತುರ್ನಿದೇಶಂ ವಿಧಿವಚ್ಚಿಕೀರ್ಷುಃ ॥ ೨೯
ತತ್ಪೂರ್ವಮೈಕ್ಷ್ವಾಕಸುತೋ ಮಹಾತ್ಮಾ
ರಾಮೋ ಗಮಿಷ್ಯನ್ ನೃಪಮಾರ್ತರೂಪಮ್ ।
ವ್ಯತಿಷ್ಠತ ಪ್ರೇಕ್ಷ್ಯ ತದಾ ಸುಮಂತ್ರಂ
ಪಿತುರ್ಮಹಾತ್ಮಾ ಪ್ರತಿಹಾರಣಾರ್ಥಮ್ ॥ ೩೦
ಪಿತುರ್ನಿದೇಶೇನ ತು ಧರ್ಮವತ್ಸಲೋ
ವನಪ್ರವೇಶೇ ಕೃತಬುದ್ಧಿನಿಶ್ಚಯಃ ।
ಸ ರಾಘವಃ ಪ್ರೇಕ್ಷ್ಯ ಸುಮಂತ್ರಮಬ್ರವೀತ್
ನಿವೇದಯಸ್ವಾಗಮನಂ ನೃಪಾಯ ಮೇ ॥ ೩೧

**ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯಸ್ತ್ರಿಂಶಃ ಸರ್ಗಃ**

---

ಶ್ರೀರಾಮನು ಅರಮನೆಯನ್ನು ಪ್ರವೇಶಿಸಿ ಸ್ವಲ್ಪ ದೂರದಲ್ಲಿ ದೈನ್ಯದಿಂದ ನಿಂತಿದ್ದ ಸುಮಂತ್ರನನ್ನು ಕಂಡನು. ಹೀಗೆ ಶ್ರೀರಾಮನು ವಿಷಣ್ಣರಾದ ಪ್ರಜೆಗಳನ್ನು ನೋಡುತ್ತ ತಾನು ಮಾತ್ರ ವಿಷಣ್ಣನಾಗದೆ ನಗುನಗುತ್ತಲೇ ಇದ್ದನು. ತಂದೆಯ ಆದೇಶವನ್ನು ಕ್ರಮಬದ್ಧವಾಗಿ ನಡೆಸಬೇಕೆಂದು ನಿಶ್ಚಯಿಸಿ ದಶರಥನನ್ನು ನೋಡುವುದಕ್ಕೆ ಹೋದನು (೨೮-೨೯). ಇಕ್ಷ್ವಾಕು ವಂಶೋದ್ಭವನಾದ ಆ ಮಹಾಪುರುಷನು ದುಃಖಿತನಾಗಿದ್ದ ದಶರಥನನ್ನು ನೋಡುವುದಕ್ಕೆ ಮೊದಲು, ಆತನಿಗೆ ತಾನು ಬಂದಿರುವುದನ್ನು ಹೇಳಿಕಳಿಸಬೇಕೆಂದು ಉದ್ದೇಶಿಸಿದನು. ಅಪ್ಪಣೆಂದ ಸುಮಂತ್ರನನ್ನು ಕಂಡೊಡನೆ (ಬಾಗಿಲಲ್ಲಿಯೇ) ನಿಂತನು (೩೦). ತಂದೆಯ ಅಪ್ಪಣೆಯಂತೆ ವನಕ್ಕೆ ಹೋಗಲು ನಿಶ್ಚಯಿಸಿದ್ದ ಧರ್ಮವತ್ಸಲನಾದ ಶ್ರೀರಾಮನು ಸುಮಂತ್ರನಿಗೆ "ಸುಮಂತ್ರ, ನಾನು ಬಂದಿರುವುದನ್ನು ಮಹಾರಾಜನಿಗೆ ತಿಳಿಸು" ಎಂದನು (೩೧).

**ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತುಮೂರನೆಯ ಸರ್ಗ**

## ಚತುಸ್ತ್ರಿಂಶಃ ಸರ್ಗಃ

### ದಶರಥಸಮಾಶ್ವಾಸನಮ್

ತತಃ ಕಮಲಪತ್ರಾಕ್ಷಃ ಶ್ಯಾಮೋ ನಿರುಪಮೋ ಮಹಾನ್ ।
ಉವಾಚ ರಾಮಸ್ತಂ ಸೂತಃ ಪಿತುರಾಖ್ಯಾಹಿ ಮಾಮಿತಿ ॥ ೧

ಸ ರಾಮಪ್ರೇಷಿತಃ ಕ್ಷಿಪ್ರಂ ಸಂತಾಪಕಲುಷೇಂದ್ರಿಯಃ ।
ಪ್ರವಿಶ್ಯ ನೃಪತಿಂ ಸೂತೋ ನಿಃಶ್ವಸಂತಂ ದದರ್ಶ ಹ ॥ ೨

ಉಪರಕ್ತಮಿವಾದಿತ್ಯಂ ಭಸ್ಮಚ್ಛನ್ನಮಿವಾನಲಮ್ ।
ತಟಾಕಮಿವ ನಿಸ್ತೋಯಮುಪಶ್ಯಜ್ಜಗತೀಪತಿಮ್ ॥ ೩

ಆಲೋಕ್ಯ ತಂ ಮಹಾಪ್ರಾಜ್ಞಃ ಪರಮಾಕುಲಚೇತಸಮ್ ।
ರಾಮಮೇವಾನುಶೋಚಂತಂ ಸೂತಃ ಪ್ರಾಂಜಲಿರಾಸದತ್ ॥ ೪

ತಂ ವರ್ಧಯಿತ್ವಾ ರಾಜಾನಂ ಸೂತಃ ಪೂರ್ವಂ ಜಯಾಶಿಷಾ ।
ಭಯವಿಕ್ಲವಯಾ ವಾಚಾ ಮಂದಯಾ ಶ್ಲಕ್ಷ್ಣಮಬ್ರವೀತ್ ॥ ೫

## ಸರ್ಗ ೩೪

ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಶರಥನನ್ನು ಕಾಣುವುದು. ದಶರಥನ ವಿಲಾಪ.

ಕಮಲದಳಾಯತಾಕ್ಷನೂ ಶ್ಯಾಮಲಾಂಗನೂ ಅಸದೃಶನಾದ ಮಹಾಪುರುಷನೂ ಆದ ಶ್ರೀರಾಮನು ಸೂತನಾದ ಸುಮಂತ್ರನನ್ನು ನೋಡಿ, ತಾನು ಬಂದಿರುವುದನ್ನು ತಂದೆಗೆ ತಿಳಿಸಬೇಕೆಂದು ಹೇಳಿದನು. ಹೀಗೆ ರಾಮನು ಕಳಿಸಲಾಗಿ ದುಃಖಸಂತಪ್ತನಾದ ಸೂತನು ಒಳಕ್ಕೆ ಹೋಗಿ ನಿಟ್ಟುಸಿರುಬಿಡುತ್ತಿದ್ದ ದಶರಥರಾಜನನ್ನು ಕಂಡನು (೧-೨). ದಶರಥನಾದರೊ ರಾಹುಹಿಡಿದ ಸೂರ್ಯನಂತೆಯೂ ಬೂದಿಮುಚ್ಚಿದ ಕೆಂಡದಂತೆಯೂ ತೇಜೋಹೀನನಾಗಿ, ನೀರಿಲ್ಲದ ಕೆರೆಯಂತೆ ಶೋಚನೀಯವಾಗಿದ್ದನು. ಮನಸ್ಸು ಕಳವಳದಿಂದ ಕೊರಗಿತ್ತು. ರಾಮನನ್ನೇ ಧ್ಯಾನಿಸುತ್ತ ದುಃಖದಿಂದ ತಳಮಳಿಸಿತ್ತು. ಪ್ರಾಜ್ಞನಾದ ಸುಮಂತ್ರನು ಕೈಮುಗಿದುಕೊಂಡು ಅವನ ಸಮೀಪಕ್ಕೆ ಹೋದನು (೩-೪). ಆ ಸೂತನು ಹೆದರುತ್ತಲೇ 'ಮಹಾರಾಜ

ಅಯಂ ಸ ಪುರುಷವ್ಯಾಘ್ರೋ ದ್ವಾರಿ ತಿಷ್ಠತಿ ತೇ ಸುತಃ ।
ಬ್ರಾಹ್ಮಣೇಭ್ಯೋ ಧನಂ ದತ್ತ್ವಾ ಸರ್ವಂ ಚೈವೋಪಜೀವಿನಾಮ್ ॥

ಸ ತ್ವಾಂ ಪಶ್ಯತು ಭದ್ರಂ ತೇ ರಾಮಃ ಸತ್ಯಪರಾಕ್ರಮಃ ।
ಸರ್ವಾನ್ ಸುಹೃದ ಆಪೃಚ್ಛ್ಯ ತ್ವಾಮಿದಾನೀಂ ದಿದೃಕ್ಷತೇ ॥ ೭

ಗಮಿಷ್ಯಂತಂ ಮಹಾರಣ್ಯಂ ತಂ ಪಶ್ಯ ಜಗತೀಪತೇ ।
ವೃತಂ ರಾಜಗುಣೈಃ ಸರ್ವೈರಾದಿತ್ಯಮಿವ ರಶ್ಮಿಭಿಃ ॥ ೮

ಸ ಸತ್ಯವಾದೀ ಧರ್ಮಾತ್ಮಾ ಗಾಂಭೀರ್ಯಾತ್ ಸಾಗರೋಪಮಃ ।
ಆಕಾಶ ಇವ ನಿಷ್ಪಂಕೋ ನರೇಂದ್ರಃ ಪ್ರತ್ಯುವಾಚ ತಮ್ ॥ ೯

ಸುಮಂತ್ರಾನಯ ಮೇ ದಾರಾನ್ ಯೇ ಕೇಚಿದಿಹ ಮಾಮಕಾಃ ।
ದಾರೈಃ ಪರಿವೃತಃ ಸರ್ವೈರ್ದ್ರಷ್ಟುಮಿಚ್ಛಾಮಿ ಧಾರ್ಮಿಕಮ್ ॥ ೧೦

ಸೋಽತಃಪುರಮತೀತ್ಯೈವ ಸ್ತ್ರಿಯಸ್ತಾ ವಾಕ್ಯಮಬ್ರವೀತ್ ।
ಆರ್ಯಾ ಹ್ವಯತಿ ವೋ ರಾಜಾ ಗಮ್ಯತಾಂ ತತ್ರ ಮಾ ಚಿರಮ್ ॥

---

ನಿಗೆ ಜಯವಾಗಲಿ' ಎಂದು ನುಡಿದು, ನಡುಗುವ ಧ್ವನಿಯಿಂದ ಮೆಲ್ಲಗೆ "ಮಹಾರಾಜ, ಪುರುಷಶ್ರೇಷ್ಠನಾದ ನಿನ್ನ ಕುಮಾರನು ಬಾಗಿಲಲ್ಲಿ ನಿಂತಿದ್ದಾನೆ. ಅವನು ಬ್ರಾಹ್ಮಣರಿಗೂ ಪರಿಜನರಿಗೂ ತನ್ನ ಸಮಸ್ತ ಐಶ್ವರ್ಯವನ್ನೂ ದಾನಮಾಡಿ ಬಂದಿದ್ದಾನೆ (೫-೬). ಸತ್ಯಸಂಧನಾದ ಶ್ರೀರಾಮನು ಸಕಲಬಂಧುಗಳನ್ನೂ ಬೀಳ್ಕೊಂಡು ಬಂದು, ಈಗ ನಿನ್ನನ್ನು ನೋಡಬೇಕೆಂದಿದ್ದಾನೆ. ಅರಣ್ಯಕ್ಕೆ ಹೊರಟು ನಿಂತಿದ್ದಾನೆ. ಕಿರಣಗಳಿಂದ ಬೆಳಗುವ ಸೂರ್ಯನಂತೆ ನಿಖಿಲರಾಜಗುಣಗಳಿಂದ ಬೆಳಗುತ್ತ ನಿಂತಿದ್ದಾನೆ. ಮಹಾರಾಜ, ಆತನಿಗೆ ದರ್ಶನವನ್ನು ಕೊಡು" ಎಂದು ಹೇಳಿದನು (೭-೮). ದಶರಥನಾದರೊ ಸತ್ಯವಾದಿ; ಧರ್ಮಾತ್ಮ; ಸಮುದ್ರದಂತೆ ಗಂಭೀರಸ್ವಭಾವದವನು. ನಿರ್ಮಲವಾದ ಆಕಾಶದಂತೆ, ಪಾಪದ ಲೇಪವಿಲ್ಲದವನು. ಆ ನರೇಂದ್ರನು "ಸುಮಂತ್ರ, ಅರಮನೆಯಲ್ಲಿರುವ ನನ್ನ ಎಲ್ಲ ಸ್ತ್ರೀಯರನ್ನೂ ಬರಹೇಳು. ಅವರಿಂದೊಡಗೂಡಿಯೇ ನಾನು ಆ ಧರ್ಮಾತ್ಮನನ್ನು ನೋಡಬೇಕೆಂದಿದ್ದೇನೆ" ಎಂದು ನುಡಿದನು (೯-೧೦). ಕೂಡಲೆ ಸುಮಂತ್ರನು ಅವರ ಅಂತಃಪುರಕ್ಕೆ ಹೋಗಿ "ಅಮ್ಮ, ಮಹಾರಾಜನು

ಏವಮುಕ್ತಾಃ ಸ್ತ್ರಿಯಃ ಸರ್ವಾಃ ಸುಮಂತ್ರೇಣ ನೃಪಾಜ್ಞಯಾ ।
ಪ್ರಚಕ್ರಮುಸ್ತದ್ಭವನಂ ಭರ್ತುರಾಜ್ಞಾಯ ಶಾಸನಮ್ ॥ ೧೨

ಅರ್ಧಸಪ್ತಶತಾಸ್ತಾಸ್ತು ಪ್ರಮದಾಸ್ತಾಮ್ರಲೋಚನಾಃ ।
ಕೌಸಲ್ಯಾಂ ಪರಿವಾರ್ಯಾಥ ಶನೈರ್ಜಗ್ಮುರ್ಧೃತವ್ರತಾಃ ॥ ೧೩

ಆಗತೇಷು ಚ ದಾರೇಷು ಸಮವೇಕ್ಷ್ಯ ಮಹೀಪತಿಃ ।
ಉವಾಚ ರಾಜಾ ತಂ ಸೂತಂ ಸುಮಂತ್ರಾನಯ ಮೇ ಸುತಮ್ ॥ ೧೪

ಸ ಸೂತೋ ರಾಮಮಾದಾಯ ಲಕ್ಷ್ಮಣಂ ಮೈಥಿಲೀಂ ತದಾ ।
ಜಗಾಮಾಭಿಮುಖಸ್ತೂರ್ಣಂ ಸಕಾಶಂ ಜಗತೀಪತೇಃ ॥ ೧೫

ಸ ರಾಜಾ ಪುತ್ರಮಾಯಾಂತಂ ದೃಷ್ಟ್ವಾ ದೂರಾತ್ ಕೃತಾಂಜಲಿಮ್ ।
ಉತ್ಪಪಾತಾಸನಾತ್ತೂರ್ಣಮಾರ್ತಃ ಸ್ತ್ರೀಜನಸಂವೃತಃ ॥ ೧೬

ಸೋಽಭಿದುದ್ರಾವ ವೇಗೇನ ರಾಮಂ ದೃಷ್ಟ್ವಾ ವಿಶಾಂಪತಿಃ ।
ತಮಸಂಪ್ರಾಪ್ಯ ದುಃಖಾರ್ತಃ ಪಪಾತ ಭುವಿ ಮೂರ್ಛಿತಃ ॥ ೧೭

---

ನಿಮ್ಮೆಲ್ಲರನ್ನೂ ಬರಹೇಳಿದ್ದಾನೆ. ತಡಮಾಡದೆ ನೀವು ಅಲ್ಲಿಗೆ ಬರಬೇಕು" ಎಂದನು. ಹೀಗೆ ಸುಮಂತ್ರನು ಹೇಳಲಾಗಿ ಆ ಸ್ತ್ರೀಯರೆಲ್ಲರೂ ರಾಜಾಜ್ಞೆಯಂತೆ ದಶರಥನಿದ್ದಲ್ಲಿಗೆ ಬಂದರು (೧೧-೧೨). ಆ ರಾಜಸ್ತ್ರೀಯರು ಮುನ್ನೂರೈವತ್ತು ಜನರಿದ್ದರು. ಅತ್ತು ಅತ್ತು ಅವರ ಕಣ್ಣು ಕೆಂಪಾಗಿತ್ತು. ಅವರೆಲ್ಲರೂ ಕೌಸಲ್ಯೆಯನ್ನು ಮುಂದಿಟ್ಟುಕೊಂಡು ವಿನೀತಭಾವದಿಂದ ದಶರಥನಿದ್ದಲ್ಲಿಗೆ ಮೆಲ್ಲಗೆ ಬಂದು ಸೇರಿದರು. ಸ್ತ್ರೀಯರೆಲ್ಲರೂ ಬಂದುದನ್ನು ನೋಡಿ ದಶರಥನು "ಸುಮಂತ್ರ, ನನ್ನ ಮಗನನ್ನು ಕರೆದುಕೊಂಡು ಬಾ" ಎಂದನು (೧೩-೧೪). ಆಗ ಸುಮಂತ್ರನು ಹೋಗಿ ರಾಮ ಲಕ್ಷ್ಮಣ ಸೀತೆಯರನ್ನು ಮಹಾರಾಜನೆದುರಿಗೆ ಕರೆದುಕೊಂಡು ಬಂದನು. ದೂರದಿಂದಲೇ ಕೈಮುಗಿದುಕೊಂಡು ಬರುತ್ತಿದ್ದ ತನ್ನ ಪುತ್ರನನ್ನು ಕಂಡೊಡನೆ, ದಶರಥನಿಗೆ ದುಃಖವು ಉಕ್ಕಿಬಂದಿತು. ಆ ಸ್ತ್ರೀಯರೆದುರಿಗೆ ಅವನು ಥಟ್ಟನೆ ಪೀಠದಿಂದೆದ್ದು ದುಃಖವನ್ನು ತಡೆಯಲಾರದೆ ರಾಮನ ಕಡೆಗೆ ಓಡುತ್ತ ಹೋದನು. ರಾಮನ ಸಮೀಪಕ್ಕೆ ಹೋಗುವುದರೊಳಗೆ ಎಚ್ಚರದಪ್ಪಿ ನೆಲದ ಮೇಲೆ ಬಿದ್ದು

ತಂ ರಾಮೋಽಭ್ಯಪತತ್ ಕ್ಷಿಪ್ರಂ ಲಕ್ಷ್ಮಣಶ್ಚ ಮಹಾರಥಃ ।
ವಿಸಂಜ್ಞಮಿವ ದುಃಖೇನ ಸಶೋಕಂ ನೃಪತಿಂ ತದಾ ॥ ೧೮

ಸ್ತ್ರೀಸಹಸ್ರನಿನಾದಶ್ಚ ಸಂಜಜ್ಞೇ ರಾಜವೇಶ್ಮನಿ ।
ಹಾ ಹಾ ರಾಮೇತಿ ಸಹಸಾ ಭೂಷಣಧ್ವನಿಮೂರ್ಛಿತಃ ॥ ೧೯

ತಂ ಪರಿಷ್ವಜ್ಯ ಬಾಹುಭ್ಯಾಂ ತಾವುಭೌ ರಾಮಲಕ್ಷ್ಮಣೌ ।
ಪರ್ಯಂಕೇ ಸೀತಯಾ ಸಾರ್ಧಂ ರುದಂತಃ ಸಮವೇಶಯನ್ ॥ ೨೦

ಅಥ ರಾಮೋ ಮುಹೂರ್ತೇನ ಲಬ್ಧಸಂಜ್ಞಂ ಮಹೀಪತಿಮ್ ।
ಉವಾಚ ಪ್ರಾಂಜಲಿರ್ಭೂತ್ವಾ ಶೋಕಾರ್ಣವಪರಿಪ್ಲುತಮ್ ॥ ೨೧

ಆಪೃಚ್ಛೇ ತ್ವಾಂ ಮಹಾರಾಜ ಸರ್ವೇಷಾಮೀಶ್ವರೋಽಸಿ ನಃ ।
ಪ್ರಸ್ಥಿತಂ ದಂಡಕಾರಣ್ಯಂ ಪಶ್ಯ ತ್ವಂ ಕುಶಲೇನ ಮಾಮ್ ॥ ೨೨

ಲಕ್ಷ್ಮಣಂ ಚಾನುಜಾನೀಹಿ ಸಾತಿ ಚಾನ್ವೇತಿ ಮಾಂ ವನಮ್ ।
ಕಾರಣೈರ್ಬಹುಭಿಸ್ತಥ್ಯೈರ್ವಾರ್ಯಮಾಣೌ ನ ಚೇಚ್ಛತಃ ॥ ೨೩

---

ಬಿಟ್ಟನು (೧೫-೧೭). ರಾಮಲಕ್ಷ್ಮಣರು ತಂದೆಯ ಬಳಿಗೆ ಓಡಿಬಂದರು. ಹೆಂಗಸರು "ಅಯ್ಯೋ! ಅಯ್ಯೋ! ರಾಮಾ! ರಾಮಾ!" ಎಂದು ಕೂಗಿಕೊಂಡರು. (ಆ ಸ್ತ್ರೀಯರು ಗಾಬರಿಯಿಂದ ಓಡಾಡಲು) ಅವರ ಒಡವೆಗಳ ಗಲ್‌ಗಲ್ ಶಬ್ದವು ಅರಮನೆಯಲ್ಲಿ ಮೊಳಗಿತು (೧೮-೧೯). ರಾಮಲಕ್ಷ್ಮಣರು ಸೀತೆಯೊಡನೆ ಅಳುತ್ತ ದಶರಥನನ್ನು ಕೈಗಳಿಂದ ಮೆಲ್ಲಗೆ ಹಿಡಿದೆತ್ತಿ ಮಂಚದ ಮೇಲೆ ಮಲಗಿಸಿದರು. ಸ್ವಲ್ಪ ಹೊತ್ತಿನ ಮೇಲೆ ಅವನಿಗೆ ಎಚ್ಚರ ಹುಟ್ಟಿತು. ಶೋಕಸಮುದ್ರದಲ್ಲಿ ಮುಳುಗಿ ತೊಳಲುತ್ತಿದ್ದ ದಶರಥನಿಗೆ ಶ್ರೀರಾಮನು ಕೈಮುಗಿದು ಹೇಳಿದನು (೨೦-೨೧) : "ಮಹಾರಾಜ, ನಾನು ಹೋಗಿಬರುತ್ತೇನೆ. ನೀನು ನಮ್ಮೆಲ್ಲರಿಗೂ ಪ್ರಭುವಾಗಿದ್ದೀಯೆ. ನಾನು ದಂಡಕಾರಣ್ಯಕ್ಕೆ ಹೊರಟಿದ್ದೇನೆ. ನನ್ನನ್ನು ಸೌಮ್ಯದೃಷ್ಟಿಯಿಂದ ನೋಡಿ ಆಶೀರ್ವದಿಸು. ನನ್ನೊಡನೆ ಬರಲು ಲಕ್ಷ್ಮಣನಿಗೆ ಅನುಮತಿಯನ್ನು ಕೊಡು. ಸೀತೆಯೂ ನನ್ನೊಂದಿಗೆ ಕಾಡಿಗೆ ಬರುತ್ತಾಳೆ. ನಿಜವಾದ ಎಷ್ಟೋ ಕಾರಣಗಳನ್ನು ಕೊಟ್ಟು ನೀವು ಬರಬೇಡಿರೆಂದು ಬಹುವಿಧದಲ್ಲಿ ನಾನು ಹೇಳಿದೆ. ಆದರೂ

ಅನುಜಾನೀಹಿ ಸರ್ವಾನ್ನಃ ಶೋಕಮುತ್ಸೃಜ್ಯ ಮಾನದ ।
ಲಕ್ಷ್ಮಣಂ ಮಾಂ ಚ ಸೀತಾಂ ಚ ಪ್ರಜಾಪತಿರಿವಾತ್ಮಜಾನ್ ॥ ೨೪

ಪ್ರತೀಕ್ಷಮಾಣಮವ್ಯಗ್ರಮನುಜ್ಞಾಂ ಜಗತೀಪತಿಃ ।
ಉವಾಚ ರಾಜಾ ಸಂಪ್ರೇಕ್ಷ್ಯ ವನವಾಸಾಯ ರಾಘವಮ್ ॥ ೨೫

ಅಹಂ ರಾಘವ ಕೈಕೇಯ್ಯಾ ವರದಾನೇನ ಮೋಹಿತಃ ।
ಅಯೋಧ್ಯಾಯಾಸ್ತ್ವಮೇವಾದ್ಯ ಭವ ರಾಜಾ ನಿಗೃಹ್ಯ ಮಾಮ್ ॥

ಏವಮುಕ್ತೋ ನೃಪತಿನಾ ರಾಮೋ ಧರ್ಮಭೃತಾಂ ವರಃ ।
ಪ್ರತ್ಯುವಾಚಾಂಜಲಿಂ ಕೃತ್ವಾ ಪಿತರಂ ವಾಕ್ಯಕೋವಿದಃ ॥ ೨೭

ಭವಾನ್ ವರ್ಷಸಹಸ್ರಾಯ ಪೃಥಿವ್ಯಾ ನೃಪತೇ ಪತಿಃ ।
ಅಹಂ ತ್ವರಣ್ಯೇ ವತ್ಸ್ಯಾಮಿ ನ ಮೇ ಕಾರ್ಯಂ ತ್ವಯಾನೃತಮ್ ।

ನವ ಪಂಚ ಚ ವರ್ಷಾಣಿ ವನವಾಸೇ ವಿಹೃತ್ಯ ತೇ ।
ಪುನಃ ಪಾದೌ ಗ್ರಹೀಷ್ಯಾಮಿ ಪ್ರತಿಜ್ಞಾಂತೇ ನರಾಧಿಪ ॥ ೨೯

---

ಇವರು ಒಪ್ಪುವುದಿಲ್ಲ (೨೨-೨೩). ನೀನು ವ್ಯಸನವನ್ನು ಪರಿತ್ಯಜಿಸು. ಬ್ರಹ್ಮನು ತನ್ನ ಪುತ್ರರಾದ ಸನಕಾದಿಗಳಿಗೆ (ತಪಸ್ಸನ್ನಾಚರಿಸಲು) ಅನುಮತಿಸಿದಂತೆ, ನೀನು ಲಕ್ಷ್ಮಣನಿಗೂ ಸೀತೆಗೂ ನನಗೂ ವನಕ್ಕೆ ಹೋಗಲು ಅನುಜ್ಞೆಯನ್ನು ಕೊಡು" ಎಂದನು (೨೪). ಹೀಗೆ ನಿಶ್ಚಿಂತೆಯಿಂದ ವನವಾಸಕ್ಕೆ ಹೋಗಲು ಅನುಜ್ಞೆಯನ್ನು ಕೇಳುತ್ತಿದ್ದ ಶ್ರೀರಾಮನನ್ನು ನೋಡಿ ದಶರಥನು 'ರಾಮ, ಕೈಕೇಯಿಗೆ ವರವನ್ನು ಕೊಟ್ಟು ನನ್ನ ಬುದ್ಧಿಗೆ ಮಂಕು ಹಿಡಿದಿದೆ. ಅಯೋಧ್ಯೆಗೆ ನೀನೇ ರಾಜನಾಗು. ನನ್ನನ್ನು ಸೆರೆಹಿಡಿದು ದಂಡಿಸು" ಎಂದು ಹೇಳಿದನು (೨೫-೨೬). ಆಗ ಧರ್ಮಾತ್ಮನೂ ವಾಗ್ವಿಶಾರದನೂ ಆದ ಶ್ರೀರಾಮಚಂದ್ರನು ಕೈಗಳೆರಡನ್ನೂ ಜೋಡಿಸಿ ತಂದೆಯನ್ನು ಕುರಿತು "ಮಹಾರಾಜ, ಇನ್ನೂ ಸಾವಿರಾರು ವರ್ಷ ಈ ಪೃಥ್ವೀಮಂಡಲಕ್ಕೆ ನೀನು ಅಧಿಪತಿಯಾಗಿರಬೇಕು. ನಾನು ಅರಣ್ಯದಲ್ಲಿರುವೆನು. ನೀನು ಕೊಟ್ಟ ಮಾತನ್ನು ಎಂದಿಗೂ ನಾನು ಸುಳ್ಳು ಮಾಡುವುದು ಸರಿಯಲ್ಲ (೨೭-೨೮). ನಾನು ಹದಿನಾಲ್ಕು ವರ್ಷ ವನದಲ್ಲಿ ತಿರುಗಾಡಿಕೊಂಡಿದ್ದು ಪ್ರತಿಜ್ಞೆಯು ಮುಗಿದ ಮೇಲೆ ಪುನಃ ಬಂದು ನಿನ್ನ ಪಾದ

ರುದನ್ನಾರ್ತಃ ಪ್ರಿಯಂ ಪುತ್ರಂ ಸತ್ಯಪಾಶೇನ ಸಂಯತಃ ।
ಕೈಕೇಯ್ಯಾ ಚೋದ್ಯಮಾನಸ್ತು ಮಿಥೋ ರಾಜಾ ತಮಬ್ರವೀತ್ ॥

ಶ್ರೇಯಸೇ ವೃದ್ಧಯೇ ತಾತ ಪುನರಾಗಮನಾಯ ಚ ।
ಗಚ್ಛಸ್ವಾರಿಷ್ಟಮವ್ಯಗ್ರಃ ಪಂಥಾನಮಕುತೋಭಯಮ್ ॥ ೩೧

ನ ಹಿ ಸತ್ಯಾತ್ಮನಸ್ತಾತ ಧರ್ಮಾಭಿಮನಸಸ್ತವ ।
ವಿನಿವರ್ತಯಿತುಂ ಬುದ್ಧಿಃ ಶಕ್ಯತೇ ರಘುನಂದನ ॥ ೩೨

ಅದ್ಯ ತ್ವಿದಾನೀಂ ರಜನೀಂ ಪುತ್ರ ಮಾ ಗಚ್ಛ ಸರ್ವಥಾ ।
ಏಕಾಹಂ ದರ್ಶನೇನಾಪಿ ಸಾಧು ತಾವಚ್ಚರಾಮ್ಯಹಮ್ ॥ ೩೩

ಮಾತರಂ ಮಾಂ ಚ ಸಂಪಶ್ಯನ್ ವಸೇಮಾಮದ್ಯ ಶರ್ವರೀಮ್ ।
ತರ್ಪಿತಃ ಸರ್ವಕಾಮೈಸ್ತ್ವಂ ಶ್ವಃ ಕಲ್ಯೇ ಸಾಧಯಿಷ್ಯಸಿ ॥ ೩೪

ದುಷ್ಕರಂ ಕ್ರಿಯತೇ ಪುತ್ರ ಸರ್ವಥಾ ರಾಘವ ತ್ವಯಾ ।
ಮತ್ಪ್ರಿಯಾರ್ಥಂ ಪ್ರಿಯಾಂಸ್ತ್ಯಕ್ತ್ವಾ ಯದ್ಯಾಸಿ ವಿಜನಂ ವನಮ್ ॥

---

ಗಳನ್ನು ಹಿಡಿದುಕೊಳ್ಳುತ್ತೇನೆ" ಎಂದು ನುಡಿದನು (೨೯). ದಶರಥನನ್ನು ಸತ್ಯಪಾಶವು ಬಿಗಿದುಕಟ್ಟಿತ್ತು. ಇತ್ತ ಕೈಕೇಯಿಯು ಕಿವಿಯಲ್ಲಿ 'ಈಗಲೆ ರಾಮನನ್ನು ವನಕ್ಕೆ ಕಳಿಸು' ಎಂದು ಒತ್ತಾಯ ಪಡಿಸುತ್ತಿದ್ದಳು. ದಶರಥನು ದಿಕ್ಕುತೋರದೆ ಕಣ್ಣೀರು ಸುರಿಸುತ್ತ ಹೀಗೆಂದನು : "ವತ್ಸ, ಹೋಗಿ ಬಾ. ನಿನಗೆ ಶ್ರೇಯಸ್ಸಾಗಲಿ! ಅಭ್ಯುದಯವಾಗಲಿ! ಶುಭವಾಗಲಿ! ದಾರಿಯಲ್ಲಿ ನಿನಗೆ ಯಾವ ಚಿಂತೆಯೂ ಆಗದಿರಲಿ. ಯಾವ ಭಯವೂ ಬರದಿರಲಿ (೩೦-೩೧). ರಘುನಂದನ, ನೀನು ಸತ್ಯಾತ್ಮ; ಧರ್ಮನಿಷ್ಠ. ನಿನ್ನ ಮನಸ್ಸನ್ನು ತಿರುಗಿಸಲು ಯಾರಿಗೂ ಶಕ್ಯವಿಲ್ಲ. ಆದರೆ, ಮಗು, ಈ ದಿನ-ಈಗ-ಒಂದು ರಾತ್ರಿ-ಇಲ್ಲಿಯೇ ಇರು. ಖಂಡಿತವಾಗಿ ಹೋಗಬೇಡ. ಈ ಒಂದು ದಿನ ಮನಸ್ತೃಪ್ತಿಯಾಗಿ ನಿನ್ನನ್ನು ನೋಡುತ್ತ ಆನಂದದಲ್ಲಿ ಕಳೆಯುವೆನು (೩೨-೩೩). ಈ ಒಂದು ರಾತ್ರಿ ನಿನ್ನ ತಾಯಿಯನ್ನೂ ನನ್ನನ್ನೂ ನೋಡಿಕೊಳ್ಳುತ್ತಿರು. ನಿನ್ನನ್ನು ಉಪಚರಿಸಿ ನನ್ನ ಮನಸ್ಸಿನಲ್ಲಿರುವ ಎಲ್ಲ ಆಸೆಗಳನ್ನೂ ತೀರಿಸಿಕೊಳ್ಳುತ್ತೇನೆ. ನಾಳೆ ಪ್ರಾತಃಕಾಲ ಹೋಗಬಹುದು (೩೪). ಕಂದ, ರಾಘವ, ಸರ್ವಥಾ ಬಹುಕಷ್ಟವಾದ

ನ ಚೈತನ್ಮೇ ಪ್ರಿಯಂ ಪುತ್ರ ಶಪೇ ಸತ್ಯೇನ ರಾಘವ ।
ಧನ್ಯಯಾ ಚಲಿತಸ್ತ್ವಸ್ಮಿ ಸ್ತ್ರಿಯಾ ಧನ್ಯಾಗ್ನಿಕಲ್ಪಯಾ ॥ ೩೬

ವಂಚನಾ ಯಾ ತು ಲಬ್ಧಾ ಮೇ ತಾಂ ತ್ವಂ ನಿಸ್ತರ್ತುಮಿಚ್ಛಸಿ ।
ಅನಯಾ ವೃತ್ತಸಾದಿನ್ಯಾ ಕೈಕೇಯ್ಯಾಭಿಪ್ರಚೋದಿತಃ ॥ ೩೭

ನ ಚೈತದಾಶ್ಚರ್ಯತಮಂ ಯತ್ತ್ವಂ ಜ್ಯೇಷ್ಠಃ ಸುತೋ ಮಮ ।
ಅಪಾನೃತಕಥಂ ಪುತ್ರ ಪಿತರಂ ಕರ್ತುಮಿಚ್ಛಸಿ ॥ ೩೮

ಅಥ ರಾಮಸ್ತಥಾ ಶ್ರುತ್ವಾ ಪಿತುರಾರ್ತಸ್ಯ ಭಾಷಿತಮ್ ।
ಲಕ್ಷ್ಮಣೇನ ಸಹ ಭ್ರಾತ್ರಾ ದೀನೋ ವಚನಮಬ್ರವೀತ್ ॥ ೩೯

ಪ್ರಾಪ್ಸ್ಯಾಮಿ ಯಾನದ್ಯ ಗುಣಾನ್ ಕೋ ಮೇ ಶ್ವಸ್ತಾನ್ ಪ್ರದಾಸ್ಯತಿ
ಅಪಕ್ರಮಣಮೇವಾತಃ ಸರ್ವಕಾಮೈರಹಂ ವೃಣೇ ॥ ೪೦

---

ಸಾಹಸಕ್ಕೆ ಕೈಹಾಕಿದ್ದೀಯೆ. ನನ್ನೊಬ್ಬನ ಹಿತಕ್ಕಾಗಿ ಪ್ರಿಯಜನರನ್ನು ತೊರೆದು ನಿರ್ಜನವಾದ ಅರಣ್ಯಕ್ಕೆ ಹೊರಟಿದ್ದೀಯಲ್ಲ. ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಮಗನೆ, ನೀನು ಹೋಗುವುದು ನನಗೆ ಇಷ್ಟವಿಲ್ಲ. ಒಳಗೊಳಗೇ ಕ್ರೂರವಾಗಿ ಹವಣಿಸುತ್ತ ಬೂದಿ ಮುಚ್ಚಿದ ಕೆಂಡದಂತಿದ್ದ ಈ ಹೆಂಗಸು ನನ್ನನ್ನು ಅಲ್ಲಾಡಿಸಿದಳು (೩೫-೩೬). ಆಚಾರಭ್ರಷ್ಟಳಾದ ಈ ಕೈಕೇಯಿಯ ವಂಚನೆಗೆ ನಾನು ಸಿಕ್ಕಿದೆ. ನೀನು ಇವಳ ಪ್ರೇರಣೆಯಂತೆ ನಾನು ಸಲ್ಲಿಸಬೇಕಾದ ವಂಚನೆಯ ವರವನ್ನು ನಡೆಸಲು ಉದ್ದೇಶಿಸಿದ್ದೀಯೆ. ನನ್ನ ಜ್ಯೇಷ್ಠಪುತ್ರನಾದ ನೀನು ನಿನ್ನ ತಂದೆಯನ್ನು ಅಸತ್ಯದಲ್ಲಿ ಬೀಳದಂತೆ ಉದ್ಧರಿಸಲು ಯತ್ನಿಸಿದ್ದೀಯೆ. ನಿನ್ನ ವಿಷಯದಲ್ಲಿ ಇದೇನೂ ಅಚ್ಚರಿಯಲ್ಲ" ಎಂದನು (೩೭-೩೮). ಹೀಗೆ ಶೋಕಾರ್ತನಾದ ತಂದೆಯ ನುಡಿಯನ್ನು ಕೇಳಿ ರಾಮನಿಗೂ ಅವನ ತಮ್ಮ ಲಕ್ಷ್ಮಣನಿಗೂ ಬಹಳ ಖೇದವಾಯಿತು. ಶ್ರೀರಾಮನು ದೈನ್ಯದಿಂದ ತಂದೆಗೆ ಹೇಳಿದನು : "ಮಹಾರಾಜ, ಈ ದಿನ ನನ್ನಲ್ಲಿರಬಹುದಾದ ಗುಣಗಳನ್ನು ನಾಳೆಯೂ ನನಗೆ ಕೊಡ ತಕ್ಕವನಾರು? ಇದೇ ನನ್ನ ಮನಸ್ಸು ನಾಳೆಯೂ ಇರುವುದೆಂದು ಹೇಳುವುದು ಹೇಗೆ ? ಸರ್ವಕಾಮನೆಗಳೂ ಸಿದ್ಧಿಸಿದವೆಂದು ತಿಳಿದು ಇಂದೇ ನಾನು ಹೊರಟು

ಇಯಂ ಸರಾಷ್ಟ್ರಾ ಸಜನಾ ಧನಧಾನ್ಯಸಮಾಕುಲಾ ।
ಮಯಾ ವಿಸೃಷ್ಟಾ ವಸುಧಾ ಭರತಾಯ ಪ್ರದೀಯತಾಮ್ ॥ ೪೧

ವನವಾಸಕೃತಾ ಬುದ್ಧಿರ್ನ ಚ ಮೇಽದ್ಯ ಚಲಿಷ್ಯತಿ ।
ಯಸ್ತುಷ್ಟೇನ ವರೋ ದತ್ತಃ ಕೈಕೇಯ್ಯೈ ವರದ ತ್ವಯಾ ॥ ೪೨

ದೀಯತಾಂ ನಿಖಿಲೇನೈವ ಸತ್ಯಸ್ತ್ವಂ ಭವ ಪಾರ್ಥಿವ ।
ಅಹಂ ನಿದೇಶಂ ಭವತೋ ಯಥೋಕ್ತಮನುಪಾಲಯನ್ ॥ ೪೩

ಚತುರ್ದಶ ಸಮಾ ವತ್ಸ್ಯೇ ವನೇ ವನಚರೈಃ ಸಹ ।
ಮಾ ವಿಮರ್ಶೋ ವಸುಮತೀ ಭರತಾಯ ಪ್ರದೀಯತಾಮ್ ॥ ೪೪

ನ ಹಿ ಮೇ ಕಾಂಕ್ಷಿತಂ ರಾಜ್ಯಂ ಸುಖಮಾತ್ಮನಿ ವಾ ಪ್ರಿಯಮ್ ।
ಯಥಾ ನಿದೇಶಂ ಕರ್ತುಂ ವೈ ತವೈವ ರಘುನಂದನ ॥ ೪೫

ಅಪಗಚ್ಛತು ತೇ ದುಃಖಂ ಮಾ ಭೂರ್ಬಾಷ್ಪಪರಿಪ್ಲುತಃ ।
ನ ಹಿ ಕ್ಷುಭ್ಯತಿ ದುರ್ಧರ್ಷಃ ಸಮುದ್ರಃ ಸರಿತಾಂ ಪತಿಃ ॥ ೪೬

---

ಹೋಗುವುದು ಉತ್ತಮ (೩೯-೪೦). ಧನಧಾನ್ಯ ಸಮೃದ್ಧವಾಗಿ ಜನನಿಬಿಡವಾದ ಈ ರಾಜ್ಯವನ್ನು ಭರತನಿಗೆ ಕೊಡಬಹುದು. ಇದನ್ನು ನಾನು ತ್ಯಜಿಸಿದ್ದೇನೆ. ಇಂದು ವನವಾಸಕ್ಕೆ ಹೋಗಬೇಕೆಂಬ ನನ್ನ ನಿರ್ಧಾರವು ಚಲಿಸಲಾರದು. ಕೈಕೇಯಿಗೆ ಪ್ರಸನ್ನನಾಗಿ ನೀನು ವರವನ್ನು ಕೊಟ್ಟಿದ್ದೀಯೆ. (೪೧-೪೨). ಮಹಾರಾಜ, ಅದಕ್ಕೆ ಯಾವ ಲೋಪವೂ ಬರದಂತೆ ಪೂರ್ಣವಾಗಿ ವರವನ್ನು ಸಲ್ಲಿಸು. ನಾನು ನಿನ್ನ ಆಜ್ಞೆಯನ್ನು ಪಾಲಿಸುತ್ತ ಹದಿನಾಲ್ಕು ವರ್ಷ ವನದಲ್ಲಿ ವಾಸಮಾಡುವೆನು. ವನಚಾರಿಗಳು ನನಗೆ ಜೊತೆಗಾರರಾಗಿರುವರು. ಪುನಃ ವಿಚಾರ ಮಾಡಬೇಕಾದದ್ದೇ ಇಲ್ಲ. ರಾಜ್ಯವನ್ನು ಭರತನಿಗೆ ಕೊಡೋಣವಾಗಲಿ (೪೩-೪೪). ನನಗೆ ರಾಜ್ಯ ಬೇಕಾಗಿಲ್ಲ. ರಘುವಂಶಭೂಷಣನಾದ ನಿನ್ನ ಆದೇಶವನ್ನು ಪಾಲಿಸುವುದೊಂದೇ ನನಗೆ ಪ್ರಿಯವಾದುದು. ಆತ್ಮಸೌಖ್ಯವನ್ನು ನಾನು ಬಯಸುವುದಿಲ್ಲ. ನೀನು ಹೀಗೆ ದುಃಖಿಸಬೇಡ. ಕಣ್ಣೀರು ಸುರಿಸಬೇಡ. ನದೀಪತಿಯಾದ ಮಹಾ ಸಾಗರವು ದುರ್ಧರ್ಷವಾಗಿರುವುದಲ್ಲದೆ ಎಂದಿಗಾದರೂ ಕ್ಷೋಭೆಗೊಳ್ಳುವುದೆ ?

ನೈವಾಹಂ ರಾಜ್ಯಮಿಚ್ಛಾಮಿ ನ ಸುಖಂ ನ ಚ ಮೈಥಿಲೀಮ್ ।
ನೈವ ಸರ್ವಾನಿಮಾನ್ ಕಾಮಾನ್ನ ಸ್ವರ್ಗಂ ನೈವ ಜೀವಿತಮ್ ॥ ೪೭

ತ್ವಾಮಹಂ ಸತ್ಯಮಿಚ್ಛಾಮಿ ನಾನೃತಂ ಪುರುಷರ್ಷಭ ।
ಪ್ರತ್ಯಕ್ಷಂ ತವ ಸತ್ಯೇನ ಸುಕೃತೇನ ಚ ತೇ ಶಪೇ ॥ ೪೮

ನ ಚ ಶಕ್ಯಂ ಮಯಾ ತಾತ ಸ್ಥಾತುಂ ಕ್ಷಣಮಪಿ ಪ್ರಭೋ ।
ನ ಶೋಕಂ ಧಾರಯಸ್ವೈನಂ ನ ಹಿ ಮೇಽಸ್ತಿ ವಿಪರ್ಯಯಃ ॥ ೪೯

ಅರ್ಥಿತೋ ಹ್ಯಸ್ಮಿ ಕೈಕೇಯ್ಯಾ ವನಂ ಗಚ್ಛೇತಿ ರಾಘವ ।
ಮಯಾ ಚೋಕ್ತಂ ವ್ರಜಾಮೀತಿ ತತ್ ಸತ್ಯಮನುಪಾಲಯೇ ॥ ೫೦

ಮಾ ಚೋತ್ಕಂಠಾಂ ಕೃಥಾ ದೇವ ವನೇ ರಂಸ್ಯಾಮಹೇ ವಯಮ್ ।
ಪ್ರಶಾಂತಹರಿಣಾಕೀರ್ಣೇ ನಾನಾಶಕುನನಾದಿತೇ ॥ ೫೧

ಪಿತಾ ಹಿ ದೈವತಂ ತಾತ ದೇವತಾನಾಮಪಿ ಸ್ಮೃತಮ್ ।
ತಸ್ಮಾದ್ದೈವತಮಿತ್ಯೇವ ಕರಿಷ್ಯಾಮಿ ಪಿತುರ್ವಚಃ ॥ ೫೨

---

(೪೫-೪೬). ನನಗೆ ರಾಜ್ಯದ ಅಪೇಕ್ಷೆ ಇಲ್ಲ. ಸೌಖ್ಯದ ಬಯಕೆ ಇಲ್ಲ. ಈ ಜಾನಕಿಯನ್ನಾದರೂ ಅಗಲಿರುವೆನು. ಸಮಸ್ತ ಭೋಗಗಳನ್ನೂ ತ್ಯಜಿಸಬಲ್ಲೆನು. ಸ್ವರ್ಗದಲ್ಲಿಯೂ ನನಗೆ ಇಚ್ಛೆ ಇಲ್ಲ. ಕಡೆಗೆ ಈ ಪ್ರಾಣವನ್ನಾದರೂ ಒಪ್ಪಿಸುವೆನು. ಮುಖ್ಯವಾಗಿ ನನಗೆ ಬೇಕಾದದ್ದು ನೀನು ಸತ್ಯವಂತನಾಗಿಯೇ ಬಾಳಬೇಕೆಂಬುದು. ಪುರುಷೋತ್ತಮನಾದ ನೀನು ಅಸತ್ಯವನ್ನು ನುಡಿದೆಯೆಂದು ಸರ್ವಥಾ ಆಗಕೂಡದು. ಈ ವಿಷಯದಲ್ಲಿ ನಿನ್ನೆದುರಿಗೆ ಸತ್ಯದ ಮೇಲೂ ಪುಣ್ಯದ ಮೇಲೂ ಆಣೆಯಿಟ್ಟು ಶಪಥ ಮಾಡುತ್ತೇನೆ (೪೭-೪೮). ಇನ್ನು ಒಂದು ಕ್ಷಣವೂ ಇಲ್ಲಿ ನಾನಿರುವುದು ಸರಿಯಲ್ಲ. ಅಪ್ಪ, ಈ ಶೋಕವನ್ನು ತಡೆದುಕೊ. ನನಗೆ ಬೇರಿ ದಾರಿ ಇಲ್ಲವಾಗಿದೆ. ಕಾಡಿಗೆ ಹೋಗೆಂದು ಕೈಕೇಯಿಯು ನನ್ನನ್ನು ಕೇಳಿಕೊಂಡಿದ್ದಾಳೆ. ಹೋಗುತ್ತೇನೆಂದು ನಾನು ಹೇಳಿದ್ದೇನೆ. ಆದ್ದರಿಂದ ಸತ್ಯವನ್ನು ನಾನು ಪಾಲಿಸಬೇಕು (೪೯-೫೦) ಮಹಾರಾಜ, ನಮ್ಮ ಗತಿ ಏನಾಯಿತೊ ಎಂದು ಹಾತೊರೆಯಬೇಡ. ನಾವು ಮೂವರೂ ಶಾಂತಸ್ವಭಾವದ ಜಿಂಕೆಗಳಿಂದಲೂ ನಾನಾ ಬಗೆಯ ಹಕ್ಕಿಗಳ ಚಿಲಿಪಿಲಿಧ್ವನಿಯಿಂದಲೂ ಮನೋಹರವಾದ ವನದಲ್ಲಿ ವಿಹರಿಸುತ್ತ ಸಂತೋಷದಿಂದಿರುತ್ತೇವೆ (೫೧). ತಂದೆಯು ದೇವತೆಗಳಲ್ಲಿ ದೇವತೆಯೆಂದು

ಚತುರ್ದಶಸು ವರ್ಷೇಷು ಗತೇಷು ನರಸತ್ತಮ ।
ಪುನರ್ದ್ರಕ್ಷ್ಯಸಿ ಮಾಂ ಪ್ರಾಪ್ತಂ ಸಂತ್ಯೈಪೋಽಯಂ ವಿಮುಚ್ಯತಾಮ್ ॥
ಯೇನ ಸಂಸ್ತಂಭನೀಯೋಽಯಂ ಸರ್ವೋ ಬಾಷ್ಪಗಲೋ ಜನಃ ।
ಸ ತ್ವಂ ಪುರುಷಶಾರ್ದೂಲ ಕಿಮರ್ಥಂ ವಿಕ್ರಿಯಾಂ ಗತಃ ॥ ೫೪

ಪುರಂ ಚ ರಾಷ್ಟ್ರಂ ಚ ಮಹೀ ಚ ಕೇವಲಾ
ಮಯಾ ನಿಸೃಷ್ಟಾ ಭರತಾಯ ದೀಯತಾಮ್ ।
ಅಹಂ ನಿದೇಶಂ ಭವತೋಽನುಪಾಲಯನ್
ವನಂ ಗಮಿಷ್ಯಾಮಿ ಚಿರಾಯ ಸೇವಿತುಮ್ ॥ ೫೫

ಮಯಾ ನಿಸೃಷ್ಟಾಂ ಭರತೋ ಮಹೀಮಿಮಾಂ
ಸಶೈಲಖಂಡಾಂ ಸಪುರಾಂ ಸಕಾನನಾಮ್ ।
ಶಿವಾಂ ಸುಸೀಮಾಮನುಶಾಸ್ತು ಕೇವಲಂ
ತ್ವಯಾ ಯದುಕ್ತಂ ನೃಪತೇ ತಥಾಸ್ತು ತತ್ ॥ ೫೬

ನ ಮೇ ತಥಾ ಪಾರ್ಥಿವ ಧೀಯತೇ ಮನೋ
ಮಹತ್ಸು ಕಾಮೇಷು ನ ಚಾತ್ಮನಃ ಪ್ರಿಯೇ ।

---

**ಶಾಸ್ತ್ರವು ಹೇಳುತ್ತದೆ.** ಆದ್ದರಿಂದ ದೇವರ ಆಜ್ಞೆಯೆಂದೇ ಭಾವಿಸಿ ತಂದೆಯ ಮಾತನ್ನು ಪಾಲಿಸುತ್ತೇನೆ. ಹದಿನಾಲ್ಕು ವರ್ಷಗಳು ಕಳೆದ ಮೇಲೆ ಇಲ್ಲಿಗೆ ಬರುವೆನು. ಆಗ ಪುನಃ ನನ್ನನ್ನು ನೋಡಬಹುದು. ಚಿಂತಿಸಬೇಡ (೫೨-೫೩). ಈ ಜನರೆಲ್ಲರೂ ಕಣ್ಣೀರು ಸುರಿಸುತ್ತಿದ್ದಾರೆ. ಧೀರೋದಾತ್ತನಾದ ನೀನು ಇವರಿಗೆ ಧೈರ್ಯ ಹೇಳಬೇಕು. ಹೀಗಿರುವಾಗ ನೀನೇ ಈ ರೀತಿ ಪರಿತಪಿಸಬಹುದೆ? ಈ ನಗರ, ಈ ರಾಷ್ಟ್ರ, ಈ ಭೂಮಿ - ಎಲ್ಲವನ್ನೂ ಭರತನಿಗೋಸ್ಕರ ಬಿಟ್ಟಿದ್ದೇನೆ. ಅವನಿಗೆ ಇದನ್ನು ಕೊಟ್ಟುಬಿಡು. ನಾನು ನಿನ್ನ ಅಪ್ಪಣೆಯನ್ನು ಪಾಲಿಸುತ್ತ ವನದಲ್ಲಿ ಬಹುಕಾಲ ಇರುವೆನು (೫೪-೫೫). ಶೈಲನಗರಾರಣ್ಯಗಳಿಂದ ಸಮೇತವಾದ ಈ ರಾಷ್ಟ್ರವನ್ನು ಅದರ ಎಲ್ಲೆಕಟ್ಟುಗಳವರೆಗೂ ಭರತನು- ನಿರಾತಂಕವಾಗಿ ಆಳಿಕೊಂಡಿರಲಿ. ಮಹಾರಾಜ, ನೀನು ಹೇಳಿದುದಕ್ಕೆ ಅಪೋಹವಿಲ್ಲದೆ ಎಲ್ಲವೂ ನಡೆಯಲಿ (೫೬). ಶಿಷ್ಟಸಮ್ಮತವಾಗುವಂತೆ ನಿನ್ನ ಆಜ್ಞೆಯನ್ನು ಪಾಲಿಸಬೇಕೆಂಬುದೇ ನನ್ನ ತೀವ್ರವಾದ

ಯಥಾ ನಿದೇಶೇ ತವ ಶಿಷ್ಟಸಂಮತೇ
ವ್ಯಪೈತು ದುಃಖಂ ತವ ಮತ್ಪ್ರತೇಽನಘ ॥ ೫೭

ತದದ್ಯ ನೈವಾನಘ ರಾಜ್ಯಮವ್ಯಯಂ
ನ ಸರ್ವಕಾಮಾನ್ನ ಸುಖಂ ನ ಮೈಥಿಲೀಮ್ ।
ನ ಜೀವಿತಂ ತ್ವಾಮನೃತೇನ ಯೋಜಯನ್
ವೃಣೀಯ ಸತ್ಯಂ ವ್ರತಮಸ್ತು ತೇ ತಥಾ ॥ ೫೮

ಫಲಾನಿ ಮೂಲಾನಿ ಚ ಭಕ್ಷಯನ್ ವನೇ
ಗಿರೀಂಶ್ಚ ಪಶ್ಯನ್ ಸರಿತಃ ಸರಾಂಸಿ ಚ ।
ವನಂ ಪ್ರವಿಶ್ಯೈವ ವಿಚಿತ್ರಪಾದಪಂ
ಸುಖೀ ಭವಿಷ್ಯಾಮಿ ತವಾಸ್ತು ನಿರ್ವೃತಿಃ ॥ ೫೯

ಏವಂ ಸ ರಾಜಾ ವ್ಯಸನಾಭಿಪನ್ನಃ
ಶೋಕೇನ ದುಃಖೇನ ಚ ತಾಮ್ಯಮಾನಃ ।

---

ಅಭಿಲಾಷೆ. ಅಷ್ಟು ಅಭಿಲಾಷೆಯು ಮಹಾಭೋಗಗಳನ್ನು ಅನುಭವಿಸುವುದರಲ್ಲಿಯೂ ನನಗಿಲ್ಲ. ದೇಹಸೌಖ್ಯದಲ್ಲಿಯೂ ಇಲ್ಲ. ನನಗೋಸ್ಕರ ಶೋಕಿಸಬೇಡ. ನಿನ್ನಲ್ಲಿ ಯಾವ ದೋಷವೂ ಇಲ್ಲ (೫೭). ನಿಷ್ಕಳಂಕನಾದ ನಿನಗೆ ಅಸತ್ಯವನ್ನು ಗಂಟುಹಾಕಿ ಶಾಶ್ವತವಾದ ರಾಜ್ಯವೇ ಲಭಿಸಿದರೂ ನಾನು ಸರ್ವಥಾ ಸ್ವೀಕರಿಸೆನು. ಆ ರೀತಿಯಲ್ಲಿ ಯಾವ ಭೋಗವೂ ಯಾವ ಸುಖವೂ ನನಗೆ ಬೇಡ. ಈ ಜಾನಕಿಯನ್ನಾದರೂ ತೊರೆದೇನು, ಪ್ರಾಣವನ್ನಾದರೂ ಒಪ್ಪಿಸಿಯೇನು, ನೀನು ಸತ್ಯವ್ರತನಾಗಿ ಉಳಿಯಬೇಕೆಂಬುದೊಂದೇ ನನ್ನ ಇಚ್ಛೆ. ಹಾಗೆಯೇ ನಡೆಯಲಿ (೫೮). ನಾನು ಅರಣ್ಯದಲ್ಲಿ ಸುಖವಾಗಿರುವೆನು. ಅಲ್ಲಿ ಬೇಕಾದಷ್ಟು ಹಣ್ಣುಗಳೂ ಗಡ್ಡೆಗೆಣಸುಗಳೂ ದೊರೆಯುತ್ತವೆ. ಅವುಗಳನ್ನು ತಿನ್ನುತ್ತ ಬೆಟ್ಟಗಳಲ್ಲಿ ತಿರುಗುತ್ತ ನದಿಗಳನ್ನೂ ಸರೋವರಗಳನ್ನೂ ನೋಡುತ್ತ ಸಂತೋಷವಾಗಿರುವೆನು. ವಿಚಿತ್ರವಾದ ಗಿಡಮರಗಳಿರುವ ಅರಣ್ಯವನ್ನು ಪ್ರವೇಶಿಸಿದರೆ ನನಗೆ ಆನಂದವಾಗುವುದು. ನೀನು ಶಾಂತಚಿತ್ತನಾಗಿರು" ಎಂದು ಹೇಳಿದನು (೫೯). ಹೀಗೆ ಶ್ರೀರಾಮನ ಮಾತನ್ನು ಕೇಳುತ್ತಿದ್ದ ದಶರಥರಾಜನು ಮಹಾವ್ಯಸನದಲ್ಲಿ ಮುಳುಗಿದನು.

ಆಲಿಂಗ್ಯ ಪುತ್ರಂ ಸುವಿನಷ್ಟಸಂಜ್ಞೋ
ಮೋಹಂ ಗತೋ ನೈವ ಚಚೇಷ್ಟ ಕಿಂಚಿತ್ ॥ ೬೦
ದೇವ್ಯಸ್ತತಃ ಸಂರುರುದುಃ ಸಮೇತಾಃ
ತಾಂ ವರ್ಜಯಿತ್ವಾ ನರದೇವಪತ್ನೀಮ್ ।
ರುದನ್ ಸುಮಂತ್ರೋಽಪಿ ಜಗಾಮ ಮೂರ್ಛಾಂ
ಹಾಹಾಕೃತಂ ತತ್ರ ಬಭೂವ ಸರ್ವಮ್ ॥ ೬೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಸ್ತ್ರಿಂಶಃ ಸರ್ಗಃ

ಶೋಕದಿಂದ ದೇಹವು ತತ್ತರಿಸಿತು. ದುಃಖದಿಂದ ಮನಸ್ಸು ಕಂಗೆಟ್ಟಿತು. ಅವನು ಮಿಳಮಿಳನೆ ಒದ್ದಾಡುತ್ತ ಮಗನನ್ನು ಅಪ್ಪಿಕೊಂಡನು. ಮರುಕ್ಷಣದಲ್ಲಿ ದಶರಥನಿಗೆ ಬವಳಿ ಬಂದು ಎಚ್ಚರದಪ್ಪಿತು. ನಿಶ್ಚೇಷ್ಟನಾಗಿ ಬಿದ್ದನು. (೬೦). ಕೈಕೇಯಿಯೊಬ್ಬಳನ್ನು ಬಿಟ್ಟು ಅಲ್ಲಿದ್ದ ಅಂತಃಪುರ ಸ್ತ್ರೀಯರೆಲ್ಲರೂ ಹೋಯೆಂದು ಅಳಲಾರಂಭಿಸಿದರು. ಸುಮಂತ್ರನೂ ಕೂಡ ಅಳುತ್ತ ಮೂರ್ಛೆಹೋದನು. ಎಲ್ಲೆಲ್ಲಿಯೂ ಹಾಹಾಕಾರವು ತುಂಬಿ ಹೋಯಿತು (೬೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತು ನಾಲ್ಕನೆಯ ಸರ್ಗ

## ಪಂಚತ್ರಿಂಶಃ ಸರ್ಗಃ

### ಸುಮಂತ್ರಗರ್ಹಣಮ್

ತತೋ ನಿರ್ಧೂಯ ಸಹಸಾ ಶಿರೋ ನಿಃಶ್ವಸ್ಯ ಚಾಸಕೃತ್ ।
ಪಾಣಿಂ ಪಾಣೌ ವಿನಿಷ್ಪಿಷ್ಯ ದಂತಾನ್ ಕಟಕಟಾಪ್ಯ ಚ ॥ ೧
ಲೋಚನೇ ಕೋಪಸಂರಕ್ತೇ ವರ್ಣಂ ಪೂರ್ವೋಚಿತಂ ಜಹತ್ ।
ಕೋಪಾಭಿಭೂತಃ ಸಹಸಾ ಸಂತಾಪಮಶುಭಂ ಗತಃ ॥ ೨
ಮನಃ ಸಮೀಕ್ಷಮಾಣಶ್ಚ ಸೂತೋ ದಶರಥಸ್ಯ ಸಃ ।
ಕಂಪಯನ್ನಿವ ಕೈಕೇಯ್ಯಾ ಹೃದಯಂ ವಾಕ್ಶರೈಃ ಶಿತೈಃ ॥ ೩
ವಾಕ್ಯವಜ್ರೈರನುಪಮೈರ್ನಿರ್ಭಿಂದನ್ನಿವ ಚಾಶುಗೈಃ ।
ಕೈಕೇಯ್ಯಾಃ ಸರ್ವಮರ್ಮಾಣಿ ಸುಮಂತ್ರಃ ಪ್ರತ್ಯಭಾಷತ ॥ ೪
ಯಸ್ಯಾಸ್ತ್ವಂ ಪತಿಸ್ತ್ಯಕ್ತೋ ರಾಜಾ ದಶರಥಃ ಸ್ವಯಮ್ ।
ಭರ್ತಾ ಸರ್ವಸ್ಯ ಜಗತಃ ಸ್ಥಾವರಸ್ಯ ಚರಸ್ಯ ಚ ॥ ೫

## ಸರ್ಗ ೩೫

### ಸುಮಂತ್ರನು ಕೈಕೇಯಿಯನ್ನು ನಿಂದಿಸುವುದು.

ಸುಮಂತ್ರನಿಗೆ ಮೂರ್ಛೆಯಿಂದ ಎಚ್ಚರವಾಗಲು ಕೈಕೇಯಿಯ ಮೇಲೆ ಬಹಳ ಕೋಪ ಬಂದಿತು. ಅವನು ತಲೆಯನ್ನು ಕೊಡವುತ್ತ ಮೇಲಿಂದ ಮೇಲೆ ನಿಟ್ಟುಸಿರುಬಿಡುತ್ತಿದ್ದನು. ಕೈಯನ್ನು ಕೈಯಿಂದ ಹಿಸುಕುತ್ತ ಹಲ್ಲನ್ನು ಕಟಕಟನೆ ಕಡಿದನು. ಕೋಪದಿಂದ ಕಣ್ಣುಗಳೆರಡೂ ಕೆಂಪಾದವು. ಮುಖ ಕಾಂತಿಯು ಬೇರೆಯಾಯಿತು. ಅವನು ತೀವ್ರವಾಗಿ ಸಂತಾಪಗೊಂಡನು (೧-೨). ದಶರಥನಿಗೆ ಕೈಕೇಯಿಯ ವಿಷಯದಲ್ಲಿ ಮನಸ್ಸು ಕೆಟ್ಟುಹೋಗಿದೆ ಯೆಂಬುದನ್ನು ಅವನು ಗಮನಿಸಿದನು. ಹರಿತವೂ ವಜ್ರಸಾರವೂ ಆದ ತನ್ನ ವಾಗ್ಬಾಣಗಳಿಂದ ಆ ಸುಮಂತ್ರನು ಕೈಕೇಯಿಯ ಹೃದಯವನ್ನು ಭೇದಿಸಿ ಮರ್ಮದಲ್ಲಿ ನಾಟುವಂತೆ ಕೆಲವು ಮಾತುಗಳನ್ನು ಅವಳಿಗೆ ಹೇಳಿದನು (೩-೪) : "ದೇವಿ, ನಿನ್ನ ಪತಿಯಾದ ದಶರಥಮಹಾರಾಜನು ಚರಾ ಚರಾತ್ಮಕವಾದ ಈ ಪೃಥ್ವಿಗೆ ಅಧಿಪತಿಯಾದವನು. ಇಂಥವನನ್ನು ನೀನು ಕೈಬಿಟ್ಟ

ನ ಹ್ಯಕಾರ್ಯತಮಂ ಕಿಂಚಿತ್ ತವ ದೇವೀಹ ವಿದ್ಯತೇ ।
ಪತಿಘ್ನೀಂ ತ್ವಾಮಹಂ ಮನ್ಯೇ ಕುಲಘ್ನೀಮಪಿ ಚಾಂತತಃ ॥ ೬

ಯನ್ಮಹೇಂದ್ರಮಿವಾಜಯ್ಯಂ ದುಷ್ಪ್ರಕಂಪ್ಯಮಿವಾಚಲಮ್ ।
ಮಹೋದಧಿಮಿವಾಕ್ಷೋಭ್ಯಂ ಸಂತಾಪಯಸಿ ಕರ್ಮಭಿಃ ॥ ೭

ಮಾವಮಂಸ್ಥಾ ದಶರಥಂ ಭರ್ತಾರಂ ವರದಂ ಪತಿಮ್ ।
ಭರ್ತುರಿಚ್ಛಾ ಹಿ ನಾರೀಣಾಂ ಪುತ್ರಕೋಟ್ಯಾ ವಿಶಿಷ್ಯತೇ ॥ ೮

ಯಥಾವಯೋ ಹಿ ರಾಜ್ಯಾನಿ ಪ್ರಾಪ್ನುವಂತಿ ನೃಪಕ್ಷಯೇ ।
ಇಕ್ಷ್ವಾಕುಕುಲನಾಥೇಽಸ್ಮಿಂಸ್ತಲ್ಲೋಪಯಿತುಮಿಚ್ಛಸಿ ॥ ೯

ರಾಜಾ ಭವತು ತೇ ಪುತ್ರೋ ಭರತಃ ಶಾಸ್ತು ಮೇದಿನೀಮ್ ।
ವಯಂ ತತ್ರ ಗಮಿಷ್ಯಾಮೋ ಯತ್ರ ರಾಮೋ ಗಮಿಷ್ಯತಿ ॥ ೧೦

ನ ಹಿ ತೇ ವಿಷಯೇ ಕಶ್ಚಿತ್ ಬ್ರಾಹ್ಮಣೋ ವಸ್ತುಮರ್ಹತಿ ।
ತಾದೃಶಂ ತ್ವಮಮರ್ಯಾದಮದ್ಯ ಕರ್ಮ ಚಿಕೀರ್ಷಸಿ ॥ ೧೧

---

ಮೇಲೆ ನೀನು ಮಾಡುವುದಕ್ಕೆ ಹೇಸದ ಕೃತ್ಯವೊಂದೂ ಉಳಿಯಲಿಲ್ಲ. ಈಗ ಪತಿಹತ್ಯೆಯನ್ನು ಮಾಡಿ ಕೊನೆಗೆ ಕುಲಘಾತುಕಿಯೇ ಆಗುವೆಯೆಂದು ತಿಳಿದಿದ್ದೇನೆ (೫-೬). ದೇವೇಂದ್ರನಂತೆ ಅಜೇಯನೂ ಪರ್ವತದಂತೆ ಅಲ್ಲಾಡಿಸಲು ಅಶಕ್ಯನೂ ಸಮುದ್ರದಂತೆ ಅಕ್ಷೋಭ್ಯನೂ ಆದ ಮಹಾರಾಜನನ್ನು ನಿನ್ನ ದುಷ್ಕೃತ್ಯಗಳಿಂದ ಇಷ್ಟು ಸಂಕಟಪಡಿಸುತ್ತಿದ್ದೀಯಲ್ಲ! (೭). ನಿನ್ನ ಇಷ್ಟಾರ್ಥವನ್ನು ಸಲ್ಲಿಸಿ ಪೋಷಿಸಿಕೊಂಡು ಬಂದಿರುವ ನಿನ್ನ ಪತಿಯನ್ನೇ ಹೀಗೆ ಧಿಕ್ಕರಿಸಿ ಅವಮಾನಪಡಿಸಬೇಡ. ಸ್ತ್ರೀಯರಿಗೆ ಪತಿಯ ಇಚ್ಛೆಯಂತೆ ನಡೆಯುವುದು ಶ್ರೇಯಸ್ಕರ. ಕೋಟಿ ಮಕ್ಕಳಿಗಿಂತ ಅದು ಹೆಚ್ಚಿನದು (೮). ರಾಜನು ಗತಿಸಿದ ಮೇಲೆ ವಯೋನುಗುಣವಾಗಿ ಹಿರಿಯ ಮಕ್ಕಳು ರಾಜ್ಯವನ್ನು ಪಡೆಯುವುದು ಶಿಷ್ಟಸಂಪ್ರದಾಯ. ಇಕ್ಷ್ವಾಕುವಂಶಾಧಿಪತಿಯಾದ ದಶರಥನು ಇರುವಾಗ ಅವನೆದುರಿಗೇ ಈ ರಾಜಧರ್ಮವನ್ನು ಉಲ್ಲಂಘಿಸಲು ಯತ್ನಿಸುತ್ತಿದ್ದೀಯೆ (೯). ನಿನ್ನ ಮಗ ಭರತನು ರಾಜನಾಗಿ ಈ ಭೂಮಿಯನ್ನಾಳಲಿ! ರಾಮನು ಹೋಗುವ ಕಾಡಿಗೆ ನಾವೆಲ್ಲರೂ ಹೊರಟುಹೋಗುತ್ತೇವೆ. ನಿನ್ನ ರಾಜ್ಯದಲ್ಲಿ ಯಾವ ಬ್ರಾಹ್ಮಣನೂ ವಾಸಮಾಡಲಾರ. ಧರ್ಮಬಾಹಿರವಾದ

ಆಶ್ಚರ್ಯಮಿವ ಪಶ್ಯಾಮಿ ಯಸ್ಯಾಸ್ತೇ ವೃತ್ತಮೀದೃಶಮ್ ।
ಆಚರಂತ್ಯಾ ನ ವಿದೃತಾ ಸದ್ಯೋ ಭವತಿ ಮೇದಿನೀ ॥ ೧೨

ಮಹಾಬ್ರಹ್ಮರ್ಷಿಸೃಷ್ಟಾ ಹಿ ಜ್ವಲಂತೋ ಭೀಮದರ್ಶನಾಃ ।
ಧಿಗ್ವಾಗ್ದಂಡಾ ನ ಹಿಂಸಂತಿ ರಾಮಪ್ರವ್ರಾಜನೇ ಸ್ಥಿತಾಮ್ ॥ ೧೩

ಆಮ್ರಂ ಛಿತ್ವಾ ಕುಠಾರೇಣ ನಿಂಬಂ ಪರಿಚರೇತ್ತು ಯಃ ।
ಯಶ್ಚೈನಂ ಪಯಸಾ ಸಿಂಚೇನ್ನೈವಾಸ್ಯ ಮಧುರೋ ಭವೇತ್ ॥ ೧೪

ಅಭಿಜಾತಂ ಹಿ ತೇ ಮನ್ಯೇ ಯಥಾ ಮಾತುಸ್ತಥೈವ ಚ ।
ನ ಹಿ ನಿಂಬಾತ್ ಸ್ರವೇತ್ ಕ್ಷೌದ್ರಂ ಲೋಕೇ ನಿಗದಿತಂ ವಚಃ ॥ ೧೫

ತವ ಮಾತುರಸದ್ಗ್ರಾಹಂ ವಿದ್ಮಃ ಪೂರ್ವಂ ಯಥಾಶ್ರುತಮ್ ।
ಪಿತುಸ್ತೇ ವರದಃ ಕಶ್ಚಿದ್ದದೌ ವರಮನುತ್ತಮಮ್ ॥ ೧೬

ಸರ್ವಭೂತರುತಂ ತಸ್ಮಾತ್ ಸಂಜಜ್ಞೇ ವಸುಧಾಧಿಪಃ ।
ತೇನ ತಿರ್ಯಗ್ಗತಾನಾಂ ಚ ಭೂತಾನಾಂ ವಿದಿತಂ ವಚಃ ॥ ೧೭

---

ಇಂಥ ನೀಚಕೃತ್ಯವನ್ನು ಮಾಡುತ್ತಿದ್ದೀಯೆ (೧೦-೧೧). ಇಂಥ ಘೋರಕೃತ್ಯವನ್ನಾಚರಿಸುತ್ತಿದ್ದರೂ ನೀನು ನಿಂತಿರುವ ನೆಲ ಈಗಲೇ ಬಿರಿದು ಹೋಗಲಿಲ್ಲವಲ್ಲ ಎಂದು ನನಗೆ ಆಶ್ಚರ್ಯವಾಗುತ್ತಿದೆ! ರಾಮನನ್ನು ಕಾಡಿಗೆ ಅಟ್ಟಬೇಕೆಂದು ಹಠತೊಟ್ಟು ನಿಂತಿದ್ದೀಯೆ. ನಿನಗೆ ಧಿಕ್ ಎಂದು ಮಹರ್ಷಿಗಳು ಘೋರವಾದ ಶಾಪವನ್ನು ಕೊಡದೆ ಇದ್ದಾರಲ್ಲ! (೧೨-೧೩). ಮಾವಿನ ಗಿಡವನ್ನು ಕೊಡಲಿಯಿಂದ ಕಡಿದು ಬೇವಿನ ಗಿಡಕ್ಕೆ ಹಾಲೆರೆದು ಉಪಚಾರ ಮಾಡಿದರೆ, ಅದರ ಹಣ್ಣು ಎಂದಿಗೂ ಸಿಹಿಯಾಗಲಾರದು. ನಿನ್ನ ತಾಯಿಯ ಕಲ್ಯಾಣಗುಣವೇ ನಿನಗೆ ಬಂದಿದೆಯೆಂದು ತಿಳಿದಿದ್ದೇನೆ. 'ಬೇವಿನ ಮರದಿಂದ ಜೇನುತುಪ್ಪ ಸುರಿದೀತೆ?' ಎಂದು ಲೋಕದಲ್ಲಿ ಗಾದೆಯುಂಟು (೧೪-೧೫). ನಿನ್ನ ತಾಯಿಯ ಕೆಟ್ಟಹಠವನ್ನು ಕೇಳಿಬಲ್ಲೆವು. ನಿನ್ನ ತಂದೆಗೆ ಒಬ್ಬ ಮಹಾತ್ಮನು ಶ್ರೇಷ್ಠವಾದ ವರವನ್ನು ಕೊಟ್ಟಿದ್ದನಂತೆ. ಅದರ ಬಲದಿಂದ ಆ ರಾಜನಿಗೆ ಸಕಲ ಪ್ರಾಣಿಗಳ ಮಾತಿನ ಅರ್ಥ ತಿಳಿಯುತ್ತಿತ್ತು. ತಿರ್ಯಗ್ಜಂತುಗಳ ಭಾಷೆಯನ್ನು ಅವನು ತಿಳಿದಿದ್ದನು (೧೬-೧೭).

ತತೋ ಜೃಂಭಸ್ಯ ಶಯನೇ ವಿರುತಾದ್ ಭೂರಿವರ್ಚಸಃ ।
ಪಿತುಸ್ತೇ ವಿದಿತೋ ಭಾವಃ ಸ ತತ್ರ ಬಹುಧಾಹಸತ್ ॥ ೧೮

ತತ್ರ ತೇ ಜನನೀ ಕ್ರುದ್ಧಾ ಮೃತ್ಯುಪಾಶಮಭೀಪ್ಸತೀ ।
ಹಾಸಂ ತೇ ನೃಪತೇ ಸೌಮ್ಯ ಜಿಜ್ಞಾಸಾಮೀತಿ ಚಾಬ್ರವೀತ್ ॥ ೧೯

ನೃಪಶ್ಚೋವಾಚ ತಾಂ ದೇವೀಂ ದೇವಿ ಶಂಸಾಮಿ ತೇ ಯದಿ ।
ತತೋ ಮೇ ಮರಣಂ ಸದ್ಯೋ ಭವಿಷ್ಯತಿ ನ ಸಂಶಯಃ ॥ ೨೦

ಮಾತಾ ತೇ ಪಿತರಂ ದೇವೀ ತತಃ ಕೇಕಯಮಬ್ರವೀತ್ ।
ಶಂಸ ಮೇ ಜೀವ ವಾ ಮಾ ವಾ ನ ಮಾಮುಪಹಸಿಷ್ಯಸಿ ॥ ೨೧

ಪ್ರಿಯಯಾ ಚ ತಥೋಕ್ತಃ ಸನ್ ಕೇಕಯಃ ಪೃಥಿವೀಪತಿಃ ।
ತಸ್ಯೈ ತಂ ವರದಾಯಾರ್ಥಂ ಕಥಯಾಮಾಸ ತತ್ತ್ವತಃ ॥ ೨೨

ತತಃ ಸ ವರದಃ ಸಾಧೂ ರಾಜಾನಂ ಪ್ರತ್ಯಭಾಷತ ।
ಯದಿ ತ್ವಂ ಶಂಸಸೇ ರಾಜನ್ ಮರಣಂ ತೇ ಭವೇದ್ ಧ್ರುವಮ್ ॥

---

ಒಂದು ಸಲ ಆ ತೇಜಸ್ವಿಯಾದ ಕೇಕಯರಾಜನು ಮಲಗಿದ್ದಾಗ ಜೃಂಭ ಎಂಬ ಒಂದು ಪಕ್ಷಿಯು ಕೂಗಿತು. ರಾಜನು ಅದರ ಅಭಿಪ್ರಾಯವನ್ನು ತಿಳಿದು ಬಹಳ ನಕ್ಕನು. ಆಗ ನಿನ್ನ ತಾಯಿ (ತನ್ನನ್ನು ಹಾಸ್ಯಮಾಡುವನೆಂದು) ಕೋಪದಿಂದ, ನಗುವುದಕ್ಕೆ ಕಾರಣವೇನೆಂದು ರಾಜನನ್ನು ಕೇಳಿದಳು. ಅವಳ ಕೋಪವೇ ಮುಂದೆ ಅವಳ ಮರಣಕ್ಕೆ ಕಾರಣವಾಯಿತು (೧೮-೧೯). ಆಗ ರಾಜನು ತನ್ನ ಹೆಂಡತಿಗೆ 'ದೇವಿ, ಅದನ್ನು ನಿನಗೆ ನಾನು ಹೇಳಿದರೆ ಕೂಡಲೆ ನಾನು ಸಾಯುವೆನು. ಸಂದೇಹವೇ ಇಲ್ಲ' ಎಂದನು. ಆಗ ನಿನ್ನ ತಾಯಿ ನಿನ್ನ ತಂದೆಯನ್ನು ಕುರಿತು 'ನೀನು ನಕ್ಕುದಕ್ಕೆ ಕಾರಣವೇನೆಂಬುದನ್ನು ನನಗೆ ಹೇಳಿಬಿಡು. ನೀನು ಬದುಕಿದರೂ ಸರಿ! ಸತ್ತರೂ ಸರಿ! ನನ್ನನ್ನು ಹಾಸ್ಯಮಾಡಿಲ್ಲವೆಂದು ದೃಢಪಡಿಸಿಕೊಳ್ಳುವೆನು' ಎಂದಳು. (೨೦-೨೧). ಅವನ ಕಾಂತೆಯು ಈ ಮಾತನ್ನು ಹೇಳಿದಳು. ಆಗ ಕೇಕಯರಾಜನು ತನಗೆ ವರವನ್ನು ಕೊಟ್ಟಿದ್ದ ಆ ಮಹಾತ್ಮನ ಬಳಿಗೆ ಹೋಗಿ ನಡೆದ ವಿಷಯವನ್ನು ಯಥಾಸ್ಥಿತವಾಗಿ ಅರಿಕೆ ಮಾಡಲು ಆತನು 'ರಾಜ, ನೀನೇನಾದರೂ ಆ ಸಂಗತಿಯನ್ನು ಹೊರಪಡಿಸಿದರೆ ನಿನಗೆ ಮರಣ ನಿಶ್ಚಿತ

ಮ್ರಿಯತಾಂ ಧ್ವಂಸತಾಂ ವೇಯಂ ಮಾ ಕೃಥಾಸ್ತ್ವಂ ಮಹೀಪತೇ ।
ಸ ತಚ್ಛ್ರುತ್ವಾ ವಚಸ್ತಸ್ಯ ಪ್ರಸನ್ನಮನಸೋ ನೃಪಃ ॥ ೨೪

ಮಾತರಂ ತೇ ನಿರಸ್ಯಾಶು ವಿಜಹಾರ ಕುಬೇರವತ್ ।
ತಥಾ ತ್ವಮಪಿ ರಾಜಾನಂ ದುರ್ಜನಾಚರಿತೇ ಪಥಿ ॥ ೨೫

ಅಸದ್ಗ್ರಾಹಮಿಮಂ ಮೋಹಾತ್ ಕುರುಷೇ ಪಾಪದರ್ಶಿನೀ ।
ಸತ್ಯಶ್ಚಾದ್ಯ ಪ್ರವಾದೋಽಯಂ ಲೌಕಿಕಃ ಪ್ರತಿಭಾತಿ ಮಾ ॥ ೨೬

ಪಿತ್ರ್ಯಾನ್ ಸಮನುಜಾಯಂತೇ ನರಾ ಮಾತರಮಂಗನಾಃ ।
ನೈವಂ ಭವ ಗೃಹಾಣೇದಂ ಯಥಾಹ ವಸುಧಾಧಿಪಃ ॥ ೨೭

ಭರ್ತುರಿಚ್ಛಾಮುಪಾಸ್ಸ್ವೇಹ ಜನಸ್ಯಾಸ್ಯ ಗತಿರ್ಭವ ।
ಮಾ ತ್ವಂ ಪ್ರೋತ್ಸಾಹಿತಾ ಪಾಪೈರ್ದೇವರಾಜಸಮಪ್ರಭಮ್ ॥ ೨೮

ಭರ್ತಾರಂ ಲೋಕಭರ್ತಾರಮಸದ್ಧರ್ಮಮುಪಾದಧಾಃ ।
ನ ಹಿ ಮಿಥ್ಯಾ ಪ್ರತಿಜ್ಞಾತಂ ಕರಿಷ್ಯತಿ ತವಾನಘಃ ॥ ೨೯

---

ಆ ಹೆಂಗಸು ಸತ್ತರೆ ಸಾಯಲಿ! ಮನೆ ಬಿಟ್ಟಾದರೂ ಹೋಗಲಿ! ಅವಳ ಮಾತಿನಂತೆ ನಡೆಯಬೇಡ' ಎಂದನು (೨೨-೨೩). ಹೀಗೆ ಆ ಮಹಾತ್ಮನು ಪ್ರಸನ್ನನಾಗಿ ಬುದ್ಧಿವಾದವನ್ನು ಹೇಳಲು, ಆ ರಾಜನು ಕೂಡಲೆ ನಿನ್ನ ತಾಯಿಯನ್ನು ಮನೆಯಿಂದ ಹೊರಡಿಸಿ ಕುಬೇರನಂತೆ ಸುಖದಿಂದಿದ್ದನು. ನಿನ್ನ ತಾಯಿಯಂತೆ ನೀನೂ ದುರ್ಮಾರ್ಗಕ್ಕೆ ಇಳಿದು ರಾಜನಿಗೆ ಕೇಡನ್ನು ತರುತ್ತಿದ್ದೀಯೆ (೨೪-೨೫). ಪಾಪಿಯಾದ ನೀನು ಅವಿವೇಕದಿಂದ ಹಠಹಿಡಿದಿದ್ದೀಯೆ. ತಂದೆಯಂತೆ ಗಂಡುಮಕ್ಕಳೂ ತಾಯಿಯಂತೆ ಹೆಣ್ಣುಮಕ್ಕಳೂ ಹುಟ್ಟುತ್ತಾರೆಂಬ ಲೋಕಪ್ರವಾದವು ಸತ್ಯವೆಂದು ಈಗ ನನಗೆ ತೋರುತ್ತಿದೆ. ನೀನು ತಾಯಿಯ ಹಾಗೆ ಆಗಬೇಡ. ಮಹಾರಾಜನು ಹೇಳಿದಂತೆ ಕೇಳು (೨೬-೨೭). ನಿನ್ನ ಪತಿಯ ಅಪೇಕ್ಷೆಯಂತೆ ನಡೆದು ನಮ್ಮೆಲ್ಲರಿಗೆ ಗತಿಯಾಗು. ನಿನ್ನ ಪತಿ ದೇವೇಂದ್ರನಿಗೆ ಸಮಾನನಾದ ಭೂಪಾಲನಾಗಿದ್ದಾನೆ. ನೀನು ದುಷ್ಟರ ಚಿತಾವಣೆಗೆ ಸಿಕ್ಕಿ ಈತನ ಮೇಲೆ ಅಧರ್ಮವನ್ನು ಹೊರಿಸಬೇಡ. ನಿರ್ದೋಷನಾದ ಮಹಾರಾಜನು ನಿನಗೆ ಕೊಟ್ಟ ಮಾತನ್ನು ಸುಳ್ಳು

ಶ್ರೀಮಾನ್ ದಶರಥೋ ರಾಜಾ ದೇವಿ ರಾಜೀವಲೋಚನಃ ।
ಜ್ಯೇಷ್ಠೋ ವದಾನ್ಯಃ ಕರ್ಮಣ್ಯಃ ಸ್ವಧರ್ಮಸ್ಯಾಭಿರಕ್ಷಿತಾ ॥ ೩೦

ರಕ್ಷಿತಾ ಜೀವಲೋಕಸ್ಯ ಬ್ರೂಹಿ ರಾಮೋಽಭಿಷಿಚ್ಯತಾಮ್ ।
ಪರಿವಾದೋ ಹಿ ತೇ ದೇವಿ ಮಹಾನ್ಲೋಕೇ ಚರಿಷ್ಯತಿ ॥ ೩೧

ಯದಿ ರಾಮೋ ವನಂ ಯಾತಿ ವಿಹಾಯ ಪಿತರಂ ನೃಪಮ್ ।
ಸ್ವರಾಜ್ಯಂ ರಾಘವಃ ಪಾತು ಭವ ತ್ವಂ ವಿಗತಜ್ವರಾ ॥ ೩೨

ನ ಹಿ ತೇ ರಾಘವಾದನ್ಯಃ ಕ್ಷಮಃ ಪುರವರೇ ವಸನ್ ।
ರಾಮೇ ಹಿ ಯೌವರಾಜ್ಯಸ್ಥೇ ರಾಜಾ ದಶರಥೋ ವನಮ್ ॥ ೩೩

ಪ್ರವೇಕ್ಷ್ಯತಿ ಮಹೇಷ್ವಾಸಃ ಪೂರ್ವವೃತ್ತಮನುಸ್ಮರನ್ ।
ಇತಿ ಸಾಂತ್ವೈಶ್ಚ ತೀಕ್ಷ್ಣೈಶ್ಚ ಕೈಕೇಯೀಂ ರಾಜಸಂಸದಿ ॥ ೩೪

ಸುಮಂತ್ರಃ ಕ್ಷೋಭಯಾಮಾಸ ಭೂಯ ಏವ ಕೃತಾಂಜಲಿಃ ।
ನೈವ ಸಾ ಕ್ಷುಭ್ಯತೇ ದೇವೀ ನ ಚ ಸ್ಮ ಪರಿದೂಯತೇ ॥ ೩೫

---

ಮಾಡತಕ್ಕವನಲ್ಲ (೨೮-೨೯). ಆದ್ದರಿಂದ, ದೇವಿ, ಜ್ಯೇಷ್ಠಪುತ್ರನಾದ ಶ್ರೀರಾಮನಿಗೆ ಪಟ್ಟಾಭಿಷೇಕವು ನಡೆಯಲೆಂದು ದಶರಥರಾಜನಿಗೆ ಹೇಳು. ಕಮಲನೇತ್ರನಾದ ಶ್ರೀರಾಮನು ಉದಾರಶೀಲನೂ ಸತ್ಕಾರ್ಯನಿರತನೂ ಸ್ವಧರ್ಮಪೋಷಕನೂ ಆಗಿದ್ದಾನೆ. ಸಕಲ ಜೀವಿಗಳನ್ನು ರಕ್ಷಿಸಲು ಸಮರ್ಥನಾಗಿದ್ದಾನೆ. ಈತನು ತಂದೆಯನ್ನು ಬಿಟ್ಟು ಕಾಡಿಗೆ ಹೋದರೆ, ದೇವಿ, ಲೋಕದಲ್ಲಿ ನಿನಗೆ ಬಹಳ ಕೆಟ್ಟ ಹೆಸರು ಬರುವುದು (೩೦-೩೧). ಶ್ರೀರಾಮನು ತನ್ನ ರಾಜ್ಯವನ್ನು ಪಾಲಿಸಿಕೊಂಡಿರಲಿ; ನೀನು ನಿರಾತಂಕವಾಗಿರು. ಶ್ರೀರಾಮನನ್ನು ಬಿಟ್ಟರೆ ಇನ್ನೊಬ್ಬನಿಗೆ ಈ ನಗರದಲ್ಲಿದ್ದು ಹಿತವಾಗಿ ರಾಜ್ಯಭಾರಮಾಡಲು ಸಾಧ್ಯವಿಲ್ಲ. ರಾಮನು ಯುವರಾಜಪದವಿಯನ್ನೇರಿದ ಮೇಲೆ ದಶರಥಮಹಾರಾಜನು ತನ್ನ ಹಿರಿಯರ ಸಂಪ್ರದಾಯವನ್ನನುಸರಿಸಿ ವಾನಪ್ರಸ್ಥನಾಗಿ ವನಕ್ಕೆ ಹೋಗುವನು" ಎಂದನು (೩೨-೩೩). ಹೀಗೆ ಸುಮಂತ್ರನು ಕೈಮುಗಿದುಕೊಂಡು ಒಳ್ಳೆಯ ಮಾತುಗಳಿಂದ ಕೈಕೇಯಿಯನ್ನು ಸಂತೈಸಲು ಪ್ರಯತ್ನಿಸಿದನು. ಹಾಗೆಯೇ ತೀಕ್ಷ್ಣ ವಚನಗಳಿಂದ ಕೆಣಕಿದನು. ಆದರೆ ಆ ದೇವಿಯು ಯಾವುದಕ್ಕೂ ಜಗ್ಗಲಿಲ್ಲ. ಅವಳು

ನ ಚಾಸ್ಯಾ ಮುಖವರ್ಣಸ್ಯ ಲಕ್ಷ್ಯತೇ ವಿಕ್ರಿಯಾ ತದಾ ॥

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚತ್ರಿಂಶಃ ಸರ್ಗಃ

---

## ಷಟ್‌ತ್ರಿಂಶಃ ಸರ್ಗಃ

### ಸಿದ್ಧಾರ್ಥಪ್ರತಿಬೋಧನಮ್

ತತಃ ಸುಮಂತ್ರಮೈಕ್ಷ್ವಾಕಃ ಪೀಡಿತೋಽತ್ರ ಪ್ರತಿಜ್ಞಯಾ ।
ಸಬಾಷ್ಪಮತಿನಿಃಶ್ವಸ್ಯ ಜಗಾದೇದಂ ಪುನಃ ಪುನಃ ॥ ೧

ಸೂತ ರತ್ನಸುಸಂಪೂರ್ಣಾ ಚತುರ್ವಿಧಬಲಾ ಚಮೂಃ ।
ರಾಘವಸ್ಯಾನುಯಾತ್ರಾರ್ಥಂ ಕ್ಷಿಪ್ರಂ ಪ್ರತಿವಿಧೀಯತಾಮ್ ॥ ೨

---

ಕೋಪದಿಂದ ಕುದಿಯಲೂ ಇಲ್ಲ; ವ್ಯಥೆಯಿಂದ ಕುಗ್ಗಲೂ ಇಲ್ಲ. ಅವಳ ಮುಖಚರ್ಯೆಯಲ್ಲಿ ಯಾವ ಪರಿವರ್ತನವೂ ಗೋಚರಿಸಲಿಲ್ಲ (೩೪-೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತೈದನೆಯ ಸರ್ಗ

---

## ಸರ್ಗ ೩೬

### ಶ್ರೀರಾಮನೊಡನೆ ಸುಖಸಾಮಗ್ರಿಗಳನ್ನು ಕಳಿಸಬೇಕೆಂದು ದಶರಥನ ಆಜ್ಞೆ, ಕೈಕೇಯಿಯ ಆಕ್ಷೇಪಣೆ. ಸಿದ್ಧಾರ್ಥನ ಬುದ್ಧಿವಾದ.

ಹೀಗೆ ಸುಮಂತ್ರನು ಪ್ರಾರ್ಥಿಸಿದರೂ ಕೈಕೇಯಿಯು ಸಮ್ಮತಿಸದೆ ಹೋದ್ದರಿಂದ ವರದಾನದ ಪ್ರತಿಜ್ಞೆ ದಶರಥನನ್ನು ಬಾಧಿಸಿತು. ಅವನು ಬಾಷ್ಪವನ್ನು ಸುರಿಸುತ್ತ ಮತ್ತೆ ಮತ್ತೆ ನಿಟ್ಟುಸಿರು ಬಿಡುತ್ತ ಸುಮಂತ್ರನಿಗೆ ಹೇಳಿದನು (೧) : "ಸುಮಂತ್ರ, ರಾಮನನ್ನು ಹಿಂಬಾಲಿಸಿ ಚತುರಂಗ ಸೇನೆಯೂ ಹೊರಡಬೇಕೆಂದು ಸೂಚಿಸು. ಜೊತೆಯಲ್ಲಿ ನಾನಾ ಶ್ರೇಷ್ಠ

ರೂಪಾಜೀವಾಶ್ಚ ವಾದಿನ್ಯೋ ವಣಿಜಶ್ಚ ಮಹಾಧನಾಃ ।
ಶೋಭಯಂತು ಕುಮಾರಸ್ಯ ವಾಹಿನೀಂ ಸುಪ್ರಸಾರಿತಾಃ ॥ ೩

ಯೇ ಚೈನಮುಪಜೀವಂತಿ ರಮತೇ ಯೈಶ್ಚ ವೀರ್ಯತಃ ।
ತೇಷಾಂ ಬಹುವಿಧಂ ದತ್ತ್ವಾ ತಾನಪ್ಯತ್ರ ನಿಯೋಜಯ ॥ ೪

ಆಯುಧಾನಿ ಚ ಮುಖ್ಯಾನಿ ನಾಗರಾಃ ಶಕಟಾನಿ ಚ ।
ಅನುಗಚ್ಛಂತು ಕಾಕುತ್ಸ್ಥಂ ವ್ಯಾಧಾಶ್ಚಾರಣ್ಯಗೋಚರಾಃ ॥ ೫

ನಿಘ್ನನ್ ಮೃಗಾನ್ ಕುಂಜರಾಂಶ್ಚ ಪಿಬಂಶ್ಚಾರಣ್ಯಕಂ ಮಧು ।
ನದೀಶ್ಚ ವಿವಿಧಾಃ ಪಶ್ಯನ್ನ ರಾಜ್ಯಸ್ಯ ಸ್ಮರಿಷ್ಯತಿ ॥ ೬

ಧಾನ್ಯಕೋಶಶ್ಚ ಯಃಕಶ್ಚಿದ್ಧನಕೋಶಶ್ಚ ಮಾಮಕಃ ।
ತೌ ರಾಮಮನುಗಚ್ಛೇತಾಂ ವಸಂತಂ ನಿರ್ಜನೇ ವನೇ ॥ ೭

ಯಜನ್ ಪುಣ್ಯೇಷು ದೇಶೇಷು ವಿಸೃಜಂಶ್ಚಾಪ್ತದಕ್ಷಿಣಾಃ ।
ಋಷಿಭಿಶ್ಚ ಸಮಾಗಮ್ಯ ಪ್ರವತ್ಸ್ಯತಿ ಸುಖಂ ವನೇ ॥ ೮

---

ವಸ್ತುಗಳನ್ನು ಹೇರಿಕೊಂಡು ಹೋಗಲಿ. ವೇಶ್ಯೆಯರು ವಾದ್ಯವನ್ನು ನುಡಿಸುತ್ತ ಶ್ರೀಮಂತರಾದ ವಣಿಜರು ಮಾರಾಟದ ವಸ್ತುಗಳನ್ನು ಪ್ರದರ್ಶಿಸುತ್ತ ನನ್ನ ಕುಮಾರನ ಸೇನೆಯನ್ನು ಅಲಂಕರಿಸಲಿ! (೨-೩). ಯಾರು ಯಾರು ರಾಮನ ಆಶ್ರಿತ ಜನರಿದ್ದಾರೊ ಯಾರ ಪರಾಕ್ರಮವನ್ನು ಕಂಡು ಅವನು ಸಂತೋಷಪಡುವನೊ, ಅವರೆಲ್ಲರಿಗೂ ಬೇಕಾದಷ್ಟು ಹಣವನ್ನು ಕೊಟ್ಟು ಸೇನೆಯೊಡನೆ ಹೋಗುವಂತೆ ತಿಳಿಸು. ಮುಖ್ಯವಾದ ಆಯುಧಗಳನ್ನೂ ಸಾರಿಗೆಯ ಬಂಡಿಗಳನ್ನೂ ಕಳಿಸು. (ಇಷ್ಟವಿರುವ) ನಗರವಾಸಿಗಳೂ ಅರಣ್ಯದ ಪರಿಚಯವಿರುವ ಬೇಡರೂ ರಾಮನ ಜೊತೆಯಲ್ಲಿ ಹೋಗಲಿ (೪-೫). ರಾಮನು ಕಾಡುಮೃಗಗಳನ್ನೂ ಆನೆಗಳನ್ನೂ ಬೇಟೆಯಾಡುತ್ತ ಅರಣ್ಯದಲ್ಲಿರುವ ಜೇನನ್ನು ಸವಿಯುತ್ತ ನಾನಾ ನದಿಗಳನ್ನು ನೋಡುತ್ತ ಈ ರಾಜ್ಯವನ್ನು ಸ್ಮರಿಸಿಕೊಳ್ಳದಂತಾಗಲಿ. ನಿರ್ಜನವಾದ ಅರಣ್ಯದಲ್ಲಿ ರಾಮನು ವಾಸಮಾಡಬೇಕಾಗಿರುವುದರಿಂದ, ನನ್ನ ಧಾನ್ಯಗಳ ಕಣಜವೂ ಹಣದ ಭಂಡಾರವೂ ಸಂಗಡ ಹೋಗಲಿ! (೬-೭). ರಾಮನು ಪುಣ್ಯ ಸ್ಥಳಗಳಲ್ಲಿ ಯಜ್ಞಮಾಡುತ್ತ ಉಚಿತವಾದ ದಕ್ಷಿಣೆಗಳನ್ನು ಕೊಡುತ್ತ ಋಷಿಗಳನ್ನು

ಭರತಶ್ಚ ಮಹಾಬಾಹುರಯೋಧ್ಯಾಂ ಪಾಲಯಿಷ್ಯತಿ ।
ಸರ್ವಕಾಮೈಃ ಸಹ ಶ್ರೀಮಾನ್ ರಾಮಃ ಸಂಸಾಧ್ಯತಾಮಿತಿ ॥ ೯

ಏವಂ ಬ್ರುವತಿ ಕಾಕುತ್ಸ್ಥೇ ಕೈಕೇಯ್ಯಾ ಭಯಮಾಗತಮ್ ।
ಮುಖಂ ಚಾಪ್ಯಗಮಚ್ಛೋಷಂ ಸ್ವರಶ್ಚಾಪಿ ನ್ಯರುಧ್ಯತ ॥ ೧೦

ಸಾ ವಿಷಣ್ಣಾ ಚ ಸಂತ್ರಸ್ತಾ ಮುಖೇನ ಪರಿಶುಷ್ಯತಾ ।
ರಾಜಾನಮೇವಾಭಿಮುಖೀ ಕೈಕೇಯೀ ವಾಕ್ಯಮಬ್ರವೀತ್ ॥ ೧೧

ರಾಜ್ಯಂ ಗತಧನಂ ಸಾಧೋ ಪೀತಮಂಡಾಂ ಸುರಾಮಿವ ।
ನಿರಾಸ್ವಾದ್ಯತಮಂ ಶೂನ್ಯಂ ಭರತೋ ನಾಭಿಪತ್ಸ್ಯತೇ ॥ ೧೨

ಕೈಕೇಯ್ಯಾಂ ಮುಕ್ತಲಜ್ಜಾಯಾಂ ವದಂತ್ಯಾಮತಿದಾರುಣಮ್ ।
ರಾಜಾ ದಶರಥೋ ವಾಕ್ಯಮುವಾಚಾಯತಲೋಚನಾಮ್ ॥ ೧೩

ವಹಂತಂ ಕಿಂ ತುದಸಿ ಮಾಂ ನಿಯುಜ್ಯ ಧುರಿ ಮಾಽಹಿತೇ ।
ಅನಾರ್ಯೇ ಕೃತ್ಯಮಾರಬ್ಧಂ ಕಿಂ ನ ಪೂರ್ವಮುಪಾರುಧಃ ॥ ೧೪

---

ಸಂದರ್ಶಿಸುತ್ತ ಅರಣ್ಯದಲ್ಲಿ ಸುಖವಾಗಿರಲಿ. ಮಹಾವೀರನಾದ ಭರತನು ಅಯೋಧ್ಯೆಯನ್ನು ಪಾಲಿಸಲಿ! ಬೇಕಾದ ಸಮಸ್ತ ಸಾಮಗ್ರಿಗಳನ್ನೂ ಕೊಟ್ಟು ಶ್ರೀರಾಮನನ್ನು ಕಳಿಸಿಕೊಡು" ಎಂದು ಹೇಳಿದನು (೮-೯). ಹೀಗೆ ದಶರಥನು ಹೇಳುತ್ತಿರಲು ಕೈಕೇಯಿಗೆ ಭಯವಾಯಿತು. ಮುಖವು ಬಾಡಿತು. ಸ್ವರವು ಕುಗ್ಗಿತು. ಅವಳು ವಿಷಾದಗೊಂಡು ಉದ್ವಿಗ್ನಳಾದಳು. ಬಾಯಿ ಒಣಗಿತು. ಆಕೆಯು ಮಹಾರಾಜನ ಕಡೆಗೆ ತಿರುಗಿ "ಹೇ ಪುಣ್ಯಾತ್ಮ, ಧನವಿಲ್ಲದೆ ಜನವಿಲ್ಲದೆ ಶೂನ್ಯವಾಗಿ ನಿಸ್ಸಾರವಾದ ರಾಜ್ಯವನ್ನು ಭರತನು ಎಂದಿಗೂ ಸ್ವೀಕರಿಸುವುದಿಲ್ಲ. ಅಂಥ ರಾಜ್ಯವು ಸಾರವಾದ ಭಾಗವನ್ನು ಕುಡಿದು ಬಿಟ್ಟಿರುವ ರುಚಿಗೆಟ್ಟ ಹೆಂಡವಿದ್ದಂತೆ" ಎಂದು ಹೇಳಿಬಿಟ್ಟಳು! (೧೦-೧೨). ಕೈಕೇಯಿಯು ಲಜ್ಜೆಗೆಟ್ಟು ಈ ಪ್ರಕಾರ ಕ್ರೂರವಾಗಿ ನುಡಿಯಲು, ದಶರಥರಾಜನು ಆ ಸುಂದರಿಯನ್ನು ನೋಡಿ, "ಎಲೇ ಕೇಡಿ, ನೀನು ನೇಮಿಸಿದಂತೆ ಭಾರವನ್ನು ನಾನು ಎಳೆಯುತ್ತಿರುವಾಗ ಮತ್ತೆ ನನ್ನನ್ನು ತಿವಿಯುವುದೇಕೆ? ಅಯೋಗ್ಯಳೆ, ಈಗ ನಾನು ಆಜ್ಞಾಪಿಸಿದಂತೆ

ತಸ್ಯೈತತ್ ಕ್ರೋಧಸಂಯುಕ್ತಮುಕ್ತಂ ಶ್ರುತ್ವಾ ವರಾಂಗನಾ ।
ಕೈಕೇಯೀ ದ್ವಿಗುಣಂ ಕ್ರುದ್ಧಾ ರಾಜಾನಮಿದಮಬ್ರವೀತ್ ॥ ೧೫

ತವೈವ ವಂಶೇ ಸಗರೋ ಜ್ಯೇಷ್ಠಪುತ್ರ ಮುಪಾರುಧತ್ ।
ಅಸಮಂಜ ಇತಿ ಖ್ಯಾತಂ ತಥಾಯಂ ಗಂತುಮರ್ಹತಿ ॥ ೧೬

ಏವಮುಕ್ತೋ ಧಿಗಿತ್ಯೇವ ರಾಜಾ ದಶರಥೋಽಬ್ರವೀತ್ ।
ವ್ರೀಡಿತಶ್ಚ ಜನಃ ಸರ್ವಃ ಸಾ ಚ ತನ್ನಾವಬುಧ್ಯತ ॥ ೧೭

ತತ್ರ ವೃದ್ಧೋ ಮಹಾಮಾತ್ರಃ ಸಿದ್ಧಾರ್ಥೋ ನಾಮ ನಾಮತಃ ।
ಶುಚಿರ್ಬಹುಮತೋ ರಾಜ್ಞಃ ಕೈಕೇಯೀಮಿದಮಬ್ರವೀತ್ ॥ ೧೮

ಅಸಮಂಜೋ ಗೃಹೀತ್ವಾ ತು ಕ್ರೀಡತಃ ಪಥಿ ದಾರಕಾನ್ ।
ಸರಯ್ವಾಃ ಪ್ರಕ್ಷಿಪನ್ನಪ್ಸು ರಮತೇ ತೇನ ದುರ್ಮತಿಃ ॥ ೧೯

ತಂ ದೃಷ್ಟ್ವಾ ನಾಗರಾಃ ಸರ್ವೇ ಕ್ರುದ್ಧಾ ರಾಜಾನಮಬ್ರುವನ್ ।
ಅಸಮಂಜಂ ವೃಣೀಷ್ವೈಕಮಸ್ಮಾನ್ ವಾ ರಾಷ್ಟ್ರವರ್ಧನ ॥ ೨೦

---

ಆಗಬಾರದೆಂದು ಹಿಂದೆಯೇ ನೀನು ಏಕೆ ತಡೆಯಲಿಲ್ಲ?" ಎಂದನು (೧೩-೧೪). ದಶರಥನು ಈ ರೀತಿಯಲ್ಲಿ ಸಿಟ್ಟಿನಿಂದ ನುಡಿಯಲು ಕೈಕೇಯಿಯು ಅದಕ್ಕೆ ಎರಡರಷ್ಟು ಸಿಟ್ಟಿನಿಂದ "ನಿನ್ನ ವಂಶದಲ್ಲಿಯೇ ಸಗರನು ಜ್ಯೇಷ್ಠಪುತ್ರನಾದ ಅಸಮಂಜನಿಗೆ ಏನನ್ನೂ ಕೊಡದೆ ಹೊರಡಿಸಿದ್ದು ಪ್ರಖ್ಯಾತವಾಗಿದೆ. ಹಾಗೆಯೇ ಇವನೂ ಹೋಗಲಿ" ಎಂದಳು. (೧೫-೧೬).ಆಗ ದಶರಥನು 'ಧಿಕ್' ಎಂದಿಷ್ಟೇ ಹೇಳಿದನು. (ಕೈಕೇಯಿಯು ತುಚ್ಛವಾಗಿ ನುಡಿದುದರಿಂದ) ಅಲ್ಲಿದ್ದ ಸಕಲರಿಗೂ ನಾಚಿಕೆಯಾಯಿತು. ಕೈಕೇಯಿಯು ಅದನ್ನು ಲೆಕ್ಕಿಸಲಿಲ್ಲ. ಅಲ್ಲಿ ಸಿದ್ಧಾರ್ಥನೆಂಬ ವೃದ್ಧನಾದ ಮಂತ್ರಿಯೊಬ್ಬನಿದ್ದನು. ಅವನು ಋಜುಮಾರ್ಗದಲ್ಲಿ ನಡೆಯುತ್ತ ರಾಜನ ಗೌರವಕ್ಕೆ ಪಾತ್ರನಾಗಿದ್ದನು. ಆತನು ಕೈಕೇಯಿಯ ಮಾತನ್ನು ಸಹಿಸಲಾರದೆ ಹೀಗೆಂದನು (೧೭-೧೮) : "ಅಸಮಂಜನು ದುಷ್ಟ. ಬೀದಿಯಲ್ಲಿ ಆಡುವ ಮಕ್ಕಳನ್ನು ಎತ್ತಿಕೊಂಡು ಹೋಗಿ ಸರಯೂನದಿಯ ನೀರಿನಲ್ಲಿ ಎಸೆದು ಸಂತೋಷಪಡುತ್ತಿದ್ದನು. ಆಗ ನಗರವಾಸಿಗಳು ಕ್ರುದ್ಧರಾಗಿ ರಾಜನಾದ ಸಗರನ ಬಳಿಗೆ ಹೋಗಿ 'ಭೂಪಾಲ, ನಿನಗೆ ಅಸಮಂಜನು ಬೇಕೊ? ನಾವು

ತಾನುವಾಚ ತತೋ ರಾಜಾ ಕಿಂ ನಿಮಿತ್ತಮಿದಂ ಭಯಮ್ ।
ತಾಶ್ಚಾಪಿ ರಾಜ್ಞಾ ಸಂಪೃಷ್ಟಾ ವಾಕ್ಯಂ ಪ್ರಕೃತಯೋಽಬ್ರುವನ್ ॥
ಕ್ರೀಡತಸ್ತ್ವೇವ ನಃ ಪುತ್ರಾನ್ ಬಾಲಾನುದ್ಭ್ರಾಂತಚೇತನಃ ।
ಸರಯ್ವಾಂ ಪ್ರಕ್ಷಿಪನ್ ಮೌರ್ಖ್ಯಾದತುಲಾಂ ಪ್ರೀತಿಮಶ್ನುತೇ ॥ ೨೨
ಸ ತಾಸಾಂ ವಚನಂ ಶ್ರುತ್ವಾ ಪ್ರಕೃತೀನಾಂ ನರಾಧಿಪಃ ।
ತಂ ತತ್ಯಾಜಾಹಿತಂ ಪುತ್ರಂ ತಾಸಾಂ ಪ್ರಿಯಚಿಕೀರ್ಷಯಾ ॥ ೨೩
ತಂ ಯಾನಂ ಶೀಘ್ರಮಾರೋಪ್ಯ ಸಭಾರ್ಯಂ ಸಪರಿಚ್ಛದಮ್ ।
ಯಾವಜ್ಜೀವಂ ವಿವಾಸ್ಯೋಽಯಮಿತಿ ಸ್ವಾನನ್ವಶಾತ್ಪಿತಾ ॥ ೨೪
ಸ ಫಾಲಪಿಟಕಂ ಗೃಹ್ಯ ಗಿರಿದುರ್ಗಾಣ್ಯಲೋಕಯತ್ ।
ದಿಶಃ ಸರ್ವಾಸ್ತ್ವನುಚರನ್ ಸ ಯಥಾ ಪಾಪಕರ್ಮಕೃತ್ ॥ ೨೫
ಇತ್ಯೇವಮತ್ಯಜದ್ರಾಜಾ ಸಗರೋ ವೈ ಸುಧಾರ್ಮಿಕಃ ।
ರಾಮಃ ಕಿಮಕರೋತ್ಪಾಪಂ ಯೇನೈವಮುಪರುಧ್ಯತೇ ॥ ೨೬

---

ಬೇಕೊ? ಎರಡರಲ್ಲಿ ಒಂದನ್ನು ಆರಿಸಿಕೊ' ಎಂದರು (೧೯-೨೦). ಆಗ ಸಗರನು 'ಯಾವ ಕಾರಣದಿಂದ ನಿಮಗೆ ಇಷ್ಟು ಭಯವಾಗಿದೆ?' ಎನ್ನಲು ಪ್ರಜೆಗಳು 'ರಾಜ, ನಮ್ಮ ಮಕ್ಕಳು ಬೀದಿಯಲ್ಲಿ ಆಡುತ್ತಿದ್ದರೆ, ಈ ಮೂರ್ಖನು ಅವರನ್ನೆತ್ತಿಕೊಂಡು ಹೋಗಿ ಸರಯೂನದಿಗೆ ಎಸೆದು ನೋಡಿ ನೋಡಿ ಆನಂದಪಡುತ್ತಾನೆ' ಎಂದರು (೨೧-೨೨) ಸಗರನು ಪ್ರಜೆಗಳ ಮಾತನ್ನು ಕೇಳಿ ಅವರ ಹಿತಕ್ಕೋಸ್ಕರ ಕೇಡಿಯಾದ ತನ್ನ ಮಗನನ್ನು ಮನೆಯಿಂದ ಹೊರಡಿಸಿದನು. ಆ ರಾಜನು ತನ್ನ ಮಗನಾದ ಅಸಮಂಜನನ್ನು ಅವನ ಹೆಂಡತಿಯೊಡನೆ ಒಂದು ವಾಹನದಲ್ಲಿ ಕುಳ್ಳಿರಿಸಿ ಜೊತೆಯಲ್ಲಿ ಬೇಕಾಗುವ ಕೆಲವು ಸಾಮಗ್ರಿಗಳನ್ನು ಹೇರಿಸಿ 'ಇವನು ಬದುಕಿರುವವರೆಗೂ ದೇಶಭ್ರಷ್ಟನಾಗಿರಬೇಕು' ಎಂದು ಅಧಿಕಾರಿಗಳಿಗೆ ಆಜ್ಞಾಪಿಸಿದನು (೨೩-೨೪). ಅನಂತರ ಅಸಮಂಜನು ಹಾರೆ ಬುಟ್ಟಿಗಳನ್ನು ಹಿಡಿದು ಗಿರಿದುರ್ಗಗಳನ್ನು ನೋಡುತ್ತ ದಿಕ್ಕು ದಿಕ್ಕುಗಳಲ್ಲಿ ಅಲೆಯುತ್ತಿದ್ದನು. ಇನ್ನೊಬ್ಬ ಪಾಪಿಗೆ ಆಗುವ ಗತಿ ಅವನಿಗೂ ಆಯಿತು. ಈ ಕಾರಣಗಳಿಂದ ಧಾರ್ಮಿಕನಾದ ಸಗರ ಮಹಾರಾಜನು ಪುತ್ರನನ್ನೇ ಮನೆಯಿಂದ ಹೊರಡಿಸಬೇಕಾಯಿತು. ಈಗ ರಾಮನು ಯಾವ ಪಾಪಕೃತ್ಯವನ್ನು ಮಾಡಿದ್ದಾನೆ?

ನ ಹಿ ಕಂಚನ ಪಶ್ಯಾಮೋ ರಾಘವಸ್ಯಾಗುಣಂ ವಯಮ್ ।
ದುರ್ಲಭೋ ಹ್ಯಸ್ಯ ನಿರಯಃ ಶಶಾಂಕಸ್ಯೇವ ಕಲ್ಮಷಮ್ ॥ ೨೭

ಅಥವಾ ದೇವಿ ದೋಷಂ ತ್ವಂ ಕಂಚಿತ್ ಪಶ್ಯಸಿ ರಾಘವೇ ।
ತಮದ್ಯ ಬ್ರೂಹಿ ತತ್ತ್ವೇನ ತತೋ ರಾಮೋ ವಿವಾಸ್ಯತೇ ॥ ೨೮

ಅದುಷ್ಟಸ್ಯ ಹಿ ಸಂತ್ಯಾಗಃ ಸತ್ಪಥೇ ನಿರತಸ್ಯ ಚ ।
ನಿರ್ದಹೇದಪಿ ಶಕ್ರಸ್ಯ ದ್ಯುತಿಂ ಧರ್ಮನಿರೋಧನಾತ್ ॥ ೨೯

ತದಲಂ ದೇವಿ ರಾಮಸ್ಯ ಶ್ರಿಯಾ ವಿಹಿತಯಾ ತ್ವಯಾ ।
ಲೋಕತೋಽಪಿ ಹಿ ತೇ ರಕ್ಷ್ಯಃ ಪರಿವಾದಃ ಶುಭಾನನೇ ॥ ೩೦

ಶ್ರುತ್ವಾ ತು ಸಿದ್ಧಾರ್ಥವಚೋ ರಾಜಾ ಶ್ರಾಂತತರಸ್ವನಃ ।
ಶೋಕೋಪಹತಯಾ ವಾಚಾ ಕೈಕೇಯೀಮಿದಮಬ್ರವೀತ್ ॥ ೩೧

ಏತದ್ವಚೋ ನೇಚ್ಛಸಿ ಪಾಪವೃತ್ತೇ
ಹಿತಂ ನ ಜಾನಾಸಿ ಮಮಾತ್ಮನೋ ವಾ ।

---

ಈ ಪರಿಯಲ್ಲಿ ಅವನಿಗೆ ತೊಂದರೆ ಕೊಡಲು ಕಾರಣವೇನು ? (೨೫-೨೬). ನಮಗಂತೂ ರಾಘವನಲ್ಲಿ ಒಂದು ದುರ್ಗುಣವೂ ಕಾಣಿಸುವುದಿಲ್ಲ. ಪೂರ್ಣಚಂದ್ರನಲ್ಲಾದರೂ ಕಳಂಕವಿರುತ್ತದೆ. ಇವನಲ್ಲಿ ಹುಡುಕಿದರೂ ಕಳಂಕವಿಲ್ಲ. ದೇವಿ, ಒಂದು ವೇಳೆ ರಾಘವನಲ್ಲಿ ಯಾವುದಾದರೊಂದು ದೋಷವು ಗೋಚರಿಸಿದ್ದರೆ ಸತ್ಯವಾಗಿ ಅದನ್ನು ಹೇಳಿಬಿಡು. ಆಗ ರಾಮನು ದೇಶಭ್ರಷ್ಟನಾಗುವುದಾದರೆ ಆಗಲಿ (೨೭-೨೮). ಯಾವ ಅಪರಾಧವನ್ನೂ ಮಾಡದೆ ಸನ್ಮಾರ್ಗದಲ್ಲಿ ನಿರತನಾದವನನ್ನು ತ್ಯಜಿಸಿದರೆ ಧರ್ಮಕ್ಕೆ ಹಾನಿಯಾಗುವುದು. ಅಂಥ ಧರ್ಮಹಾನಿಯು ದೇವೇಂದ್ರನ ವೈಭವವನ್ನೂ ಕೂಡ ಸುಟ್ಟುಹಾಕೀತು (೨೯). ಆದ್ದರಿಂದ, ದೇವಿ, ರಾಮನ ಪುರೋಭಿವೃದ್ಧಿಗೆ ನೀನು ಕಲ್ಲುಹಾಕಬೇಡ. ಜನರಿಂದ ಕೆಟ್ಟಹೆಸರು ಬರದಂತೆಯೂ ನಿನ್ನನ್ನು ರಕ್ಷಿಸಿಕೊಳ್ಳಬೇಕಲ್ಲವೆ ?" ಎಂದನು (೩೦). ಸಿದ್ಧಾರ್ಥನ ವಚನವನ್ನು ಆಲಿಸುತ್ತಿದ್ದ ದಶರಥನು ಶೋಕದಿಂದ ತಡವರಿಸುತ್ತ ಕುಗ್ಗಿದ ಸ್ವರದಲ್ಲಿ ಕೈಕೇಯಿಯನ್ನು ಕುರಿತು "ಎಲೇ ಪಾಪಿ, ಇವನ ಬುದ್ಧಿವಾದವೂ ನಿನಗೆ ಹಿಡಿಸಲಿಲ್ಲ. ನನ್ನ ಹಿತ ನಿನಗೆ ಬೇಡ. ನಿನ್ನ ಹಿತ ನಿನಗೆ ತಿಳಿಯದು.

ಆಸ್ಥಾಯ ಮಾರ್ಗಂ ಕೃಪಣಂ ಕುಚೇಷ್ಟಾ
ಚೇಷ್ಟಾ ಹಿ ತೇ ಸಾಧುಪಥಾದಪೇತಾ ॥ ೩೨

ಅನುವ್ರಜಿಷ್ಯಾಮ್ಯಹಮದ್ಯ ರಾಮಂ
ರಾಜ್ಯಂ ಪರಿತ್ಯಜ್ಯ ಧನಂ ಸುಖಂ ಚ ।
ಸಹೈವ ರಾಜ್ಞಾ ಭರತೇನ ಚ ತ್ವಂ
ಯಥಾಸುಖಂ ಭುಂಕ್ಷ್ವ ಚಿರಾಯ ರಾಜ್ಯಮ್ ॥ ೩೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್‌ತ್ರಿಂಶಃ ಸರ್ಗಃ

ತುಚ್ಛವಾದ ಮಾರ್ಗವನ್ನು ಹಿಡಿದಿದ್ದೀಯೆ. ಇದು ಕುಚೇಷ್ಟೆ. ಸನ್ಮಾರ್ಗಕ್ಕೆ ದೂರವಾದ ನಡತೆ (೩೧-೩೨). ಈಗ ನಾನು ರಾಮನೊಡನೆ ಹೊರಟು ಹೋಗುವೆನು. ಈ ರಾಜ್ಯ ಈ ಧನ ಈ ಸುಖ - ಎಲ್ಲವನ್ನೂ ತ್ಯಜಿಸುವೆನು. ನೀನೇ ಭರತಮಹಾರಾಜನೊಡನೆ ಈ ರಾಜ್ಯವನ್ನು ಶಾಶ್ವತವಾಗಿ ಸುಖದಿಂದ ಅನುಭವಿಸಿಕೊಂಡಿರು" ಎಂದು ಹೇಳಿದನು (೩೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತಾರನೆಯ ಸರ್ಗ

## ಸಪ್ತತ್ರಿಂಶಃ ಸರ್ಗಃ

### ಚೀರಪ್ರತಿಗ್ರಹನಿಮಿತ್ತವಸಿಷ್ಠಕ್ರೋಧಃ

ಮಹಾಮಾತ್ರವಚಃ ಶ್ರುತ್ವಾ ರಾಮೋ ದಶರಥಂ ತದಾ ।
ಅಭ್ಯಭಾಷತ ವಾಕ್ಯಂ ತು ವಿನಯಜ್ಞೋ ವಿನೀತವತ್ ॥ ೧

ತ್ಯಕ್ತಭೋಗಸ್ಯ ಮೇ ರಾಜನ್ ವನೇ ವನ್ಯೇನ ಜೀವತಃ ।
ಕಿಂ ಕಾರ್ಯಮನುಯಾತ್ರೇಣ ತ್ಯಕ್ತಸಂಗಸ್ಯ ಸರ್ವತಃ ॥ ೨

ಯೋ ಹಿ ದತ್ತ್ವಾ ಗಜಶ್ರೇಷ್ಠಂ ಕಕ್ಷ್ಯಾಯಾಂ ಕುರುತೇ ಮನಃ ।
ರಜ್ಜುಸ್ನೇಹೇನ ಕಿಂ ತಸ್ಯ ತ್ಯಜತಃ ಕುಂಜರೋತ್ತಮಮ್ ॥ ೩

ತಥಾ ಮಮ ಸತಾಂ ಶ್ರೇಷ್ಠ ಕಿಂ ಧ್ವಜಿನ್ಯಾ ಜಗತ್ಪತೇ ।
ಸರ್ವಾಣ್ಯೇವಾನುಜಾನಾಮಿ ಚೀರಾಣ್ಯೇವಾನಯಂತು ಮೇ ॥ ೪

ಖನಿತ್ರಪಿಟಕೇ ಚೋಭೇ ಸಮಾನಯತ ಗಚ್ಛತಃ ।
ಚತುರ್ದಶ ವನೇ ವಾಸಂ ವರ್ಷಾಣಿ ವಸತೋ ಮಮ ॥ ೫

## ಸರ್ಗ ೩೭

### ಕೈಕೇಯಿಯು ತಂದುಕೊಟ್ಟ ನಾರುಬಟ್ಟೆಗಳನ್ನು ರಾಮಲಕ್ಷ್ಮಣರೂ ಸೀತೆಯೂ ಧರಿಸುವುದು. ವಸಿಷ್ಠರ ಕೋಪ.

ಅಮಾತ್ಯನಾದ ಸಿದ್ಧಾರ್ಥನ ಮಾತನ್ನು ಕೇಳಿ ನೀತಿಜ್ಞನಾದ ಶ್ರೀರಾಮನು ದಶರಥನನ್ನು ಕುರಿತು ವಿನಯದಿಂದ "ಮಹಾರಾಜ, ನಾನು ಭೋಗವನ್ನು ವರ್ಜಿಸಿ ಕಾಡಿನಲ್ಲಿ ವನ್ಯಪದಾರ್ಥಗಳಿಂದ ಜೀವಿಸ ತಕ್ಕವನು. ಸರ್ವಸಂಗವನ್ನು ಪರಿತ್ಯಾಗಮಾಡತಕ್ಕ ನನಗೆ ಈ ಪರಿವಾರ ವೇಕೆ? (೧-೨). ಮಹಾಗಜವನ್ನೇ ಬಿಟ್ಟುಕೊಡತಕ್ಕವನಿಗೆ ಅದನ್ನು ಕಟ್ಟುವ ಹಗ್ಗದಲ್ಲಿ ಅಭಿಮಾನವೇಕೆ? ಮಹಾರಾಜ, ನನಗೆ ಈ ಸೈನ್ಯದಿಂದ ಏನಾಗಬೇಕಾಗಿದೆ ? ಸಮಸ್ತವನ್ನೂ (ಭರತನಿಗೆ) ಬಿಟ್ಟುಕೊಡುತ್ತೇನೆ. ನನಗೆ ನಾರುಬಟ್ಟೆಗಳನ್ನೇ ತಂದುಕೊಡಲಿ (೩-೪). ವನಕ್ಕೆ ಹೊರಟಿರುವ ನನಗೆ ಹಾರೆ ಬುಟ್ಟಿ-ಇವೆರಡು ಸಾಕು. ಹದಿನಾಲ್ಕು ವರ್ಷ ಅಲ್ಲಿ ನಾನು ವಾಸಮಾಡಬೇಕು"

ಅಥ ಚೀರಾಣಿ ಕೈಕೇಯೀ ಸ್ವಯಮಾಹೃತ್ಯ ರಾಘವಮ್ ।
ಉವಾಚ ಪರಿಧತ್ಸ್ವೇತಿ ಜನೌಘೇ ನಿರಪತ್ರಪಾ ॥ ೬

ಸ ಚೀರೇ ಪುರುಷವ್ಯಾಘ್ರಃ ಕೈಕೇಯ್ಯಾಃ ಪ್ರತಿಗೃಹ್ಯ ತೇ ।
ಸೂಕ್ಷ್ಮವಸ್ತ್ರಮವಕ್ಷಿಪ್ಯ ಮುನಿವಸ್ತ್ರಾಣ್ಯವಸ್ತ ಹ ॥ ೭

ಲಕ್ಷ್ಮಣಶ್ಚಾಪಿ ತತ್ರೈವ ವಿಹಾಯ ವಸನೇ ಶುಭೇ ।
ತಾಪಸಾಚ್ಛಾದನೇ ಚೈವ ಜಗ್ರಾಹ ಪಿತುರಗ್ರತಃ ॥ ೮

ಅಥಾತ್ಮಪರಿಧಾನಾರ್ಥಂ ಸೀತಾ ಕೌಶೇಯವಾಸಿನೀ ।
ಸಂಪ್ರೇಕ್ಷ್ಯ ಚೀರಂ ಸಂತ್ರಸ್ತಾ ಪೃಷತೀ ವಾಗುರಾಮಿವ ॥ ೯

ಸಾ ವ್ಯಪತ್ರಪಮಾಣೇವ ಪ್ರಗೃಹ್ಯ ಚ ಸುದುರ್ಮನಾಃ ।
ಕೈಕೇಯ್ಯಾಃ ಕುಶಚೀರೇ ತೇ ಜಾನಕೀ ಶುಭಲಕ್ಷಣಾ ॥ ೧೦

ಅಶ್ರುಸಂಪೂರ್ಣನೇತ್ರಾ ಚ ಧರ್ಮಜ್ಞಾ ಧರ್ಮದರ್ಶಿನೀ ।
ಗಂಧರ್ವರಾಜಪ್ರತಿಮಂ ಭರ್ತಾರಮಿದಮಬ್ರವೀತ್ ॥ ೧೧

---

ಎಂದನು. ಕೂಡಲೆ ಕೈಕೇಯಿಯು ತಾನೇ ಹೋಗಿ ನಾರುಬಟ್ಟೆಗಳನ್ನು ತಂದು ಅಷ್ಟು ಜನರೆದುರಿಗೆ ರಾಮನನ್ನು ನೋಡಿ "ಇವುಗಳನ್ನು ಧರಿಸು" ಎಂದು ನಾಚಿಕೆಯಿಲ್ಲದೆ ಹೇಳಿದಳು (೫-೬). ಆ ಪುರುಷೋತ್ತಮನು ಕೈಕೇಯಿಯ ಕೈಯಿಂದ ಎರಡು ನಾರುಬಟ್ಟೆಗಳನ್ನು ತೆಗೆದುಕೊಂಡನು. ಅನಂತರ ತಾನು ಉಟ್ಟಿದ್ದ ನಯವಾದ ವಸ್ತ್ರಗಳನ್ನು ತೆಗೆದುಹಾಕಿ ಮುನಿಯೋಗ್ಯವಾದ ಆ ನಾರುಬಟ್ಟೆಗಳನ್ನು ಸುತ್ತಿಕೊಂಡನು (೭). ಲಕ್ಷ್ಮಣನೂ ಅಲ್ಲಿಯೇ ತನ್ನ ಉತ್ತಮವಸ್ತ್ರಗಳನ್ನು ತೆಗೆದಿಟ್ಟು ತಾಪಸರಿಗೆ ಯೋಗ್ಯವಾದ ಬಟ್ಟೆಗಳನ್ನು ತಂದೆಯ ಎದುರಿಗೇ ಧರಿಸಿದನು. ಆಮೇಲೆ ರೇಷ್ಮೆಯ ದುಕೂಲವನ್ನುಟ್ಟಿದ್ದ ಸೀತೆಯು ತಾನು ಉಡಬೇಕೆಂದು ಎದುರಿಗಿದ್ದ ನಾರುಬಟ್ಟೆಯನ್ನು ನೋಡಿ ಬೆಚ್ಚಿಬಿದ್ದಳು. ಹರಿಣೆಯು ತನ್ನನ್ನು ಬಂಧಿಸುವ ಬಲೆಯನ್ನು ಕಂಡು ಹೆದರಿದಂತಾಯಿತು. (೮-೯). ಹುಲ್ಲಿನಿಂದ ನೆಯ್ದ ಆ ವಸ್ತ್ರಗಳನ್ನು ಅವಳು ನಾಚುತ್ತ ಕೈಕೇಯಿಯ ಕೈಯಿಂದ ತೆಗೆದುಕೊಂಡಳು. ಲಕ್ಷಣಸಂಪನ್ನೆಯಾದ ಆ ಜಾನಕಿಗೆ ಬಹಳ ಸಂಕಟವಾಯಿತು (೧೦). ಕಣ್ಣಲ್ಲಿ ನೀರು ತುಳುಕಿತು. ಅವಳು ಪತಿವ್ರತಾಧರ್ಮವನ್ನು

ಕಥಂ ನು ಚೀರಂ ಬಧ್ನಂತಿ ಮುನಯೋ ವನವಾಸಿನಃ ।
ಇತಿ ಹ್ಯಕುಶಲಾ ಸೀತಾ ಸಾ ಮುಮೋಹ ಮುಹುರ್ಮುಹುಃ ॥ ೧೨

ಕೃತ್ವಾ ಕಂಠೇ ಚ ಸಾ ಚೀರಮೇಕಮಾದಾಯ ಪಾಣಿನಾ।
ತಸ್ಥೌ ಹ್ಯಕುಶಲಾ ತತ್ರ ವ್ರೀಡಿತಾ ಜನಕಾತ್ಮಜಾ ॥ ೧೩

ತಸ್ಯಾಸ್ತತ್ ಕ್ಷಿಪ್ರಮಾಗಮ್ಯ ರಾಮೋ ಧರ್ಮಭೃತಾಂ ವರಃ ।
ಚೀರಂ ಬಬಂಧ ಸೀತಾಯಾಃ ಕೌಶೇಯಸ್ಯೋಪರಿ ಸ್ವಯಮ್ ॥ ೧೪

ರಾಮಂ ಪ್ರೇಕ್ಷ್ಯ ತು ಸೀತಾಯಾ ಬಧ್ನಂತಂ ಚೀರಮುತ್ತಮಮ್ ।
ಅಂತಃಪುರಗತಾ ನಾರ್ಯೋ ಮುಮುಚುರ್ವಾರಿ ನೇತ್ರಜಮ್ ॥ ೧೫

ಊಚುಶ್ಚ ಪರಮಾಯಸ್ತಾ ರಾಮಂ ಜ್ವಲಿತತೇಜಸಮ್ ।
ವತ್ಸ ನೈವಂ ನಿಯುಕ್ತೇಯಂ ವನವಾಸೇ ಮನಸ್ವಿನೀ ॥ ೧೬

ಪಿತುರ್ವಾಕ್ಯಾನುರೋಧೇನ ಗತಸ್ಯ ವಿಜನಂ ವನಮ್ ।
ತಾವದ್ದರ್ಶನಮಸ್ಯಾಂ ನಃ ಸಫಲಂ ಭವತು ಪ್ರಭೋ । ೧೭

---

ಬಲ್ಲವಳು. ಧರ್ಮದಲ್ಲಿಯೇ ದೃಷ್ಟಿಯುಳ್ಳವಳು. ಆ ದೇವಿಯು ತನ್ನ ಬಳಿಯಲ್ಲಿ ಗಂಧರ್ವರಾಜನಂತೆ ನಿಂತಿದ್ದ ತನ್ನ ಪತಿಯನ್ನು ನೋಡಿ "ವನದಲ್ಲಿರುವ ಋಷಿಗಳು ಈ ನಾರುಬಟ್ಟೆಯನ್ನು ಹೇಗೆ ಸುತ್ತಿಕೊಳ್ಳುತ್ತಿರಬಹುದು!" ಎಂದಳು (೧೧-೧೨). ಸೀತೆಗೆ ಅದನ್ನು ಧರಿಸುವ ವಿಧಾನ ಗೊತ್ತಿರಲಿಲ್ಲ. ಅವಳು ಮತ್ತೆ ಮತ್ತೆ ಆಲೋಚಿಸಿದರೂ ಬಗೆಹರಿಯಲಿಲ್ಲ. ಆ ಜನಕಪುತ್ರಿಯು ಒಂದು ನಾರುಸೀರೆಯನ್ನು ಕಂಠದಲ್ಲಿ ಸಿಕ್ಕಿಸಿಕೊಂಡು ಇನ್ನೊಂದನ್ನು ಕೈಯಲ್ಲಿ ಹಿಡಿದು ನಾಚಿಕೆಯಿಂದ ಸುಮ್ಮನೆ ನಿಂತಳು (೧೩). ಆಗ ಧರ್ಮವೀರವಾದ ಶ್ರೀರಾಮನು ಬೇಗನೆ ಬಂದು ಸೀತೆಯ ಪಟ್ಟೆಯ ಸೀರೆಯಮೇಲೆ ಆ ನಾರುಬಟ್ಟೆಗಳನ್ನು ತಾನೇ ಸುತ್ತಿ ಕಟ್ಟಿದನು. ಶ್ರೀರಾಮನು ಸೀತೆಗೆ ನಾರುಬಟ್ಟೆ ಯುಡಿಸುವುದನ್ನು ಕಂಡು ಅಂತಃಪುರದ ಸ್ತ್ರೀಯರು ಅಳುತ್ತ ಕಣ್ಣೀರು ಸುರಿಸಿದರು (೧೪-೧೫). ಅವರು ಬಹಳ ನೊಂದುಕೊಂಡು ತೇಜಸ್ಸಿನಿಂದ ಬೆಳಗುತ್ತಿದ್ದ ರಾಮ ನನ್ನು ನೋಡಿ "ವತ್ಸ, ಈ ಸಾಧ್ವಿಯು ಹೀಗೆ ವನವಾಸಮಾಡಬೇಕೆಂದು ಯಾರೂ ನಿಯಮಿಸಿಲ್ಲ. ತಂದೆಯ ವಾಕ್ಯಾನುಸಾರವಾಗಿ ನೀನು ನಿರ್ಜನವಾದ ವನಕ್ಕೆ ಹೋಗು

ಲಕ್ಷ್ಮಣೇನ ಸಹಾಯೇನ ವನಂ ಗಚ್ಛಸ್ವ ಪುತ್ರಕ ।
ನೇಯಮರ್ಹತಿ ಕಲ್ಯಾಣೀ ವಸ್ತುಂ ತಾಪಸವದ್ವನೇ ॥ ೧೮

ಕುರು ನೋ ಯಾಚನಾಂ ಪುತ್ರ ಸೀತಾ ತಿಷ್ಠತು ಭಾಮಿನೀ ।
ಧರ್ಮನಿತ್ಯಃ ಸ್ವಯಂ ಸ್ಥಾತುಂ ನ ಹೀದಾನೀಂ ತ್ವಮಿಚ್ಛಸಿ ॥ ೧೯

ತಾಸಾಮೇವಂವಿಧಾ ವಾಚಃ ಶೃಣ್ವನ್ ದಶರಥಾತ್ಮಜಃ ।
ಬಬಂಧೈವ ತದಾ ಚೀರಂ ಸೀತಯಾ ತುಲ್ಯಶೀಲಯಾ ॥ ೨೦

ಚೀರೇ ಗೃಹೀತೇ ತು ತಯಾ ಸಮೀಕ್ಷ್ಯ ನೃಪತೇರ್ಗುರುಃ ।
ನಿವಾರ್ಯ ಸೀತಾಂ ಕೈಕೇಯೀಂ ವಸಿಷ್ಠೋ ವಾಕ್ಯಮಬ್ರವೀತ್ ॥ ೨೧

ಅತಿಪ್ರವೃತ್ತೇ ದುರ್ಮೇಧೇ ಕೈಕೇಯಿ ಕುಲಪಾಂಸನಿ ।
ವಂಚಯಿತ್ವಾ ಚ ರಾಜಾನಂ ನ ಪ್ರಮಾಣೇಽವತಿಷ್ಠಸೇ ॥ ೨೨

ನ ಗಂತವ್ಯಂ ವನಂ ದೇವ್ಯಾ ಸೀತಯಾ ಶೀಲವರ್ಜಿತೇ ।
ಅನುಷ್ಠಾಸ್ಯತಿ ರಾಮಸ್ಯ ಸೀತಾ ಪ್ರಕೃತಮಾಸನಮ್ ॥ ೨೩

---

ತ್ತೀಯೆ. ನೀನು ಬರುವವರೆಗೆ ಇವಳನ್ನು ನೋಡುತ್ತಲಾದರೂ ನಿನ್ನ ದರ್ಶನದ ಫಲವನ್ನು ಪಡೆಯುತ್ತೇವೆ (೧೬-೧೭). ಮಗು, ನಿನಗೆ ಸಹಾಯಕನಾಗಿ ಬರುವ ಲಕ್ಷ್ಮಣನೊಡನೆ ನೀನು ಹೋಗು; ಈ ಕೋಮಲೆಯು ತಪಸ್ವಿನಿಯಂತೆ ಕಾಡಿನಲ್ಲಿ ವಾಸಮಾಡುವುದು ಯುಕ್ತವಲ್ಲ. ಪುತ್ರ, ನಮ್ಮ ಪ್ರಾರ್ಥನೆಯನ್ನು ನಡೆಸು. ಸೀತೆ ಇಲ್ಲಿಯೇ ಇರಲಿ. ಧರ್ಮ ನಿಷ್ಠನಾದ ನೀನಂತೂ ಈಗ ಇಲ್ಲಿರಲು ಒಪ್ಪುವುದಿಲ್ಲ" ಎಂದರು (೧೮-೧೯). ಈ ಬಗೆಯಲ್ಲಿ ಆ ಸ್ತ್ರೀಯರು ಹೇಳುವುದನ್ನು ಕೇಳುತ್ತಿದ್ದರೂ ಆ ದಶರಥಾತ್ಮಜನು ತನ್ನಂತೆ ವನವಾಸಕ್ಕೆ ಹೊರಟುನಿಂತಿದ್ದ ಸೀತೆಗೆ ನಾರುಸೀರೆಯನ್ನು ಕಟ್ಟಿಯೇ ಕಟ್ಟಿದನು (೨೦). ಸೀತೆಯು ನಾರುಸೀರೆಯುಡುವುದನ್ನು ಗುರುಗಳಾದ ವಸಿಷ್ಠರು ನೋಡಿದರು. (ಅವರಿಗೆ ಕೋಪವನ್ನು ತಡೆಯಲಾಗಲಿಲ್ಲ). ಸೀತೆಗೆ ನಾರು ಬಟ್ಟೆ ಕೂಡದೆಂದು ಹೇಳಿ ಅವರು ಕೈಕೇಯಿಯ ಕಡೆಗೆ ತಿರುಗಿ ಹೀಗೆಂದರು (೨೧):"ಕೈಕೇಯಿ, ನಿನ್ನ ಚೇಷ್ಟೆ ಅತಿಯಾಯಿತು ! ಎಲೆ ದುರ್ಬುದ್ಧಿಯವಳೆ! ಕುಲಗೆಡಕಿ! ರಾಜನನ್ನು ಮೋಸಪಡಿಸಿ ದ್ದಲ್ಲದೆ ಮರ್ಯಾದೆಯನ್ನು ಬಿಟ್ಟು ನಡೆಯುತ್ತಿದ್ದೀಯೆ. ನೀನು

ಆತ್ಮಾ ಹಿ ದಾರಾಃ ಸರ್ವೇಷಾಂ ದಾರಸಂಗ್ರಹವರ್ತಿನಾಮ್ ।
ಆತ್ಮೇಯಮಿತಿ ರಾಮಸ್ಯ ಪಾಲಯಿಷ್ಯತಿ ಮೇದಿನೀಮ್ ॥ ೨೪

ಅಥ ಯಾಸ್ಯತಿ ವೈದೇಹೀ ವನಂ ರಾಮೇಣ ಸಂಗತಾ ।
ವಯಮಪ್ಯನುಯಾಸ್ಯಾಮಃ ಪುರಂ ಚೇದಂ ಗಮಿಷ್ಯತಿ ॥ ೨೫

ಅಂತಪಾಲಾಶ್ಚ ಯಾಸ್ಯಂತಿ ಸದಾರೋ ಯತ್ರ ರಾಘವಃ ।
ಸಹೋಪಜೀವ್ಯಂ ರಾಷ್ಟ್ರಂ ಚ ಪುರಂ ಚ ಸಪರಿಚ್ಛದಮ್ ॥ ೨೬

ಭರತಶ್ಚ ಸಶತ್ರುಘ್ನಶ್ಚೀರವಾಸಾ ವನೇಚರಃ ।
ವನೇ ವಸಂತಂ ಕಾಕುತ್ಸ್ಥಂ ಮನುವತ್ಸ್ಯತಿ ಪೂರ್ವಜಮ್ ॥ ೨೭

ತತಃ ಶೂನ್ಯಾಂ ಗತಜನಾಂ ವಸುಧಾಂ ಪಾದಪೈಃ ಸಹ ।
ತ್ವಮೇಕಾ ಶಾಧಿ ದುರ್ವೃತ್ತಾ ಪ್ರಜಾನಾಮಹಿತೇ ರತಾ ॥ ೨೮

---

ಶೀಲಭ್ರಷ್ಟಳು. ಸೀತಾದೇವಿಯು ವನಕ್ಕೆ ಹೋಗಬೇಕಾದ್ದಿಲ್ಲ. ರಾಮನಿಗೆ ಮೀಸಲಾಗಿದ್ದ ರಾಜಸಿಂಹಾಸನದಲ್ಲಿ ಸೀತೆಯು ಕುಳಿತುಕೊಳ್ಳುವಳು (೨೨-೨೩). ಗೃಹಸ್ಥರಿಗೆ ಪತ್ನಿಯೇ ಆತ್ಮ-ಅರ್ಧಶರೀರ. ರಾಮನ ಆತ್ಮ ಭೂತಳಾದ ಇವಳು ಅವನಿಗೆ ಪ್ರತಿನಿಧಿಯಾಗಿ ರಾಜ್ಯವನ್ನು ಪಾಲಿಸುವಳು. ಹಾಗಲ್ಲದೆ ಒಂದುವೇಳೆ ವೈದೇಹಿಯೂ ಶ್ರೀರಾಮನೊಡನೆ ವನಕ್ಕೆ ಹೋಗುವುದಾದರೆ ನಾವೂ ಅವನೊಡನೆ ಹೋಗುತ್ತೇವೆ. ಈ ನಗರವೇ ವನಕ್ಕೆ ಹೋಗುತ್ತದೆ (೨೪-೨೫). ರಾಮನು ಪತ್ನೀಸಮೇತನಾಗಿ ಎಲ್ಲಿರುವನೊ ಅಲ್ಲಿಗೆ ದಂಡನಾಯಕರು ಹೊರಟು ಹೋಗುತ್ತಾರೆ. ಈ ಪಟ್ಟಣದಲ್ಲಿ- ಈ ರಾಜ್ಯದಲ್ಲಿ ಇರುವ ಪ್ರಜೆಗಳೆಲ್ಲರೂ ತಮ್ಮ ಜೀವನಸಾಮಗ್ರಿಯನ್ನೂ ಪರಿವಾರವನ್ನೂ ಕಟ್ಟಿಕೊಂಡು ಅವರಿದ್ದಲ್ಲಿಗೆ ಹೋಗಿಬಿಡುತ್ತಾರೆ (೨೬). ಭರತನೂ ಕೂಡ ವನವಾಸಿಯಾದ ಅಣ್ಣನನ್ನು ಹಿಂಬಾಲಿಸಿ ನಾರುಬಟ್ಟೆಯನ್ನುಟ್ಟು ಕಾಡಿಗೆ ಹೋಗಿ ವಾಸವಾಗಿರುವನು. ಶತ್ರುಘ್ನನೂ ಕೂಡ ಅವನೊಡನೆ ಹೋಗುವನು. ನಿರ್ಜನವಾಗಿ ಶೂನ್ಯವಾದ ಈ ರಾಜ್ಯವನ್ನು ನೀನೊಬ್ಬಳೇ ಆಳಬಹುದು! ಮರಗಳು ಮಾತ್ರ ನಿನ್ನ ರಾಜ್ಯದಲ್ಲಿ ಉಳಿಯಬಹುದು! ನೀನು ಕೆಟ್ಟವಳು. ಪ್ರಜೆಗಳಿಗೆ ಹಿಂಸೆಮಾಡಲು ಬದ್ಧಕಂಕಣ

ನ ಹಿ ತದ್ಭವಿತಾ ರಾಷ್ಟ್ರಂ ಯತ್ರ ರಾಮೋ ನ ಭೂಪತಿಃ ।
ತದ್ವನಂ ಭವಿತಾ ರಾಷ್ಟ್ರಂ ಯತ್ರ ರಾಮೋ ನಿವತ್ಸ್ಯತಿ ॥ ೨೯

ನ ಹ್ಯದತ್ತಾಂ ಮಹೀಂ ಪಿತ್ರಾ ಭರತಃ ಶಾಸ್ತುಮರ್ಹತಿ ।
ತ್ವಯಿ ವಾ ಪುತ್ರವದ್ವಸ್ತುಂ ಯದಿ ಜಾತೋ ಮಹೀಪತೇಃ ॥ ೩೦

ಯದ್ಯಪಿ ತ್ವಂ ಕ್ಷಿತಿತಲಾದ್ಗಗನಂ ಚೋತ್ಪತಿಷ್ಯಸಿ ।
ಪಿತೃವಂಶಚರಿತ್ರಜ್ಞಃ ಸೋಽನ್ಯಥಾ ನ ಕರಿಷ್ಯತಿ ॥ ೩೧

ತತ್ತ್ವಯಾ ಪುತ್ರಗರ್ಧಿನ್ಯಾ ಪುತ್ರಸ್ಯ ಕೃತಮಪ್ರಿಯಮ್ ।
ಲೋಕೇ ಹಿ ನ ಸ ವಿದ್ಯೇತ ಯೋ ನ ರಾಮಮನುವ್ರತಃ ॥ ೩೨

ದ್ರಕ್ಷ್ಯಸ್ಯದ್ಯೈವ ಕೈಕೇಯಿ ಪಶುವ್ಯಾಲಮೃಗದ್ವಿಜಾನ್ ।
ಗಚ್ಛತಃ ಸಹ ರಾಮೇಣ ಪಾದಪಾಂಶ್ಚ ತದುನ್ಮುಖಾನ್ ॥ ೩೩

ಅಥೋತ್ತಮಾನ್ಯಾಭರಣಾನಿ ದೇವಿ
ದೇಹಿ ಸ್ನುಷಾಯೈ ವ್ಯಪನೀಯ ಚೀರಮ್ ।

---

ಳಾಗಿದ್ದೀಯೆ (೨೭-೨೮). ರಾಮನು ಇಲ್ಲಿ ಅಧಿಪತಿಯಾಗದಿದ್ದರೆ ಇದೊಂದು ರಾಷ್ಟ್ರವಾಗಿ ಉಳಿಯುವುದೇ ಇಲ್ಲ. ರಾಮನು ಅರಣ್ಯದಲ್ಲಿದ್ದರೆ ಅರಣ್ಯವೇ ಒಂದು ರಾಷ್ಟ್ರವಾಗುತ್ತದೆ (೨೯). ಭರತನು ದಶರಥರಾಜನಿಗೆ ಹುಟ್ಟಿದ್ದು ನಿಜವಾದರೆ, ತಂದೆಯು ಕೈಯೆತ್ತಿ ಕೊಡದ ರಾಜ್ಯವನ್ನು ಎಂದಿಗೂ ಅವನು ಆಳಲಾರ; ಮಗನಂತೆ ನಿನ್ನಲ್ಲಿ ಬಾಳಲಾರ (೩೦). ನೀನೇನೋ ನೆಲದಿಂದ ಗಗನಮಂಡಲಕ್ಕೆ ನೆಗೆಯ ಬೇಕೆಂದಿದ್ದೀಯೆ. ಆದರೆ ಭರತನು ಪಿತೃವಂಶದ ಆಚಾರ ಸಂಪ್ರದಾಯಗಳನ್ನು ಬಲ್ಲವನು. ಅವನು ವಿಪರೀತವಾಗಿ ನಡೆಯ ತಕ್ಕವನಲ್ಲ(೩೧). ನೀನು ಮಗನ ಮೇಲೆನ ಪ್ರೀತಿಯಿಂದ ಅವನಿಗೆ ಅಪ್ರಿಯವಾದ ಕಾರ್ಯವನ್ನು ಮಾಡಿದ್ದೀಯೆ. ಏಕೆಂದರೆ, ರಾಮನನ್ನು ಪ್ರೀತಿಸದೆ ಇರತಕ್ಕವನು ಈ ಪ್ರಪಂಚದಲ್ಲಿ ಒಬ್ಬನೂ ಇಲ್ಲ(೩೨). ಎಲೆ ಕೈಕೇಯಿ, ಪಶು ಪಕ್ಷಿಗಳೂ ಮೃಗ ಸರ್ಪಗಳೂ ಸಹ ರಾಮನ ಜೊತೆಗೆ ಹೊರಟುಹೋಗುವುದನ್ನು ಇಂದೇ ನೀನು ಕಾಣುತ್ತೀಯೆ. ವೃಕ್ಷಗಳೂ ಅವನು ಹೋದ ಕಡೆಗೆ ಬಾಗಿ ನಿಲ್ಲುತ್ತವೆ (೩೩). ಆದ್ದರಿಂದ, ದೇವಿ, ಈ ನಾರುಬಟ್ಟೆಯನ್ನು ತೆಗೆಸಿ ನಿನ್ನ ಸೊಸೆಗೆ ಉತ್ತಮವಾದ ವಸ್ತ್ರಾಭರಣ

ನ ಚೀರಮಸ್ಯಾಃ ಪ್ರವಿಧೀಯತೇತಿ
ನ್ಯವಾರಯತ್ತದ್ವಸನಂ ವಸಿಷ್ಠಃ ।
ಏಕಸ್ಯ ರಾಮಸ್ಯ ವನೇ ನಿವಾಸ -
ಸ್ತ್ವಯಾ ವೃತಃ ಕೇಕಯರಾಜಪುತ್ರಿ ।
ವಿಭೂಷಿತೇಯಂ ಪ್ರತಿಕರ್ಮನಿತ್ಯಾ
ವಸತ್ವರಣ್ಯೇ ಸಹ ರಾಘವೇಣ ॥ ೩೫

ಯಾನೈಶ್ಚ ಮುಖ್ಯೈಃ ಪರಿಚಾರಕೈಶ್ಚ
ಸುಸಂವೃತಾ ಗಚ್ಛತು ರಾಜಪುತ್ರೀ ।
ವಸ್ತ್ರೈಶ್ಚ ಸರ್ವೈಃ ಸಹಿತಾ ವಿಧಾನೈ
ರ್ನೇಯಂ ವೃತಾ ತೇ ವನಸಂಪ್ರದಾನೇ ॥ ೩೬

ತಸ್ಮಿಂಸ್ತಥಾ ಜಲ್ಪತಿ ವಿಪ್ರಮುಖ್ಯೇ
ಗುರೌ ನೃಪಸ್ಯಾಪ್ರಮಿತಪ್ರಭಾವೇ ।

---

ಗಳನ್ನು ಕೊಡು; ಇವಳಿಗೆ ನಾರುಬಟ್ಟೆ ಯೋಗ್ಯವಲ್ಲ" ಎಂದು ಹೇಳಿ ವಸಿಷ್ಠರು ಸೀತೆಗೆ ನಾರುಬಟ್ಟೆಯನ್ನು ತಪ್ಪಿಸಲು ಪ್ರಯತ್ನಿಸಿದರು(೩೪). ಪುನಃ ಅವರು ಕೈಕೇಯಿಯನ್ನು ಕುರಿತು "ರಾಮನೊಬ್ಬನು ವನವಾಸ ಮಾಡಬೇಕೆಂದು ನೀನು ವರವನ್ನು ಕೇಳಿದ್ದೀಯೆ. ಹೀಗಿರುವಾಗ ಸದಾ ಅಲಂಕರಿಸಿಕೊಂಡಿರಬೇಕಾದ ಸೀತೆಯು ಅಲಂಕರಿಸಿಕೊಂಡಿರಲಿ. ವಸ್ತ್ರಾಭರಣಗಳಿಂದ ಭೂಷಿತಳಾಗಿ ವನದಲ್ಲಿ ಶ್ರೀರಾಮನೊಡನೆ ಇರಲಿ. ನೀನು ಕೇಕಯರಾಜನ ಪುತ್ರಿಯಾಗಿದ್ದೀಯೆ (೩೫). ನಿನ್ನಂತೆ ರಾಜಪುತ್ರಿಯಾದ ಇವಳು ಒಳ್ಳೆಯ ವಾಹನಗಳನ್ನೂ ಪರಿಚಾರಕರನ್ನೂ ಕರೆದುಕೊಂಡು ಹೋಗಲಿ. ಬೇಕಾದ ವಸ್ತ್ರಗಳನ್ನೂ ಉಪಕರಣಗಳನ್ನೂ ತೆಗೆದುಕೊಳ್ಳಲಿ. ಇವಳು (ತಾಪಸಿಯಂತೆ) ವನವಾಸಮಾಡಬೇಕೆಂದು ನೀನು ವರವನ್ನು ಕೇಳಿಲ್ಲ" ಎಂದರು (೩೬). ಹೀಗೆ ಕುಲಗುರುಗಳೂ ಮಹಾಪ್ರಭಾವ ಶಾಲಿಗಳೂ ಆದ ವಸಿಷ್ಠರು ಹೇಳುತ್ತಲೇ ಇದ್ದರು. ಇತ್ತ ಸೀತೆಯು ತನ್ನ

ನೈವ ಸ್ಮ ಸೀತಾ ವಿನಿವೃತ್ತಭಾವಾ
ಪ್ರಿಯಸ್ಯ ಭರ್ತುಃ ಪ್ರತಿಕಾರಕಾಮಾ ॥ ೩೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತತ್ರಿಂಶಃ ಸರ್ಗಃ

---

## ಅಷ್ಟಾತ್ರಿಂಶಃ ಸರ್ಗಃ

### ಜನಾಕ್ರೋಶಃ

ತಸ್ಯಾಂ ಚೀರಂ ವಸಾನಾಯಾಂ ನಾಥವತ್ಯಾಮನಾಥವತ್ ।
ಪ್ರಚುಕ್ರೋಶ ಜನಃ ಸರ್ವೋ ಧಿಕ್ತ್ವಾಂ ದಶರಥಂ ತ್ವಿತಿ ॥ ೧

ತೇನ ತತ್ರ ಪ್ರಣಾದೇನ ದುಃಖಿತಃ ಸ ಮಹೀಪತಿಃ ।
ಚಿಚ್ಛೇದ ಜೀವಿತೇ ಶ್ರದ್ಧಾಂ ಧರ್ಮೇ ಯಶಸಿ ಚಾತ್ಮನಃ ॥ ೨

ಸ ನಿಃಶ್ವಸ್ಯೋಷ್ಣಮೈಷ್ವಾಕಸ್ತಾಂ ಭಾರ್ಯಾಮಿದಮಬ್ರವೀತ್ ।
ಕೈಕೇಯಿ ಕುಶಚೀರೇಣ ನ ಸೀತಾ ಗಂತುಮರ್ಹತಿ ॥ ೩

---

ಪತಿಯ ವೇಷವನ್ನು ಅನುಕರಿಸಬೇಕೆಂದು ನಿಶ್ಚಯಿಸಿ ಮನಸ್ಸನ್ನು ಬದಲಿಸದೆ ನಾರುಬಟ್ಟೆಯನ್ನು ಧರಿಸಿದಳು (೩೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತೇಳನೆಯ ಸರ್ಗ

## ಸರ್ಗ ೩೮

ಜನರು ದಶರಥನನ್ನು ನಿಂದಿಸುವುದು. ದಶರಥನ ಸಂತಾಪ. ಕೌಸಲ್ಯೆಯನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ತಂದೆಗೆ ಶ್ರೀರಾಮನ ಪ್ರಾರ್ಥನೆ.

ಸೀತೆಯು ದಿಕ್ಕಿಲ್ಲದ ಅನಾಥೆಯಂತೆ ನಾರುಬಟ್ಟೆಯನ್ನುಡಲು ಅಲ್ಲಿದ್ದ ಜನರು 'ಛೀ!ದಶರಥ, ನಿನಗೆ ಧಿಕ್ಕಾರ!' ಎಂದು ಆಕ್ರೋಶದಿಂದ ಕೂಗಿದರು. ಅದನ್ನು ಕೇಳಿ ದಶರಥನು ಪರಮದುಃಖಿತನಾಗಿ ತಾನು ಬದುಕುವ ಆಸೆಯನ್ನು ತೊರೆದನು. ತಾನು ಸಂಪಾದಿಸಿದ ಧರ್ಮ ಕೀರ್ತಿಗಳು ಅಲ್ಲಿಗೆ ಮುಕ್ತಾಯಗೊಂಡವೆಂದು ಭಾವಿಸಿದನು (೧-೨). ಅವನು ಬಿಸಿಯಾಗಿ ನಿಟ್ಟುಸಿರು ತೆಗೆದು ಕೈಕೇಯಿಯನ್ನು ಕುರಿತು ಹೇಳಿದನು:

ಸುಕುಮಾರಾ ಚ ಬಾಲಾ ಚ ಸತತಂ ತಚ ಸುಖೋಚಿತಾ ।
ನೇಯಂ ವನಸ್ಯ ಯೋಗ್ಯೇತಿ ಸತ್ಯಮಾಹ ಗುರುರ್ಮಮ ॥ ೪

ಇಯಂ ಹಿ ಕಸ್ಯಾಪಕರೋತಿ ಕಂಚಿತ್
ತಪಸ್ವಿನೀ ರಾಜವರಸ್ಯ ಕನ್ಯಾ ।
ಯಾ ಚೀರಮಾಸಾದ್ಯ ಜನಸ್ಯ ಮಧ್ಯೇ
ಸ್ಥಿತಾ ವಿಸಂಜ್ಞಾ ಶ್ರಮಣೇವ ಕಾಚಿತ್ ॥ ೫

ಚೀರಾಣ್ಯಪಾಸ್ಯಾಜ್ಞನಕಸ್ಯ ಕನ್ಯಾ
ನೇಯಂ ಪ್ರತಿಜ್ಞಾ ಮಮ ದತ್ತಪೂರ್ವಾ।
ಯಥಾಸುಖಂ ಗಚ್ಛತು ರಾಜಪುತ್ರೀ
ವನಂ ಸಮಗ್ರಾ ಸಹ ಸರ್ವರತ್ನೈಃ ॥ ೬

ಅಜೀವನಾರ್ಹೇಣ ಮಯಾ ನೃಶಂಸಾ
ಕೃತಾ ಪ್ರತಿಜ್ಞಾ ನಿಯಮೇನ ತಾವತ್ ।
ತ್ವಯಾ ಹಿ ಬಾಲ್ಯಾತ್ ಪ್ರತಿಪನ್ನಮೇತತ್
ತನ್ಮಾಂ ದಹೇದ್ವೇಣುಮಿವಾತ್ಮಪುಷ್ಪಮ್ ॥

---

"ಕೈಕೇಯಿ, ಸೀತೆಯು ನಾರುಬಟ್ಟೆಯನ್ನುಟ್ಟು ಹೋಗಕೂಡದು. ಇವಳು ಸುಕುಮಾರಾಂಗಿ, ಬಾಲಕಿ, ಸುಖದಲ್ಲಿ ಬೆಳೆದವಳು. ಇವಳಿಗೆ ವನವಾಸವು ಯೋಗ್ಯವಲ್ಲವೆಂದು ನನ್ನ ಗುರುಗಳು ಹೇಳುವುದು ಸತ್ಯ (೩-೪). ಸಾಧ್ವಿಯಾದ ಈ ರಾಜಕುಮಾರಿಯು ಯಾರಿಗೆ ಯಾವ ಅಪಕಾರಮಾಡಿದ್ದಾಳೆ ? ಇವಳು ನಾರುಬಟ್ಟೆಯನ್ನುಟ್ಟು ಏನೂ ಅರಿಯದೆ ತಪಸ್ವಿನಿಯಂತೆ ಜನರ ಮುಂದೆ ನಿಂತಿದ್ದಾಳಲ್ಲ(೫). ಈ ಜನಕಪುತ್ರಿಯು ನಾರುಸೀರೆಯನ್ನು ತೆಗೆದುಹಾಕಬೇಕು. ಈ ವಿಷಯದಲ್ಲಿ ನಾನೇನೂ ನಿನಗೆ ಪ್ರತಿಜ್ಞೆಮಾಡಿಕೊಟ್ಟಿಲ್ಲ. ಈ ರಾಜಪುತ್ರಿಯು ವನಕ್ಕೆ ಹೋಗುವುದಾದರೆ ಸಮಸ್ತ ರತ್ನಾಭರಣಗಳನ್ನು ಧರಿಸಿಕೊಂಡೇ ಹೋಗಲಿ (೬). ನನಗೆ ಸಾವು ಒದಗಿ ಬಂದುದರಿಂದ ಇಂಥ ಕ್ರೂರವಾದ ಪ್ರತಿಜ್ಞೆಯನ್ನು ನಿನಗೆ ಮಾಡಿಕೊಟ್ಟೆನು. ನೀನು ಮೂರ್ಖತನದಿಂದ ಈ ಕೆಲಸಕ್ಕೆ ಕೈಹಾಕಿದ್ದೀಯೆ. ಬಿದಿರಿನ ಹೂವು

ರಾಮೇಣ ಯದಿ ತೇ ಪಾಪೇ ಕಿಂಚಿತ್ಕೃತಮಶೋಭನಮ್ ।
ಅಪಕಾರಃ ಕ ಇಹ ತೇ ವೈದೇಹ್ಯಾ ದರ್ಶಿತೋಽಧಮೇ ॥ ೮

ಮೃಗೀವೋತ್ಫುಲ್ಲನಯನಾ ಮೃದುಶೀಲಾ ತಪಸ್ವಿನೀ ।
ಅಪಕಾರಂ ಕಮಿಹ ತೇ ಕರೋತಿ ಜನಕಾತ್ಮಜಾ ॥ ೯

ನನು ಪರ್ಯಾಪ್ತಮೇತತ್ತೇ ಪಾಪೇ ರಾಮವಿವಾಸನಮ್ ।
ಕಿಮೇಭಿಃ ಕೃಪಣೈರ್ಭೂಯಃ ಪಾತಕೈರಪಿ ತೇ ಕೃತೈಃ ॥ ೧೦

ಪ್ರತಿಜ್ಞಾತಂ ಮಯಾ ತಾವತ್ತ್ವಯೋಕ್ತಂ ದಲಿವಿ ಶೃಣ್ವತಾ ।
ರಾಮಂ ಯದಭಿಷೇಕಾಯ ತ್ವಮಿಹಾಗತಮಬ್ರವೀಃ ॥ ೧೧

ತತ್ತ್ವೇತತ್ ಸಮತಿಕ್ರಮ್ಯ ನಿರಯಂ ಗಂತುಮಿಚ್ಛಸಿ ।
ಮೈಥಿಲೀಮಪಿ ಯಾ ಹಿ ತ್ವಮೀಕ್ಷಸೇ ಚೀರವಾಸಿನೀಮ್ ॥ ೧೨

ಇತೀವ ರಾಜಾ ವಿಲಪನ್ಮಹಾತ್ಮಾ
ಶೋಕಸ್ಯ ನಾಂತಂ ಸ ದದರ್ಶ ಕಿಂಚಿತ್ ।

---

ಬಿದಿರನ್ನೇ ನಾಶಮಾಡುವಂತೆ ನನ್ನ ಮಾತು ನನ್ನನ್ನೇ ಸುಟ್ಟುಹಾಕುತ್ತಿದೆ (೭). ಏ ಪಾಪಿ, ರಾಮನು ಒಂದು ವೇಳೆ ಏನಾದರೂ ತಪ್ಪನ್ನು ಮಾಡಿದ್ದರೂ ಸೀತೆಯು ನಿನಗೆ ಮಾಡಿದ ಅಪಕಾರವೇನು? ಅಧಮ ಹೆಂಗಸೆ, ಅವಳಲ್ಲಿ ಯಾವ ತಪ್ಪನ್ನು ಕಂಡೆ?(೮). ಇವಳು ವಿಶಾಲನೇತ್ರೆಯಾಗಿ ಹೆಣ್ಣು ಜಿಂಕೆಯಂತೆ ಇದ್ದಾಳೆ. ಮೃದುಸ್ವಭಾವದವಳು. ಏನನ್ನೂ ಅರಿಯದವಳು. ಈ ಜನಕಪುತ್ರಿ ನಿನಗೆ ಯಾವ ಅಪಕಾರವನ್ನು ಮಾಡಬಹುದು ? ಎಲೆ ಪಾಪಿ, ರಾಮನನ್ನು ಹೊರಡಿಸುವುದೊಂದೇ ನಿನಗೆ ಬೇಕಾದಷ್ಟಾಯಿತು. ಮತ್ತೆ ಮತ್ತೆ ಹೀನವಾದ ಈ ಪಾಪಕೃತ್ಯಗಳನ್ನು ಮಾಡುವುದೇಕೆ?(೯-೧೦). ಅಭಿಷೇಕಾರ್ಥವಾಗಿ ನಾನು ಕರೆಸಿದೆನೆಂದು ರಾಮನು ಇಲ್ಲಿಗೆ ಬಂದಾಗ ನೀನು ಹೇಳಿದ್ದೆಷ್ಟು? ಅಷ್ಟನ್ನು ಮಾತ್ರ ನಿನ್ನ ಮಾತಿಗೆ ಸಿಕ್ಕಿ ನಡೆಸಿಕೊಡುವುದಾಗಿ ನಾನು ಹೇಳಿದ್ದೆ. ಈಗ ಅದನ್ನು ಉಲ್ಲಂಘಿಸಿ ಮೈಥಿಲಿಯೂ ನಾರುಸೀರೆಯನ್ನುಡಬೇಕೆಂದು ಬಯಸುತ್ತೀಯಲ್ಲ. ಯಾವ ನರಕಕ್ಕೆ ಹೋಗಬೇಕೆಂದಿದ್ದೀಯೆ?" ಎಂದು ಹಲುಬಿದನು (೧೧-೧೨). ಹೀಗೆ ಗೋಳಾಡುತ್ತಿದ್ದ ಆ ಮಹಾಪುರುಷನ ಶೋಕಕ್ಕೆ ಪಾರವೇ ಉಳಿಯಲಿಲ್ಲ.

ಭೃಶಾತುರತ್ವಾಚ್ಚ ಪಪಾತ ಭೂಮೌ
ತೇನೈವ ಪುತ್ರವ್ಯಸನೇ ನಿಮಗ್ನಃ ॥ ೧೩

ಏವಂ ಬ್ರುವಂತಂ ಪಿತರಂ ರಾಮಃ ಸಂಪ್ರಸ್ಥಿತೋ ವನಮ್ ।
ಅವಾಕ್ಶಿರಸಮಾಸೀನಮಿದಂ ವಚನಮಬ್ರವೀತ್ ॥ ೧೪

ಇಯಂ ಧಾರ್ಮಿಕ ಕೌಸಲ್ಯಾ ಮಮ ಮಾತಾ ಯಶಸ್ವಿನೀ ।
ವೃದ್ಧಾ ಚಾಕ್ಷುದ್ರಶೀಲಾ ಚ ನ ಚ ತ್ವಾಂ ದೇವ ಗರ್ಹತೇ ॥ ೧೫

ಮಯಾ ವಿಹೀನಾಂ ವರದ ಪ್ರಪನ್ನಾಂ ಶೋಕಸಾಗರಮ್ ।
ಅದೃಷ್ಟಪೂರ್ವವ್ಯಸನಾಂ ಭೂಯಃ ಸಂಮಂತುಮರ್ಹಸಿ ॥ ೧೬

ಪುತ್ರಶೋಕಂ ಯಥಾ ನಾರ್ಹೇತ್ವಯಾ ಪೂಜ್ಯೇನ ಪೂಜಿತಾ ।
ಮಾಂ ಹಿ ಸಂಚಿಂತಯಂತೀಯಂ ತ್ವಯಿ ಜೀವೇತ್ತಪಸ್ವಿನೀ ॥ ೧೭

ಇಮಾಂ ಮಹೇಂದ್ರೋಪಮ ಜಾತಗರ್ಧಿನೀಂ
ತಥಾ ವಿಧಾತುಂ ಜನನೀಂ ಮಮಾರ್ಹಸಿ ।

---

ಅವನು ಪುತ್ರವ್ಯಸನದಿಂದ ದುಃಖಸಂತಪ್ತನಾಗಿ ನೆಲದವೇಲೆ ಬಿದ್ದು ಹೋದನು (೧೩). ಅನಂತರ ವನಪ್ರಯಾಣಕ್ಕೆ ಸಿದ್ಧನಾದ ಶ್ರೀರಾಮನು, ತಲೆಯನ್ನು ತಗ್ಗಿಸಿಕೊಂಡು ಹಲುಬುತ್ತಿದ್ದ ತಂದೆಯನ್ನು ನೋಡಿ "ಮಹಾರಾಜ, ನೀನು ಸಮಸ್ತ ಧರ್ಮಗಳನ್ನೂ ಬಲ್ಲವನು. ಯಶಸ್ವಿನಿಯಾದ ನನ್ನ ತಾಯಿ ಕೌಸಲ್ಯೆ ವೃದ್ಧೆಯಾಗಿದ್ದಾಳೆ. ಬಹಳ ದೊಡ್ಡ ಸ್ವಭಾವದವಳು. ನಿನ್ನನ್ನು ಎಂದಿಗೂ ನಿಂದಿಸ ತಕ್ಕವಳಲ್ಲ(೧೪-೧೫). ಇವಳು ನನ್ನ ವಿರಹದಿಂದ ಶೋಕಸಮುದ್ರದಲ್ಲಿ ಮುಳುಗಿದ್ದಾಳೆ. ಇಂಥ ಕಷ್ಟವನ್ನು ಕಂಡವಳಲ್ಲ. ಇವಳನ್ನು ನೀನು ಆದರದಿಂದ ವಿಶೇಷವಾಗಿ ನೋಡಿಕೊಳ್ಳಬೇಕು. ನನ್ನ ಈ ಪ್ರಾರ್ಥನೆಯನ್ನು ನಡೆಸಿಕೊಡು (೧೬). ಪೂಜ್ಯನಾದ ನೀನು ನನ್ನ ತಾಯಿಯನ್ನು ಆದರಿಸುತ್ತ ಅವಳು ಪುತ್ರಶೋಕದಿಂದ ಕಂಗೆಡದಂತೆ ನೋಡಿಕೊಳ್ಳಬೇಕು. ಅವಳು ನನ್ನ ಚಿಂತೆಯಲ್ಲಿ ಮುಳುಗಿ ಶೋಚನೀಯಳಾಗಿದ್ದಾಳೆ. ನಿನ್ನನ್ನೇ ನಂಬಿ ಜೀವಹಿಡಿದಿರಲಿ (೧೭). ಮಹಾರಾಜ, ನನ್ನಲ್ಲಿ ವಾತ್ಸಲ್ಯವನ್ನಿಟ್ಟಿರುವ ನನ್ನ ತಾಯಿ

ಯಥಾ ವನಸ್ಥೇ ಮಯಿ ಶೋಕಕರ್ಶಿತಾ
ನ ಜೀವಿತಂ ನ್ಯಸ್ಯ ಯಮಕ್ಷಯಂ ವ್ರಜೇತ್ ॥ ೧೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾತ್ರಿಂಶಃ ಸರ್ಗಃ

---

## ಏಕೋನಚತ್ವಾರಿಂಶಃ ಸರ್ಗಃ

### ವನಗಮನಾಪೃಚ್ಛಾ

ರಾಮಸ್ಯ ತು ವಚಃ ಶ್ರುತ್ವಾ ಮುನಿವೇಷಧರಂ ಚ ತಮ್ ।
ಸಮೀಕ್ಷ್ಯ ಸಹ ಭಾರ್ಯಾಭೀ ರಾಜಾ ವಿಗತಚೇತನಃ ॥ ೧

ನೈನಂ ದುಃಖೇನ ಸಂತಪ್ತಃ ಪ್ರತ್ಯವೈಕ್ಷತ ರಾಘವಮ್ ।
ನ ಚೈನಮಭಿಸಂಪ್ರೇಕ್ಷ್ಯ ಪ್ರತ್ಯಭಾಷತ ದುರ್ಮನಾಃ ॥ ೨

ಸ ಮುಹೂರ್ತಮಿವಾಸಂ ಜ್ಞೋ ದುಃಖಿತಶ್ಚ ಮಹೀಪತಿಃ ।
ವಿಲಲಾಪ ಮಹಾಬಾಹೂ ರಾಮಮೇವಾನುಚಿಂತಯನ್ ॥ ೩

---

ಪುತ್ರಶೋಕದಿಂದ ಕೊರಗುತ್ತ, ನಾನು ವನವಾಸದಲ್ಲಿರುವಾಗ ಮರಣ ಹೊಂದದಂತೆ ನೋಡಿಕೊಳ್ಳುವ ಭಾರ ನಿನಗೆ ಸೇರಿದೆ" ಎಂದನು (೧೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂವತ್ತೆಂಟನೆಯ ಸರ್ಗ

---

## ಸರ್ಗ ೩೯

ಶ್ರೀರಾಮನನ್ನು ವನಕ್ಕೆ ಕಳಿಸಲು ಸುಮಂತ್ರನು ರಥವನ್ನು ಸಿದ್ಧಪಡಿಸುವುದು. ಸೀತೆಗೆ ಕೌಸಲ್ಯೆಯ ಹಿತೋಪದೇಶ. ರಾಮನು ತಾಯಂದಿರನ್ನು ಬೀಳ್ಕೊಡುವುದು.

ಶ್ರೀರಾಮನು ಮುನಿವೇಷಧಾರಿಯಾಗಿ ನಿಂತು ಈ ಮಾತುಗಳನ್ನು ಹೇಳುತ್ತಿರಲು ದಶರಥನೂ ಅವನ ಪತ್ನಿಯರೂ ದಿಙ್ಮೂಢರಾಗಿ ಕೇಳುತ್ತಿದ್ದರು. ದುಃಖತಪ್ತನಾದ ರಾಜನು ತಲೆಯೆತ್ತಿ ರಾಘವನನ್ನು ನೋಡಲಾರದೆ ಹೋದನು. ಅವನೊಡನೆ ಮಾತನಾಡಲೂ ಅಸಮರ್ಥನಾದನು (೧-೨). ದುಃಖಾತಿರೇಕದಿಂದ ದಶರಥನು ಸ್ವಲ್ಪ ಹೊತ್ತು ಎಚ್ಚರದಪ್ಪಿದಂತಿದ್ದು

ಮನ್ಯೇ ಖಲು ಮಯಾ ಪೂರ್ವಂ ವಿವತ್ಸಾ ಬಹವಃ ಕೃತಾಃ ।
ಪ್ರಾಣಿನೋ ಹಿಂಸಿತಾ ವಾಪಿ ತಸ್ಮಾದಿದಮುಪಸ್ಥಿತಮ್ ॥ ೪

ನ ತ್ವೇವಾನಾಗತೇ ಕಾಲೇ ದೇಹಾಚ್ಚ್ಯವತಿ ಜೀವಿತಮ್ ।
ಕೈಕೇಯ್ಯಾ ಕ್ಲಿಶ್ಯಮಾನಸ್ಯ ಮೃತ್ಯುರ್ಮಮ ನ ವಿದ್ಯತೇ ॥ ೫

ಯೋಽಹಂ ಪಾವಕಸಂಕಾಶಂ ಪಶ್ಯಾಮಿ ಪುರತಃ ಸ್ಥಿತಮ್ ।
ವಿಹಾಯ ವಸನೇ ಸೂಕ್ಷ್ಮೇ ತಾಪಸಾಚ್ಛಾದಮಾತ್ಮಜಮ್ ॥ ೬

ಏಕಸ್ಯಾಃ ಖಲು ಕೈಕೇಯ್ಯಾಃ ಕೃತೇಽಯಂ ಕ್ಲಿಶ್ಯತೇ ಜನಃ ।
ಸ್ವಾರ್ಥೇ ಪ್ರಯತಮಾನಾಯಾಃ ಸಂಶ್ರಿತ್ಯ ನಿಕೃತಿಂ ತ್ವಿಮಾಮ್ ॥ ೭

ಏವಮುಕ್ತ್ವಾ ತು ವಚನಂ ಬಾಷ್ಪೇಣ ಪಿಹಿತೇಂದ್ರಿಯಃ ।
ರಾಮೇತಿ ಸಕೃದೇವೋಕ್ತ್ವಾ ವ್ಯಾಹರ್ತುಂ ನ ಶಶಾಕ ಹ ॥ ೮

ಸಂಜ್ಞಾಂ ತು ಪ್ರತಿಲಭ್ಯೈವ ಮುಹೂರ್ತಾತ್ ಸ ಮಹೀಪತಿಃ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ಸುಮಂತ್ರಮಿದಮಬ್ರವೀತ್ ॥ ೯

---

ರಾಮನನ್ನೇ ನೆನೆಯುತ್ತ ನಾನಾ ರೀತಿಯಲ್ಲಿ ಹಲುಬುವುದಕ್ಕೆ ತೊಡಗಿದನು: (೩) "ನಾನು ಪೂರ್ವಜನ್ಮದಲ್ಲಿ ಎಷ್ಟು ಗೋವುಗಳಿಗೆ ಕರುಗಳನ್ನಗಲಿಸಿದೆನೊ! ಎಷ್ಟು ಜನರಿಗೆ ಮಕ್ಕಳನ್ನಗಲಿಸಿ ಹಿಂಸೆಕೊಟ್ಟೆನೊ! ಆ ಪಾಪದಿಂದ ಈ ಕಷ್ಟವು ನನಗೆ ಗಂಟುಬಿದ್ದಿದೆ(೪). ಕಾಲವು ಬಂದ ಹೊರತು ಪ್ರಾಣವು ದೇಹವನ್ನು ಬಿಟ್ಟುಹೋಗುವುದಿಲ್ಲ. ಕೈಕೇಯಿಯು ಇಷ್ಟು ಕ್ಲೇಶವನ್ನು ತಂದೊಡ್ಡಿದರೂ ನನಗೆ ಸಾವು ಬರಲಿಲ್ಲ. ಯಜ್ಞಪುರುಷನಂತೆ ತೇಜಸ್ವಿಯಾದ ಮಗನು ಉತ್ತಮವಸ್ತ್ರಗಳನ್ನು ತೆಗೆದುಹಾಕಿ ತಾಪಸನ ವೇಷದಲ್ಲಿ ನನ್ನೆದುರಿಗೆ ನಿಂತಿರುವುದನ್ನು ನೋಡಬೇಕಾಯಿತೆ!(೫-೬). ಶಾಠ್ಯದಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿರುವ ಒಬ್ಬ ಕೈಕೇಯಿಗೋಸ್ಕರ ಇಷ್ಟು ಜನರು ಸಂಕಟಪಡಬೇಕಾಯಿತಲ್ಲ!" ಎಂದು ಮರುಗಿದನು. ಅತ್ತು ಅತ್ತು ಕಣ್ಣೀರು ಸುರಿಸಿ ಅವನ ಇಂದ್ರಿಯಗಳು ಸೋತವು. ಕೊನೆಗೆ ಆ ದಶರಥನು ಒಂದುಸಲ 'ರಾಮಾ' ಎಂದು ಕೂಗಿ ಮುಂದೆ ಹೇಳಲಾರದೆ ಮೂರ್ಛೆಹೋದನು(೭-೮). ಸ್ವಲ್ಪ ಹೊತ್ತಿನಮೇಲೆ ಆತನಿಗೆ ಎಚ್ಚರ

ಔಪವಾಹ್ಯಂ ರಥಂ ಯುಕ್ತ್ವಾ ತ್ವಮಾಯಾಹಿ ಹಯೋತ್ತಮೈಃ ।
ಪ್ರಾಪಯೈನಂ ಮಹಾಭಾಗಮಿತೋ ಜನಪದಾತ್ ಪರಮ್ ॥ ೧೦

ಏವಂ ಮನ್ಯೇ ಗುಣವತಾಂ ಗುಣಾನಾಂ ಫಲಮುಚ್ಯತೇ ।
ಪಿತ್ರಾ ಮಾತ್ರಾ ಚ ಯಃ ಸಾಧುರ್ವೀರೋ ನಿರ್ವಾಸ್ಯತೇ ವನಮ್ ॥

ರಾಜ್ಞೋ ವಚನಮಾಜ್ಞಾಯ ಸುಮಂತ್ರಃ ಶೀಘ್ರವಿಕ್ರಮಃ ।
ಯೋಜಯಿತ್ವಾ ಯಯೌ ತತ್ರ ರಥಮಶ್ವೈರಲಂಕೃತಮ್ ॥ ೧೨

ತಂ ರಥಂ ರಾಜಪುತ್ರಾಯ ಸೂತಃ ಕನಕಭೂಷಿತಮ್ ।
ಆಚಚಕ್ಷೇಂಽಜಲಿಂ ಕೃತ್ವಾ ಯುಕ್ತಂ ಪರಮವಾಜಿಭಿಃ ॥ ೧೩

ರಾಜಾ ಸತ್ವರಮಾಹೂಯ ವ್ಯಾಪೃತಂ ವಿತ್ತಸಂಚಯೇ ।
ಉವಾಚ ದೇಶಕಾಲಜ್ಞಂ ನಿಶ್ಚಿತಂ ಸರ್ವತಃ ಶುಚಿಮ್ ॥ ೧೪

ವಾಸಾಂಸಿ ಚ ಮಹಾರ್ಹಾಣಿ ಭೂಷಣಾನಿ ವರಾಣಿ ಚ ।
ಸರ್ವಾಣ್ಯೇತಾನಿ ಸಂಖ್ಯಾಯ ವೈದೇಹ್ಯಾಃ ಕ್ಷಿಪ್ರಮಾನಯ ॥ ೧೫

---

ಬಂದಿತು. ಆಗ ದಶರಥನು ಕಣ್ಣಿಂದ ಬಾಷ್ಪವನ್ನು ಹರಿಸುತ್ತ ಸುಮಂತ್ರನನ್ನು ಕರೆದು "ರಾಜಯೋಗ್ಯವಾದ ರಥಕ್ಕೆ ಉತ್ತಮಾಶ್ವಗಳನ್ನು ಕಟ್ಟಿ ತೆಗೆದುಕೊಂಡು ಬಾ. ಈ ಮಹಾಭಾಗನನ್ನು ಈ ದೇಶದ ಆಚೆಗೆ ಕರೆದುಕೊಂಡುಹೋಗಿ ಬಿಡು(೯-೧೦). ಗುಣವಂತರ ಸದ್ಗುಣಗಳಿಗೆ ಇದೇ ಫಲವೆಂದು ತೋರುತ್ತದೆ. ಸತ್ಪುರುಷನೂ ವೀರನೂ ಆದ ಮಗನನ್ನು ತಂದೆ ತಾಯಿಗಳೇ ಕಾಡುಪಾಲುಮಾಡಬೇಕಾಯಿತು" ಎಂದನು. ಆಗ ಸುಮಂತ್ರನು ತ್ವರೆಯಿಂದ ಹೋಗಿ ಒಂದು ರಥಕ್ಕೆ ಅಶ್ವಗಳನ್ನು ಕಟ್ಟಿ ತಂದನು (೧೧-೧೨). ಆ ಸೂತನು ಸುವರ್ಣಭೂಷಿತವಾದ ರಥಕ್ಕೆ ಉತ್ತಮಾಶ್ವಗಳನ್ನು ಕಟ್ಟಿ ತಂದುನಿಲ್ಲಿಸಿರುವ ವಿಷಯವನ್ನು ರಾಜಕುಮಾರನಾದ ಶ್ರೀರಾಮನಿಗೆ ನಿವೇದಿಸಿದನು(೧೩). ಕೂಡಲೆ ದಶರಥನು ದೇಶ ಕಾಲಜ್ಞನೂ ನಿಷ್ಕಲ್ಮಷಹೃದಯನೂ ಆದ ಕೋಶಾಧಿಕಾರಿಯನ್ನು ಕರೆದು ನಿಶ್ಚಯವನ್ನು ಸೂಚಿಸುವ ಧ್ವನಿಯಿಂದ "ಸೀತಾದೇವಿಗೆ ಹದಿನಾಲ್ಕು ವರ್ಷಗಳವರೆಗೆ ಬೇಕಾದಷ್ಟನ್ನು ಎಣಿಸಿ ಉತ್ತಮೋತ್ತಮ ವಸ್ತ್ರಗಳನ್ನೂ ಶ್ರೇಷ್ಠ

ನರೇಂದ್ರೇಣೈವಮುಕ್ತಸ್ತು ಗತ್ವಾ ಕೋಶಗೃಹಂ ತತಃ ।
ಪ್ರಾಯಚ್ಛತ್ ಸರ್ವಮಾಹೃತ್ಯ ಸೀತಾಯೈ ಕ್ಷಿಪ್ರಮೇವ ತತ್ ॥ ೧೬

ಸಾ ಸುಜಾತಾ ಸುಜಾತಾನಿ ವೈದೇಹೀ ಪ್ರಸ್ಥಿತಾ ವನಮ್ ।
ಭೂಷಯಾಮಾಸ ಗಾತ್ರಾಣಿ ತೈರ್ವಿಚಿತ್ರೈರ್ವಿಭೂಷಣೈಃ ॥ ೧೭

ವ್ಯರಾಜಯತ ವೈದೇಹೀ ವೇಶ್ಮ ತತ್ ಸುವಿಭೂಷಿತಾ ।
ಉದ್ಯತೋಽಶುಮತಃ ಕಾಲೇ ಖಂ ಪ್ರಭೇವ ವಿವಸ್ವತಃ ॥ ೧೮

ತತ್ರ ಸೀತಾ ಮಹಾಭಾಗಾ ವವಂದೇ ಶ್ವಶ್ರುಪಾದಯೋಃ ।
ತಾಂ ಭುಜಾಭ್ಯಾಂ ಪರಿಷ್ವಜ್ಯ ಶ್ವಶ್ರೂರ್ವಚನಮಬ್ರವೀತ್ ॥ ೧೯

ಅನಾಚರಂತೀಂ ಕೃಪಣಂ ಮೂರ್ಧ್ನ್ಯುಪಾಘ್ರಾಯ ಮೈಥಿಲೀಮ್ ।
ಅಸತ್ಯಃ ಸರ್ವಲೋಕೇಽಸ್ಮಿನ್ ಸತತಂ ಸತ್ಕೃತಾಃ ಪ್ರಿಯೈಃ ॥ ೨೦

ಭರ್ತಾರಂ ನಾನುಮನ್ಯಂತೇ ವಿನಿಪಾತತತಗತಂ ಸ್ತ್ರಿಯಃ ।
ಏಷ ಸ್ವಭಾವೋ ನಾರೀಣಾಮನುಭೂಯ ಪುರಾ ಸುಖಮ್ ॥ ೨೧

---

ವಾದ ಆಭರಣಗಳನ್ನೂ ಬೇಗನೆ ತೆಗೆದುಕೊಂಡು ಬಾ" ಎಂದು ಆಜ್ಞಾಪಿಸಿದನು (೧೪-೧೫). ಮಹಾರಾಜನ ಆಜ್ಞೆಯಂತೆ ಕೋಶಾಧಿಕಾರಿಯು ಅರಮನೆಯ ಭಂಡಾರಕ್ಕೆ ಹೋಗಿ ಅವನು ಹೇಳಿದಷ್ಟು ವಸ್ತ್ರಾಭರಣಗಳನ್ನು ಶೀಘ್ರದಲ್ಲಿ ತಂದು ಸೀತೆಗೆ ಒಪ್ಪಿಸಿದನು (೧೬). ಸತ್ಕುಲಪ್ರಸೂತಳಾದ ಆ ಸೀತೆಯು ವನಪ್ರಯಾಣಕ್ಕೆ ಸಿದ್ಧಳಾಗಿ ನಾನಾಬಗೆಯ ಆಭರಣಗಳಿಂದ ತನ್ನ ಸುಂದರಾಂಗಗಳನ್ನು ಅಲಂಕರಿಸಿಕೊಂಡಳು (೧೭). ಉದಯಕಾಲದಲ್ಲಿ ಸೂರ್ಯನ ಪ್ರಭೆಯು ಆಕಾಶದಲ್ಲಿ ಹರಡುವಂತೆ ಭೂಷಿತಳಾದ ವೈದೇಹಿಯ ಕಾಂತಿಯು ಸುತ್ತಲೂ ಪ್ರಸರಿಸಿ ಅರಮನೆಯನ್ನು ಬೆಳಗಿತು. ಅನಂತರ ಸೀತೆಯು ಅತ್ತೆಯಾದ ಕೌಸಲ್ಯೆಯ ಪಾದಗಳಿಗೆ ವಂದಿಸಲು ಕೌಸಲ್ಯೆಯು ಅವಳನ್ನು ಅಪ್ಪಿಕೊಂಡಳು (೧೮-೧೯). ಉದಾರಚರಿತೆಯಾದ ಅವಳ ಶಿರಸ್ಸನ್ನಾಘ್ರಾಣಿಸುತ್ತ ಕೌಸಲ್ಯೆಯು ಹೀಗೆಂದಳು: "ವತ್ಸೆ, ಲೋಕದಲ್ಲಿ ಅಸತಿಯರಾದ ಸ್ತ್ರೀಯರನೇಕರಿದ್ದಾರೆ. ಪತಿಯು ಪ್ರಿಯವಸ್ತುಗಳಿಂದ ಸದಾ ಸತ್ಕರಿಸುತ್ತಿದ್ದರೂ ಅವನಿಗೆ ಕಷ್ಟಕಾಲ ಬಂದಾಗ ಅನಾದರದಿಂದ ಕಾಣುತ್ತಾರೆ.

ಅಲ್ಪಾಮಪ್ಯಾಪದಂ ಪ್ರಾಪ್ಯ ದುಷ್ಯಂತಿ ಪ್ರಜಹತ್ಯಪಿ ।
ಅಸತ್ಯಶೀಲಾ ವಿಕೃತಾ ದುರ್ಗಾ ಅಹೃದಯಾಃ ಸದಾ ॥ ೨೨

ಯುವತ್ಯಃ ಪಾಪಸಂಕಲ್ಪಾಃ ಕ್ಷಣಮಾತ್ರವಿರಾಗಿಣಃ ।
ನ ಕುಲಂ ನ ಕೃತಂ ವಿದ್ಯಾ ನ ದತ್ತಂ ನಾಪಿ ಸಂಗ್ರಹಃ ॥ ೨೩

ಸ್ತ್ರೀಣಾಂ ಗೃಹ್ಣಾತಿ ಹೃದಯಮನಿತ್ಯಹೃದಯಾ ಹಿ ತಾಃ ।
ಸಾಧ್ವೀನಾಂ ತು ಸ್ಥಿತಾನಾಂ ಹಿ ಶೀಲೇ ಸತ್ಯೇ ಶ್ರುತೇ ಸ್ಥಿತೇ ॥ ೨೪

ಸ್ತ್ರೀಣಾಂ ಪವಿತ್ರಂ ಪರಮಂ ಪತಿರೇಕೋ ವಿಶಿಷ್ಯತೇ ।
ಸ ತ್ವಯಾ ನಾವಮಂತವ್ಯಃ ಪುತ್ರಃ ಪ್ರವ್ರಾಜಿತೋ ವನಮ್ ॥ ೨೫

ತವ ದೇವಸಮಸ್ತ್ವೇಷ ನಿರ್ಧನಃ ಸಧನೋಽಪಿ ವಾ ।
ವಿಜ್ಞಾಯ ವಚನಂ ಸೀತಾ ತಸ್ಯಾ ಧರ್ಮಾರ್ಥಸಂಹಿತಮ್ ॥ ೨೬

---

ಇದು ಅವರ ಸ್ವಭಾವವೆಂದು ತೋರುತ್ತದೆ (೨೦-೨೧). ಮೊದಲು ಯಥೇಷ್ಟವಾಗಿ ಸೌಖ್ಯವನ್ನನುಭವಿಸುತ್ತಿದ್ದರೂ ಪತಿಗೆ ಸ್ವಲ್ಪ ವಿಪತ್ತು ಬಂದರೆ ದುಷ್ಟತನದಿಂದ ನಡೆಯುತ್ತಾರೆ. ಅವನನ್ನು ಬಿಟ್ಟುಬಿಡುವುದಕ್ಕೂ ಹಿಂಜರಿಯುವುದಿಲ್ಲ. ಆ ಸ್ತ್ರೀಯರು ಸುಳ್ಳು ಹೇಳುತ್ತಾರೆ. ಗಂಡನನ್ನು ಅಣಕಿಸುತ್ತಾರೆ. ದುಶ್ಶೀಲರೂ ಹೃದಯಶೂನ್ಯರೂ ಆಗಿರುತ್ತಾರೆ (೨೨). ಅವರ ಉದ್ದೇಶವೇ ಕೆಟ್ಟದು. ಅನುರಾಗವೇ ಕ್ಷಣಿಕ. ಆ ಹೆಂಗಸರ ಹೃದಯವು ಸತ್ಕುಲಕ್ಕೆ ಒಲಿಯದು. ಉಪಕಾರವನ್ನು ಗಣಿಸದು. ವಿದ್ಯೆಯನ್ನು ಮನ್ನಿಸದು. ಸಮ್ಮಾನವನ್ನು ಲಕ್ಷಿಸದು. ಅಗ್ನಿಸಾಕ್ಷಿಕವಾಗಿ ಪಾಣಿ ಗ್ರಹಣಮಾಡಿದ್ದೇನೆಂಬುದನ್ನು ಗಮನಿಸದು (೨೩). ಅವರ ಮನಸ್ಸು ಬಹಳ ಚಂಚಲ. ಆದರೆ ಪತಿವ್ರತೆಯರಾದ ಸಾಧ್ವಿಯರು ಶೀಲ,ಸತ್ಯ,ಗುರು ಹಿರಿಯರ ಉಪದೇಶ ಕುಲೋಚಿತವಾದ ನಡತೆಗಳನ್ನು ಮೀರದೆ ಸ್ಥಿರವಾಗಿ ನಿಲ್ಲುತ್ತಾರೆ. ಅವರಿಗೆ ಪತಿಯೊಬ್ಬನೇ ಪರಮಪಾವನವಸ್ತು. ಆದ್ದರಿಂದ, ವತ್ಸೆ, ವನವಾಸಕ್ಕೆ ಹೊರಟಿರುವ ನನ್ನ ಪುತ್ರನನ್ನು ಅನಾದರದಿಂದ ಕಾಣಬೇಡ (೨೪-೨೫). ಇವನು ಧನಿಕವಾದರೂ ದರಿದ್ರನಾದರೂ ನಿನಗೆ ಮಾತ್ರ ದೇವರಿಗೆ ಸಮಾನ" ಎಂದಳು. ಹೀಗೆ ಕೌಸಲ್ಯೆಯು ನುಡಿದ ಧರ್ಮ

ಕೃತಾಂಜಲಿರುವಾಚೇದಂ ಶ್ವಶ್ರೂಮಭಿಮುಖೇ ಸ್ಥಿತಾ ।
ಕರಿಷ್ಯೇ ಸರ್ವಮೇವಾಹಮಾರ್ಯಾ ಯದನುಶಾಸ್ತಿ ಮಾಮ್ ॥ ೨೭

ಅಭಿಜ್ಞಾಸ್ಮಿ ಯಥಾಭರ್ತುರ್ವರ್ತಿತವ್ಯಂ ಶ್ರುತಂ ಚ ಮೇ ।
ನ ಮಾಮಸಜ್ಜನೇನಾರ್ಯಾ ಸಮಾನಯಿತುಮರ್ಹತಿ ॥ ೨೮

ಧರ್ಮಾದ್ವಿಚಲಿತುಂ ನಾಹಮಲಂ ಚಂದ್ರಮಿವ ಪ್ರಭಾ ।
ನಾತಂತ್ರೀ ವಾದ್ಯತೇ ವೀಣಾ ನಾಚಕ್ರೋ ವರ್ತತೇ ರಥಃ ॥ ೨೯

ನಾಪತಿಃ ಸುಖಮೇಧೇತ ಯಾ ಸ್ಯಾದಪಿ ಶತಾತ್ಮಜಾ।
ಮಿತಂ ದದಾತಿ ಹಿ ಪಿತಾ ಮಿತಂ ಮಾತಾ ಮಿತಂ ಸುತಃ॥ ೩೦

ಅಮಿತಸ್ಯ ಹಿ ದಾತಾರಂ ಭರ್ತಾರಂ ಕಾ ನ ಪೂಜಯೇತ್ ।
ಸಾಹಮೇವಂಗತಾ ಜ್ಯೇಷ್ಠಾಶ್ರುತಧರ್ಮಪರಾವರಾ ॥ ೩೧

ಆರ್ಯೇ ಕಿಮವಮನ್ಯೇಯ ಸ್ತ್ರೀಣಾಂ ಭರ್ತಾ ಹಿ ದೈವತಮ್ ।
ಸೀತಾಯಾ ವಚನಂ ಶ್ರುತ್ವಾ ಕೌಸಲ್ಯಾ ಹೃದಯಂಗಮಮ್ ॥

---

ಸಂದೇಶದ ಆಶಯವನ್ನು ಸೀತೆಯು ಗ್ರಹಿಸಿ, ತನ್ನ ಅತ್ತೆಯ ಎದುರಿಗೆ ಕೈಮುಗಿದುಕೊಂಡು"ದೇವಿ, ನೀನು ಆಜ್ಞೆಮಾಡಿದಂತೆಯೇ ನಡೆದುಕೋಳ್ಳುವೆನು (೨೬-೨೭). ಪತಿಯ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ನಾನು ಬಲ್ಲೆ. ಗುರುಹಿರಿಯರು ನನಗೆ ಹೇಳಿಕೊಟ್ಟಿದ್ದಾರೆ. ದುಷ್ಟಸ್ತ್ರೀಯರೊಂದಿಗೆ ನನ್ನನ್ನು ಹೋಲಿಸಬಾರದು (೨೮). ಚಂದ್ರಿಕೆಯು ಹೇಗೆ ಚಂದ್ರವನ್ನು ಬಿಟ್ಟಿರದೊ ಹಾಗೆ ನಾನು ಧರ್ಮವನ್ನು ಬಿಟ್ಟು ಹೋಗ ತಕ್ಕವಳಲ್ಲ. ತಂತಿಯಿಲ್ಲದೆ. ವೀಣೆಯು ನುಡಿಯದು. ಚಕ್ರವಿಲ್ಲದೆ ರಥವು ನಡೆಯದು (೨೯). ಹಾಗೆ ನೂರು ಮಕ್ಕಳ ತಾಯಿಯಾದರೂ ಪತಿಯಿಲ್ಲದೆ ಇದ್ದರೆ ಹೆಂಗಸಿಗೆ ಸೌಖ್ಯವಿಲ್ಲ. ತಂದೆಯಾಗಲಿ ತಾಯಿಯಾಗಲಿ ಮಗನಾಗಲಿ ಕೊಡುವುದಕ್ಕೆ ಮಿತಿಯುಂಟು. ಆದರೆ ಪತಿಯು ಕೊಡುವುದಕ್ಕೆ ಮಿತಿಯಿಲ್ಲ.ಅಂಥ ಪತಿಯನ್ನು ಪೂಜಿಸಿ ಗೌರವಿಸದವರುಂಟೆ? ನಾನು ಹಿರಿಯರಿಂದ ಸಾಮಾನ್ಯ ವಿಶೇಷ ಧರ್ಮಗಳೆಲ್ಲವನ್ನೂ ಕೇಳಿ . ತಿಳಿದು ಈ ನಿಶ್ಚಯಕ್ಕೆ ಬಂದಿದ್ದೇನೆ (೩೦-೩೧). ಅಮ್ಮ, ನಾನು ಪತಿಯನ್ನು ಎಂದಿಗಾದರೂ ಅಲಕ್ಷಿಸುವೆನೆ? ಹೆಂಗಸರಿಗೆ ಪತಿಯೇ ದೇವರಲ್ಲವೆ?" ಎಂದಳು. ಹೀಗೆ

ಶುದ್ಧಸತ್ತ್ವಾ ಮುಮೋಚಾಶ್ರು ಸಹಸಾ ದುಃಖಹರ್ಷಜಮ್ ।
ತಾಂ ಪ್ರಾಂಜಲಿರಭಿಕ್ರಮ್ಯ ಮಾತೃಮಧ್ಯೇಽತ್ತಿಸತ್ಕೃತಾಮ್ ॥ ೩೩

ರಾಮಃ ಪರಮಧರ್ಮಾತ್ಮಾ ಮಾತರಂ ವಾಕ್ಯಮಬ್ರವೀತ್ ।
ಅಂಬ ಮಾ ದುಃಖಿತಾ ಭೂಸ್ತ್ವಂ ಪಶ್ಯೇಸ್ತ್ವಂ ಪಿತರಂ ಮಮ ॥ ೩೪

ಕ್ಷಯೋ ಹಿ ವನವಾಸಸ್ಯ ಕ್ಷಿಪ್ರಮೇವ ಭವಿಷ್ಯತಿ ।
ಸುಪ್ರಾಯಾಸ್ತೇ ಗಮಿಷ್ಯಂತಿ ನವ ವರ್ಷಾಣಿ ಪಂಚ ಚ ॥ ೩೫

ಸಾ ಸಮಗ್ರಮಿಹ ಪ್ರಾಪ್ತಂ ಮಾಂ ದ್ರಕ್ಷ್ಯಸಿ ಸುಹೃದ್ವೃತಮ್ ।
ಏತಾವದಭಿನೀತಾರ್ಥಮುಕ್ತ್ವಾ ಸ ಜನನೀಂ ವಚಃ ॥ ೩೬

ತ್ರಯಃಶತಶತಾರ್ಧಾಶ್ಚ ದದರ್ಶಾವೇಕ್ಷ್ಯ ಮಾತರಃ ।
ತಾಶ್ಚಾಪಿ ಸ ತಥೈವಾರ್ತಾ ಮಾತ್ಯಾರ್ದಶರಥಾತ್ಮಜಃ ॥ ೩೭

ಧರ್ಮಯುಕ್ತಮಿದಂ ವಾಕ್ಯಂ ನಿಜಗಾದ ಕೃತಾಂಜಲಿಃ ।
ಸಂವಾಸಾತ್ ಪರುಷಂ ಕಿಂಚಿದಜ್ಞಾನಾದಪಿ ಯತ್ ಕೃತಮ್ ॥ ೩೮

---

ಮನಮೆಚ್ಚುವಂತೆ ನುಡಿದ ಸೀತೆಯ ವಚನವನ್ನಾಲಿಸಿ ಸಾತ್ತ್ವಿಕಳಾದ ಕೌಸಲ್ಯೆಗೆ ದುಃಖಹರ್ಷಗಳೆರಡೂ ಸೇರಿ ಕಂಬನಿ ಉಕ್ಕಿತು (೩೨-೩೩). ಸರ್ವರೂ ಕೌಸಲ್ಯೆಯನ್ನು ನೋಡಿ ಮರುಗುತ್ತ ಸಂತೈಸುತ್ತಿದ್ದರು. ಆಮೇಲೆ ಪರಮ ಧಾರ್ಮಿಕನಾದ ಶ್ರೀರಾಮನು ತಾಯಂದಿರ ಮಧ್ಯದಲ್ಲಿದ್ದ ಕೌಸಲ್ಯೆಯ ಬಳಿಗೆ ಹೋಗಿ ಕೈಮುಗಿದು "ಅಮ್ಮ, ನೀನು ಶೋಕಿಸಬೇಡ. ನನ್ನ ತಂದೆಯ ಯೋಗಕ್ಷೇಮ ವನ್ನು ನೋಡುತ್ತಿರು(೩೪). ವನವಾಸವು ಬೇಗನೆ ಮುಗಿದು, ಮಲಗಿ ಏಳುವಷ್ಟರಲ್ಲಿ ಹದಿನಾಲ್ಕು ವರ್ಷಗಳು ಕಳೆದು ಹೋಗುವವು. ನಾನು ಕ್ಷೇಮದಿಂದ ಬಂದು ಮಿತ್ರರೊಡನೆ ಕೂಡಿರುವುದನ್ನು ನೀನು ನೋಡಬಹುದು" ಎಂದು ನಿಷ್ಕೃಷ್ಟವಾಗಿ ತನ್ನ ಆಶಯವನ್ನು ನಿವೇದಿಸಿದನು (೩೫-೩೬). ಅನಂತರ ಕೌಸಲ್ಯೆಯಂತೆಯೇ ದುಃಖಾರ್ತರಾಗಿದ್ದ ಮುನ್ನೂರೈವತ್ತು ಮಾತೆಯರನ್ನು ಕಂಡು ನಮಸ್ಕರಿಸಿ ಕೈಮುಗಿದುಕೊಂಡು "ಮಾತೆಯರೆ, ನಾನು ಸಲಿಗೆಯಿಂದಲೊ ಅಜ್ಞಾನ ದಿಂದಲೊ ಯಾವ ಅಪರಾಧವನ್ನು ಮಾಡಿದ್ದರೂ ಮನ್ನಿಸಬೇಕು. ನಾನು ಹೋಗಿ

ತನ್ಮೇ ಸಮನುಜಾನೀತ ಸರ್ವಾಶ್ಚಾಮಂತ್ರಯಾಮಿ ವಃ ।
ವಚನಂ ರಾಘವಸ್ಯೈತದ್ಧರ್ಮಯುಕ್ತಂ ಸಮಾಹಿತಮ್ ॥ ೩೯

ಶುಶ್ರುವುಸ್ತಾಃ ಸ್ತ್ರಿಯಃ ಸರ್ವಾಃ ಶೋಕೋಪಹತಚೇತಸಃ ।
ಜಜ್ಞೇಽಥ ತಾಸಾಂ ಸಂನಾದಃ ಕ್ರೌಂಚೀನಾಮಿವ ನಿಸ್ವನಃ ॥ ೪೦

ಮಾನವೇಂದ್ರಸ್ಯ ಭಾರ್ಯಾಣಾಮೇವಂ ವದತಿ ರಾಘವೇ ॥
ಮುರಜಪಣವಮೇಘಘೋಷವ-
ದ್ದಶರಥವೇಶ್ಮ ಬಭೂವ ಯತ್ ಪುರಾ ।
ವಿಲಪಿತಪರಿದೇವನಾಕುಲಂ
ವ್ಯಸನಗತಂ ತದಭೂತ್ ಸುದುಃಖಿತಮ್ ॥ ೪೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಚತ್ವಾರಿಂಶಃ ಸರ್ಗಃ

ಬರಲು ನೀವೆಲ್ಲರೂ ಅನುಜ್ಞೆಯನ್ನು ಕೊಡಿರಿ" ಎಂದು ಪ್ರಾರ್ಥಿಸಿದನು (೩೭-೩೮). ಶ್ರೀರಾಮನ ಧರ್ಮಯುಕ್ತವಾದ ಈ ಸಾಂತ್ವನವಾಕ್ಯವನ್ನು ಕೇಳಿ ಆ ರಾಜಸ್ತ್ರೀಯರೆಲ್ಲರೂ ಶೋಕದಿಂದ ಕಂಗೆಟ್ಟು ಗಟ್ಟಿಯಾಗಿ ಅಳತೊಡಗಿದರು. ಕ್ರೌಂಚಪಕ್ಷಿಗಳ ಕೂಗಿನಂತೆ ಅವರ ರೋದನಧ್ವನಿಯು ಹರಡಿತು(೩೯-೪೦). ಯಾವ ದಶರಥನ ಅರಮನೆಯು ಹಿಂದೆ ಮೇಘ ಗರ್ಜನೆಯಂತಿರುವ ಭೇರೀಮೃದಂಗಗಳ ಮಂಗಳಧ್ವನಿಯಿಂದ ಇಟ್ಟಣಿಸಿದ್ದಿತೊ, ಆ ಅರಮನೆಯು ಈಗ ದುಃಖವ್ಯಸನಗಳ ತವರುಮನೆಯಾಗಿ ಚೀರಾಟ-ಗೋಳಾಟಗಳಿಂದ ತುಂಬಿಹೋಯಿತು (೪೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ
ಮೂವತ್ತೊಂಬತ್ತನೆಯ ಸರ್ಗ

## ಚತ್ವಾರಿಂಶಃ ಸರ್ಗಃ

### ಪೌರಾದ್ಯನುವ್ರಜ್ಯಾ

ಅಥ ರಾಮಶ್ಚ ಸೀತಾ ಚ ಲಕ್ಷ್ಮಣಶ್ಚ ಕೃತಾಂಜಲಿಃ ।
ಉಪಸಂಗೃಹ್ಯ ರಾಜಾನಂ ಚಕ್ರುರ್ದೀನಾಃ ಪ್ರದಕ್ಷಿಣಮ್ ॥ ೧

ತಂ ಚಾಪಿ ಸಮನುಜ್ಞಾಪ್ಯ ಧರ್ಮಜ್ಞಃ ಸೀತಯಾ ಸಹ ।
ರಾಘವಃ ಶೋಕಸಂಮೂಢೋ ಜನನೀಮಭ್ಯವಾದಯತ್ ॥ ೨

ಅನ್ವಕ್ಷಂ ಲಕ್ಷ್ಮಣೋ ಭ್ರಾತುಃ ಕೌಸಲ್ಯಾಮಭ್ಯವಾದಯತ್ ।
ಅಥ ಮಾತುಃ ಸುಮಿತ್ರಾಯಾ ಜಗ್ರಾಹ ಚರಣೌ ಪುನಃ ॥ ೩

ತಂ ವಂದಮಾನಂ ರುದತೀ ಮಾತಾ ಸೌಮಿತ್ರಿಮಬ್ರವೀತ್ ।
ಹಿತಕಾಮಾ ಮಹಾಬಾಹುಂ ಮೂರ್ಧ್ನ್ಯುಪಾಘ್ರಾಯ ಲಕ್ಷ್ಮಣಮ್

ಸೃಷ್ಟಸ್ತ್ವಂ ವನವಾಸಾಯ ಸ್ವನುರಕ್ತಃ ಸುಹೃಜ್ಜನೇ ।
ರಾಮೇ ಪ್ರಮಾದಂ ಮಾ ಕಾರ್ಷೀಃ ಪುತ್ರ ಭ್ರಾತರಿ ಗಚ್ಛತಿ ॥ ೫

## ಸರ್ಗ ೪೦

### ಶ್ರೀರಾಮನು ಸೀತಾಲಕ್ಷ್ಮಣರೊಡನೆ ವನಕ್ಕೆ ಪ್ರಯಾಣಮಾಡುವುದು. ದಶರಥ ಕೌಸಲ್ಯೆ ಮತ್ತು ಪ್ರಜೆಗಳ ವಿಲಾಪ.

ಅನಂತರ ಶ್ರೀರಾಮನೂ ಸೀತೆಯೂ ಲಕ್ಷ್ಮಣನೂ ದಶರಥನ ಪಾದಗಳನ್ನು ಮುಟ್ಟಿ ಅಭಿವಾದನೆಮಾಡಿದರು. (ಆತನ ಶೋಕವನ್ನು ನೋಡಿ) ಮರುಗುತ್ತ ಬದ್ಧಾಂಜಲಿಗಳಾಗಿ ಪ್ರದಕ್ಷಿಣೆಮಾಡಿ ಹೋಗಿಬರುತ್ತೇವೆಂದು ತಿಳಿಸಿದರು. ಧರ್ಮಜ್ಞನಾದ ಶ್ರೀರಾಮನು ತಾಯಿಯ ದುಃಖವನ್ನು ಕಂಡು ವ್ಯಥೆಪಡುತ್ತ ಅವಳಿಗೆ ಅಭಿವಂದಿಸಿದನು (೧-೨). ಆಮೇಲೆ ಲಕ್ಷ್ಮಣನು ಅಣ್ಣನ ಜನನಿಯಾದ ಕೌಸಲ್ಯೆಗೆ ವಂದಿಸಿ, ಅನಂತರ ತನ್ನ ಜನನಿಯಾದ ಸುಮಿತ್ರೆಯ ಪಾದಗಳನ್ನು ಹಿಡಿದು ನಮಸ್ಕರಿಸಿದನು. (೩). ಸುಮಿತ್ರೆಯು ಅಳುತ್ತ ಲಕ್ಷ್ಮಣನ ಶಿರಸ್ಸನ್ನಾಘ್ರಾಣಿಸಿ ಅವನಿಗೆ ಶ್ರೇಯಸ್ಸಾಗಲೆಂದು ಹರಸಿ "ವತ್ಸ, ನೀನು ವನವಾಸಕ್ಕಾಗಿ ಜನಿಸಿದಂತಾಯಿತು. ರಾಮನು ನಿನಗೆ ಆಪ್ತಮಿತ್ರನಾಗಿ ಅಣ್ಣನಾಗಿರುವನು. ವನಕ್ಕೆ ಹೋದಾಗ

ವ್ಯಸನೀ ವಾ ಸಮೃದ್ಧೋ ವಾ ಗತಿರೇಷ ತವಾನಘ ।
ಏಷ ಲೋಕೇ ಸತಾಂ ಧರ್ಮೋ ಯಜ್ಜ್ಯೇಷ್ಠವಶಗೋ ಭವೇತ್ ॥ ೬

ಇದಂ ಹಿ ವೃತ್ತಮುಚಿತಂ ಕುಲಸ್ಯಾಸ್ಯ ಸನಾತನಮ್ ।
ದಾನಂ ದೀಕ್ಷಾ ಚ ಯಜ್ಞೇಷು ತನುತ್ಯಾಗೋ ಮೃಧೇಷು ಚ ॥ ೭

ಲಕ್ಷ್ಮಣಂ ತ್ವೇವಮುಕ್ತ್ವಾ ಸಾ ಸಂಸಿದ್ಧಂ ಪ್ರಿಯರಾಘವಮ್ ।
ಸುಮಿತ್ರಾ ಗಚ್ಛ ಗಚ್ಛೇತಿ ಪುನಃ ಪುನರುವಾಚ ತಮ್ ॥ ೮

ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್।
ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾಸುಖಮ್ ॥ ೯

ತತಃ ಸುಮಂತ್ರಃ ಕಾಕುತ್ಸ್ಥಂ ಪ್ರಾಂಜಲಿರ್ವಾಕ್ಯಮಬ್ರವೀತ್ ।
ವಿನೀತೋ ವಿನಯಜ್ಞಶ್ಚ ಮಾತಲಿರ್ವಾಸವಂ ಯಥಾ ॥ ೧೦

ರಥಮಾರೋಹ ಭದ್ರಂ ತೇ ರಾಜಪುತ್ರ ಮಹಾಯಶಃ ।
ಕ್ಷಿಪ್ರಂ ತ್ವಾಂ ಪ್ರಾಪಯಿಷ್ಯಾಮಿ ಯತ್ರ ಮಾಂ ರಾಮ ವಕ್ಷ್ಯಸಿ ॥ ೧೧

---

ಅವನಲ್ಲಿ ಅತಿಶಯವಾದ ಪ್ರೀತಿಯನ್ನಿಟ್ಟಿರು. ಎಂದೂ ತಪ್ಪಿ ನಡೆಯಬೇಡ (೪-೫). ಅವನು ಕಷ್ಟದಲ್ಲಿರಲಿ-ಸುಖದಲ್ಲಿರಲಿ, ನಿನಗೆ ಅವನೇ ಗತಿಯೆಂದು ತಿಳಿದುಕೊ. ಅಣ್ಣನಿಗೆ ಅಧೀನವಾಗಿ ನಡೆದುಕೊಳ್ಳುವುದು ಲೋಕದಲ್ಲಿ ಸತ್ಪುರುಷರ ಧರ್ಮ (೬). ಇದು ನಮ್ಮ ಇಕ್ಷ್ವಾಕುವಂಶಕ್ಕೆ ಹಿಂದಿನಿಂದ ಬಂದ ಅನುರೂಪವಾದ ನಡತೆ. ದಾನ, ಯಜ್ಞದೀಕ್ಷೆ, ಯುದ್ಧದಲ್ಲಿ ದೇಹ ತ್ಯಾಗ-ಇವು ನಮ್ಮ ವಂಶಕ್ಕೆ ಬಂದ ಸನಾತನಧರ್ಮ" ಎಂದು ಹೇಳಿದಳು (೭). ಶ್ರೀರಾಮನಲ್ಲಿ ಅನುರಕ್ತನಾಗಿ ವನಪ್ರಯಾಣಕ್ಕೆ ಸಿದ್ಧನಾಗಿದ್ದ ಲಕ್ಷ್ಮಣನನ್ನು ನೋಡುತ್ತ ಸುಮಿತ್ರೆಯು "ಹೋಗು ಹೋಗು" ಎಂದು ಆದರದಿಂದ ಮತ್ತೆ ಮತ್ತೆ ನುಡಿದಳು. ಪುನಃ ಲಕ್ಷ್ಮಣನನ್ನು ಕುರಿತು "ಮಗು, ರಾಮನನ್ನು ದಶರಥನೆಂದು ಭಾವಿಸು. ಜಾನಕಿಯನ್ನು ನಾನೆಂದು ಭಾವಿಸು. ಅಡವಿಯನ್ನು ಅಯೋಧ್ಯೆಯೆಂದು ತಿಳಿ. ಸುಖವಾಗಿ ಹೋಗಿ ಬಾ" ಎಂದಳು (೮-೯). ಅನಂತರ ಸುಮಂತ್ರನು ವಿನಯದಿಂದ ಶ್ರೀರಾಮನಿಗೆ ಕೈಮುಗಿದು, ಮಾತಲಿಯು ದೇವೇಂದ್ರನಿಗೆ ಅರಿಕೆ ಮಾಡುವಂತೆ "ರಾಜಕುಮಾರ, ನಿನಗೆ ಮಂಗಳವಾಗಲಿ! ರಥವನ್ನು ಹತ್ತಬಹುದು.

ಆಯಸಂ ಹೃದಯಂ ನೂನಂ ರಾಮಮಾತುರಸಂಶಯಮ್ ।
ಯದ್ದೇವಗರ್ಭಪ್ರತಿಮೇ ವನಂ ಯಾತಿ ನ ಭಿದ್ಯತೇ ॥ ೨೩

ಕೃತಕೃತ್ಯಾ ಹಿ ವೈದೇಹೀ ಛಾಯೇವಾನುಗತಾ ಪತಿಮ್ ।
ನ ಜಹಾತಿ ರತಾ ಧರ್ಮೇ ಮೇರುಮರ್ಕಪ್ರಭಾ ಯಥಾ ॥ ೨೪

ಅಹೋ ಲಕ್ಷ್ಮಣ ಸಿದ್ಧಾರ್ಥಃ ಸತತಂ ಪ್ರಿಯವಾದಿನಂ ।
ಭ್ರಾತರಂ ದೇವಸಂಕಾಶಂ ಯಸ್ತ್ವಂ ಪರಿಚರಿಷ್ಯಸಿ ॥ ೨೫

ಮಹತ್ಯೇಷಾ ಹಿ ತೇ ಸಿದ್ಧಿರೇಷ ಚಾಭ್ಯುದಯೋ ಮಹಾನ್ ।
ಏಷ ಸ್ವರ್ಗಸ್ಯ ಮಾರ್ಗಶ್ಚ ಯದೇನಮನುಗಚ್ಛಸಿ ॥ ೨೬

ಏವಂ ವದಂತಸ್ತೇ ಸೋಢುಂ ನ ಶೇಕುರ್ಬಾಷ್ಪಮಾಗತಮ್ ।
ನರಾಸ್ತಮನುಗಚ್ಛಂತಃ ಪ್ರಿಯಮಿಕ್ಷ್ವಾಕುನಂದನಮ್ ॥ ೨೭

ಅಥ ರಾಜಾ ವೃತಃ ಸ್ತ್ರೀಭಿರ್ದೀನಾಚೇತನಃ ।
ನಿರ್ಜಗಾಮ ಪ್ರಿಯಂ ಪುತ್ರಂ ದ್ರಕ್ಷ್ಯಾಮೀತಿ ಬ್ರುವನ್ ಗೃಹಾತ್ ॥ ೨೮

---

ಅಬ್ಬ! ಕೌಸಲ್ಯೆಯ ಹೃದಯವು ನಿಸ್ಸಂದೇಹವಾಗಿ ಕಬ್ಬಿಣದಿಂದ ಆಗಿರಬೇಕು. ದೇವಕುಮಾರನಂಥ ಮಗನು ಕಾಡುಪಾಲಾಗಿ ಹೋಗುತ್ತಿದ್ದರೂ ಒಡೆದು ಹೋಗದೆ ಇದೆಯಲ್ಲ!(೨೩). ನೆರಳಿನಂತೆ ಗಂಡನ ಹಿಂದೆ ಹೊರಟಿರುವ ಸೀತೆಯೇ ಧನ್ಯಳು. ಧರ್ಮಶೀಲಳಾದ ಈಕೆ ಪತಿಯನ್ನು ಬಿಟ್ಟಿರಳು. ಸೂರ್ಯಪ್ರಭೆಯು ಮೇರುವನ್ನು ಬಿಟ್ಟಿರದು. ಆಹಾ! ಲಕ್ಷ್ಮಣ, ನೀನೇ ಧನ್ಯ! ಪ್ರಿಯಂವದನಾಗಿ ದೇವತೆಯಂತಿರುವ ಅಣ್ಣನನ್ನು ಎಡೆಬಿಡದೆ ಸೇವಿಸುತ್ತೀಯೆ (೨೪-೨೫). ಲಕ್ಷ್ಮಣ, ಶ್ರೀರಾಮನನ್ನು ಸದಾ ಅನುಸರಿಸಿಕೊಂಡಿದ್ದೀಯಲ್ಲ. ಇದೇ ನಿನಗೆ ತಪಃಸಿದ್ಧಿ. ಇದೇ ನಿನಗೆ ಶ್ರೇಯಸ್ಸು. ಇದೇ ನಿನಗೆ ಸ್ವರ್ಗಮಾರ್ಗ." ಹೀಗೆ ಹೇಳುತ್ತ ಪ್ರೀತಿಪಾತ್ರನಾದ ಶ್ರೀರಾಮನನ್ನು ಹಿಂಬಾಲಿಸಿ ಓಡಿಬರುತ್ತಿದ್ದ ಜನರು ಉಕ್ಕುತ್ತಿದ್ದ ಬಾಷ್ಪದ ವೇಗವನ್ನು ತಡೆಯದಾದರು (೨೬-೨೭). ಅಷ್ಟರಲ್ಲಿ ದಶರಥರಾಜನು ದೈನ್ಯದಿಂದ ಸಂಕಟಪಡುತ್ತ "ನನ್ನ ಮುದ್ದುಮಗನನ್ನು ಇನ್ನೊಮ್ಮೆ ನೋಡುವೆನು" ಎಂದು ಹೇಳುತ್ತ ಅರಮನೆಯಿಂದ ಹೊರಟನು. ದೀನರಾದ

ಪ್ರತಿಯಾತೇ ಮಹಾರಣ್ಯಂ ಚಿರರಾತ್ರಾಯ ರಾಘವೇ ।
ಬಭೂವ ನಗರೇ ಮೂರ್ಚ್ಛಾ ಬಲಮೂರ್ಚ್ಛಾ ಜನಸ್ಯ ಚ ॥ ೧೮

ತತ್ಸಮಾಕುಲಸಂಭ್ರಾಂತಂ ಮತ್ತಸಂಕುಪಿತದ್ವಿಪಮ್ ।
ಹಯಶಿಂಜಿತನಿರ್ಘೋಷಂ ಪುರಮಾಸೀನ್ಮಹಾಸ್ವನಮ್ ॥ ೧೯

ತತಃ ಸಬಾಲವೃದ್ಧಾ ಸಾ ಪುರೀ ಪರಮಪೀಡಿತಾ ।
ರಾಮಮೇವಾಭಿದುದ್ರಾವ ಘರ್ಮಾರ್ತಾ ಸಲಿಲಂ ಯಥಾ ॥ ೨೦

ಪಾರ್ಶ್ವತಃ ಪೃಷ್ಠತಶ್ಚಾಪಿ ಲಂಬಮಾನಾಸ್ತದುನ್ಮುಖಾಃ ।
ಬಾಷ್ಪಪೂರ್ಣಮುಖಾಃ ಸರ್ವೇ ತಮೂಚುರ್ಭೃಶನಿಸ್ವನಾಃ ॥ ೨೧

ಸಂಯಚ್ಛ ವಾಜಿನಾಂ ರಶ್ಮೀನ್ ಸೂತ ಯಾಹಿ ಶನೈಃ ಶನೈಃ ।
ಮುಖಂ ದ್ರಕ್ಷ್ಯಾಮ ರಾಮಸ್ಯ ದುರ್ದರ್ಶಂ ನೋ ಭವಿಷ್ಯತಿ ॥ ೨೨

---

ವಾಯುವೇಗದಿಂದ ಓಡಬಲ್ಲ ಅಶ್ವಗಳನ್ನು ಕೈಬಿಟ್ಟು ಹುರಿದುಂಬಿಸಿದನು. ಶ್ರೀರಾಮಚಂದ್ರನು ದೀರ್ಘಕಾಲ ವಾಸಮಾಡುವುದಕ್ಕಾಗಿ ಮಹಾರಣ್ಯಕ್ಕೆ ಹೊರಡಲು, ಅಲ್ಲಿದ್ದ ಚತುರಂಗಬಲವು ಕಂಗೆಟ್ಟಿತು; ಪ್ರಜೆಗಳು ಮೂರ್ಛೆ ಹೋದರು (೧೭-೧೮). ಏನು ಮಾಡಬೇಕೆಂದು ತಿಳಿಯದೆ ಜನರೆಲ್ಲರೂ ಕ್ಷುಬ್ಧರಾದರು. ಮದ್ದಾನೆಗಳು ಸಿಟ್ಟಿನಿಂದ ಹುಚ್ಚೆದ್ದವು. ಕುದುರೆಗಳು ಕೆನೆದವು. ಒಡವೆಗಳು ಝಣಝಣ ಎಂದವು. ಎಲ್ಲೆಲ್ಲಿಯೂ ಹಾಹಾರವವು ಮುಸುಕಿತು (೧೯). ಬಿಸಿಲಿನಿಂದ ಬೆಂಡಾದವರು ನೀರಿನ ಬಳಿಗೆ ಓಡುವಂತೆ, ಆಬಾಲವೃದ್ಧರಾದಿಯಾಗಿ ದುಃಖಿತವಾದ ಅಯೋಧ್ಯಾನಗರವೇ ಹಿಂದೆ ಓಡತೊಡಗಿತು (೨೦). ಸಕಲ ಜನರೂ ರಥದ ಎಡಕ್ಕೆ ಬಲಕ್ಕೆ ಹಿಂದೆ ಸುತ್ತಲೂ ಮುತ್ತಿಕೊಂಡು ರಾಮನನ್ನೇ ನೋಡುತ್ತ ಕಣ್ಣೀರು ಸುರಿಸುತ್ತ ಸುಮಂತ್ರನಿಗೆ ಗಟ್ಟಿಯಾಗಿ ಕೂಗಿ ಹೇಳುತ್ತಿದ್ದರು (೨೧). : "ಹೇ ಸಾರಥಿ, ಕುದುರೆಗಳ ಲಗಾಮನ್ನು ಎಳೆದು ಹಿಡಿ. ಮೆಲ್ಲಮೆಲ್ಲಗೆ ಹೋಗು. ಶ್ರೀರಾಮನ ಮುಖವನ್ನು ಒಂದು ಬಾರಿ ಚೆನ್ನಾಗಿ ನೋಡುತ್ತೇವೆ. ಇನ್ನು ಮೇಲೆ ಅವನ ಮುಖದರ್ಶನವು ನಮಗೆ ದುರ್ಲಭವಾಗುತ್ತದೆ (೨೨).

ಸುಸ್ರಾವ ನಯನೈಃ ಸ್ತ್ರೀಣಾಮಸ್ರಮಾಯಾಸಸಂಭವಮ್ ।
ಮೀನಸಂಕ್ಷೋಭಚಲಿತೈಃ ಸಲಿಲಂ ಪಂಕಜೈರಿವ ॥ ೩೫

ದೃಷ್ಟ್ವಾ ತು ನೃಪತಿಃ ಶ್ರೀಮಾನೇಕಚಿತ್ತಗತಂ ಪುರಮ್ ।
ನಿಪಪಾತೈವ ದುಃಖೇನ ಕೃತ್ತಮೂಲ ಇವ ದ್ರುಮಃ ॥ ೩೬

ತತೋ ಹಲಹಲಾಶಬ್ದೋ ಜಜ್ಞೇ ರಾಮಸ್ಯ ಪೃಷ್ಠತಃ ।
ನರಾಣಾಂ ಪ್ರೇಕ್ಷ್ಯ ರಾಜಾನಂ ಸೀದಂತಂ ಭೃಶದುಃಖಿತಮ್ ॥ ೩೭

ಹಾ ರಾಮೇತಿ ಜನಾಃ ಕೇಚಿದ್ರಾಮಮಾತೇತಿ ಚಾಪರೇ ।
ಅಂತಃಪುರಂ ಸಮೃದ್ಧಂ ಚ ಕ್ರೋಶಂತಃ ಪರ್ಯುದೇವಯನ್ ॥ ೩೮

ಅನ್ವೀಕ್ಷಮಾಣೋ ರಾಮಸ್ತು ವಿಷಣ್ಣಂ ಭ್ರಾಂತಚೇತಸಮ್ ।
ರಾಜಾನಂ ಮಾತರಂ ಚೈವ ದದರ್ಶಾನುಗತೌ ಪಥಿ ॥ ೩೯

ಸ ಬದ್ಧ ಇವ ಪಾಶೇನ ಕಿಶೋರೋ ಮಾತರಂ ಯಥಾ ।
ಧರ್ಮಪಾಶೇನ ಸಂಕ್ಷಿಪ್ತಃ ಪ್ರಕಾಶಂ ನಾಭ್ಯುದೈಕ್ಷತ ॥ ೪೦

---

ಅದರ ಚೈತನ್ಯವೇ ಉಡುಗಿತು (೩೩-೩೪). ಮೀನುಗಳು ಅಲುಗಿಸಿದಾಗ ತಾವರೆಯ ಹೂಗಳಿಂದ ನೀರು ಸುರಿಯುವಂತೆ, ಪೌರಸ್ತ್ರೀಯರ ನೇತ್ರಗಳಿಂದ ಬಾಷ್ಪವು ಧಾರಾಕಾರವಾಗಿ ಹರಿಯುತ್ತಿತ್ತು (೩೫). ಅಯೋಧ್ಯಾನಗರವು ಒಂದೇ ಮನಸ್ಸಿನಿಂದ ದುಃಖಿಸುವುದನ್ನು ಕಂಡು ದಶರಥಮಹಾರಾಜನು ಬುಡವನ್ನು ಕಡಿದ ಮರದಂತೆ ದೊಪ್ಪನೆ ಕುಸಿದುಬಿದ್ದನು. ರಾಜನ ದುರವಸ್ಥೆಯನ್ನು ಕಂಡು ರಾಮನ ಹಿಂದೆ ಓಡುತ್ತಿದ್ದ ಜನರು 'ಹಾ ಹಾ' ಎಂದು ಕೂಗಿಕೊಂಡರು (೩೬-೩೭). ಪ್ರಜೆಗಳೂ ಅಂತಃಪುರಸ್ತ್ರೀಯರೂ 'ಹಾ ರಾಮ',ಹಾ'ಕೌಸಲ್ಯೆ' ('ಹಾ ಮಹಾರಾಜ'). ಎಂದು ಕೂಗುತ್ತ ಗೋಳಾಡುತ್ತಿದ್ದರು. ಆಗ ರಾಮನು ಹಿಂತಿರುಗಿ ನೋಡಲು ವಿಷಾದದಿಂದ ದಿಕ್ಕುಗೆಟ್ಟು ಬೀದಿಯಲ್ಲಿ ಬರುತ್ತಿದ್ದ ತಂದೆತಾಯಿಗಳು ಗೋಚರಿಸಿದರು (೩೮-೩೯) ಹಗ್ಗದಿಂದ ಕಟ್ಟಲ್ಪಟ್ಟ ಕುದುರೆಯ ಮರಿಯು ದೂರದಲ್ಲಿರುವ ತನ್ನ ತಾಯಿಯನ್ನು ನೋಡುವಂತೆ, ಧರ್ಮಪಾಶದಿಂದ ಬದ್ಧನಾದ ಶ್ರೀರಾಮನು (ಹಿಂದಿರುಗಲಾರದೆ) ಕಡೆಗಣ್ಣಿನಿಂದ ತಾಯಿಯನ್ನು ನೋಡುತ್ತಿದ್ದನು (೪೦).

ಶುಶ್ರುವೇ ಚಾಗ್ರತಃ ಸ್ತ್ರೀಣಾಂ ರುದಂತೀನಾಂ ಮಹಾಸ್ವನಃ ।
ಯಥಾ ನಾದಃ ಕರೇಣೂನಾಂ ಬದ್ಧೇ ಮಹತಿ ಕುಂಜರೇ ॥ ೨೯

ಪಿತಾ ಹಿ ರಾಜಾ ಕಾಕುತ್ಸ್ಥಃ ಶ್ರೀಮಾನ್ ಸನ್ನಸ್ತದಾಭವತ್ ।
ಪರಿಪೂರ್ಣಃ ಶಶೀ ಕಾಲೇ ಗ್ರಹೇಣೋಪಪ್ಲುತೋ ಯಥಾ ॥ ೩೦

ಸ ಚ ಶ್ರೀಮಾನಚಿಂತ್ಯಾತ್ಮಾ ರಾಮೋ ದಶರಥಾತ್ಮಜಃ ।
ಸೂತಂ ಸಂಚೋದಯಾಮಾಸ ತ್ವರಿತಂ ವಾಹ್ಯತಾಮಿತಿ ॥ ೩೧

ರಾಮೋ ಯಾಹೀತಿ ಸೂತಂ ತಂ ತಿಷ್ಠೇತಿ ಸ ಜನಸ್ತದಾ ।
ಉಭಯಂ ನಾಶಕತ್ ಸೂತಃ ಕರ್ತುಮಧ್ವನಿ ಚೋದಿತಃ ॥ ೩೨

ನಿರ್ಗಚ್ಛತಿ ಮಹಾಬಾಹೌ ರಾಮೇ ಪೌರಜನಾಶ್ರುಭಿಃ ॥
ಪತಿತೈರಭ್ಯವಹಿತಂ ಪ್ರಶಶಾಮ ಮಹೀರಜಃ ॥ ೩೩

ರುದಿತಾಶ್ರುಪರಿದ್ಯೂನಂ ಹಾಹಾಕೃತಮಚೇತನಮ್ ।
ಪ್ರಯಾಣೇ ರಾಘವಸ್ಯಾಸೀತ್ ಪುರಂ ಪರಮಪೀಡಿತಮ್ ॥ ೩೪

---

ಅಂತಃಪುರಸ್ತ್ರೀಯರೂ ಅವನೊಡನೆ ಹೊರಗೆ ಬಂದರು (೨೮). ಸಲಗನನ್ನು ಸೆರೆಹಿಡಿದು ಬಂಧಿಸಿದಾಗ ಹೆಣ್ಣಾನೆಗಳು ದುಃಖದಿಂದ ಚೀರಾಡುವಂತೆ ಅಳುತ್ತಿದ್ದ ಆ ಸ್ತ್ರೀಯರ ರೋದನಧ್ವನಿಯು ಸುತ್ತಲೂ ಕೇಳಿಸುತ್ತಿತ್ತು. ಶ್ರೀರಾಮನ ತಂದೆಯಾದ ದಶರಥಮಹಾರಾಜನು ಆ ಸಮಯದಲ್ಲಿ ರಾಹುಗ್ರಸ್ತನಾದ ಚಂದ್ರನಂತೆ ತೇಜೋಹೀನನಾಗಿದ್ದನು (೨೯-೩೦). ಆಗ ಅಸಾಧಾರಣ ಧೈರ್ಯಶಾಲಿಯಾದ ಶ್ರೀರಾಮನು ಸುಮಂತ್ರನಿಗೆ ರಥವನ್ನು ಬೇಗನೆ 'ಓಡಿಸು, ಓಡಿಸು'ವಂದು ತ್ವರೆಪಡಿಸಿದನು. ಶ್ರೀರಾಮನು ಸೂತನಿಗೆ 'ನಡೆ ನಡೆ ' ಎನ್ನುತ್ತಿದ್ದನು. ಜನರು 'ತಡೆ ತಡೆ' ಎನ್ನುತ್ತಿದ್ದರು. ಸಾರಥಿಗೆ ಇಬ್ಬರ ಮಾತನ್ನೂ ದಾರಿಯಲ್ಲಿ ನಡೆಸುವುದು ಶಕ್ಯವಾಗಲಿಲ್ಲ (೩೧-೩೨). ಆ ಮಹಾಪುರುಷನು ವನಕ್ಕೆ ಹೊರಟಾಗ (ಜನರ ನೂಕು ನುಗ್ಗಲುಗಳಿಂದ) ಮೇಲೆದ್ದ ಧೂಳಿನ ರಾಶಿಯು ಅವರ ಕಣ್ಣೀರಿನಿಂದಲೇ ಶಾಂತವಾಯಿತು. ರಾಘವನು ವನಕ್ಕೆ ಪ್ರಯಾಣಮಾಡುವಾಗ ಅಯೋಧ್ಯೆಯು ಕಣ್ಣೀರು ರೋದನಧ್ವನಿ ಹಾಹಾಕಾರಗಳಿಂದ ವ್ಯಾಪ್ತವಾಗಿ

ನಾಶ್ರೌಷಮಿತಿ ರಾಜಾನಮುಪಾಲಬ್ಧೋಽಪಿ ವಕ್ಷ್ಯಸಿ ।
ಚಿರಂ ದುಃಖಸ್ಯ ಪಾಪಿಷ್ಠಮಿತಿ ರಾಮಸ್ತಮಬ್ರವೀತ್ ॥ ೪೭

ರಾಮಸ್ಯ ಚ ವಚಃ ಕುರ್ವನ್ನನುಜ್ಞಾಪ್ಯ ಚ ತಂ ಜನಮ್ ।
ವ್ರಜತೋಽಪಿ ಹಯಾನ್ ಶೀಘ್ರಂ ಚೋದಯಾಮಾಸ ಸಾರಥಿಃ ॥

ನ್ಯವರ್ತತ ಜನೋ ರಾಜ್ಞೋ ರಾಮಂ ಕೃತ್ವಾ ಪ್ರದಕ್ಷಿಣಮ್ ।
ಮನಸಾಪ್ಯಶ್ರುವೇಗೈಶ್ಚ ನ ನ್ಯವರ್ತತ ಮಾನುಷಮ್ ॥ ೪೯

ಯಮಿಚ್ಛೇತ್ ಪುನರಾಯಾಂತಂ ನೈನಂ ದೂರಮನುವ್ರಜೇತ್ ।
ಇತ್ಯಮಾತ್ಯಾ ಮಹಾರಾಜಮೂಚುರ್ದಾಶರಥಂ ವಚಃ ॥ ೫೦

ತೇಷಾಂ ವಚಃ ಸರ್ವಗುಣೋಪಪನ್ನಂ
ಪ್ರಸ್ವಿನ್ನಗಾತ್ರಃ ಪ್ರವಿಷಣ್ಣರೂಪಃ ।

---

ನಿಲ್ಲು' ಎಂದೂ ರಾಘವನು 'ನಡೆ ನಡೆ' ಎಂದೂ ಹೇಳುತ್ತಿರಲು ಸುಮಂತ್ರನ ಮನಸ್ಸು ಎತ್ತಿನ ಗಾಲಿಗಳ ನಡುವೆ ಸಿಕ್ಕಿಕೊಂಡಂತೆ ದಿಗ್ಭ್ರಾಂತವಾಯಿತು (೪೬). ಆಗ ಶ್ರೀರಾಮನು "ಸುಮಂತ್ರ, ಆಮೇಲೆ ಮಹಾರಾಜನು ನಿನ್ನನ್ನು ಗದರಿಸಿದರೆ, ಆ ಗದ್ದಲದಲ್ಲಿ ಕೂಗಿದುದು ಕೇಳಿಸಲಿಲ್ಲವೆಂದು ಹೇಳಬಹುದು. ದುಃಖವನ್ನು ಚಿರಕಾಲ ವಿಲಂಬಿಸುವುದು ಬಹಳ ಕೆಟ್ಟದು (ಆದ್ದರಿಂದ ರಥವನ್ನು ಓಡಿಸು)" ಎಂದು ಹೇಳಿದನು (೪೭). ಆಗ ಸುಮಂತ್ರನು ಸುತ್ತಲೂ ಇದ್ದ ಜನರಿಗೆ ಸಮಾಧಾನ ಹೇಳಿ ದಾರಿಯನ್ನು ಬಿಡಿಸಿ, ಹೋಗುತ್ತಲೇ ಇದ್ದ ಕುದುರೆಗಳನ್ನು ಇನ್ನೂ ತ್ವರೆಪಡಿಸಿದನು. ರಾಜಸೇವಕರು ಶ್ರೀರಾಮನಿಗೆ ಪ್ರದಕ್ಷಿಣಾಕಾರವಾಗಿ ಬಂದು ವಂದಿಸಿದರು. ಜನರು ನಿಂತರೇ ಹೊರತು ರಾಮನೊಡನೆ ಹೋಗುತ್ತಿದ್ದ ಅವರ ಮನಸ್ಸಾಗಲಿ, ಬಾಷ್ಪಧಾರೆಯಾಗಲಿ ನಿಲ್ಲಲಿಲ್ಲ(೪೮-೪೯). ಆ ಸಮಯದಲ್ಲಿ ಸಚಿವರು ದಶರಥನನ್ನು ಕುರಿತು "ಮಹಾರಾಜ, ಪ್ರಯಾಣಕಾಲದಲ್ಲಿ ಯಾರು ಬೇಗನೆ ಹಿಂದಿರುಗಿ ಬರಲೆಂದು ಬಯಸುತ್ತೇವೋ ಅವರನ್ನು ಕಳಿಸುತ್ತ ಬಹುದೂರ ಹೋಗಬಾರದು" ಎಂದು ಸಮಾಧಾನ ಹೇಳಿದರು (೫೦). ಸಚಿವರ ಹಿತವಚನವನ್ನು ಕೇಳಿ ರಾಜನು ಏನು ತೋರದೆ ತನ್ನ ಪತ್ನಿಯರೊಂದಿಗೆ ಅಲ್ಲಿಯೇ ನಿಂತನು. ಅವನ

ಪದಾತಿನೌ ಚ ಯಾನಾರ್ಹಾವದುಃಖಾರ್ಹೌ ಸುಖೋಚಿತೌ ।
ದೃಷ್ಟ್ವಾ ಸಂಚೋದಯಾಮಾಸ ಶೀಘ್ರಂ ಯಾಹೀತಿ ಸಾರಥಿಮ್ ॥

ನ ಹಿ ತತ್ ಪುರುಷವ್ಯಾಘ್ರೋ ದುಃಖಿದಂ ದರ್ಶನಂ ಪಿತುಃ ।
ಮಾತುಶ್ಚ ಸಹಿತುಂ ಶಕ್ತಸ್ತೋತ್ರಾರ್ದಿತ ಇವ ದ್ವಿಪಃ ॥ ೪೨

ಪ್ರತ್ಯಗಾರಮಿವಾಯಾಂತೀ ವತ್ಸಲಾ ವತ್ಸಕಾರಣಾತ್ ।
ಬದ್ಧವತ್ಸಾ ಯಥಾ ಧೇನೂ ರಾಮಮಾತಾಭ್ಯಧಾವತ ॥ ೪೩

ತಥಾ ರುದಂತೀಂ ಕೌಸಲ್ಯಾಂ ರಥಂ ತಮನುಧಾವತೀಮ್ ।
ಕ್ರೋಶಂತೀಂ ರಾಮ ರಾಮೇತಿ ಹಾ ಸೀತೇ ಲಕ್ಷ್ಮಣೇತಿ ಚ ॥ ೪೪

ರಾಮಲಕ್ಷ್ಮಣಸೀತಾರ್ಥಂ ಸ್ರವಂತೀಂ ವಾರಿ ನೇತ್ರಜಮ್ ।
ಅಸಕೃತ್ ಪ್ರೈಕ್ಷತ ಸ ತಾಂ ನೃತ್ಯಂತೀಮಿವ ಮಾತರಮ್ ॥ ೪೫

ತಿಷ್ಠೇತಿ ರಾಜಾ ಚುಕ್ರೋಶ ಯಾಹಿ ಯಾಹೀತಿ ರಾಘವಃ ।
ಸುಮಂತ್ರಸ್ಯ ಬಭೂವಾತ್ಮಾ ಚಕ್ರಯೋರಿವ ಚಾಂತರಾ ॥ ೪೬

---

ವಾಹನಾರೂಢರಾಗಿ ಸಂಚರಿಸುತ್ತಿದ್ದ ತಂದೆತಾಯಿಗಳು ಈಗ ಬೀದಿಯಲ್ಲಿ ನಡೆದುಬರುವುದನ್ನೂ ಸುಖವಾಗಿದ್ದವರು ಮಹಾವ್ಯಸನದಿಂದ ನರಳುವುದನ್ನೂ ಕಂಡು 'ಬೇಗನೆ ನಡೆ, ಬೇಗನೆ' ಎಂದು ಸಾರಥಿಯನ್ನು ತ್ವರೆಪಡಿಸಿದನು (೪೧). ಆ ಪುರುಷಶ್ರೇಷ್ಠನಿಗೆ ತಂದೆತಾಯಿಗಳ ದುರವಸ್ಥೆಯನ್ನು ನೋಡುವುದು ದುಃಖಕರವಾಗಿತ್ತು. ಅಂಕುಶದಿಂದ ತಿವಿಯಲ್ಪಟ್ಟ ಆನೆಯಂತೆ ಹಿಂದಕ್ಕೆ ತಿರುಗಲಾರದೆ ಮುಂದೆ ಮುಂದೆ ಹೋಗಲಿಚ್ಛಿಸಿದನು (೪೨). ಹಸುವು ತನ್ನ ಕರುವನ್ನು ನೆನೆಸಿಕೊಂಡು ಮನೆಗೆ ಓಡುತ್ತ ಬರುವಂತೆ, ಪುತ್ರವತ್ಸಲೆಯಾದ ಕೌಸಲ್ಯೆಯು ರಥದ ಹಿಂದೆ ಅಳುತ್ತ ಓಡಿ ಓಡಿ ಬರುತ್ತಿದ್ದಳು. 'ರಾಮಾ! ರಾಮಾ! ಸೀತೇ! ಲಕ್ಷ್ಮಣಾ!' ಎಂದು ಕೂಗುತ್ತಿದ್ದಳು. (೪೩-೪೪). ಹೀಗೆ ರಾಮ ಲಕ್ಷ್ಮಣ ಸೀತೆಯರಿಗಾಗಿ ಕಣ್ಣೀರು ಸುರಿಸುತ್ತ ಅಳುತ್ತ ಕೂಗುತ್ತ (ಮುಗ್ಗರಿಸುತ್ತ ಕೈಬೀಸುತ್ತ) ಓಡುತ್ತ ಬರುತ್ತಿದ್ದ ಕೌಸಲ್ಯೆಯು ನೃತ್ಯಮಾಡುವಳೋ ಎಂಬಂತೆ ಕಾಣಿಸಿತು. ಅವಳನ್ನು ಶ್ರೀರಾಮನು ತಿರುಗಿ ತಿರುಗಿ ಅನೇಕ ಬಾರಿ ನೋಡಿದನು (೪೫). ರಥದ ಹಿಂದೆ ಓಡಿಬರುತ್ತಿದ್ದ ದಶರಥನು 'ನಿಲ್ಲು,

ನ ಕ್ರುಧ್ಯತ್ಯಭಿಶಪ್ತೋಽಪಿ ಕ್ರೋಧನೀಯಾನಿ ವರ್ಜಯನ್ ।
ಕ್ರುದ್ಧಾನ್ ಪ್ರಸಾದಯನ್ ಸರ್ವಾನ್ ಸಮದುಃಖಃ ಕ್ವ ಗಚ್ಛತಿ ॥ ೩

ಕೌಸಲ್ಯಾಯಾಂ ಮಹಾತೇಜಾ ಯಥಾ ಮಾತರಿ ವರ್ತತೇ ।
ತಥಾ ಯೋ ವರ್ತತೇಽಸ್ಮಾಸು ಮಹಾತ್ಮಾ ಕ್ವ ನು ಗಚ್ಛತಿ ॥ ೪

ಕೈಕೇಯ್ಯಾ ಕ್ಲಿಶ್ಯಮಾನೇನ ರಾಜ್ಞಾ ಸಂಚೋದಿತೋ ವನಮ್ ।
ಪರಿತ್ರಾತಾ ಜಲಸ್ಯಾಸ್ಯ ಜಗತಃ ಕ್ವ ನು ಗಚ್ಛತಿ ॥ ೫

ಅಹೋ ನಿಶ್ಚೇತನೋ ರಾಜಾ ಜೀವಲೋಕಸ್ಯ ಸಂಪ್ರಿಯಮ್ ।
ಧರ್ಮ್ಯಂ ಸತ್ಯವ್ರತಂ ರಾಮಂ ವನವಾಸೇ ಪ್ರವತ್ಸ್ಯತಿ ॥ ೬

ಇತಿ ಸರ್ವಾ ಮಹಿಷ್ಯಸ್ತಾ ವಿವತ್ಸಾ ಇವ ಧೇನವಃ ।
ರುರುದುಶ್ಚೈವ ದುಃಖಾರ್ತಾಃ ಸಸ್ವರಂ ಚ ವಿಚುಕ್ರುಶುಃ ॥ ೭

---

ಹೋಗುವನೊ!(೧-೨). ನಾವು ಗದರಿಸಿದರೂ ಕೋಪಿಸಿಕೊಂಡವನಲ್ಲ. ನಮಗೆ ಕೋಪಬರುವ ಕೆಲಸವನ್ನು ಮಾಡಿದವನೇ ಅಲ್ಲ. ಕೋಪಬಂದವರೆಲ್ಲರಿಗೂ ಸಮಾಧಾನ ಹೇಳುತ್ತಿದ್ದನು. ನಮ್ಮ ಕಷ್ಟವನ್ನು ತನ್ನ ಕಷ್ಟವೆಂದು ತಿಳಿದಿದ್ದ ರಾಮನು ಎಲ್ಲಿಗೆ ಹೋಗುವನೊ ! ಆ ಮಹಾನುಭಾವನು ತನ್ನ ಹಡೆದ ತಾಯಿಯಾದ ಕೌಸಲ್ಯೆಯಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದನೋ, ಹಾಗೆಯೇ ನಮ್ಮಲ್ಲಿ ನಡೆದುಕೊಳ್ಳುತ್ತಿದ್ದನಲ್ಲ! ಅಂಥ ಮಹಾತ್ಮನು ಎಲ್ಲಿಗೆ ಹೋಗಬೇಕಾಯಿತು! (೩-೪).ಆತನು ನಮ್ಮನ್ನೂ ಈ ಜಗತ್ತನ್ನೂ ರಕ್ಷಿಸಬಲ್ಲ ವೀರ. ಅಂಥವನನ್ನು ಕೈಕೇಯಿಯ ಪೀಡೆಗೆ ಸಿಕ್ಕಿ ಮಹಾರಾಜನು ವನಕ್ಕೆ ಕಳಿಸಿಬಿಟ್ಟನಲ್ಲ! ಅವನು ಎಲ್ಲಿಗೆ ಹೋಗಬೇಕಾಗಿ ಬಂದಿತು!(೫). ಅಯ್ಯೋ! ಈ ದಶರಥರಾಜನಿಗೆ ವಿವೇಕವಿಲ್ಲ. ಸಮಸ್ತ ಜೀವಿಗಳಿಗೂ ಪ್ರಿಯನಾಗಿ ಧರ್ಮಿಷ್ಠನಾಗಿ ಸತ್ಯಸಂಧನಾಗಿರುವ ರಾಮನನ್ನು ವನವಾಸಕ್ಕೆ ಕಳಿಸುತ್ತಿದ್ದಾನೆ" ಎಂದು ಮರುಗಿದರು. ದಶರಥನ ಆ ಪತ್ನಿಯರೆಲ್ಲರೂ, ಹೀಗೆ ಹೇಳಿಕೊಳ್ಳುತ್ತ ಕರುವನ್ನು ಕಳೆದುಕೊಂಡ ಹಸುಗಳಂತೆ ಶೋಕಸಂತಪ್ತರಾಗಿ ಕಣ್ಣೀರು ಸುರಿಸಿದರು. ಗೊಳೋ ಎಂದು ಗಟ್ಟಿಯಾಗಿ ಅತ್ತರು (೬-೭).

ನಿಶಮ್ಯ ರಾಜಾ ಕೃಪಣಃ ಸಭಾರ್ಯೋ
ವ್ಯವಸ್ಥಿತಸ್ತಂ ಸುತಮೀಕ್ಷಮಾಣಃ ॥ ೫೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತ್ವಾರಿಂಶಃ ಸರ್ಗಃ

---

## ಏಕಚತ್ವಾರಿಂಶಃ ಸರ್ಗಃ

### ನಗರಸಂಕ್ಷೋಭಃ

ತಸ್ಮಿಂಸ್ತು ಪುರುಷವ್ಯಾಘ್ರೇ ನಿರ್ಯಾತೇ ಕೃತಾಂಜಲೌ ।
ಆರ್ತಶಬ್ದೋಽಥ ಸಂಜಜ್ಞೇ ಸ್ತ್ರೀಣಾಮಂತಃಪುರೇ ಮಹಾನ್॥ ೧

ಅನಾಥಸ್ಯ ಜನಸ್ಯಾಸ್ಯ ದುರ್ಬಲಸ್ಯ ತಪಸ್ವಿನಃ ।
ಯೋ ಗತಿಃ ಶರಣಂ ಚಾಸೀತ್ ಸ ನಾಥಃ ಕ್ವ ನು ಗಚ್ಛತಿ ॥ ೨

---

ದೇಹದಿಂದ ಬೆವರು ಸುರಿಯುತ್ತಿತ್ತು. ತನ್ನ ಮಗನು ಹೋದ ದಾರಿಯನ್ನೇ ಅತ್ಯಂತ ವಿಷಾದದಿಂದ ನೋಡುತ್ತಿದ್ದನು (೫೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತನೆಯ ಸರ್ಗ

---

## ಸರ್ಗ ೪೧

### ಅಂತಃಪುರಸ್ತ್ರೀಯರ ವಿಲಾಪ. ದುಃಶಕುನಗಳು.

ಪುರುಷಶ್ರೇಷ್ಠನಾದ ಶ್ರೀರಾಮನು (ತನ್ನ ಮಾತೆಯರಿಗೂ ತಂದೆಗೂ ನಮಸ್ಕರಿಸಿ) ವನಕ್ಕೆ ಹೊರಟುಹೋಗಲು, ಇತ್ತ ಅಂತಃಪುರದಲ್ಲಿ ಶೋಕ ಸಂತಪ್ತರಾದ ಸ್ತ್ರೀಯರ ಹಾಹಾಕಾರವೆದ್ದಿತು. ಆ ಸ್ತ್ರೀಯರು "ಅಯ್ಯೋ! ನಾವು ಅನಾಥರಾದೆವು. ನಮ್ಮ ಬಲವೆಲ್ಲವೂ ಉಡುಗಿತು. ಶೋಚನೀಯ ರಾದೆವು. ನಮಗೆ ಗತಿಯಾಗಿ ದಿಕ್ಕಾಗಿ ಇದ್ದ ನಮ್ಮಪ್ಪನು ಎಲ್ಲಿಗೆ

ದಿಶಃ ಪರ್ಯಾಕುಲಾಃ ಸರ್ವಾಸ್ತಿಮಿರೇಣೇವ ಸಂವೃತಾಃ ।
ನ ಗ್ರಹೋ ನಾಪಿ ನಕ್ಷತ್ರಂ ಪ್ರಚಕಾಶೇ ನ ಕಿಂಚನ ॥ ೧೪

ಅಕಸ್ಮಾನ್ನಾಗರಃ ಸರ್ವೋ ಜನೋ ದೈನ್ಯಮುಪಾಗಮತ್ ।
ಆಹಾರೇ ವಾ ವಿಹಾರೇ ವಾ ನ ಕಶ್ಚಿದಕರೋನ್ಮನಃ ॥ ೧೫

ಶೋಕಪರ್ಯಾಯಸಂತಪ್ತಃ ಸತತಂ ದೀರ್ಘಮುಚ್ಛ್ವಸನ್।
ಅಯೋಧ್ಯಾಯಾಂ ಜನಃ ಸರ್ವಶ್ಚುಕ್ರೋಶ ಜಗತೀಪತಿಮ್ ॥ ೧೬

ಬಾಷ್ಪಪರ್ಯಾಕುಲಮುಖೋ ರಾಜಮಾರ್ಗಗತೋ ಜನಃ ।
ನ ಹೃಷ್ಟೋ ಲಕ್ಷ್ಯತೇ ಕಶ್ಚಿತ್ ಸರ್ವಃ ಶೋಕಪರಾಯಣಃ ॥ ೧೭

ನ ವಾತಿ ಪವನಃ ಶೀತೋ ವ ಶಶೀ ಸೌಮ್ಯದರ್ಶನಃ ।
ನ ಸೂರ್ಯಸ್ತಪತೇ ಲೋಕಂ ಸರ್ವಂ ಪರ್ಯಾಕುಲಂ ಜಗತ್ ॥

ಅನರ್ಥಿನಃ ಸುತಾಃ ಸ್ತ್ರೀಣಾಂ ಭರ್ತಾರೋ ಭ್ರಾತರಸ್ತಥಾ ।
ಸರ್ವೇ ಸರ್ವಂ ಪರಿತ್ಯಜ್ಯ ಸ್ವಾಮಮೇವಾನ್ವಚಿಂತಯನ್ ॥ ೧೯

---

ಅಯೋಧ್ಯಾನಗರವೇ ಕ್ಷೋಭೆಗೊಂಡಿತು. ದಿಕ್ಕುಗಳಲ್ಲಿ ಕತ್ತಲೆ ಕವಿದಂತಾಗಿ ಸಕಲವೂ ಅಸ್ತವ್ಯಸ್ತವಾಯಿತು. ಗ್ರಹಗಳು ಕಾಣಿಸಲಿಲ್ಲ. ನಕ್ಷತ್ರಗಳು ಮಿನುಗಲಿಲ್ಲ. ಯಾವುದೂ ಬೆಳಗಲಿಲ್ಲ (೧೩-೧೪). ನಗರವಾಸಿಗಳಾದ ಜನರೆಲ್ಲರೂ ಅನಿರೀಕ್ಷಿತವಾದ ವ್ಯಸನದಲ್ಲಿ ಮುಳುಗಿದರು. ಆಹಾರವಾಗಲಿ ವಿಹಾರವಾಗಲಿ ಯಾರ ಮನಸ್ಸಿಗೂ ಬೇಡವಾಯಿತು. ಅಯೋಧ್ಯೆಯಲ್ಲಿದ್ದ ಜನರೆಲ್ಲರೂ ಅತ್ಯಂತ ದುಃಖದಿಂದ ಬೆಂದು, ಒಂದೇಸಮನೆ ನಿಟ್ಟುಸಿರು ಬಿಡುತ್ತ ದಶರಥರಾಜನನ್ನು ನಿಂದಿಸುತ್ತಿದ್ದರು (೧೫-೧೬). ಜನರು ರಾಜ ಬೀದಿಯಲ್ಲಿ ನೆರೆದು ಕಣ್ಣೀರು ಬಿಡುತ್ತಿದ್ದರು. ಹರ್ಷದಿಂದಿರತಕ್ಕವ ನೊಬ್ಬನೂ ಕಾಣಿಸಲಿಲ್ಲ. ಎಲ್ಲರೂ ಶೋಕದಲ್ಲಿ ಮುಳುಗಿದ್ದರು. ಗಾಳಿಯೂ ತಂಪಾಗಿ ಬೀಸಲಿಲ್ಲ. ಚಂದ್ರನೂ ಸೌಮ್ಯನಾಗಿ ಕಾಣಿಸಲಿಲ್ಲ. ಸೂರ್ಯನು ಲೋಕವನ್ನು ಬೆಳಗಿಸಲಿಲ್ಲ. ಜಗತ್ತೇ ಅಸ್ತವ್ಯಸ್ತವಾಯಿತು (೧೭-೧೮). ಮಕ್ಕಳು ತಾಯಂದಿರನ್ನು ನೆನೆಸಲಿಲ್ಲ. ಗಂಡಂದಿರು ಹೆಂಡತಿಯರನ್ನು ಆದರಿಸ ಲಿಲ್ಲ. ಸೋದರರು ಅಣ್ಣತಮ್ಮಂದಿರನ್ನು ಬಯಸಲಿಲ್ಲ. ಸಕಲರೂ ಸಕಲವನ್ನೂ

ಸ ತಮಂತಃಪುರೇ ಘೋರಮಾರ್ತಶಬ್ದಂ ಮಹೀಪತಿಃ ।
ಪುತ್ರ ಶೋಕಾಭಿಸಂತಪ್ತಃ ಶ್ರುತ್ವಾ ಚಾಸೀತ್ ಸುದುಃಖಿತಃ ॥ ೮

ನಾಗ್ನಿಹೋತ್ರಾಣ್ಯಹೂಯಂತ ನಾಪಚನ್ ಗೃಹಮೇಧಿನಃ ।
ಅಕುರ್ವನ್ನ ಪ್ರಜಾಃ ಕಾರ್ಯಂ ಸೂರ್ಯಶ್ಚಾಂತರಧೀಯತ ॥ ೯

ವ್ಯಸೃಪನ್ ಕಬಲಾನ್ನಾಗಾ ಗ್ಗಾವೋ ವತ್ಸಾನ್ನ ಪಾಯಯನ್।
ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನಂದತ ॥ ೧೦

ತ್ರಿಶಂಕುರ್ಲೋಹಿತಾಂಗಶ್ಚ ಬೃಹಸ್ಪತಿಬುಧಾವಪಿ ।
ದಾರಾಣಾಃ ಸೋಮಮಭ್ಯೇತ್ಯ ಗ್ರಹಾಃ ಸರ್ವೇ ವ್ಯವಸ್ಥಿತಾಃ ॥ ೧೧

ನಕ್ಷತ್ರಾಣಿ ಗತಾರ್ಚೀಂಷಿ ಗ್ರಹಾಶ್ಚ ಗತತೇಜಸಃ ।
ವಿಶಾಖಾಸ್ತು ಸಧೂಮಾಶ್ಚ ನಭಸಿ ಪ್ರಚಕಾಶಿರೇ ॥ ೧೨

ಕಾಲಿಕಾನಿಲವೇಗೇನ ಮಹೋದಧಿರಿವೋತ್ಥಿತಃ ।
ರಾಮೇ ವನಂ ಪ್ರವ್ರಜಿತೇ ನಗರಂ ಪ್ರಚಚಾಲ ತತ್ ॥ ೧೩

---

ಮೊದಲೇ ಪುತ್ರಶೋಕದಿಂದ ಬೆಂದುಹೋಗಿದ್ದ ದಶರಥರಾಜನಿಗೆ ಅಂತಃಪುರದಲ್ಲೆದ್ದ ಘೋರವಾದ ಈ ಹಾಹಾಕಾರವನ್ನು ಕೇಳಿ ದುಃಖವು ಉಮ್ಮಳಿಸಿತು (೮). ಆ ದಿನ ಅಯೋಧ್ಯಾನಗರದಲ್ಲಿದ್ದ ಆಹಿತಾಗ್ನಿಗಳು ಅಗ್ನಿ ಹೋತ್ರವನ್ನು ನಡೆಸಲಿಲ್ಲ. ಗೃಹಸ್ಥರು ಅಡಿಗೆ ಮಾಡಲಿಲ್ಲ. ಜನರು ಯಾವ ಕೆಲಸವನ್ನೂ ಮಾಡಲಿಲ್ಲ. ಸೂರ್ಯನು ಮರೆಯಾದನು. ಆನೆಗಳು ತಮ್ಮ ಆಹಾರವನ್ನು ಮುಟ್ಟಲಿಲ್ಲ. ಹಸುಗಳು ಕರುಗಳಿಗೆ ಹಾಲು ಕೊಡಲಿಲ್ಲ. ಆ ದಿನ ಚೊಚ್ಚಲುಮಗನನ್ನು ಪಡೆದ ತಾಯಿಗೂ ಸಂತೋಷವಾಗಲಿಲ್ಲ.(೯-೧೦). ತ್ರಿಶಂಕುನಕ್ಷತ್ರ ಅಂಗಾರಕ ಬುಧ ಬೃಹಸ್ಪತಿ ಮೊದಲಾದ ಗ್ರಹಗಳು (ವಕ್ರಗತಿಯಿಂದ) ಚಂದ್ರನಿಗೆ ಅಭಿಮುಖವಾಗಿ ಕ್ರೂರಾವಸ್ಥೆಯನ್ನು ಪಡೆದವು. ನಕ್ಷತ್ರಗಳು ತೇಜೋಹೀನವಾದವು. ಗ್ರಹಗಳು ಕಳೆಗುಂದಿ ವಿಮಾರ್ಗದಲ್ಲಿ ಹೊರಟು ಹೊಗೆಸುತ್ತಿದಂತೆ ಆಕಾಶದಲ್ಲಿ ಮಲಿನ ವಾಗಿ ತೋರಿದವು (೧೧-೧೨). ಗಾಳಿಯು ವೇಗದಿಂದ ಪ್ರಕ್ಷುಬ್ಧವಾದ ಮಹಾ ಸಾಗರದಂತೆ ಮೇಘಜಾಲವು ಆವರಿಸಿತು. ಶ್ರೀರಾಮನು ಅರಣ್ಯಕ್ಕೆ ಹೋಗಲು

## ದ್ವಿಚತ್ವಾರಿಂಶಃ ಸರ್ಗಃ

### ದಶರಥಾಕ್ರಂದಃ

ಯಾವತ್ತು ನಿರ್ಯಾತಸ್ತಸ್ಯ ರಜೋರೂಪಮದೃಶ್ಯತ ।
ನೈವೇಕ್ಷ್ವಾಕುವರಸ್ತಾವತ್ ಸಂಜಹಾರಾತ್ಮಚಕ್ಷುಷೀ ॥ ೧

ಯಾವದ್ರಾಜಾ ಪ್ರಿಯಂ ಪುತ್ರಂ ಪಶ್ಯತ್ಯತ್ಯಂತಧಾರ್ಮಿಕಮ್ ।
ತಾವದ್ವ್ಯವರ್ಧತೇವಾಸ್ಯ ಧರಣ್ಯಾಂ ಪುತ್ರದರ್ಶನೇ ॥ ೨

ನ ಪಶ್ಯತಿ ರಜೋಽಪ್ಯಸ್ಯ ಯದಾ ರಾಮಸ್ಯ ಭೂಮಿಪಃ ।
ತದಾರ್ತಶ್ಚ ವಿಷಣ್ಣಶ್ಚ ಪಪಾತ ಧರಣೀತಲೇ ॥ ೩

ತಸ್ಯ ದಕ್ಷಿಣಮನ್ವಾಗಾತ್ ಕೌಸಲ್ಯಾ ಬಾಹುಮಂಗನಾ ।
ವಾಮಂ ಚಾಸ್ಯಾನ್ವಗಾತ್ ಪಾರ್ಶ್ವಂ ಕೈಕೇಯೀ ಭರತಪ್ರಿಯಾ ॥ ೪

ತಾಂ ನಯೇನ ಚ ಸಂಪನ್ನೋ ಧರ್ಮೇಣ ವಿನಯೇನ ಚ ।
ಉವಾಚ ರಾಜಾ ಕೈಕೇಯೀಂ ಸಮೀಕ್ಷ್ಯ ವ್ಯಥಿತೇಂದ್ರಿಯಃ ॥ ೫

## ಸರ್ಗ ೪೨

### ಶ್ರೀರಾಮನು ವನಕ್ಕೆ ಹೋದಮೇಲೆ ದಶರಥನ ವಿಲಾಪ.

ಶ್ರೀರಾಮನು (ಅಯೋಧ್ಯೆಯನ್ನು ಬಿಟ್ಟು) ಹೋಗುತ್ತಿರುವಾಗ ರಥದ ಧೂಳಿಯು ಕಾಣಿಸುತ್ತಿರುವವರೆಗೂ ದಶರಥನು ತನ್ನ ಕಣ್ಣುಗಳನ್ನು ಬೇರೆಕಡೆಗೆ ತಿರುಗಿಸಲಿಲ್ಲ. ಅತ್ಯಂತ ಧಾರ್ಮಿಕನಾದ ತನ್ನ ಪ್ರಿಯಪುತ್ರನನ್ನು ಆ ರಾಜನು ಈ ಲೋಕದಲ್ಲಿ ಇನ್ನೂ ಸ್ವಲ್ಪಕಾಲ ನೋಡಲು ಸಹಾಯ ಮಾಡುತ್ತದೆಯೋ ಎಂಬಂತೆ ಧೂಳಿಯು ಬಹಳ ಹೊತ್ತು ವ್ಯಾಪಿಸಿತ್ತು (೧-೨). ಅನಂತರ ಧೂಳಿಯು ಅಡಗಿತು. ಆದೂ ಕಾಣದಂತಾಗಲು ಮಹಾರಾಜನು ಆರ್ತನಾಗಿ ದುಃಖದಿಂದ ನೆಲದಮೇಲೆ ಕುಸಿದನು. ಒಡನೆಯೇ ಕೌಸಲ್ಯೆಯು ಬಂದು ಅವನನ್ನು ಎತ್ತಿಹಿಡಿಯುವುದಕ್ಕಾಗಿ ಬಲಗೈಯನ್ನು ಹಿಡಿದುಕೊಂಡಳು. ಕೈಕೇಯಿಯು ಅವನ ಎಡಪಾರ್ಶ್ವಕ್ಕೆ ಬಂದಳು (೩-೪). ಅಷ್ಟರಲ್ಲಿ ನೀತಿವಂತನೂ ಧರ್ಮಶೀಲನೂ ಸಚ್ಚರಿತ್ರನೂ

ಯೇ ತು ರಾಮಸ್ಯ ಸುಹೃದಃ ಸರ್ವೇ ತೆ ಮೂಢಚೇತಸಃ ।
ಶೋಕಭಾರೇಣ ಚಾಕ್ರಾಂತಾಃ ಶಯನಂ ನೈವ ಭೇಜಿರೇ ॥ ೨೦

ತತಸ್ತ್ವಯೋಧ್ಯಾ ರಹಿತಾ ಮಹಾತ್ಮನಾ
ಪುರಂದರೇಣೇವ ಮಹೀ ಸಪರ್ವತಾ ।
ಚಚಾಲ ಘೋರಂ ಭಯಶೋಕಪೀಡಿತಾ
ಸನಾಗಯೋಧಾಶ್ವಗಣಾ ನನಾದ ಚ ॥ ೨೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಚತ್ವಾರಿಂಶಃ ಸರ್ಗಃ

ವರ್ಜಿಸಿ ಶ್ರೀರಾಮನನ್ನೇ ಚಿಂತಿಸುತ್ತಿದ್ದರು. ಶ್ರೀರಾಮನ ಮಿತ್ರರಿಗೆ ದಿಕ್ಕು ತೋಚದಾಯಿತು. ಶೋಕಭಾರದಿಂದ ಕುಗ್ಗಿದರು. ಅವರು ಮಲಗಲೇ ಇಲ್ಲ (೧೯-೨೦). ಆಗ ಮಹಾತ್ಮನಾದ ಶ್ರೀರಾಮನು ಇಲ್ಲದ ಅಯೋಧ್ಯೆಯು ದೇವೇಂದ್ರನಿಲ್ಲದ ಪರ್ವತಸಹಿತವಾದ ಪೃಥ್ವಿಯಂತೆ ಶೋಚನೀಯವಾಯಿತು. ಅದು ಭಯಶೋಕಗಳಿಂದ ಕಳವಳಿಸಿತು. ಗಜಾಶ್ವಪದಾತಿಗಳ ಘೋರವಾದ ಆಕ್ರಂದನಧ್ವನಿಯು ಹರಡಿತು (೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತೊಂದನೆಯ ಸರ್ಗ

ನಿವೃತ್ತ್ಯೈವ ನಿವೃತ್ತ್ಯೈವ ಸೀದತೋ ರಥವರ್ತ್ಮಸು ।
ರಾಜ್ಞೋ ನಾತಿಬಭೌ ರೂಪಂ ಗ್ರಸ್ತಸ್ಯಾಂಶುಮತೋ ಯಥಾ ॥ ೧೨

ವಿಲಲಾಪ ಚ ದುಃಖಾರ್ತಃ ಪ್ರಿಯಂ ಪುತ್ರಮನುಸ್ಮರನ್ ।
ನಗರಾಂತಮನುಪ್ರಾಪ್ತಂ ಬುದ್ಧ್ವಾ ಪುತ್ರಮಥಾಬ್ರವೀತ್ ॥ ೧೩

ವಾಹನಾನಾಂ ಚ ಮುಖ್ಯಾನಾಂ ವಹತಾಂ ತಂ ಮಮಾತ್ಮಜಮ್ ।
ಪದಾನಿ ಪಥಿ ದೃಶ್ಯಂತೇ ಸ ಮಹಾತ್ಮಾ ನ ದೃಶ್ಯತೇ ॥ ೧೪

ಯಃ ಸುಖೇಷೂಪಧಾನೇಷು ಶೇತೇ ಚಂದನರೂಷಿತಃ ।
ವೀಜ್ಯಮಾನೋ ಮಹಾರ್ಹಾಭಿಃ ಸ್ತ್ರೀಭಿರ್ಮಮ ಸುತೋತ್ತಮಃ ॥ ೧೫

ಸ ನೂನಂ ಕ್ವಚಿದೇವಾದ್ಯ ವೃಕ್ಷಮೂಲಮುಪಾಶ್ರಿತಃ ।
ಕಾಷ್ಠಂ ವಾ ಯದಿ ವಾಶ್ಮಾನಮುಪಧಾಯ ಶಯಿಷ್ಯತೇ ॥ ೧೬

ಉತ್ಥಾಸ್ಯತಿ ಚ ಮೇದಿನ್ಯಾಃ ಕೃಪಣಃ ಪಾಂಸುಗುಂಠಿತಃ ।
ವಿನಿಶ್ವಸನ್ ಪ್ರಸ್ರವಣಾತ್ ಕರೇಣೂನಾಮಿವರ್ಷಭಃ ॥ ೧೭

---

ನಂತೆಯೂ ತಾನಾಗಿ ಕೈಯಿಂದ ಬೆಂಕಿಯನ್ನು ಮುಟ್ಟಿದವನಂತೆಯೂ ಪಶ್ಚಾತ್ತಾಪದಿಂದ ಬೆಂದುಹೋಗುತ್ತಿದ್ದನು (೧೦-೧೧). ಶ್ರೀರಾಮನ ರಥವು ಹೋದ ದಾರಿಯನ್ನೇ ಹಿಂದಿರುಗಿ ಹಿಂದಿರುಗಿ ನೋಡುತ್ತ ದಾರಿಯಲ್ಲಿ ಕುಸಿದುಬೀಳುತ್ತಿದ್ದನು. ಗ್ರಹಣಹಿಡಿದ ಸೂರ್ಯನಂತೆ ಅವನು ರೂಪಗೆಟ್ಟಿದ್ದನು. ತನ್ನ ಪ್ರಿಯಪುತ್ರನನ್ನು ನೆನೆದು ನೆನೆದು ಒಂದೇಸಮನೆ ಅಳುತ್ತಿದ್ದನು. ಅಷ್ಟುಹೊತ್ತಿಗೆ ಶ್ರೀರಾಮನು ಅಯೋಧ್ಯಾನಗರದ ಎಲ್ಲೆಯನ್ನು ದಾಟಿಹೋಗಿರಬಹುದೆಂದು ತಿಳಿದು ಹೀಗೆ ಗೋಳಾಡಲಾರಂಭಿಸಿದನು (೧೨-೧೩).:"ಅಯ್ಯೋ! ನನ್ನ ಕುಮಾರನನ್ನು ಕರೆದುಕೊಂಡುಹೋದ ಕುದುರೆಗಳ ಹೆಜ್ಜೆಗಳು ರಸ್ತೆಯಲ್ಲಿ ಕಾಣುತ್ತಿವೆ. ಆ ಮಹಾತ್ಮನು ಮಾತ್ರ ಕಾಣಿಸುವುದಿಲ್ಲ. ನನ್ನ ಪುತ್ರನು ಚಂದನವನ್ನು ಲೇಪಿಸಿಕೊಂಡು, ಸುತ್ತಲೂ ಶ್ರೇಷ್ಠರಾದ ಸ್ತ್ರೀಯರು ಚಾಮರವನ್ನು ಬೀಸುತ್ತಿರಲು, ಸುಖಕರವಾದ ಸುಪ್ಪತ್ತಿಗೆಯಲ್ಲಿ ಮಲಗಿರುತ್ತಿದ್ದನಲ್ಲ! (೧೪-೧೫). ಅವನು ಇಂದು ಎಲ್ಲಿಯೋ ಒಂದು ಮರದ ಬುಡವನ್ನಾಶ್ರಯಿಸಿ ಮರದ ಕೊರಡನ್ನೊ ಕಲ್ಲನ್ನೊ ತಲೆಯ ಕೆಳಗಿಟ್ಟುಕೊಂಡು ಮಲಗುವನು. ಗಿರಿನದಿಯ ಪಾರ್ಶ್ವದಲ್ಲಿ.

ಕೈಕೇಯಿ ಮಾ ಮಮಾಂಗಾನಿ ಸ್ಪ್ರಾಕ್ಷೀಸ್ತ್ವಂ ದುಷ್ಟಚಾರಿಣೀ ।
ನ ಹಿ ತ್ವಾಂ ದ್ರಷ್ಟುಮಿಚ್ಛಾಮಿ ನ ಭಾರ್ಯಾ ನ ಚ ಬಾಂಧವೀ॥ ೬

ಯೇ ಚ ತ್ವಾಮನುಜೀವಂತಿ ನಾಹಂ ತೇಷಾಂ ನ ತೇ ಮಮ ॥
ಕೇವಲಾರ್ಥಪರಾಂ ಹಿ ತ್ವಾಂ ತ್ಯಕ್ತಧರ್ಮಾಂ ತ್ಯಜಾಮ್ಯಹಮ್ ॥ ೭

ಅಗೃಹ್ಣಾಂ ಯಚ್ಚ ತೇ ಪಾಣಿಮಗ್ನಿಂ ಪರ್ಯಣಯಂ ಚ ಯತ್ ।
ಅನುಜಾನಾಮಿ ತತ್ಸರ್ವಮಸ್ಮಿನ್ ಲೋಕೇ ಪರತ್ರ ಚ ॥ ೮

ಭರತಶ್ಚೇತ್ ಪ್ರತೀತಃ ಸ್ಯಾದ್ರಾಜ್ಯಂ ಪ್ರಾಪ್ಯೇದಮವ್ಯಯಮ್ ।
ಯನ್ಮೇ ಸ ದದ್ಯಾತ್ ಪಿತ್ರರ್ಥಂ ಮಾಂ ಮಾ ತದ್ದತ್ತಮಾಗಮತ್ ॥ ೯

ಅಥ ರೇಣುಸಮುದ್ಧ್ವಸ್ತಂ ತಮುತ್ಥಾಪ್ಯ ನರಾಧಿಪಮ್ ।
ನ್ಯವರ್ತತ ತದಾ ದೇವೀ ಕೌಸಲ್ಯಾ ಶೋಕಕರ್ಶಿತಾ ॥ ೧೦

ಹತ್ವೇವ ಬ್ರಾಹ್ಮಣಂ ಕಾಮಾತ್ ಸ್ಪೃಷ್ಟ್ವಾಗ್ನಿಮಿವ ಪಾಣಿನಾ ।
ಅನ್ವತಪ್ಯತ ಧರ್ಮಾತ್ಮಾ ಪುತ್ರಂ ಸಂಚಿಂತ್ಯ ತಾಪಸಮ್ ॥ ೧೧

---

ಆದ ದಶರಥನು ವ್ಯಥೆಪಡುತ್ತ ಕೈಕೇಯಿಯನ್ನು ನೋಡಿ"ಮುಟ್ಟಬೇಡ ನನ್ನ ಮೈಯನ್ನು, ಎಲೇ ದುಷ್ಟೆ!ನಿನ್ನನ್ನು ಕಣ್ಣೆತ್ತಿ ನೋಡಲೂ ನನಗೆ ಇಷ್ಟವಿಲ್ಲ. ನೀನು ನನ್ನ ಹೆಂಡತಿಯೂ ಅಲ್ಲ; ಬಂಧುವೂ ಅಲ್ಲ (೫-೬). ನಿನ್ನನ್ನು ನಂಬಿ ಬದುಕತಕ್ಕವರ ಭಾಗಕ್ಕೆ ನಾನಿಲ್ಲ. ನನ್ನ ಭಾಗಕ್ಕೆ ಅವರೂ ಇಲ್ಲ. ನೀನು ಕೇವಲ ಸ್ವಾರ್ಥಪರಾಯಣೆ. ಧರ್ಮವನ್ನು ತೊರೆದು ನಿಂತವಳು. ನಾನೂ ನಿನ್ನನ್ನು ತೊರೆದಿದ್ದೇನೆ. ನಿನ್ನ ಕೈಹಿಡಿದು ಅಗ್ನಿ ಪ್ರದಕ್ಷಿಣೆಮಾಡಿ ನಾನು ಗಳಿಸಿದ್ದು ಸಾಕು. ಅದರಿಂದ ಬರುವ ಐಹಿಕ ಆಮುಷ್ಮಿಕ ಸುಖಗಳೆಲ್ಲವನ್ನೂ ತ್ಯಜಿಸಿದ್ದೇನೆ (೭-೮). ಭರತನೇನಾದರೂ ಅಕ್ಷಯವಾದ ಈ ರಾಜ್ಯವು ತನಗೆ ಸಿಕ್ಕಿತೆಂದು ಸಂತೋಷಪಡುವುದಾದರೆ, ಅವನು ನನಗೋಸ್ಕರ ಪಿತೃತರ್ಪಣಾದಿಗಳನ್ನು ಕೊಡಬೇಕಾದ್ದಿಲ್ಲ, ಕೊಟ್ಟರೂ ನನಗೆ ಸೇರದೆ ಹೋಗಲಿ" ಎಂದನು (೯). ಆಮೇಲೆ ಧೂಳಿನಿಂದ ಮಲಿನ ಶರೀರನಾಗಿದ್ದ ಮಹಾರಾಜನನ್ನು ಕೌಸಲ್ಯಾದೇವಿಯು ರೋದಿಸುತ್ತ ಎಬ್ಬಿಸಿ ಕರೆದುಕೊಂಡು ಅರಮನೆಯ ಕಡೆಗೆ ಹೊರಟಳು. ದಶರಥನು ತಾಪಸ ವೇಷವನ್ನು ಧರಿಸಿದ್ದ ತನ್ನ ಮಗನನ್ನೇ ಸ್ಮರಿಸಿಕೊಳ್ಳುತ್ತ ಬ್ರಹ್ಮಹತ್ಯೆ ಮಾಡಿದವ

ತಾಮವೇಕ್ಷ್ಯ ಪುರೀಂ ಸರ್ವಾಂ ರಾಮಮೇವಾನುಚಿಂತಯನ್ ।
ವಿಲಪನ್ ಪ್ರಾವಿಶದ್ರಾಜಾ ಗೃಹಂ ಸೂರ್ಯ ಇವಾಂಬುಡಮ್ ॥ ೨೪

ಮಹಾಹ್ರದಮಿವಾಕ್ಷೋಭ್ಯಂ ಸುಪರ್ಣೇನ ಹೃತೋರಗಮ್ ।
ರಾಮೇಣ ರಹಿತಂ ವೇಶ್ಮ ವೈದೇಹ್ಯಾ ಲಕ್ಷ್ಮಣೇನ ಚ ॥ ೨೫

ಅಥ ಗದ್ಗದಶಬ್ದಸ್ತು ವಿಲಪನ್ ಮನುಜಾಧಿಪಃ ।
ಉವಾಚ ಮೃದು ಮಂದಾರ್ಥಂ ವಚನಂ ದೀನಮಸ್ವರಮ್ ॥ ೨೬

ಕೌಸಲ್ಯಾಯಾ ಗೃಹಂ ಶೀಘ್ರಂ ರಾಮಮಾತುರ್ನಯಂತು ಮಾಮ್
ನ ಹ್ಯನ್ಯತ್ರ ಮಮಾಶ್ವಾಸೋ ಹೃದಯಸ್ಯ ಭವಿಷ್ಯತಿ ॥ ೨೭

ಇತಿ ಬ್ರುವಂತಂ ರಾಜಾನಮನಯನ್ ದ್ವಾರದರ್ಶಿನಃ ।
ಕೌಸಲ್ಯಾಯಾ ಗೃಹಂ ತತ್ರ ನ್ಯವೇಶ್ಯತ ವಿನೀತವತ್ ॥ ೨೮

---

ದೇವಾಲಯಗಳೂ ಮುಚ್ಚಿದ್ದವು. ಬಳಲಿದ್ದ ಕೆಲವು ದುರ್ಬಲರಾದ ಜನರು ದುಃಖಿಸುತ್ತ ಅಲ್ಲಲ್ಲಿ ನಿಂತಿದ್ದರು. ರಾಜಬೀದಿಗಳಲ್ಲಿ ಕೂಡ ಜನರ ಸುಳಿದಾಟ ಅತ್ಯಲ್ಪವಾಗಿತ್ತು(೨೩). ನಗರವೆಲ್ಲವೂ ಹಾಗೆ ಇದ್ದುದನ್ನು ನೋಡುತ್ತ ರಾಮನನ್ನೇ ಚಿಂತಿಸುತ್ತ ವಿಲಪಿಸುತ್ತ, ಸೂರ್ಯನು ಮೋಡದಲ್ಲಿ ಮರೆಯಾಗುವಂತೆ ದಶರಥರಾಜನು ಅರಮನೆಯನ್ನು ಹೊಕ್ಕನು (೨೪). ಮಹಾಸರ್ಪವು ಕಾವಲಾಗಿರುವ ಸರೋವರದಂತೆ, ಶ್ರೀರಾಮನಿರುವಾಗ ಅರಮನೆಯು ಇನ್ನೊಬ್ಬರ ಆಕ್ರಮಣಕ್ಕೆ ಅಶಕ್ಯವಾಗಿತ್ತು. ಈಗ ಗರುಡನು ಆ ಸರ್ಪವನ್ನು ಅಪಹರಿಸಿದಂತಾಗಿತ್ತು. ಶ್ರೀರಾಮನೂ ಸೀತಾಲಕ್ಷ್ಮಣರೂ ಇಲ್ಲದೆ ಶೂನ್ಯವಾಗಿತ್ತು (೨೫). ಅಳುತ್ತಿದ್ದ ದಶರಥರಾಜನು ಗದ್ಗದಿಸುತ್ತ ಕುಗ್ಗಿದ ಸ್ವರದಲ್ಲಿ ಮೆಲ್ಲಗೆ ದೈನ್ಯದಿಂದ "ರಾಮನ ತಾಯಿಯಾದ ಕೌಸಲ್ಯೆಯ ಮನೆಗೆ ನನ್ನನ್ನು ಬೇಗನೆ ಕರೆದುಕೊಂಡು ಹೋಗಿರಿ. ಇನ್ನೆಲ್ಲಿಯೂ ನನ್ನ ಹೃದಯಕ್ಕೆ ಶಾಂತಿಯಾಗದು" ಎಂದು ಹೇಳಿದನು. ಅವನ ಮಾತು ಕೈಗೂಡದ ಶಾಂತಿಯ ಬಯಕೆಯನ್ನು ಸೂಚಿಸುವಂತಿತ್ತು (೨೬-೨೭). ಆಗ ದ್ವಾರಪಾಲಕರು ರಾಜನನ್ನು ಕೌಸಲ್ಯಾಗೃಹಕ್ಕೆ ಕರೆದೊಯ್ದು

ದ್ರಕ್ಷ್ಯಂತಿ ನೂನಂ ಪುರುಷಾ ದೀರ್ಘಬಾಹುಂ ವನೇಚರಾಃ ।
ರಾಮಮುತ್ಥಾಯ ಗಚ್ಛಂತಂ ಲೋಕನಾಥಮನಾಥವತ್ ॥ ೧೮

ಸಾ ನೂನಂ ಜನಕಸ್ಯೇಷ್ಟಾ ಸುತಾ ಸುಖಸದೋಚಿತಾ ।
ಕಂಟಕಾಕ್ರಮಣಕ್ಲಾಂತಾ ವನಮದ್ಯ ಗಮಿಷ್ಯತಿ ॥ ೧೯

ಅನಭಿಜ್ಞಾ ವನಾನಾಂ ಸಾ ನೂನಂ ಭಯಮುಪೈಷ್ಯತಿ ।
ಶ್ವಾಪದಾನರ್ದಿತಂ ಶ್ರುತ್ವಾ ಗಂಭೀರಂ ರೋಮಹರ್ಷಣಮ್ ॥ ೨೦

ಸಕಾಮಾ ಭವ ಕೈಕೇಯಿ ವಿಧವಾ ರಾಜ್ಯಮಾವಸ ।
ನ ಹಿ ತಂ ಪುರುಷವ್ಯಾಘ್ರಂ ವಿನಾ ಜೀವಿತುಮುತ್ಸಹೇ ॥ ೨೧

ಇತ್ಯೇವಂ ವಿಲಪನ್ ರಾಜಾ ಜನೌಘೇನಾಭಿಸಂವೃತಃ ।
ಅಪಸ್ನಾತ ಇವಾರಿಷ್ಟಂ ಪ್ರವಿವೇಶ ಗೃಹೋತ್ತಮಮ್ । ೨೨

ಶೂನ್ಯಚತ್ವರವೇಶ್ಮಾಂತಾಂ ಸಂವೃತಾಪಣದೇವತಾಮ್ ।
ಕ್ಲಾಂತದುರ್ಬಲದುಃಖಾರ್ತಾಂ ನಾತ್ಯಾಕೀರ್ಣಮಹಾಪಥಾಮ್ ॥ ೨೩

---

ಮಲಗಿದ್ದು ಮೇಲೇಳುವ ಗಜರಾಜನಂತೆ (ಬೆಳಗಾದಮೇಲೆ). ನಿಟ್ಟುಸಿರು ಬಿಡುತ್ತ ಮೈಯೆಲ್ಲ ಧೂಳಿ ಮುಸುಕಿ ನೆಲದಿಂದ ಏಳುವನು (೧೬-೧೭). ಎದ್ದು ಆಜಾನುಬಾಹುವಾಗಿ ಲೋಕನಾಥನಾಗಿದ್ದರೂ ಅನಾಥನಂತೆ ಹೋಗುತ್ತಿರುವ ರಾಮನನ್ನು ವನೇಚರರು (ಕುತೂಹಲದಿಂದ) ನೋಡುವರು. ಜನಕರಾಜನ ಪ್ರಿಯಪುತ್ರಿಯು ಸದಾ ಸುಖದಲ್ಲಿ ಬೆಳೆದವಳು. ಅವಳು ಮುಳ್ಳುಗಳನ್ನು ತುಳಿದು ಬಳಲುತ್ತ ಇಂದು ಕಾಡಿಗೆ ಹೋಗುವಳು (೧೮-೧೯). ಅವಳಿಗೆ ಅರಣ್ಯದ ಪರಿಚಯವಿಲ್ಲ. ಮೈನವಿರೇಳಿಸುವ ಕ್ರೂರಮೃಗಗಳ ಘೋರ ಗರ್ಜನೆಯನ್ನು ಕೇಳಿ ಅದೆಷ್ಟು ಭಯಪಡುವಳೊ !(೨೦). ಎಲೇ ಕೈಕೇಯಿ, ನಿನ್ನ ಇಚ್ಛೆ ನಡೆಯಲಿ! ಮುಂಡೆಯಾಗಿ ರಾಜ್ಯವನ್ನಾಳು! ಆ ಪುರುಷೋತ್ತಮನನ್ನು ಅಗಲಿದಮೇಲೆ ನಾನು "ಬದುಕಲಾರೆ" ಎಂದು ರೋದಿಸುತ್ತ ಮೃತಸ್ನಾನಮಾಡಿದವನಂತೆ ಸಂಕಟ ಪಡುತ್ತ ಅಮಂಗಳಕರವಾಗಿ ಕಾಣುತ್ತಿದ್ದ ಅರಮನೆಯನ್ನು ದಶರಥನು ಪರಿಜನರೊಡನೆ ಪ್ರವೇಶಿಸಿದನು(೨೧-೨೨). ಆಗ ಅಯೋಧ್ಯಾಪಟ್ಟಣದ ಚತುಷ್ಪಥಗಳೂ ಮನೆ ಬಾಗಿಲುಗಳೂ ಜನಶೂನ್ಯವಾಗಿದ್ದವು. ಅಂಗಡಿಗಳೂ

ತಂ ರಾಮಮೇವಾನುವಿಚಿಂತಯಂತಂ
ಸಮೀಕ್ಷ್ಯ ದೇವೀ ಶಯನೇ ನರೇಂದ್ರಮ್ ।
ಉಪೋಪವಿಶ್ಯಾಧಿಕಮಾರ್ತರೂಪಾ
ವಿನಿಶ್ವಸಂತೀ ವಿಲಲಾಪ ಕೃಚ್ಛ್ರಮ್ ॥ ೩೫

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಚತ್ವಾರಿಂಶಃ ಸರ್ಗಃ

---

## ತ್ರಿಚತ್ವಾರಿಂಶಃ ಸರ್ಗಃ

ಕೌಸಲ್ಯಾಪರಿದೇವಿತಮ್ ।

ತತಃ ಸಮೀಕ್ಷ್ಯ ಶಯನೇ ಸನ್ನಂ ಶೋಕೇನ ಪಾರ್ಥಿವಮ್ ।
ಕೌಸಲ್ಯಾ ಪುತ್ರಶೋಕಾರ್ತಾ ತಮುವಾಚ ಮಹೀಪತಿಮ್ ॥ ೧

ರಾಘವೇ ನರಶಾರ್ದೂಲೇ ವಿಷಂ ಮುಕ್ತ್ವಾ ವಿಜಿಹ್ಮಗಾ ।
ವಿಚರಿಷ್ಯತಿ ಕೈಕೇಯೀ ನಿರ್ಮುಕ್ತೇವ ಹಿ ಪನ್ನಗೀ ॥ ೨

---

ಹೀಗೆ ದಶರಥನು ಹಾಸಿಗೆಯಲ್ಲಿ ಮಲಗಿ ರಾಮನನ್ನೇ ನೆನೆದು ಹಂಬಲಿಸುತ್ತಿದ್ದನು. ಕೌಸಲ್ಯಾದೇವಿಯು ಅವನ ಸಮೀಪದಲ್ಲಿ ಕುಳಿತು ಅತ್ಯಂತ ದುಃಖದಿಂದ ಅವನನ್ನು ನೋಡಿ ನಿಟ್ಟುಸಿರುಬಿಡುತ್ತ ರೋದಿಸುತ್ತಿದ್ದಳು (೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತೆರಡನೆಯ ಸರ್ಗ

---

## ಸರ್ಗ ೪೩

ಕೌಸಲ್ಯೆಯು ದಶರಥನೊಡನೆ ತನ್ನ ದುಃಖವನ್ನು ತೋಡಿಕೊಳ್ಳುವುದು.

ಅನಂತರ ವಿಷಣ್ಣನಾಗಿ ಅಳುತ್ತ ಹಾಸಿಗೆಯಮೇಲೆ ಮಲಗಿದ್ದ ದಶರಥನನ್ನು ನೋಡಿ, ಕೌಸಲ್ಯೆಯು ಪುತ್ರಶೋಕದಿಂದ ಪೀಡಿತಳಾಗಿ ಈ ರೀತಿಯಲ್ಲಿ ಹೇಳಿದಳು:"ಮಹಾರಾಜ, ಕುಟಿಲಬುದ್ಧಿಯ ಕೈಕೇಯಿಯು ಪುರುಷಶ್ರೇಷ್ಠನಾದ ರಾಮನಮೇಲೆ ತನ್ನ ವಿಷವನ್ನು ಕಾರಿದಳು. ಇನ್ನು

ತತಸ್ತತ್ರ ಪ್ರವಿಷ್ಟಸ್ಯ ಕೌಸಲ್ಯಾಯಾ ನಿವೇಶನಮ್ ।
ಅಧಿರುಹ್ಯಾಪಿ ಶಯನಂ ಬಭೂವ ಲುಲಿತಂ ಮನಃ ॥ ೨೯
ಪುತ್ರದ್ವಯವಿಹೀನಂ ಚ ಸ್ನುಷಯಾಪಿ ವಿವರ್ಜಿತಮ್ ।
ಅಪಶ್ಯದ್ಭವನಂ ರಾಜಾ ನಷ್ಟಚಂದ್ರಮಿವಾಂಬರಮ್ ॥ ೩೦
ತಚ್ಚ ದೃಷ್ಟ್ವಾ ಮಹಾರಾಜೋ ಭುಜಮುದ್ಯಮ್ಯ ವೀರ್ಯವಾನ್ ।
ಉಚ್ಚೈಃ ಸ್ವರೇಣ ಚುಕ್ರೋಶ ಹಾ ರಾಘವ ಜಹಾಸಿ ನೌ ॥ ೩೧
ಸುಖಿತಾ ಬತ ತಂ ಕಾಲಂ ಜೀವಿಷ್ಯಂತಿ ನರೋತ್ತಮಾಃ ।
ಪರಿಷ್ವಜಂತೋ ಯೇ ರಾಮಂ ದ್ರಕ್ಷ್ಯಂತಿ ಪುನರಾಗತಮ್॥ ೩೨
ಅಥ ರಾತ್ರ್ಯಾಂ ಪ್ರಪನ್ನಾಯಾಂ ಕಾಲರಾತ್ರ್ಯಾಮಿವಾತ್ಮನಃ ।
ಅರ್ಧರಾತ್ರೇ ದಶರಥಃ ಕೌಸಲ್ಯಾಮಿದಮಬ್ರವೀತ್ ॥ ೩೩
ರಾಮಂ ಮೇಽನುಗತಾ ದೃಷ್ಟಿರದ್ಯಾಪಿ ನ ನಿವರ್ತತೇ ।
ನ ತ್ವಾ ಪಶ್ಯಾಮಿ ಕೌಸಲ್ಯೇ ಸಾಧು ಮಾಂ ಪಾಣಿನಾ ಸ್ಪೃಶ ॥ ೩೪

---

ಪರಾಧೀನನಂತಿದ್ದ ಅವನನ್ನು (ಮಂಚದಮೇಲೆ) ಮಲಗಿಸಿದರು. ಕೌಸಲ್ಯೆಯ ಅಂತಃಪುರಕ್ಕೆ ಹೋಗಿ ಹಾಸಿಗೆಯಲ್ಲಿ ಮಲಗಿದರೂ ಆತನ ಮನಸ್ಸಿಗೆ ಶಾಂತಿ ದೊರೆಯಲಿಲ್ಲ. ಮನಸ್ಸು ಹೊಯ್ದಾಡುತ್ತಿತ್ತು (೨೮-೨೯). ಇಬ್ಬರು ಮಕ್ಕಳೂ ಸೊಸೆಯೂ ಬಿಟ್ಟುಹೋದ ಅರಮನೆಯು ಚಂದ್ರನಿಲ್ಲದ ಶೂನ್ಯಾಕಾಶದಂತೆ ದಶರಥನಿಗೆ ಭಾಸವಾಗುತ್ತಿತ್ತು. ತಾನು ವೀರನಾದ ಮಹಾರಾಜನಾಗಿದ್ದರೂ ದಶರಥನು ಅದೆಲ್ಲವನ್ನೂ ಜ್ಞಾಪಿಸಿಕೊಂಡು ಸಂಕಟವನ್ನು ತಡೆಯಲಾರದೆ ಕೈಗಳನ್ನು ಎತ್ತಿ 'ರಾಮಾ! ನಮ್ಮಿಬ್ಬರನ್ನೂ ಬಿಟ್ಟು ಹೋದೆಯಾ!' ಎಂದು ಗಟ್ಟಿಯಾಗಿ ಕೂಗಿಕೊಂಡನು (೩೦-೩೧). "ರಾಮನು ಹಿಂದಿರುಗಿ ಬಂದಮೇಲೆ ಯಾರು ಅವನನ್ನು ಕಣ್ಣಾರೆ ನೋಡಿ ಅಪ್ಪಿಕೊಳ್ಳುವರೋ ಅವರೇ ಸುಖಿಗಳು. ಅಷ್ಟುಕಾಲ ಬದುಕಿರುವವರೇ ಪುಣ್ಯಾತ್ಮರು" ಎಂದನು (೩೨). ಹೀಗಿರಲು ದಶರಥನಿಗೆ ಕಾಳರಾತ್ರಿಯಂತಿದ್ದ ರಾತ್ರಿ ಬಂದಿತು. ಅರ್ಧರಾತ್ರಿಯಲ್ಲಿ ಅವನು ಕೌಸಲ್ಯೆಯನ್ನು ಕುರಿತು "ಕೌಸಲ್ಯೆ, ನನ್ನ ದೃಷ್ಟಿ ರಾಮನ ಹಿಂದೆ ಹೊರಟುಹೋಯಿತು; ಇನ್ನೂ ಹಿಂದಕ್ಕೆ ಬರಲೇ ಇಲ್ಲ. ನನಗೆ ನೀನು ಕಾಣಿಸುವುದೇ ಇಲ್ಲ. ನನ್ನನ್ನು ಕೈಯಿಂದ ಸರಿಯಾಗಿ ಸ್ಪರ್ಶಿಸು" ಎಂದನು (೩೩-೩೪).

ತೇ ರತ್ನಹೀನಾಸ್ತರುಣಾಃ ಫಲಕಾಲೇ ವಿವಾಸಿತಾಃ ।
ಕಥಂ ವತ್ಸ್ಯಂತಿ ಕೃಪಣಾಃ ಫಲಮೂಲೈಃ ಕೃತಾಶನಾಃ । ೮
ಅಪೀದಾನೀಂ ಸ ಕಾಲಃ ಸ್ಯಾನ್ಮಮ ಶೋಕಕ್ಷಯಃ ಶಿವಃ ।
ಸಭಾರ್ಯಂ ಯತ್ ಸಹ ಭ್ರಾತ್ರಾ ಪಶ್ಯೇಯಮಿಹ ರಾಘವಮ್ ॥ ೯
ಸುಪ್ತ್ವೇವೋಪಸ್ಥಿತೌ ವೀರೌ ಕದಾಯೋಧ್ಯಾಂ ಗಮಿಷ್ಯತಃ ।
ಯಶಸ್ವಿನೀ ಹೃಷ್ಟಜನಾ ಸೂಚ್ಛ್ರಿತಧ್ವಜಮಾಲಿನೀ ॥ ೧೦
ಕದಾ ಪ್ರೇಕ್ಷ್ಯ ನರವ್ಯಾಘ್ರಾವರಣ್ಯಾತ್ ಪುನರಾಗತೌ ।
ನಂದಿಷ್ಯತಿ ಪುರೀ ಹೃಷ್ಟಾ ಸಮುದ್ರ ಇವ ಪರ್ವಣಿ ॥ ೧೧
ಕದಾಯೋಧ್ಯಾಂ ಮಹಾಬಾಹುಃ ಪುರೀಂ ವೀರಃ ಪ್ರವೇಕ್ಷ್ಯತಿ ।
ಪುರಸ್ಕೃತ್ಯ ರಥೇ ಸೀತಾಂ ವೃಷಭೋ ಗೋವಧೂಮಿವ ॥ ೧೨
ಕದಾ ಪ್ರಾಣಿಸಹಸ್ರಾಣಿ ರಾಜಮಾರ್ಗೇ ಮಮಾತ್ಮಜೌ ।
ಲಾಜೈರವಕಿರಿಷ್ಯಂತಿ ಪ್ರವಿಶಂತಾವರಿಂದಮೌ ॥ ೧೩

---

ಬಹುದು?(೬-೭). ಆ ತರುಣರಿಗೆ ಇದು ಸುಖಭೋಗಗಳನ್ನು ಅನುಭವಿಸಬೇಕಾದ ಕಾಲ. ಇಂಥ ಕಾಲದಲ್ಲಿ ಉತ್ತಮ ಭೋಗವಸ್ತುಗಳನ್ನು ಕಸಿದುಕೊಂಡು ಅವರನ್ನು ಕಾಡಿಗೆ ಅಟ್ಟಿದ್ದಾಯಿತು. ಕಾಡುಹಣ್ಣುಗಳನ್ನೂ ಬೇರುಗಳನ್ನೂ ತಿಂದುಕೊಂಡು ದೀನರಾಗಿ ಅವರು ಬಾಳುವುದು ಹೇಗೆ ?(೮). ನನ್ನ ಶೋಕವು ಪರಿಹಾರವಾಗುವ ಶುಭಕಾಲವು ಈಗಲೇ ಬಂದೀತೆ ? ರಾಮನು ತನ್ನ ಪತ್ನಿಯನ್ನೂ ತಮ್ಮನನ್ನೂ ಜೊತೆಗೂಡಿ ಬರುವುದನ್ನು ನೋಡುವೆನೆ ? ಮಲಗಿದ್ದು ಎದ್ದುಬಂದವರಂತೆ ಆ ಇಬ್ಬರು ವೀರರು ಅಯೋಧ್ಯೆಗೆ ಪುನಃ ಯಾವಾಗ ಬರುವರೊ! ವನವಾಸದ ಅವಧಿಯು ಬೇಗನೆ ಕಳೆದುಹೋಗಬಾರದೆ! ಜನರು ಆನಂದದಿಂದ ಮಂಗಳಧ್ವಜಗಳನ್ನು ಕಟ್ಟಿ ನಗರವನ್ನು ಅಲಂಕರಿಸುವ ಕಾಲ ಎಂದಿಗೆ ಬರುವುದೊ!(೯-೧೦). ಆ ನರಶ್ರೇಷ್ಠರು ಅರಣ್ಯದಿಂದ ಹಿಂದಿರುಗಿ ಬಂದುದನ್ನು ನೋಡಿ ಅಯೋಧ್ಯೆಯು ಯಾವಾಗ ಆನಂದಿಸುವುದೊ! ಪರ್ವಕಾಲದ ಸಮುದ್ರದಂತೆ ಉಬ್ಬುವುದೊ! ಮಹಾಬಾಹುವಾದ ರಾಮನು ಧೇನುಸಹಿತ ವಾದ ವೃಷಭದಂತೆ ಸೀತೆಯೊಡನೆ ರಥದಲ್ಲಿ ಕುಳಿತು ಈ ಪಟ್ಟಣವನ್ನು ಯಾವಾಗ ಪ್ರವೇಶಿಸುವನೊ !(೧೧-೧೨). ಶತ್ರುಸಂಹಾರಕರಾದ ನನ್ನ ಇಬ್ಬರು

ವಿವಾಸ್ಯ ರಾಮಂ ಸುಭಗಾ ಲಬ್ಧಕಾಮಾ ಸಮಾಹಿತಾ ।
ತ್ರಾಸಯಿಷ್ಯತಿ ಮಾಂ ಭೂಯೋ ದುಷ್ಟಾಹಿರಿವ ವೇಶ್ಮನಿ ॥ ೩

ಅಥಾಸ್ಮಿನ್ನಗರೇ ರಾಮಶ್ಚರನ್ ಭೈಕ್ಷಂ ಗೃಹೇ ವಸೇತ್ ।
ಕಾಮಕಾರೋ ವರಂ ದಾತುಮಪಿ ದಾಸಂ ಮಮಾತ್ಮಜಮ್ ॥ ೪

ಪಾತಯಿತ್ವಾ ತು ಕೈಕೇಯ್ಯಾ ರಾಮಂ ಸ್ಥಾನಾದ್ಯಥೇಪ್ಸಿತಃ ।
ಪ್ರವಿದ್ಧೋ ರಕ್ಷಸಾಂ ಭಾಗಃ ಪರ್ವಣೀವಾಹಿತಾಗ್ನಿನಾ ॥ ೫

ಗಜರಾಜಗತಿರ್ವೀರೋ ಮಹಾಬಾಹುರ್ಧನುರ್ಧರಃ ।
ವನಮಾವಿಶತೇ ನೂನಂ ಸಭಾರ್ಯಃ ಸಹಲಕ್ಷ್ಮಣಃ ॥ ೬

ವನೇ ತ್ವದೃಷ್ಟದುಃಖಾನಾಂ ಕೈಕೇಯ್ಯನುಮತೇ ತ್ವಯಾ ।
ತ್ಯಕ್ತಾನಾಂ ವನವಾಸಾಯ ಕಾ ನ್ವವಸ್ಥಾ ಭವಿಷ್ಯತಿ ॥ ೭

---

ಪೊರೆಯನ್ನು ಬಿಟ್ಟ ಸರ್ಪಿಣಿಯಂತೆ ಮೆರೆಯುವಳು (೧-೨). ರಾಮನನ್ನು ಕಾಡಿಗೆ ಅಟ್ಟಿ ಧನ್ಯಳಾದಳು. ತನ್ನ ಇಷ್ಟವು ಸಿದ್ಧಿಸಿತೆಂದು ಸಂತುಷ್ಟಳಾದಳು. ಮನೆಯಲ್ಲಿ ಸೇರಿಕೊಂಡ ಕೆಟ್ಟ ಹಾವಿನಂತೆ ಇನ್ನು ಮುಂದೆ ನನ್ನನ್ನು ಬೆದರಿಸುವಳು (೩). ಒಂದುವೇಳೆ ರಾಮನು ಈ ಪಟ್ಟಣದಲ್ಲಿ ತಿರುಪೆಬೇಡಿ ತಂದು ಜೀವಿಸುತ್ತ ಮನೆಯಲ್ಲಿರಬಹುದೆಂದೂ ಅಥವಾ ಅವಳಿಗೆ ದಾಸನಾಗಿ ನನ್ನ ಮಗನು ಸೇವೆಮಾಡಬೇಕೆಂದೂ ಕೇಳಿದ್ದರೆ ಕೂಡ, ಅಂಥ ವರವನ್ನು ಕೊಡುವುದು ಎಷ್ಟೋ ಸಮ್ಮತವಾಗಿತ್ತು (೪). ಆದರೆ ಕೈಕೇಯಿಯು ರಾಮನನ್ನು ಮನೆಯಿಂದ ಹೊರಡಿಸಿ ಅವನನ್ನು ಯಥೇಷ್ಟವಾಗಿ ರಾಕ್ಷಸರ ಪಾಲುಮಾಡಬೇಕೆಂದು ಉದ್ದೇಶಿಸಿದಳು. ಆಹಿತಾಗ್ನಿಯು ಪರ್ವಕಾಲದಲ್ಲಿ ರಾಕ್ಷಸರಿಗೆ ಆಹುತಿಯನ್ನು ಕೊಡುವಂತೆ ರಾಮನಿಗೆ 'ರಕ್ಷಸಾಂ ಭಾಗೋಽಸಿ' ಎಂದುಬಿಟ್ಟಳು (೫). ಆಜಾನುಬಾಹುವಾದ ಆ ವೀರನು ಧನುರ್ಧಾರಿಯಾಗಿ ಗಜರಾಜನಂತೆ ಹೆಜ್ಜೆಯನ್ನಿಡುತ್ತ ತನ್ನ ಪತ್ನಿಯನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಅಡವಿಯಲ್ಲಿ ಹೋಗುತ್ತಿರಬಹುದು. ಆ ಮೂವರೂ ಅಡವಿಯ ಕಷ್ಟಗಳನ್ನು ಅರಿಯದವರು. ಕೈಕೇಯಿಯ ಮಾತಿಗೆ ಒಪ್ಪಿ ನೀನು ಅವರನ್ನು ವನವಾಸಕ್ಕೆ ದೂಡಿದೆಯಲ್ಲ! ಅವರ ಗತಿ ಏನಾಗ

ತೇ ರತ್ನಹೀನಾಸ್ತರುಣಾಃ ಫಲಕಾಲೇ ವಿವಾಸಿತಾಃ ।
ಕಥಂ ವತ್ಸ್ಯಂತಿ ಕೃಪಣಾಃ ಫಲಮೂಲೈಃ ಕೃತಾಶನಾಃ । ೮
ಅಪೀದಾನೀಂ ಸ ಕಾಲಃ ಸ್ಯಾನ್ಮಮ ಶೋಕಕ್ಷಯಃ ಶಿವಃ ।
ಸಭಾರ್ಯಂ ಯತ್ ಸಹ ಭ್ರಾತ್ರಾ ಪಶ್ಯೇಯಮಿಹ ರಾಘವಮ್ ॥ ೯
ಸುಪ್ತ್ವೇವೋಪಸ್ಥಿತೌ ವೀರೌ ಕದಾಯೋಧ್ಯಾಂ ಗಮಿಷ್ಯತಃ ।
ಯಶಸ್ವಿನೀ ಹೃಷ್ಟಜನಾ ಸೂಚ್ಛ್ರಿತಧ್ವಜಮಾಲಿನೀ ॥ ೧೦
ಕದಾ ಪ್ರೇಕ್ಷ್ಯ ನರವ್ಯಾಘ್ರಾವರಣ್ಯಾತ್ ಪುನರಾಗತೌ ।
ನಂದಿಷ್ಯತಿ ಪುರೀ ಹೃಷ್ಟಾ ಸಮುದ್ರ ಇವ ಪರ್ವಣಿ ॥ ೧೧
ಕದಾಯೋಧ್ಯಾಂ ಮಹಾಬಾಹುಃ ಪುರೀಂ ವೀರಃ ಪ್ರವೇಕ್ಷ್ಯತಿ ।
ಪುರಸ್ಕೃತ್ಯ ರಥೇ ಸೀತಾಂ ವೃಷಭೋ ಗೋವಧೂಮಿವ ॥ ೧೨
ಕದಾ ಪ್ರಾಣಿಸಹಸ್ರಾಣಿ ರಾಜಮಾರ್ಗೇ ಮಮಾತ್ಮಜೌ ।
ಲಾಜೈರವಕಿರಿಷ್ಯಂತಿ ಪ್ರವಿಶಂತಾವರಿಂದಮೌ ॥ ೧೩

---

ಬಹುದು?(೬-೭). ಆ ತರುಣರಿಗೆ ಇದು ಸುಖಭೋಗಗಳನ್ನು ಅನುಭವಿಸಬೇಕಾದ ಕಾಲ. ಇಂಥ ಕಾಲದಲ್ಲಿ ಉತ್ತಮ ಭೋಗವಸ್ತುಗಳನ್ನು ಕಸಿದುಕೊಂಡು ಅವರನ್ನು ಕಾಡಿಗೆ ಅಟ್ಟಿದ್ದಾಯಿತು. ಕಾಡುಹಣ್ಣುಗಳನ್ನೂ ಬೇರುಗಳನ್ನೂ ತಿಂದುಕೊಂಡು ದೀನರಾಗಿ ಅವರು ಬಾಳುವುದು ಹೇಗೆ ?(೮). ನನ್ನ ಶೋಕವು ಪರಿಹಾರವಾಗುವ ಶುಭಕಾಲವು ಈಗಲೇ ಬಂದೀತೆ ? ರಾಮನು ತನ್ನ ಪತ್ನಿಯನ್ನೂ ತಮ್ಮನನ್ನೂ ಜೊತೆಗೂಡಿ ಬರುವುದನ್ನು ನೋಡುವೆನೆ ? ಮಲಗಿದ್ದು ಎದ್ದುಬಂದವರಂತೆ ಆ ಇಬ್ಬರು ವೀರರು ಅಯೋಧ್ಯೆಗೆ ಪುನಃ ಯಾವಾಗ ಬರುವರೊ! ವನವಾಸದ ಅವಧಿಯು ಬೇಗನೆ ಕಳೆದುಹೋಗಬಾರದೆ! ಜನರು ಆನಂದದಿಂದ ಮಂಗಳಧ್ವಜಗಳನ್ನು ಕಟ್ಟಿ ನಗರವನ್ನು ಅಲಂಕರಿಸುವ ಕಾಲ ಎಂದಿಗೆ ಬರುವುದೊ!(೯-೧೦). ಆ ನರಶ್ರೇಷ್ಠರು ಅರಣ್ಯದಿಂದ ಹಿಂದಿರುಗಿ ಬಂದುದನ್ನು ನೋಡಿ ಅಯೋಧ್ಯೆಯು ಯಾವಾಗ ಆನಂದಿಸುವುದೊ! ಪರ್ವಕಾಲದ ಸಮುದ್ರದಂತೆ ಉಬ್ಬುವುದೊ! ಮಹಾಬಾಹುವಾದ ರಾಮನು ಧೇನುಸಹಿತ ವಾದ ವೃಷಭದಂತೆ ಸೀತೆಯೊಡನೆ ರಥದಲ್ಲಿ ಕುಳಿತು ಈ ಪಟ್ಟಣವನ್ನು ಯಾವಾಗ ಪ್ರವೇಶಿಸುವನೊ !(೧೧-೧೨). ಶತ್ರುಸಂಹಾರಕರಾದ ನನ್ನ ಇಬ್ಬರು

ಪ್ರವಿಶಂತೌ ಕದಾಯೋಧ್ಯಾಂ ದ್ರಕ್ಷ್ಯಾಮಿ ಶುಭಕುಂಡಲೌ ।
ಉದಗ್ರಾಯುಧನಿಸ್ತ್ರಿಂಶೌ ಸಶೃಂಗಾವಿವ ಪರ್ವತೌ ॥ ೧೪

ಕದಾ ಸುಮನಸಃ ಕನ್ಯಾ ದ್ವಿಜಾತೀನಾಂ ಫಲಾನಿ ಚ ।
ಪ್ರದಿಶಂತ್ಯಃ ಪುರೀಂ ಹೃಷ್ಟಾಃ ಕರಿಷ್ಯಂತಿ ಪ್ರದಕ್ಷಿಣಮ್ ॥ ೧೫

ಕದಾ ಪರಿಣತೋ ಬುದ್ಧ್ಯಾ ವಯಸಾ ಚಾಮರಪ್ರಭಃ ।
ಅಭ್ಯುಪೈಷ್ಯತಿ ಧರ್ಮಜ್ಞಸ್ತ್ರಿವರ್ಷ ಇವ ಲಾಲಯನ್ ॥ ೧೬

ನಿಸ್ಸಂಶಯಂ ಮಯಾ ಮನ್ಯೇ ಪುರಾ ವೀರ ಕದರ್ಯಯಾ ।
ಪಾತುಕಾಮೇಷು ವತ್ಸೇಷು ಮಾತ್ಯಾಣಾಂ ಶಾತಿತಾಃ ಸ್ತನಾಃ ॥ ೧೭

ಸಾಹಂ ಗೌರಿವ ಸಿಂಹೇನ ವಿವತ್ಸಾ ವತ್ಸಲಾ ಕೃತಾ।
ಕೈಕೇಯ್ಯಾ ಪುರುಷವ್ಯಾಘ್ರ ಬಾಲವತ್ಸೇವ ಗೌರ್ಬಲಾತ್ ॥ ೧೮

ನ ಹಿ ತಾವದ್ಗುಣೈರ್ಜುಷ್ಟಂ ಸರ್ವಶಾಸ್ತ್ರವಿಶಾರದಮ್ ।
ಏಕಪುತ್ರಾ ವಿನಾ ಪುತ್ರಮಹಂ ಜೀವಿತುಮುತ್ಸಹೇ ॥ ೧೯

---

ಪುತ್ರರೂ ರಾಜಬೀದಿಯಲ್ಲಿ ಬರುವಾಗ ಸಾವಿರಾರು ಜನರು ಸೇರಿ ಎಂದು ಅವರ ಮೇಲೆ ಅರಳನ್ನು ಬೀರುವರೊ ! ಉತ್ತಮವಾದ ಕರ್ಣಕುಂಡಲಗಳನ್ನು ಧರಿಸಿ ಘೋರವಾದ ಧನುಃಖಡ್ಗಗಳನ್ನು ಹಿಡಿದು, ಶಿಖರಗಳಿಂದ ಕೂಡಿದ ಎರಡು ಗಿರಿಗಳಂತೆ ಪುರಪ್ರವೇಶವನ್ನು ಮಾಡುವ ರಾಮಲಕ್ಷ್ಮಣರನ್ನು ಎಂದು ನೋಡುವೆನೊ!(೧೩-೧೪). ಯಾವಾಗ ಹೆಣ್ಣುಮಕ್ಕಳು ವಿಪ್ರರಿಗೆ ಹಣ್ಣು ಹೂಗಳನ್ನು ಅರ್ಪಿಸುತ್ತ ಆನಂದದಿಂದ ನಗರಪ್ರದಕ್ಷಿಣೆ ಮಾಡುವರೊ! ಧರ್ಮಜ್ಞನಾಗಿ ದೇವತೆಯಂತೆ ಬೆಳಗುತ್ತಿರುವ ನನ್ನ ರಾಮನು, ಜ್ಞಾನದಲ್ಲಿಯೂ ವಯಸ್ಸಿನಲ್ಲಿಯೂ ಬೆಳೆದಿದ್ದರೂ ಮೂರುವರ್ಷದ ಹುಡುಗನಂತೆ ಲಲ್ಲೆಯಾಡುತ್ತ ಯಾವಾಗ ನನ್ನ ಬಳಿಗೆ ಬರುವನೊ !(೧೫-೧೬). ಮಹಾರಾಜ, ಪಾಪಿಷ್ಠಳಾದ ನಾನು ಪೂರ್ವಜನ್ಮದಲ್ಲಿ, ಕರುಗಳು ಹಾಲನ್ನು ಕುಡಿಯಲು ಹೋದಾಗ ಅವುಗಳ ತಾಯಂದಿರ ಮೊಲೆಗಳನ್ನು ನಿಃಸಂದೇಹವಾಗಿ ಅವುಗಳಿಂದ ಬೇರೆಮಾಡಿರಬೇಕು. ಆದ್ದರಿಂದಲೇ ಮಗನಿಗಾಗಿ ಹಾತೊರೆಯುವ ನನ್ನನ್ನು ಕೈಕೇಯಿಯು ಮಗನಿಂದ ಅಗಲಿಸಿದಳು. ಸಿಂಹವು ನುಗ್ಗಿ ಬಂದು ಹಸುವಿನ ಎಳೆಯಕರುವನ್ನು ಅಪಹರಿಸಿದಂತೆ ಮಾಡಿದಳು (೧೭-೧೮). ನನಗೆ ಇರತಕ್ಕವನು ಒಬ್ಬನೇ ಮಗ. ಅಷ್ಟು ಗುಣಶಾಲಿಯಾಗಿ ಸರ್ವಶಾಸ್ತ್ರ

ನ ಹಿ ಮೇ ಜೀವಿತೇ ಕಿಂಚಿತ್ ಸಾಮರ್ಥ್ಯಮಿಹ ಕಲ್ಪ್ಯತೇ ।
ಅಪಶ್ಯಂತ್ಯಾಃ ಪ್ರಿಯಂ ಪುತ್ರಂ ಮಹಾಬಾಹುಂ ಮಹಾಬಲಮ್ ॥

ಅಯಂ ಹಿ ಮಾಂ ದೀಪಯತೇ ಸಮುತ್ಥಿತ -
ಸ್ತನೂಜಶೋಕಪ್ರಭವೋ ಹುತಾಶನಃ ।
ಮಹೀಮಿಮಾಂ ರಶ್ಮಿಭಿರುದ್ಧತಪ್ರಭೋ
ಯಥಾ ನಿದಾಘೇ ಭಗವಾನ್ ದಿವಾಕರಃ ॥ ೨೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಚತ್ವಾರಿಂಶಃ ಸರ್ಗಃ

ವಿಶಾರದನಾದ ಆ ಮಗನನ್ನು ಅಗಲಿದಮೇಲೆ ನನಗೆ ಬದುಕಿರುವ ಇಚ್ಛೆಇಲ್ಲ. ಮಹಾಬಾಹುವೂ ಮಹಾಶೂರನೂ ಆದ ಪ್ರಿಯಪುತ್ರನನ್ನು ನೋಡದೆ ನನ್ನಲ್ಲಿ ಬದುಕುವ ಸಾಮರ್ಥ್ಯವಿಲ್ಲ(೧೯-೨೦). ಪುತ್ರಶೋಕದಿಂದ ಹುಟ್ಟಿದ ಬೆಂಕಿಯು ನನ್ನನ್ನು ದಹಿಸುತ್ತಿದೆ. ಬೇಸಿಗೆಯಲ್ಲಿ ಉಗ್ರವಾದ ಪ್ರಭೆಯನ್ನು ಬೀರುವ ಸೂರ್ಯನು ಕಿರಣಗಳಿಂದ ಭೂಮಿಯನ್ನು ಸುಡುವಂತೆ ಸುಡುತ್ತಿದೆ" ಎಂದಳು(೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತು ಮೂರನೆಯ ಸರ್ಗ

## ಚತುಶ್ಚತ್ವಾರಿಂಶಃ ಸರ್ಗಃ

### ಸುಮಿತ್ರಾಶ್ವಾಸನಮ್

ವಿಲಪಂತೀಂ ತಥಾ ತಾಂ ತು ಕೌಸಲ್ಯಾಂ ಪ್ರಮದೋತ್ತಮಾಮ್ ।
ಇದಂ ಧರ್ಮೇ ಸ್ಥಿತಾ ಧರ್ಮ್ಯಂ ಸುಮಿತ್ರಾ ವಾಕ್ಯಮಬ್ರವೀತ್ ॥ ೧

ತವಾರ್ಯೇ ಸದ್ಗುಣೈರ್ಯುಕ್ತಃ ಪುತ್ರಃ ಸ ಪುರುಷೋತ್ತಮಃ ।
ಕಿಂ ತೇ ವಿಲಪಿತೇನೈವಂ ಕೃಪಣಂ ರುದಿತೇನ ವಾ ॥ ೨

ಯಸ್ತವಾರ್ಯೇ ಗತಃ ಪುತ್ರಸ್ತ್ಯಕ್ತ್ವಾ ರಾಜ್ಯಂ ಮಹಾಬಲಃ ।
ಸಾಧು ಕುರ್ವನ್ಮಹಾತ್ಮಾನಂ ಪಿತರಂ ಸತ್ಯವಾದಿನಮ್ ॥ ೩

ಶಿಷ್ಟೈರಾಚರಿತೇ ಸಮ್ಯಕ್ ಶಶ್ವತ್ ಪ್ರೇತ್ಯಫಲೋದಯೇ ।
ರಾಮೋ ಧರ್ಮೇ ಸ್ಥಿತಃ ಶ್ರೇಷ್ಠೋ ನ ಸ ಶೋಚ್ಯಃ ಕದಾಚನ ॥ ೪

ವರ್ತತೇ ಚೋತ್ತಮಾಂ ವೃತ್ತಿಂ ಲಕ್ಷ್ಮಣೋಽಸ್ಮಿನ್ ಸದಾನಘಃ ।
ದಯಾವಾನ್ ಸರ್ವಭೂತೇಷು ಲಾಭಸ್ತಸ್ಯ ಮಹಾತ್ಮನಃ ॥ ೫

## ಸರ್ಗ ೪೪

### ಸುಮಿತ್ರೆಯು ಕೌಸಲ್ಯೆಗೆ ಸಮಾಧಾನ ಹೇಳುವುದು.

ಹೀಗೆ ಮಹಿಳೆಯರಲ್ಲಿ ಉತ್ತಮಳಾದ ಕೌಸಲ್ಯೆಯು ವಿಲಪಿಸುತ್ತಿರಲು, ಧರ್ಮಶೀಲಳಾದ ಸುಮಿತ್ರೆಯು ಅವಳನ್ನು ಕುರಿತು ಧರ್ಮಯುಕ್ತವಾದ ಮಾತಿನಿಂದ ಸಮಾಧಾನ ಹೇಳಿದಳು:"ಆರ್ಯೆ, ಸದ್ಗುಣಪೂರ್ಣನಾದ ನಿನ್ನಪುತ್ರನು ಪುರುಷರಲ್ಲಿ ಶ್ರೇಷ್ಠನೆನಿಸಿಕೊಂಡಿದ್ದಾನೆ. ನೀನು ಹೀಗೆ ದೈನ್ಯದಿಂದ ದುಃಖವನ್ನು ತೋಡಿಕೊಳ್ಳುವುದೇಕೆ?ಅಳುವುದೇಕೆ ? (೧-೨). ಮಹಾಬಲಾಢ್ಯನಾದ ನಿನ್ನ ಮಗನು ಮಹಾತ್ಮನಾದ ತನ್ನ ತಂದೆಯನ್ನು ಸತ್ಯಸಂಧನೆಂದು ಸ್ಥಿರಪಡಿಸುವುದಕ್ಕಾಗಿ ರಾಜ್ಯವನ್ನು ತ್ಯಜಿಸಿ ಹೋಗಿದ್ದಾನೆ. ಆರ್ಯೆ, ರಾಮನು ಪರಲೋಕದಲ್ಲಿಯೂ ಶಾಶ್ವತಫಲವನ್ನು ಕೊಡತಕ್ಕ ಶಿಷ್ಟಾಚಾರದಲ್ಲಿ ದೃಢವಾಗಿ ನಿಂತಿದ್ದಾನೆ. ಧರ್ಮನಿಷ್ಠನಾದ ಆ ಮಹಾಪುರುಷನಿಗಾಗಿ ಶೋಕಿಸುವುದು ಎಂದಿಗೂ ಸರಿಯಲ್ಲ (೩-೪). ಲಕ್ಷ್ಮಣನು ಸಮಸ್ತ ಪ್ರಾಣಿಗಳಲ್ಲಿಯೂ ದಯಾಶಾಲಿ. ಅವನು ರಾಮನ ವಿಷಯದಲ್ಲಿ

ಅರಣ್ಯವಾಸೇ ಯದ್ದುಃಖಂ ಜಾನತೀ ವೈ ಸುಖೋಚಿತಾ ।
ಅನುಗಚ್ಛತಿ ವೈದೇಹೀ ಧರ್ಮಾತ್ಮಾನಂ ತವಾತ್ಮಜಮ್ ॥ ೬

ಕೀರ್ತಿಭೂತಾಂ ಪತಾಕಾಂ ಯೋ ಲೋಕೇ ಭ್ರಾಮಯತಿ ಪ್ರಭುಃ ।
ದಮಸತ್ಯವ್ರತಧನಃ ಕಿಂ ನ ಪ್ರಾಪ್ತಸ್ತವಾತ್ಮಜಃ ॥ ೭

ವ್ಯಕ್ತಂ ರಾಮಸ್ಯ ವಿಜ್ಞಾಯ ಶೌಚಂ ಮಾಹಾತ್ಮ್ಯ ಮುತ್ತಮಮ್ ।
ನ ಗಾತ್ರಮಂಶುಭಿಃ ಸೂರ್ಯಃ ಸಂತಾಪಯಿತುಮರ್ಹತಿ ॥ ೮

ಶಿವಃ ಸರ್ವೇಷು ಕಾಲೇಷು ಕಾನನೇಭ್ಯೋ ವಿನಿಃಸೃತಃ ।
ರಾಘವಂ ಯುಕ್ತಶೀತೋಷ್ಣಃ ಸೇವಿಷ್ಯತಿ ಸುಖೋಽನಿಲಃ ॥ ೯

ಶಯಾನಮನಘಂ ರಾತ್ರೌ ಪಿತೇವಾಭಿಪರಿಷ್ವಜನ್ ।
ರಶ್ಮಿಭಿಃ ಸಂಸ್ಪೃಶನ್ ಶೀತೈಶ್ಚಂದ್ರಮಾ ಹ್ಲಾದಯಿಷ್ಯತಿ ॥ ೧೦

ದದೌ ಚಾಸ್ತ್ರಾಣಿ ದಿವ್ಯಾನಿ ಯಸ್ಮೈ ಬ್ರಹ್ಮಾ ಮಹೌಜಸೇ ।
ದಾನವೇಂದ್ರಂ ಹತಂ ದೃಷ್ಟ್ವಾ ತಿಮಿಧ್ವಜಸುತಂ ರಣೇ ॥ ೧೧

---

ಭ್ರಾತೃಶುಶ್ರೂಷೆಯೆಂಬ ಶ್ರೇಷ್ಠವಾದ ವೃತ್ತಿಯನ್ನವಲಂಬಿಸಿ ಪುಣ್ಯಶಾಲಿಯಾಗಿದ್ದಾನೆ. ಉದಾರಹೃದಯನಾದ ಆತನಿಗೆ ಇದರಿಂದ ಲಾಭವೇ ಉಂಟು (೫). ಸುಖವಾಗಿರಬಹುದಾಗಿದ್ದ ಜಾನಕಿಯು ವನವಾಸದ ಕಷ್ಟವನ್ನು ತಿಳಿದಿದ್ದರೂ ಧರ್ಮಾತ್ಮನಾದ ನಿನ್ನ ಮಗನನ್ನು ಹಿಂಬಾಲಿಸಿ ಹೋಗಿದ್ದಾಳೆ. ಪ್ರಭುವಾದ ರಾಮನು ತನ್ನ ಕೀರ್ತಿಪತಾಕೆಯನ್ನು ಹಾರಿಸುತ್ತಿದ್ದಾನೆ. ಇಂದ್ರಿಯಜಯ ಮತ್ತು ಸತ್ಯವ್ರತಗಳೇ ಅವನ ಧನ. ಅಂಥ ನಿನ್ನ ಮಗನಿಗೆ ಲಭಿಸದಿರುವ ಶ್ರೇಯಸ್ಸಾದರೂ ಯಾವುದು?(೬-೭). ಅವನ ಅಂತರಂಗಶುದ್ಧಿಯೂ ಎಣೆಯಿಲ್ಲದ ಮಹಿಮೆಯೂ ಸೂರ್ಯನಿಗೆ ಕೂಡ ಚೆನ್ನಾಗಿ ಗೊತ್ತು. ಅವನು ರಾಮನ ದೇಹವನ್ನು ತನ್ನ ಕಿರಣಗಳಿಂದ ಪೀಡಿಸಲಾರ. ಅರಣ್ಯಗಳಿಂದ ಬೀಸುತ್ತ ಬರುವ ವಾಯುವು ಸರ್ವಋತುಗಳಲ್ಲಿಯೂ ಸಮಶೀತೋಷ್ಣನಾಗಿ ಹಿತಕರವಾಗಿ ಸುಳಿಯುತ್ತ ರಾಘವನನ್ನು ಸೇವಿಸುವನು (೮-೯). ನಿಷ್ಕಲ್ಮಷ ಹೃದಯನಾದ ರಾಮನು ರಾತ್ರಿಯಲ್ಲಿ ಮಲಗಿರುವಾಗ, ತಂದೆಯು ಆಲಿಂಗಿಸಿ ಕೊಳ್ಳುವಂತೆ ಚಂದ್ರನು ತನ್ನ ಶೀತಕಿರಣಗಳನ್ನು ಹರಡಿ ಆನಂದಪಡಿಸುವನು (೧೦).

ಸ ಶೂರಃ ಪುರುಷವ್ಯಾಘ್ರಃ ಸ್ವಬಾಹುಬಲಮಾಶ್ರಿತಃ ।
ಅಸಂತ್ರಸ್ತೋಽಪ್ಯರಣ್ಯಸ್ಥೋ ವೇಶ್ಮನೀವ ನಿವತ್ಸ್ಯತಿ ॥ ೧೨

ಯಸ್ಯೇಷುಪಥಮಾಸಾದ್ಯ ವಿನಾಶಂ ಯಾಂತಿ ಶತ್ರವಃ ।
ಕಥಂ ನ ಪೃಥಿವೀ ತಸ್ಯ ಶಾಸನೇ ಸ್ಥಾತುಮರ್ಹತಿ ॥ ೧೩

ಯಾ ಶ್ರೀಃ ಶೌರ್ಯಂ ಚ ರಾಮಸ್ಯ ಯಾ ಚ ಕಲ್ಯಾಣಸತ್ತ್ವತಾ।
ನಿವೃತ್ತಾರಣ್ಯವಾಸಃ ಸ ಕ್ಷಿಪ್ರಂ ರಾಜ್ಯಮವಾಪ್ಸ್ಯತಿ ॥ ೧೪

ಸೂರ್ಯಸ್ಯಾಪಿ ಭವೇತ್ಸೂರ್ಯೋ ಹ್ಯಗ್ನೇರಗ್ನಿಃ ಪ್ರಭೋಃ ಪ್ರಭುಃ ।
ಶ್ರಿಯಃ ಶ್ರೀಶ್ಚ ಭವೇದಗ್ರ್ಯಾ ಕೀರ್ತ್ಯಾಃ ಕೀರ್ತಿಃ ಕ್ಷಮಾಕ್ಷಮಾ ॥ ೧೫

---

ರಣರಂಗದಲ್ಲಿ ತಿಮಿಧ್ವಜನ ಮಗನಾದ ರಾಕ್ಷಸೇಶ್ವರನೊಬ್ಬನನ್ನು ಸಂಹರಿಸಿದನಷ್ಟೆ*. ಆಗ ಬ್ರಹ್ಮನು ಮಹಾತೇಜಸ್ವಿಯಾದ ರಾಮನಿಗೆ ದಿವ್ಯಾಸ್ತ್ರಗಳನ್ನು ಕೊಟ್ಟಿರುವನಲ್ಲವೆ? ನರಶ್ರೇಷ್ಠನಾದ ಆ ವೀರನು ಅರಣ್ಯದಲ್ಲಿಯೂ ನಿರ್ಭಯನಾಗಿರುತ್ತಾನೆ. ತನ್ನ ಮನೆಯಲ್ಲಿರುವಂತೆ ಅರಣ್ಯದಲ್ಲಿರುತ್ತಾನೆ (೧೧-೧೨). ರಾಮನ ಬಾಣಮಾರ್ಗಕ್ಕೆ ಸಿಕ್ಕಿದ ಸಕಲ ವೈರಿಗಳೂ ಧ್ವಂಸವಾಗುತ್ತಿರುವಾಗ, ಈ ಭೂಮಂಡಲವು ಅವನ ಆಜ್ಞೆಗೆ ಅಧೀನವಾಗಿ ನಿಲ್ಲದೆ ಇದ್ದೀತೆ? ಅವನ ಶರೀರಸಂಪತ್ತು, ಶೌರ್ಯ, ಕಲ್ಯಾಣಕರವಾದ ಅವನ ಸತ್ತ್ವಗುಣ ಇವನ್ನು ನೋಡಿದರೆ ರಾಮನು ವನವಾಸವನ್ನು ಮುಗಿಸಿ ಬಂದು ಶೀಘ್ರದಲ್ಲಿ ತನ್ನ ರಾಜ್ಯವನ್ನು ಪಡೆಯುವನೆಂಬುದರಲ್ಲಿ ಸಂದೇಹವಿಲ್ಲ(೧೩-೧೪). ರಾಮನು ಸೂರ್ಯನನ್ನು, ಬೆಳಗುವ ಸೂರ್ಯ. ಅಗ್ನಿಯನ್ನು ಸುಡಬಲ್ಲ ಅಗ್ನಿ. ನಿಯಾಮಕನನ್ನು ನಿಯಂತ್ರಿಸಬಲ್ಲ ಪ್ರಭು. ಲಕ್ಷ್ಮಿಗೆ ಸಂಪತ್ತನ್ನು ಕೊಡುವ ಅಧಿದೇವತೆ. ಕೀರ್ತಿಗೆ ಕೀರ್ತಿಯನ್ನು ಗಳಿಸಿಕೊಡುವ

---

* ತಿಮಿಧ್ವಜನಿಗೆ ಶಂಬರನೆಂದು ಇನ್ನೊಂದು ಹೆಸರಿತ್ತು (ಅಯೋ. ೯-೧೨, ೧೩ ನೋಡಿ). ಅವನ ಮಗನನ್ನು ಶ್ರೀರಾಮನು ಸಂಹರಿಸಿದ್ದನೆಂದು ಪೂರ್ವವೃತ್ತಾಂತವನ್ನು ಈ ಶ್ಲೋಕದ ಆಧಾರದಿಂದ ಊಹಿಸಿಕೊಳ್ಳಬೇಕಾಗಿದೆ. ತಿಮಿಧ್ವಜಸುತನೆಂದರೆ ಸುಬಾಹುವೆಂದೂ ಬ್ರಹ್ಮನೆಂದರೆ ಬ್ರಾಹ್ಮಣನಾದ ವಿಶ್ವಾಮಿತ್ರನೆಂದೂ ಕೆಲವರು ಅರ್ಥಮಾಡುತ್ತಾರೆ.

ದೈವತಂ ದೈವತಾನಾಂ ಚ ಭೂತಾನಾಂ ಭೂತಸತ್ತಮಃ ।
ತಸ್ಯ ಕೇ ಹ್ಯಗುಣಾ ದೇವಿ ವನೇ ವಾಪ್ಯಥ ವಾ ಪುರೇ ॥ ೧೬

ಪೃಥಿವ್ಯಾ ಸಹ ವೈದೇಹ್ಯಾ ಶ್ರಿಯಾ ಚ ಪುರುಷರ್ಷಭಃ ।
ಕ್ಷಿಪ್ರಂ ತಿಸೃಭಿರೇತಾಭಿಃ ಸಹ ರಾಮೋಽಭಿಷೇಕ್ಷ್ಯತೇ ॥ ೧೭

ದುಃಖಜಂ ವಿಸೃಜಂತ್ಯಸ್ರಂ ನಿಷ್ಕ್ರಾಮಂತಮುದೀಕ್ಷ್ಯ ಯಮ್।
ಅಯೋಧ್ಯಾಯಾಂ ಜನಾಃ ಸರ್ವೇ ಶೋಕವೇಗಸಮಾಹತಾಃ ॥ ೧೮

ಕುಶಚೀರಧರಂ ವೀರಂ ಗಚ್ಛಂತಮಪರಾಜಿತಮ್ ।
ಸೀತೇವಾನುಗತಾ ಲಕ್ಷ್ಮೀಸ್ತಸ್ಯ ಕಿಂ ನಾಮ ದುರ್ಲಭಮ್ ॥ ೧೯

ಧನುರ್ಗ್ರಹವರೋ ಯಸ್ಯ ಬಾಣಖಡ್ಗಾಸ್ತ್ರಭೃತ್ ಸ್ವಯಮ್ ।
ಲಕ್ಷ್ಮಣೋ ವ್ರಜತಿ ಹ್ಯಗ್ರೇ ತಸ್ಯ ಕಿಂ ನಾಮ ದುರ್ಲಭಮ್ । ೨೦

ನಿವೃತ್ತವನವಾಸಂ ತಂ ದ್ರಷ್ಟಾಸಿ ಪುನರಾಗತಮ್ ।
ಜಹಿ ಶೋಕಂ ಚ ಮೋಹಂ ಚ ದೇವಿ ಸತ್ಯಂ ಬ್ರವೀಮಿ ತೇ ॥ ೨೧

---

ಮಹಾಪುರುಷ. ಭೂಮಿಯನ್ನೇಧರಿಸಿ ನಿಲ್ಲುವ ಭೂದೇವತೆ (೧೫). ಅವನು ದೇವತೆಗಳಿಗೆ ದೇವತೆ. ಸಮಸ್ತ ಜೀವಿಗಳಿಗೂ ಶ್ರೇಷ್ಠನಾದ ಪುರುಷೋತ್ತಮ. ದೇವಿ, ರಾಮನಿಗೆ ಅಡವಿ ಯಾವುದು? ಅಯೋಧ್ಯೆ ಯಾವುದು? ಅವನಿಗೆ ಕೆಡುಕು ಮಾಡುವ ವಸ್ತುಗಳು ಯಾವುವು?(೧೬). ಪುರುಷಶ್ರೇಷ್ಠನಾದ ರಾಮನು ಸ್ವಲ್ಪದಿನಗಳಲ್ಲಿಯೇ ಭೂದೇವಿ ವೈದೇಹಿ ರಾಜ್ಯಲಕ್ಷ್ಮಿ-ಈ ಮೂವರೊಡನೆ ಪಟ್ಟಾಭಿಷಿಕ್ತವಾಗುವನು. ಅಜೇಯನಾದ ಯಾವ ವೀರನು ವಲ್ಕಲಧಾರಿಯಾಗಿ ಹೊರಟುಹೋಗುತ್ತಿರುವನೆಂದು ಅಯೋಧ್ಯೆಯಲ್ಲಿರುವ ಸಕಲ ಜನರೂ ಶೋಕವೇಗದಿಂದ ಕಂಗೆಟ್ಟು ದುಃಖದ ಕಣ್ಣೀರನ್ನು ಸುರಿಸುತ್ತಿರುವರೊ, ಯಾರನ್ನು ಸೀತೆಯು ಸಾಕ್ಷಾಲ್ಲಕ್ಷ್ಮೀದೇವಿಯಂತೆ ಹಿಂಬಾಲಿಸಿ ಹೋದಳೊ ಆ ಮಹಾತ್ಮನಿಗೆ ಅಸಾಧ್ಯವಾದದ್ದು ಯಾವುದು ತಾನೆ ಇದೆ ?(೧೭-೧೯). ಯಾರ ಎದುರಿಗೆ ಲಕ್ಷ್ಮಣನೇ ದಿವ್ಯಧನುಸ್ಸನ್ನು ಹಿಡಿದು ಬಾಣಖಡ್ಗಗಳನ್ನೂ ವಿವಿಧಾಸ್ತ್ರಗಳನ್ನೂ ಧರಿಸಿ ಸಹಾಯಕನಾಗಿ ಹೋಗುತ್ತಿರುವನೊ ಅವನಿಗೆ ದುರ್ಲಭವಾದದ್ದಾದರೂ ಯಾವುದು?(೨೦). ವನವಾಸವನ್ನು ಮುಗಿಸಿ ಹಿಂದಿರುಗಿ ಬಂದ ರಾಮನನ್ನು ನೀನೇ ಕಣ್ಣಾರೆ ನೋಡುವೆ.

ಶಿರಸಾ ಚರಣಾವೇತೌ ವಂದಮಾನಮನಿಂದಿತೇ ।
ಪುನರ್ದ್ರಕ್ಷ್ಯಸಿ ಕಲ್ಯಾಣಿ ಪುತ್ರಂ ಚಂದ್ರಮಿವೋದಿತಮ್ ॥ ೨೨

ಪುನಃ ಪ್ರವಿಷ್ಟಂ ದೃಷ್ಟ್ವಾ ತಮಭಿಷಿಕ್ತಂ ಮಹಾಶ್ರಿಯಮ್ ।
ಸಮುತ್ಸ್ರಕ್ಷ್ಯಸಿ ನೇತ್ರಾಭ್ಯಾಂ ಕ್ಷಿಪ್ರಮಾನಂದಜಂ ಪಯಃ ॥ ೨೩

ಮಾ ಶೋಕೋ ದೇವಿ ದುಃಖಂ ವಾ ನ ರಾಮೇ ದೃಶ್ಯತೇಽಶಿವಮ್ ।
ಕ್ಷಿಪ್ರಂ ದ್ರಕ್ಷ್ಯಸಿ ಪುತ್ರಂ ತ್ವಂ ಸಸೀತಂ ಸಹಲಕ್ಷ್ಮಣಮ್ ॥ ೨೪

ತ್ವಯಾಶೇಷೋ ಜನಶ್ಚಾಯಂ ಸಮಾಶ್ವಾಸ್ಯೋ ಯದಾನಘೇ ।
ಕಿಮಿದಾನೀಮಿದಂ ದೇವಿ ಕರೋಷಿ ಹೃದಿ ವಿಕ್ಲಬಮ್ ॥ ೨೫

ನಾರ್ಹಾ ತ್ವಂ ಶೋಚಿತುಂ ದೇವಿ ಯಸ್ಯಾಸ್ತೇ ರಾಘವಃ ಸುತಃ ।
ನ ಹಿ ರಾಮಾತ್ಪರೋ ಲೋಕೇ ವಿದ್ಯತೇ ಸತ್ಪಥೇ ಸ್ಥಿತಃ ॥ ೨೬

ಅಭಿವಾದಯತಮಾನಂ ತಂ ದೃಷ್ಟ್ವಾ ಸಸುಹೃದಂ ಸುತಮ್ ।
ಮುದಾಶ್ರು ಮೋಕ್ಷ್ಯಸೇ ಕ್ಷಿಪ್ರಂ ಮೇಘಲೇಖೇವ ವಾರ್ಷಿಕೀ ॥ ೨೭

---

ದೇವಿ, ಈ ಶೋಕಮೋಹಗಳನ್ನು ಬಿಡು. ನಾನು ಸತ್ಯವನ್ನೇ ನುಡಿಯುತ್ತಿದ್ದೇನೆ. ಮಂಗಳಾಂಗಿ, ಉದಯಿಸಿದ ಪೂರ್ಣಚಂದ್ರನಂತೆ ಬಂದು ನಿನ್ನ ಈ ಪಾದಗಳಿಗೆ ತಲೆಬಾಗಿ ವಂದಿಸುವ ಪುತ್ರನನ್ನು ನೀನು ಮತ್ತೆ ನೋಡುವೆ (೨೧-೨೨). ಆತನು ಪುನಃ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಿ ಮಹಾತೇಜಸ್ಸಿನಿಂದ ವಿರಾಜಿಸುವುದನ್ನು ನೋಡಿ ಶೀಘ್ರದಲ್ಲಿಯೇ ನೀನು ಆನಂದಬಾಷ್ಪವನ್ನು ಸುರಿಸುವೆ. ಆರ್ಯೆ, ರಾಮನಿಗೆ ಯಾವ ಅಮಂಗಳವೂ ಎಂದಿಗೂ ಆಗದು. ಆದಕ್ಕಾಗಿ ಶೋಕಿಸುವುದೂ ವ್ಯಥೆಪಡುವುದೂ ಸಲ್ಲದು. ಸ್ವಲ್ಪಕಾಲದಲ್ಲಿಯೇ ಸೀತಾಲಕ್ಷ್ಮಣರೊಡನೆ ಬರುವ ನಿನ್ನ ಪುತ್ರನನ್ನು ನೋಡುವೆ (೨೩-೨೪). ದೇವಿ, (ಹಿರಿಯವಳಾದ) ನೀನು ಇಲ್ಲಿರುವ ಜನರೆಲ್ಲರನ್ನೂ ಈ ಸಮಯದಲ್ಲಿ ಸಮಾಧಾನಪಡಿಸಬೇಕು. ಹೀಗಿರುವಾಗ ನೀನೇ ಹೃದಯದಲ್ಲಿ ಇಷ್ಟೊಂದು ದುಃಖವನ್ನು ತಳೆಯ ಬಹುದೆ? ಅಕ್ಕ ಕೌಸಲ್ಯೆ, ಸನ್ಮಾರ್ಗಪ್ರವರ್ತಕನಾಗಿ ರಾಮನಿಗಿಂತ ಉತ್ತಮ ನಾದವನು ಈ ಲೋಕದಲ್ಲಿ ಇನ್ನೊಬ್ಬನಿಲ್ಲ. ಅಂಥ ರಾಮನು ನಿನಗೆ ಮಗ ನಾಗಿರುವಾಗ ನೀನು ಎಂದಿಗೂ ದುಃಖಿಸಬಾರದು (೨೫-೨೬). ಮಿತ್ರಪರಿವೃತನಾಗಿ

ಪುತ್ರಸ್ತೇ ವರದಃ ಕ್ಷಿಪ್ರಮಯೋಧ್ಯಾಂ ಪುನರಾಗತಃ ।
ಪಾಣಿಭ್ಯಾಂ ಮೃದುಪೀನಾಭ್ಯಾಂ ಚರಣೌ ಪೀಡಯಿಷ್ಯತಿ ॥ ೨೮
ಅಭಿವಾದ್ಯ ನಮಸ್ಯಂತಂ ಶೂರಂ ಸಸುಹೃದಂ ಸುತಮ್ ।
ಮುದಾಸ್ರೈಃ ಪ್ರೋಕ್ಷ್ಯಸಿ ಪುನರ್ಮೇಘರಾಜಿರಿವಾಚಲಮ್ ॥ ೨೯

ಆಶ್ವಾಸಯಂತೀ ವಿವಿಧೈಶ್ಚ ವಾಕ್ಯೈ-
ರ್ವಾಕ್ಯೋಪಚಾರೇ ಕುಶಲಾನವದ್ಯಾ ।
ರಾಮಸ್ಯ ತಾಂ ಮಾತರಮೇವಮುಕ್ತ್ವಾ
ದೇವೀ ಸುಮಿತ್ರಾ ವಿರರಾಮ ರಾಮಾ ॥ ೩೦

ನಿಶಮ್ಯ ತಲ್ಲಕ್ಷ್ಮಣಮಾತೃವಾಕ್ಯಂ
ರಾಮಸ್ಯ ಮಾತುರ್ನರದೇವಪತ್ನ್ಯಾಃ
ಸದ್ಯಃ ಶರೀರೇ ವಿನನಾಶ ಶೋಕಃ
ಶರದ್ಗತೋ ಮೇಘ ಇವಾಲ್ಪತೋಯಃ ॥ ೩೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಶ್ಚತ್ವಾರಿಂಶಃ ಸರ್ಗಃ

---

ಬಂದು ಅಭಿವಾದನೆ ಮಾಡುವ ಪುತ್ರನನ್ನು ನೋಡಿ, ವರ್ಷಾಕಾಲದ ಮೇಘಪಂಕ್ತಿಯಂತೆ ಬಳಬಳನೆ ಆನಂದಾಶ್ರುವನ್ನು ಸುರಿಸುವ ಕಾಲ ಬೇಗನೆ ಬರುವುದು(೨೭). ನಿನ್ನ ಪುತ್ರನು ಇಷ್ಟಾರ್ಥವನ್ನು ಸಲ್ಲಿಸುವುದಕ್ಕಾಗಿ ಮತ್ತೆ ಅಯೋಧ್ಯೆಗೆ ಬೇಗನೆ ಬರುವನು. ಮೃದುಳವೂ ಪುಷ್ಟವೂ ಆದ ತನ್ನ ಕೈಗಳಿಂದ ನಿನ್ನ ಪಾದಗಳನ್ನು ಮುಟ್ಟಿ ನಮಸ್ಕರಿಸುವನು (೨೮). ಸ್ನೇಹಿತರೊಡನೆ ಬಂದು ನಿನಗೆ ನಮಸ್ಕರಿಸುವ ಆ ವೀರಪುತ್ರನಮೇಲೆ ನೀನು ಆನಂದಭಾಷ್ಪಗಳನ್ನು ಸುರಿಸುವೆ. ಮೇಘರಾಜಿಯು ಪರ್ವತವನ್ನು ತೋಯಿಸುವಂತೆ ಅವನನ್ನು ತೋಯಿಸುವೆ" ಎಂದಳು (೨೯). ಸರಳ ಸ್ವಭಾವದ ಸುಮಿತ್ರಾದೇವಿಯು ಸಂತೈಸುವ ಮಾತುಗಳನ್ನಾಡುವುದರಲ್ಲಿ ನಿಪುಣೆ. ಆ ರಮಣಿಯು ರಾಮಮಾತೆಯಾದ ಕೌಸಲ್ಯೆಗೆ ವಿವಿಧ ರೀತಿಯಲ್ಲಿ ಹೀಗೆ ಸಮಾಧಾನವನ್ನು ಹೇಳಿ ಸುಮ್ಮನಾದಳು (೩೦). ಲಕ್ಷ್ಮಣನ ತಾಯಿಯು ಹೇಳಿದ ನುಡಿಗಳೆಲ್ಲವನ್ನೂ ರಾಜಮಹಿಷಿಯಾದ ಕೌಸಲ್ಯೆಯು ಆಲಿಸಿದಳು. ಆಗ ಅವಳ ಶೋಕಾವೇಗವು ಕಡಿಮೆಯಾಯಿತು. ಶರತ್ಕಾಲದಲ್ಲಿ ಸ್ವಲ್ಪವೇ ಜಲವಿರುವ ಮೋಡದಂತೆ ಹಗುರವಾಯಿತು (೩೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತು ನಾಲ್ಕನೆಯ ಸರ್ಗ

## ಪಂಚಚತ್ವಾರಿಂಶಃ ಸರ್ಗಃ

### ಪೌರಯಾಚನಮ್

ಅನುರಕ್ತಾ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ಅನುಜಗ್ಮುಃ ಪ್ರಯಾಂತಂ ತಂ ವನವಾಸಾಯ ಮಾನವಾಃ ॥ ೧

ನಿವರ್ತಿತೇಽಪಿ ಚ ಬಲಾತ್ ಸುಹೃದ್ಧರ್ಮೇಣ ರಾಜನಿ ।
ನೈವ ತೇ ಸಂನ್ಯವರ್ತಂತ ರಾಮಸ್ಯಾನುಗತಾ ರಥಮ್ ॥ ೨

ಅಯೋಧ್ಯಾನಿಲಯಾನಾಂ ಹಿ ಪುರುಷಾಣಾಂ ಮಹಾಯಶಾಃ ।
ಬಭೂವ ಗುಣಸಂಪನ್ನಃ ಪೂರ್ಣಚಂದ್ರ ಇವ ಪ್ರಿಯಃ ॥ ೩

ಸ ಯಾಚ್ಯಮಾನಃ ಕಾಕುತ್ಸ್ಥಃ ಸ್ವಾಭಿಃ ಪ್ರಕೃತಿಭಿಸ್ತದಾ ।
ಕುರ್ವಾಣಃ ಪಿತರಂ ಸತ್ಯಂ ವನಮೇವಾನ್ವಪದ್ಯತ ॥ ೪

## ಸರ್ಗ ೪೫

**ಶ್ರೀರಾಮನು ಹಿಂದಿರುಗಬೇಕೆಂದು ಪೌರರು ಪ್ರಾರ್ಥಿಸುವುದು. ಆಗ ಶ್ರೀರಾಮನು ಅವರಿಗೆ ಸಮಾಧಾನ ಹೇಳುವುದು.**

ಮಹಾತ್ಮನೂ ಸತ್ಯಸಂಧನೂ ಆದ ಶ್ರೀರಾಮನನ್ನು ಪ್ರಜೆಗಳು ಅತಿಶಯವಾಗಿ ಪ್ರೀತಿಸುತ್ತಿದ್ದರು. ಅವನು ವನವಾಸಕ್ಕೆ ಹೊರಡಲು ಆ ಜನರು ಅವನನ್ನು ಹಿಂಬಾಲಿಸಿಹೋದರು(೧). 'ಪ್ರವಾಸಕ್ಕೆ ಹೋಗುವವರನ್ನು ಬಹುದೂರದವರೆಗೆ ಕಳಿಸುತ್ತ ಹೋಗಬಾರದು' ಎಂಬ ಶಿಷ್ಟಾಚಾರವನ್ನು ಬೋಧಿಸಿ ದಶರಥರಾಜನನ್ನು ಹಿಂದಿರುಗಿಸಿದರೂ ಪ್ರಜೆಗಳು ಮಾತ್ರ ರಥದ ಹಿಂದೆ ಹೋಗುತ್ತಲೇ ಇದ್ದರು. ಅವರು ಹಿಂದಿರುಗಲಿಲ್ಲ(೨). ಕೀರ್ತಿಶಾಲಿಯೂ ಗುಣಸಂಪನ್ನನೂ ಆದ ಶ್ರೀರಾಮನು ಅಯೋಧ್ಯಾವಾಸಿಗಳಾದ ಜನರಿಗೆ ಪ್ರೀತಿಪಾತ್ರನಾಗಿದ್ದನು. ಪ್ರಜೆಗಳು ಅವನನ್ನು ನೋಡಿದರೆ ಪೂರ್ಣಚಂದ್ರನನ್ನು ಕಂಡಂತೆ ಸಂತೋಷಿಸುತ್ತಿದ್ದರು (೩). ತನ್ನ ಪ್ರಜೆಗಳು ಎಷ್ಟು ಪ್ರಾರ್ಥಿಸಿದರೂ ಆತನು ತಂದೆಯ ಸತ್ಯವನ್ನು ಕಾಪಾಡುವುದಕ್ಕಾಗಿ

ಅವೇಕ್ಷಮಾಣಃ ಸಸ್ನೇಹಂ ಚಕ್ಷುಷಾ ಪ್ರಪಿಬನ್ನಿವ।
ಉವಾಚ ರಾಮಃ ಸ್ನೇಹೇನ ತಾಃ ಪ್ರಜಾಃ ಸ್ವಾಃ ಪ್ರಜಾ ಇವ ॥ ೫

ಯಾ ಪ್ರೀತಿರ್ಬಹುಮಾನಶ್ಚ ಮಯ್ಯಯೋಧ್ಯಾನಿವಾಸಿನಾಮ್ ।
ಮತ್ಪ್ರಿಯಾರ್ಥಂ ವಿಶೇಷೇಣ ಭರತೇ ಸಾ ವಿಧೀಯತಾಮ್ । ೬

ಸ ಹಿ ಕಲ್ಯಾಣಚಾರಿತ್ರಃ ಕೈಕೇಯ್ಯಾನಂದವರ್ಧನಃ ।
ಕರಿಷ್ಯತಿ ಯಥಾವದ್ವಃ ಪ್ರಿಯಾಣಿ ಚ ಹಿತಾನಿ ಚ ॥ ೭

ಜ್ಞಾನವೃದ್ಧೋ ವಯೋಬಾಲೋ ಮೃದುರ್ವೀರ್ಯಗುಣಾನ್ವಿತಃ ।
ಅನುರೂಪಃ ಸ ವೋ ಭರ್ತಾ ಭವಿಷ್ಯತಿ ಭಯಾಪಹಃ ॥ ೮

ಸ ಹಿ ರಾಜಗುಣೈರ್ಯುಕ್ತೋ ಯುವರಾಜಃ ಸಮೀಕ್ಷಿತಃ ।
ಅಪಿ ಚಾಪಿ ಮಯಾ ಶಿಷ್ಟೈಃ ಕಾರ್ಯಂ ವೋ ಭರ್ತೃಶಾಸನಮ್ ॥ ೯

ನ ಸಂತಪ್ಯೇದ್ಯಥಾ ಚಾಸೌ ವನವಾಸಂ ಗತೇ ಮಯಿ ।
ಮಹಾರಾಜಸ್ತಥಾ ಕಾರ್ಯೋ ಮಮ ಪ್ರಿಯಚಿಕೀರ್ಷಯಾ ॥ ೧೦

---

ವನಕ್ಕೆ ಹೊರಟೇಬಿಟ್ಟನು. ಆತನು ತನ್ನ ಹಿಂದೆ ಬರುತ್ತಿದ್ದ ಪ್ರಜೆಗಳನ್ನು ಕಣ್ಣಿನಿಂದ ಕುಡಿಯುವನೋ ಎಂಬಂತೆ ಪ್ರೀತಿಯಿಂದ ನೋಡಿ ಮಕ್ಕಳಿಗೆ ಹೇಳುವಂತೆ ವಾತ್ಸಲ್ಯದಿಂದ ಹೀಗೆಂದನು(೪-೫). :"ಪ್ರಜೆಗಳೆ, ಅಯೋಧ್ಯಾ ನಿವಾಸಿಗಳಾದ ನಿಮಗೆ ನನ್ನಲ್ಲಿ ಯಾವ ಪ್ರೀತಿಗೌರವಗಳಿವೆಯೊ ಅವನ್ನು ಭರತನಲ್ಲಿ ತೋರಿಸಿರಿ, ವಿಶೇಷವಾಗಿ ಅದರಿಂದ ನನಗೆ ಸಂತೋಷವಾಗುವುದು. ಕೈಕೇಯಿಗೆ ಆನಂದವರ್ಧಕನಾದ ಭರತನು ಒಳ್ಳೆಯ ನಡತೆಯುಳ್ಳವನು. ನಿಮಗೆ ಪ್ರಿಯವಾದುದನ್ನೂ ಹಿತವಾದುದನ್ನೂ ಲೋಪವಿಲ್ಲದೆ ಸಾಧಿಸಿ ಕೊಡುವನು.(೬-೭). ಅವನು ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಜ್ಞಾನದಲ್ಲಿ ದೊಡ್ಡವನು. ವೀರನಾದರೂ ಮೃದುಸ್ವಭಾವದವನು. ಅವನು ನಿಮ್ಮ ಕಷ್ಟಗಳನ್ನು ಪರಿಹರಿಸಿ ನಿಮಗೆ ಯೋಗ್ಯನಾದ ಪ್ರಭುವಾಗಬಲ್ಲನು. ಭರತನು ರಾಜಯೋಗ್ಯವಾದ ಗುಣಗಳಿಂದ ಕೂಡಿದ್ದಾನೆ. ಅವನು ನಿಮಗೆ ಯುವರಾಜನಾಗಬೇಕೆಂದು ನಿಶ್ಚಿತವಾಗಿದೆ. ನಾನಾಗಲಿ ಉಳಿದವರಾಗಲಿ ಮಹಾರಾಜನ ಆಜ್ಞೆಯಂತೆ ನಡೆಯಬೇಕಲ್ಲವೆ?(೮-೯). ಆದ್ದರಿಂದ ನಾನು ವನವಾಸಕ್ಕೆ ಹೋದಮೇಲೆ ನೀವು ಮಹಾರಾಜನ ಮನಸ್ಸಿಗೆ ವ್ಯಥೆಯಾಗದಂತೆ

ಯಥಾ ಯಥಾ ದಾಶರಥಿರ್ಧರ್ಮಮೇವಾಸ್ಥಿತೋಽಭವತ್ ।
ತಥಾ ತಥಾ ಪ್ರಕೃತಯೋ ರಾಮಂ ಪತಿಮಕಾಮಯನ್ ॥ ೧೧

ಬಾಷ್ಪೇಣ ಪಿಹಿತಂ ದೀನಂ ರಾಮಃ ಸೌಮಿತ್ರಿಣಾ ಸಹ ।
ಚಕರ್ಷೇವ ಗುಣೈರ್ಬದ್ಧಂ ಜನಂ ಪುರನಿವಾಸಿನಮ್ ॥ ೧೨

ತೇ ದ್ವಿಜಾಸ್ತ್ರಿವಿಧಂ ವೃದ್ಧಾ ಜ್ಞಾನೇನ ವಯಸೌಜಸಾ ।
ವಯಃಪ್ರಕಂಪಶಿರಸೋ ದೂರಾದೂಚುರಿದಂ ವಚಃ ॥ ೧೩

ವಹಂತೋ ಜವನಾ ರಾಮಂ ಭೋ ಭೋ ಜಾತ್ಯಾಸ್ತುರಂಗಮಾಃ ।
ನಿವರ್ತಧ್ವಂ ನ ಗಂತವ್ಯಂ ಹಿತಾ ಭವತ ಭರ್ತರಿ ॥ ೧೪

ಕರ್ಣವಂತಿ ಹಿ ಭೂತಾನಿ ವಿಶೇಷೇಣ ತುರಂಗಮಾಃ ।
ಯೂಯಂ ತಸ್ಮಾನ್ನಿವರ್ತಧ್ವಂ ಯಾಚನಾಂ ಪ್ರತಿವೇದಿತಾಃ॥ ೧೫

---

ವರ್ತಿಸಿರಿ. ಅದರಿಂದ ನನಗೆ ಸಂತೋಷವಾಗುವುದೆಂದು ತಿಳಿಯಿರಿ" ಎಂದು ನುಡಿದನು. ಹೀಗೆ ಆ ದಶರಥಕುಮಾರನು ಧರ್ಮಮಾರ್ಗದಲ್ಲಿ ಸ್ಥಿರನಾಗಿ ನಿಂತು ಪ್ರಜೆಗಳಿಗೆ ಬುದ್ಧಿವಾದವನ್ನು ಹೇಳಿದಷ್ಟೂ ಅವರು ತಮಗೆ ರಾಮನೇ ಯುವರಾಜನಾಗಿರಬೇಕೆಂದು ಪ್ರಾರ್ಥಿಸುತ್ತಿದ್ದರು (೧೦-೧೧). ಆ ಪುರನಿವಾಸಿಗಳು ದೈನ್ಯದಿಂದ ಕಣ್ಣೀರು ಸುರಿಸುತ್ತ ಶ್ರೀರಾಮನ ಹಿಂದೆ ಹೋಗುತ್ತಲೇ ಇದ್ದರು. ರಾಮಲಕ್ಷ್ಮಣರು ತಮ್ಮ ಸದ್ಗುಣಗಳೆಂಬ ಹಗ್ಗಗಳಿಂದ ಆ ಪ್ರಜೆಗಳನ್ನು ತಮ್ಮೊಡನೆ ಎಳೆದುಕೊಂಡು ಹೋಗುವರೋ ಎಂಬಂತೆ ಕಾಣುತ್ತಿತ್ತು(೧೨). ಆ ಜನರ ಮಧ್ಯದಲ್ಲಿ ಜ್ಞಾನ ವಯಸ್ಸು ತಪಸ್ಸು ಈ ಮೂರರಿಂದಲೂ ವೃದ್ಧರಾದ ಬ್ರಾಹ್ಮಣರಿದ್ದರು. ಮುಪ್ಪಿನಿಂದ ಅವರ ತಲೆಯು ನಡುಗುತ್ತಿದ್ದಿತು. ಅವರು (ರಥದ ಹಿಂದೆ ಓಡಿಬರಲಾರದೆ) ದೂರದಿಂದಲೇ "ಎಲೈ ಕುದುರೆಗಳೇ! ಎಲೈ ಉತ್ತಮಾಶ್ವಗಳೇ! ರಾಮನನ್ನು ಅತಿವೇಗದಿಂದ ಒಯ್ಯುತ್ತಿರುವಿರಲ್ಲ! ಹಿಂತಿರುಗಿರಿ! ಹೋಗಬೇಡಿರಿ! ನಿಮ್ಮೊಡೆಯನಿಗೆ ಒಳ್ಳೆಯದನ್ನು ಮಾಡಿರಿ(೧೩-೧೪). ಪ್ರಾಣಿಗಳಿಗೆ - ವಿಶೇಷವಾಗಿ ಕುದುರೆಗಳಿಗೆ ಕರ್ಣೇಂದ್ರಿಯದ ಪಾಟವ ಹೆಚ್ಚಲ್ಲವೆ? ನಮ್ಮ ಪ್ರಾರ್ಥನೆಯು ನಿಮಗೆ ಕೇಳಲಿಲ್ಲವೆ? ಹಿಂತಿರುಗಿ ಬನ್ನಿರಿ! ನಿಮ್ಮೊಡೆಯನು

ಧರ್ಮಾತಃ ವಿಶುದ್ಧಾತ್ಮಾ ವೀರಃ ಶುಭದೃಢವ್ರತಃ ।
ಉಪವಾಹ್ಯಸ್ತು ವೋ ಭರ್ತಾ ನಾಪವಾಹ್ಯಃ ಪುರಾದ್ವನಮ್ ॥ ೧೬

ಏವಮಾರ್ತಪ್ರಲಾಪಾಂಸ್ತಾನ್ ವೃದ್ಧಾನ್ ಪ್ರಲಪತೋ ದ್ವಿಜಾನ್ ।
ಅವೇಕ್ಷ್ಯ ಸಹಸಾ ರಾಮೋ ರಥಾದವತತಾರ ಹ ॥ ೧೭

ಪದ್ಭ್ಯಾಮೇವ ಜಗಾಮಾಥ ಸಸೀತಃ ಸಹಲಕ್ಷ್ಮಣಃ ।
ಸಂನಿಕೃಷ್ಟಪದನ್ಯಾಸೋ ರಾಮೋ ವನಪರಾಯಣಃ ॥ ೧೮

ದ್ವಿಜಾತೀಂಸ್ತು ಪದಾತೀಂಸ್ತಾನ್ ರಾಮಶ್ಚಾರಿತ್ರವತ್ಸಲಃ ।
ನ ಶಶಾಕ ಘೃಣಾಚಕ್ಷುಃ ಪರಿಮೋಕ್ತುಂ ರಥೇನ ಸಃ ॥ ೧೯

ಗಚ್ಛಂತಮೇವ ತಂ ದೃಷ್ಟ್ವಾ ರಾಮಂ ಸಂಭ್ರಾಂತಚೇತಸಃ ।
ಊಚುಃ ಪರಮಸಂತಪ್ತಾ ರಾಮಂ ವಾಕ್ಯಮಿದಂ ದ್ವಿಜಾಃ ॥ ೨೦

ಬ್ರಾಹ್ಮಣ್ಯಂ ಕೃತ್ಸ್ನಮೇತ ತ್ತ್ವಾಂ ಬ್ರಹ್ಮಣ್ಯಮನುಗಚ್ಛತಿ।
ದ್ವಿಜಸ್ಕಂಧಾಧಿರೂಢಾಸ್ತ್ವಾಮಗ್ನಯೋಽಪ್ಯನುಯಾಂತ್ಯಮೀ ॥ ೨೧

---

ಧರ್ಮಾತ್ಮ; ಪರಿಶುದ್ಧಾತ್ಮ; ಮಹಾವೀರ; ಶುಭಾಚಾರ; ದೃಢವ್ರತ. ಅವನನ್ನು ಪಟ್ಟಣದೊಳಗೆ ಕರೆತರಬೇಕು; ಪಟ್ಟಣದಿಂದ ಕಾಡಿಗೆ ಕರೆದೊಯ್ಯಬಾರದು" ಎಂದು ಕೂಗಿಕೊಳ್ಳುತ್ತಿದ್ದರು (೧೫-೧೬) ಹೀಗೆ ಆ ವೃದ್ಧ ಬ್ರಾಹ್ಮಣರು ಆರ್ತರಾಗಿ ಕೂಗುವುದು ಶ್ರೀರಾಮನಿಗೆ ಕೇಳಿಸಿತು. ಥಟ್ಟನೆ ಅವನು ರಥವನ್ನು ನಿಲ್ಲಿಸಿ ಕೆಳಗಿಳಿದನು. ಸೀತಾಲಕ್ಷ್ಮಣಸಮೇತನಾಗಿ ಮೆಲ್ಲಮೆಲ್ಲಗೆ ಹೆಜ್ಜೆಯಿಡುತ್ತ ವನಾಭಿಮುಖನಾಗಿ ಕಾಲುನಡಿಗೆಯಿಂದಲೇ ಹೋಗುತ್ತಿದ್ದನು (೧೭-೧೮). ಏಕೆಂದರೆ, ಶುದ್ಧಚಾರಿತ್ರನೂ ಕೃಪಾಳುವೂ ಆದ ಶ್ರೀರಾಮನಿಗೆ, ನಡೆದು ಬರುತ್ತಿದ್ದ ಆ ವಿಪ್ರರನ್ನು ಉಲ್ಲಂಘಿಸಿ ರಥದ ಮೇಲೆ ಕುಳಿತು ಹೊರಟುಹೋಗಲು ಮನಸ್ಸು ಬರಲಿಲ್ಲ. ಅವನು ಹಿಂದಿರುಗದೆ ಮುಂದಕ್ಕೆ ಹೋಗುತ್ತಲೇ ಇರುವುದನ್ನು ಕಂಡು ಆ ದ್ವಿಜರ ಮನಸ್ಸು ಮತ್ತೂ ಕದಲಿತು. ಅವರು ಅತ್ಯಂತ ವಿಷಣ್ಣರಾಗಿ (ಧಾವಿಸುತ್ತ ಬಂದು) ಈ ರೀತಿಯಲ್ಲಿ ಹೇಳಿದರು (೧೯-೨೦):"ರಾಮ, ಬ್ರಾಹ್ಮಣರಿಗೆ ಹಿತಕಾರಿಯಾದವನು ನೀನು. ನಿನ್ನ ಹಿಂದೆ ಸಮಸ್ತ ಬ್ರಾಹ್ಮಣ ಸಮೂಹವೇ

ವಾಜಪೇಯಸಮುತ್ಥಾನಿ ಛತ್ರಾಣ್ಯೇತಾನಿ ಪಶ್ಯ ನಃ ।
ಪೃಷ್ಠತೋಽನುಪ್ರಯಾತಾನಿ ಮೇಘಾನಿವ ಪಲಾತ್ಯಯೇ ॥ ೨೨

ಅನವಾಪ್ತಾತಪತ್ರಸ್ಯ ರಶ್ಮಿಸಂತಾಪಿತಸ್ಯ ತೇ ।
ಏಭಿಶ್ಛಾಯಾಂ ಕರಿಷ್ಯಾಮಃ ಸ್ಪೃಶ್ಚತ್ರೈರ್ವಾಜಪೇಯಿಕೈಃ ॥ ೨೩

ಯಾ ಹಿ ನಃ ಸತತಂ ಬುದ್ಧಿರ್ವೇದಮಂತ್ರಾನುಸಾರಿಣೀ ।
ತ್ವತ್ಪೃತೇ ಸಾ ಕೃತಾ ವತ್ಸ ವನವಾಸಾನುಸಾರಿಣೀ ॥ ೨೪

ಹೃದಯೇಷ್ವೇವ ತಿಷ್ಠಂತಿ ವೇದಿ ಯೇ ನಃ ಪರಂ ಧನಮ್ ।
ವತ್ಸ್ಯಂತ್ಯಪಿ ಗೃಹೇಷ್ವೇವ ದಾರಾಶ್ಚಾರಿತ್ರರಕ್ಷಿತಾಃ ॥ ೨೫

ನ ಪುನರ್ನಿಶ್ಚಯಃ ಕಾರ್ಯಸ್ತ್ವದ್ಗತೌ ಸುಕೃತಾ ಮತಿಃ ।
ತ್ವಯಿ ಧರ್ಮವ್ಯಪೇಕ್ಷೇ ತು ಕಿಂ ಸ್ಯಾದ್ಧರ್ಮಮಪೇಕ್ಷಿತುಮ್ ॥ ೨೬

ಯಾಚಿತೋ ನೋ ನಿವರ್ತಸ್ವ ಹಂಸಶುಕ್ಲಶಿರೋರುಹೈಃ ।
ಶಿರೋಭಿರ್ನಿಭೃತಾಚಾರ ಮಹೀಪತನಪಾಂಸುಲೈಃ ॥ ೨೭

---

ಬರುತ್ತಿವೆ. (ಅರಣಿಯಲ್ಲಿರುವ) ಅಗ್ನಿಗಳೂ ಈ ವಿಪ್ರರ ಹೆಗಲಮೇಲೆ ಕುಳಿತು ನಿನ್ನ ಹಿಂದೆ ಬರುತ್ತಿದೆ. ವಾಜಪೇಯಯಾಗದಲ್ಲಿ ಲಭಿಸಿದ ನಮ್ಮ ಈ ಛತ್ರಗಳನ್ನು ನೋಡು. ಶರತ್ಕಾಲದ ಮೇಘಖಂಡಗಳಂತೆ ಶ್ವೇತವರ್ಣದ ಈ ಛತ್ರಗಳು ನಿನ್ನನ್ನು ಹಿಂಬಾಲಿಸಿ ಬರುತ್ತಿವೆ (೨೧-೨೨). ನಿನ್ನಲ್ಲಿ ಕೊಡೆಯಿಲ್ಲ. ಬಿಸಿಲಿನಿಂದ ನೀನು ಬಳಲಿದಾಗ ನಮ್ಮ ಈ ವಾಜಪೇಯದ ಕೊಡೆಗಳನ್ನು ಹಿಡಿದು ನಿನಗೆ ನೆರಳನ್ನು ಮಾಡಿಕೊಡುತ್ತೇವೆ. ವತ್ಸ, ಯಾವಾಗಲೂ ವೇದಮಂತ್ರಗಳನ್ನೇ ಅನುಶೀಲಿಸುತ್ತಿದ್ದ ನಮ್ಮ ಬುದ್ಧಿಯು ಈಗ ನಿನಗೋಸ್ಕರ ವನವಾಸದತ್ತ ಸಾಗುತ್ತಿದೆ (೨೩-೨೪). ನಮ್ಮ ಅಮೂಲ್ಯವಾದ ಆಸ್ತಿಯಾಗಿರುವ ವೇದಮಂತ್ರಗಳು ನಮ್ಮ ಹೃದಯದಲ್ಲಿಯೇ ನೆಲೆಸಿವೆ. ನಮ್ಮ ಪತ್ನಿಯರು ಮನೆಯಲ್ಲಿಯೇ ಇರುವರು. ಶೀಲವೇ ಅವರನ್ನು ರಕ್ಷಿಸುವುದು. ನಾವು ನಿನ್ನೊಡನೆ ಬರಬೇಕೆಂದು ನಿಶ್ಚಯಿಸಿದ್ದೇವೆ. ಪುನಃ ನಿಶ್ಚಯಿಸಬೇಕಾದ್ದೇನೂ ಇಲ್ಲ. ಆದರೂ ನೀನೇ ಧರ್ಮವನ್ನುಲ್ಲಂಘಿಸಿ ನಮ್ಮ ಮಾತನ್ನು ಮೀರುವುದಾದರೆ, ಇನ್ನು ಧರ್ಮವನ್ನು ಬಯಸತಕ್ಕವರಾದರೂ ಯಾರು? (೨೫-೨೬). ರಾಮ, ನೀನು ಶಿಷ್ಟಾಚಾರವನ್ನು ಬಿಟ್ಟು

ಬಹೂನಾಂ ವಿತತಾ ಯಜ್ಞಾ ದ್ವಿಜಾನಾಂ ಯ ಇಹಾಗತಾಃ ।
ತೇಷಾಂ ಸಮಾಪ್ತಿರಾಯತ್ತಾ ತವ ವತ್ಸ ನಿವರ್ತನೇ ॥ ೨೮

ಭಕ್ತಿಮಂತಿ ಹಿ ಭೂತಾನಿ ಜಂಗಮಾಜಂಗಮಾನಿ ಚ ।
ಯಾಚಮಾನೇಷು ರಾಮ ತ್ವಂ ಭಕ್ತಿಂ ಭಕ್ತೇಷು ದರ್ಶಯ ॥ ೨೯

ಅನುಗಂತುಮಶಕ್ತಾಸ್ತ್ವಾಂ ಮೂಲೈರುದ್ಧತವೇಗಿನಃ ।
ಉನ್ನತಾ ವಾಯುವೇಗೇನ ವಿಕ್ರೋಶಂತೀವ ಪಾದಪಾಃ॥ ೩೦

ನಿಶ್ಚೇಷ್ಟಾಹಾರಸಂಚಾರಾ ವೃಕ್ಷೈಕಸ್ಥಾನವಿಷ್ಠಿತಾಃ ।
ಪಕ್ಷಿಣೋಽಪಿ ಪ್ರಯಾಚಂತೇ ಸರ್ವಭೂತಾನುಕಂಪಿನಮ್ ॥ ೩೧

ಏವಂ ವಿಕ್ರೋಶತಾಂ ತೇಷಾಂ ದ್ವಿಜಾತೀನಾಂ ನಿವರ್ತನೇ ।
ದದೃಶೇ ತಮಸಾ ತತ್ರ ವಾರಯಂತೀವ ರಾಘವಮ್ ॥ ೩೨

---

ಚಲಿಸತಕ್ಕವನಲ್ಲ. ನಾವು ತಲೆಬಾಗಿ ಬೇಡಿಕೊಳ್ಳುತ್ತೇವೆ; ಹಿಂದಿರುಗು. ಹಂಸದಂತೆ ಬೆಳ್ಳಗಿರುವ ನಮ್ಮ ತಲೆಗೂದಲನ್ನು ನೋಡು. ಈಗ ನೆಲದ ಧೂಳಿಯು ಅದರಮೇಲೆ ಮುಸುಕಿರುವುದನ್ನು ನೋಡು (೨೭). ಇಲ್ಲಿ ಬಂದಿರುವ ವಿಪ್ರರು ಅನೇಕವಿಧದ ಯಾಗಗಳನ್ನು ಆರಂಭಿಸಿದ್ದಾರೆ. ಮಗು, ನೀನು ಹಿಂದಿರುಗಿಬಂದರೆ ಮಾತ್ರ ಅವು ಪೂರ್ಣವಾಗಿ ನೆರವೇರುತ್ತವೆ. ಸ್ಥಾವರಜಂಗಮಗಳಾದ ಸಮಸ್ತಪ್ರಾಣಿಗಳೂ ನೀನು ಹಿಂದಿರುಗಬೇಕೆಂದು ಭಕ್ತಿಯಿಂದ ಯಾಚಿಸುತ್ತಿವೆ. ರಾಮ, ಅವುಗಳಲ್ಲಿ ನಿನ್ನ ಪ್ರೀತಿಯನ್ನು ತೋರಿಸು (೨೮-೨೯). ಈ ಉನ್ನತವೃಕ್ಷಗಳು ನಿನ್ನನ್ನು ಹಿಂಬಾಲಿಸಿ ಬರಲು ಅಸಮರ್ಥವಾಗಿವೆ. ಗಾಳಿಯ ಹೊಡೆತಕ್ಕೆ ಸಿಕ್ಕಿದ ಈ ವೃಕ್ಷಗಳು ತಮಗೆ ಬೇರುಗಳು ಅಡ್ಡಿಪಡಿಸುತ್ತಿವೆಯೆಂದು ಗಟ್ಟಿಯಾಗಿ ಕೂಗಿಕೊಳ್ಳುವಂತೆ ತೋರುತ್ತಿದೆ(೩೦). ಹಕ್ಕಿಗಳೂ ಸಹ ತಮ್ಮ ಆಹಾರ - ವಿಹಾರ ಗಳನ್ನು ಬದಿಗಿರಿಸಿ, ಮರದ ಒಂದು ಮೂಲೆಯನ್ನು ಹಿಡಿದು ಕುಳಿತಿವೆ; ಸಕಲಜೀವಿಗಳಲ್ಲಿಯೂ ದಯಾಳುವಾದ ನೀನು ಹಿಂದಿರುಗಬೇಕೆಂದು ಬೇಡಿಕೊಳ್ಳುತ್ತಿವೆ" (೩೧). ಹೀಗೆ ಶ್ರೀರಾಮನನ್ನು ಹಿಂದಿರುಗಿಸುವುದಕ್ಕೋಸ್ಕರ ಆ ಬ್ರಾಹ್ಮಣರು ಕೂಗಿಹೇಳುತ್ತ ಹೋಗುತ್ತಿದ್ದರು. ಅಷ್ಟರಲ್ಲಿ ತಮಸಾ-

ತತಃ ಸುಮಂತ್ರೋಽಪಿ ರಥಾದ್ವಿಮುಚ್ಯ
ಶ್ರಾಂತಾನ್ ಹಯಾನ್ ಸಂಪರಿವರ್ತ್ಯ ಶೀಘ್ರಮ್ ।
ಪೀತೋದಕಾಂಸ್ತೋಯಪರಿಪ್ಲುತಾಂಗಾನ್
ಅಚಾರಯದ್ವೈ ತಮಸಾವಿದೂರೇ ॥ ೩೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಚತ್ವಾರಿಂಶಃ ಸರ್ಗಃ

---

## ಷಟ್‌ಚತ್ವಾರಿಂಶಃ ಸರ್ಗಃ

### ಪೌರಮೋಹನಮ್

ತತಸ್ತು ತಮಸಾತೀರಂ ರಮ್ಯಮಾಶ್ರಿತ್ಯ ರಾಘವಃ ।
ಸೀತಾಮುದ್ವೀಕ್ಷ್ಯ ಸೌಮಿತ್ರಿಮಿದಂ ವಚನಮಬ್ರವೀತ್ ॥ ೧

ಇಯಮದ್ಯ ನಿಶಾ ಪೂರ್ವಾ ಸೌಮಿತ್ರೇ ಪ್ರಹಿತಾ ವನಮ್ ।
ವನವಾಸಸ್ಯ ಭದ್ರಂ ತೇ ಸ ನೋತ್ಕಂಠಿತುಮರ್ಹಸಿ ॥ ೨

---

ನದಿಯೂ ರಾಘವನನ್ನು ಅಡ್ಡಗಟ್ಟುವುದೋ ಎಂಬಂತೆ ಎದುರಿಗೆ ಕಾಣಿಸಿತು. ಆಗ ಸುಮಂತ್ರನು ಬಳಲಿದ ಕುದುರೆಗಳನ್ನು ರಥದಿಂದ ಬಿಚ್ಚಿ (ಮಾರ್ಗಾಯಾಸದ ಪರಿಹಾರಕ್ಕಾಗಿ) ಅವುಗಳನ್ನು ನೆಲದಮೇಲೆ ಹೊರಳಿಸಿದನು. ಅನಂತರ ನೀರುಕುಡಿಸಿ ಮೈತೊಳೆದು ಮೇಯುವುದಕ್ಕಾಗಿ ಆ ಕುದುರೆಗಳನ್ನು ತಮಸಾತೀರದಲ್ಲಿ ಬಿಟ್ಟನು (೩೨-೩೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತೈದನೆಯ ಸರ್ಗ

## ಸರ್ಗ ೪೬

### ಶ್ರೀರಾಮನು ತಮಸಾನದೀತೀರದಲ್ಲಿ ವಿಶ್ರಮಿಸಿಕೊಂಡು ಪೌರರಿಗೆ ಗೊತ್ತಾಗದಂತೆ ಮುಂದಕ್ಕೆ ಪ್ರಯಾಣಮಾಡುವುದು.

ಶ್ರೀರಾಮನು ರಮ್ಯವಾದ ತಮಸಾತೀರಕ್ಕೆ ಹೋಗಿ ಸೇರಿದ ಮೇಲೆ ಸೀತೆಯನ್ನು ಲಕ್ಷಿಸಿ ನೋಡಿ ಲಕ್ಷ್ಮಣನನ್ನು ಕುರಿತು ಹೀಗೆಂದನು:"ಲಕ್ಷ್ಮಣ, ನಾವು ವನವಾಸಕ್ಕೆ ಹೊರಟಮೇಲೆ ಇದೇ ಮೊದಲನೆಯ ರಾತ್ರಿ. ಒಳ್ಳೆಯದು.

ಪಶ್ಯ ಶೂನ್ಯಾನ್ಯರಣ್ಯಾನಿ ರುದಂತೀವ ಸಮಂತತಃ ।
ಯಥಾ ನಿಲಯಮಾಯದ್ಭಿರ್ನಿಲೀನಾನಿ ಮೃಗದ್ವಿಜೈಃ ॥ ೩
ಅದ್ಯಾಯೋಧ್ಯಾ ತು ನಗರೀ ರಾಜಧಾನೀ ಪಿತುರ್ಮಮ ।
ಸಸ್ತ್ರೀಪುಂಸಾ ಗತಾನಸ್ಮಾನ್ ಶೋಚಿಷ್ಯತಿ ನ ಸಂಶಯಃ ॥ ೪
ಅನುರಕ್ತಾ ಹಿ ಮನುಜಾ ರಾಜಾನಂ ಬಹುಭಿರ್ಗುಣೈಃ ।
ತ್ವಾಂ ಚ ಮಾಂ ಚ ನರವ್ಯಾಘ್ರ ಶತ್ರುಘ್ನಭರತೌ ಯಥಾ ॥ ೫
ಪಿತರಂ ಚಾನುಶೋಚಾಮಿ ಮಾತರಂ ಚ ಯಶಸ್ವಿನೀಮ್ ।
ಅಪಿ ವಾಂಧೌ ಭವೇತಾಂ ತು ರುದಂತೌ ತಾವಭೀಕ್ಷ್ಣಶಃ ॥ ೬
ಭರತಃ ಖಲು ಧರ್ಮಾತ್ಮಾ ಪಿತರಂ ಮಾತರಂ ಚ ಮೇ ।
ಧರ್ಮಾರ್ಥಕಾಮಸಹಿತೈರ್ವಾಕ್ಯೈರಾಶ್ವಾಸಯಿಷ್ಯತಿ॥ ೭
ಭರತಸ್ಯಾನೃಶಂಸತ್ವಂ ವಿಚಿಂತ್ಯಾಹಂ ಪುನಃ ಪುನಃ ।
ನಾನುಶೋಚಾಮಿ ಪಿತರಂ ಮಾತರಂ ಚಾಪಿ ಲಕ್ಷ್ಮಣ ॥ ೮

---

ಲಕ್ಷ್ಮಣ, ಯಾವುದನ್ನೂ ಸ್ಮರಿಸಿಕೊಂಡು ತಳಮಳಿಸಬೇಡ (೧-೨). ಜನಶೂನ್ಯವಾದ ಈ ಅರಣ್ಯಪ್ರದೇಶಗಳನ್ನು ನೋಡು. ಮೃಗಪಕ್ಷಿಗಳು ಕೂಗುತ್ತ ತಮ್ಮ ಗೂಡುಗಳಿಗೆ ಬಂದು ಸೇರಿಕೊಳ್ಳುವುದರಿಂದ ಅರಣ್ಯವೇ ಸುತ್ತಲೂ ಅಳುತ್ತಿರುವಂತೆ ಕಾಣುವುದು. ನಮ್ಮ ತಂದೆಯ ರಾಜಧಾನಿಯಾದ ಅಯೋಧ್ಯಾನಗರಿಯೇ ಈ ದಿನ ನಮಗೋಸ್ಕರ ಶೋಕಿಸುವುದು. ಸ್ತ್ರೀಪುರುಷರೆಲ್ಲರೂ ನಾವು ಹೊರಟುಹೋದೆವೆಂದು ವ್ಯಥೆಪಡುವರು; ಸಂದೇಹವಿಲ್ಲ (೩-೪). ಲಕ್ಷ್ಮಣ, ಮಹಾರಾಜನಲ್ಲಿ ಬಹಳ ಸದ್ಗುಣಗಳಿರುವುದರಿಂದ ಜನರು ಅವನಲ್ಲಿ ಅನುರಾಗವನ್ನಿಟ್ಟಿದ್ದಾರೆ. ಹಾಗೆಯೇ ನಿನ್ನನ್ನೂ ನನ್ನನ್ನೂ ಭರತ ಶತ್ರುಘ್ನರನ್ನೂ ಅವರು ಪ್ರೀತಿಸುತ್ತಾರೆ (೫). ನನ್ನ ತಂದೆಯನ್ನೂ ಯಶಸ್ವಿನಿಯಾದ ತಾಯಿಯನ್ನೂ ನೆನೆಸಿಕೊಂಡು ನನಗೆ ಬಹಳ ವ್ಯಸನವಾಗುತ್ತಿದೆ. ಅವರು ಅತ್ತು ಅತ್ತು ಕಣ್ಣೀರು ಸುರಿಸಿ ಕುರುಡರೇ ಆಗಿಬಿಡುವರೋ ಏನೊ! ಆದರೆ ಭರತನು ಧರ್ಮಾತ್ಮ. ಅವನು ನಮ್ಮ ತಂದೆತಾಯಿಗಳನ್ನು ಧರ್ಮಾರ್ಥಕಾಮಸಹಿತವಾದ ವಾಕ್ಯಗಳಿಂದ ಸಂತೈಸುವನು (೬-೭). ಲಕ್ಷ್ಮಣ, ಭರತನ ಸೌಜನ್ಯವನ್ನು ಯೋಚಿಸಿ ನಮ್ಮ ತಂದೆತಾಯಿಗಳಿಗೋಸ್ಕರ

ತ್ವಯಾ ಕಾರ್ಯಂ ನರವ್ಯಾಘ್ರ ಮಾಮನುವ್ರಜತಾ ಕೃತಮ್ ।
ಅನ್ವೇಷ್ಟವ್ಯಾ ಹಿ ವೈದೇಹ್ಯಾ ರಕ್ಷಣಾರ್ಥೇ ಸಹಾಯತಾ ॥ ೯

ಅದ್ಭಿರೇವ ತು ಸೌಮಿತ್ರೇ ವತ್ಸ್ಯಾಮ್ಯದ್ಯ ನಿಶಾಮಿಮಾಮ್ ।
ಏತದ್ಧಿ ರೋಚತೇ ಮಹ್ಯಂ ವನ್ಯೇಽಪಿ ವಿವಿಧೇ ಸತಿ ॥ ೧೦

ಏವಮುಕ್ತ್ವಾ ತು ಸೌಮಿತ್ರಿಂ ಸುಮಂತ್ರಮಪಿ ರಾಘವಃ ।
ಅಪ್ರಮತ್ತಸ್ತ್ವಮಶ್ವೇಷು ಭವ ಸೌಮ್ಯೇತ್ಯುವಾಚ ಹ ॥ ೧೧

ಸೋಽಶ್ವಾನ್ಸುಮಂತ್ರಃ ಸಂಯಮ್ಯ ಸೂರ್ಯೇಽಸ್ತಂ ಸಮುಪಾಗತೇ ।
ಪ್ರಭೂತಯವಸಾನ್ ಕೃತ್ವಾ ಬಭೂವ ಪ್ರತ್ಯನಂತರಃ ॥ ೧೨

ಉಪಾಸ್ಯ ತು ಶಿವಾಂ ಸಂಧ್ಯಾಂ ದೃಷ್ಟ್ವಾ ರಾತ್ರಿಮುಪಸ್ಥಿತಾಮ್ ।
ರಾಮಸ್ಯ ಶಯನಂ ಚಕ್ರೇ ಸೂತಃ ಸೌಮಿತ್ರಿಣಾ ಸಹ ॥ ೧೩

ತಾಂ ಶಯ್ಯಾಂ ತಮಸಾತೀರೇ ವೀಕ್ಷ್ಯ ವೃಕ್ಷದಲೈಃ ಕೃತಾಮ್ ।
ರಾಮಃ ಸೌಮಿತ್ರಿಣಾ ಸಾರ್ಧಂ ಸಭಾರ್ಯಃ ಸಂವಿವೇಶ ಹ ॥ ೧೪

---

ಚಿಂತಿಸಬೇಕಾಗಿಲ್ಲವೆಂದು ಮತ್ತೆ ಮತ್ತೆ ಸಮಾಧಾನಪಡಿಸಿಕೊಳ್ಳುತ್ತೇನೆ. ವತ್ಸ, ನೀನು ನನ್ನೊಡನೆ ಬಂದದ್ದು ಒಳ್ಳೆಯದೇ ಆಯಿತು. ಇಲ್ಲದಿದ್ದರೆ ಸೀತೆಯ ರಕ್ಷಣೆಗಾಗಿ ಸಹಾಯಕರನ್ನು ಹುಡುಕಬೇಕಾಗಿತ್ತು (೮-೯). ಸೌಮಿತ್ರಿ, ನೀರನ್ನು ಮಾತ್ರ ಸೇವಿಸಿ ಈ ರಾತ್ರಿಯನ್ನು ಕಳೆಯುವೆನು. ಕಾಡಿನಲ್ಲಿ ವಿವಿಧ ಆಹಾರಪದಾರ್ಥಗಳು ದೊರಕುವುದಾದರೂ ಈಗ ಇದೊಂದೇ ನನಗೆ ಬೇಕೆನಿಸುತ್ತದೆ" ಎಂದನು (೧೦). ರಾಘವನು ಈ ರೀತಿಯಲ್ಲಿ ಲಕ್ಷ್ಮಣನಿಗೆ ಹೇಳಿ ಸುಮಂತ್ರನನ್ನು ಕುರಿತು "ಸೌಮ್ಯ, ನೀನು ಕುದುರೆಗಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊ" ಎಂದು ನುಡಿದನು. ಅಷ್ಟರಲ್ಲಿ ಸೂರ್ಯಾಸ್ತವಾಯಿತು. ಸುಮಂತ್ರನು ಅಶ್ವಗಳನ್ನು ಒಂದೆಡೆಯಲ್ಲಿ ಕಟ್ಟಿ ಬೇಕಾದಷ್ಟು ಹುಲ್ಲನ್ನು ತಂದು ಹಾಕಿ ಶ್ರೀರಾಮನ ಬಳಿಗೆ ಬಂದು ನಿಂತನು (೧೧-೧೨). ಆಮೇಲೆ ಸಾಯಾಹ್ನಿಕವನ್ನು ಮುಗಿಸಿ ರಾತ್ರಿಯಾಯಿತೆಂಬುದನ್ನರಿತು ಸುಮಂತ್ರನೂ ಲಕ್ಷ್ಮಣನೂ ಸೇರಿ ಶ್ರೀರಾಮನಿಗೆ ಮಲಗುವುದಕ್ಕಾಗಿ ಸ್ಥಳವನ್ನೇರ್ಪಡಿಸಿದರು. ಹೀಗೆ ಸುಮಂತ್ರನು ಲಕ್ಷ್ಮಣನೊಡನೆ ಸೇರಿ ತಮಸಾನದೀತೀರದಲ್ಲಿ ಮರದ ಎಲೆಗಳಿಂದ ರಚಿಸಿದ

ಸಭಾರ್ಯಂ ಸಂಪ್ರಸುಪ್ತಂ ತಂ ಭ್ರಾತರಂ ವೀಕ್ಷ್ಯ ಲಕ್ಷ್ಮಣಃ ।
ಕಥಯಾಮಾಸ ಸೂತಾಯ ರಾಮಸ್ಯ ವಿವಿಧಾನ್ ಗುಣಾನ್ ॥ ೧೫

ಜಾಗ್ರತೋ ಹ್ಯೇವ ತಾಂ ರಾತ್ರಿಂ ಸೌಮಿತ್ರೇರುದಿತೋ ರವಿಃ ।
ಸೂತಸ್ಯ ತಮಸಾತೀರೇ ರಾಮಸ್ಯ ಬ್ರುವತೋ ಗುಣಾನ್ ॥ ೧೬

ಗೋಕುಲಾಕುಲತೀರಾಯಾಸ್ತಮಸಾಯಾ ವಿದೂರತಃ ।
ಅವಸತ್ತತ್ರ ತಾಂ ರಾತ್ರಿಂ ರಾಮಃ ಪ್ರಕೃತಿಭಿಃ ಸಹ ॥ ೧೭

ಉತ್ಥಾಯ ತು ಮಹಾತೇಜಾಃ ಪ್ರಕೃತೀಸ್ತಾ ನಿಶಾಮ್ಯ ಚ ।
ಅಬ್ರವೀದ್ಭ್ರಾತರಂ ರಾಮೋ ಲಕ್ಷ್ಮಣಂ ಪುಣ್ಯಲಕ್ಷಣಮ್ ॥ ೧೮

ಅಸ್ಮದ್ವ್ಯಪೇಕ್ಷಾನ್ ಸೌಮಿತ್ರೇ ನಿರ್ವ್ಯಪೇಕ್ಷಾನ್ ಗೃಹೇಷ್ವಪಿ ।
ವೃಕ್ಷಮೂಲೇಷು ಸಂಸುಪ್ತಾನ್ ಪಶ್ಯ ಲಕ್ಷ್ಮಣ ಸಾಂಪ್ರತಮ್ ॥ ೧೯

ಯಥೈತೇ ನಿಯಮಂ ಪೌರಾಃ ಕುರ್ವಂತ್ಯಸ್ಮನ್ನಿವರ್ತನೇ ।
ಅಪಿ ಪ್ರಾಣಾನಸಿಷ್ಯಂತಿ ನ ತು ತ್ಯಕ್ಷ್ಯಂತಿ ನಿಶ್ಚಯಮ್ ॥ ೨೦

---

ಹಾಸಿಗೆಯನ್ನು ನೋಡಿ, ಶ್ರೀರಾಮನು ತನ್ನ ಪತ್ನಿಯೊಡನೆ ಹೋಗಿ ಮಲಗಿದನು (೧೩-೧೪). ಅಣ್ಣನು ಪತ್ನೀಸಮೇತನಾಗಿ ನಿದ್ರಿಸಿದ ಮೇಲೆ ಲಕ್ಷ್ಮಣನು ಸುಮಂತ್ರನೊಡನೆ ಮಾತನಾಡುತ್ತ ಶ್ರೀರಾಮನ ವಿವಿಧಸದ್ಗುಣಗಳನ್ನು ಕೊಂಡಾಡುತ್ತಿದ್ದನು. ಹೀಗೆ ಲಕ್ಷ್ಮಣನು ನಿದ್ರೆ ಮಾಡದೆ ಸೂತನೊಡನೆ ಸಂಭಾಷಿಸುತ್ತ ಶ್ರೀರಾಮನ ಗುಣಗಳನ್ನು ವರ್ಣಿಸುತ್ತಿರುವಾಗಲೇ ರಾತ್ರಿಯು ಕಳೆದು ಸೂರ್ಯನು ಉದಯಿಸುವ ಸಮಯವಾಯಿತು (೧೫-೧೬). ತೀರದಲ್ಲಿ ಗೋವುಗಳಿಂದ ತುಂಬಿದ್ದ ತಮಸಾನದಿಗೆ ಸ್ವಲ್ಪ ದೂರದಲ್ಲಿ ಶ್ರೀರಾಮನು ಪ್ರಜೆಗಳೊಡನೆ ಆ ರಾತ್ರಿಯನ್ನು ಕಳೆದನು. ಮಹಾತೇಜಸ್ವಿಯಾದ ಶ್ರೀರಾಮನು ಬೆಳಗಿನ ಜಾವದಲ್ಲೆದ್ದು ನದೀತೀರದಲ್ಲಿ ಮಲಗಿದ್ದ ಪ್ರಜೆಗಳನ್ನು ವೀಕ್ಷಿಸಿದನು. ಕೂಡಲೆ ಅವನು ಪುಣ್ಯಶಾಲಿಯಾದ ಲಕ್ಷ್ಮಣನನ್ನು ಕರೆದು "ಲಕ್ಷ್ಮಣ, ನಮ್ಮನ್ನೇ ನಂಬಿ ಬಂದಿರುವ ಈ ಜನರನ್ನು ನೋಡು. ತಮ್ಮ ಮನೆಗಳನ್ನೂ ನಿರ್ಲಕ್ಷಿಸಿ ಬಂದು ಮರದ ಕೆಳಗೆ ಮಲಗಿದ್ದಾರೆ (೧೭-೧೯). ಈ ಪೌರರು ನಮ್ಮನ್ನು ಹಿಂದಿರುಗಿಸಲು ಪಟ್ಟು ಹಿಡಿದಿರುವುದನ್ನು ನೋಡಿದರೆ, ಇವರು ಪ್ರಾಣವನ್ನಾದರೂ ಬಿಟ್ಟಾರೇ ಹೊರತು

ಯಾವದೇವ ತು ಸಂಸುಪ್ತಾಸ್ತಾವದೇವ ವಯಂ ಲಘು ।
ರಥಮಾರುಹ್ಯ ಗಚ್ಛಾಮಃ ಪಂಥಾನಮಕುತೋಭಯಮ್ ॥ ೨೧

ಅತೋ ಭೂಯೋಽಪಿ ನೇದಾನೀಮಿಕ್ಷ್ವಾಕುಪುರವಾಸಿನಃ ।
ಸ್ವಪೇಯುರನುರಕ್ತಾ ಮಾಂ ವೃಕ್ಷಮೂಲಾನಿ ಸಂಶ್ರಿತಾಃ ॥ ೨೨

ಪೌರಾ ಹ್ಯಾತ್ಮಕೃತಾದ್ದುಃಖಾದ್ವಿಪ್ರಮೋಕ್ಷ್ಯಾ ನೃಪಾತ್ಮಜೈಃ ।
ನ ತು ಖಿಲ್ಯಾತ್ಮನಾ ಯೋಜ್ಯಾ ದುಃಖೇನ ಪುರವಾಸಿನಃ ॥ ೨೩

ಅಬ್ರವೀಲ್ಲಕ್ಷ್ಮಣೋ ರಾಮಂ ಸಾಕ್ಷಾದ್ಧರ್ಮಮಿವ ಸ್ಥಿತಮ್ ।
ರೋಚತೇ ಮೇ ತಥಾ ಪ್ರಾಜ್ಞ ಕ್ಷಿಪ್ರಮಾರುಹ್ಯತಾಮಿತಿ ॥ ೨೪

ಅಥ ರಾಮೋಽಬ್ರವೀತ್ ಶ್ರೀಮಾನ್ ಸುಮಂತ್ರಂ ಯುಜ್ಯತಾಂ ರಥಃ ।
ಗಮಿಷ್ಯಾಮಿ ತತೋಽರಣ್ಯಂ ಗಚ್ಛ ಶೀಘ್ರಮಿತಃ ಪ್ರಭೋ ॥ ೨೫

ಸೂತಸ್ತತಃ ಸಂತ್ವರಿತಃ ಸ್ಯಂದನಂ ತೈರ್ಹಯೋತ್ತಮೈಃ ।
ಯೋಜಯಿತ್ವಾಥ ರಾಮಾಯ ಪ್ರಾಂಜಲಿಃ ಪ್ರತ್ಯವೇದಯತ್ ॥ ೨೬

---

ತಮ್ಮ ನಿರ್ಧಾರವನ್ನು ಬಿಡುವಂತೆ ತೋರುವುದಿಲ್ಲ. ಆದ್ದರಿಂದ ಇವರು ಮಲಗಿರುವಾಗಲೇ ನಾವು ರಥವನ್ನು ಹತ್ತಿ ಬೇಗನೆ ಹೊರಟು ಹೋಗೋಣ. ಇವರು ಬರುತ್ತಾರೆಂಬ ಚಿಂತೆಯಿಲ್ಲದ ಬೇರೊಂದು ದಾರಿಯನ್ನು ಹಿಡಿಯೋಣ (೨೦-೨೧). ನನ್ನಲ್ಲಿ ಅನುರಾಗವಿಟ್ಟಿರುವ ಈ ಅಯೋಧ್ಯಾನಗರವಾಸಿಗಳಿಗೆ ಪುನಃ ಮರದಡಿಯಲ್ಲಿ ಮಲಗುವ ಕಷ್ಟ ಬರಬಾರದು. ರಾಜಪುತ್ರರು ಪ್ರಜೆಗಳ ಕಷ್ಟವನ್ನು ಪರಿಹರಿಸಬೇಕಲ್ಲದೆ ತಮ್ಮ ಕಷ್ಟಗಳನ್ನೇ ಪ್ರಜೆಗಳಮೇಲೆ ಹೇರಬಾರದು" ಎಂದು ಹೇಳಿದನು (೨೨-೨೩). ಆಗ ಲಕ್ಷ್ಮಣನು ಸಾಕ್ಷಾತ್ ಧರ್ಮದೇವತೆಯಂತಿದ್ದ ಶ್ರೀರಾಮನಿಗೆ, ತನಗೂ ಅದು ಯುಕ್ತವಾಗಿ ತೋರುವುದೆಂದೂ ಬೇಗನೆ ರಥವನ್ನು ಹತ್ತಬೇಕೆಂದೂ ತಿಳಿಸಿದನು (೨೪). ಆಗ ಶ್ರೀರಾಮನು ಸುಮಂತ್ರನನ್ನು ನೋಡಿ "ಬೇಗನೆ ರಥವನ್ನು ಹೂಡಿ ಸಜ್ಜುಪಡಿಸು. ಅದರಲ್ಲಿ ಕುಳಿತು ಅರಣ್ಯಕ್ಕೆ ಹೋಗುವೆನು. ಥಟ್ಟನೆ ಹೊರಡು" ಎಂದನು (೨೫). ಸುಮಂತ್ರನು ತ್ವರೆಯಿಂದ ಹೋಗಿ ರಥಕ್ಕೆ ಕುದುರೆಗಳನ್ನು ಕಟ್ಟಿ ಸಜ್ಜು ಪಡಿಸಿ ಕೈಮುಗಿದುಕೊಂಡು "ಹೇ ಮಹಾಬಾಹು,

ಅಯಂ ಯುಕ್ತೋ ಮಹಾಬಾಹೋ ರಥಸ್ತೇ ರಥಿನಾಂ ವರ ।
ತ್ವರಯಾರೋಹ ಭದ್ರಂ ತೇ ಸಸೀತಃ ಸಹಲಕ್ಷ್ಮಣಃ ॥ ೨೭

ತಂ ಸ್ಯಂದನಮಧಿಷ್ಠಾಯ ರಾಘವಃ ಸಪರಿಚ್ಛದಃ ।
ಶೀಘ್ರಗಾಮಾಕುಲಾವರ್ತಾಂ ತಮಸಾಮತರನ್ನದೀಮ್ ॥ ೨೮

ಸ ಸಂತೀರ್ಯ ಮಹಾಬಾಹುಃ ಶ್ರೀಮಾನ್ ಶಿವಮಕಂಟಕಮ್ ।
ಪ್ರಾಪದ್ಯತ ಮಹಾಮಾರ್ಗಮಭಯಂ ಭಯದರ್ಶಿನಾಮ್ ॥ ೨೯

ಮೋಹನಾರ್ಥಂ ತು ಪೌರಾಣಾಂ ಸೂತಂ ರಾಮೋಽಬ್ರವೀದ್ವಚಃ ।
ಉದಙ್ಮುಖಃ ಪ್ರಯಾಹಿ ತ್ವಂ ರಥಮಾಸ್ಥಾಯ ಸಾರಥೇ ॥ ೩೦

ಮುಹೂರ್ತಂ ತ್ವರಿತಂ ಗತ್ವಾ ನಿವರ್ತಯ ರಥಂ ಪುನಃ ।
ಯಥಾ ನ ವಿದ್ಯುಃ ಪೌರಾ ಮಾಂ ತಥಾ ಕುರು ಸಮಾಹಿತಃ ॥ ೩೧

ರಾಮಸ್ಯ ವಚನಂ ಶ್ರುತ್ವಾ ತಥಾ ಚಕ್ರೇ ಸ ಸಾರಥಿಃ ।
ಪ್ರತ್ಯಾಗಮ್ಯ ಚ ರಾಮಸ್ಯ ಸ್ಯಂದನಂ ಪ್ರತ್ಯವೇದಯತ್ ॥ ೩೨

---

ನಿನ್ನ ರಥವು ಸಿದ್ಧವಾಗಿದೆ. ನಿನಗೆ ಶುಭವಾಗಲಿ. ಸೀತಾಲಕ್ಷ್ಮಣರೊಡನೆ ಶೀಘ್ರವಾಗಿ ರಥವನ್ನು ಹತ್ತಬಹುದು" ಎಂದು ನಿವೇದಿಸಿದನು (೨೬-೨೭). ಆಗ ಶ್ರೀರಾಮನು ಧನುಸ್ಸು ಮೊದಲಾದ ಪರಿಕರಗಳೊಡನೆ ರಥವನ್ನೇರಿ, ಬಹಳ ಸುಳಿಗಳಿಂದ ವ್ಯಾಪ್ತವಾಗಿ ಶೀಘ್ರಗಾಮಿನಿಯಾಗಿದ್ದ ತಮಸಾನದಿಯನ್ನು ದಾಟಿದನು. ಅನಂತರ ಆ ವೀರನು ಯಾವ ತೊಂದರೆಯೂ ಇಲ್ಲದೆ ನಿರ್ಭಯವಾಗಿದ್ದ ಒಂದು ದೊಡ್ಡ ಮಾರ್ಗವನ್ನು ಸೇರಿದನು (೨೮-೨೯). ಆಗ ಶ್ರೀರಾಮನು ಪೌರರಿಗೆ ಭ್ರಾಂತಿಯನ್ನುಂಟುಮಾಡಿ ಅವರನ್ನು ಬಿಟ್ಟು ಹೋಗಬೇಕೆಂಬ ಉದ್ದೇಶದಿಂದ ಸುಮಂತ್ರನನ್ನು ಕುರಿತು "ಸಾರಥಿ, ನೀನೊಬ್ಬನೇ ರಥವನ್ನು ತೆಗೆದುಕೊಂಡು ಉತ್ತರಾಭಿಮುಖನಾಗಿ ಹೋಗು. ಒಂದು ಮುಹೂರ್ತಕಾಲ ವೇಗವಾಗಿ ಅತ್ತ ಕಡೆಯೇ ಹೋಗಿ (ಬೇರೆ ದಾರಿಯಿಂದ) ಹಿಂದಕ್ಕೆ ಬಂದುಬಿಡು! ಈ ಜನರಿಗೆ ನನ್ನ ವಿಷಯ ಗೊತ್ತಾಗದಂತೆ ಜಾಗರೂಕನಾಗಿ ಕೆಲಸವನ್ನು ಮಾಡು" ಎಂದು ಸೂಚಿಸಿದನು (೩೦-೩೧). ಆಗ ಸಾರಥಿಯು ಅದರಂತೆ ತಾನೊಬ್ಬನೇ ರಥವನ್ನು ಉತ್ತರದಿಕ್ಕಿಗೆ ಓಡಿಸಿಕೊಂಡು ಹೋಗಿ ಬೇರೆ ದಾರಿಯಿಂದ ಹಿಂತಿರುಗಿ ಬಂದು ಶ್ರೀರಾಮನಿಗೆ

ತೌ ಸಂಪ್ರಯುಕ್ತಂ ತು ರಥಂ ಸಮಾಸ್ಥಿತೌ
ತದಾ ಸಸೀತೌ ರಘುವಂಶವರ್ಧನೌ ।
ಪ್ರಚೋದಯಾಮಾಸ ತತಸ್ತುರಂಗಮಾನ್
ಸಸಾರಥಿರ್ಯೇನ ಪಥಾ ತಪೋವನಮ್ ॥ ೩೩

ತತಃ ಸಮಾಸ್ಥಾಯ ರಥಂ ಮಹಾರಥಃ
ಸಸಾರಥಿರ್ದಾಶರಥಿರ್ವನಂ ಯಯೌ ।
ಉದಙ್ಮುಖಂ ತಂ ತು ರಥಂ ಚಕಾರ ಸ
ಪ್ರಯಾಣಮಾಂಗಲ್ಯನಿಮಿತ್ತದರ್ಶನಾತ್ ॥ ೩೪

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್‌ಚತ್ವಾರಿಂಶಃ ಸರ್ಗಃ

ಅರಿಕೆಮಾಡಿದನು. ರಘುವಂಶತಿಲಕರಾದ ಶ್ರೀರಾಮಲಕ್ಷ್ಮಣರು ಅನಂತರ ಸೀತಾದೇವಿಯೊಡನೆ ರಥವನ್ನೇರಲು, ಸುಮಂತ್ರನು ತಪೋವನಾಭಿಮುಖವಾಗಿ ಅಶ್ವಗಳನ್ನು ಚೋದಿಸಿದನು (೩೨-೩೩). ಪ್ರಯಾಣಕಾಲದಲ್ಲಿ ಮಂಗಳಾರ್ಥವಾಗಿ ರಥವನ್ನು ಉತ್ತರಾಭಿಮುಖವಾಗಿ ಸುಮಂತ್ರನು ನಿಲ್ಲಿಸಿದನು. ಮಹಾರಥನಾದ ಶ್ರೀರಾಮನು ರಥವನ್ನೇರಿದಮೇಲೆ ರಥವನ್ನು ತಿರುಗಿಸಿ ವನಾಭಿಮುಖವಾಗಿ ಪ್ರಯಾಣ ಮಾಡಿದನು (೩೪)

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತಾರನೆಯ ಸರ್ಗ

## ಸಪ್ತಚತ್ವಾರಿಂಶಃ ಸರ್ಗಃ

ಪೌರನಿವೃತ್ತಿಃ

ಪ್ರಭಾತಾಯಾಂ ತು ಶರ್ವರ್ಯಾಂ ಪೌರಾಸ್ತೇ ರಾಘವಂ ವಿನಾ ।
ಶೋಕೋಪಹತನಿಶ್ಚೇಷ್ಟಾ ಬಭೂವುರ್ಹತಚೇತಸಃ ॥ ೧
ಶೋಕಜಾಶ್ರುಪರಿದ್ಯೂನಾ ವೀಕ್ಷಮಾಣಾಃ ಸಮಂತತಃ ।
ಆಲೋಕಮಪಿ ರಾಮಸ್ಯ ನ ಪಶ್ಯಂತಿ ಸ್ಮ ದುಃಖಿತಾಃ ॥ ೨
ತೇ ವಿಷಾದಾರ್ತವದನಾ ರಹಿತಾಸ್ತೇನ ಧೀಮತಾ ।
ಕೃಪಣಾಃ ಕರುಣಾ ವಾಚೋ ವದಂತಿ ಸ್ಮ ಮನಸ್ವಿನಃ ॥ ೩
ಧಿಗಸ್ತು ಖಲು ನಿದ್ರಾಂ ತಾಂ ಯಯಾಪಹೃತಚೇತಸಃ ।
ನಾದ್ಯ ಪಶ್ಯಾಮಹೇ ರಾಮಂ ಪೃಥೂರಸ್ಕಂ ಮಹಾಭುಜಮ್ ॥ ೪
ಕಥಂ ನಾಮ ಮಹಾಬಾಹುಃ ಸ ತಥಾವಿತಥಕ್ರಿಯಃ ।
ಭಕ್ತಂ ಜನಂ ಪರಿತ್ಯಜ್ಯ ಪ್ರವಾಸಂ ರಾಘವೋ ಗತಃ ॥ ೫

## ಸರ್ಗ ೪೭

ಪ್ರಜೆಗಳು ದುಃಖಿಸುತ್ತ ಅಯೋಧ್ಯೆಗೆ ಹಿಂತಿರುಗುವುದು.

ರಾತ್ರಿಯು ಕಳೆದು ಬೆಳಗಾಗಲು ಆ ಪೌರರು ಶ್ರೀರಾಮನನ್ನು ಕಾಣಲಿಲ್ಲ. ಅವರು ಶೋಕದಿಂದ ಸ್ತಬ್ಧರಾದರು. ಮನಸ್ಸಿಗೆ ಆಘಾತವಾಯಿತು. ಅವರು ಕಣ್ಣೀರು ಸುರಿಸುತ್ತ ಖಿನ್ನರಾಗಿ ಶ್ರೀರಾಮನ ಸುಳಿವು ಸಿಕ್ಕೀತೆಂದು ಸುತ್ತಲೂ ಹುಡುಕಿದರು. ಯಾವ ಚಿಹ್ನೆಯೂ ಗೋಚರಿಸಲಿಲ್ಲ (೧-೨). ಧೀಮಂತನಾದ ಶ್ರೀರಾಮನು ಬಿಟ್ಟುಹೋದನೆಂದು ಅವರ ಮುಖಗಳು ವಿಷಾದದಿಂದ ಬಾಡಿದವು. ಅವರು ಧೀರರಾದರೂ ಆ ಸಮಯದಲ್ಲಿ ಅತ್ಯಂತ ದೀನರಾಗಿ ಕರುಣಾಜನಕವಾದ ಮಾತುಗಳನ್ನು ಹೇಳಿಕೊಳ್ಳಲಾರಂಭಿಸಿದರು (೩):" ಅಯ್ಯೊ! ನಮ್ಮ ನಿದ್ರೆಗೆ ಧಿಕ್ಕಾರ! ಹೊರಗಿನ ಜ್ಞಾನವೇ ಇಲ್ಲದಂತೆ ಮಲಗಿಬಿಟ್ಟೆವು. ವಿಶಾಲವಕ್ಷನೂ ಆಜಾನುಬಾಹುವೂ ಆದ ರಾಮನು ಈಗ ಕಾಣದೆ ಹೋದನು. ಆಶ್ರಿತರನ್ನು ತಪ್ಪದೆ ರಕ್ಷಿಸುತ್ತಿದ್ದ ರಾಘವನು ಭಕ್ತರಾದ

ಯೋ ನಃ ಸದಾ ಪಾಲಯತಿ ಪಿತಾ ಪುತ್ರಾನಿವೌರಸಾನ್ ।
ಕಥಂ ರಘೂಣಾಂ ಸ ಶ್ರೇಷ್ಠಸ್ತ್ಯಕ್ತ್ವಾ ನೋ ವಿಪಿನಂ ಗತಃ ॥ ೬

ಇಹೈವ ನಿಧನಂ ಯಾಮೋ ಮಹಾಪ್ರಸ್ಥಾನಮೇವ ವಾ।
ರಾಮೇಣ ರಹಿತಾನಾಂ ಹಿ ಕಿಮರ್ಥಂ ಜೀವಿತಂ ಹಿತಮ್ ॥ ೭

ಸಂತಿ ಶುಷ್ಕಾಣಿ ಕಾಷ್ಠಾನಿ ಪ್ರಭೂತಾನಿ ಮಹಾಂತಿ ಚ ।
ತೈಃ ಪ್ರಜ್ವಾಲ್ಯ ಚಿತಾಂ ಸರ್ವೇ ಪ್ರವಿಶಾಮೋಽಥ ಪಾವಕಮ್ ॥ ೮

ಕಿಂ ವಕ್ಷ್ಯಾಮೋ ಮಹಾಬಾಹುರನಸೂಯುಃ ಪ್ರಿಯಂವದಃ ।
ನೀತಃ ಸ ರಾಘವೋಽಸ್ಮಾಭಿರಿತಿ ವಕ್ತುಂ ಕಥಂ ಕ್ಷಮಮ್ ॥ ೯

ಸಾ ನೂನಂ ನಗರೀ ದೀನಾ ದೃಷ್ಟ್ವಾಸ್ಮಾನ್ ರಾಘವಂ ವಿನಾ ।
ಭವಿಷ್ಯತಿ ನಿರಾನಂದಾ ಸಸ್ತ್ರೀಬಾಲವಯೋಽಧಿಕಾ ॥ ೧೦

---

ನಮ್ಮನ್ನು ಪರಿತ್ಯಜಿಸಿ ಹೊರಟುಹೋದನಲ್ಲ!(೪-೫). ತಂದೆಯು ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ನೋಡಿಕೊಳ್ಳುವಂತೆ ನಮ್ಮನ್ನು ಪಾಲಿಸುತ್ತಿದ್ದ ರಘುನಾಥನು ನಮ್ಮನ್ನು ಬಿಟ್ಟು ಕಾಡಿಗೆ ಹೋದನಲ್ಲ! ಇಲ್ಲಿಯೇ ನಾವು ಸತ್ತು ಹೋಗುವುದು ಲೇಸು! ಮಹಾಪ್ರಸ್ಥಾನವನ್ನಾದರೂ* ಅವಲಂಬಿಸೋಣ! ರಾಮನಿಲ್ಲದಮೇಲೆ ಬದುಕುವುದರಿಂದ ನಮಗೆ ಯಾವ ಹಿತವಿದೆ? (೬-೭). ಇಲ್ಲಿ ದಪ್ಪವಾಗಿರುವ ಒಣ ಕಟ್ಟಿಗೆಗಳು ಬೇಕಾದಷ್ಟಿವೆ. ಅವುಗಳಿಂದ ಚಿತೆಯನ್ನು ಪ್ರಜ್ವಲಿಸಿ ಎಲ್ಲರೂ ಅಗ್ನಿಯಲ್ಲಿ ಬೀಳೋಣ! ನಾವು ಅಯೋಧ್ಯೆಗೆ ಹೋಗಿ ಏನು ಹೇಳಬೇಕು? ಮಹಾಬಾಹುವೂ ಅಸೂಯಾರಹಿತನೂ ಪ್ರಿಯಂವದನೂ ಆದ ರಾಮನನ್ನು ನಾವು ವನಕ್ಕೆ ಕರೆದೊಯ್ದು ಬಿಟ್ಟುಬಂದೆವೆಂದು ಹೇಗೆ ಹೇಳಲು ಸಾಧ್ಯ?(೮-೯). ರಾಘವನಿಲ್ಲದೆ ನಾವು ಹಿಂದಕ್ಕೆ ಹೋದರೆ ಅಯೋಧ್ಯಾನಗರವೇ ಆಶಾಭಂಗದಿಂದ ಖಿನ್ನ

---

* ಮರಣದೀಕ್ಷೆಯನ್ನು ವಹಿಸಿ ಉತ್ತರದಿಕ್ಕಿಗೆ ಪ್ರಯಾಣಮಾಡುತ್ತ ಹೋಗುವುದಕ್ಕೆ ಮಹಾಪ್ರಸ್ಥಾನವೆಂದು ಹೆಸರು.

ನಿರ್ಯಾತಾಸ್ತೇನ ವೀರೇಣ ಸಹ ನಿತ್ಯಂ ಜಿತಾತ್ಮನಾ ।
ರಹಿತಾಸ್ತೇನ ಚ ಪುನಃ ಕಥಂ ಪಶ್ಯಾಮ ತಾಂ ಪುರೀಮ್ ॥ ೧೧

ಇತೀವ ಬಹುಧಾ ವಾಚೋ ಬಾಹುಮುದ್ಯಮ್ಯ ತೇ ಜನಾಃ ॥
ವಿಲಪಂತಿ ಸ್ಮ ದುಃಖಾರ್ತಾ ವಿವತ್ಸಾ ಇವ ಧೇನವಃ ॥ ೧೨

ತತೋ ಮಾರ್ಗಾನುಸಾರೇಣ ಗತ್ವಾ ಕಿಂಚಿತ್ ಕ್ಷಣಂ ಪುನಃ ।
ಮಾರ್ಗನಾಶಾದ್ವಿಷಾದೇನ ಮಹತಾ ಸಮಭಿಪ್ಲುತಾಃ ॥ ೧೩

ರಥಸ್ಯ ಮಾರ್ಗನಾಶೇನ ನ್ಯವರ್ತಂತ ಮನಸ್ವಿನಃ ।
ಕಿಮಿದಂ ಕಿಂ ಕರಿಷ್ಯಾಮೋ ದೈವೇನೋಪಹತಾ ಇತಿ ॥ ೧೪

ತತೋ ಯಥಾಗತೇನೈವ ಮಾರ್ಗೇಣ ಕ್ಲಾಂತಚೇತಸಃ ।
ಅಯೋಧ್ಯಾಮಗಮನ್ ಸರ್ವೇ ಪುರೀಂ ವ್ಯಥಿತಸಜ್ಜನಾಮ್ ॥ ೧೫

ಆಲೋಕ್ಯ ನಗರೀಂ ತಾಂ ಚ ಕ್ಷಯವ್ಯಾಕುಲಮಾನಸಾಃ ।
ಆವರ್ತಯಂತ ತೇಽಶ್ರೂಣಿ ನಯನೈಃ ಶೋಕಪೀಡಿತೈಃ ॥ ೧೬

---

ವಾಗುವುದು. ಸ್ತ್ರೀಬಾಲವೃದ್ಧರೆಲ್ಲರೂ ದುಃಖಿಸುವರು. ಜಿತೇಂದ್ರಿಯನಾದ ಆ ವೀರನೊಡನೆ ನಾವು ಹೊರಟುಬಂದೆವು. ಈಗ ಅವನನ್ನು ತ್ಯಜಿಸಿ ನಾವು ಮಾತ್ರ ಹೋಗಿ ಆ ನಗರವನ್ನು ನೋಡುವುದಾದರೂ ಹೇಗೆ?"(೧೦-೧೧). ಹೀಗೆ ಆ ಪ್ರಜೆಗಳು ನಾನಾವಿಧವಾಗಿ ಹಲುಬುತ್ತ ತೋಳನ್ನು ಮೇಲಕ್ಕೆ ನೀಡಿ ಗೋಳಾಡಿದರು. ಕರುವನ್ನು ಕಾಣದ ಹಸುಗಳಂತೆ ಹಂಬಲಿಸಿದರು. ಅನಂತರ ರಥದ ಗಾಲಿಯ ಗುರುತನ್ನನುಸರಿಸಿ ಆ ಮಾರ್ಗವಾಗಿ ಸ್ವಲ್ಪ ದೂರ ಹೋದರು. ಮುಂದೆ ಆ ರೇಖೆಯೂ ಕಾಣದೆಹೋದ್ದರಿಂದ ಅತ್ಯಂತ ವಿಷಾದಗೊಂಡರು (೧೨-೧೩). ಆಮೇಲೆ ದಾರಿಯು ತಿಳಿಯದೆ ಹಿಂದಿರುಗಿ "ಇದೇನು ನಮ್ಮ ದೌರ್ಭಾಗ್ಯ? ಈಗ ಏನು ಮಾಡೋಣ?ದುರ್ದೈವದಿಂದ ನಾವು ಕೆಟ್ಟೆವು" ಎಂದು ಹೇಳಿಕೊಳ್ಳುತ್ತ ಬಂದ ದಾರಿಯನ್ನು ಹಿಡಿದು ಅಯೋಧ್ಯೆಯ ಕಡೆಗೆ ಹೊರಟರು. ಅವರ ಮನಸ್ಸು ಬಹಳ ಆಯಾಸಗೊಂಡಿತ್ತು. ನಗರದಲ್ಲಿದ್ದ ಜನರೆಲ್ಲರೂ ವ್ಯಥೆಯಲ್ಲಿ ಮುಳುಗಿದ್ದರು (೧೪-೧೫). ಅಯೋಧ್ಯೆಯಲ್ಲಿ ಪ್ರತಿದಿನವೂ ನಡೆಯಬೇಕಾದ ಸಂಮಾರ್ಜನಾದಿಗಳು ನಡೆದಿರಲಿಲ್ಲ. ಅದನ್ನು ಕಂಡು ಅವರ ಮನಸ್ಸು ತಳಮಳಿಸಿತು. ಶೋಕದಿಂದ

ಏಷಾ ರಾಮೇಣ ನಗರೀ ರಹಿತಾ ನಾತಿಶೋಭತೇ ।
ಆಪಗಾ ಗರುಡೇನೇವ ಹ್ರದಾದುದ್ಧೃತಪನ್ನಗಾ ॥ ೧೭

ಚಂದ್ರಹೀನಮಿವಾಕಾಶಂ ತೋಯಹೀನಮಿವಾರ್ಣವಮ್ ।
ಅಪಶ್ಯನ್ನಿಹತಾನಂದಂ ನಗರಂ ತೇ ವಿಚೇತಸಃ ॥ ೧೮

ತೇ ತಾನಿ ವೇಶ್ಮಾನಿ ಮಹಾಧನಾನಿ
ದುಃಖೇನ ದುಃಖೋಪಹತಾ ವಿಶಂತಃ ।
ನೈವ ಪ್ರಜಜ್ಞುಃ ಸ್ವಜನಂ ಪರಂ ವಾ
ನಿರೀಕ್ಷಮಾಣಾಃ ಪ್ರವಿನಷ್ಟಹರ್ಷಾಃ ॥ ೧೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಚತ್ವಾರಿಂಶಃ ಸರ್ಗಃ

ಪಳಪಳನೆ ಕಣ್ಣೀರು ಸುರಿಸಿದರು (೧೬). ಸರೋವರದಲ್ಲಿ ಕಾವಲಾಗಿದ್ದ ಮಹಾಸರ್ಪವನ್ನು ಗರುಡನು ಅಪಹರಿಸಿಕೊಂಡುಹೋದರೆ ಸರೋವರವು ಹೇಗೆ ಅನಾಥವಾಗಿ ದೈನ್ಯಾವಸ್ಥೆಯನ್ನು ಪಡೆಯುವುದೊ, ಅಂಥ ದೈನ್ಯ ಸ್ಥಿತಿಯು ಅಯೋಧ್ಯಾಪಟ್ಟಣಕ್ಕೆ ಬಂದಿತ್ತು (೧೭). ಚಂದ್ರನಿಲ್ಲದ ಆಕಾಶದಂತೆ, ನೀರಿಲ್ಲದ ಕೆರೆಯಂತೆ ಉತ್ಸಾಹವಿಲ್ಲದ ಆ ಪಟ್ಟಣವನ್ನು ಕಂಡು ವಿಷಣ್ಣರಾದರು. ಆ ಪ್ರಜೆಗಳು ಐಶ್ವರ್ಯಪೂರ್ಣವಾದ ತಮ್ಮ ಗೃಹಗಳನ್ನು ಪ್ರವೇಶಿಸಿದರೂ ದುಃಖಾವಿಷ್ಟರಾಗಿದ್ದರು. ಹರ್ಷಗೆಟ್ಟಿದ್ದ ಆ ಜನರು ಎದುರಿಗೆ ನೋಡುತ್ತಿದ್ದರೂ ತಮ್ಮ ಬಂಧುಗಳು ಯಾರು, ಪರಕೀಯರು ಯಾರು- ಎಂದು ಗುರುತಿಸಲಾರದೆಹೋದರು (೧೮-೧೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತೇಳನೆಯ ಸರ್ಗ

## ಅಷ್ಟಚತ್ವಾರಿಂಶಃ ಸರ್ಗಃ

### ಪೌರಾಂಗನಾವಿಲಾಪಃ

ತೇಷಾಮೇವಂ ವಿಷಣ್ಣಾನಾಂ ತಾಡಿತಾನಾಮತೀವ ಚ ।
ಬಾಷ್ಪವಿಪ್ಲುತನೇತ್ರಾಣಾಂ ಸಶೋಕಾನಾಂ ಮುಮೂರ್ಷಯಾ ॥ ೧

ಅನುಗಮ್ಯ ನಿವೃತ್ತಾನಾಂ ರಾಮಂ ನಗರವಾಸಿನಾಮ್ ।
ಉದ್ಗತಾನೀವ ಸತ್ತ್ವಾನಿ ಬಭೂವುರಮನಸ್ವಿನಾಮ್ ॥ ೨

ಸ್ವಂ ಸ್ವಂ ನಿಲಯಮಾಗಮ್ಯ ಪುತ್ರದಾರೈಃ ಸಮಾವೃತಾಃ ।
ಅಶ್ರೂಣಿ ಮುಮುಚುಃ ಸರ್ವೇ ಬಾಷ್ಪೇಣ ಪಿಹಿತಾನನಾಃ ॥ ೩

ನ ಚಾಹೃಷ್ಯನ್ನ ಚಾಮೋದನ್ ವಣಿಜೋ ನ ಪ್ರಸಾರಯನ್ ।
ನ ಚಾಶೋಭಂತ ಪಣ್ಯಾನಿ ನಾಪಚನ್ ಗೃಹಮೇಧಿನಃ ॥ ೪

ನಷ್ಟಂ ದೃಷ್ಟ್ವಾ ನಾಭ್ಯನಂದನ್ ವಿಪುಲಂ ವಾ ಧನಾಗಮಮ್ ।
ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನಂದತ ॥ ೫

## ಸರ್ಗ ೪೮

### ಪೌರಾಂಗನೆಯರ ವಿಲಾಪ.

ಶ್ರೀರಾಮನನ್ನು ಹಿಂಬಾಲಿಸಿ ಹೋಗಿ ಹಿಂದಿರುಗಿ ಬಂದ ಆ ನಗರ ವಾಸಿಗಳು ಶ್ರೀರಾಮನ ವಿರಹದಿಂದ ವಿಷಾದಗೊಂಡು ಶೋಕಪೀಡಿತ ರಾದರು. ಆಗಾಗ ಮೂರ್ಛೆಗೊಳ್ಳುತ್ತ ದುಃಖದಿಂದ ಕಂಬನಿಯನ್ನು ಸುರಿಸುತ್ತ ಧೈರ್ಯವಿಲ್ಲದವರಾದರು. ಪ್ರಾಣವು ಹೊರಟುಹೋದಂತೆ ಮೃತ ಪ್ರಾಯರಾದರು (೧-೨). ಅವರು ತಮ್ಮ ತಮ್ಮ ಮನೆಗಳಿಗೆ ಹೋಗಿ ಹೆಂಡತಿ ಮಕ್ಕಳೊಡನೆ ಕುಳಿತುಕೊಂಡು ಪುನಃ ಬಾಷ್ಪವನ್ನು ಸುರಿಸುತ್ತ ರೋದಿಸತೊಡಗಿದರು. ಎಲ್ಲರಿಗೂ ಗೆಲವು ಕುಗ್ಗಿತು; ನಲಿವು ಸುಗ್ಗಿತು. ವರ್ತಕರು ಅಂಗಡಿಗಳನ್ನು ತೆರೆಯಲಿಲ್ಲ. ಮಾರಾಟದ ವಸ್ತುಗಳು ಮೆರೆಯಲಿಲ್ಲ. ಗೃಹಸ್ಥರು ಅಡಿಗೆಯನ್ನು ಮಾಡಲಿಲ್ಲ(೩-೪). ಕಳೆದುಹೋಗಿದ್ದ ವಸ್ತು ಸಿಕ್ಕಿದರೂ ಜನರಿಗೆ ಸಂತೋಷವಾಗಲಿಲ್ಲ. ಆಕಸ್ಮಿಕವಾಗಿ ವಿಪುಲೈಶ್ವರ್ಯವು

ಗೃಹೇ ಗೃಹೇ ರುದಂತ್ಯಶ್ಚ ಭರ್ತಾರಂ ಗೃಹಮಾಗತಮ್ ।
ವ್ಯಗರ್ಹಯಂತ ದುಃಖಾರ್ತಾ ವಾಗ್ಭಿಸ್ತೋತ್ರೈರಿವ ದ್ವಿಜಾನ್ ॥ ೬

ಕಿಂ ನು ತೇಷಾಂ ಗೃಹೈಃ ಕಾರ್ಯಂ ಕಿಂ ದಾರೈಃ ಕಿಂ ಧನೇನ ವಾ ।
ಪುತ್ರೈರ್ವಾ ಕಿಂ ಸುಖೈರ್ವಾರಿ ಯೇ ನ ಪಶ್ಯಂತಿ ರಾಘವಮ್ ॥ ೭

ಏಕಃ ಸತ್ಪುರುಷೋ ಲೋಕೇ ಲಕ್ಷ್ಮಣಃ ಸಹ ಸೀತಯಾ ।
ಯೋಽನುಗಚ್ಛತಿ ಕಾಕುತ್ಸ್ಥಂ ರಾಮಂ ಪರಿಚರನ್ ವನೇ ॥ ೮

ಆಪಗಾಃ ಕೃತಪುಣ್ಯಾಸ್ತಾಃ ಪದ್ಮಿನ್ಯಶ್ಚ ಸರಾಂಸಿ ಚ ।
ಏಷು ಸ್ನಾಸ್ಯತಿ ಕಾಕುತ್ಸ್ಥೋ ವಿಗಾಹ್ಯ ಸಲಿಲಂ ಶುಚಿ ॥ ೯

ಶೋಭಯಿಷ್ಯಂತಿ ಕಾಕುತ್ಸ್ಥಮಟವ್ಯೋ ರಮ್ಯಕಾನನಾಃ ।
ಆಪಗಾಶ್ಚ ಮಹಾನೂಪಾಃ ಸಾನುಮಂತಶ್ಚ ಪರ್ವತಾಃ ॥ ೧೦

ಕಾನನಂ ವಾಪಿ ಶೈಲಂ ವಾ ಯಂ ರಾಮೋಽಭಿಗಮಿಷ್ಯತಿ ।
ಪ್ರಿಯಾತಿಥಿಮಿವ ಪ್ರಾಪ್ತಂ ನೈನಂ ಶಕ್ಷ್ಯಂತ್ಯನರ್ಚಿತುಮ್ ॥ ೧೧

---

ದೊರಕಿದರೂ ನಲಿವು ತೋರಲಿಲ್ಲ. ಚೊಚ್ಚಲು ಗಂಡುಮಗುವನ್ನು ಹಡೆದರೂ ತಾಯಿಯು ಹಿಗ್ಗಲಿಲ್ಲ. ಮನೆಮನೆಗಳಲ್ಲಿಯೂ ಹೆಂಗಸರು ಅಳುತ್ತಿದ್ದರು. ಶ್ರೀರಾಮನನ್ನು ಬಿಟ್ಟು ಹಿಂದಿರುಗಿಬಂದ ಗಂಡಂದಿರನ್ನು ಅಂಕುಶಗಳಿಂದ ಆನೆಗಳನ್ನು ತಿವಿಯುವಂತೆ ತಮ್ಮ ಚುಚ್ಚುಮಾತುಗಳಿಂದ ನಿಂದಿಸುತ್ತಿದ್ದರು (೫-೬):" ಯಾರು ಶ್ರೀರಾಮನನ್ನು ನೋಡುತ್ತ ಇರುವುದಿಲ್ಲವೊ ಅವರಿಗೆ ಮನೆಗಳಿಂದೇನು? ಹೆಂಡತಿಮಕ್ಕಳಿಂದೇನು? ಅವರಿಗೆ ಧನವೇಕೆ? ಸುಖಸಾಮಗ್ರಿಗಳೇಕೆ? ಲೋಕದಲ್ಲಿ ಸತ್ಪುರುಷನೆಂದರೆ ಲಕ್ಷ್ಮಣನೊಬ್ಬನೇ. ಸೀತಾಸಮೇತನಾದ ರಾಮನ ಪರಿಚರ್ಯೆಗೋಸ್ಕರ ಕಾಡಿಗೆ ಅವನನ್ನು ಹಿಂಬಾಲಿಸಿ ಹೋಗಿದ್ದಾನೆ (೭-೮). ಶ್ರೀರಾಮನು ಇಳಿದು ಸ್ನಾನಮಾಡುವ ನದಿಗಳೂ ತಾವರೆಕೊಳಗಳೂ ಕೆರೆಗಳೂ ಪುಣ್ಯಶಾಲಿಗಳು. ಅವುಗಳ ನೀರು ಪವಿತ್ರವಾಗುವುದು. ರಮಣೀಯವಾದ ವೃಕ್ಷಸಂಘಾತವುಳ್ಳ ಅಡವಿಗಳೂ ಜಲಸಮೃದ್ಧಿಯುಳ್ಳ ನದಿಗಳೂ ಸಮಪ್ರದೇಶಗಳುಳ್ಳ ಬೆಟ್ಟಗಳೂ ಶ್ರೀರಾಮನನ್ನು ಸೇವಿಸಿ ಸಂತೋಷಪಡಿಸುವುವು (೯-೧೦). ಶ್ರೀರಾಮನು ಯಾವ ಅರಣ್ಯಕ್ಕೆ ಹೋಗಲಿ, ಯಾವ ಪರ್ವತ

ವಿಚಿತ್ರಕುಸುಮಾಪೀಡಾ ಬಹುಮಂಜರಿಧಾರಿಣಃ ।
ರಾಘವಂ ದರ್ಶಯಿಷ್ಯಂತಿ ನಗಾ ಭ್ರಮರಶಾಲಿನಃ ॥ ೧೨

ಅಕಾಲೇ ಚಾಪಿ ಮುಖ್ಯಾನಿ ಪುಷ್ಪಾಣಿ ಚ ಫಲಾನಿ ಚ ।
ದರ್ಶಯಿಷ್ಯಂತ್ಯನುಕ್ರೋಶಾದ್ಗಿರಯೋ ರಾಮಮಾಗತಮ್ ॥ ೧೩

ಪ್ರಸ್ರವಿಷ್ಯಂತಿ ತೋಯಾನಿ ವಿಮಲಾನಿ ಮಹೀಧರಾಃ ।
ವಿದರ್ಶಯಂತೋ ವಿವಿಧಾನ್ ಭೂಯಶ್ಚಿತ್ರಾಂಶ್ಚ ನಿರ್ಝರಾನ್ ॥

ಪಾದಪಾಃ ಪರ್ವತಾಗ್ರೇಷು ರಮಯಿಷ್ಯಂತಿ ರಾಘವಮ್ ।
ಯತ್ರ ರಾಮೋ ಭಯಂ ನಾತ್ರ ನಾಸ್ತಿ ತತ್ರ ಪರಾಭವಃ ॥ ೧೫

ಸ ಹಿ ಶೂರೋ ಮಹಾಬಾಹುಃ ಪುತ್ರೋ ದಶರಥಸ್ಯ ಚ ।
ಪುರಾ ಭವತಿ ನೋ ದೂರಾದನುಗಚ್ಛಾಮ ರಾಘವಮ್ ॥ ೧೬

ಪಾದಚ್ಛಾಯಾ ಸುಖಾ ಭರ್ತುಸ್ತಾದೃಶಸ್ಯ ಮಹಾತ್ಮನಃ ।
ಸ ಹಿ ನಾಥೋ ಜನಸ್ಯಾಸ್ಯ ಸ ಗತಿಃ ಸ ಪರಾಯಣಮ್ ॥ ೧೭

---

ವನ್ನೇರಲಿ, ಅವೆಲ್ಲವೂ ಪ್ರಿಯನಾದ ಅತಿಥಿಯು ಬಂದನೆಂದು ಅವನನ್ನು ಪೂಜಿಸದೆ ಇರಲಾರವು. ಮರಗಳು ಬಣ್ಣ ಬಣ್ಣದ ಹೂಗಳನ್ನು ಮುಡಿದು ಹೂಗೊಂಚಲುಗಳನ್ನು ಹಿಡಿದು ದುಂಬಿಗಳಿಂದ ಇಂಪಾಗಿ ನುಡಿಯುತ್ತ ರಾಘವನಿಗೆ ಕಾಣಿಸಿಕೊಳ್ಳುವುವು (೧೧-೧೨). ರಾಮನು ಹೋದರೆ ಗಿರಿಗಳು ಅವನಮೇಲಿರುವ ಪ್ರೀತಿಯಿಂದ ಕಂಪುಬೀರುವ ಹೂಗಳನ್ನೂ ಸೊಂಪಾದ ಹಣ್ಣುಗಳನ್ನೂ ತೋರಿಸುವುವು. ಋತುಧರ್ಮವನ್ನೂ ಅವು ಗಣಿಸವು. ಆ ಗಿರಿಗಳು ನಾನಾಬಗೆಯ ಗಿರಿನದಿಗಳನ್ನು ಸೃಜಿಸಿ ತಿಳಿನೀರನ್ನು ರಾಮನಿಗೆ ಒದಗಿಸುವುವು. (೧೩-೧೪). ಆ ಬೆಟ್ಟಗಳಲ್ಲಿರುವ ಮರಗಳು ರಾಘವನನ್ನು ಆನಂದಪಡಿಸುವುವು. ರಾಮನಿದ್ದಲ್ಲಿ ಹೆದರಿಕೆಯೆಂಬುದಿಲ್ಲ; ಸೋಲೆಂಬುದಿಲ್ಲ. ಆ ಮಹಾಭುಜನು ಶೂರನಲ್ಲವೆ? ದಶರಥಮಹಾರಾಜನ ಪುತ್ರನಲ್ಲವೆ? ಅವನು ಇನ್ನೂ ದೂರ ಹೋಗುವಷ್ಟರಲ್ಲಿ ಅವನನ್ನು ಹುಡುಕಿಕೊಂಡು ಹೋಗೋಣ (೧೫-೧೬) ಅಂಥ ಮಹಾತ್ಮನಾದ ಸ್ವಾಮಿಯ ಪಾದದ ನೆರಳಲ್ಲಿರುವುದೇ ನಮಗೆ ಶ್ರೇಯಸ್ಕರ. ಅವನೇ ನಮ್ಮೆಲ್ಲರಿಗೂ ಒಡೆಯ; ಅವನೇ ಗತಿ; ಅವನೋ ನಮಗೆ ಆಧಾರ. ನಾವು ಸೀತಾದೇವಿಯ ಪರಿಚರ್ಯೆ

ವಯಂ ಪರಿಚರಿಷ್ಯಾಮಃ ಸೀತಾಂ ಯೂಯಂ ತು ರಾಘವಮ್ ।
ಇತಿ ಪೌರಸ್ತ್ರಿಯೋ ಭರ್ತೄನ್ ದುಃಖಾರ್ತಾಸ್ತತ್ತದಬ್ರುವನ್ ॥ ೧೮

ಯುಷ್ಮಾಕಂ ರಾಘವೋಽರಣ್ಯೇ ಯೋಗಕ್ಷೇಮಂ ವಿಧಾಸ್ಯತಿ ।
ಸೀತಾ ನಾರೀಜನಸ್ಯಾಸ್ಯ ಯೋಗಕ್ಷೇಮಂ ಕರಿಷ್ಯತಿ ॥ ೧೯

ಕೋ ನ್ವನೇನಾಪ್ರತೀತೇನ ಸೋತ್ಕಂಠಿತಜನೇನ ಚ ।
ಸಂಪ್ರೀಯೇತಾಮನೋಜ್ಞೇನ ವಾಸೇನ ಹೃತಚೇತಸಾ ॥ ೨೦

ಕೈಕೇಯ್ಯಾ ಯದಿ ಚೇದ್ರಾಜ್ಯಂ ಸ್ಯಾದಧರ್ಮ್ಯಮನಾಥವತ್ ।
ನ ಹಿ ನೋ ಜೀವಿತೇನಾರ್ಥಃ ಕುತಃ ಪುತ್ರೈಃ ಕುತೋ ಧನೈಃ ॥ ೨೧

ಯಯಾ ಪುತ್ರಶ್ಚ ಭರ್ತಾ ಚ ತ್ಯಕ್ತಾಪ್ಯೈಶ್ವರ್ಯಕಾರಣಾತ್।
ಕಂ ಸಾ ಪರಿಹರೇದನ್ಯಂ ಕೈಕೇಯೀ ಕುಲಪಾಂಸನೀ ॥ ೨೨

---

ಮಾಡಿಕೊಂಡಿರುವೆವು. ಗಂಡಸರಾದ ನೀವು ಶ್ರೀರಾಮನನ್ನು ಸೇವಿಸುತ್ತಿರಿ" ಎಂದು ಆ ಪೌರಾಂಗನೆಯರು ದುಃಖದಿಂದ ತಮ್ಮ ಗಂಡಂದಿರಿಗೆ ಹೇಳಿದರು (೧೭-೧೮). ಆ ಸ್ತ್ರೀಯರು ಪುನಃ ಹೀಗೆಂದರು :"ಅಡವಿಯಲ್ಲಿ ರಾಘವನು ನಿಮ್ಮೆಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳುವನು. ಸೀತೆಯು ಹೆಂಗಸರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವಳು (೧೯). ಇನ್ನು ಮೇಲೆ ಈ ನಗರದಲ್ಲಿ ವಾಸಮಾಡುವುದು ಯಾರಿಗೆ ತಾನೆ ಪ್ರಿಯವಾದೀತು? ಈ ನಗರವಾಸವು ಯೋಗ್ಯವಲ್ಲ. ಇಲ್ಲಿರುವ ಜನರಿಗೆ ಶೋಕದ ಸ್ಮರಣೆ ತಪ್ಪಿದ್ದಲ್ಲ. ಇಲ್ಲಿರುವುದು ಉದ್ವೇಗಕಾರಿ. ಮನಸ್ಸು ಕದಡಿಹೋಗುವುದು (೨೦). ಈ ರಾಜ್ಯವು ದಿಕ್ಕಿಲ್ಲದಂತೆ ಧರ್ಮಬಾಹಿರವಾಗಿ ಕೈಕೇಯಿಯ ವಶವಾಗುವುದಾದರೆ, ನಾವು ಜೀವಿಸುವುದರಿಂದ ಫಲವೇನೂ ಇಲ್ಲ. ಎಂದಮೇಲೆ ನಮಗೆ ಪುತ್ರರಿಂದೇನು? ಧನದಿಂದೇನು? (೨೧). ಈ ಕೈಕೇಯಿಯು ಕೇವಲ ಒಂದು ಐಶ್ವರ್ಯಕ್ಕಾಗಿ ಮಗನನ್ನೂ ಗಂಡನನ್ನೂ ಕೈಬಿಟ್ಟಳಲ್ಲ! ಈ ಕುಲಗೇಡಿಯು ಇನ್ನು ಯಾರನ್ನು ತಾನೆ ಪೀಡಿಸದೆ ಬಿಟ್ಟಾಳು? ಕೈಕೇಯಿಯು ಬದುಕಿರುವವರೆಗೆ ಇವಳ ರಾಜ್ಯದಲ್ಲಿ ನಾವು ಬದುಕಿದ್ದು

ಕೈಕೇಯ್ಯಾ ನ ವಯಂ ರಾಜ್ಯೇ ಭೃತಕಾ ನಿವಸೇಮ ಹಿ ।
ಜೀವಂತ್ಯಾ ಜಾತು ಜೀವಂತ್ಯಃ ಪುತ್ರೈರಪಿ ಶಪಾಮಹೇ ॥ ೨೩

ಯಾ ಪುತ್ರಂ ಪಾರ್ಥಿವೇಂದ್ರಸ್ಯ ಪ್ರವಾಸಯತಿ ನಿರ್ಘೃಣಾ ।
ಕಸ್ತಾಂ ಪ್ರಾಪ್ಯ ಸುಖಂ ಜೀವೇದಧರ್ಮ್ಯಾಂ ದುಷ್ಟಚಾರಿಣೀಮ್ ॥ ೨೪

ಉಪದ್ರುತಮಿದಂ ಸರ್ವಮನಾಲಂಬಮನಾಯಕಮ್ ।
ಕೈಕೇಯ್ಯಾ ಹಿ ಕೃತೇ ಸರ್ವಂ ವಿನಾಶಮುಪಯಾಸ್ಯತಿ ॥ ೨೫

ನ ಹಿ ಪ್ರವ್ರಜಿತೇ ರಾಮೇ ಜೀವಿಷ್ಯತಿ ಮಹೀಪತಿಃ ।
ಮೃತೇ ದಶರಥೇ ವ್ಯಕ್ತಂ ವಿಲಾಪಸ್ತದನಂತರಮ್ ॥ ೨೬

ತೇ ವಿಷಂ ಪಿಬತಾಲೋಡ್ಯ ಕ್ಷೀಣಪುಣ್ಯಾಃ ಸುದುರ್ಗತಾಃ ।
ರಾಘವಂ ವಾನುಗಚ್ಛಧ್ವಮಶ್ರುತಿಂ ವಾಪಿ ಗಚ್ಛತ ॥ ೨೭

ಮಿಥ್ಯಾ ಪ್ರವ್ರಾಜಿತೋ ರಾಮಃ ಸಸೀತಃ ಸಹಲಕ್ಷ್ಮಣಃ ।
ಭರತೇ ಸಂನಿಸೃಷ್ಟಾಃ ಸ್ಮಃ ಸೌನಿಕೇ ಪಶವೋ ಯಥಾ ॥ ೨೮

---

ಗುಲಾಮರಾಗಿರಲು ಸಿದ್ಧರಾಗಿಲ್ಲ. ನಮ್ಮ ಮಕ್ಕಳಾಣೆಯಾಗಿ ಈ ಮಾತನ್ನು ಹೇಳುತ್ತಿದ್ದೇವೆ (೨೨-೨೩). ಯಾವಳು ಸ್ವಲ್ಪವೂ ಮರುಕವಿಲ್ಲದೆ ರಾಜಕುಮಾರನನ್ನು ಕಾಡಿಗೆ ಅಟ್ಟಿದಳೊ, ಅಂಥ ಧರ್ಮಬಾಹಿರಳಾದ ಕೆಟ್ಟ ಹೆಂಗಸಿನ ಹತ್ತಿರ ಸುಖವಾಗಿ ಬಾಳಲು ಯಾರಿಗೆ ಸಾಧ್ಯ ? ಈ ರಾಜ್ಯಕ್ಕೆದೊಡ್ಡ ಉಪದ್ರವ ಬಂದಿತು. ಆಶ್ರಯ ತಪ್ಪಿತು. ಇದು ಅನಾಯಕವಾಯಿತು. ಕೈಕೇಯಿಯೊಬ್ಬಳಿಗಾಗಿ ಈ ರಾಜ್ಯ ಹಾಳಾಗಿಹೋಗುವುದು (೨೪-೨೫). ಏಕೆಂದರೆ, ರಾಮನು ಕಾಡಿಗೆ ಹೋದಮೇಲೆ ಮಹಾರಾಜನು ಎಂದಿಗೂ ಜೀವಿಸಿರಲಾರನು. ಅವನು ಮೃತನಾದಮೇಲೆ ಸರ್ವನಾಶವು ತಪ್ಪದು. ಆದ್ದರಿಂದ ಪುಣ್ಯಹೀನರಾಗಿ ದುರ್ಗತಿಗೆ ಸಿಕ್ಕಿರುವ ನೀವು ಇದೆಲ್ಲವನ್ನೂ ಪರಿಶೀಲಿಸಿದರೆ ವಿಷವನ್ನು ಕುಡಿದುಬಿಡುವುದು ಉತ್ತಮ. ಇಲ್ಲದಿದ್ದರೆ ಶ್ರೀರಾಮನನ್ನು ಹಿಂಬಾಲಿಸಿ ಹೋಗಬೇಕು ಅಥವಾ ನಿಮ್ಮ ಹೆಸರೂ ಉಳಿಯದಂತೆ ದೇಶಾಂತರಕ್ಕೆ ಹೋಗಿಬಿಡಬೇಕು (೨೬-೨೭). ಸೀತಾಲಕ್ಷ್ಮಣರೊಡನೆ ರಾಮನನ್ನು ವನಕ್ಕೆ ಕಳಿಸಿದ್ದು ಕಪಟತನದಿಂದಲೇ ಸರಿ. ಕಟುಕನಿಗೆ ಪಶುಗಳನ್ನು ಕೊಟ್ಟಂತೆ ನಮ್ಮನ್ನು ಭರತನ ವಶಕ್ಕೆ ಕೊಟ್ಟಿದ್ದಾರೆ (೨೮).

ಪೂರ್ಣಚಂದ್ರಾನನಃ ಶ್ಯಾಮೋ ಗೂಢಜತ್ರುರರಿಂದಮಃ ।
ಆಜಾನುಬಾಹುಃ ಪದ್ಮಾಕ್ಷೋ ರಾಮೋ ಲಕ್ಷ್ಮಣಪೂರ್ವಜಃ ॥ ೨೯

ಪೂರ್ವಾಭಿಭಾಷೀ ಮಧುರಃ ಸತ್ಯವಾದೀ ಮಹಾಬಲಃ ।
ಸೌಮ್ಯಶ್ಚ ಸರ್ವಲೋಕಸ್ಯ ಚಂದ್ರವತ್ ಪ್ರಿಯದರ್ಶನಃ ॥ ೩೦

ನೂನಂ ಪುರುಷಶಾರ್ದೂಲೋ ಮತ್ತಮಾತಂಗವಿಕ್ರಮಃ ।
ಶೋಭಯಿಷ್ಯತ್ಯರಣ್ಯಾನಿ ವಿಚರನ್ ಸ ಮಹಾರಥಃ ॥ ೩೧

ತಾಸ್ತಥಾ ವಿಲಪಂತ್ಯಸ್ತು ನಗರೇ ನಾಗರಸ್ತ್ರಿಯಃ ।
ಚುಕ್ರುಶುರ್ದುಃಖಸಂತಪ್ತಾ ಮೃತ್ಯೋರಿವ ಭಯಾಗಮೇ ॥ ೩೨

ಇತ್ಯೇವಂ ವಿಲಪಂತೀನಾಂ ಸ್ತ್ರೀಣಾಂ ವೇಶ್ಮಸು ರಾಘವಮ್ ।
ಜಗಾಮಾಸ್ತಂ ದಿನಕರೋ ರಜನೀ ಚಾಭ್ಯವರ್ತತ ॥ ೩೩

ನಷ್ಟಜ್ವಲನಸಂಪಾತಾ ಪ್ರಶಾಂತಾಧ್ಯಾಯಸಂಕಥಾ ।
ತಿಮಿರೇಣಾಭಿಲಿಪ್ತೇವ ಸಾ ತದಾ ನಗರೀ ಬಭೌ ॥ ೩೪

---

ಆಹಾ! ಲಕ್ಷ್ಮಣನಿಗೆ ಅಣ್ಣನಾಗಿರುವ ರಾಮನು ಎಂಥವನು! ಪೂರ್ಣಚಂದ್ರಾನನ; ಶ್ಯಾಮಲಾಂಗ; ಪುಷ್ಟವಾಗಿ ತುಂಬಿರುವ ಹೆಗಲುಳ್ಳವನು; ಶತ್ರುಸಂಹಾರಕ; ಆಜಾನುಬಾಹು; ಪದ್ಮನಯನ; ತಾನೇ ಮೊದಲು ಜನರನ್ನು ಮಾತನಾಡಿಸ ತಕ್ಕವನು; ಎಷ್ಟು ಮಧುರಸ್ವಭಾವ ಆತನದು! ಸತ್ಯಸಂಧ; ಮಹಾಶೂರ; ಶಾಂತಮೂರ್ತಿ; ಅವನನ್ನು ನೋಡಿದರೆ ಚಂದ್ರನನ್ನು ಕಂಡಂತೆ ಸಕಲರಿಗೂ ಆನಂದವಾಗುವುದು (೨೯-೩೦). ಮಹಾರಥನಾದ ಆ ಪುರುಷೋತ್ತಮನು ಮದ್ದಾನೆ ಯಂತೆ ಹೆಜ್ಜೆಯನ್ನಿಡುತ್ತ ಅರಣ್ಯಕ್ಕೆ ಒಂದು ಶೋಭೆಯನ್ನು ತಂದುಕೊಡುವನು." ಹೀಗೆ ಹಲುಬುತ್ತ ಅಯೋಧ್ಯೆಯಲ್ಲಿದ್ದ ಸ್ತ್ರೀಯರು ದುಃಖದಿಂದ ಗೋಳಾಡಿ ದರು. ಮರಣಭಯ ಬಂದಂತೆ ಶೋಕಾರ್ತರಾದರು (೩೧-೩೨). ಹೀಗೆ ಮನೆಮನೆಗಳಲ್ಲಿ ಶ್ರೀರಾಮನಿಗೋಸ್ಕರ ಸ್ತ್ರೀಯರು ವಿಲಾಪಮಾಡುತ್ತಿರಲು ದಿನಕರನು ಅಸ್ತಂಗತನಾದನು. ರಾತ್ರಿಯಾಯಿತು. ಅಯೋಧ್ಯೆಯಲ್ಲಿ ಯಾರ ಮನೆಯಲ್ಲಿಯೂ ಬೆಂಕಿಯನ್ನು ಹೊತ್ತಿಸಲಿಲ್ಲ. ವೇದಾಧ್ಯಯನ ಪುರಾಣ ಕಥೆಗಳು ನಡೆಯಲಿಲ್ಲ. ನಗರಿಗೆ ಕತ್ತಲೆಯನ್ನು ಬಳಿದಂತಾಯಿತು! (೩೩-೩೪).

ಉಪಶಾಂತವಣಿಕ್ಪಣ್ಯಾ ನಷ್ಟಹರ್ಷಾ ನಿರಾಶ್ರಯಾ ।
ಅಯೋಧ್ಯಾನಗರೀ ಚಾಸೀನ್ನಷ್ಟತಾರಮಿವಾಂಬರಮ್ ॥ ೩೫

ತಥಾ ಸ್ತ್ರಿಯೋ ರಾಮನಿಮಿತ್ತಮಾತುರಾ
ಯಥಾ ಸುತೇ ಭ್ರಾತರಿ ವಾ ವಿವಾಸಿತೇ ।
ವಿಲಪ್ಯ ದೀನಾ ರುರುದುರ್ವಿಚೇತಸಃ
ಸುತೈರ್ಹಿ ತಾಸಾಮಧಿಕೋ ಹಿ ಸೋಽಭವತ್ ॥ ೩೬

ಪ್ರಶಾಂತಗೀತೋತ್ಸವನೃತ್ತವಾದನಾ
ವ್ಯಪಾಸ್ತಹರ್ಷಾ ಪಿಹಿತಾಪಣೋದಯಾ ।
ತದಾ ಹ್ಯಯೋಧ್ಯಾ ನಗರೀ ಬಭೂವ ಸಾ
ಮಹಾರ್ಣವಃ ಸಂಕ್ಷಪಿತೋದಕೋ ಯಥಾ ॥ ೩೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಚತ್ವಾರಿಂಶಃ ಸರ್ಗಃ

ಅಲ್ಲಿ ವರ್ತಕರ ಕ್ರಯವಿಕ್ರಯಗಳು ನಿಂತುಹೋಗಿದ್ದವು. ಎಲ್ಲಿಯೂ ಹರ್ಷವಿರಲಿಲ್ಲ. ಜೀವನಾಧಾರನಾಗಿದ್ದ ಶ್ರೀರಾಮನಿರಲಿಲ್ಲ. ನಕ್ಷತ್ರಗಳಿಲ್ಲದ ಆಕಾಶದಂತೆ ಅಯೋಧ್ಯಾನಗರದಲ್ಲಿ ಕಗ್ಗತ್ತಲೆ ಕವಿಯಿತು (೩೫). ಆ ಪುರಸ್ತ್ರಿಯರು ತಮ್ಮ ಮಕ್ಕಳನ್ನೂ ಅಣ್ಣತಮ್ಮಂದಿರನ್ನೂ ಕಳೆದುಕೊಂಡವರಂತೆ ಶ್ರೀರಾಮನಿಗೋಸ್ಕರ ದುಃಖಾರ್ತರಾಗಿ ದೈನ್ಯದಿಂದ ಅಳುತ್ತಿದ್ದರು. ಅವರು ತಮ್ಮ ಪುತ್ರರಿಗಿಂತಲೂ ಅಧಿಕವಾಗಿ ಶ್ರೀರಾಮನನ್ನು ಪ್ರೀತಿಸುತ್ತಿದ್ದರು (೩೬). ಅಯೋಧ್ಯೆಯಲ್ಲಿ ಎಲ್ಲ ಉತ್ಸವಗಳೂ ನಿಂತುಹೋದವು. ನಡೆಯಬೇಕಾಗಿದ್ದ ನೃತ್ಯಗೀತವಾದ್ಯಗಳು ಎಲ್ಲಿಯೂ ನಡೆಯಲಿಲ್ಲ. ಜನರಲ್ಲಿ ಸ್ವಲ್ಪವೂ ಸಂತೋಷವಿರಲಿಲ್ಲ. ಒಂದು ಅಂಗಡಿಯೂ ತೆರೆದಿರಲಿಲ್ಲ. ಆ ನಗರಿಯು ನೀರೊಣಗಿದ ಸಮುದ್ರದಂತೆ ಕಾಣುತ್ತಿತ್ತು (೩೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತೆಂಟನೆಯ ಸರ್ಗ

## ಏಕೋನಪಂಚಾಶಃ ಸರ್ಗಃ

### ಜಾನಪದಾಕ್ರೋಶಃ

ರಾಮೋಽಪಿ ರಾತ್ರಿಶೇಷೇಣ ತೇನೈವ ಮಹದಂತರಮ್ ।
ಜಗಾಮ ಪುರುಷವ್ಯಾಘ್ರಃ ಪಿತುರಾಜ್ಞಾಮನುಸ್ಮರನ್ ॥ ೧

ತಥೈವ ಗಚ್ಛತಸ್ತಸ್ಯ ವ್ಯಪಾಯಾದ್ರಜನೀ ಶಿವಾ ।
ಉಪಾಸ್ಯ ಸ ಶಿವಾಂ ಸಂಧ್ಯಾಂ ವಿಷಯಾಂತಂ ವ್ಯಗಾಹತ ॥ ೨

ಗ್ರಾಮಾನ್ ವಿಕೃಷ್ಟಸೀಮಾಂತಾನ್ ಪುಷ್ಪಿತಾನಿ ವನಾನಿ ಚ ।
ಪಶ್ಯನ್ನತಿಯಯೌ ಶೀಘ್ರಂ ಶರೈರಿವ ಹಯೋತ್ತಮೈಃ ॥ ೩

ಶೃಣ್ವನ್ ವಾಚೋ ಮನುಷ್ಯಾಣಾಂ ಗ್ರಾಮಸಂವಾಸವಾಸಿನಾಮ್ ।
ರಾಜಾನಂ ಧಿಗ್ದಶರಥಂ ಕಾಮಸ್ಯ ವಶಮಾಸ್ಥಿತಮ್ ॥ ೪

## ಸರ್ಗ ೪೯

**ಶ್ರೀರಾಮನು ತ್ವರೆಯಿಂದ ಪ್ರಯಾಣ ಮಾಡುವುದು. ಗ್ರಾಮವಾಸಿಗಳ ದುಃಖ. ಸುಮಂತ್ರನೊಡನೆ ಸಂಭಾಷಣೆ.**

ಇತ್ತ ಶ್ರೀರಾಮನು ಪಿತೃವಾಕ್ಯಪರಿಪಾಲನೆಯೊಂದನ್ನೇ ಗಮನದಲ್ಲಿಟ್ಟು ಕೊಂಡು ಆ ರಾತ್ರಿಯ ಕೊನೆಯ ಭಾಗದಲ್ಲಿ ಬಹುದೂರ ಪ್ರಯಾಣ ಮಾಡಿದನು. ಹಾಗೆ ಪ್ರಯಾಣ ಮಾಡುತ್ತಿರುವಾಗಲೇ ರಾತ್ರಿ ಕಳೆಯಿತು. ಆಗ ಸಂಧ್ಯೋಪಾಸನೆಯನ್ನು ಮಾಡಿ ಕೋಸಲ ದೇಶದ ಗಡಿಯನ್ನು ದಾಟಿದನು (೧-೨). ಅಲ್ಲಲ್ಲಿ ಬಿತ್ತನೆಗಾಗಿ ಉತ್ತಿರುವ ಗದ್ದೆಗಳಿಂದ ಕೂಡಿದ ಹಳ್ಳಿಗಳನ್ನೂ ಪುಷ್ಪಿತಗಳಾದ ವನಗಳನ್ನೂ ನೋಡುತ್ತ ಶೀಘ್ರವಾಗಿ ಪ್ರಯಾಣ ಮಾಡಿದನು. ರಥಾಶ್ವಗಳು ಬಾಣಗಳನ್ನು ಬಿಟ್ಟಂತೆ ವೇಗದಿಂದ ಓಡುತ್ತಿದ್ದವು (೩). ಹಳ್ಳಿಯ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದ ಜನರು ಆಡಿ ಕೊಳ್ಳುವ ಮಾತುಗಳು ಶ್ರೀರಾಮನಿಗೆ ಕೇಳಿಸುತ್ತಿದ್ದವು. ಅವರು "ದಶರಥರಾಜನಿಗೆ ಧಿಕ್ಕಾರ! ಅವನು ಕಾಮವಶನಾಗಿಬಿಟ್ಟಿದ್ದಾನೆ. ಕೈಕೇಯಿಯು ಎಷ್ಟು ಕ್ರೂರಳು! ಎಂಥ ಪಾಪಿ! ಎಂಥ ಪಾಪಕರ್ಮವನ್ನು ಮಾಡಿದಳು! ಅವಳು

ಹಾ ನೃಶಂಸಾದ್ಯ ಕೈಕೇಯೀ ಪಾಪಾ ಪಾಪಾನುಬಂಧಿನೀ ।
ತೀಕ್ಷ್ಣಾ ಸಂಭಿನ್ನಮರ್ಯಾದಾ ತೀಕ್ಷ್ಣಂ ಕರ್ಮಣಿ ವರ್ತತೇ ॥ ೫

ಯಾ ಪುತ್ರಮೀದೃಶಂ ರಾಜ್ಞಃ ಪ್ರವಾಸಯತಿ ಧಾರ್ಮಿಕಮ್ ।
ವನವಾಸೇ ಮಹಾಪ್ರಾಜ್ಞಂ ಸಾನುಕ್ರೋಶಂ ಜಿತೇಂದ್ರಿಯಮ್ ॥ ೬

ಕಥಂ ನಾಮ ಮಹಾಭಾಗಾ ಸೀತಾ ಜನಕನಂದಿನೀ ।
ಸದಾ ಸುಖೇಷ್ವಭಿರತಾ ದುಃಖಾನ್ಯನುಭವಿಷ್ಯತಿ ॥ ೭

ಅಹೋ ದಶರಥೋ ರಾಜಾ ನಿಃಸ್ನೇಹಃ ಸ್ವಸುತಂ ಪ್ರಿಯಮ್ ।
ಪ್ರಜಾನಾಮನಘಂ ರಾಮಂ ಪರಿತ್ಯಕ್ತುಮಿಹೇಚ್ಛತಿ ॥ ೮

ಏತಾ ವಾಚೋ ಮನುಷ್ಯಾಣಾಂ ಗ್ರಾಮಸಂವಾಸವಾಸಿನಾಮ್ ।
ಶೃಣ್ವನ್ನತಿಯಯೌ ವೀರಃ ಕೋಸಲಾನ್ ಕೋಸಲೇಶ್ವರಃ ॥ ೯

ತತೋ ವೇದಶ್ರುತಿಂ ನಾಮ ಶಿವವಾರಿವಹಾಂ ನದೀಮ್ ।
ಉತ್ತೀರ್ಯಾಭಿಮುಖಃ ಪ್ರಾಯಾದಗಸ್ತ್ಯಾಧ್ಯುಷಿತಾಂ ದಿಶಮ್ ॥ ೧೦

---

ಉಗ್ರ ಸ್ವಭಾವದವಳು. ಎಲ್ಲೆಮೀರಿ ನಡೆಯುತ್ತಿದ್ದಾಳೆ. ಘೋರಕೃತ್ಯವನ್ನು ಮಾಡುತ್ತಿದ್ದಾಳೆ (೪-೫). ಇಂಥ ಧಾರ್ಮಿಕನಾದ ರಾಜಪುತ್ರನನ್ನು ವನವಾಸಕ್ಕೆ ಕಳಿಸುತ್ತಿದ್ದಾಳಲ್ಲ! ಈ ರಾಮನು ಮಹಾಮೇಧಾವಿ; ದಯಾಶಾಲಿ; ಜಿತೇಂದ್ರಿಯ. ಆ ಮಹಾತಾಯಿ ಸೀತಾದೇವಿಯು ಜನಕಮಹಾರಾಜನ ಮಗಳು. ಸರ್ವದಾ ಸುಖದಲ್ಲಿ ಬೆಳೆದವಳು. ಅವಳು ವನವಾಸದ ಕಷ್ಟಗಳನ್ನು ಹೇಗೆ ಅನುಭವಿಸುವಳೊ! (೬-೭). ಛೆ! ದಶರಥರಾಜನಿಗೆ ವಾತ್ಸಲ್ಯವೇ ಇಲ್ಲ. ಪ್ರಜೆಗಳ ಪ್ರೀತಿಗೆ ಪಾತ್ರನಾಗಿ ದೋಷಲೇಶವೂ ಇಲ್ಲದ ಮಗನನ್ನೇ ತೊರೆದುಬಿಡಲು ಇಚ್ಛಿಸಿದ್ದಾನಲ್ಲ!" ಎಂದು ಮಾತನಾಡಿಕೊಳ್ಳುತ್ತಿದ್ದರು. ಆ ನುಡಿಗಳನ್ನು ಕೇಳುತ್ತ ಕೋಸಲೇಶ್ವರನಾದ ಆ ವೀರನು ಕೋಸಲದೇಶವನ್ನು ದಾಟಿಹೋದನು (೮-೯). ಅನಂತರ ಪವಿತ್ರಜಲದಿಂದ ಯುಕ್ತವಾದ ವೇದಶ್ರುತಿಯೆಂಬ ನದಿಯನ್ನು ದಾಟಿ ದಕ್ಷಿಣದಿಕ್ಕಿಗೆ ಪ್ರಯಾಣ ಮಾಡಿದನು. ಆಹೋಲೆ ಬಹಳ ಹೊತ್ತು ಪ್ರಯಾಣ ಮಾಡಲು, ಶೀತಲ

ಗತ್ವಾ ತು ಸುಚಿರಂ ಕಾಲಂ ತತಃ ಶೀತವಹಾಂ ನದೀಮ್ ।
ಗೋಮತೀಂ ಗೋಯುತಾನೂಪಾಮತರತ್ ಸಾಗರಂಗಮಾಮ್ ॥

ಗೋಮತೀಂ ಚಾಪ್ಯತಿಕ್ರಮ್ಯ ರಾಘವಃ ಶೀಘ್ರಗೈರ್ಹಯೈಃ ।
ಮಯೂರಹಂಸಾಭಿರುತಾಂ ತತಾರ ಸ್ಯಂದಿಕಾಂ ನದೀಮ್ ॥ ೧೨

ಸ ಮಹೀಂ ಮನುನಾ ರಾಜ್ಞಾ ದತ್ತಾಮಿಕ್ಷ್ವಾಕವೇ ಪುರಾ ।
ಸ್ಫೀತಾಂ ರಾಷ್ಟ್ರಾವೃತಾಂ ರಾಮೋ ವೈದೇಹೀಮನ್ವದರ್ಶಯತ್ ॥

ಸೂತ ಇತ್ಯೇವ ಚಾಭಾಷ್ಯ ಸಾರಥಿಂ ತಮಭೀಕ್ಷ್ಣಶಃ ।
ಮತ್ತಹಂಸಸ್ವರಃ ಶ್ರೀಮಾನುವಾಚ ಪುರುಷರ್ಷಭಃ ॥ ೧೪

ಕದಾಹಂ ಪುನರಾಗಮ್ಯ ಸರಯ್ವಾಃ ಪುಷ್ಪಿತೇ ವನೇ ।
ಮೃಗಯಾಂ ಪರ್ಯಟಿಷ್ಯಾಮಿ ಮಾತ್ರಾ ಪಿತ್ರಾ ಚ ಸಂಗತಃ ॥ ೧೫

ನಾತ್ಯರ್ಥಮಭಿಕಾಂಕ್ಷಾಮಿ ಮೃಗಯಾಂ ಸರಯೂವನೇ ।
ರತಿರ್ಹ್ಯೇಷಾತುಲಾ ಲೋಕೇ ರಾಜರ್ಷಿಗಣಸಂಮತಾ ॥ ೧೬

---

ಜಲವನ್ನು ಹೊತ್ತು ಹರಿಯುವ ಗೋಮತೀನದಿಯು ಕಾಣಿಸಿತು. ಜಲಪ್ರಾಯವಾದ ತೀರಪ್ರದೇಶದಲ್ಲಿ ಗೋವುಗಳು ಮೇಯುತ್ತಿದ್ದವು. ಸಾಗರ ಗಾಮಿನಿಯಾದ ಆ ನದಿಯನ್ನು ಶ್ರೀರಾಮನು ದಾಟಿಹೋದನು (೧೦-೧೧). ಕುದುರೆಗಳು ವೇಗದಿಂದ ಧಾವಿಸುತ್ತಿದ್ದವು. ಮುಂದೆ ನವಿಲುಗಳ ಕೇಕಾರವಗಳಿಂದಲೂ ಹಂಸಗಳ ಮಂಜುಲ ಧ್ವನಿಯಿಂದಲೂ ಮನೋಹರವಾದ ಸ್ಯಂದಿಕೆಯೆಂಬ ನದಿಯನ್ನು ರಾಘವನು ದಾಟಿದನು (೧೨). ಅನೇಕ ಚಿಕ್ಕ ರಾಷ್ಟ್ರಗಳಿಂದ ಯುಕ್ತವಾಗಿ ವಿಶಾಲವಾಗಿದ್ದ ಆ ಕೋಸಲ ರಾಜ್ಯವನ್ನು ಹಿಂದೆ ಮನುವು ಇಕ್ಷ್ವಾಕುವಿಗೆ ಕೊಟ್ಟಿದ್ದನು. ಶ್ರೀರಾಮನು ಈ ಪೂರ್ವವೃತ್ತಾಂತವನ್ನು ಸೀತೆಗೆ ಹೇಳಿ ಕೋಸಲದೇಶದ ದಕ್ಷಿಣದ ಗಡಿಯನ್ನು ತೋರಿಸಿದನು (೧೩). ಆ ಪುರುಷಶ್ರೇಷ್ಠನು ಮತ್ತಹಂಸದ ಸ್ವರದಂತೆ ಮಧುರವಾದ ಧ್ವನಿಯಿಂದ ಸಾರಥಿಯನ್ನು ಕುರಿತು "ಸೂತ, ಪುನಃ ನಾನು ಯಾವಾಗ ಬಂದು ಸರಯೂತೀರದಲ್ಲಿರುವ ಪುಷ್ಪಿತವಾದ ಅರಣ್ಯದಲ್ಲಿ ಬೇಟೆಯಾಡುತ್ತ ವಿಹರಿಸುವೆನೊ! ಯಾವಾಗ ತಾಯಿತಂದೆಗಳೊಡನೆ ಇರುವೆನೊ! (೧೪-೧೫). ನನಗೆ ಬೇಟೆಯಾಡುವುದರಲ್ಲಿ ಹೆಚ್ಚು ಅಭಿಲಾಷೆಯಿಲ್ಲ. ರಾಜರ್ಷಿಗಳೂ ಸಹ ಬೇಟೆಯನ್ನು ಒಂದು ಉತ್ತಮವಾದ ಕ್ರೀಡೆಯೆಂದು ಭಾವಿಸಿದ್ದಾರೆ.

ರಾಜರ್ಷೀಣಾಂ ಹಿ ಲೋಕೇಽಸ್ಮಿನ್ ರತ್ಯರ್ಥಂ ಮೃಗಯಾ ವನೇ ।
ಕಾಲೇ ವೃತಾಂ ತಾಂ ಮನುಜೈರ್ಧನ್ವಿನಾಮಭಿಕಾಂಕ್ಷಿತಾಮ್ ॥ ೧೭

ಸ ತಮಧ್ವಾನಮೈಕ್ಷ್ವಾಕಃ ಸೂತಂ ಮಧುರಯಾ ಗಿರಾ ।
ತಂ ತಮರ್ಥಮಭಿಪ್ರೇತ್ಯ ಯಯೌ ವಾಕ್ಯಮುದೀರಯನ್ ॥ ೧೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಪಂಚಾಶಃ ಸರ್ಗಃ

---

## ಪಂಚಾಶಃ ಸರ್ಗಃ

### ಗುಹಸಂಗತಮ್

ವಿಶಾಲಾನ್ ಕೋಸಲಾನ್ ರಮ್ಯಾನ್ ಯಾತ್ವಾ ಲಕ್ಷ್ಮಣಪೂರ್ವಜಃ ।
ಅಯೋಧ್ಯಾಭಿಮುಖೋ ಧೀಮಾನ್ ಪ್ರಾಂಜಲಿರ್ವಾಕ್ಯಮಬ್ರವೀತ್ ॥

---

ಧನುರ್ಧಾರಿಗಳು ಇದರಲ್ಲಿ ಹಲವಾರು ಪ್ರಯೋಜನಗಳಿರುವುದರಿಂದ ಬೇಟೆಯನ್ನು ನಡೆಸುತ್ತ ಬಂದಿದ್ದಾರೆ. ಆದ್ದರಿಂದ ನನಗೆ ಇದರಲ್ಲಿ ಸ್ವಲ್ಪ ಅಭಿಲಾಷೆಯುಂಟು" ಎಂದನು (೧೬-೧೭). ಇಕ್ಷ್ವಾಕುವಂಶೋದ್ಭವನಾದ ಶ್ರೀರಾಮನು ಈ ರೀತಿಯಲ್ಲಿ ಸುಮಂತ್ರನೊಡನೆ ಬೇರೆ ಬೇರೆ ವಿಷಯಗಳನ್ನು ಕುರಿತು ಮಧುರಧ್ವನಿಯಿಂದ ಮಾತನಾಡುತ್ತ ಮುಂದೆ ಹೋದನು (೧೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನಲವತ್ತೊಂಬತ್ತನೆಯ ಸರ್ಗ

---

## ಸರ್ಗ ೫೦

**ಶ್ರೀರಾಮನು ಸೀತಾಲಕ್ಷ್ಮಣರೊಡನೆ ಗಂಗಾತೀರವನ್ನು ಸೇರುವುದು. ಗಂಗಾನದಿಯ ವರ್ಣನೆ, ಗುಹಸಮಾಗಮ.**

ಧೀಮಂತನಾದ ಶ್ರೀರಾಮನು ವಿಶಾಲವೂ ರಮಣೀಯವೂ ಆದ ಕೋಸಲದೇಶದ ಅಂತ್ಯಭಾಗಕ್ಕೆ ಹೋದಮೇಲೆ ಅಯೋಧ್ಯೆಯ ಕಡೆಗೆ ತಿರುಗಿ ನಿಂತು ಕೈಮುಗಿದುಕೊಂಡು "ಹೇ ಅಯೋಧ್ಯೆ, ನಗರೋತ್ತಮೆ,

ಆಪೃಚ್ಛೇ ತ್ವಾಂ ಪುರಿಶ್ರೇಷ್ಠೇ ಕಾಕುತ್ಸ್ಥ ಪರಿಪಾಲಿತೇ ।
ದೈವತಾನಿ ಚ ಯಾನಿ ತ್ವಾಂ ಪಾಲಯಂತ್ಯಾವಸಂತಿ ಚ ॥ ೨

ನಿವೃತ್ತವನವಾಸಸ್ತ್ವಾ ಮನೃಣೋ ಜಗತೀಪತೇಃ ।
ಪುನರ್ದ್ರಕ್ಷ್ಯಾಮಿ ಮಾತ್ರಾ ಚ ಪಿತ್ರಾ ಚ ಸಹ ಸಂಗತಃ ॥ ೩

ತತೋ ರುಚಿರತಾಮ್ರಾಕ್ಷೋ ಭುಜಮುದ್ಯಮ್ಯ ದಕ್ಷಿಣಮ್ ।
ಅಶ್ರುಪೂರ್ಣಮುಖೋ ದೀನೋಽಬ್ರವೀಜ್ಜಾನಪದಂ ಜನಮ್ ॥ ೪

ಅನುಕ್ರೋಶೋ ದಯಾ ಚೈವ ಯಥಾರ್ಹಂ ಮಯಿ ವಃ ಕೃತಃ ।
ಚಿರಂ ದುಃಖಸ್ಯ ಪಾಪೀಯೋ ಗಮ್ಯತಾಮರ್ಥಸಿದ್ಧಯೇ ॥ ೫

ತೇಽಭಿವಾದ್ಯ ಮಹಾತ್ಮಾನಂ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ವಿಲಪಂತೋ ನರಾ ಘೋರಂ ವ್ಯತಿಷ್ಠಂತ ಕ್ವಚಿತ್ ಕ್ವಚಿತ್ ॥ ೬

---

ಕಾಕುತ್ಸ್ಥಪರಿಪಾಲಿತೆ, ನನಗೆ ವನವಾಸಕ್ಕಾಗಿ ಅನುಜ್ಞೆಯನ್ನು ದಯಪಾಲಿಸು. ನಿನ್ನಲ್ಲಿ ವಾಸಮಾಡುತ್ತ ನಿನ್ನನ್ನು ಪಾಲಿಸುವ ದೇವತೆಗಳನ್ನು ಪ್ರಾರ್ಥಿಸುತ್ತೇನೆ (೧-೨). ನಾನು ವನವಾಸವನ್ನು ಮುಗಿಸಿ ತಂದೆಯ ಋಣದಿಂದ ಮುಕ್ತನಾಗಿ ನಿಮ್ಮನ್ನು ನೋಡುವಂತಾಗಲಿ. ತಾಯಿತಂದೆಗಳೊಡನೆ ಪುನಃ ಸೇರಿಕೊಳ್ಳುವಂತಾಗಲಿ" ಎಂದನು (೩). ಮನೋಹರವಾದ ರಕ್ತವರ್ಣದ ನೇತ್ರಗಳಿದ್ದ ಶ್ರೀರಾಮನ ಮುಖದ ಮೇಲೆ ಕಣ್ಣೀರು ಹನಿಯುತ್ತಿತ್ತು. ಸುತ್ತಲೂ ಬಂದು ಸೇರಿದ್ದ ಹಳ್ಳಿಗರ ಕಡೆಗೆ ನೋಡುತ್ತ ಬಲಗೈಯನ್ನೆತ್ತಿ ದೈನ್ಯದಿಂದ "ಪ್ರಜೆಗಳೆ, ನನ್ನಲ್ಲಿ ಯಥಾಯೋಗ್ಯವಾಗಿ ಆದರವನ್ನೂ ಕರುಣೆಯನ್ನೂ ತೋರಿಸಿದ್ದೀರಿ. ನೀವು ಈ ದುಃಖವನ್ನು ಹೆಚ್ಚುಹೊತ್ತು ಅನುಭವಿಸುತ್ತಿರುವುದು ಯುಕ್ತವಲ್ಲ. ನಿಮ್ಮ ನಿಮ್ಮ ಕಾರ್ಯಾರ್ಥವಾಗಿ ಹೋಗಿರಿ" ಎಂದು ನುಡಿದನು (೪-೫). ಅವರು ಶ್ರೀರಾಮನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಭಯಂಕರಧ್ವನಿಯಿಂದ ಅಳುತ್ತ ಅಲ್ಲಲ್ಲಿ ಚದರಿಹೋದರು. ಆದರೂ ಮನಸ್ಸಿಗೆ ತೃಪ್ತಿಯಾಗದ ಪ್ರಯುಕ್ತ ಆ ಜನರು ಅಳುತ್ತಲೇ ಅಲ್ಲಲ್ಲಿ ನಿಂತು ನೋಡುತ್ತಿರಲು,

ತಥಾ ವಿಲಪತಾಂ ತೇಷಾಮತೃಪ್ತಾನಾಂ ಚ ರಾಘವಃ ।
ಅಚಕ್ಷುರ್ವಿಷಯಂ ಪ್ರಾಯಾದ್ಯಥಾರ್ಕಃ ಕ್ಷಣದಾಮುಖೇ ॥ ೭

ತತೋ ಧಾನ್ಯಧನೋಪೇತಾನ್ ದಾನಶೀಲಜನಾನ್ ಶುಭಾನ್ ।
ಅಕುತಶ್ಚಿದ್ಭಯಾನ್ ರಮ್ಯಾಂಶ್ಚೈತ್ಯಯೂಪಸಮಾವೃತಾನ್ ॥ ೮

ಉದ್ಯಾನಾಮ್ರವಣೋಪೇತಾನ್ ಸಂಪನ್ನಸಲಿಲಾಶಯಾನ್ ।
ತುಷ್ಟಪುಷ್ಟಜನಾಕೀರ್ಣಾನ್ ಗೋಪಗೋಕುಲಸೇವಿತಾನ್ ॥ ೯

ರಕ್ಷಣೀಯಾನ್ನರೇಂದ್ರಾಣಾಂ ಬ್ರಹ್ಮಘೋಷಾಭಿನಾದಿತಾನ್ ।
ರಥೇನ ಪುರುಷವ್ಯಾಘ್ರಃ ಕೋಸಲಾನತ್ಯವರ್ತತ ॥ ೧೦

ಮಧ್ಯೇನ ಮುದಿತಸ್ಫೀತಂ ರಮ್ಯೋದ್ಯಾನಸಮಾಕುಲಮ್ ।
ರಾಜ್ಯಂ ಭೋಗ್ಯಂ ನರೇಂದ್ರಾಣಾಂ ಯಯೌ ಧೃತಿಮತಾಂ ವರಃ ॥

---

ಶ್ರೀರಾಮನು ಸಾಯಂಕಾಲದ ಸೂರ್ಯನ ಹಾಗೆ ಸ್ವಲ್ಪ ಹೊತ್ತಿನಲ್ಲಿ ಕಣ್ಮರೆಯಾಗಿ ಮುಂದಕ್ಕೆ ಹೊರಟುಹೋದನು (೬-೭). ಆ ಕೋಸಲದೇಶವು ಧನಧಾನ್ಯಗಳಿಂದ ಸಮೃದ್ಧವಾಗಿತ್ತು. ಜನರು ದಾನಶೀಲರಾಗಿದ್ದರು. ಕ್ಷೇಮವು ನೆಲಸಿತ್ತು. ಜನರಿಗೆ ಯಾವ ಭೀತಿಯೂ ಇರಲಿಲ್ಲ. ಮನೋಹರವಾದ ಆ ದೇಶದಲ್ಲಿ ದೇವಾಲಯಗಳೂ ಯೂಪಸ್ತಂಭಗಳೂ ವಿಶೇಷವಾಗಿ ಶೋಭಿಸುತ್ತಿದ್ದವು (೮). ಮಾವಿನ ತೋಟಗಳೂ ಜಲಸಮೃದ್ಧವಾದ ಕೆರೆಗಳೂ ಕಂಗೊಳಿಸುತ್ತಿದ್ದವು. ಪ್ರಜೆಗಳೆಲ್ಲರೂ ಸಂತುಷ್ಟರಾಗಿ ದೃಢಕಾಯರಾಗಿದ್ದರು. ಗೊಲ್ಲರೂ ಗೋವಿನ ಮಂದೆಗಳೂ ನಿಬಿಡವಾಗಿ ಗೋಚರಿಸುತ್ತಿದ್ದವು. ರಾಜರಕ್ಷಿತವಾಗಿದ್ದ ಆ ಪ್ರದೇಶಗಳಲ್ಲಿ ವೇದಘೋಷವು ಕೇಳಿ ಬರುತ್ತಿತ್ತು. ಈ ರೀತಿಯಲ್ಲಿದ್ದ ಕೋಸಲದೇಶದ ಆ ಪ್ರಾಂತಗಳನ್ನು ಶ್ರೀರಾಮನು ರಥದಲ್ಲಿ ಕುಳಿತು ನೋಡುತ್ತ ಕೋಸಲದ ಗಡಿಯನ್ನು ದಾಟಿದನು (೯-೧೦). ಆ ಧೀರನು ಹೃಷ್ಟಪುಷ್ಟವಾಗಿ, ರಮ್ಯವಾದ ಉದ್ಯಾನಗಳಿಂದ ಕೂಡಿದ, ರಾಜಭೋಗ್ಯವಾದ ಕೋಸಲರಾಜ್ಯದ ನಡುವೆ ನಿಶ್ಚಿಂತೆ ಯಿಂದ ಹಾದುಹೋಗಿ ಕೋಸಲರಾಜ್ಯವನ್ನು ದಾಟಿದನು (೧೧). ಅಲ್ಲಿ

ತತ್ರ ತ್ರಿಪಥಗಾಂ ದಿವ್ಯಾಂ ಶಿವತೋಯಾಮಶೈವಲಾಮ್ ।
ದದರ್ಶ ರಾಘವೋ ಗಂಗಾಂ ಪುಣ್ಯಾಮೃಷಿನಿಷೇವಿತಾಮ್ ॥ ೧೨

ಆಶ್ರಮೈರವಿದೂರಸ್ಥೈಃ ಶ್ರೀಮದ್ಭಿಃ ಸಮಲಂಕೃತಾಮ್ ।
ಕಾಲೇಽಪ್ಸರೋಭಿರ್ಹೃಷ್ಟಾಭಿಃ ಸೇವಿತಾಂಭೋಹ್ರದಾಂ ಶಿವಾಮ್ ॥

ದೇವದಾನವಗಂಧರ್ವೈಃ ಕಿಂನರೈರುಪಶೋಭಿತಾಮ್ ।
ನಾಗಗಂಧರ್ವಪತ್ನೀಭಿಃ ಸೇವಿತಾಂ ಸತತಂ ಶಿವಾಮ್ ॥ ೧೪

ದೇವಕ್ರೀಡಶತಾಕೀರ್ಣಾಂ ದೇವೋದ್ಯಾನಶತಾಯುತಾಮ್ ।
ದೇವಾರ್ಥಮಾಕಾಶಗಮಾಂ ವಿಖ್ಯಾತಾಂ ದೇವಪದ್ಮಿನೀಮ್ ॥ ೧೫

ಜಲಾಘಾತಾಟ್ಟಹಾಸೋಗ್ರಾಂ ಫೇನನಿರ್ಮಲಹಾಸಿನೀಮ್ ।
ಕ್ವಚಿದ್ವೇಣೀಕೃತಜಲಾಂ ಕ್ವಚಿದಾವರ್ತಶೋಭಿತಾಮ್ ॥ ೧೬

---

ರಾಘವನಿಗೆ ದಿವ್ಯವಾದ ಗಂಗಾನದಿಯು ಗೋಚರಿಸಿತು. ಪುಣ್ಯನದಿಯಾದ ತ್ರಿಪಥಗೆಯು ಪಾಚಿಯಿಲ್ಲದೆ ಸ್ವಚ್ಛವಾದ ಜಲರಾಶಿಯಿಂದ ತುಂಬಿ ಪ್ರವಹಿಸುತ್ತಿತ್ತು. ಋಷಿಗಳು ಸ್ನಾನಾಹ್ನಿಕಾದಿಗಳನ್ನು ಮಾಡುತ್ತಿದ್ದರು (೧೨). ನದಿಗೆ ಸ್ವಲ್ಪ ದೂರದಲ್ಲಿಯೇ ಸುಂದರವಾದ ಆಶ್ರಮಗಳು ಕಂಗೊಳಿಸುತ್ತಿದ್ದವು. ಆ ಪುಣ್ಯನದಿಯ ಮಡುಗಳಲ್ಲಿ ಅಪ್ಸರೆಯರು ನಲಿಯುತ್ತ ಜಲಕ್ರೀಡೆಯನ್ನಾಡುತ್ತಿದ್ದರು. ದೇವದಾನವರೂ ಗಂಧರ್ವಕಿನ್ನರರೂ ನಾಗರೂ ತಮ್ಮ ಪತ್ನಿಯರೊಂದಿಗೆ ಬಂದು ಸೇವಿಸುತ್ತಿದ್ದರು. ಆ ಗಂಗಾನದಿಯು ಸದಾ ಮಂಗಳಕಾರಿಣಿ (೧೩-೧೪). ನೂರಾರು ದಿವ್ಯಕ್ರೀಡಾಪರ್ವತಗಳಿಂದಲೂ ದಿವ್ಯೋದ್ಯಾನಗಳಿಂದಲೂ ದಿವ್ಯಕಮಲಗಳಿಂದಲೂ ವಿರಾಜಿಸುತ್ತಿದ್ದ ಆ ದಿವ್ಯನದಿಯು ದೇವತೆಗಳಿಗೋಸ್ಕರ ಆಕಾಶಮಾರ್ಗದಲ್ಲಿ ಪ್ರವಹಿಸಿ ಬಂದಿದ್ದಳು (೧೫). ಗಂಗಾದೇವಿಯು ಅಲ್ಲಲ್ಲಿ ಜಲಪಾತಗಳಿಂದ ಘೋರವಾಗಿ ಅಟ್ಟಹಾಸಮಾಡುವಂತೆಯೂ ನೊರೆಗಳಿಂದ ಮಧುರವಾಗಿ ನಗುವಂತೆಯೂ ಹೆಣೆಕೆಯಾಗಿ ಹರಿಯುವ ನೀರಿನಿಂದ ಜಡೆಯನ್ನು ಧರಿಸಿದವಳಂತೆಯೂ ಸುಳಿಯಿಂದ ನಾಭಿಯನ್ನು ತೋರಿಸುವಂತೆಯೂ ಕಾಣುತ್ತಿದ್ದಳು (೧೬).

ಕ್ವಚಿತ್ ಸ್ತಿಮಿತಗಂಭೀರಾಂ ಕ್ವಚಿದ್ವೇಗಜಲಾಕುಲಾಮ್ ।
ಕ್ವಚಿದ್ಗಂಭೀರನಿರ್ಘೋಷಾಂ ಕ್ವಚಿದ್ಭೈರವನಿಸ್ವನಾಮ್ ॥ ೧೭

ದೇವಸಂಘಾಪ್ಲುತಜಲಾಂ ನಿರ್ಮಲೋತ್ಪಲಶೋಭಿತಾಮ್ ।
ಕ್ವಚಿದಾಭೋಗಪುಲಿನಾಂ ಕ್ವಚಿನ್ನಿರ್ಮಲವಾಲುಕಾಮ್ ॥ ೧೮

ಹಂಸಸಾರಸಸಂಘುಷ್ಟಾಂ ಚಕ್ರವಾಕೋಪಕೂಜಿತಾಮ್ ।
ಸದಾ ಮತ್ತೈಶ್ಚ ವಿಹಗೈರಭಿಸಂನಾದಿತಾಂತರಾಮ್ ॥ ೧೯

ಕ್ವಚಿತ್ತೀರರುಹೈರ್ವೃಕ್ಷೈರ್ಮಾಲಾಭಿರಿವ ಶೋಭಿತಾಮ್ ।
ಕ್ವಚಿತ್ಫುಲ್ಲೋತ್ಪಲಚ್ಛನ್ನಾಂ ಕ್ವಚಿತ್ಪದ್ಮವನಾಕುಲಾಮ್ ॥ ೨೦

ಕ್ವಚಿತ್ಕುಮುದಷಂಡೈಶ್ಚ ಕುಡ್ಮಲೈರುಪಶೋಭಿತಾಮ್ ।
ನಾನಾಪುಷ್ಪರಜೋದ್ಧ್ವಸ್ತಾಂ ಸಮದಾಮಿವ ಚ ಕ್ವಚಿತ್ ॥ ೨೧

ವ್ಯಪೇತಮಲಸಂಘಾತಾಂ ಮಣಿನಿರ್ಮಲದರ್ಶನಾಮ್ ।
ದಿಶಾಗಜೈರ್ವನಗಜೈರ್ಮತ್ತೈಶ್ಚ ವರವಾರಣೈಃ ॥ ೨೨

---

ಆ ಗಂಗೆಯು ಕೆಲವು ಕಡೆ **ನಿಶ್ಚಲಗಂಭೀರೆ** ! ಕೆಲವು ಕಡೆ **ಶೀಘ್ರಗಮನೆ**! ಒಂದು ಕಡೆ ಗಂಭೀರನಿನಾದಿನಿ! ಇನ್ನೊಂದು ಕಡೆ **ಭೀಕರಘೋಷಿಣಿ**! (೧೭). ಆ ನದಿಯ ಕೆಲವು ಸ್ಥಳಗಳಲ್ಲಿ ದೇವತೆಗಳು ಸ್ನಾನ ಮಾಡುತ್ತಿದ್ದರು. ನಿರ್ಮಲವಾದ ನೈದಿಲೆಗಳು ಕಂಗೊಳಿಸುತ್ತಿದ್ದವು. ಅಲ್ಲಲ್ಲಿ ವಿಶಾಲವಾದ ಮರಳುದಿಣ್ಣೆಗಳು ಗೋಚರಿಸುತ್ತಿದ್ದವು. ಕೆಲವು ಸ್ಥಳಗಳಲ್ಲಿ ಶುಭ್ರವಾದ ಬಿಳಿಯ ಮರಳು ಕಾಣಿಸುತ್ತಿತ್ತು (೧೮). ಹಂಸ ಸಾರಸಗಳ ಮಧುರ ಘೋಷ, ಚಕ್ರವಾಕಗಳ ಕೂಗು, ಮದಿಸಿದ ನಾನಾ ಜಲಪಕ್ಷಿಗಳ ಕಲಕಲ ಧ್ವನಿಗಳು ಕೇಳಿಸುತ್ತಿದ್ದವು. ತೀರವೃಕ್ಷಗಳು ಮಾಲೆಗಳಂತೆ ಶೋಭಿಸುತ್ತಿದ್ದವು. ಅರಳಿದ ನೈದಿಲೆಗಳು ನದಿಯಲ್ಲಿ ವ್ಯಾಪಿಸಿದ್ದವು. ಕೆಲವು ಕಡೆ ತಾವರೆಯ ವನಗಳು ರಂಜಿಸುತ್ತಿದ್ದವು (೧೯-೨೦). ಕೆಲವು ಕಡೆ ಬಿಳಿಯ ನೈದಿಲೆಯ ಮೊಗ್ಗುಗಳು ರಾಶಿರಾಶಿಯಾಗಿ ಬೆಳೆದಿದ್ದವು. ಗಂಗೆಯು ಕೆಲವು ಕಡೆ ನಾನಾಪುಷ್ಪಧೂಳಿಗಳಿಂದ ರಂಜಿತಳಾಗಿ ಮದಿಸಿದ ಪ್ರಮದೆಯಂತೆ ಪ್ರಸೆಯುತ್ತಿದ್ದಳು. ಕಶ್ಮಲವಿಲ್ಲದುದರಿಂದ ಮುತ್ತಿನಮಣಿಯಂತೆ ನಿರ್ಮಲ ದರ್ಶನೆಯಾಗಿದ್ದಳು (೨೧). ನದೀತಟದಲ್ಲಿರುವ ಅರಣ್ಯಗಳಲ್ಲಿ ದಿಗ್ಗಜಗಳೂ

ದೇವರಾಜೋಪವಾಹ್ಯೈಶ್ಚ ಸಂನಾದಿತವನಾಂತರಾಮ್।
ಪ್ರಮದಾಮಿವ ಯತ್ನೇನ ಭೂಶಿತಾಂ ಭೂಷಣೋತ್ತಮೈಃ॥ ೨೩
ಫಲೈಃ ಪುಷ್ಪೈಃ ಕಿಸಲಯೈರ್ವೃತಾಂ ಗುಲ್ಮೈರ್ದ್ವಿಜೈಸ್ತಥಾ।
ಶಿಂಶುಮಾರೈಶ್ಚ ನಕ್ರೈಶ್ಚ ಭುಜಂಗೈಶ್ಚ ನಿಷೇವಿತಾಮ್॥ ೨೪
ವಿಷ್ಣುಪಾದಚ್ಯುತಾಂ ದಿವ್ಯಾಮಪಾಪಾಂ ಪಾಪನಾಶನೀಮ್।
ತಾಂ ಶಂಕರಜಟಾಜೂಟಾದ್ಭ್ರಷ್ಟಾಂ ಸಾಗರತೇಜಸಾ॥ ೨೫
ಸಮುದ್ರಮಹಿಷೀಂ ಗಂಗಾಂ ಸಾರಸಕ್ರೌಂಚನಾದಿತಾಮ್।
ಆಸಸಾದ ಮಹಾಬಾಹುಃ ಶೃಂಗಿಬೇರಪುರಂ ಪ್ರತಿ॥ ೨೬
ತಾಮೂರ್ಮಿಕಲಿಲಾವರ್ತಾಮನ್ವವೇಕ್ಷ್ಯ ಮಹಾರಥಃ।
ಸುಮಂತ್ರಮಬ್ರವೀತ್ ಸೂತಮಿಹೈವಾದ್ಯ ವಸಾಮಹೇ॥ ೨೭
ಅವಿದೂರಾದಯಂ ನಾದ್ಯ ಬಹುಪುಷ್ಪಪ್ರವಾಲವಾನ್।
ಸುಮಹಾನಿಂಗುದೀವೃಕ್ಷೋ ವಸಾಮೋಽತ್ರೈವ ಸಾರಥೇ॥ ೨೮

---

ಕಾಡಾನೆಗಳೂ ಐರಾವತಾದಿ ವರಗಜಗಳೂ ಅಲೆಯುತ್ತ ಘೀಂಕರಿಸುತ್ತಿದ್ದವು. ವಿವಿಧವರ್ಣದ ಫಲಪುಷ್ಪಗಳು, ಚಿಗುರೆಲೆಗಳು, ಪೊದೆಗಳು ಮತ್ತು ಹಕ್ಕಿಗಳಿಂದ ಭೂಷಿತವಾದ ಆ ನದಿಯು ಬಗೆಬಗೆಯ ಒಡವೆಗಳಿಂದ ಅಲಂಕೃತಳಾದ ತರುಣಿಯಂತೆ ಕಂಗೊಳಿಸುತ್ತಿತ್ತು. ಆ ನದಿಯಲ್ಲಿ ನೀರುಕೋತಿಗಳೂ ಮೊಸಳೆಗಳೂ ನೀರುಹಾವುಗಳೂ ಓಡಾಡುತ್ತಿದ್ದವು(೨೨-೨೪). ಆ ಗಂಗೆಯು ವಿಷ್ಣುಪಾದದಿಂದ ನಿರ್ಗಮಿಸಿದ ದಿವ್ಯನದಿ. ಲೋಕಪಾವನೆ, ಪಾಪಹಾರಿಣಿ, ಭಗೀರಥನ ತಪಸ್ಸಿಗೆ ಮೆಚ್ಚಿ ಪರಮೇಶ್ವರನ ಜಟಾಜೂಟದಿಂದ ಇಳಿದು ಬಂದವಳು. ಸಮುದ್ರರಾಜನ ರಾಣಿಯೆನಿಸಿದವಳು. ಶೃಂಗಿಬೇರಪುರದ ಬಳಿಯಲ್ಲಿ ಪ್ರವಹಿಸುತ್ತ ಸಾರಸ ಕ್ರೌಂಚಪಕ್ಷಿಗಳ ನಾದದಿಂದ ಮುಖರಿತವಾಗಿದ್ದ ಆ ಗಂಗಾನದಿಯ ಸಮೀಪಕ್ಕೆ ಮಹಾಬಾಹುವಾದ ಶ್ರೀರಾಮನು ಬಂದನು(೨೫-೨೬). ಅಲೆಗಳಿಂದಲೂ ಸುಳಿಗಳಿಂದಲೂ ಶೋಭಿಸುತ್ತಿದ್ದ ಆ ನದಿಯನ್ನು ನೋಡಿ ಶ್ರೀರಾಮನು ಸಾರಥಿಯನ್ನು ಕುರಿತು, "ಸುಮಂತ್ರ, ಈ ದಿನ ಇಲ್ಲಿಯೇ ಇಳಿದುಕೊಳ್ಳೋಣ. ಸಮೀಪದಲ್ಲಿ ಬಹಳ ಹೂಗಳಿಂದಲೂ ಚಿಗುರೆಲೆಗಳಿಂದಲೂ ಕೂಡಿದ ದೊಡ್ಡ ಇಂಗುದೀವೃಕ್ಷವು ಕಾಣಿಸುತ್ತಿದೆ. ಈ ದಿನ ಇಲ್ಲಿಯೇ ಇರೋಣ (೨೭-೨೮). ಇದು ಅತ್ಯಂತಶ್ರೇಷ್ಠವಾದ

ದ್ರಕ್ಷ್ಯಾಮಃ ಸರಿತಾಂ ಶ್ರೇಷ್ಠಾಂ ಸಂಮಾನ್ಯಸಲಿಲಾಂ ಶಿವಾಮ್।
ದೇವದಾನವಗಂಧರ್ವಮೃಗಪನ್ನಗಪಕ್ಷಿಣಾಮ್॥ ೨೯

ಲಕ್ಷ್ಮಣಶ್ಚ ಸುಮಂತ್ರಶ್ಚ ಬಾಢಮಿತ್ಯೇವ ರಾಘವಮ್।
ಉಕ್ತ್ವಾ ತಮಿಂಗುದೀವೃಕ್ಷಂ ತದೋಪಯಯತುರ್ಹಯೈಃ॥ ೩೦

ರಾಮೋಽಭಿಯಾಯ ತಂ ರಮ್ಯಂ ವೃಕ್ಷಮಿಕ್ಷ್ವಾಕುನಂದನಃ।
ರಥಾದವಾತರತ್ತಸ್ಮಾತ್ ಸಭಾರ್ಯಃ ಸಹಲಕ್ಷ್ಮಣಃ॥ ೩೧

ಸುಮಂತ್ರೋಽಪ್ಯವತೀರ್ಯಾಥ ಮೋಚಯಿತ್ವಾ ಹಯೋತ್ತಮಾನ್
ವೃಕ್ಷಮೂಲಗತಂ ರಾಮಮುಪತಸ್ಥೇ ಕೃತಾಂಜಲಿಃ॥ ೩೨

ತತ್ರ ರಾಜಾ ಗುಹೋ ನಾಮ ರಾಮಸ್ಯಾತ್ಮಸಮಃ ಸಖಾ।
ನಿಷಾದಜಾತ್ಯೋ ಬಲವಾನ್ ಸ್ಥಪತಿಶ್ಚೇತಿ ವಿಶ್ರುತಃ॥ ೩೩

ಸ ಶ್ರುತ್ವಾ ಪುರುಷವ್ಯಾಘ್ರಂ ರಾಮಂ ವಿಷಯಮಾಗತಮ್।
ವೃದ್ಧೈಃ ಪರಿವೃತೋಽಮಾತ್ಯೈರ್ಜ್ಞಾತಿಭಿಶ್ಚಾಪ್ಯುಪಾಗತಃ॥ ೩೪

---

ಪುಣ್ಯನದಿ. ದೇವದಾನವಗಂಧರ್ವರಿಗೂ ಪನ್ನಗರಿಗೂ ಮೃಗಪಕ್ಷಿಗಳಿಗೂ ಇದರ ಜಲವು ಪೂಜ್ಯವಾದುದು. ಈ ನದಿಯನ್ನು ಚೆನ್ನಾಗಿ ನೋಡೋಣ" ಎಂದು ಹೇಳಿದನು. ಲಕ್ಷ್ಮಣನೂ ಸುಮಂತ್ರನೂ ಹಾಗೆಯೇ ಆಗಲೆಂದು ಹೇಳಿ ರಥಾಶ್ವಗಳನ್ನು ಇಂಗುದೀವೃಕ್ಷದ ಸಮೀಪಕ್ಕೆ ಬಿಟ್ಟುಕೊಂಡು ಹೋದರು (೨೯-೩೦). ಶ್ರೀರಾಮನು ಆ ಮರದ ಬಳಿಗೆ ಹೋದಮೇಲೆ ತನ್ನ ಪತ್ನಿ ಮತ್ತು ಲಕ್ಷ್ಮಣರೊಡನೆ ರಥದಿಂದ ಇಳಿದನು. ಸುಮಂತ್ರನೂ ರಥದಿಂದಿಳಿದು ಅಶ್ವಗಳನ್ನು ಬಿಚ್ಚಿ, ಆ ಮರದ ಕಳಗೆ ವಿಶ್ರಮಿಸಿಕೊಳ್ಳುತ್ತಿದ್ದ ಶ್ರೀರಾಮನ ಬಳಿಗೆ ಹೋಗಿ ವಿನಯದಿಂದ ಅವನನ್ನು ಉಪಚರಿಸುತ್ತಿದ್ದನು (೩೧-೩೨). ಶೃಂಗಿಬೇರಪುರದಲ್ಲಿ ಬೇಡರ ಜಾತಿಯವನೂ ಬೇಡರಿಗೆ ಅಧಿಪತಿಯೂ ಆದ ಗುಹನೆಂಬ ಒಬ್ಬ ರಾಜನಿದ್ದನು. ಅವನು ಬಲಶಾಲಿಯೂ ಶ್ರೀರಾಮನಿಗೆ ಪ್ರಾಣಮಿತ್ರನೂ ಆಗಿದ್ದನು. ಶ್ರೀರಾಮನು ಅಲ್ಲಿಗೆ ಬಂದಿರುವುದು ಆತನಿಗೆ ತಿಳಿಯಿತು. ಕೂಡಲೆ ಆತನು ತನ್ನ ವೃದ್ಧಮಂತ್ರಿಗಳನ್ನೂ ಬಂಧುಗಳನ್ನೂ ಕರೆದುಕೊಂಡು ಶ್ರೀರಾಮನಿದ್ದ ಸ್ಥಳಕ್ಕೆ ಬಂದನು(೩೩-೩೪)

ತತೋ ನಿಷಾದಾಧಿಪತಿಂ ದೃಷ್ಟ್ವಾ ದೂರಾದುಪಸ್ಥಿತಮ್।
ಸಹ ಸೌಮಿತ್ರಿಣಾ ರಾಮಃ ಸಮಾಗಚ್ಛದ್ಗುಹೇನ ಸಃ॥ ೩೫

ತಮಾರ್ತಃ ಸಂಪರಿಷ್ವಜ್ಯ ಗುಹೋ ರಾಘವಮಬ್ರವೀತ್॥
ಯಥಾಯೋಧ್ಯಾ ತಥೇಯಂ ತೇ ರಾಮ ಕಿಂ ಕರವಾಣಿ ತೇ॥ ೩೬

ಈದೃಶಂ ಹಿ ಮಹಾಬಾಹೋ ಕಃ ಪ್ರಾಪ್ಸ್ಯತ್ಯತಿಥಿಂ ಪ್ರಿಯಮ್।
ತತೋ ಗುಣವದನ್ನಾದ್ಯಮುಪಾದಾಯ ಪೃಥಗ್ವಿಧಮ್। ೩೭

ಅರ್ಘ್ಯಂ ಚೋಪಾನಯತ್ ಕ್ಷಿಪ್ರಂ ವಾಕ್ಯಂ ಚೇದಮುವಾಚ ಹ।
ಸ್ವಾಗತಂ ತೇ ಮಹಾಬಾಹೋ ತವೇಯಮಖಿಲಾ ಮಹೀ॥ ೩೮

ವಯಂ ಪ್ರೇಷ್ಯಾ ಭವಾನ್ ಭರ್ತಾ ಸಾಧು ರಾಜ್ಯಂ ಪ್ರಶಾಧಿ ನಃ।
ಭಕ್ಷ್ಯಂ ಭೋಜ್ಯಂ ಚ ಪೇಯಂ ಚ ಲೇಹ್ಯಂ ಚೇದಮುಪಸ್ಥಿತಮ್॥ ೩೯

ಶಯನಾನಿ ಚ ಮುಖ್ಯಾನಿ ವಾಜಿನಾಂ ಖಾದನಂ ಚ ತೇ।
ಗುಹಮೇವಂ ಬ್ರುವಾಣಂ ತಂ ರಾಘವಃ ಪ್ರತ್ಯಭಾಷತ॥ ೪೦

---

ಗುಹನು ಬರುತ್ತಿರುವುದನ್ನು ದೂರದಿಂದಲೇ ನೋಡಿ ಶ್ರೀರಾಮನು ಲಕ್ಷ್ಮಣನೊಡನೆ ಹೋಗಿ ಅವನನ್ನು ಎದುರುಗೊಂಡನು. ಗುಹನು ರಾಘವನ ವೃತ್ತಾಂತವನ್ನರಿತು ದುಃಖಿತನಾಗಿ ಅವನನ್ನು ಆಲಿಂಗಿಸಿಕೊಂಡು "ರಾಮ, ಈ ಶೃಂಗಿಬೇರಪುರವು ಅಯೋಧ್ಯೆಯಂತೆ ನಿನ್ನದೆಂದೇ ತಿಳಿ. ನಿನಗೋಸ್ಕರ ಏನು ಮಾಡಲಿ?" ಹೇಳು (೩೫-೩೬). ನಿನ್ನಂಥ ಪ್ರಿಯನಾದ ಅತಿಥಿಯು ಇನ್ನು ಯಾರಿಗೆ ದೊರೆತಾನು?" ಎಂದು ಹೇಳಿದನು. ಆಮೇಲೆ ಉತ್ತಮವಾದ ನಾನಾಬಗೆಯ ಖಾದ್ಯವಸ್ತುಗಳನ್ನು ಬೇಗನೆ ತರಿಸಿ ಅರ್ಘ್ಯವನ್ನು ಮುಂದಿಟ್ಟು ಗುಹನು ಹೀಗೆಂದನು:"ಶ್ರೀರಾಮ, ನಿನಗೆ ಸ್ವಾಗತ. ಈ ರಾಜ್ಯವೆಲ್ಲವೂ ನಿನ್ನದೇ (೩೭-೩೮). ನಾವು ನಿನ್ನ ಸೇವಕರು. ನೀನು ನಮಗೆ ಪ್ರಭು. ಈ ನಮ್ಮ ರಾಜ್ಯವನ್ನು ಯಾವ ಸಂಕೋಚವೂ ಇಲ್ಲದೆ ನೀನು ಪಾಲಿಸುತ್ತಿರು. ನಿನ್ನ ಭೋಜನಕ್ಕೆ ಬೇಕಾದ ಭಕ್ಷ್ಯಭೋಜ್ಯಾದಿಗಳು ಸಿದ್ಧವಾಗಿವೆ (ಇವುಗಳನ್ನು ಸ್ವೀಕರಿಸು). ಉತ್ತಮ ವಾದ ಹಾಸಿಗೆಯನ್ನು ತರಿಸಿದ್ದೇನೆ. ನಿನ್ನ ಕುದುರೆಗಳಿಗಾಗಿ ಹುಲ್ಲು ಮುಂತಾದ ಆಹಾರ ಪದಾರ್ಥಗಳು ಬಂದಿವೆ" ಎಂದನು (೩೯-೪೦). ಆಗ ಶ್ರೀರಾಮನು

ಅರ್ಚಿತಾಶ್ಚೈವ ಹೃಷ್ಟಾಶ್ಚ ಭವತಾ ಸರ್ವಥಾ ವಯಮ್ ।
ಪದ್ಭ್ಯಾಮಭಿಗಮಾಚ್ಚೈವ ಸ್ನೇಹಸಂದರ್ಶನೇನ ಚ ॥ ೪೧

ಭುಜಾಭ್ಯಾಂ ಸಾಧುವೃತ್ತಾಭ್ಯಾಂ ಪೀಡಯನ್ ವಾಕ್ಯಮಬ್ರವೀತ್ ।
ದಿಷ್ಟ್ಯಾ ತ್ವಾಂ ಗುಹ ಪಶ್ಯಾಮಿ ನೀರೋಗಂ ಸಹ ಬಾಂಧವೈಃ ॥ ೪೨

ಅಪಿ ತೇ ಕುಶಲಂ ರಾಷ್ಟ್ರೇ ಮಿತ್ರೇಷು ಚ ಧನೇಷು ಚ ।
ಯದೇತದ್ಭವತಾ ಕಿಂಚಿತ್ ಪ್ರೀತ್ಯಾ ಸಮುಪಕಲ್ಪಿತಮ್ ॥ ೪೩

ಸರ್ವಂ ತದನುಜಾನಾಮಿ ನ ಹಿ ವರ್ತೇ ಪ್ರತಿಗ್ರಹೇ ।
ಕುಶಚೀರಾಜಿನಧರಂ ಫಲಮೂಲಾಶಿನಂ ಚ ಮಾಮ್ ॥ ೪೪

ವಿದ್ಧಿ ಪ್ರಣಿಹಿತಂ ಧರ್ಮೇ ತಾಪಸಂ ವನಗೋಚರಮ್ ।
ಅಶ್ವಾನಾಂ ಖಾದನೇನಾಹಮರ್ಥೀ ನಾನ್ಯೇನ ಕೇನಚಿತ್ ॥ ೪೫

ಏತಾವತಾತ್ರಭವತಾ ಭವಿಷ್ಯಾಮಿ ಸುಪೂಜಿತಃ ।
ಏತೇ ಹಿ ದಯಿತಾ ರಾಜ್ಞಃ ಪಿತುರ್ದಶರಥಸ್ಯ ಮೇ ॥ ೪೬

---

ಗುಹನನ್ನು ಕುರಿತು "ಮಿತ್ರ, ನೀನು ನಮ್ಮನ್ನು ಸತ್ಕರಿಸಿದೆ. ನಾವು ಸಂತುಷ್ಟರಾದೆವು. ಕಾಲ್ನಡಿಗೆಯಿಂದ ಬಂದು ನಮ್ಮನ್ನು ಎದುರುಗೊಂಡು ಇಷ್ಟು ಸ್ನೇಹವನ್ನು ತೋರಿಸಿದ್ದೀಯೆ. ನಮಗೆ ತೃಪ್ತಿಯಾಯಿತು" ಎಂದು ಹೇಳಿ ಗುಹನನ್ನು ತನ್ನ ಸುಂದರವಾದ ದೀರ್ಘಬಾಹುಗಳಿಂದ ಅಪ್ಪಿಕೊಂಡನು. ಪುನಃ ಗುಹನನ್ನು ನೋಡಿ "ಗುಹ, ನಿನ್ನ ಬಂಧುಗಳೊಡನೆ ಆರೋಗ್ಯವಂತನಾಗಿರುವ ನಿನ್ನನ್ನು ನೋಡಿ ಸಂತೋಷಿಸುವುದು ನನ್ನ ಭಾಗ್ಯ! (೪೧-೪೨). ನಿನ್ನ ರಾಷ್ಟ್ರವು ಸುಭಿಕ್ಷವಾಗಿರುವುದೆ? ನಿನ್ನ ಮಿತ್ರರಿಗೆ ಕುಶಲವೆ? ನಿನ್ನ ಭಂಡಾರವು ವೃದ್ಧಿ ಹೊಂದುತ್ತಿರುವುದಷ್ಟೆ ? ನೀನು ಪ್ರೀತಿಯಿಂದ ತಂದಿರುವ ವಸ್ತುಗಳನ್ನು ನಾನು ಸ್ವೀಕರಿಸಿದಂತೆ ಭಾವಿಸು. ಇವನ್ನು ನಾನು ಉಪಯೋಗಿಸಕೂಡದು. ಈಗ ನಾನು ವಲ್ಕಲವನ್ನೂ ಕೃಷ್ಣಾಜಿನವನ್ನೂ ಧರಿಸಿ ಫಲಮೂಲಗಳನ್ನು ತಿನ್ನುತ್ತಿರಬೇಕು (೪೩-೪೪). ಪಿತೃವಾಕ್ಯ ಪರಿಪಾಲನವೆಂಬ ಧರ್ಮದಲ್ಲಿ ನಿರತನಾಗಿ ಕಾಡಿನಲ್ಲಿ ಸಂಚರಿಸತಕ್ಕ ತಾಪಸನೆಂದು ನನ್ನನ್ನು ಭಾವಿಸು. ಈ ಕುದುರೆಗಳಿಗೆ ಆಹಾರವನ್ನು ಮಾತ್ರ ನಾನು ಬಯಸುತ್ತೇನೆ. ಅದನ್ನು ತರಿಸಿಕೊಟ್ಟರೆ ಸಾಕು. ಇನ್ನೇನೂ ನನಗೆ ಬೇಕಾಗಿಲ್ಲ (೪೫). ಇಷ್ಟು ಮಾತ್ರ ನೀನು ಮಾಡಿಕೊಟ್ಟರೆ ನನಗೆ ಎಲ್ಲ

ಏತೈಃ ಸುವಿಹಿತೈರಶ್ವೈರ್ಭವಿಷ್ಯಾಮ್ಯಹಮರ್ಚಿತಃ ।
ಅಶ್ವಾನಾಂ ಪ್ರತಿಪಾನಂ ಚ ಖಾದನಂ ಚೈವ ಸೋಽನ್ವಶಾತ್ ॥ ೪೭
ಗುಹಸ್ತತ್ರೈವ ಪುರುಷಾಂಸ್ತ್ವರಿತಂ ದೀಯತಾಮಿತಿ ।
ತತಶ್ಚೀರೋತ್ತರಾಸಂಗಃ ಸಂಧ್ಯಾಮನ್ವಾಸ್ಯ ಪಶ್ಚಿಮಾಮ್ ॥ ೪೮
ಜಲಮೇವಾದದೇ ಭೋಜ್ಯಂ ಲಕ್ಷ್ಮಣೇನಾಹೃತಂ ಸ್ವಯಮ್ ।
ತಸ್ಯ ಭೂಮೌ ಶಯಾನಸ್ಯ ಪಾದೌ ಪ್ರಕ್ಷಾಲ್ಯ ಲಕ್ಷ್ಮಣಃ ॥ ೪೯
ಸಭಾರ್ಯಸ್ಯ ತತೋಽಭ್ಯೇತ್ಯ ತಸ್ಥೌ ವೃಕ್ಷಮುಪಾಶ್ರಿತಃ ।
ಗುಹೋಽಪಿ ಸಹ ಸೂತೇನ ಸೌಮಿತ್ರಿಮನುಭಾಷಯನ್ ॥ ೫೦
ಅನ್ವಜಾಗ್ರತ್ತತೋ ರಾಮಮಪ್ರಮತ್ತೋ ಧನುರ್ಧರಃ ॥
ತಥಾ ಶಯಾನಸ್ಯ ತತೋಽಸ್ಯ ಧೀಮತೋ
ಯಶಸ್ವಿನೋ ದಾಶರಥೇರ್ಮಹಾತ್ಮನಃ ।
ಅದೃಷ್ಟದುಃಖಸ್ಯ ಸುಖೋಚಿತಸ್ಯ ಸಾ
ತಗಾ ವ್ಯತೀಯಾಯ ಚಿರೇಣ ಶರ್ವರೀ ॥ ೫೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಕಾಂಡೇ ಪಂಚಾಶಃ ಸರ್ಗಃ

---

ಸತ್ಕಾರವನ್ನೂ ಮಾಡಿದಂತಾಗುವುದು. ನನ್ನ ತಂದೆಯಾದ ದಶರಥಮಹಾರಾಜನಿಗೆ ಈ ಕುದುರೆಗಳಲ್ಲಿ ಬಹಳ ಪ್ರೀತಿ.ಇವುಗಳನ್ನು ಚೆನ್ನಾಗಿ ಉಪಚರಿಸಿದರೆ ನನಗೆ ಸತ್ಕಾರಮಾಡಿದಂತೆಯೇ" ಎಂದು ನುಡಿದನು (೪೬-೪೭). ಒಡನೆಯೇ ಗುಹನು ಕುದುರೆಗಳಿಗೆ ಪಾನೀಯವನ್ನೂ ಆಹಾರವನ್ನೂ ಕೊಡುವಂತೆ ತನ್ನ ಸೇವಕರಿಗೆ ಆಜ್ಞಾಪಿಸಿದನು. ಅನಂತರ ಶ್ರೀರಾಮನು ನಾರುಬಟ್ಟೆಯನ್ನು ಹೊದೆದು ಸಾಯಂಕಾಲದ ಸಂಧ್ಯಾವಂದನೆಯನ್ನು ಮುಗಿಸಿದನು (೪೮). ಆಮೇಲೆ ಲಕ್ಷ್ಮಣನು ತಂದಿಟ್ಟ ನೀರನ್ನು ಮಾತ್ರವೇ ಕುಡಿದು ತೃಪ್ತನಾಗಿ ಕೈಕಾಲುಗಳನ್ನು ತೊಳೆದು ನೆಲದಮೇಲೆ ಮಲಗಿಬಿಟ್ಟನು. ಸೀತೆಯೂ ಮಲಗಿದಳು. ಲಕ್ಷ್ಮಣನು ಗುಹನಿದ್ದಲ್ಲಿಗೆ ಬಂದು ಮರದ ಕೆಳಗೆ ಕುಳಿತನು. ಸುಮಂತ್ರನ ಜೊತೆಗಿದ್ದ ಗುಹನು ಲಕ್ಷ್ಮಣನೊಡನೆ ಮಾತನಾಡುತ್ತ ಧನುರ್ಧಾರಿಯಾಗಿ ಎಚ್ಚರಿಕೆಯಿಂದ ಶ್ರೀರಾಮನಿಗೆ ಕಾವಲಾಗಿದ್ದನು (೪೯-೫೦). ಧೀಮಂತನೂ ಕೀರ್ತಿವಂತನೂ ಮಹಾತ್ಮನೂ ಆದ ಆ ದಶರಥಪುತ್ರನು ನೆಲದ ಮೇಲೆ ಮಲಗಿದ್ದನು. ಸುಖವಾಗಿ ಬೆಳೆದಿದ್ದ ಆತನು ದುಃಖವನ್ನು ಕಂಡವನಲ್ಲ. ಆ ರಾತ್ರಿಯು ದೀರ್ಘವಾದಂತೆ ಲಕ್ಷ್ಮಣನಿಗೆ ತೋರಿತು(೫೧)

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತನೆಯ ಸರ್ಗ

## ಏಕಪಂಚಾಶಃ ಸರ್ಗಃ

### ಗುಹಲಕ್ಷ್ಮಣಜಾಗರಣಮ್

ತಂ ಜಾಗ್ರತಮದಂಭೇನ ಭ್ರಾತುರರ್ಥಾಯ ಲಕ್ಷ್ಮಣಮ್।
ಗುಹಃ ಸಂತಾಪಸಂತಪ್ತೋ ರಾಘವಂ ವಾಕ್ಯಮಬ್ರವೀತ್॥ ೧

ಇಯಂ ತಾತ ಸುಖಾ ಶಯ್ಯಾ ತ್ವದರ್ಥಮುಪಕಲ್ಪಿತಾ।
ಪ್ರತ್ಯಾಶ್ವಸಿಹಿ ಸಾಧ್ವಸ್ಯಾಂ ರಾಜಪುತ್ರ ಯಥಾಸುಖಮ್॥ ೨

ಉಚಿತೋಽಯಂ ಜನಃ ಸರ್ವಃ ಕ್ಲೇಶಾನಾಂ ತ್ವಂ ಸುಖೋಚಿತಃ।
ಗುಪ್ತ್ಯರ್ಥಂ ಜಾಗರಿಷ್ಯಾಮಃ ಕಾಕುತ್ಸ್ಥಸ್ಯ ವಯಂ ನಿಶಾಮ್॥ ೩

ನ ಹಿ ರಾಮಾತ್ಪ್ರಿಯತರೋ ಮಮಾಸ್ತಿ ಭುವಿ ಕಶ್ಚನ।
ಬ್ರವೀಮ್ಯೇತದಹಂ ಸತ್ಯಂ ಸತ್ಯೇನೈವ ಚ ತೇ ಶಪೇ॥ ೪

ಅಸ್ಯ ಪ್ರಸಾದಾದಾಶಂಸೇ ಲೋಕೇಽಸ್ಮಿನ್ ಸುಮಹದ್ಯಶಃ।
ಧರ್ಮಾವಾಪ್ತಿಂ ಚ ವಿಪುಲಾಮರ್ಥಕಾಮೌ ಚ ಪುಷ್ಕಲೌ॥ ೫

## ಸರ್ಗ ೫೧

### ಗುಹಲಕ್ಷ್ಮಣರು ನಿದ್ರೆಮಾಡದೆ ಸಂಭಾಷಿಸುವುದು.

ಅಣ್ಣನನ್ನು ರಕ್ಷಿಸುತ್ತಿರಬೇಕೆಂಬ ಸಹಜವಾದ ಪ್ರೀತಿಯಿಂದ ಲಕ್ಷ್ಮಣನು ಮಲಗದೆ ಎಚ್ಚರವಾಗಿದ್ದನು. ಗುಹನು ಮರುಕದಿಂದ ಅವನನ್ನು ನೋಡಿ "ಅಪ್ಪಾ ಲಕ್ಷ್ಮಣ, ಅಲ್ಲಿ ನಿನಗಾಗಿ ಉತ್ತಮವಾದ ಹಾಸಿಗೆಯನ್ನು ಏರ್ಪಡಿಸಲಾಗಿದೆ. ಇದರಲ್ಲಿ ಸುಖವಾಗಿ ವಿಶ್ರಮಿಸಿಕೊ(೧-೨).ರಾಜಪುತ್ರ, ಅರಣ್ಯವಾಸಿಗಳಾದ ನಾವು ಕಷ್ಟವನ್ನು ಸಹಿಸಿಕೊಳ್ಳಬಲ್ಲೆವು. ನೀನು ಸುಖನಾಗಿ ಬೆಳೆದವನು. ಶ್ರೀರಾಮನ ರಕ್ಷಣೆಗಾಗಿ ನಾವು ರಾತ್ರಿಯೆಲ್ಲವೂ ಜಾಗರೂಕರಾಗಿರುತ್ತೇವೆ. ಈ ಜಗತ್ತಿನಲ್ಲಿ ರಾಮನಿಗಿಂತ ನನಗೆ ಪ್ರಿಯನಾದವನು ಇನ್ನೊಬ್ಬನಿಲ್ಲ. ಸತ್ಯದ ಆಣೆಮಾಡಿ ಹೇಳುತ್ತೇನೆ; ನಾನು ಹೇಳುವುದು ಸತ್ಯ (೩-೪). ಈ ಲೋಕದಲ್ಲಿ ಮಹಾಕೀರ್ತಿಯೂ ಧರ್ಮವೂ ಅರ್ಥಕಾಮಗಳೂ ಈತನ ಅನುಗ್ರಹದಿಂದಲೇ ನನಗೆ ದೊರೆಯುತ್ತವೆಯೆಂದು ಆಶಿಸಿದ್ದೇನೆ. ಆದ್ದರಿಂದ ನಾನು ನನ್ನ ಬಂಧುಗಳೊಡನೆ ಧನುಷ್ಪಾಣಿ

ಸೋಽಹಂ ಪ್ರಿಯಸಖಂ ರಾಮಂ ಶಯಾನಂ ಸಹ ಸೀತಾಯಾ।
ರಕ್ಷಿಷ್ಯಾಮಿ ಧನುಷ್ಪಾಣಿಃ ಸರ್ವತೋ ಜ್ಞಾತಿಭಿಃ ಸಹ॥ ೬

ನ ಹಿ ಮೇಽವಿದಿತಂ ಕಿಂಚಿದ್ವನೇಽಸ್ಮಿಂಶ್ಚರತಃ ಸದಾ।
ಚತುರಂಗಂ ಹ್ಯಪಿ ಬಲಂ ಸುಮಹತ್ ಪ್ರಸಹೇಮಹಿ ॥ ೭

ಲಕ್ಷ್ಮಣಸ್ತಂ ತದೋವಾಚ ರಕ್ಷ್ಯಮಾಣಾಸ್ತ್ವಯಾನಘ।
ನಾತ್ರ ಭೀತಾ ವಯಂ ಸರ್ವೇ ಧರ್ಮಮೇವಾನುಪಶ್ಯತಾ॥ ೮

ಕಥಂ ದಾಶರಥೌ ಭೂಮೌ ಶಯಾನೇ ಸಹ ಸೀತಯಾ।
ಶಕ್ಯಾ ನಿದ್ರಾ ಮಯಾ ಲಬ್ಧುಂ ಜೀವಿತಂ ವಾ ಸುಖಾನಿ ವಾ ॥ ೯

ಯೋ ನ ದೇವಾಸುರೈಃ ಸರ್ವೈಃ ಶಕ್ಯಃ ಪ್ರಸಹಿತುಂ ಯುಧಿ ।
ತಂ ಪಶ್ಯ ಸುಖಸಂವಿಷ್ಟಂ ತೃಣೇಷು ಸಹ ಸೀತಯಾ ॥ ೧೦

ಯೋ ಮಂತ್ರತಪಸಾ ಲಬ್ಧೋ ವಿವಿಧೈಶ್ಚ ಪರಿಶ್ರಮೈಃ ।
ಏಕೋ ದಶರಥಸ್ಯೇಷ್ಟಃ ಪುತ್ರಃ ಸದೃಶಲಕ್ಷಣಃ ॥ ೧೧

---

ಯಾಗಿದ್ದು, ನಿದ್ರಿಸುತ್ತಿರುವ ನನ್ನ ಪ್ರಿಯಸಖನಾದ ರಾಮನನ್ನೂ ಸೀತೆಯನ್ನೂ ರಕ್ಷಿಸುತ್ತ ಕಾವಲಾಗಿರುವೆನು(೫-೬). ಸದಾ ಅರಣ್ಯದಲ್ಲಿಯೇ ಸಂಚರಿಸುವ ನನಗೆ ಇಲ್ಲಿ ಗೊತ್ತಿಲ್ಲದ ವಿಷಯ ಯಾವುದೂ ಇಲ್ಲ. ಶತ್ರುಗಳು ಎಂತಹ ದೊಡ್ಡ ಚತುರಂಗಬಲನ್ನು ತಂದರೂ ಎದುರಿಸಬಲ್ಲೆವು" ಎಂದು ಹೇಳಿದನು (೭). ಆಗ ಲಕ್ಷ್ಮಣನು ಗುಹನಿಗೆ ಹೀಗೆಂದನು: "ಮಿತ್ರ, ಗುಣಶಾಲಿಯೂ ಧರ್ಮಶೀಲನೂ ಆದ ನೀನು ರಕ್ಷಿಸುತ್ತ ಕಾವಲಾಗಿರುವಾಗ ನಮಗೆ ಯಾವ ಭಯವೂ ಇಲ್ಲ. ಆದರೆ ಶ್ರೀರಾಮನೂ ಸೀತಾದೇವಿಯೂ ನೆಲದಮೇಲೆ ಮಲಗಿದ್ದಾರೆ, ನೋಡು. ಈಗ ನನಗೆ ನಿದ್ರೆಬರುವುದಾದರೂ ಹೇಗೆ ? ಆಹಾರವಾಗಲಿ, ಸುಖವಾಗಲಿ ಬೇಕೆನಿಸೀತೆ ? (೮-೯). ಗುಹ, ಸಮಸ್ತದೇವಾಸುರರು ಒಟ್ಟುಗೂಡಿ ಯುದ್ಧಕ್ಕೆ ಬಂದರೂ ಯಾರನ್ನು ಎದುರಿಸಲು ಸಾಧ್ಯವಿಲ್ಲವೊ, ಆ ವೀರನು ಹುಲ್ಲಿನಮೇಲೆ ಸೀತೆಯೊಡನೆ ಸುಖವಾಗಿ ನಿದ್ರಿಸುವುದನ್ನು ನೋಡಿದೆಯಾ ? (೧೦). ದಶರಥಮಹಾರಾಜನು ಜಪತಪಗಳನ್ನು ಮಾಡಿ ನಾನಾಕ್ಲೇಶಗಳನ್ನನುಭವಿಸಿ ಅದ್ವಿತೀಯನಾದ ಈ ಪ್ರಿಯಪುತ್ರನನ್ನು ಪಡೆದಿದ್ದಾನೆ. ಇವನು ತಂದೆಗೆ ಅನುರೂಪನಾದ ಲಕ್ಷಣ

ಅಸ್ಮಿನ್ ಪ್ರವ್ರಾಜಿತೇ ರಾಜಾ ನ ಚಿರಂ ವರ್ತಯಿಷ್ಯತಿ ।
ವಿಧವಾ ಮೇದಿನೀ ನೂನಂ ಕ್ಷಿಪ್ರಮೇವ ಭವಿಷ್ಯತಿ ॥ ೧೨

ವಿನದ್ಯ ಸುಮಹಾನಾದಂ ಶ್ರಮೇಣೋಪರತಾಃ ಸ್ತ್ರಿಯಃ ।
ನಿರ್ಘೋಷೋಪರತಂ ತಾತ ಮನ್ಯೇ ರಾಜನಿವೇಶನಮ್ ॥ ೧೩

ಕೌಸಲ್ಯಾ ಚೈವ ರಾಜಾ ಚ ತಥೈವ ಜನನೀ ಮಮ ।
ನಾಶಂಸೇ ಯದಿ ಜೀವಂತಿ ಸರ್ವೇ ತೇ ಶರ್ವರೀಮಿಮಾಮ್ ॥ ೧೪

ಜೀವೇದಪಿ ಹಿ ಮೇ ಮಾತಾ ಶತ್ರುಘ್ನಸ್ಯಾನ್ವವೇಕ್ಷಯಾ ।
ತದ್ದುಃಖಂ ಯದಿ ಕೌಸಲ್ಯಾ ವೀರಸೂರ್ವಿನಶಿಷ್ಯತಿ ॥ ೧೫

ಅನುರಕ್ತಜನಾಕೀರ್ಣಾ ಸುಖಾ ಲೋಕಪ್ರಿಯಾವಹಾ ।
ರಾಜವ್ಯಸನಸಂತಪ್ತಾ ಸಾ ಪುರೀ ವಿನಶಿಷ್ಯತಿ ॥ ೧೬

ಕಥಂ ಪುತ್ರಂ ಮಹಾತ್ಮಾನಂ ಜ್ಯೇಷ್ಠಂ ಪ್ರಿಯಾವಹಾ ।
ಶರೀರಂ ಧಾರಯಿಷ್ಯಂತಿ ಪ್ರಾಣಾ ರಾಜ್ಞೋ ಮಹಾತ್ಮನಃ ॥ ೧೭

---

ಸಂಪನ್ನ. ಈತನು ಹೀಗೆ ಹೊರಟುಬಂದಮೇಲೆ ಮಹಾರಾಜನು ಇನ್ನು ಬಹಳ ದಿನ ಬದುಕುವುದಿಲ್ಲ. **ಭೂದೇವಿಯು ಶೀಘ್ರದಲ್ಲಿ ವಿಧವೆಯಾಗುವಳು** (೧೧-೧೨) ಮತ್ತು, ಇಷ್ಟುಹೊತ್ತಿಗೆ ಅರಮನೆಯಲ್ಲಿ ಸ್ತ್ರೀಯರು ಗಟ್ಟಿಯಾಗಿ ಅತ್ತು ಅತ್ತು ಸಾಕಾಗಿ ಬಳಲಿ ಸುಮ್ಮನಾಗಿರಬಹುದೆಂದು ಊಹಿಸುತ್ತೇನೆ. ಕೌಸಲ್ಯೆ, ಮಹಾರಾಜ. ನನ್ನ ತಾಯಿ — ಇವರು ಬದುಕಿರಲಾರರು. ಬದುಕಿದ್ದರೂ ಇದೊಂದು ರಾತ್ರಿ ಮಾತ್ರವೇ ಸರಿ (೧೩-೧೪). ಒಂದು ವೇಳೆ ನನ್ನ ತಾಯಿ ಶತ್ರುಘ್ನನಿರುವನೆಂದು **ಮಮತೆಯಿಂದ ಪ್ರಾಣವನ್ನು ಹಿಡಿದಿರಬಹುದು.** ಆದರೆ ವೀರಮಾತೆಯಾದ ಕೌಸಲ್ಯೆ ಬದುಕಲಾರಳೆಂಬ ಚಿಂತೆ ನನ್ನನ್ನು ಬಾಧಿಸುತ್ತಿದೆ. ಅನುರಕ್ತರಾದ ಪ್ರಜೆಗಳಿಂದ ತುಂಬಿ ಸುಖಾಶ್ರಯವಾಗಿ ಜನರಿಗೆ ಆನಂದವನ್ನು ಬೀರುತ್ತಿದ್ದ ಅಯೋಧ್ಯೆಯು ಮಹಾರಾಜನ ಮರಣದುಃಖವನ್ನು ಸಹಿಸಲಾರದೆ ಹಾಳಾಗುವುದು (೧೫-೧೬). ದಶರಥ ಮಹಾರಾಜನು ತನಗೆ ಪ್ರಿಯನಾಗಿ ಜ್ಯೇಷ್ಠ ಪುತ್ರನಾದ ಈ ಮಹಾತ್ಮನನ್ನು ನೋಡದಿದ್ದರೆ, ಅವನ ದೇಹದಲ್ಲಿ ಪ್ರಾಣವು ಎಂದಿಗಾದರೂ ಉಳಿದೀತೆ?

ವಿನಷ್ಟೇ ನೃಪತೌ ಪಶ್ಚಾತ್ ಕೌಸಲ್ಯಾ ವಿನಶಿಷ್ಯತಿ ।
ಅನಂತರಂ ಚ ಮಾತಾಪಿ ಮಮ ನಾಶಮುಪೈಷ್ಯತಿ ॥ ೧೮

ಅತಿಕ್ರಾಂತಮತಿಕ್ರಾಂತಮನವಾಪ್ಯ ಮನೋರಥಮ್ ।
ರಾಮೇ ರಾಜ್ಯಮನಿಕ್ಷಿಪ್ಯ ಪಿತಾ ಮೇ ವಿನಶಿಷ್ಯತಿ ॥ ೧೯

ಸಿದ್ಧಾರ್ಥಾಃ ಪಿತರಂ ವೃತ್ತಂ ತಸ್ಮಿನ್ ಕಾಲೇಽಪ್ಯುಪಸ್ಥಿತೇ ।
ಪ್ರೇತಕಾರ್ಯೇಷು ಸರ್ವೇಷು ಸಂಸ್ಕರಿಷ್ಯಂತಿ ಭೂಮಿಪಮ್ ॥ ೨೦

ರಮ್ಯಚತ್ವರಸಂಸ್ಥಾನಾಂ ಸುವಿಭಕ್ತಮಹಾಪಥಾಮ್ ।
ಹರ್ಮ್ಯಪ್ರಾಸಾದಸಂಪನ್ನಾಂ ಗಣಿಕಾವರಶೋಭಿತಾಮ್ ॥ ೨೧

ರಥಾಶ್ವಗಜಸಂಬಾಧಾಂ ತೂರ್ಯನಾದವಿನಾದಿತಾಮ್ ।
ಸರ್ವಕಲ್ಯಾಣಸಂಪೂರ್ಣಾಂ ಹೃಷ್ಟಪುಷ್ಟಜನಾಕುಲಾಮ್ ॥ ೨೨

ಆರಾಮೋದ್ಯಾನಸಂಪನ್ನಾಂ ಸಮಾಜೋತ್ಸವಶಾಲಿನೀಮ್ ।
ಸುಖಿತಾ ವಿಚರಿಷ್ಯಂತಿ ರಾಜಧಾನೀಂ ಪಿತುರ್ಮಮ॥ ೨೩

---

ಆ ಭೂಪಾಲನು ಮೃತನಾದರೆ ಕೌಸಲ್ಯೆಯೂ ಮೃತಿಹೊಂದುವಳು. ಅನಂತರ ನನ್ನ ತಾಯಿ ನಿಧನಹೊಂದುವಳು (೧೭–೧೮). ಒಟ್ಟಿನಲ್ಲಿ ಕಾರ್ಯವು ಮಿಂಚಿ ಹೋಯಿತು; ಕೆಟ್ಟುಹೋಯಿತು. ನನ್ನ ತಂದೆಯ ಅಪೇಕ್ಷೆ ಕೈಗೂಡಲಿಲ್ಲ. ಶ್ರೀರಾಮನಿಗೆ ಪಟ್ಟಾಭಿಷೇಕಮಾಡಿ ರಾಜ್ಯಭಾರವನ್ನು ವಹಿಸಿಕೊಡಬೇಕೆಂಬ ಅಪೇಕ್ಷೆ ಕೈಗೂಡದೆ ಅವನು ಮರಣಹೊಂದುವನು (೧೯). ಅಂಥ ಮರಣಕಾಲವೂ ಬಂದರೆ ಆಗ ಮೃತನಾದ ನಮ್ಮ ತಂದೆಗೆ ಪ್ರೇತಸಂಸ್ಕಾರವನ್ನು ಮಾಡತಕ್ಕವರೇ ಧನ್ಯರು, ಪುಣ್ಯಾತ್ಮರು (೨೦). ಅಯೋಧ್ಯಾನಗರವು ಸುಂದರವಾದ ಅಂಗಣಗಳಿಂದಲೂ ಚೆನ್ನಾಗಿ ವಿಂಗಡಿಸಿದ ವಿಶಾಲವಾದ ಬೀದಿಗಳಿಂದಲೂ ಉನ್ನತಸೌಧಗಳಿಂದಲೂ ಗಣಿಕಾಸ್ತ್ರೀಯರಿಂದಲೂ ಮನೋಹರವಾಗಿದೆ (೨೧). ಆನೆ ಕುದುರೆ ರಥಗಳು ಸಂಚರಿಸುತ್ತಲೇ ಇರುತ್ತವೆ. ವಾದ್ಯಧ್ವನಿಗಳು ಹರಡಿರುತ್ತವೆ. ಸಮಸ್ತ ಕಲ್ಯಾಣಗಳಿಗೂ ನೆಲೆಯಾಗಿದೆ. ಹೃಷ್ಟಪುಷ್ಟರಾದ ಜನರು ತುಂಬಿರುತ್ತಾರೆ. ಕ್ರೀಡಾವನಗಳೂ ಉದ್ಯಾನಗಳೂ ವಿಪುಲವಾಗಿವೆ. ಜನಸಮೂಹವು ನಾನಾಬಗೆಯ ಉತ್ಸವಗಳನ್ನು ನಡೆಸುತ್ತಲೇ ಇರುವುದು. ನನ್ನ ತಂದೆಯ ರಾಜಧಾನಿಯಲ್ಲಿ

ಅಪಿ ಜೀವೇದ್ದಶರಥೋ ವನವಾಸಾತ್ ಪುನರ್ವಯಮ್ ।
ಪ್ರತ್ಯಾಗಮ್ಯ ಮಹಾಭಾಗಮಪಿ ಪಶ್ಯೇಮ ಸುವ್ರತಮ್ ॥ ೨೪

ಅಪಿ ಸತ್ಯಪ್ರತಿಜ್ಞೇನ ಸಾರ್ಧಂ ಕುಶಲಿನಾ ವಯಮ್ ।
ನಿವೃತ್ತೇ ವನವಾಸೇಽಸ್ಮಿನ್ನಯೋಧ್ಯಾಂ ಪ್ರವಿಶೇಮಹಿ ॥ ೨೫

ಪರಿದೇವಯಮಾನಸ್ಯ ದುಃಖಾರ್ತಸ್ಯ ಮಹಾತ್ಮನಃ ।
ತಿಷ್ಠತೋ ರಾಜಪುತ್ರಸ್ಯ ಶರ್ವರೀ ಸಾತ್ಯವರ್ತತ ॥ ೨೬

ತಥಾ ಹಿ ಸತ್ಯಂ ಬ್ರುವತಿ ಪ್ರಜಾಹಿತೇ
ನರೇಂದ್ರಪುತ್ರೇ ಗುರುಸೌಹೃದಾದ್ಗುಹಃ ।
ಮುಮೋಚ ಬಾಷ್ಪಂ ವ್ಯಸನಾಭಿಪೀಡಿತೋ
ಜ್ವರಾತುರೋ ನಾಗ ಇವ ವ್ಯಥಾತುರಃ ॥ ೨೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಪಂಚಾಶಃ ಸರ್ಗಃ

---

ಸಂಚರಿಸತಕ್ಕವರೇ ಭಾಗ್ಯವಂತರು ! (೨೨-೨೩). ಮಿತ್ರ, ನಾವು ಹಿಂದಿರುಗಿ ಬರುವವರೆಗೂ ನಮ್ಮ ತಂದೆಯು ಬದುಕಿರಬಹುದೆ ? ನಾವು ವನವಾಸವನ್ನು ಮುಗಿಸಿ ಬಂದು ಸದಾಚಾರಸಂಪನ್ನನಾದ ಆ ಮಹಾಪುರುಷನನ್ನು ನೋಡಲು ಸಾಧ್ಯವಾದೀತೆ ? ಸತ್ಯಸಂಧನಾದ ಶ್ರೀರಾಮನು ಕ್ಷೇಮದಿಂದ ವನವಾಸವನ್ನು ಮುಗಿಸಿದಮೇಲೆ ನಾವು ಪುನಃ ಅಯೋಧ್ಯೆಗೆ ಹೋಗುತ್ತೇವೆಯೆ ?" ಎಂದು ಲಕ್ಷ್ಮಣನು ವ್ಯಥೆಯಿಂದ ಹೇಳಿದನು (೨೪-೨೫). ಹೀಗೆ ದುಃಖಾರ್ತನಾದ ಆ ರಾಜಕುಮಾರನು ಕಳವಳದಿಂದ ಮಾತನಾಡುತ್ತ ನಿಂತಿರುವಾಗಲೇ ರಾತ್ರಿ ಕಳೆದು ಹೋಯಿತು. ಪ್ರಜೆಗಳಿಗೆ ಹಿತಕಾರಿಯಾಗಿದ್ದ ಲಕ್ಷ್ಮಣನು ಶ್ರೀರಾಮನನ್ನೂ ತನ್ನ ತಂದೆತಾಯಿಗಳನ್ನೂ ಸ್ಮರಿಸಿಕೊಂಡು, ಅವರಮೇಲಿನ ಪ್ರೀತಿಯಿಂದ ಯಥಾರ್ಥವಾದ ವಿಷಯವನ್ನು ಹೇಳಿದನು. ಅದನ್ನು ಕೇಳುತ್ತಿದ್ದ ಗುಹನು ಅತ್ಯಂತ ದುಃಖಿತನಾಗಿ, ಜ್ವರದಿಂದ ನರಳುವ ಆನೆಯಂತೆ ಕಣ್ಣೀರು ಬಿಡುತ್ತಿದ್ದನು (೨೬-೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಕಾಂಡದಲ್ಲಿ ಐವತ್ತೊಂದನೆ ಸರ್ಗ

## ದ್ವಿಪಂಚಾಶಃ ಸರ್ಗಃ

### ಗಂಗಾವತರಣಮ್

ಪ್ರಭಾತಾಯಾಂ ತು ಶರ್ವರ್ಯಾಂ ಪೃಥುವಕ್ಷಾ ಮಹಾಯಶಾಃ ।
ಉವಾಚ ರಾಮಃ ಸೌಮಿತ್ರಿಂ ಲಕ್ಷ್ಮಣಂ ಶುಭಲಕ್ಷಣಮ್ ॥ ೧

ಭಾಸ್ಕರೋದಯಕಾಲೋಽಸೌ ಗತಾ ಭಗವತೀ ನಿಶಾ ।
ಅಸೌ ಸುಕೃಷ್ಣೋ ವಿಹಗಃ ಕೋಕಿಲಸ್ತಾತ ಕೂಜತಿ ॥ ೨

ಬರ್ಹಿಣಾನಾಂ ಚ ನಿರ್ಘೋಷಃ ಶ್ರೂಯತೇ ನದತಾಂ ವನೇ ।
ತರಾಮ ಜಾಹ್ನವೀಂ ಸೌಮ್ಯ ಶೀಘ್ರಗಾಂ ಸಾಗರಂಗಮಾಮ್ ॥ ೩

ವಿಜ್ಞಾಯ ರಾಮಸ್ಯ ವಚಃ ಸೌಮಿತ್ರಿರ್ಮಿತ್ರನಂದನಃ ।
ಗುಹಮಾಮಂತ್ರ್ಯ ಸೂತಂ ಚ ಸೋಽತಿಷ್ಠತ್ಪ್ರಾತುರಗ್ರತಃ ॥ ೪

ಸ ತು ರಾಮಸ್ಯ ವಚನಂ ನಿಶಮ್ಯ ಪ್ರತಿಗೃಹ್ಯ ಚ ।
ಸ್ಥಪತಿಸ್ತೂರ್ಣಮಾಹೂಯ ಸಚಿವಾನಿದಮಬ್ರವೀತ್ ॥ ೫

## ಸರ್ಗ ೫೨

**ಶ್ರೀರಾಮನು ಸುಮಂತ್ರನಿಗೆ ಸಮಾಧಾನಹೇಳುವುದು. ಗುಹನನ್ನು ಸಂತೈಸಿ ಗಂಗಾನದಿಯನ್ನು ದಾಟುವುದು.**

ರಾತ್ರಿಯು ಕಳೆದು ಬೆಳಗಾಗಲು ವಿಶಾಲವಕ್ಷನಾದ ಶ್ರೀರಾಮನು ಶುಭ ಲಕ್ಷಣಯುಕ್ತನಾದ ಸೌಮಿತ್ರಿಯನ್ನು ಕರೆದು "ಲಕ್ಷ್ಮಣ, ಸೂರ್ಯೋದಯ ಸಮಯವು ಸಮೀಪಿಸಿತು. ಪೂಜ್ಯವಾದ ರಾತ್ರಿ ಕಳೆಯಿತು. ಕೃಷ್ಣವರ್ಣದ ಕೋಕಿಲಪಕ್ಷಿಯು ಕೂಗುತ್ತಿದೆ. ವನದಲ್ಲಿ ನವಿಲುಗಳ ಕೇಕಾಧ್ವನಿಯು ಕೇಳಿಸುತ್ತಿದೆ. ವತ್ಸ, ನಾವು ಸಾಗರಗಾಮಿನಿಯಾದ ಜಾಹ್ನವಿಯನ್ನು ದಾಟಿಹೋಗೋಣ" ಎಂದನು (೧-೩). ಲಕ್ಷ್ಮಣನು ಶ್ರೀರಾಮನ ಅಭಿಪ್ರಾಯವನ್ನು ಗ್ರಹಿಸಿ ನದಿಯನ್ನು ದಾಟಲು ಸಾಧನವು ಬೇಕೆಂಬುದನ್ನು ಗುಹನಿಗೂ ಸುಮಂತ್ರನಿಗೂ ತಿಳಿಸಿ ಅಣ್ಣನ ಬಳಿಗೆ ಬಂದು ನಿಂತನು (೪). ಒಡನೆಯೇ ನಿಷಾದರಾಜನಾದ ಗುಹನು ಶ್ರೀರಾಮನ

ಅಸ್ಯ ವಾಹನಸಂಯುಕ್ತಾಂ ಕರ್ಣಗ್ರಾಹವತೀಂ ಶುಭಾಮ್ ।
ಸುಪ್ರತಾರಾಂ ದೃಢಾಂ ತೀರ್ಥೇ ಶೀಘ್ರಂ ನಾವಮುಪಾಹರ । ೬

ತಂ ನಿಶಮ್ಯ ಗುಹಾದೇಶಂ ಗುಹಾಮಾತ್ಯಗಣೋ ಮಹಾನ್ ।
ಉಪೋಹ್ಯ ರುಚಿರಾಂ ನಾವಂ ಗುಹಾಯ ಪ್ರತ್ಯವೇದಯತ್ ॥ ೭

ತತಃ ಸ ಪ್ರಾಂಜಲಿರ್ಭೂತ್ವಾ ಗುಹೋ ರಾಘವಮಬ್ರವೀತ್ ।
ಉಪಸ್ಥಿತೇಯಂ ನೌರ್ದೇವ ಭೂಯಃ ಕಿಂ ಕರವಾಣಿ ತೇ ॥ ೮

ಕಿಮಾಮರಸುತಪ್ರಖ್ಯ ತರ್ತುಂ ಸಾಗರಗಾಂ ನದೀಮ್ ।
ನೌರಿಯಂ ಪುರುಷವ್ಯಾಘ್ರ ತಾಂ ತ್ವಮಾರೋಹ ಸುವ್ರತ ॥ ೯

ಅಥೋವಾಚ ಮಹಾತೇಜಾ ರಾಮೋ ಗುಹಮಿದಂ ವಚಃ ।
ಕೃತಕಾಮೋಽಸ್ಮಿ ಭವತಾ ಶೀಘ್ರಮಾರೋಪ್ಯತಾಮಿತಿ ॥ ೧೦

ತತಃ ಕಲಾಪಾನ್ ಸಂನಹ್ಯ ಖಡ್ಗೌ ಬದ್ಧ್ವಾ ಚ ಧನ್ವಿನೌ ।
ಜಗ್ಮತುರ್ಯೇನ ತೌ ಗಂಗಾಂ ಸೀತಯಾ ಸಹ ರಾಘವೌ ॥ ೧೧

---

ಮಾತನ್ನು ಶಿರಸಾವಹಿಸಿ ತನ್ನ ಸಚಿವರನ್ನು ಕರೆದು "ಇವರು ನದಿಯನ್ನು ದಾಟುವುದಕ್ಕೋಸ್ಕರ ದೃಢವಾದ ಒಂದು ಸುಂದರ ನೌಕೆಯನ್ನು ಬೇಗನೆ ತನ್ನಿರಿ. ದಾಟಲು ಬೇಕಾದ ಸಾಮಗ್ರಿಯೊಡನೆ ನಾವಿಕನು ಅದನ್ನು ನೀರಿಗೆ ಇಳಿಯುವ ಸ್ಥಳದಲ್ಲಿ ತಂದು ನಿಲ್ಲಿಸಲಿ" ಎಂದನು (೫-೬). ಗುಹನ ಆಜ್ಞೆಯನ್ನು ಕೇಳಿದೊಡನೆ ಅವನ ಸಚಿವರು ಒಂದು ಅಂದವಾದ ನಾವೆಯನ್ನು ತರಿಸಿ ಆ ವಿಷಯವನ್ನು ಗುಹನಿಗೆ ಅರಿಕೆಮಾಡಿದರು. ಆಗ ಶ್ರೀರಾಮನ ಬಳಿಗೆ ಹೋಗಿ ಕೈ ಮುಗಿದು ಗುಹನು "ದೇವ, ನೌಕೆಯು ಸಿದ್ಧವಾಗಿದೆ. ಇನ್ನೇನಾದರೂ ಮಾಡುವುದಿದ್ದರೆ ತಿಳಿಸು. ಹೇ ಪುರುಷೋತ್ತಮ, ಸಾಗರಗಾಮಿನಿಯಾದ ಈ ನದಿಯನ್ನು ದಾಟಲು ಇದು ಅನುಕೂಲವಾಗಿದೆ. ನೀನು ಇದನ್ನು ಏರಬಹುದು " ಎಂದನು (೭-೯) ಆಗ ಶ್ರೀರಾಮನು ಗುಹನನ್ನು ನೋಡಿ "ಮಿತ್ರ, ನನಗೆ ಬೇಕಾದುದನ್ನೆಲ್ಲ ನೀನು ಮಾಡಿರುವೆ. ಬೇಗನೆ ನೌಕೆಯನ್ನುಹತ್ತಿಸು"ಎಂದನು. ಆಮೇಲೆ ರಾಮಲಕ್ಷ್ಮಣರು ಕವಚಗಳನ್ನು ತೊಟ್ಟು ಬತ್ತಳಿಕೆಗಳನ್ನು ಹೆಗಲಿಗೇರಿಸಿ ಖಡ್ಗಗಳನ್ನು ನಡುವಿಗೆ

ರಾಮಮೇವಂ ತು ಧರ್ಮಜ್ಞಮುಪಗಮ್ಯ ವಿನೀತವತ್ ।
ಕಿಮಹಂ ಕರವಾಣೀತಿ ಸೂತಃ ಪ್ರಾಂಜಲಿರಬ್ರವೀತ್ ॥ ೧೨

ತತೋಽಬ್ರವೀದ್ದಾಶರಥಿಃ ಸುಮಂತ್ರಂ
ಸ್ಪೃಶನ್ ಕರೇಣೋತ್ತಮದಕ್ಷಿಣೇನ ।
ಸುಮಂತ್ರ ಶೀಘ್ರಂ ಪುರಮೇವ ಯಾಹಿ
ರಾಜ್ಞಃ ಸಕಾಶೇ ಭವ ಚಾಪ್ರಮತ್ತಃ ॥ ೧೩

ನಿವರ್ತಸ್ವೇತ್ಯುವಾಚೈನಮೇತಾವದ್ಧಿ ಕೃತಂ ಮಮ ।
ರಥಂ ವಿಹಾಯ ಪದ್ಭ್ಯಾಂ ತು ಗಮಿಷ್ಯಾವೋ ಮಹಾವನಮ್ ॥ ೧೪

ಆತ್ಮಾನಂ ತ್ವಭ್ಯನುಜ್ಞಾತಮವೇಕ್ಷ್ಯಾರ್ತ ಸ ಸಾರಥಿಃ ।
ಸುಮಂತ್ರಃ ಪುರುಷವ್ಯಾಘ್ರಮೈಕ್ಷ್ವಾಕಮಿದಮಬ್ರವೀತ್ ॥ ೧೫

ನಾತಿಕ್ರಾಂತಮಿದಂ ಲೋಕೇ ಪುರುಷೇಣೇಹ ಕೇನಚಿತ್ ।
ತವ ಸಭ್ರಾತೃಭಾರ್ಯಸ್ಯ ವಾಸಃ ಪ್ರಾಕೃತವದ್ವನೇ ॥ ೧೬

---

ಬಿಗಿದು ಧನುರ್ಧಾರಿಗಳಾಗಿ ಸೀತಾದೇವಿಯೊಡನೆ ಗಂಗಾನದಿಯ ಕಡೆಗೆ ಹೊರಟರು (೧೦-೧೧). ಹೀಗೆ ಹೊರಟ ಧರ್ಮಜ್ಞನಾದ ಶ್ರೀರಾಮನನ್ನು ಸಮೀಪಿಸಿ ಸುಮಂತ್ರನು ವಿನಯದಿಂದ ಕೈಮುಗಿದು ರಾಜಕುಮಾರ, ಈಗ ನಾನೇನು ಮಾಡಲಿ ಎಂದು ಕೇಳಿದನು (೧೨). ಆಗ ದಾಶರಥಿಯು ತನ್ನ ಬಲಗೈಯಿಂದ ಸುಮಂತ್ರನನ್ನು ಸ್ಪರ್ಶಿಸುತ್ತ "ಸುಮಂತ್ರ, ಈಗ ನೀನು ಹಿಂತಿರುಗಿ ಹೋಗು. ಮಹಾರಾಜನ ಬಳಿಯಲ್ಲಿದ್ದು ಅವನನ್ನು ಜಾಗರೂಕನಾಗಿ ನೋಡಿಕೊಳ್ಳುತ್ತಿರು. ಇಲ್ಲಿಯರೆಗೆ ನನ್ನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಬಂದಿದ್ದೀಯೆ. ಇನ್ನು ನಾವು ರಥವನ್ನು ತ್ಯಜಿಸಿ ಕಾಲ್ನಡೆಯಿಂದಲೇ ಮಹಾರಣ್ಯವನ್ನು ಪ್ರವೇಶಿಸುವೆವು" ಎಂದನು (೧೩-೧೪). ತನ್ನನ್ನು ಹಿಂದಕ್ಕೆಕಳಿಸಿಬಿಡುತ್ತಾನೆಂದು ತಿಳಿದು ಆ ಸಾರಥಿಗೆ ಬಹಳ ದುಃಖವಾಯಿತು. ಆತನು ಶ್ರೀರಾಮನಿಗೆ ಹೇಳಿದನು: "ಶ್ರೀರಾಮ, ನಿನ್ನ ಪತ್ನಿಯನ್ನೂ ತಮ್ಮನನ್ನೂ ಸಂಗಡ ಕರೆದುಕೊಂಡು ನೀನೂ ಒಬ್ಬ ಸಾಮಾನ್ಯ ಮನುಷ್ಯನಂತೆ ವನವಾಸಮಾಡಬೇಕಾಯಿತೆಂದರೆ, ದೈವವನ್ನು ಈ ಲೋಕದಲ್ಲಿ ಯಾವನೂ ಮೀರಿನಡೆಯಲಾರನೆಂದು ಸ್ಪಷ್ಟವಾಗುತ್ತದೆ (೧೫-೧೬).

ನ ಮನ್ಯೇ ಬ್ರಹ್ಮಚರ್ಯೇಽಸ್ತಿ ಸ್ವಧೀತೇ ವಾ ಫಲೋದಯಃ ।
ಮಾರ್ದವಾರ್ಜವಯೋರ್ವಾಪಿ ತ್ವಾಂ ಚೇದ್ವ್ಯಸನಮಾಗತಮ್ ॥

ಸಹ ರಾಘವ ವೈದೇಹ್ಯಾ ಭ್ರಾತ್ರಾ ಚೈವ ವನೇ ವಸನ್ ।
ತ್ವಂ ಗತಿಂ ಪ್ರಾಪ್ಸ್ಯಸೇ ವೀರ ತ್ರೀನ್ ಲೋಕಾಂಸ್ತು ಜಯನ್ನಿವ ।

ವಯಂ ಖಲು ಹತಾ ನಾಮ ಯತ್ತ್ವಯಾಪ್ಯುಪವಂಚಿತಾಃ ।
ಕೈಕೇಯ್ಯಾ ವಶಮೇಷ್ಯಾಮಃ ಪಾಪಾಯಾ ದುಃಖಭಾಗಿನಃ ॥ ೧೯

ಇತಿ ಬ್ರುವನ್ನಾತ್ಮಸಮಂ ಸುಮಂತ್ರಃ ಸಾರಥಿಸ್ತದಾ ।
ದೃಷ್ಟ್ವಾ ದೂರಗತಂ ರಾಮಂ ದುಃಖಾರ್ತೋ ರುರುದೇ ಚಿರಮ್ ॥

ತತಸ್ತು ವಿಗತೇ ಬಾಷ್ಪೇ ಸೂತಂ ಸ್ಪೃಷ್ಟೋದಕಂ ಶುಚಿಮ್।
ರಾಮಸ್ತು ಮಧುರಂ ವಾಕ್ಯಂ ಪುನಃ ಪುನರುವಾಚ ತಮ್ ॥ ೨೧

ಇಕ್ಷ್ವಾಕೂಣಾಂ ತ್ವಯಾ ತುಲ್ಯಂ ಸುಹೃದಂ ನೋಪಲಕ್ಷಯೇ ।
ಯಥಾ ದಶರಥೋ ರಾಜಾ ಮಾಂ ನ ಶೋಚೇತ್ತಥಾ ಕುರು ॥ ೨೨

---

ನಿನಗೂ ಈ ಕಷ್ಟ ಬರುವುದಾದರೆ, ಬ್ರಹ್ಮಚರ್ಯದಲ್ಲಾಗಲಿ ವೇದಾಧ್ಯಯನದಲ್ಲಾಗಲಿ ಫಲವು ಇಲ್ಲವೆಂದೇ ತೋರುತ್ತದೆ. ಆರ್ಜವಮೃದು ಸ್ವಭಾವಗಳು ನಿಷ್ಫಲವೆಂದೇ ಕಾಣುತ್ತದೆ (೧೭). ಹೇ ವೀರ, ಈ ವೈದೇಹಿ ಈ ಸೋದರ ಇವರೊಡನೆ ನೀನು ವನದಲ್ಲಿದ್ದರೂ ಮೂರುಲೋಕಗಳನ್ನೂ ಜಯಿಸಿದವನಂತೆ ಉತ್ಕೃಷ್ಟವಾದ ಕೀರ್ತಿಯನ್ನು ಗಳಿಸುವೆ. ಮುಖ್ಯವಾಗಿ ನಾವು ಕೆಟ್ಟೆವು. ನೀನೂ ನಮ್ಮನ್ನು ಕೈ ಬಿಟ್ಟೆ. ನಾವು ಪಾಪಿಯಾದ ಕೈಕೇಯಿಯ ವಶಕ್ಕೆ ಸಿಕ್ಕಿ ದುಃಖವನ್ನು ಅನುಭವಿಸ ಬೇಕಾಯಿತು" ಎಂದನು (೧೮-೧೯). ಹೀಗೆ ಹೇಳುತ್ತ ಸುಮಂತ್ರನು ತನ್ನ ಪ್ರಾಣಕ್ಕೆ ಸಮನಾದ ಶ್ರೀರಾಮನು ತನ್ನನ್ನು ಬಿಟ್ಟು ದೂರಹೋಗುವನೆಂದು ಶೋಕಾರ್ತ ನಾಗಿ ಗಳಗಳನೆ ಅತ್ತು ಬಿಟ್ಟನು. ಅನಂತರ ಸುಮಂತ್ರನು ಕಣ್ಣೀರನ್ನೊರಸಿಕೊಂಡು ನೀರಿನಿಂದ ಮುಖವನ್ನು ತೊಳೆದು ಶುಚಿಯಾಗಿ ಬರಲು, ಶ್ರೀರಾಮನು ಅವನನ್ನು ಸಂತೈಸುತ್ತ ಮಧುರವಾದ ನುಡಿಗಳಿಂದ ಈ ರೀತಿ ಹೇಳಿದನು (೨೦-೨೧). ;"ಸುಮಂತ್ರ, ಇಕ್ಷ್ವಾಕುವಂಶದ ರಾಜರಿಗೆ ನಿನ್ನಂತೆ ಆಪ್ತಮಿತ್ರ

ಶೋಕೋಪಹತಚೇತಾಶ್ಚ ವೃದ್ಧಶ್ಚ ಜಗತೀಪತಿಃ ।
ಕಾಮಭಾರಾವಸನ್ನಶ್ಚ ತಸ್ಮಾದೇತದ್ಬ್ರವೀಮಿ ತೇ ॥ ೨೩

ಯದ್ಯದಾಜ್ಞಾಪಯೇತ್ಕಿಂಚಿತ್ ಸ ಮಹಾತ್ಮಾ ಮಹೀಪತಿಃ ।
ಕೈಕೇಯ್ಯಾಃ ಪ್ರಿಯಕಾಮಾರ್ಥಂ ಕಾರ್ಯಂ ತದವಿಶಂಕಯಾ ॥ ೨೪

ಏತದರ್ಥಂ ಹಿ ರಾಜ್ಯಾನಿ ಪ್ರಶಾಸತಿ ನರಾಧಿಪಾಃ ।
ಯದೇಷಾಂ ಸರ್ವಕೃತ್ಯೇಷು ಮನೋ ನ ಪ್ರತಿಹನ್ಯತೇ ॥ ೨೫

ಯದ್ಯಥಾ ಸ ಮಹಾರಾಜೋ ನಾಲೀಕಮಧಿಗಚ್ಛತಿ ।
ನ ಚ ತಾಮ್ಯತಿ ದುಃಖೇನ ಸುಮಂತ್ರ ಕುರು ತತ್ತಥಾ ॥ ೨೬

ಅದೃಷ್ಟದುಃಖಂ ರಾಜಾನಂ ವೃದ್ಧಮಾರ್ಯಂ ಜಿತೇಂದ್ರಿಯಮ್ ।
ಬ್ರೂಯಾಸ್ತ್ವಮಭಿವಾದ್ಯೈವ ಮಮ ಹೇತೋರಿದಂ ವಚಃ ॥ ೨೭

ನೈವಾಹಮನುಶೋಚಾಮಿ ಲಕ್ಷ್ಮಣೋ ನ ಚ ಮೈಥಿಲೀ ।
ಅಯೋಧ್ಯಾಯಾಶ್ಚ್ಯುತಾಶ್ಚೇತಿ ವನೇ ವತ್ಸ್ಯಾಮಹೇತಿ ಚ ॥ ೨೮

---

ನಾದ ಇನ್ನೊಬ್ಬನು ನನಗೆ ಕಾಣುವುದಿಲ್ಲ. ದಶರಥಮಹಾರಾಜನು ನನಗೋಸ್ಕರ ಕೊರಗದಂತೆ ನೋಡಿಕೊ. ಅವನ ಮನಸ್ಸು ಶೋಕದಿಂದ ಆಘಾತಹೊಂದಿದೆ. ವೃದ್ಧನಾಗಿದ್ದಾನೆ. ಸ್ತ್ರೀವ್ಯಾಮೋಹಕ್ಕೆ ಸಿಕ್ಕಿ ನೊಂದಿದ್ದಾನೆ. ಆದ್ದರಿಂದ ನಿನಗೆ ಈ ಮಾತನ್ನು ಹೇಳುತ್ತಿದ್ದೇನೆ (೨೨-೨೩). ಮಹಾತ್ಮನಾದ ಆ ಭೂಪಾಲನು ಕೈಕೇಯಿಯ ಮನಸ್ತೃಪ್ತಿಗಾಗಿ ಯಾವುದನ್ನು ಆಜ್ಞಾಪಿಸಿದರೂ ನಿಃಶಂಕೆಯಿಂದ ಅದನ್ನು ನಡೆಸಬೇಕು. ಸರ್ವ ಕಾರ್ಯಗಳಲ್ಲಿಯೂ ತಮ್ಮ ಇಚ್ಛೆಗೆ ಭಂಗಬಾರದೆಂದು ರಾಜರು ನಿರೀಕ್ಷಿಸುತ್ತಾರೆ. ಆ ನಿರೀಕ್ಷಣೆಯಿಂದಲೇ ಅವರು ರಾಜ್ಯಭಾರವನ್ನು ನಿರ್ವಹಿಸುತ್ತಾರೆ (೨೪-೨೫). ಸುಮಂತ್ರ, ಮಹಾರಾಜನಿಗೆ ಅಸಮಾಧಾನವಾಗದಂತೆಯೂ ಅವನು ಶೋಕದಿಂದ ಕೊರಗದಂತೆಯೂ ನೋಡಿಕೊ. ಮಹಾರಾಜನು ಇದುವರೆಗೆ ದುಃಖವನ್ನು ಕಂಡವನಲ್ಲ. ವೃದ್ಧನಾಗಿದ್ದಾನೆ. ಪೂಜ್ಯನೂ ಜಿತೇಂದ್ರಿಯನೂ ಆದ ನನ್ನ ತಂದೆಗೆ ನಾನು ಹೇಳಿದೆನೆಂದು ಈ ಮಾತನ್ನು ನಿವೇದಿಸು (೨೬-೨೭). ;"ಮಹಾರಾಜ, ಅಯೋಧ್ಯೆಯನ್ನು

ಚತುರ್ದಶಸು ವರ್ಷೇಷು ನಿವೃತ್ತೇಷು ಪುನಃ ಪುನಃ ।
ಲಕ್ಷ್ಮಣಂ ಮಾಂ ಚ ಸೀತಾಂ ಚ ದ್ರಕ್ಷ್ಯಸಿ ಕ್ಷಿಪ್ರಮಾಗತಾನ್ ॥ ೨೯

ಏವಮುಕ್ತ್ವಾ ತು ರಾಜಾನಂ ಮಾತರಂ ಚ ಸುಮಂತ್ರ ಮೇ ।
ಅನ್ಯಾಶ್ಚ ದೇವೀಃ ಸಹಿತಾಃ ಕೈಕೇಯೀಂ ಚ ಪುನಃ ಪುನಃ ॥ ೩೦

ಆರೋಗ್ಯಂ ಬ್ರೂಹಿ ಕೌಸಲ್ಯಾಮಥಪಾದಾಭಿವಂದನಮ್ ।
ಸೀತಾಯಾ ಮಮ ಚಾರ್ಯಸ್ಯ ವಚನಾಲ್ಲಕ್ಷ್ಮಣಸ್ಯ ಚ ॥ ೩೧

ಬ್ರೂಯಾಶ್ಚ ಹಿ ಮಹಾರಾಜಂ ಭರತಂ ಕ್ಷಿಪ್ರಮಾನಯ ।
ಆಗತಶ್ಚಾಪಿ ಭರತಃ ಸ್ಥಾಪ್ಯೋ ನೃಪ ಮತೇ ಪದೇ ॥ ೩೨

ಭರತಂ ಚ ಪರಿಷ್ವಜ್ಯ ಯೌವರಾಜ್ಯೇಽಭಿಷಿಚ್ಯ ಚ ।
ಆತ್ಮಸಂತಾಪಜಂ ದುಃಖಂ ನ ತ್ವಾಮಭಿಭವಿಷ್ಯತಿ ॥ ೩೩

ಭರತಶ್ಚಾಪಿ ವಕ್ತವ್ಯೋ ಯಥಾ ರಾಜನಿ ವರ್ತಸೇ ।
ತಥಾ ಮಾತೃಷು ವರ್ತೇಥಾಃ ಸರ್ವಾಸ್ವೇವಾವಿಶೇಷತಃ ॥ ೩೪

---

ಬಿಟ್ಟುಬರಬೇಕಾಯಿತೆಂದೂ ವನದಲ್ಲಿ ವಾಸಮಾಡಬೇಕಾಗಿದೆಯೆಂದೂ ನಾನಾಗಲಿ ಮೈಥಿಲಿಯಾಗಲಿ ಲಕ್ಷ್ಮಣನಾಗಲಿ ವ್ಯಥೆಪಡುವುದಿಲ್ಲ. ಹದಿನಾಲ್ಕು ವರ್ಷಗಳು ಕಳೆದಕೂಡಲೆ ನಾವು ಹಿಂತಿರುಗಿ ಬರುವೆವು. ಆಗ ಲಕ್ಷ್ಮಣನನ್ನೂ ನನ್ನನ್ನೂ ಸೀತೆಯನ್ನೂ ನೋಡಬಹುದು" (೨೮-೨೯). ಹೀಗೆ ನನ್ನ ತಂದೆಗೆ ತಿಳಿಸಿ, ಸುಮಂತ್ರ, ನನ್ನ ತಾಯಿಗೂ ಅವಳೊಡನಿರುವ ಇತರ ಮಾತೆಯರಿಗೂ ಕೈಕೇಯಿಗೂ ಇದೇ ವಿಷಯವನ್ನು ನಿವೇದಿಸು. ಮತ್ತು ಕೌಸಲ್ಯಾದೇವಿಗೆ ನಾವೆಲ್ಲರೂ ಕ್ಷೇಮವಾಗಿದ್ದೇವೆಂದು ಹೇಳು. ಆಕೆಯ ಪಾದಗಳಿಗೆ ನಾನೂ ಸೀತೆಯೂ ಮಹಾತ್ಮನಾದ ಲಕ್ಷ್ಮಣನೂ ವಂದಿಸಿದ್ದೇವೆಂದು ಅರಿಕೆಮಾಡು (೩೦-೩೧). ಭರತನನ್ನು ಬೇಗನೆ ಕರೆಸಬೇಕೆಂದೂ ಯುವರಾಜಪದವಿಯನ್ನು ಅವನಿಗೆ ವಹಿಸಿಕೊಡಬೇಕೆಂದೂ ಮಹಾರಾಜನಿಗೆ ಹೇಳು. ಭರತನಿಗೆ ಪಟ್ಟಾಭಿಷೇಕಮಾಡಿ ಅವನನ್ನು ಆಲಿಂಗಿಸಿಕೊಳ್ಳುತ್ತಿದ್ದರೆ, ನಮ್ಮ ವಿರಹದುಃಖವು ಹೆಚ್ಚಾಗಿ ಬಾಧಿಸುವುದಿಲ್ಲವೆಂದೂ ಹೇಳು. (೩೨-೩೩). ಭರತನಿಗೆ ಈ ಮಾತನ್ನು ತಿಳಿಸು: "ನೀನು ತಂದೆಯಾದ ದಶರಥಮಹಾರಾಜನಲ್ಲಿ ಹೇಗೆ ನಡೆದುಕೊಳ್ಳುವೆಯೊ, ಹಾಗೆಯೇ ಸಕಲಮಾತೆಯರಲ್ಲೂ ಭೇದ

ಯಥಾ ಚ ತವ ಕೈಕೇಯೀ ಸುಮಿತ್ರಾ ಚ ವಿಶೇಷತಃ ।
ತಥೈವ ದೇವೀ ಕೌಸಲ್ಯಾ ಮಮ ಮಾತಾ ವಿಶೇಷತಃ ॥ ೩೫

ತಾತಸ್ಯ ಪ್ರಿಯಕಾಮೇನ ಯೌವರಾಜ್ಯಮವೇಕ್ಷತಾ ।
ಲೋಕಯೋರುಭಯೋಃ ಶಕ್ಯಂ ನಿತ್ಯದಾ ಸುಖಮೇಧಿತುಮ್ ॥ ೩೬

ನಿವರ್ತ್ಯಮಾನೋ ರಾಮೇಣ ಸುಮಂತ್ರಃ ಶೋಕಕರ್ಶಿತಃ ।
ತತ್ಸರ್ವಂ ವಚನಂ ಶ್ರುತ್ವಾ ಸ್ನೇಹಾತ್ ಕಾಕುತ್ಸ್ಥ ಮಬ್ರವೀತ್॥ ೩೭

ಯದಹಂ ನೋಪಚಾರೇಣ ಬ್ರೂಯಾಂ ಸ್ನೇಹಾದವಿಕ್ಲವಮ್ ।
ಭಕ್ತಿಮಾನಿತಿ ತತ್ತ್ವಾವದ್ವಾಕ್ಯಂ ತ್ವಂ ಕ್ಷಂತುಮರ್ಹಸಿ ॥ ೩೮

ಕಥಂ ಹಿ ತ್ವದ್ವಿಹೀನೋಽಹಂ ಪ್ರತಿಯಾಸ್ಯಾಮಿ ತಾಂ ಪುರೀಮ್ ।
ತವ ತಾವದ್ವಿಯೋಗೇನ ಪುತ್ರಶೋಕಾಕುಲಾಮಿವ ॥ ೩೯

ಸರಾಮಮಪಿ ತಾವನ್ಮೇ ರಥಂ ದೃಷ್ಟ್ವಾ ತದಾ ಜನಃ।
ವಿನಾ ರಾಮಂ ರಥಂ ದೃಷ್ಟ್ವಾ ವಿದೀರ್ಯೇತಾಪಿ ಸಾ ಪುರೀ ॥ ೪೦

---

ಭಾವವನ್ನಿಡದೆ ನಡೆದುಕೊ. ನಿನ್ನ ತಾಯಿಯಾದ ಕೈಕೇಯಿಯನ್ನೂ ಸುಮಿತ್ರೆಯನ್ನೂ ಹೇಗೆ ವಿಶೇಷವಾಗಿ ನೋಡಿಕೊಳ್ಳುವೆಯೊ ಹಾಗೆ ನನ್ನ ತಾಯಿಯಾದ ಕೌಸಲ್ಯಾದೇವಿಯನ್ನೂ ನೋಡಿಕೊಳ್ಳಬೇಕು (೩೪-೩೫). ತಂದೆಗೆ ಪ್ರಿಯವಾದುದನ್ನು ಬಯಸುತ್ತ ನೀನು ಯುವರಾಜಾಧಿಕಾರವನ್ನು ನಿರ್ವಹಿಸುತ್ತಿದ್ದರೆ, ಇಹಪರ ಲೋಕಗಳಲ್ಲಿ ಸುಖದಿಂದ ಏಳ್ಗೆ ಹೊಂದಬಹುದು. ಎಂದು ಹೇಳು" ಎಂಬುದಾಗಿ ಶ್ರೀರಾಮನು ನುಡಿದನು (೩೬). ಹಿಂದಿರುಗಿ ಹೋಗ ಬೇಕೆಂದು ಸುಮಂತ್ರನಿಗೆ ಶ್ರೀರಾಮನು ಸೂಚಿಸಲು ಆತನು ಶೋಕದಿಂದ ಕುಗ್ಗಿ ಹೋದನು. ಅನಂತರ ಸ್ನೇಹದಿಂದ ಶ್ರೀರಾಮನನ್ನು ಕುರಿತು ಹೀಗೆಂದನು : "ರಾಜಪುತ್ರ, ಈಗ ನಾನು ಉಪಚಾರಕ್ಕಾಗಿ ಹೇಳುತ್ತಿಲ್ಲ. ನಿನ್ನಲ್ಲಿರುವ ಪ್ರೀತಿಯಿಂದ ನಿರ್ಭಯವಾಗಿ ಒಂದು ಮಾತನ್ನು ಹೇಳುವೆನು. ಭಕ್ತಿಯಿಂದ ಹೀಗೆ ಮಾತನಾಡುವೆನೆಂದು ತಿಳಿದು ನನ್ನನ್ನು ಕ್ಷಮಿಸು (೩೭-೩೮). ನಿನ್ನನ್ನು ಬಿಟ್ಟು ನಾನು ಅಯೋಧ್ಯೆಗೆ ಹೋಗುವುದು ಹೇಗೆ? ಪುತ್ರಶೋಕದಿಂದ ಕಂಗೆಟ್ಟಂತೆ ಆ ನಗರವು ದುಃಖದಲ್ಲಿ ಮುಳುಗಿದೆ. ನಗರವಾಸಿಗಳು ರಾಮಸಹಿತವಾಗಿದ್ದ ನನ್ನ ರಥವನ್ನು ಆಗ ನೋಡಿದ್ದರು.

ದೈನ್ಯಂ ಹಿ ನಗರೀ ಗಚ್ಛೇದ್ದೃಷ್ಟ್ವಾ ಶೂನ್ಯಮಿಮಂ ರಥಮ್ ।
ಸೂತಾವಶೇಷಂ ಸ್ವಂ ಸೈನ್ಯಂ ಹತವೀರಮಿಹಾಹವೇ ॥ ೪೧

ದೂರೇಽಪಿ ನಿವಸಂತಂ ತ್ವಾಂ ಮಾನಸೇನಾಗ್ರತಃ ಸ್ಥಿತಮ್ ।
ಚಿಂತಯಂತ್ಯೋಽದ್ಯ ನೂನಂ ತ್ವಾಂ ನಿರಾಹಾರಾಃ ಕೃತಾಃ ಪ್ರಜಾಃ ॥

ದೃಷ್ಟಂ ತದ್ಧಿ ತ್ವಯಾ ರಾಮ ಯಾದೃಶಂ ತ್ವತ್ಪ್ರವಾಸನೇ ।
ಪ್ರಜಾನಾಂ ಸಂಕುಲಂ ವೃತ್ತಂ ತ್ವಚ್ಛೋಕಕ್ಲಾಂತಚೇತಸಾಮ್ ॥

ಆರ್ತನಾದೋ ಹಿ ಯಃ ಪೌರೈರುನ್ಮುಕ್ತಸ್ತ್ವತ್ಪ್ರವಾಸನೇ ।
ಸರಥಂ ಮಾಂ ನಿಶಾಮ್ಯೈವ ಕುರ್ಯುಃ ಶತಗುಣಂ ತತಃ ॥ ೪೪

ಅಹಂ ಕಿಂ ಚಾಪಿ ವಕ್ಷ್ಯಾಮಿ ದೇವೀಂ ತವ ಸುತೋ ಮಯಾ ।
ನೀತೋಽಸೌ ಮಾತುಲಕುಲಂ ಸಂತಾಪಂ ಮಾ ಕೃಥಾ ಇತಿ ॥ ೪೫

ಅಸತ್ಯಮಪಿ ನೈವಾಹಂ ಬ್ರೂಯಾಂ ವಚನಮೀದೃಶಮ್ ।
ಕಥಮಪ್ರಿಯಮೇವಾಹಂ ಬ್ರೂಯಾಂ ಸತ್ಯಮಿದಂ ವಚಃ ॥ ೪೬

---

ಈಗ ರಥವು ರಾಮಶೂನ್ಯವಾಗಿರುವುದನ್ನು ಕಂಡು ಅವರಿಗೆ ಎದೆಯೊಡೆದು ಹೋದೀತು (೩೯-೪೦). ಶೂನ್ಯವಾದ ಆ ರಥವನ್ನು ನೋಡಿ ಅಯೋಧ್ಯಾಪುರಿಯು ದೈನ್ಯದಿಂದ ಕುಗ್ಗಿಹೋಗುವುದು. ಯುದ್ಧದಲ್ಲಿ ರಥಿಕವೀರನು ಹತನಾದಾಗ ಸಾರಥಿಯು ಮಾತ್ರವೇ ಉಳಿದಿರುವ ತಮ್ಮ ರಥವನ್ನು ಸೈನ್ಯವು ನೋಡಿದಂತಾಗುವುದು (೪೧). ನೀನು ದೂರದಲ್ಲಿದ್ದರೂ ಕಣ್ಣೆದುರಿಗಿರುವಂತೆ ಮನಸ್ಸಿನಲ್ಲಿ ಕಲ್ಪಿಸಿಕೊಂಡು, ನಿನ್ನನ್ನೇ ಪ್ರಜೆಗಳು ಚಿಂತಿಸುತ್ತಿದ್ದಾರೆ. ನಿಶ್ಚಯವಾಗಿಯೂ ಅವರು ಆಹಾರವನ್ನು ಸೇವಿಸಿಲ್ಲ. ಶ್ರೀರಾಮ, ನೀನು ಅಯೋಧ್ಯೆಯಿಂದ ಹೊರಡುವಾಗ ನಿನ್ನ ವಿರಹಶೋಕದಿಂದ ಖಿನ್ನರಾದ ಜನರು ಹೇಗೆ ಆರ್ತನಾದ ಮಾಡಿದರೆಂಬುದನ್ನು ನೀನೇ ನೋಡಿದ್ದೀಯೆ (೪೨-೪೩). ಈಗ ನಾನು ಬರಿಯ ರಥವನ್ನು ನಡೆಸಿಕೊಂಡು ಹೋದರೆ, ನನ್ನನ್ನು ನೋಡಿದಕೂಡಲೆ ಅದಕ್ಕೆ ನೂರರಷ್ಟು ಹೆಚ್ಚಾಗಿ ಆರ್ತನಾದಮಾಡಿ ಗೋಳಾಡುವರು. ಕೌಸಲ್ಯಾದೇವಿಯನ್ನು ನೋಡಿ ಏನೆಂದು ಹೇಳಲಿ ? ನಿನ್ನ ಕುಮಾರನನ್ನು ಸೋದರಮಾವನ ಮನೆಯಲ್ಲಿ ಬಿಟ್ಟು ಬಂದಿದ್ದೇನೆ, ದುಃಖಿಸಬೇಡ' ಎಂದು ಹೇಳಲೆ ? (೪೪-೪೫). ಈ ಮಾತು

ಮಮ ತಾವನ್ನಿಯೋಗಸ್ಥಾ ಸ್ತ್ವದ್ಬಂಧುಜನವಾಹಿನಃ ।
ಕಥಂ ರಥಂ ತ್ವಯಾ ಹೀನಂ ಪ್ರವಕ್ಷ್ಯಂತಿ ಹಯೋತ್ತಮಾಃ ॥ ೪೭

ತನ್ನ ಶಕ್ಷ್ಯಾಮ್ಯಹಂ ಗಂತುಮಯೋಧ್ಯಂ ತ್ವದೃತೇಽನಘ ।
ವನವಾಸಾನುಯಾನಾಯ ಮಾಮನುಜ್ಞಾತುಮರ್ಹಸಿ ॥ ೪೮

ಯದಿ ಮೇ ಯಾಚಮಾನಸ್ಯ ತ್ಯಾಗಮೇವ ಕರಿಷ್ಯಸಿ ।
ಸರಥೋಽಗ್ನಿಂ ಪ್ರವೇಕ್ಷ್ಯಾಮಿ ತ್ಯಕ್ತಮಾತ್ರ ಇಹ ತ್ವಯಾ ॥ ೪೯

ಭವಿಷ್ಯಂತಿ ವನೇ ಯಾನಿ ತಪೋವಿಘ್ನಕರಾಣಿ ತೇ ।
ರಥೇನ ಪ್ರತಿಬಾಧಿಷ್ಯೇ ತಾನಿ ಸತ್ತ್ವಾನಿ ರಾಘವ ॥ ೫೦

ತ್ವತ್ಕೃತೇನ ಮಯಾವಾಪ್ತಂ ರಥಚರ್ಯಾಕೃತಂ ಸುಖಮ್ ।
ಆಶಂಸೇ ತ್ವತ್ಕೃತೇನಾಹಂ ವನವಾಸಕೃತಂ ಸುಖಮ್ ॥ ೫೧

ಪ್ರಸೀದೇಚ್ಛಾಮಿ ತೇಽರಣ್ಯೇ ಭವಿತುಂ ಪ್ರತ್ಯನಂತರಃ ।
ಪ್ರೀತ್ಯಾಭಿಹಿತಮಿಚ್ಛಾಮಿ ಭವ ಮೇ ಪ್ರತ್ಯನಂತರಃ ॥ ೫೨

---

ಪ್ರಿಯವಾಗಿ ಕಂಡರೂ ಅಸತ್ಯವಾದ್ದರಿಂದ ಇದನ್ನು ಹೇಳಲಾರೆ. ಅರಣ್ಯದಲ್ಲಿ ಬಿಟ್ಟುಬಂದೆನೆಂಬ ಮಾತು ಸತ್ಯವಾದರೂ ಅಪ್ರಿಯವಾದ್ದರಿಂದ ಇದನ್ನೂ ಹೇಳಲಾರೆ (೪೬).. ಬರುವಾಗ ಈ ಉತ್ತಮಾಶ್ವಗಳು ರಥವನ್ನು ಇಲ್ಲಿಗೆ ತಂದವು. ನೀನೂ ನಿನ್ನ ಪ್ರೀತಿಪಾತ್ರರಾದ ಸೀತಾಲಕ್ಷ್ಮಣರೂ ಕುಳಿತಿದ್ದುದರಿಂದ ಇವು ನನ್ನ ಹತೋಟಿಗೆ ಒಳಪಟ್ಟವು. ಈಗ ನೀನಿಲ್ಲದಿದ್ದರೆ, ಈ ಅಶ್ವಗಳು ರಥವನ್ನು ಎಳೆದುಕೊಂಡುಹೋಗುತ್ತವೆಯೆ ? (೪೭). ಆದ್ದರಿಂದ, ಶ್ರೀರಾಮ, ನಿನ್ನನ್ನು ಬಿಟ್ಟು ನಾನು ಅಯೋಧ್ಯೆಗೆ ಹೋಗಲಾರೆ. ನಿನ್ನೊಡನೆ ವನವಾಸದಲ್ಲಿರಲು ನನಗೆ ಅನುಜ್ಞೆಯನ್ನು ಕೊಡು. ಇಷ್ಟು ಬೇಡಿಕೊಂಡರೂ ನನ್ನನ್ನು ತ್ಯಜಿಸುವುದೇ ದಿಟವಾದರೆ, ನೀನು ಅತ್ತ ತಿರುಗಿದೊಡನೆ ರಥಸಹಿತವಾಗಿ ನಾನು ಅಗ್ನಿಯಲ್ಲಿ ಧುಮುಕುವೆನು (೪೮-೪೯). ರಾಘವ, ವನದಲ್ಲಿ ನಿನ್ನ ತಪಸ್ಸಿಗೆ ಅಡ್ಡಿಪಡಿಸುವ ಕ್ರೂರ ಜಂತುಗಳನ್ನು ನಾನು ರಥದಲ್ಲಿ ಕುಳಿತು ನಿವಾರಿಸುವೆನು. ನಿನ್ನ ಅನುಗ್ರಹದಿಂದ ವನದಲ್ಲಿ ನಿನ್ನೊಡನೆ ವಾಸಮಾಡುವ ಸುಖವನ್ನು ಬಯಸುವೆನು (೫೦-೫೧). ಶ್ರೀರಾಮ, ಪ್ರಸನ್ನನಾಗು. ಅರಣ್ಯದಲ್ಲಿ ನಿನ್ನ ಸಮೀಪ

ಇಮೇ ಚಾಪಿ ಹಯಾ ವೀರ ಯದಿ ತೇ ವನವಾಸಿನಃ ।
ಪರಿಚರ್ಯಾಂ ಕರಿಷ್ಯಂತಿ ಪ್ರಾಪ್ಸ್ಯಂತಿ ಪರಮಾಂ ಗತಿಮ್ ॥ ೫೩

ತವ ಶುಶ್ರೂಷಣಂ ಮೂರ್ಧ್ನಾ ಕರಿಷ್ಯಾಮಿ ವನೇ ವಸನ್ ।
ಅಯೋಧ್ಯಾಂ ದೇವಲೋಕಂ ವಾ ಸರ್ವಥಾ ಪ್ರಜಹಾಮ್ಯಹಮ್ ॥

ನ ಹಿ ಶಕ್ಯಾ ಪ್ರವೇಷ್ಟುಂ ಸಾ ಮಯಾಯೋಧ್ಯಾ ತ್ವಯಾ ವಿನಾ ।
ರಾಜಧಾನೀ ಮಹೇಂದ್ರಸ್ಯ ಯಥಾ ದುಷ್ಕೃತಕರ್ಮಣಾ ॥ ೫೫

ವನವಾಸೇ ಕ್ಷಯಂ ಪ್ರಾಪ್ತೇ ಮಮೈಷ ಹಿ ಮನೋರಥಃ ।
ಯದನೇನ ರಥೇನೈವ ತ್ವಾಂ ವಹೇಯಂ ಪುರೀಂ ಪುನಃ ॥ ೫೬

ಚತುರ್ದಶ ಹಿ ವರ್ಷಾಣಿ ಸಹಿತಸ್ಯ ತ್ವಯಾ ವನೇ ।
ಕ್ಷಣಭೂತಾನಿ ಯಾಸ್ಯಂತಿ ಶತಸಂಖ್ಯಾನ್ಯತೋಽನ್ಯಥಾ ॥ ೫೭

ಭೃತ್ಯವತ್ಸಲ ತಿಷ್ಠಂತಂ ಭರ್ತೃಪುತ್ರಗತೇ ಪಥಿ ।
ಭಕ್ತಂ ಭೃತ್ಯಂ ಸ್ಥಿತಂ ಸ್ಥಿತ್ವಾಂ ತ್ವಂ ನ ಮಾಂ ಹಾತುಮರ್ಹಸಿ॥ ೫೮

---

ದಲ್ಲಿರಲು ಇಚ್ಛಿಸುತ್ತೇನೆ. 'ನನ್ನ ಸಮೀಪದಲ್ಲಿರು' ಎಂಬ ಒಂದು ವಾಕ್ಯವನ್ನು ಪ್ರೀತಿಯಿಂದ ಹೇಳಿಬಿಡು ! (೫೨). ವೀರಾಗ್ರಣಿ, ಈ ಕುದುರೆಗಳು ವನದಲ್ಲಿ ನಿನ್ನ ಪರಿಚರ್ಯೆಯನ್ನು ಮಾಡಿದರೆ ಉತ್ತಮಗತಿಯನ್ನು ಪಡೆಯುತ್ತವೆ. ನಾನೂ ವನದಲ್ಲಿದ್ದು ನಿನ್ನ ಸೇವೆಯನ್ನು ಶಿರಸಾವಹಿಸಿ ಮಾಡುವೆನು. ಇದನ್ನು ಬಿಟ್ಟು ನನಗೆ ಅಯೋಧ್ಯೆಯೂ ಬೇಡ; ದೇವಲೋಕವೂ ಬೇಡ (೫೩-೫೪). ದುಷ್ಕರ್ಮಿಯು ದೇವೇಂದ್ರನ ರಾಜಧಾನಿಯನ್ನು ಪ್ರವೇಶಿಸಲಾರ. ಹಾಗೆ ನಿನ್ನನ್ನು ಇಲ್ಲಿ ಬಿಟ್ಟು ನಾನು ಅಯೋಧ್ಯೆಯನ್ನು ಪ್ರವೇಶಿಸಲಾರೆ. ಶ್ರೀರಾಮ, ವನವಾಸವು ಮುಗಿದಮೇಲೆ ನಿನ್ನನ್ನು ಇದೇ ರಥದಲ್ಲಿ ಕುಳ್ಳಿರಿಸಿಕೊಂಡು ಅಯೋಧ್ಯೆಗೆ ಕರೆದೊಯ್ಯ ಬೇಕೆಂಬುದು ನನ್ನ ಅಂತರಂಗದ ಆಸೆ (೫೫-೫೬). ನಿನ್ನ ಜೊತೆಗೆ ಕಾಡಿನಲ್ಲಿದ್ದರೆ ಹದಿನಾಲ್ಕು ವರ್ಷಗಳು ನನಗೆ ನಿಮಿಷಗಳಂತೆ ಕಳೆದು ಹೋಗುತ್ತವೆ. ನೀನಿಲ್ಲದಿದ್ದರೆ ಈ ಹದಿನಾಲ್ಕುವರ್ಷಗಳೇ ನೂರುವರ್ಷಗಳಾಗು ತ್ತವೆ. ಹೇ ಭೃತ್ಯವತ್ಸಲ, ನಾನು ನಿನ್ನ ಭೃತ್ಯ; ನಿನ್ನ ಭಕ್ತ. ನನ್ನ ಪ್ರಭುವಿನ ಪುತ್ರನಾದ ನೀನು ಹೋದದಾರಿಯಲ್ಲಿ ಹೋಗುವುದು ನನಗೆ ಉಚಿತ. ಔಚಿತ್ಯದಿಂದ

ಏವಂ ಬಹುವಿಧಂ ದೀನಂ ಯಾಚಮಾನಂ ಪುನಃ ಪುನಃ ।
ರಾಮೋ ಭೃತ್ಯಾನುಕಂಪೀ ತು ಸುಮಂತ್ರಮಿದಮಬ್ರವೀತ್ ॥ ೫೯

ಜಾನಾಮಿ ಪರಮಾಂ ಭಕ್ತಿಂ ಮಯಿ ತೇ ಭರ್ತೃವತ್ಸಲ ।
ಶೃಣು ಚಾಪಿ ಯದರ್ಥಂ ತ್ವಾಂ ಪ್ರೇಷಯಾಮಿ ಪುರೀಮಿತಃ ॥ ೬೦

ನಗರೀಂ ತ್ವಾಂ ಗತಂ ದೃಷ್ಟ್ವಾ ಜನನೀ ಮೇ ಯವೀಯಸೀ ।
ಕೈಕೇಯೀ ಪ್ರತ್ಯಯಂ ಗಚ್ಛೇದಿತಿ ರಾಮೋ ವನಂ ಗತಃ । ೬೧

ಪರಿತುಷ್ಟಾ ಹಿ ಸಾ ದೇವೀ ವನವಾಸಂ ಗತೇ ಮಯಿ ।
ರಾಜಾನಂ ನಾತಿಶಂಕೇತ ಮಿಥ್ಯಾವಾದೀತಿ ಧಾರ್ಮಿಕಮ್ ॥ ೬೨

ಏಷ ಮೇ ಪ್ರಥಮಃ ಕಲ್ಪೋ ಯದಂಬಾ ಮೇ ಯವೀಯಸೀ ।
ಭರತಾರಕ್ಷಿತಂ ಸ್ಫೀತಂ ಪುತ್ರರಾಜ್ಯಮವಾಪ್ನುಯಾತ್ ॥ ೬೩

ಮಮ ಪ್ರಿಯಾರ್ಥಂ ರಾಜ್ಞಶ್ಚ ಸರಥಸ್ತ್ವಂ ಪುರೀಂ ವ್ರಜ ।
ಸಂದಿಶ್ಯಶ್ಚಾಪಿ ಯಾನರ್ಥಾಂಸ್ತಾಂಸ್ತಾ ಬ್ರೂಯಾಸ್ತಥಾ ತಥಾ ॥

---

ವರ್ತಿಸುವ ನನ್ನನ್ನು ಕೈಬಿಡಬೇಡ"ಎಂದನು (೫೭-೫೮). ಹೀಗೆ ಬಹು ವಿಧದಲ್ಲಿ ದೈನ್ಯದಿಂದ ಪ್ರಾರ್ಥಿಸುತ್ತಿದ್ದ ಸುಮಂತ್ರನನ್ನು ನೋಡಿ ಆಶ್ರಿತವತ್ಸಲನಾದ ಶ್ರೀರಾಮನು ಹೇಳಿದನು :"ಸುಮಂತ್ರ, ನಿನಗೆ ನನ್ನಲ್ಲಿ ಪರಮ ಪ್ರೀತಿಯಿದೆ ಎಂಬುದನ್ನು ನಾನು ಬಲ್ಲೆ. ನೀನು ಸ್ವಾಮಿಭಕ್ತ. ಆದರೆ ನಿನ್ನನ್ನು ಅಯೋಧ್ಯೆಗೆ ಏಕೆ ಕಳಿಸುತ್ತೇನೆ ಎಂಬುದನ್ನು ಕೇಳು (೫೯-೬೦). ನೀನು ನಗರಕ್ಕೆ ಹಿಂದಿರುಗಿ ಬಂದುದನ್ನು ನೋಡಿದರೆ, ನನ್ನ ಚಿಕ್ಕಮ್ಮನಾದ ಕೈಕೇಯಿಗೆ ರಾಮನು ಕಾಡಿಗೆ ಹೋದನೆಂದು ನಂಬಿಕೆಯಾಗುವುದು. ನಾನು ಕಾಡಿಗೆ ಹೋದೆನೆಂಬುದು ದೃಢವಾದರೆ ಅವಳ ಮನಸ್ಸಿಗೆ ನೆಮ್ಮದಿಯಾಗುತ್ತದೆ. ಆಗ ಧಾರ್ಮಿಕನಾದ ಮಹಾರಾಜನು ಸುಳ್ಳುಹೇಳಿದನೆಂದು ಅವಳು ಶಂಕಿಸಲಾರಳು(೬೧-೬೨). ವಿಶಾಲವಾದ ರಾಜ್ಯವನ್ನು ತನ್ನ ಮಗನಾದ ಭರತನು ಪಾಲಿಸುವುದನ್ನು ನೋಡಿ ನನ್ನ ಚಿಕ್ಕಮ್ಮನು ಸಂತೋಷಪಡಲಿ. ಇದೇ ನನ್ನ ಮುಖ್ಯೋದ್ದೇಶ. ಸುಮಂತ್ರ, ನನಗೂ ಮಹಾರಾಜನಿಗೂ ಪ್ರಿಯವಾದುದನ್ನು ನೀನು ಮಾಡುವುದಾದರೆ, ರಥವನ್ನು ತೆಗೆದುಕೊಂಡು ಅಯೋಧ್ಯೆಗೆ ತೆರಳು. ನಾನು ಹೇಳಿಕಳಿಸಿದ ವಿಷಯಗಳನ್ನು ಯಥಾವತ್ತಾಗಿ

ಇತ್ಯುಕ್ತ್ವಾ ವಚನಂ ಸೂತಂ ಸಾಂತ್ವಯಿತ್ವಾ ಪುನಃ ಪುನಃ ।
ಗುಹಂ ವಚನಮಕ್ಲೀಬೋ ರಾಮೋ ಹೇತುಮದಬ್ರವೀತ್ ॥ ೬೫

ನೇದಾನೀಂ ಗುಹ ಯೋಗ್ಯೋಽಯಂ ವಾಸೋ ಮೇ ಸಜನೇ ವನೇ।
ಅವಶ್ಯಂ ಹ್ಯಾಶ್ರಮೇ ವಾಸಃ ಕರ್ತವ್ಯಸ್ತದ್ಗತೋ ವಿಧಿಃ ॥ ೬೬

ಸೋಽಹಂ ಗೃಹೀತ್ವಾ ನಿಯಮಂ ತಪಸ್ವಿಜನಭೂಷಣಮ್ ।
ಹಿತಕಾಮಃ ಪಿತುರ್ಭಾರ್ಯಾಯಾಃ ಸೀತಾಯಾ ಲಕ್ಷ್ಮಣಸ್ಯ ಚ ॥ ೬೭

ಜಟಾಃ ಕೃತ್ವಾ ಗಮಿಷ್ಯಾಮಿ ನ್ಯಗ್ರೋಧಕ್ಷೀರಮಾನಯ ।
ತತ್ಕ್ಷೀರಂ ರಾಜಪುತ್ರಾಯ ಗುಹಃ ಕ್ಷಿಪ್ರಮುಪಾಹರತ್ ॥ ೬೮

ಲಕ್ಷ್ಮಣಸ್ಯಾತ್ಮನಶ್ಚೈವ ರಾಮಸ್ತೇನಾಕರೋಜ್ಜಟಾಃ ।
ದೀರ್ಘಬಾಹುರ್ನರವ್ಯಾಘ್ರೋ ಜಟಿಲತ್ವಮಧಾರಯತ್ ॥ ೬೯

ತೌ ತದಾ ಚೀರವಸನೌ ಜಟಾಮಂಡಲಧಾರಿಣೌ ।
ಅಶೋಭೇತಾಮೃಷಿಸಮೌ ಭ್ರಾತರೌ ರಾಮಲಕ್ಷ್ಮಣೌ॥ ೭೦

---

ಅವರೆಲ್ಲರಿಗೂ ತಿಳಿಸು" ಎಂದು ನುಡಿದನು (೬೩-೬೪). ಹೀಗೆ ಅನೇಕ ವಿಧದಲ್ಲಿ ನುಡಿದು ಸುಮಂತ್ರನನ್ನು ಸಂತೈಸಿ ಆ ಧೀರನು ಗುಹನ ಕಡೆಗೆ ತಿರುಗಿ "ಗುಹ, ಈಗ ನಾನು ಜನಸಂಚಾರವಿರುವ ಈ ಅರಣ್ಯದಲ್ಲಿ ವಾಸ ಮಾಡುವುದು ಯೋಗ್ಯವಲ್ಲ. ನಾನು ಅವಶ್ಯವಾಗಿ ಆಶ್ರಮದಲ್ಲಿ ವಾಸಮಾಡಬೇಕು. ತಂದೆಯ ಆಜ್ಞೆಯೇ ಹಾಗಿದೆ (೬೫-೬೬). ನನ್ನ ತಂದೆಗೂ ಸೀತಾಲಕ್ಷ್ಮಣರಿಗೂ ವಿಶೇಷವಾದ ಶ್ರೇಯಸ್ಸಾಗಲೆಂದು ತಪಸ್ವಿಗಳಿಗೆ ಯೋಗ್ಯವಾದ ವ್ರತವನ್ನು ಕೈಗೊಳ್ಳುವೆನು. ಆದ್ದರಿಂದ ಜಟೆಯನ್ನು ಧರಿಸಿ ಮುಂದೆ ಹೋಗುವೆನು. ಆಲದ ಹಾಲನ್ನು ತರಿಸು" ಎಂದನು. ಗುಹನು ಕೂಡಲೆ ಆ ರಾಜಕುಮಾರನಿಗೆ ಆಲದ ಹಾಲನ್ನು ತರಿಸಿಕೊಟ್ಟನು (೬೭-೬೮). ಅದರಿಂದ ಲಕ್ಷ್ಮಣನೂ ಶ್ರೀರಾಮನೂ ಜಟೆಗಳನ್ನು ನಿರ್ಮಿಸಿ ಕೊಂಡರು. ಹೀಗೆ ಆಜಾನುಬಾಹುವಾದ ಆ ಪುರುಷೋತ್ತಮನು ಜಟಾಧಾರಿ ಯಾದನು. ಅಣ್ಣತಮ್ಮಂದಿರಾದ ರಾಮಲಕ್ಷ್ಮಣರು ವಲ್ಕಲವನ್ನು ಧರಿಸಿ ಜಟಾಧಾರಿ

ತತೋ ವೈಖಾನಸಂ ಮಾರ್ಗಮಾಸ್ಥಿತಃ ಸಹಲಕ್ಷ್ಮಣಃ ।
ವ್ರತಮಾದಿಷ್ಟವಾನ್ ರಾಮಃ ಸಹಾಯಂ ಗುಹಮಬ್ರವೀತ್ ॥ ೭೧

ಅಪ್ರಮತ್ತೋ ಬಲೇ ಕೋಶೇ ದುರ್ಗೇ ಜನಪದೇ ತಥಾ ।
ಭವೇಥಾ ಗುಹ ರಾಜ್ಯಂ ಹಿ ದುರಾರಕ್ಷತಮಂ ಮತಮ್ ॥ ೭೨

ತತಸ್ತಂ ಸಮನುಜ್ಞಾಯ ಗುಹಮಿಕ್ಷ್ವಾಕುನಂದನಃ ।
ಜಗಾಮ ತೂರ್ಣಮವ್ಯಗ್ರಃ ಸಭಾರ್ಯಃ ಸಹಲಕ್ಷ್ಮಣಃ ॥ ೭೩

ಸ ತು ದೃಷ್ಟ್ವಾ ನದೀತೀರೇ ನಾವಮಿಕ್ಷ್ವಾಕುನಂದನಃ ।
ತಿತೀರ್ಷುಃ ಶೀಘ್ರಗಾಂ ಗಂಗಾಮಿದಂ ಲಕ್ಷ್ಮಣಮಬ್ರವೀತ್ ॥ ೭೪

ಆರೋಹ ತ್ವಂ ನರವ್ಯಾಘ್ರ ಸ್ಥಿತಾಂ ನಾವಮಿಮಾಂ ಶನೈಃ ।
ಸೀತಾಂ ಚಾರೋಪಯಾನ್ವಕ್ಷಂ ಪರಿಗೃಹ್ಯ ಮನಸ್ವಿನೀಮ್ ॥ ೭೫

ಸ ಭ್ರಾತುಃ ಶಾಸನಂ ಶ್ರುತ್ವಾ ಸರ್ವಮಪ್ರತಿಕೂಲಯನ್ ।
ಆರೋಪ್ಯ ಮೈಥಿಲೀಂ ಪೂರ್ವಮಾರುರೋಹಾತ್ಮವಾಂಸ್ತತಃ ॥ ೭೬

---

ಗಳಾಗಿ ಋಷಿಗಳಂತೆ ಶೋಭಿಸಿದರು (೬೯-೭೦). ಈ ರೀತಿಯಲ್ಲಿ ಶ್ರೀರಾಮನು ಲಕ್ಷ್ಮಣನೊಡನೆ ವೈಖಾನಸವ್ರತವನ್ನಂಗೀಕರಿಸಿ ಮಿತ್ರನಾದ ಗುಹನನ್ನು ಕುರಿತು "ಮಿತ್ರ–ಗುಹ, ನಿನ್ನ ಸೈನ್ಯ ಬೊಕ್ಕಸ ಕೋಟೆ ಕೊತ್ತಲುಗಳು ಮತ್ತು ರಾಷ್ಟ್ರ–ಇವುಗಳನ್ನು ಜಾಗರೂಕನಾಗಿ ನೋಡಿಕೊಳ್ಳುತ್ತಿರು. ರಾಜ್ಯಪಾಲನೆಯೆಂಬುದು ಕಠಿಣವಾದ ಕೆಲಸ" ಎಂದನು (೭೧-೭೨). ಅನಂತರ ಆ ಇಕ್ಷ್ವಾಕುನಂದನನು ಗುಹನನ್ನು ಬೀಳ್ಕೊಂಡು ಸೀತಾಲಕ್ಷ್ಮಣಸಮೇತನಾಗಿ ನಿಶ್ಚಿಂತೆಯಿಂದ ಬೇಗಬೇಗನೆ ಹೆಜ್ಜೆಯಿಡುತ್ತ ಮುಂದಕ್ಕೆ ಹೊರಟನು(೭೩). ಮುಂದೆ ನದೀತೀರದಲ್ಲಿ ನಾವೆಯನ್ನು ನೋಡಿ ಶೀಘ್ರಗಾಮಿನಿಯಾದ ಗಂಗೆಯನ್ನು ದಾಟುವುದಕ್ಕಾಗಿ ಲಕ್ಷ್ಮಣನನ್ನು ಕರೆದು "ಲಕ್ಷ್ಮಣ, ಇಲ್ಲಿ ನಿಂತಿರುವ ನಾವೆಯನ್ನು ಹತ್ತು. ಆಮೇಲೆ ಧೀರೆಯಾದ ಸೀತೆಯನ್ನು ಕೈಹಿಡಿದು ಮೆಲ್ಲಗೆ ಮೇಲಕ್ಕೇರಿಸು!" ಎಂದನು (೭೪-೭೫). ಅಣ್ಣನ ಸೂಚನೆಯನ್ನು ಕೇಳಿ ಗಟ್ಟಿಗನಾದ ಲಕ್ಷ್ಮಣನು ಸೀತಾದೇವಿ ಯನ್ನೇ ಮೊದಲು ನಾವೆಯಲ್ಲಿ ಹತ್ತಿಸಿ ಆಮೇಲೆ ತಾನು ನಾವೆಯನ್ನೇರಿದನು! ಅವನು ಶ್ರೀರಾಮನ ಆಶಯಕ್ಕೆ ವಿರೋಧವಾಗಿ ನಡೆಯ

ಅಥಾರುರೋಹ ತೇಜಸ್ವೀ ಸ್ವಯಂ ಲಕ್ಷ್ಮಣಪೂರ್ವಜಃ ।
ತತೋ ನಿಷಾದಾಧಿಪತಿರ್ಗುಹೋ ಜ್ಞಾತೀನಚೋದಯತ್ ॥ ೭೭

ರಾಘವೋಽಪಿ ಮಹಾತೇಜಾ ನಿವಮಾರುಹ್ಯ ತಾಂ ತತಃ।
ಬ್ರಹ್ಮವತ್ ಕ್ಷತ್ರವಚ್ಚೈವ ಜಜಾಪ ಹಿತಮಾತ್ಮನಃ ॥ ೭೮

ಆಚಮ್ಯ ಚ ಯಥಾಶಾಸ್ತ್ರಂ ನದೀಂ ತಾಂ ಸಹ ಸೀತಯಾ ।
ಪ್ರಾಣಮತ್ ಪ್ರೀತಿಸಂಹೃಷ್ಟೋ ಲಕ್ಷ್ಮಣಶ್ಚಾಮಿತಪ್ರಭಃ ॥ ೭೯

ಅನುಜ್ಞಾಯ ಸುಮಂತ್ರಂ ಚ ಸಬಲಂ ಚೈವ ತಂ ಗುಹಮ್ ।
ಆಸ್ಥಾಯ ನಾವಂ ರಾಮಸ್ತು ಚೋದಯಾಮಾಸ ನಾವಿಕಾನ್ ॥ ೮೦

ತತಸ್ತೈಶ್ಚೋದಿತಾ ತಾ ನೌಃ ಕರ್ಣಧಾರಸಮಾಹಿತಾ ।
ಶಿವಸ್ವ್ಯವೇಗಾಭಿಗತಾ ಗಂಗಾಸಲಿಲಮತ್ಯಗಾತ್॥ ೮೧

---

ಲಿಲ್ಲ!* (೭೬). ಅನಂತರ ತೇಜಸ್ವಿಯಾದ ಶ್ರೀರಾಮನು ನಾವೆಯನ್ನೇರಲು, ನಾವೆಯನ್ನು ನಡೆಸುವಂತೆ ಗುಹನು ತನ್ನ ಕಡೆಯವರಿಗೆ ಸೂಚಿಸಿದನು. ಶ್ರೀರಾಮನು ನಾವೆಯನ್ನೇರಿದೊಡನೆ ಬ್ರಾಹ್ಮಣಕ್ಷತ್ರಿಯರು ಅನುಸಂಧಾನ ಮಾಡಬೇಕಾದ 'ದೈವೀಂ ನಾವಮ್....'ಎಂಬ ಆತ್ಮಕಲ್ಯಾಣಕರವಾದ ಮಂತ್ರವನ್ನು ಜಪಿಸಿದನು (೭೭-೭೮). ಅವನು ಸಂತೋಷದಿಂದ ಸೀತಾ ಸಮೇತನಾಗಿ ಆಚಮನಮಾಡಿ ಶಾಸ್ತ್ರೋಕ್ತವಿಧಾನದಿಂದ ಗಂಗಾನದಿಯನ್ನು ವಂದಿಸಿದನು. ತೇಜಸ್ವಿಯಾದ ಲಕ್ಷ್ಮಣನೂ ಅದರಂತೆ ಆ ಪುಣ್ಯನದಿಯನ್ನು ವಂದಿಸಿದನು (೭೯). ಶ್ರೀರಾಮನು ನಾವೆಯಲ್ಲಿ ಕುಳಿತು ಸುಮಂತ್ರನಿಗೂ ಸೇನಾಸಮೇತನಾದ ಗುಹನಿಗೂ ಅನುಜ್ಞೆಯನ್ನಿತ್ತು, ನಾವಿಕರಿಗೆ ನಾವೆಯನ್ನು ಮುಂದಕ್ಕೆ ಬಿಡುವಂತೆ ಸೂಚಿಸಿದನು (೮೦). ತರುವಾಯ ಆ ನಾವಿಕರು ಎಚ್ಚರಿಕೆಯಿಂದ ಹುಟ್ಟುಹಾಕಿ ನಡೆಸಲು ನಾವೆಯು

---

* ಇಲ್ಲಿ ಒಂದು ಚಮತ್ಕಾರ ಉಂಟು. ಶ್ರೀರಾಮನು ಸೀತೆಯನ್ನು 'ಧೀರೆ' ಎಂದೂ, ಆದರೆ ನಾವೆಯನ್ನು ಮೊದಲು ಹತ್ತುವ ಧೈರ್ಯವಿಲ್ಲವೆಂದೂ ಹಾಸ್ಯ ಮಾಡಿದ್ದಾನೆ. 'ಧೈರ್ಯವಿದ್ದರೆ ಮೊದಲು ನಾವೆಯನ್ನು ಹತ್ತಲಿ, ನೋಡೋಣ!' ಎಂದು ಅವನ ಆಶಯ . 'ನನ್ನ ಅತ್ತಿಗೆ ಧೀರೆಯಲ್ಲವೆ ? ನೋಡೋಣ!' ಎಂದು ಲಕ್ಷ್ಮಣನ ಆಶಯ.

ಮಧ್ಯಂ ತು ಸಮನುಪ್ರಾಪ್ಯ ಭಾಗೀರಥ್ಯಾಸ್ತ್ವನಿಂದಿತಾ ।
ವೈದೇಹೀ ಪ್ರಾಂಜಲಿರ್ಭೂತ್ವಾ ತಾಂ ನದೀಮಿದಮಬ್ರವೀತ್ ॥ ೮೨

ಪುತ್ರೋ ದಶರಥಸ್ಯಾಯಂ ಮಹಾರಾಜಸ್ಯ ಧೀಮತಃ ।
ನಿದೇಶಂ ಪಾರಯಿತ್ವೇಮಂ ಗಂಗೇ ತ್ವದಭಿರಕ್ಷಿತಃ॥ ೮೩

ಚತುರ್ದಶ ಹಿ ವರ್ಷಾಣಿ ಸಮಗ್ರಾಣ್ಯುಷ್ಯ ಕಾನನೇ ।
ಭ್ರಾತ್ರಾ ಸಹ ಮಯಾ ಚೈವ ಪುನಃ ಪ್ರತ್ಯಾಗಮಿಷ್ಯತಿ ॥ ೮೪

ತತಸ್ತ್ವಾಂ ದೇವಿ ಸುಭಗೇ ಕ್ಷೇಮೇಣ ಪುನರಾಗತಾ ।
ಯಕ್ಷ್ಯೇ ಪ್ರಮುದಿತಾ ಗಂಗೇ ಸರ್ವಕಾಮಸಮೃದ್ಧಿನೀ ॥ ೮೫

ತ್ವಂ ಹಿ ತ್ರಿಪಥಗಾ ದೇವಿ ಬ್ರಹ್ಮಲೋಕಂ ಸಮೀಕ್ಷಸೇ ।
ಭಾರ್ಯಾ ಚೋದಧಿರಾಜಸ್ಯ ಲೋಕೇಽಸ್ಮಿನ್ ಸಂಪ್ರದೃಶ್ಯಸೇ ॥ ೮೬

ಸಾ ತ್ವಾಂ ದೇವಿ ನಮಸ್ಯಾಮಿ ಪ್ರಶಂಸಾಮಿ ಚ ಶೋಭನೇ ।
ಪ್ರಾಪ್ತರಾಜ್ಯೇ ನರವ್ಯಾಘ್ರೇ ಶಿವೇನ ಪುನರಾಗತೇ ॥ ೮೭

---

ಗಂಗಾಜಲದಲ್ಲಿ ಹೊರಟಿತು. ನದಿಯ ಮಧ್ಯಕ್ಕೆ ಬಂದಾಗ ವೈದೇಹಿಯು ಕೈಮುಗಿದುಕೊಂಡು ಗಂಗಾದೇವಿಯನ್ನು ಪ್ರಾರ್ಥಿಸಿದಳು (೮೧-೮೨):"ಹೇ ಭಾಗೀರಥಿ, ದಶರಥಮಹಾರಾಜನ ಈ ಪುತ್ರನು ಧೀಮಂತನಾದ ತಂದೆಯ ಆಜ್ಞೆಯನ್ನು ಪಾಲಿಸುತ್ತಿದ್ದಾನೆ. ನೀನು ಈತನನ್ನು ರಕ್ಷಿಸು. ಇವನು ಹದಿನಾಲ್ಕುವರ್ಷಗಳವರೆಗೆ ಅರಣ್ಯದಲ್ಲಿದ್ದು ತನ್ನ ತಮ್ಮನನ್ನೂ ನನ್ನನ್ನೂ ಕರೆದುಕೊಂಡು ಪುನಃ ಬರುವಂತಾಗಲಿ !(೮೩-೮೪). ನಾವು ಕ್ಷೇಮದಿಂದ ಹಿಂತಿರುಗಿಬಂದಾಗ, ಹೇ ದೇವಿ, ಕೀರ್ತಿಶಾಲಿನಿ, ಗಂಗೆ, ನನ್ನ ಸರ್ವಾಭೀಷ್ಟವೂ ಸಿದ್ಧಿಸಿತೆಂದು ಸಂತೋಷದಿಂದ ನಿನ್ನನ್ನು ಆರಾಧಿಸುವೆನು. ದೇವಿ, ನೀನು ಮೂರುಲೋಕಗಳಲ್ಲಿಯೂ ಸಂಚರಿಸತಕ್ಕ ಮಹಿಮೆಯುಳ್ಳವಳು! ಬ್ರಹ್ಮಲೋಕವನ್ನು ದರ್ಶನಮಾಡತಕ್ಕ ಪುಣ್ಯಾತ್ಮಳು. ಈ ಲೋಕದಲ್ಲಿ ಸಮುದ್ರರಾಜನ ಪತ್ನಿಯಾಗಿ ಕಾಣಿಸಿಕೊಳ್ಳುತ್ತಿರುವೆ (೮೫-೮೬). ದೇವಿ, ಮಂಗಳದಾಯಿನಿ, ನಿನಗೆ ಪ್ರಣಾಮವನ್ನರ್ಪಿಸುವೆನು ; ಹೊಗಳಿ ಹಾಡುವೆನು. ಈ ಪುರುಷಶ್ರೇಷ್ಠನು (ನಿನ್ನ ಅನುಗ್ರಹದಿಂದ)

ಗವಾಂ ಶತಸಹಸ್ರಾಣಿ ವಸ್ತ್ರಾಣ್ಯನ್ನಂ ಚ ಪೇಶಲಮ್ ।
ಬ್ರಾಹ್ಮಣೇಭ್ಯಃ ಪ್ರದಾಸ್ಯಾಮಿ ತವ ಪ್ರಿಯಚಿಕೀರ್ಷಯಾ ॥ ೮೮

ಸುರಾಘಟಸಹಸ್ರೇಣ ಮಾಂಸಭೂತೌದನೇನ ಚ ।
ಯಕ್ಷ್ಯೇ ತ್ವಾಂ ಪ್ರಯತಾ ದೇವಿ ಪುರೀಂ ಪುನರುಪಾಗತಾ ॥ ೮೯

ಯಾನಿ ತ್ವತ್ತೀರವಾಸೀನಿ ದೈವತಾನಿ ವಸಂತಿ ಚ ।
ತಾನಿ ಸರ್ವಾಣಿ ಯಕ್ಷ್ಯಾಮಿ ತೀರ್ಥಾನ್ಯಾಯತನಾನಿ ಚ ॥ ೯೦

ಪುನರೇವ ಮಹಾಬಾಹುರ್ಮಯಾ ಭ್ರಾತ್ರಾ ಚ ಸಂಗತಃ ।
ಅಯೋಧ್ಯಾಂ ವನವಾಸಾತ್ತು ಪ್ರವಿಶತ್ವನಘೋಽನಘೇ ॥ ೯೧

ತಥಾ ಸಂಭಾಷಮಾಣಾ ಸಾ ಸೀತಾ ಗಂಗಾಮನಿಂದಿತಾ ।
ದಕ್ಷಿಣಾ ದಕ್ಷಿಣಂ ತೀರಂ ಕ್ಷಿಪ್ರಮೇವಾಭ್ಯುಪಾಗಮತ್ ॥ ೯೨

ತೀರಂ ತು ಸಮನುಪ್ರಾಪ್ಯ ನಾವಂ ಹಿತ್ವಾ ನರರ್ಷಭಃ ।
ಪ್ರಾತಿಷ್ಠತ ಸಹ ಭ್ರಾತ್ರಾ ವೈದೇಹ್ಯಾ ಚ ಪರಂತಪಃ ॥ ೯೩

---

ಹಿಂತಿರುಗಿಬಂದು ರಾಜ್ಯವನ್ನು ಪಡೆಯುವಂತಾದರೆ, ನಿನ್ನ ಪ್ರೀತ್ಯರ್ಥವಾಗಿ ಬ್ರಾಹ್ಮಣರಿಗೆ ಒಂದು ಲಕ್ಷ ಗೋದಾನವನ್ನೂ ವಸ್ತ್ರದಾನವನ್ನೂ ಮಾಡುವೆನು. ಉತ್ತಮವಾದ ಅನ್ನ ಸಂತರ್ಪಣೆಯನ್ನು ಮಾಡಿಸುವೆನು(೮೭-೮೮). ದೇವಿ, ನಾನು ಅಯೋಧ್ಯೆಗೆ ಬಂದಮೇಲೆ ವ್ರತನಿಷ್ಠಳಾಗಿ ಒಂದು ಸಾವಿರ ಮದ್ಯಕಲಶಗಳನ್ನರ್ಪಿಸಿ ಮಾಂಸದಿಂದ ನಿನಗೆ ಮಹಾಬಲಿಯನ್ನು ಸಮರ್ಪಿಸುವೆನು. ನಿನ್ನ ತೀರದಲ್ಲಿ ವಾಸವಾಗಿರುವ ಸಮಸ್ತದೇವತೆಗಳನ್ನೂ ಪೂಜಿಸುವೆನು. ಮತ್ತು ನಿನ್ನ ತೀರದಲ್ಲಿರುವ ಮಣಿಕರ್ಣಿಕಾದಿತೀರ್ಥಗಳನ್ನೂ ಕಾಶಿ ಮುಂತಾದ ಕ್ಷೇತ್ರಗಳನ್ನೂ ಸೇವಿಸುವೆನು (೮೯-೯೦). ಪಾಪಹಾರಿಣಿ, ಗಂಗೆ, ಮಹಾಬಾಹುವೂ ಪುಣ್ಯಾತ್ಮನೂ ಆದ ನನ್ನ ಪತಿಯು ವನವಾಸವನ್ನು ಮುಗಿಸಿ ಲಕ್ಷ್ಮಣನಿಂದಲೂ ನನ್ನಿಂದಲೂ ಸಮೇತನಾಗಿ ಪುನಃ ಅಯೋಧ್ಯೆಯನ್ನು ಪ್ರವೇಶಿಸುವಂತೆ ಅನುಗ್ರಹಿಸು" ಎಂದು ಪ್ರಾರ್ಥಿಸಿದಳು (೯೧). ಪತಿಗೆ ಹಿತಕಾಂಕ್ಷಿಣಿಯಾದ ಆ ಸಾಧ್ವಿಯು ಈ ರೀತಿಯಲ್ಲಿ ಗಂಗಾ ನದಿಯನ್ನು ಪ್ರಾರ್ಥಿಸುತ್ತಿರುವಾಗಲೆ, ನಾವೆಯು ನದಿಯ ದಕ್ಷಿಣತೀರವನ್ನು ತಲುಪಿತು. ಆಗ ಶ್ರೀರಾಮನು ನಾವೆಯಿಂದಿಳಿದು ತಮ್ಮನನ್ನೂ ವೈದೇಹಿ

ಅಥಾಬ್ರವೀನ್ಮಹಾಬಾಹುಃ ಸುಮಿತ್ರಾನಂದವರ್ಧನಮ್ ।
ಭವ ಸಂರಕ್ಷಣಾರ್ಥಾಯ ಸಜನೇ ವಿಜನೇಽಪಿ ವಾ ॥ ೯೪
ಅವಶ್ಯಂ ರಕ್ಷಣಂ ಕಾರ್ಯಮದೃಷ್ಟೇ ವಿಜನೇ ವನೇ ।
ಅಗ್ರತೋ ಗಚ್ಛ ಸೌಮಿತ್ರೇ ಸೀತಾ ತ್ವಾಮನುಗಚ್ಛತು ॥ ೯೫
ಪೃಷ್ಠತೋಽಹಂ ಗಮಿಷ್ಯಾಮಿ ತ್ವಾಂ ಚ ಸೀತಾಂ ಚ ಪಾಲಯನ್ ।
ಅನ್ಯೋನ್ಯಸ್ಯೇಹ ನೋ ರಕ್ಷಾ ಕರ್ತವ್ಯಾ ಪುರುಷರ್ಷಭ ॥ ೯೬
ನ ಹಿ ತಾವದತಿಕ್ರಾಂತಾ ಸುಕರಾ ಕಾಚನ ಕ್ರಿಯಾ ।
ಅದ್ಯ ದುಃಖಂ ತು ವೈದೇಹೀ ವನವಾಸಸ್ಯ ವೇತ್ಸ್ಯತಿ ॥ ೯೭
ಪ್ರನಷ್ಟಜನಸಂಬಾಧಂ ಕ್ಷೇತ್ರಾರಾಮವಿವರ್ಜಿತಮ್ ।
ವಿಷಮಂ ಚ ಪ್ರಪಾತಂ ಚ ವನಂ ಹ್ಯದ್ಯ ಪ್ರವೇಕ್ಷ್ಯತಿ ॥ ೯೮
ಶ್ರುತ್ವಾ ರಾಮಸ್ಯ ವಚನಂ ಪ್ರತಸ್ಥೇ ಲಕ್ಷ್ಮಣೋಽಗ್ರತಃ ।
ಅನಂತರಂ ಚ ಸೀತಾಯಾ ರಾಘವೋ ರಘುನಂದನಃ ॥ ೯೯

---

ಯನ್ನೂ ಜೊತೆಗೂಡಿ ಮುಂದಕ್ಕೆ ಹೊರಟನು (೯೨-೯೩). ಆ ವೀರನು ಸುಮಿತ್ರಾ ತನಯನನ್ನು ನೋಡಿ "ಲಕ್ಷ್ಮಣ, ವನದಲ್ಲಿ ಜನರಿರಲಿ-ಇಲ್ಲದಿರಲಿ, ನೀನು ರಕ್ಷಣಾ ಕಾರ್ಯವನ್ನು ವಹಿಸಿಕೊಂಡಿರು. ನಾವು ಎಂದೂ ನೋಡದ ಈ ನಿರ್ಮಾನುಷ ಪ್ರದೇಶದಲ್ಲಿ ಅವಶ್ಯವಾಗಿ ಎಚ್ಚರಿಕೆಯಿಂದಿರಬೇಕು. ಆದ್ದರಿಂದ ನೀನು ಮುಂದೆ ಹೋಗು. ನಿನ್ನ ಹಿಂದೆ ಸೀತೆ ಬರಲಿ (೯೪-೯೫). ನಿಮ್ಮಿಬ್ಬರಿಗೂ ಬೆಂಗಾವಲಾಗಿ ನಾನು ಅವಳ ಹಿಂದೆ ಬರುತ್ತೇನೆ. ಲಕ್ಷ್ಮಣ, ಇಲ್ಲಿ ನಾವು ಒಬ್ಬರ ನ್ನೊಬ್ಬರು ರಕ್ಷಿಸಿಕೊಳ್ಳಬೇಕು. ಯಾವ ಕಾರ್ಯವಾದರೂ ಮಿಂಚಿಹೋದಮೇಲೆ ಸರಿಪಡಿಸಿ ಕೊಳ್ಳುವುದು ಸುಲಭವಲ್ಲ. ಈಗ ಸೀತೆಗೆ ವನವಾಸದ ಕಷ್ಟವೇನೆಂಬುದು ಗೊತ್ತಾಗುವುದು (೯೬-೯೭). ವನವು ನಿರ್ಮಾನುಷವಾಗಿದೆ. ಹೊಲಗದ್ದೆಗಳು ಕಾಣಿಸುವುದಿಲ್ಲ. ಹಳ್ಳತಿಟ್ಟುಗಳೂ ಕೊರಕಲುಗಳೂ ತುಂಬಿವೆ. ಇಂಥ ವನವನ್ನು ಸೀತೆಯು ಇಂದು ಪ್ರವೇಶಿಸುವಳು" ಎಂದು ಹೇಳಿದನು (೯೮). ಶ್ರೀರಾಮನ ಮಾತನ್ನು ಕೇಳಿ ಲಕ್ಷ್ಮಣನು ಮುಂದೆ ಹೊರಟನು. ಅವನ ಹಿಂದೆ ಸೀತೆಯೂ ಅವಳ ಹಿಂದೆ ಶ್ರೀರಾಮನೂ ಹೋಗುತ್ತಿದ್ದರು. ಹೀಗೆ

ಗತಂ ತು ಗಂಗಾಪರಪಾರಮಾಶು
ರಾಮಂ ಸುಮಂತ್ರಃ ಪ್ರತತಂ ನಿರೀಕ್ಷ್ಯ ।
ಅಧ್ವಪ್ರಕರ್ಷಾದ್ವಿನಿವೃತ್ತದೃಷ್ಟಿ
ರ್ಮುಮೋಚ ಬಾಷ್ಪಂ ವ್ಯಥಿತಸ್ತಪಸ್ವೀ ॥ ೧೦೦

ಸ ಲೋಕಪಾಲಪ್ರತಿಮಪ್ರಭಾವ
ಸ್ತೀರ್ತ್ವಾ ಮಹಾತ್ಮಾ ವರದೋ ಮಹಾನದೀಮ್ ।
ತತಃ ಸಮೃದ್ಧಾನ್ ಶುಭಸಸ್ಯಮಾಲಿನಃ
ಕ್ರಮೇಣ ವತ್ಸಾನ್ ಮುದಿತಾನುಪಾಗಮತ್ ॥ ೧೦೧

ತೌ ತತ್ರ ಹತ್ವಾ ಚತುರೋ ಮಹಾಮೃಗಾಂಶ್ಚ
ವರಾಹಮೃಶ್ಯಂ ಪೃಷತಂ ಮಹಾರುರುಮ್ ।
ಆದಾಯ ಮೇಧ್ಯಂ ತ್ವರಿತಂ ಬುಭುಕ್ಷಿತೌ
ವಾಸಾಯ ಕಾಲೇ ಯಯತುರ್ವನಸ್ಪತಿಮ್ ॥ ೧೦೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಪಂಚಾಶಃ ಸರ್ಗಃ

---

ಶ್ರೀರಾಮನು ಗಂಗಾನದಿಯ ಆಚೆಯ ದಡವನ್ನು ಸೇರಿ ಮುಂದೆ ಹೋಗುವವರೆಗೂ ಸುಮಂತ್ರನು ಅವರನ್ನು ಎವೆಯಿಕ್ಕದೆ ನೋಡುತ್ತಿದ್ದನು. ಆ ಮೂವರು ಬಹುದೂರ ಹೊರಟುಹೋಗಲು ಅವನ ದೃಷ್ಟಿಯು ಹಾಯಲಿಲ್ಲ. ಅವನು ವ್ಯಥಿತನಾಗಿ ದೈನ್ಯದಿಂದ ಕಣ್ಣೀರು ಸುರಿಸುತ್ತ ನಿಂತನು (೯೯-೧೦೦). ಅತ್ತ ದಿಕ್ಪಾಲಸದೃಶಪ್ರಭಾವಶಾಲಿಯೂ ಮಹಾತ್ಮನೂ ಆದ ಶ್ರೀರಾಮನು ಗಂಗಾನದಿಯನ್ನು ದಾಟಿ ಮುಂದೆ ಹೋಗುತ್ತ, ಸಸ್ಯ ಸಮೃದ್ಧಿಯಿಂದ ನಲಿಯುತ್ತಿದ್ದ ವತ್ಸದೇಶದ ಸಮೀಪಕ್ಕೆ ಬಂದನು (೧೦೧). ಅಷ್ಟರಲ್ಲಿ ಅವರಿಗೆ ಆಹಾರ ಬೇಕೆನ್ನಿಸಿತು. ಆಗ ರಾಮಲಕ್ಷ್ಮಣರು ಚಿಂಕಾರ ವರಾಹವನ್ನೂ ಋಶ್ಯ ಪೃಷತ ರುರುಗಳು ಎಂಬ ಜಿಂಕೆಯ ಜಾತಿಗಳಲ್ಲಿ ಒಂದೊಂದನ್ನೂ ಸಂಹರಿಸಿದರು. ಆ ನಾಲ್ಕು ಮೃಗಗಳ ಪರಿಶುದ್ಧವಾದ ಮಾಂಸವನ್ನು ಸ್ವೀಕರಿಸಿ, ಆ ಸಾಯಂಕಾಲ ನಿವಾಸಾರ್ಥವಾಗಿ ಒಂದು ಮರದಡಿಯನ್ನು ಸೇರಿದರು (೧೦೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತೆರಡನೆಯ ಸರ್ಗ

## ತ್ರಿಪಂಚಾಶಃ ಸರ್ಗಃ

### ರಾಮಸಂಕ್ಷೋಭಃ

ಸ ತಂ ವೃಕ್ಷಂ ಸಮಾಸಾದ್ಯ ಸಂಧ್ಯಾಮನ್ವಾಸ್ಯ ಪಶ್ಚಿಮಾಮ್ ।
ರಾಮೋ ರಮಯತಾಂ ಶ್ರೇಷ್ಠ ಇತಿ ಹೋವಾಚ ಲಕ್ಷ್ಮಣಮ್ ॥ ೧

ಅದ್ಯೇಯಂ ಪ್ರಥಮಾ ರಾತ್ರಿರ್ಜಾತಾ ಜನಪದಾದ್ಬಹಿಃ ।
ಯಾ ಸುಮಂತ್ರೇಣ ರಹಿತಾ ತಾಂ ನೋತ್ಕಂಠಿತುಮರ್ಹಸಿ ॥ ೨

ಜಾಗರ್ತವ್ಯಮತಂದ್ರಿಭ್ಯಾಮದ್ಯಪ್ರಭೃತಿ ರಾತ್ರಿಷು ।
ಯೋಗಕ್ಷೇಮೌ ಹಿ ಸೀತಾಯಾ ವರ್ತತೇ ಲಕ್ಷ್ಮಣಾವಯೋಃ ॥ ೩

ರಾತ್ರಿಂ ಕಥಂಚಿದೇವೇಮಾಂ ಸೌಮಿತ್ರೇ ವರ್ತಯಾಮಹೇ ।
ಉಪಾವರ್ತಾಮಹೇ ಭೂಮಾವಾಸ್ತೀರ್ಯ ಸ್ವಯಮರ್ಜಿತೈಃ ॥ ೪

ಸ ತು ಸಂವಿಶ್ಯ ಮೇದಿನ್ಯಾಂ ಮಹಾರ್ಹಶಯನೋಚಿತಃ ।
ಇಮಾಃ ಸೌಮಿತ್ರಯೇ ರಾಮೋ ವ್ಯಾಜಹಾರ ಕಥಾಃ ಶುಭಾಃ ॥ ೫

## ಸರ್ಗ ೫೩

### ಶ್ರೀರಾಮನ ಮನೋವ್ಯಥೆ. ಲಕ್ಷ್ಮಣನ ಸಮಾಧಾನ.

ಪ್ರಜಾರಂಜನೆಯಲ್ಲಿ ಶ್ರೇಷ್ಠನಾದ ಶ್ರೀರಾಮನು ಆ ಮರದಡಿಯನ್ನು ಸೇರಿ ಸಾಯಂಕಾಲದ ಸಂಧ್ಯಾವಂದನೆಯನ್ನು ಆಚರಿಸಿದನು. ಅನಂತರ ಲಕ್ಷ್ಮಣನನ್ನು ನೋಡಿ "ಲಕ್ಷ್ಮಣ, ನಾವು ನಮ್ಮ ರಾಜ್ಯದ ಹೊರಗೆ ಸುಮಂತ್ರನನ್ನು ಅಗಲಿ ಕಳೆಯುತ್ತಿರುವ ಮೊದಲನೆಯ ರಾತ್ರಿ ಇದು. ಹಿಂದಿನದನ್ನು ಸ್ಮರಿಸಿಕೊಂಡು ತಳಮಳಿಸಬೇಡ (೧-೨). ಇನ್ನು ಮೇಲೆ ರಾತ್ರಿಯ ಕಾಲದಲ್ಲಿ ನಾವಿಬ್ಬರೂ ಆಲಸ್ಯವಿಲ್ಲದೆ ಎಚ್ಚರಿಕೆಯನ್ನು ವಹಿಸಬೇಕು. ಲಕ್ಷ್ಮಣ, ಸೀತೆಯ ಯೋಗಕ್ಷೇಮಗಳು ನಮಗೆ ಸೇರಿದವು. ಇದೊಂದು ರಾತ್ರಿಯನ್ನು ಹೇಗಾದರೂ ಕಳೆಯೋಣ. ಏನನ್ನಾದರೂ ತಂದು ನೆಲದ ಮೇಲೆ ಹಾಸಿಕೊಂಡು ಮಲಗೋಣ" ಎಂದನು (೩-೪). ಹಿಂದೆ ಅಮೂಲ್ಯವಾದ ಶಯ್ಯೆಯಲ್ಲಿ ಮಲಗುತ್ತಿದ್ದ ಶ್ರೀರಾಮನು ಈಗ ನೆಲದಮೇಲೆ

ಧ್ರುವಮದ್ಯ ಮಹಾರಾಜೋ ದುಃಖಂ ಸ್ವಪಿತಿ ಲಕ್ಷ್ಮಣ ।
ಕೃತಕಾಮಾ ತು ಕೈಕೇಯೀ ತುಷ್ಟಾ ಭವಿತುಮರ್ಹತಿ ॥ ೬

ಸಾ ಹಿ ದೇವೀ ಮಹಾರಾಜಂ ಕೈಕೇಯೀ ರಾಜ್ಯಕಾರಣಾತ್ ।
ಅಪಿ ನ ಚ್ಯಾವಯೇತ್ ಪ್ರಾಣಾನ್ ದೃಷ್ಟ್ವಾ ಭರತಮಾಗತಮ್ ॥ ೭

ಅನಾಥಶ್ಚ ಹಿ ವೃದ್ಧಶ್ಚ ಮಯಾ ಚೈವ ವಿನಾಕೃತಃ ।
ಕಿಂ ಕರಿಷ್ಯತಿ ಕಾಮಾತ್ಮಾ ಕೈಕೇಯ್ಯಾ ವಶಮಾಗತಃ ॥ ೮

ಇದಂ ವ್ಯಸನಮಾಲೋಕ್ಯ ರಾಜ್ಞಶ್ಚ ಮತಿವಿಭ್ರಮಮ್ ।
ಕಾಮ ಏವಾರ್ಥಧರ್ಮಾಭ್ಯಾಂ ಗರೀಯಾನಿತಿ ಮೇ ಮತಿಃ ॥ ೯

ಕೋ ಹ್ಯವಿದ್ವಾನಪಿ ಪುಮಾನ್ ಪ್ರಮದಾಯಾಃ ಕೃತೇ ತ್ಯಜೇತ್ ।
ಛಂದಾನಾವರ್ತನಂ ಪುತ್ರಂ ತಾತೋ ಮಾಮಿವ ಲಕ್ಷ್ಮಣ ॥ ೧೦

ಸುಖೀ ಬತ ಸಭಾರ್ಯಶ್ಚ ಭರತಃ ಕೈಕಯೀಸುತಃ ।
ಮುದಿತಾನ್ ಕೋಸಲಾನೇಕೋ ಯೋ ಭೋಕ್ಷ್ಯತ್ಯಧಿರಾಜವತ್ ॥ ೧೧

---

ಕುಳಿತು ಲಕ್ಷ್ಮಣನಿಗೆ ಒಳ್ಳೆಯ ಮಾತುಗಳನ್ನು ಹೇಳುತ್ತ ಹೀಗೆಂದನು :"ಲಕ್ಷ್ಮಣ, ಈಗ ಮಹಾರಾಜನು ನಿಶ್ಚಯವಾಗಿಯೂ ಶೋಕಿಸುತ್ತ ಮಲಗಿರಬಹುದು. ಕೈಕೇಯಿಯು ತನ್ನ ಅಭೀಷ್ಟವು ಸಿದ್ಧಿಸಿತೆಂದು ನಲಿಯುತ್ತಿರಬಹುದು (೫-೬). ಭರತನು ಬಂದಮೇಲಂತೂ ಆಕೆಯು ರಾಜ್ಯದ ಹಂಬಲದಿಂದ ಮಹಾರಾಜನ ಪ್ರಾಣವನ್ನು ಹಿಂಡದೆ ಬಿಡುವಳೆ! ನಮ್ಮ ತಂದೆಗೆ ಬೇರೊಂದು ಗತಿಯಿಲ್ಲವಾಗಿದೆ. ಅಲ್ಲದೆ ಅವನು ವೃದ್ಧನಾಗಿದ್ದಾನೆ. ನಾನೂ ಸಮೀಪದಲ್ಲಿ ಇಲ್ಲ. ಕಾಮಾತ್ಮನಾಗಿ ಕೈಕೇಯಿಗೆ ವಶನಾಗಿದ್ದಾನೆ. ಅವನು ಏನುಮಾಡಿಯಾನು? (೭-೮). ನಮಗೆ ಬಂದಿರುವ ಕಷ್ಟವನ್ನೂ ಮಹಾರಾಜನ ಬುದ್ಧಿಭ್ರಮಣವನ್ನೂ ಆಲೋಚಿಸಿದರೆ ಅರ್ಥಧರ್ಮಗಳಿಗಿಂತ ಕಾಮವೇ ಪ್ರಬಲವಾದ ಪುರುಷಾರ್ಥವೆಂದು ನನಗೆ ತೋರುತ್ತದೆ. ಲಕ್ಷ್ಮಣ, ಯಾವ ಬುದ್ಧಿಹೀನನು ತಾನೇ ಇಷ್ಟಾನುಸಾರವಾಗಿ ನಡೆಯುವ ವಿನೀತನಾದ ಪುತ್ರನನ್ನು ಹೆಂಗಸಿಗೋಸ್ಕರ ತ್ಯಜಿಸುವನು ? ನಮ್ಮ ತಂದೆಯು ನನ್ನನ್ನು ತ್ಯಜಿಸಿದನಲ್ಲ! ಅವನೊಬ್ಬನೇ ಸಮೃದ್ಧವಾದ ಕೋಸಲದೇಶವನ್ನು ಪತ್ನೀ

ಸ ಹಿ ಸರ್ವಸ್ಯ ರಾಜ್ಯಸ್ಯ ಸುಖಮೇಕಂ ಭವಿಷ್ಯತಿ ।
ತಾತೇ ಚ ವಯಸಾತೀತೇ ಮಯಿ ಚಾರಣ್ಯಮಾಸ್ಥಿತೇ ॥ ೧೨

ಅರ್ಥಧರ್ಮೌ ಪರಿತ್ಯಜ್ಯ ಯಃ ಕಾಮಮನುವರ್ತತೇ ।
ಏವಮಾಪದ್ಯತೇ ಕ್ಷಿಪ್ರಂ ರಾಜಾ ದಶರಥೋ ಯಥಾ ॥ ೧೩

ಮನ್ಯೇ ದಶರಥಾಂತಾಯ ಮಮ ಪ್ರವ್ರಾಜನಾಯ ಚ ।
ಕೈಕೇಯೀ ಸೌಮ್ಯ ಸಂಪ್ರಾಪ್ತಾ ರಾಜ್ಯಾಯ ಭರತಸ್ಯ ಚ ॥ ೧೪

ಅಪೀದಾನೀಂ ನ ಕೈಕೇಯೀ ಸೌಭಾಗ್ಯಮದಮೋಹಿತಾ ।
ಕೌಸಲ್ಯಾಂ ಚ ಸುಮಿತ್ರಾಂ ಚ ಸಂಪ್ರಬಾಧೇತಮತ್ಪತೇ ॥ ೧೫

ಮಾ ಸ್ಮ ಮತ್ಕಾರಣಾದ್ದೇವೀ ಸುಮಿತ್ರಾ ದುಃಖಮಾವಸೇತ್ ।
ಅಯೋಧ್ಯಾಮಿತ ಏವ ತ್ವಂ ಕಲ್ಯೇ ಪ್ರವಿಶ ಲಕ್ಷ್ಮಣ ॥ ೧೬

ಅಹಮೇಕೋ ಗಮಿಷ್ಯಾಮಿ ಸೀತಯಾ ಸಹ ದಂಡಕಾನ್ ।
ಅನಾಥಾಯಾ ಹಿ ನಾಥಸ್ತ್ವಂ ಕೌಸಲ್ಯಾಯಾ ಭವಿಷ್ಯಸಿ ॥ ೧೭

---

ಸಮೇತವಾಗಿ ರಾಜಾಧಿರಾಜನಂತೆ ಅನುಭವಿಸುವನು! ನಾನು ಇತ್ತ ಅರಣ್ಯಕ್ಕೆ ಬಂದೆನು. ನಮ್ಮ ತಂದೆಯು ಅತ್ತ ಮುಪ್ಪಿನಿಂದ ಗತಿಸಿದರೆ ಸಮಸ್ತರಾಜ್ಯದ ಸುಖಕ್ಕೆ ಅವನೊಬ್ಬನೇ ಭಾಗಿಯಾಗುವನು (೧೧-೧೨). ಯಾವನು ಅರ್ಥಧರ್ಮಗಳನ್ನು ಬಿಟ್ಟು ಕಾಮವನ್ನು ಹೆಚ್ಚಾಗಿ ಪುರಸ್ಕರಿಸುವನೊ ಅವನು ತಡವಿಲ್ಲದೆ ಹೀಗೆ ವಿಪತ್ತಿನಲ್ಲಿ ಸಿಕ್ಕಿಕೊಳ್ಳುತ್ತಾನೆ. ದಶರಥರಾಜನೇ ಇದಕ್ಕೆ ಉದಾಹರಣೆ (೧೩). ಲಕ್ಷ್ಮಣ, ಮಹಾರಾಜನಿಗೆ ಕೊನೆಗಾಲ, ನನಗೆ ವನವಾಸ, ಭರತನಿಗೆ ರಾಜ್ಯಪ್ರಾಪ್ತಿ-ಈ ಮೂರನ್ನು ಸಾಧಿಸುವುದಕ್ಕೋಸ್ಕರವೇ ಕೈಕೇಯಿಯು ನಮ್ಮ ಮನೆಗೆ ಬಂದು ಸೇರಿದಳೆಂದು ಭಾವಿಸುತ್ತೇನೆ (೧೪). ಅವಳು ಈಗ ಸೌಭಾಗ್ಯಮದದಿಂದ ಮೈಮರೆತು ನನ್ನ ನಿಮಿತ್ತವಾಗಿ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ಪೀಡಿಸದೆ ಇರುವಳೆ? ಲಕ್ಷ್ಮಣ, ನನಗೋಸ್ಕರ ಸುಮಿತ್ರಾದೇವಿಯು ಕಷ್ಟದಲ್ಲಿ ಸಿಕ್ಕುವುದು ಬೇಡ. ನೀನು ನಾಳೆ ಪ್ರಾತಃಕಾಲ ಇಲ್ಲಿಂದ ಅಯೋಧ್ಯೆಗೆ ಹೊರಟು ಹೋಗು (೧೫-೧೬). ನಾನೊಬ್ಬನೇ ಸೀತೆಯೊಡನೆ ದಂಡಕಾರಣ್ಯಕ್ಕೆ ಹೋಗುವೆನು. ದಿಕ್ಕಿಲ್ಲದ ನನ್ನ ತಾಯಿಗೆ ನೀನಾದರೂ ದಿಕ್ಕಾಗಿರು. ಕೈಕೇಯಿಯು ಕ್ಷುದ್ರ

ಕ್ಷುದ್ರಕರ್ಮಾ ಹಿ ಕೈಕೇಯೀ ದ್ವೇಷಾದನ್ಯಾಯ್ಯಮಾಚರೇತ್ ।
ಪರಿದದ್ಯಾ ಹಿ ಧರ್ಮಜ್ಞೇ ಭರತೇ ಮಮ ಮಾತರಮ್ ॥ ೧೮
ನೂನಂ ಜಾತ್ಯಂತರೇ ಕಸ್ಮಿಂಶ್ಚಿತ್ಸ್ತ್ರಿಯಃ ಪುತ್ರೈರ್ವಿಯೋಜಿತಾಃ ।
ಜನನ್ಯಾ ಮಮ ಸೌಮಿತ್ರೇ ತಸ್ಮಾದೇತದುಪಸ್ಥಿತಮ್ ॥ ೧೯
ಮಯಾ ಹಿ ಚಿರಪುಷ್ಟೇನ ದುಃಖಸಂವರ್ಧಿತೇನ ಚ ।
ವಿಪ್ರಯುಜ್ಯೇತ ಕೌಸಲ್ಯಾ ಫಲ್ಗುಕಾಲೇ ಧಿಗಸ್ತು ಮಾಮ್ ॥ ೨೦
ಮಾ ಸ್ಮ ಸೀಮಂತಿನೀ ಕಾಚಿಜ್ಜನಯೇತ್ ಪುತ್ರಮೀದೃಶಮ್ ।
ಸೌಮಿತ್ರೇ ಯೋಽಹಮಂಬಾಯಾ ದದ್ಮಿ ಶೋಕಮನಂತಕಮ್ ॥
ಮನ್ಯೇ ಪ್ರೀತಿವಿಶಿಷ್ಟಾ ಸಾ ಮತ್ತೋ ಲಕ್ಷ್ಮಣ ಸಾರಿಕಾ ।
ಯಸ್ಯಾಸ್ತಚ್ಛ್ರೂಯತೇ ವಾಕ್ಯಂ ಶುಕ ಪಾದಮರೇರ್ದಶ ॥ ೨೨

---

ವಾದ ಕಾರ್ಯವನ್ನು ಮಾಡಲು ಹಿಂಜರಿಯದವಳು. ಅವಳು ದ್ವೇಷದಿಂದ ಏನಾದರೂ ಕೇಡನ್ನು ಮಾಡಬಹುದು. ಧರ್ಮಜ್ಞನಾದ ಭರತನಿಗೆ ನನ್ನ ತಾಯಿಯ ಯೋಗಕ್ಷೇಮವನ್ನು ಒಪ್ಪಿಸಿಬಿಡು (೧೭-೧೮). ಲಕ್ಷ್ಮಣ, ನನ್ನ ತಾಯಿ ಯಾವುದೋ ಜನ್ಮಾಂತರದಲ್ಲಿ ಸ್ತ್ರೀಯರನ್ನು ಪುತ್ರರಿಂದ ಅಗಲಿಸಿರಬೇಕು. ಆದ್ದರಿಂದ ಅವಳಿಗೆ ಈ ವ್ಯಸನವು ಬಂದಿತು. ಅವಳು ನನ್ನನ್ನು ಬಹುಕಾಲ ಪೋಷಿಸಿ ಕಷ್ಟದಿಂದ ಸಲಹಿದಳು. ಅದಕ್ಕೆ ಫಲವಾಗಿ ನಾನು ಅವಳನ್ನು ಸೇವಿಸಬೇಕಾದ ಕಾಲದಲ್ಲಿ ಹೀಗೆ ವಿಯೋಗವಾಗಬೇಕೆ ? ಛಿ! ನನಗೆ ಧಿಕ್ಕಾರ ! ಯಾವ ಸುಮಂಗಳೆಯೂ ನನ್ನಂಥ ಮಗನನ್ನು ಹಡೆಯಬಾರದು ! ಲಕ್ಷ್ಮಣ, ನನ್ನ ಅಮ್ಮನಿಗೆ ನಾನು ತುದಿಯಿಲ್ಲದ ದುಃಖವನ್ನು ತಂದೊಡ್ಡಿದೆನು (೧೯-೨೧). ಅವಳು ಸಾಕಿದ ಸಾರಿಕೆಯೆಂಬ ಪಕ್ಷಿ ನನಗಿಂತಲೂ ಮೇಲು. ಅದು ನನ್ನ ತಾಯಿಗೆ ಕೇಳುವಂತೆ, 'ಎಲೈ ಗಿಳಿಯೆ, ಶತ್ರುವಿನ ಕಾಲನ್ನು ಕಚ್ಚು !' ಎಂದಾದರೂ ಹೇಳುತ್ತದೆ!* ನನಗಿಂತಲೂ ಕಚ್ಚು !' ಎಂದಾದರೂ ಹೇಳುತ್ತದೆ! ನನಗಿಂತಲೂ

---

* ಸಾರಿಕೆಯು ಕಲಿತ ಈ ಮಾತನ್ನು ಉಚ್ಚರಿಸುತ್ತದೆ. ಅದಕ್ಕೆ "ನನ್ನ ಒಡತಿಯಾದ ಕೌಸಲ್ಯೆಯ ಶತ್ರುವಿನ ಪಾದವನ್ನು ಕಚ್ಚು!"ಎಂಬ ಅರ್ಥವನ್ನು ಕಲ್ಪಿಸಿ ಶ್ರೀರಾಮನು ಹೀಗೆ ಹೇಳಿದ್ದಾನೆ. 'ಇಂಥ ಮಾತನ್ನು ಪಕ್ಷಿಯಾದರೂ ಹೇಳಿ ತನ್ನ ಒಡತಿಗೆ ಸಂತೋಷವನ್ನುಂಟುಮಾಡುತ್ತದೆ. ನನಗೆ ಅದೂ ಸಾಧ್ಯವಾಗಲಿಲ್ಲ' ಎಂದು ಅಭಿಪ್ರಾಯ.

ಶೋಚಂತ್ಯಾ ಅಲ್ಪಭಾಗ್ಯಾಯಾ ನ ಕಿಂಚಿದುಪಕುರ್ವತಾ ।
ಪುತ್ರೇಣ ಕಿಮಪುತ್ರಾಯಾ ಮಯಾ ಕಾರ್ಯಮರಿಂದಮ ॥ ೨೩
ಅಲ್ಪಭಾಗ್ಯಾ ಹಿ ಮೇ ಮಾತಾ ಕೌಸಲ್ಯಾ ರಹಿತಾ ಮಯಾ ।
ಶೇತೇ ಪರಮದುಃಖಾರ್ತಾ ಪತಿತಾ ಶೋಕಸಾಗರೇ ॥ ೨೪
ಏಕೋ ಹ್ಯಹಮಯೋಧ್ಯಾಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ತರೇಯಮಿಷುಭಿಃ ಕ್ರುದ್ಧೋ ನನು ವೀರ್ಯಮಕಾರಣಮ್ ॥ ೨೫
ಅಧರ್ಮಭಯಭೀತಶ್ಚ ಪರಲೋಕಸ್ಯ ಚಾನಘ ।
ತೇನ ಲಕ್ಷ್ಮಣ ನಾದ್ಯಾಹಮಾತ್ಮಾನಮಭಿಷೇಚಯೇ ॥ ೨೬
ಏತದನ್ಯಚ್ಚ ಕರುಣಂ ವಿಲಪ್ಯ ವಿಜನೇ ವನೇ ।
ಅಶ್ರುಪೂರ್ಣಮುಖೋ ರಾಮೋ ನಿಶಿ ತೂಷ್ಣೀಮುಪಾವಿಶತ್ ॥ ೨೭
ವಿಲಪ್ಯೋಪರತಂ ರಾಮಂ ಗತಾರ್ಚಿಷಮಿವಾನಲಮ್ ।
ಸಮುದ್ರಮಿವ ನಿರ್ವೇಗಮಾಶ್ವಾಸಯತ ಲಕ್ಷ್ಮಣಃ ॥ ೨೮

---

ಆ ಪಕ್ಷಿಗೆ ನನ್ನ ತಾಯಿಯಲ್ಲಿ ಅಧಿಕಪ್ರೀತಿ ಇದೆ!(೨೨). ಮಂದಭಾಗ್ಯಳಾಗಿ ಶೋಕಿಸುತ್ತಿರುವ ನನ್ನ ತಾಯಿಗೆ ನಾನು ಯಾವ ಉಪಕಾರವನ್ನೂ ಮಾಡಲಿಲ್ಲ. ಅವಳಿಗೆ ಪುತ್ರನಿದ್ದರೂ ಇಲ್ಲದಂತಾಯಿತು. ನನ್ನಂಥ ಮಗನಿಂದ ಏನು ಪ್ರಯೋಜನ?ಭಾಗ್ಯಹೀನಳಾದ ತಾಯಿಯನ್ನು ನಾನು ಬಿಟ್ಟುಬಂದೆ. ಅವಳು ಸಂಕಟದಿಂದ ನೊಂದು ಶೋಕಸಮುದ್ರದಲ್ಲಿ ಮುಳುಗಿಹೋಗಿದ್ದಾಳೆ (೨೩-೨೪). ಲಕ್ಷ್ಮಣ, ನಾನು ಕ್ರುದ್ಧನಾದರೆ ಒಬ್ಬನೇ ಅಯೋಧ್ಯೆಯನ್ನೂ ಸಮಸ್ತಭೂಮಂಡಲವನ್ನೂ ಜಯಿಸಬಲ್ಲೆ. ಈ ಬಾಣಗಳಿಂದ ಗೆಲ್ಲಬಲ್ಲೆ. ಆದರೆ ನಿಷ್ಕಾರಣವಾಗಿ ಪರಾಕ್ರಮವನ್ನು ಮೆರೆಸಬಾರದು. ಲಕ್ಷ್ಮಣ, (ತಂದೆಯ ಮಾತನ್ನು ಮೀರುವುದು) ಅಧರ್ಮವೆಂದೂ ಅದರಿಂದ ಪರಲೋಕ ಹಾನಿಯಾಗುವುದೆಂದು ಹಿಂಜರಿದು ಸುಮ್ಮನಿದ್ದೇನೆ. ಆದ್ದರಿಂದಲೇ ನಾನು ಪಟ್ಟಾಭಿಷೇಕವನ್ನು ಮಾಡಿಸಿಕೊಳ್ಳಲಿಲ್ಲ" ಎಂದನು (೨೫-೨೬). ಹೀಗೆ ಶ್ರೀರಾಮನು ಜನಶೂನ್ಯವಾದ ಆ ಕಾಡಿನಲ್ಲಿ ಕಣ್ಣೀರು ತುಂಬಿ ಮನಸ್ಸು ಮಿಡಿಯುವಂತೆ ವಿಲಾಪಮಾಡಿ ಹಾಗೆಯೇ ಸುಮ್ಮನಾದನು. ಜ್ವಾಲೆಯಿಲ್ಲದ ಅಗ್ನಿಯಂತೆಯೂ ತರಂಗವೇಗವಿಲ್ಲದ ಸಮುದ್ರದಂತೆಯೂ

ಧ್ರುವಮದ್ಯ ಪುರೀ ರಾಜನ್ನಯೋಧ್ಯಾ ಯುಧಿನಾಂ ವರ ।
ನಿಷ್ಪ್ರಭಾ ತ್ವಯಿ ನಿಷ್ಕ್ರಾಂತೇ ಗತಚಂದ್ರೇವ ಶರ್ವರೀ ॥ ೨೯

ನೈತದೌಪಯಿಕಂ ಹ್ಯಾರ್ಯ ಯದಿದಂ ಪರಿತಪ್ಯಸೇ ।
ವಿಷಾದಯಸಿ ಸೀತಾಂ ಚ ಮಾಂ ಚೈವ ಪುರುಷರ್ಷಭ ॥ ೩೦

ನ ಚ ಸೀತಾ ತ್ವಯಾ ಹೀನಾ ನ ಚಾಹಮಪಿ ರಾಘವ ।
ಮುಹೂರ್ತಮಪಿ ಜೀವಾವೋ ಜಲಾನ್ಮತ್ಸ್ಯಾವಿವೋದ್ಧೃತೌ ॥ ೨೧

ನ ಹಿ ತಾತಂ ನ ಶತ್ರುಘ್ನಂ ನ ಸುಮಿತ್ರಾಂ ಪರಂತಪ ।
ದ್ರಷ್ಟುಮಿಚ್ಛೇಯಮದ್ಯಾಹಂ ಸ್ವರ್ಗಂ ಚಾಪಿ ತ್ವಯಾ ವಿನಾ ॥ ೩೨

ತತಸ್ತತ್ರ ಸುಖಾಸೀನೌ ನಾತಿದೂರೇ ನಿರೀಕ್ಷ್ಯ ತಾಮ್ ।
ನ್ಯಗ್ರೋಧೇ ಸುಕೃತಾಂ ಶಯ್ಯಾಂ ಭೇಜಾತೇ ಧರ್ಮವತ್ಸಲೌ ॥ ೩೩

---

ನಿಶ್ಚಲನಾಗಿ ಕುಳಿತಿದ್ದ ಅವನನ್ನು ಲಕ್ಷ್ಮಣನು ಸಮಾಧಾನಪಡಿಸುತ್ತ ಹೀಗೆಂದನು (೨೭-೨೮):"ಅಣ್ಣ, ವೀರಾಗ್ರಣಿಯಾದ ನೀನೇ ಅಯೋಧ್ಯೆಗೆ ರಾಜ. ನೀನು ಆ ನಗರಿಯನ್ನು ಬಿಟ್ಟುಬಂದುದರಿಂದ ಅದು ನಿಶ್ಚಯವಾಗಿಯೂ ತನ್ನ ಕಾಂತಿಯನ್ನು ಕಳೆದುಕೊಂಡಿದೆ. ಚಂದ್ರನಿಲ್ಲದ ರಾತ್ರಿಯಂತಾಗಿದೆ. ಪುರುಷೋತ್ತಮನಾದ ನೀನು ಈ ರೀತಿಯಲ್ಲಿ ಶೋಕಿಸುವುದು ಯುಕ್ತವಲ್ಲ. ನೀನು ಶೋಕಿಸಿದರೆ ಸೀತಾದೇವಿಗೂ ನನಗೂ ದುಃಖ ಹೆಚ್ಚುವುದು (೨೯-೩೦). ಅಣ್ಣ! ಅತ್ತಿಗೆಯಾಗಲಿ, ನಾನಾಗಲಿ ನಿನ್ನನ್ನು ಬಿಟ್ಟು ಒಂದು ಮುಹೂರ್ತಕಾಲವೂ ಜೀವಿಸಿರಲಾರೆವು. ನೀನಿಲ್ಲದಿದ್ದರೆ ನೀರಿನಿಂದ ಹೊರಗೆ ಹಾಕಿದ ಮೀನುಗಳಂತಾಗುವೆವು. ನಿನ್ನನ್ನು ಅಗಲಿ ತಂದೆತಾಯಿಗಳನ್ನಾಗಲಿ ನನ್ನ ತಮ್ಮನನ್ನಾಗಲಿ ಹೋಗಿ ನೋಡುವ ಬಯಕೆ ನನಗಿಲ್ಲ. ನೀನಿಲ್ಲದ ಸ್ವರ್ಗವೂ ನನಗೆ ಬೇಡ" ಎಂದು ಹೇಳಿದನು (೩೧-೩೨). ಅನಂತರ ಧರ್ಮವತ್ಸಲರಾದ ಶ್ರೀರಾಮನೂ ಸೀತೆಯೂ ಸ್ವಲ್ಪ ಹೊತ್ತು ಶಾಂತರಾಗಿ ಕುಳಿತಿದ್ದರು. ಆಮೇಲೆ ಸಮೀಪದಲ್ಲಿ ಆಲದ ಮರದ ಕೆಳಗೆ ಲಕ್ಷ್ಮಣನು ಸಿದ್ಧಪಡಿಸಿದ ಹಾಸಿಗೆಯಲ್ಲಿ ಮಲಗಿದರು (೩೩).

ಸ ಲಕ್ಷ್ಮಣಸ್ಯೋತ್ತಮಪುಷ್ಕಲಂ ವಚೋ
ನಿಶಮ್ಯ ಚೈವಂ ವನವಾಸಮಾದರಾತ್ ।
ಸಮಾಃ ಸಮಸ್ತಾ ವಿದಧೇ ಪರಂತಪಃ
ಪ್ರಪದ್ಯ ಧರ್ಮಂ ಸುಚಿರಾಯ ರಾಘವಃ ॥ ೩೪

ತತಸ್ತು ತಸ್ಮಿನ್ ವಿಜನೇ ತದಾ
ಮಹಾಬಲೌ ರಾಘವವಂಶವರ್ಧನೌ ।
ನ ತೌ ಭಯಂ ಸಂಭ್ರಮಮಭ್ಯುಪೇಯತುಃ
ಯಥೈವ ಸಿಂಹೌ ಗಿರಿಸಾನುಗೋಚರೌ ॥ ೩೫

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಪಂಚಾಶಃ ಸರ್ಗಃ

ಶ್ರೀರಾಮನು ಪ್ರಶಂಸಾರ್ಹವಾದ ಲಕ್ಷ್ಮಣನ ನುಡಿಯನ್ನಾಲಿಸಿ, ತಾನು ಧರ್ಮಮಾರ್ಗದಲ್ಲಿರಬೇಕೆಂದು ನಿಶ್ಚಯಿಸಿ, ತನ್ನೊಡನೆ ಹದಿನಾಲ್ಕುವರ್ಷಗಳ ದೀರ್ಘಕಾಲದವರೆಗೆ ವನವಾಸಮಾಡಲು ಲಕ್ಷ್ಮಣನಿಗೆ ಅನುಮತಿಯನ್ನಿತ್ತನು (೩೪). ರಘುವಂಶತಿಲಕರೂ ಮಹಾಬಲಾಢ್ಯರೂ ಆದ ಆ ರಾಮ ಲಕ್ಷ್ಮಣರು ನಿರ್ಜನವಾದ ಘೋರಾರಣ್ಯದಲ್ಲಿಯೂ ನಿರ್ಭೀತಿಯಿಂದಿದ್ದರು. ಪರ್ವತಸಂಚಾರಿಗಳಾದ ಸಿಂಹಗಳಂತೆ ನಿರಾತಂಕದಿಂದಿದ್ದರು (೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತು ಮೂರನೆಯ ಸರ್ಗ

## ಚತುಃಪಂಚಾಶಃ ಸರ್ಗಃ

### ಭರದ್ವಾಜಾಶ್ರಮಾಭಿಗಮನಮ್

ತೇತು ತಸ್ಮಿನ್ ಮಹಾವೃಕ್ಷ ಉಷಿತ್ವಾ ರಜನೀಂ ಶಿವಾಮ್ ।
ವಿಮಲೇಽಭ್ಯುದಿತೇ ಸೂರ್ಯೇ ತಸ್ಮಾದ್ದೇಶಾತ್ ಪ್ರತಸ್ಥಿರೇ ॥ ೧

ಯತ್ರ ಭಾಗೀರಥೀಂ ಗಂಗಾಂ ಯಮುನಾಭಿಪ್ರವರ್ತತೇ ।
ಜಗ್ಮುಸ್ತಂ ದೇಶಮುದ್ದಿಶ್ಯ ವಿಗಾಹ್ಯ ಸುಮಹದ್ವನಮ್ ॥ ೨

ತೇ ಭೂಮಿಭಾಗಾನ್ ವಿವಿಧಾನ್ ದೇಶಾಂಶ್ಚಾಪಿ ಮನೋರಮಾನ್ ।
ಅದೃಷ್ಟಪೂರ್ವಾನ್ ಪಶ್ಯಂತಸ್ತತ್ರ ತತ್ರ ಯಶಸ್ವಿನಃ ॥ ೩

ಯಥಾ ಕ್ಷೇಮೇಣ ಸಂಪಶ್ಯನ್ ಪುಷ್ಪಿತಾನ್ ವಿವಿಧಾನ್ ದ್ರುಮಾನ್ ।
ನಿವೃತ್ತಮಾತ್ರೇ ದಿವಸೇ ರಾಮಃ ಸೌಮಿತ್ರಿಮಬ್ರವೀತ್ ॥ ೪

ಪ್ರಯಾಗಮಭಿತಃ ಪಶ್ಯ ಸೌಮಿತ್ರೇ ಧೂಮಮುತ್ತಮಮ್ ।
ಅಗ್ನೇರ್ಭಗವತಃ ಕೇತುಂ ಮನ್ಯೇ ಸಂನಿಹಿತೋ ಮುನಿಃ ॥ ೫

## ಸರ್ಗ ೫೪

### ಶ್ರೀರಾಮನು ಸೀತಾಲಕ್ಷ್ಮಣ ಸಮೇತನಾಗಿ ಭರದ್ವಾಜಮುನಿಗಳನ್ನು ಸಂದರ್ಶಿಸುವುದು.

ಹೀಗೆ ಆ ಮೂವರೂ ಆಲದಮರದ ಕೆಳಗೆ ಆ ರಾತ್ರಿಯನ್ನು ಕಳೆದರು. ಮಾರನೆಯ ದಿನ ಸೂರ್ಯನು ಉದಿಸಿ ಬೆಳಗುತ್ತಿರಲು ಅಲ್ಲಿಂದ ಮುಂದಕ್ಕೆ ಹೊರಟರು. ಒಂದು ದೊಡ್ಡ ಅಡವಿಯನ್ನು ದಾಟಿ, ಯಮುನಾ ನದಿಯು ಗಂಗೆಯನ್ನು ಸಂಗಮಿಸುವ ಪ್ರಯಾಗಕ್ಷೇತ್ರಕ್ಕೆ ಅಭಿಮುಖವಾಗಿ ಹೋಗುತ್ತಿದ್ದರು (೧-೨). ಆ ಕೀರ್ತಿಶಾಲಿಗಳು ದಾರಿಯಲ್ಲಿ ತಾವು ಹಿಂದೆ ನೋಡದ ಮನೋಹರವಾದ ವನಪ್ರದೇಶಗಳನ್ನೂ ವತ್ಸದೇಶದ ರಾಜ್ಯಭಾಗಗಳನ್ನೂ ನೋಡುತ್ತ ಹೋದರು. ಸುಂದರವಾಗಿ ಅರಳಿ ನಿಂತ ನಾನಾಬಗೆಯ ವೃಕ್ಷಗಳನ್ನು ನೋಡಿ ಆನಂದಿಸುತ್ತಹೋಗುತ್ತಿರಲು ಸಾಯಂಕಾಲ ವಾಯಿತು(೩-೪). ಆಗ ಶ್ರೀರಾಮನು ಲಕ್ಷ್ಮಣನನ್ನು ಕುರಿತು "ಸೌಮಿತ್ರಿ, ಅತ್ತ ನೋಡು. ಅಗ್ನಿಯ ಧ್ವಜವೆನಿಸಿದ ಪವಿತ್ರವಾದ ಧೂಮವು ಕಾಣಿಸುತ್ತಿದೆ.

ನೂನಂ ಪ್ರಾಪ್ತಃ ಸ ಸಂಭೇದಂ ಗಂಗಾಯಮುನಯೋರ್ವಯಮ್
ಯಥಾ ಹಿ ಶ್ರೂಯತೇ ಶಬ್ದೋ ವಾರಿಣೋ ವಾರಿಘರ್ಷಜಃ ॥ ೬

ದಾರೂಣಿ ಪರಿಭಿನ್ನಾನಿ ವನಜೈರುಪಜೀವಿಭಿಃ ।
ಭರದ್ವಾಜಾಶ್ರಮೇ ಚೈತೇ ದೃಶ್ಯಂತೇ ವಿವಿಧಾ ದ್ರುಮಾಃ ॥ ೭

ಧನ್ವಿನೌ ತೌ ಸುಖಂ ಗತ್ವಾ ಲಂಬಮಾನೇ ದಿವಾಕರೇ ।
ಗಂಗಾಯಮುನಯೋಃ ಸಂಧೌ ಪ್ರಾಪತುರ್ನಿಲಯಂ ಮುನೇಃ ॥ ೮

ರಾಮಸ್ತ್ವಾಶ್ರಮಮಾಸಾದ್ಯ ತ್ರಾಸಯನ್ ಮೃಗಪಕ್ಷಿಣಃ ।
ಗತ್ವಾ ಮುಹೂರ್ತಮಧ್ವಾನಂ ಭರದ್ವಾಜಮುಪಾಗಮತ್ ॥ ೯

ತತಸ್ತ್ವಾಶ್ರಮಮಾಸಾದ್ಯ ಮುನೇರ್ದರ್ಶನಕಾಂಕ್ಷಿಣೌ।
ಸೀತಯಾನುಗತೌ ವೀರೌ ದೂರಾದೇವಾವತಸ್ಥತುಃ ॥ ೧೦

ಸ ಪ್ರವಿಶ್ಯ ಮಹಾತ್ಮಾನಮೃಷಿಂ ಶಿಷ್ಯಗಣೈರ್ವೃತಮ್ ।
ಸಂಶಿತವ್ರತಮೇಕಾಗ್ರಂ ತಪಸಾ ಲಬ್ಧಚಕ್ಷುಷಮ್ ॥ ೧೧

---

ಭರದ್ವಾಜಮುನಿಗಳು ಅಲ್ಲಿಯೇ ಸಮೀಪದಲ್ಲಿ ವಾಸಿಸುತ್ತಿರಬೇಕು (೫). ನಾವು ಗಂಗಾಯಮುನಾನದಿಗಳ ಸಂಗಮಸ್ಥಳಕ್ಕೆ ಬಂದೆವೆಂಬುದು ನಿಶ್ಚಯ. ಏಕೆಂದರೆ, ಜಲಪ್ರವಾಹಗಳ ಘರ್ಷಣೆಯಿಂದ ಜನಿಸಿದ ನೀರಿನ ಶಬ್ದ ಕೇಳಿಸುತ್ತಿದೆ. ಅದೇ ಇಲ್ಲಿ ಜೀವಿಸುತ್ತಿರುವ ವನವಾಸಿಗಳು ಸೌದೆಗಾಗಿ ಕತ್ತರಿಸಿದ ಮರಗಳು ಕಾಣಿಸುತ್ತಿವೆ. ಅದೇ ಭರದ್ವಾಜಾಶ್ರಮವಿರಬೇಕು" ಎಂದನು (೬-೭). ಸೂರ್ಯನು ಪಶ್ಚಿಮದಲ್ಲಿ ಇಳಿಯುತ್ತಿರುವಾಗ ಆ ಧನುರ್ಧಾರಿಗಳು ಸೀತೆಯೊಡನೆ ಸುಖವಾಗಿ ಪ್ರಯಾಣಮಾಡಿ ನದೀಸಂಗಮದಲ್ಲಿದ್ದ ಭರದ್ವಾಜಾಶ್ರಮದ ಸಮೀಪವನ್ನು ಸೇರಿದರು. ಆಶ್ರಮದಲ್ಲಿದ್ದ ಮೃಗಪಕ್ಷಿಗಳು ಇವರನ್ನು ಕಂಡು ಹೆದರಿ ಓಡಿದವು. ಸ್ವಲ್ಪ ಹೊತ್ತಿನಲ್ಲಿ ಅವರು ಭರದ್ವಾಜರ ಪರ್ಣಶಾಲೆಗೆ ಹೋಗಿ ಆ ಮುನಿಗಳ ದರ್ಶನಮಾಡಬೇಕೆಂದು ಸಮಯವನ್ನು ನಿರೀಕ್ಷಿಸುತ್ತ ದೂರದಲ್ಲಿ ಕಾದಿದ್ದರು (೮-೧೦). ಅನಂತರ (ಮುನಿಗಳ ಅನುಜ್ಞೆಯನ್ನು ಪಡೆದು) ಶ್ರೀರಾಮನು ಸೀತಾ ಲಕ್ಷ್ಮಣ ಸಮೇತನಾಗಿ ಆಶ್ರಮವನ್ನು ಪ್ರವೇಶಿಸಿದನು. ತೀಕ್ಷ್ಣವ್ರತಶಾಲಿಗಳೂ ತಪೋಮಹಿಮೆಯಿಂದ ದಿವ್ಯಜ್ಞಾನ ಸಂಪನ್ನರೂ ಮಹಾತ್ಮರೂ ಆದ ಭರದ್ವಾಜ

ಹುತಾಗ್ನಿಹೋತ್ರಂ ದೃಷ್ಟ್ವೈವ ಮಹಾಭಾಗಂ ಕೃತಾಂಜಲಿಃ ।
ರಾಮಃ ಸೌಮಿತ್ರಿಣಾ ಸಾರ್ಧಂ ಸೀತಯಾ ಚಾಭ್ಯವಾದಯತ್ ॥ ೧೨

ನ್ಯವೇದಯತ ಚಾತ್ಮಾನಂ ತಸ್ಮೈ ಲಕ್ಷ್ಮಣಪೂರ್ವಜಃ ।
ಪುತ್ರೌ ದಶರಥಸ್ಯಾವಾಂ ಭಗವನ್ ರಾಮಲಕ್ಷ್ಮಣೌ ॥ ೧೩

ಭಾರ್ಯಾ ಮಮೇಯಂ ವೈದೇಹೀ ಕಲ್ಯಾಣೀ ಜನಕಾತ್ಮಜಾ ।
ಮಾಂ ಚಾನುಯಾತಾ ವಿಜನಂ ತಪೋವನಮನಿಂದಿತಾ ॥ ೧೪

ಪಿತ್ರಾ ಪ್ರವ್ರಾಜ್ಯಮಾನಂ ಮಾಂ ಸೌಮಿತ್ರಿರನುಜಃ ಪ್ರಿಯಃ ।
ಅಯಮನ್ವಗಮದ್ಭ್ರಾತಾ ವನಮೇವ ದೃಢವ್ರತಃ ॥ ೧೫

ಪಿತ್ರಾ ನಿಯುಕ್ತಾ ಭಗವನ್ ಪ್ರವೇಕ್ಷ್ಯಾಮಸ್ತಪೋವನಮ್ ।
ಧರ್ಮಮೇವ ಚರಿಷ್ಯಾಮಃ ಪತ್ರಮೂಲಫಲಾಶನಾಃ ॥ ೧೬

ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ ।
ಉಪಾನಯತ ಧರ್ಮಾತ್ಮಾ ಗಾಮರ್ಘ್ಯಮುದಕಂ ತತಃ ॥ ೧೭

---

ಮುನಿಗಳು ಧ್ಯಾನನಿಷ್ಠರಾಗಿ ಶಿಷ್ಯರೊಡನೆ ಕುಳಿತಿದ್ದರು. ಅಗ್ನಿಹೋತ್ರವನ್ನು ಮುಗಿಸಿದ್ದರು. ಈ ಮೂವರೂ ಅವರನ್ನು ನೋಡಿ ಕೈಮುಗಿದು ಅಭಿವಾದನೆ ಮಾಡಿದರು. (೧೧-೧೨).. ಶ್ರೀರಾಮನು ತನ್ನ ವೃತ್ತಾಂತವನ್ನು ಭರದ್ವಾಜರಿಗೆ ನಿವೇದಿಸುತ್ತ "ಭಗವನ್, ನಾವಿಬ್ಬರೂ ದಶರಥಮಹಾರಾಜನ ಪುತ್ರರು. ನನ್ನ ಹೆಸರು ರಾಮ, ಈತನು ಲಕ್ಷ್ಮಣ. ಈ ಶುಭಾಂಗಿಯು ನನ್ನ ಪತ್ನಿ ವೈದೇಹಿ; ಜನಕಮಹಾರಾಜನ ತನಯೆ; ತಪೋವನಕ್ಕೆ ಹೊರಟು ನನ್ನನ್ನು ಅನುಸರಿಸಿ ಬಂದಿದ್ದಾಳೆ (೧೩-೧೪). ನನ್ನ ತಂದೆಯು ನನ್ನನ್ನು ವನವಾಸಕ್ಕಾಗಿ ಕಳಿಸಲಾಗಿ, ನನ್ನ ಈ ತಮ್ಮನು ದೃಢನಿಷ್ಠೆಯಿಂದ ನನ್ನೊಡನೆ ಅರಣ್ಯಕ್ಕೆ ಬಂದಿದ್ದಾನೆ. ಈತನು ಸುಮಿತ್ರಾದೇವಿಯ ತನಯ. ಭಗವನ್, ತಂದೆಯ ಆಜ್ಞೆಯನ್ನು ಪಾಲಿಸುವುದಕ್ಕಾಗಿ ನಾವು ತಪೋವನಕ್ಕೆ ಬಂದಿದ್ದೇವೆ. ಎಲೆಗಳನ್ನೂ ಗಡ್ಡೆಗೆಣಸುಗಳನ್ನೂ ಹಣ್ಣುಗಳನ್ನೂ ತಿನ್ನುತ್ತ ಪಿತೃವಾಕ್ಯ ಪಾಲನೆಯೆಂಬ ಧರ್ಮವನ್ನು ಆಚರಿಸಲು ಸಂಕಲ್ಪಿಸಿದ್ದೇವೆ" ಎಂದು ಹೇಳಿದನು (೧೫-೧೬). ಧೀಮಂತನಾದ ಆ ರಾಜಪುತ್ರನ ವಚನವನ್ನು ಆಕರ್ಣಿಸಿ ಧರ್ಮಾತ್ಮರಾದ ಭರದ್ವಾಜರು ಮಧುಪರ್ಕವನ್ನಿತ್ತು ಸತ್ಕರಿಸುವುದಕ್ಕಾಗಿ

ನಾನಾವಿಧಾನನ್ನರಸಾನ್ ವನ್ಯಮೂಲಫಲಾಶ್ರಯಾನ್ ।
ತೇಭ್ಯೋ ದದೌ ತಪ್ತತಪಾ ವಾಸಂ ಚೈವಾನ್ವಕಲ್ಪಯತ್ ॥ ೧೮

ಮೃಗಪಕ್ಷಿಭಿರಾಸೀನೋ ಮುನಿಭಿಶ್ಚ ಸಮಂತತಃ ।
ರಾಮಮಾಗತಮಭ್ಯರ್ಚ್ಯ ಸ್ವಾಗತೇನಾಹ ತಂ ಮುನಿಃ ॥ ೧೯

ಪ್ರತಿಗೃಹ್ಯ ಚ ತಾಮರ್ಚಾಮುಪವಿಷ್ಟಂ ಸ ರಾಘವಮ್ ।
ಭರದ್ವಾಜೋಽಬ್ರವೀದ್ವಾಕ್ಯಂ ಧರ್ಮಯುಕ್ತಮಿದಂ ತದಾ ॥ ೨೦

ಚಿರಸ್ಯ ಖಲು ಕಾಕುತ್ಸ್ಥ ಪಶ್ಯಾಮಿ ತ್ವಾಮಿಹಾಗತಮ್ ।
ಶ್ರುತಂ ತವ ಮಯಾ ಚೇದಂ ವಿವಾಸನಮಕಾರಣಮ್ ॥ ೨೧

ಅವಕಾಶೋ ವಿವಿಕ್ತೋಽಯಂ ಮಹಾನದ್ಯೋಃ ಸಮಾಗಮೇ ।
ಪುಣ್ಯಶ್ಚ ರಮಣೀಯಶ್ಚ ವಸತ್ವಿಹ ಭವಾನ್ ಸುಖಮ್ ॥ ೨೨

ಏವಮುಕ್ತಃ ಸ ವಚನಂ ಭರದ್ವಾಜೇನ ರಾಘವಃ ।
ಪ್ರತ್ಯುವಾಚ ಶುಭಂ ವಾಕ್ಯಂ ರಾಮಃ ಸರ್ವಹಿತೇ ರತಃ ॥ ೨೩

---

ಅರ್ಘ್ಯವನ್ನೂ ಒಂದು ವೃಷಭವನ್ನೂ ತರಿಸಿದರು (೧೭). ಆ ತಪಸ್ವಿಗಳು ಕಾಡಿನಲ್ಲಿರುವ ಫಲಮೂಲಗಳಿಂದ ನಿರ್ಮಿಸಿದ ರುಚಿಯಾದ ವಿವಿಧ ಆಹಾರ ಪದಾರ್ಥಗಳನ್ನು ಅವರಿಗೆ ಕೊಟ್ಟು ಉಪಚರಿಸಿದರು. (ರಾತ್ರಿಯನ್ನು ಕಳೆಯಲು) ವಸತಿಯನ್ನೇರ್ಪಡಿಸಿದರು (೧೮). ಆಶ್ರಮದ ಮೃಗಪಕ್ಷಿಗಳೊಡನೆಯೂ ಮುನಿಗಳೊಡನೆಯೂ ಕುಳಿತಿದ್ದ ಭರದ್ವಾಜರು ಅತಿಥಿಯಾಗಿ ಬಂದ ಶ್ರೀರಾಮನನ್ನು ಸ್ವಾಗತಿಸಿ ಸತ್ಕರಿಸಿದರು. ಅನಂತರ ಭರದ್ವಾಜರು ಏರ್ಪಡಿಸಿದ ಅತಿಥಿಸತ್ಕಾರವನ್ನು ಶ್ರೀರಾಮನು ಸೀತಾಲಕ್ಷ್ಮಣರೊಡನೆ ಸ್ವೀಕರಿಸಿ ಅವರ ಬಳಿಗೆ ಬಂದು ಕುಳಿತುಕೊಂಡನು (೧೯-೨೦). ಆಗ ಭರದ್ವಾಜಮುನಿಗಳು "ರಾಮ, ಇಲ್ಲಿಗೆ ಬಂದ ನಿನ್ನನ್ನು ನೋಡಿ ಬಹುಕಾಲವಾಯಿತು. ನಿಷ್ಕಾರಣವಾಗಿ ನಿನಗೆ ದೇಶಚ್ಯುತಿಯಾಯಿತೆಂಬ ವಿಷಯವನ್ನು ನಾನು ಕೇಳಿದೆ. ಈ ಮಹಾನದಿಗಳ ಸಂಗಮಪ್ರದೇಶವು ಏಕಾಂತವಾಗಿದೆ. ಈ ಸ್ಥಳವು ಮನೋಹರವಾಗಿದೆಯಲ್ಲದೆ ಪುಣ್ಯಕ್ಷೇತ್ರವಾಗಿದೆ. ನೀನು ಇಲ್ಲಿ ಸುಖವಾಗಿ ವಾಸಮಾಡಿಕೊಂಡಿರು" ಎಂದು ನುಡಿದರು (೨೧-೨೨). ಅದಕ್ಕೆ ಸರ್ವರ ಹಿತದಲ್ಲಿಯೂ ಆಸಕ್ತನಾದ ಶ್ರೀರಾಮನು "ಮಹರ್ಷಿಗಳೆ,

ಭಗವನ್ನಿತ ಆಸನ್ನಃ ಪೌರಜಾನಪದೋ ಜನಃ ।
ಸುದರ್ಶಮಿಹ ಮಾಂ ಪ್ರೇಕ್ಷ್ಯ ಮನ್ಯೇಽಹಮಿಮಮಾಶ್ರಮಮ್ ॥ ೨೪

ಆಗಮಿಷ್ಯತಿ ವೈದೇಹೀಂ ಮಾಂ ಚಾಪಿ ಪ್ರೇಕ್ಷಕೋ ಜನಃ ।
ಅನೇನ ಕಾರಣೇನಾಹಮಿಹ ವಾಸಂ ನ ರೋಚಯೇ ॥ ೨೫

ಏಕಾಂತೇ ಪಶ್ಯ ಭಗವನ್ನಾಶ್ರಮಸ್ಥಾನಮುತ್ತಮಮ್ ।
ರಮತೇ ಯತ್ರ ವೈದೇಹೀ ಸುಖಾರ್ಹಾ ಜನಕಾತ್ಮಜಾ ॥ ೨೬

ಏತಚ್ಛ್ರುತ್ವಾ ಶುಭಂ ವಾಕ್ಯಂ ಭರದ್ವಾಜೋ ಮಹಾಮುನಿಃ
ರಾಘವಸ್ಯ ತತೋ ವಾಕ್ಯಮರ್ಥಗ್ರಾಹಕಮಬ್ರವೀತ್ ॥ ೨೭

ದಶಕ್ರೋಶ ಇತಸ್ತಾತ ಗಿರಿರ್ಯಸ್ಮಿನ್ನಿವತ್ಸ್ಯಸಿ।
ಮಹರ್ಷಿಸೇವಿತಃ ಪುಣ್ಯ ಸರ್ವತಃ ಶುಭದರ್ಶನಃ ॥ ೨೮

ಗೋಲಾಂಗೂಲಾನುಚರಿತೋ ವಾನರರ್ಕನಿಷೇವಿತಃ ।
ಚಿತ್ರಕೂಟ ಇತಿ ಖ್ಯಾತೋ ಗಂಧಮಾದನಸಂನಿಭಃ ॥ ೨೯

---

ಅಯೋಧ್ಯಾನಗರವಾಸಿಗಳೂ ರಾಜ್ಯದ ಇತರ ಪ್ರಜೆಗಳು ಇಲ್ಲಿಗೆ ಸಮೀಪದಲ್ಲಿದ್ದಾರೆ. ಇಲ್ಲಿ ನನ್ನನ್ನೂ ಸೀತೆಯನ್ನೂ ನೋಡುವುದು ಸುಲಭವೆಂದು ತಿಳಿದು, ಅವರು ಪ್ರೇಕ್ಷಕರಾಗಿ ಬರತೊಡಗುವರು. ಈ ಕಾರಣದಿಂದ ಇಲ್ಲಿ ವಾಸಮಾಡುವುದು ನನಗೆ ಇಷ್ಟವಿಲ್ಲ (೨೩-೨೫). ಆದ್ದರಿಂದ (ದೂರದಲ್ಲಿ) ಏಕಾಂತವಾಗಿರುವ ಒಂದು ಉತ್ತಮವಾದ ಆಶ್ರಮಸ್ಥಾನವನ್ನು ನೋಡಿ ಹೇಳಿರಿ. ಅದು ಸುಖೋಚಿತಳಾದ ಈ ಜಾನಕಿಯು ಹರ್ಷಪಡುವಂಥ ಸ್ಥಳವಾಗಿರಬೇಕು" ಎಂದು ವಿಜ್ಞಾಪಿಸಿದನು (೨೬). ರಾಘವನ ಈ ಶುಭವಚನವನ್ನು ಕೇಳಿ ಭರದ್ವಾಜಮಹಾಮುನಿಗಳು ಅರ್ಥಗರ್ಭಿತವಾಗಿ ನುಡಿದರು : "ವತ್ಸ, ಇಲ್ಲಿಗೆ ಹತ್ತು ಹರದಾರಿಗಳ ದೂರದಲ್ಲಿ ಒಂದು ಪರ್ವತವಿದೆ. ಅಲ್ಲಿ ನೀನು ವಾಸವಾಗಿರಬಹುದು. ಅದು ಮಹರ್ಷಿಸೇವಿತವಾಗಿ ಪುಣ್ಯಕರವಾಗಿದೆ. ಎಲ್ಲ ವಿಧದಲ್ಲಿಯೂ ಅದು ಮನೋಜ್ಞವಾದ ಸ್ಥಳ (೨೭-೨೮).ಅಲ್ಲಿ ಗೋಲಾಂಗೂಲ ವಾನರ ಎಂಬ ಕಪಿಗಳೂ ಕರಡಿಗಳೂ ಸಂಚರಿಸಿಕೊಂಡಿವೆ. ಆ ಪರ್ವತದ ಹೆಸರು ಚಿತ್ರಕೂಟ. ಗಂಧಮಾದನಗಿರಿಯಂತೆ

ಯಾವತಾ ಚಿತ್ರಕೂಟಸ್ಯ ನರಃ ಶೃಂಗಾಣ್ಯವೇಕ್ಷತೇ ।
ಕಲ್ಯಾಣಾನಿ ಸಮಾಧತ್ತೇ ನ ಪಾಪೇ ಕುರುತೇ ಮನಃ ॥ ೩೦
ಋಷಯಸ್ತತ್ರ ಬಹವೋ ವಿಹೃತ್ಯ ಶರದಾಂ ಶತಮ್ ।
ತಪಸಾ ದಿವಮಾರೂಢಾಃ ಕಪಾಲಶಿರಸಾ ಸಹ ॥ ೩೧
ಪ್ರವಿವಿಕ್ತಮಹಂ ಮನ್ಯೇ ತಂ ವಾಸಂ ಭವತಃ ಸುಖಮ್ ।
ಇಹ ವಾ ವನವಾಸಾಯ ವಸ ರಾಮ ಮಯಾ ಸಹ ॥ ೩೨
ಸ ರಾಮಂ ಸರ್ವಕಾಮೈಸ್ತಂ ಭರದ್ವಾಜಃ ಪ್ರಿಯಾತಿಥಿಮ್ ।
ಸಭಾರ್ಯಂ ಸಹ ಚ ಭ್ರಾತ್ರಾ ಪ್ರತಿಜಗ್ರಾಹ ಧರ್ಮವಿತ್ ॥ ೩೩
ತಸ್ಯ ಪ್ರಯಾಗೇ ರಾಮಸ್ಯ ತಂ ಮಹರ್ಷಿಮುಪೇಯುಷಃ ।
ಪ್ರಪನ್ನಾ ರಜನೀ ಪುಣ್ಯಾ ಚಿತ್ರಾಃ ಕಥಯತಃ ಕಥಾಃ ॥ ೩೪
ಸೀತಾತೃತೀಯಃ ಕಾಕುತ್ಸ್ಥಃ ಪರಿಶ್ರಾಂತಃ ಸುಖೋಚಿತಃ ।
ಭರದ್ವಾಜಾಶ್ರಮೇ ರಮ್ಯೇ ತಾಂ ರಾತ್ರಿಮುವಸತ್ ಸುಖಮ್ ॥ ೩೫

---

ಮನೋಹರವಾದ ಬೆಟ್ಟ. ಚಿತ್ರಕೂಟದ ಶಿಖರಗಳನ್ನು ನೋಡಿದರೆ ಸಾಕು, ಮನುಷ್ಯನು ಪ್ರಸನ್ನಚಿತ್ತನಾಗಿ ಪುಣ್ಯಕಾರ್ಯಗಳನ್ನು ಆಚರಿಸುವನು. ಅವನಿಗೆ ಪಾಪಕರ್ಮದಲ್ಲಿ ಮನಸ್ಸೇ ಇರುವುದಿಲ್ಲ (೨೯-೩೦). ಆ ಪರ್ವತದಲ್ಲಿ ಬಹು ಮಂದಿ ಋಷಿಗಳು ಕಪಾಲದಂತೆ ಶಿರಸ್ಸು ಬಿಳುಪಾಗುವವರೆಗೆ ನೂರಾರು ವರ್ಷಗಳ ಕಾಲ ತಪಸ್ಸುಮಾಡಿ ಸ್ವರ್ಗವನ್ನು ಸೇರಿದ್ದಾರೆ. ರಾಮ, ಜನಸಮ್ಮರ್ದವಿಲ್ಲದ ಆ ಸ್ಥಳವು ನಿನ್ನ ವಾಸಕ್ಕೆ ಸುಖಕರವಾಗುವುದೆಂದು ನಾನು ಭಾವಿಸುತ್ತೇನೆ. ಅಥವಾ ನನ್ನೊಡನೆ ಇಲ್ಲಿಯೇ ಇದ್ದು ನಿನ್ನ ವನವಾಸವನ್ನು ಪೂರ್ತಿಮಾಡು" ಎಂದರು (೩೧-೩೨). ಧರ್ಮಜ್ಞರಾದ ಭರದ್ವಾಜಮಹರ್ಷಿಗಳು ತಮ್ಮ ಆಶ್ರಮಕ್ಕೆ ಪ್ರಿಯನಾದ ಅತಿಥಿಯಾಗಿ ಸೀತಾ ಲಕ್ಷ್ಮಣರೊಡನೆ ಬಂದ ಶ್ರೀರಾಮನನ್ನು ಎಲ್ಲ ಬಗೆಯ ಉಪಚಾರಗಳಿಂದಲೂ ಸತ್ಕರಿಸಿದರು. ಆ ಪ್ರಯಾಗಕ್ಷೇತ್ರದಲ್ಲಿ ಭರದ್ವಾಜ ಮಹರ್ಷಿಗಳೊಡನೆ ಶ್ರೀರಾಮನು ವಿವಿಧವಿಷಯಗಳನ್ನು ಕುರಿತು ಮಾತನಾಡುತ್ತಿರಲು ರಾತ್ರಿಯಾಯಿತು (೩೩-೩೪). ಸೀತಾರಾಮಲಕ್ಷ್ಮಣರು ದಿನವೆಲ್ಲ ನಡೆದು ಬಂದದ್ದರಿಂದ ಬಳಲಿದ್ದರು. ಆ ಮೂವರೂ ರಮ್ಯವಾದ ಭರದ್ವಾಜಾಶ್ರಮದಲ್ಲಿ

ಪ್ರಭಾತಾಯಾಂ ತು ಶರ್ವರ್ಯಾಂ ಭರದ್ವಾಜಮುಪಾಗಮತ್ ।
ಉವಾಚ ನರಶಾರ್ದೂಲೋ ಮುನಿಂ ಜ್ವಲಿತತೇಜಸಮ್ ॥ ೩೬

ಶರ್ವರೀಂ ಭಗವನ್ನದ್ಯ ಸತ್ಯಶೀಲ ತವಾಶ್ರಮೇ ।
ಉಜಾತಾಃ ಸ್ಮ ಸುಖಂ ಗಂತುಮನುಜಾನಾತು ನೋ ಭವಾನ್ ॥ ೩೭

ರಾತ್ರ್ಯಾಂ ತು ತಸ್ಯಾಂವ್ಯುಷ್ಟಾಯಾಂ ಭರದ್ವಾಜೋಽಬ್ರವೀದಿದಮ್
ಮಧುಮೂಲಫಲೋಪೇತಂ ಚಿತ್ರಕೂಟಂ ವ್ರಜೇತಿ ಹ ॥ ೩೮

ವಾಸಮೌಪಯಿಕಂ ಮನ್ಯೇ ತವ ರಾಮ ಮಹಾಬಲ ।
ನಾನಾನಗಗಣೋಪೇತಃ ಕಿಂನರೋರಗಸೇವಿತಃ ॥ ೩೯

ಮಯೂರನಾದಾಭಿರುತೋ ಗಜರಾಜನಿಷೇವಿತಃ ।
ಗಮ್ಯತಾಂ ಭವತಾ ಶೈಲಶ್ಚಿತ್ರಕೂಟಃ ವಿಶ್ರುತಃ ॥ ೪೦

ಪುಣ್ಯಶ್ಚ ರಮಣೀಯಶ್ಚ ಬಹುಮೂಲಫಲಾಯುತಃ।
ತತ್ರ ಕುಂಜರಯೂಥಾನಿ ಮೃಗಯೂಥಾನಿ ಚಾಭಿತಃ ॥ ೪೧

---

ಆ ರಾತ್ರಿಯನ್ನು ಸುಖವಾಗಿ ಕಳೆದರು (೩೫). ರಾತ್ರಿಯು ಕಳೆದು ಬೆಳಗಾಗುತ್ತಿರಲು ಶ್ರೀರಾಮನು ತೇಜಸ್ವಿಗಳಾದ ಭರದ್ವಾಜಮುನಿಗಳನ್ನು ಕಂಡು "ಮಹಾತ್ಮರೆ, ತಮ್ಮ ಆಶ್ರಮದಲ್ಲಿ ರಾತ್ರಿಯನ್ನು ಸುಖವಾಗಿ ಕಳೆದೆವು. ಮುಂದೆ ಪ್ರಯಾಣಮಾಡಲು ನಮಗೆ ಅನುಜ್ಞೆಯನ್ನು ಕೊಡಬೇಕು" ಎಂದು ಕೇಳಿಕೊಂಡನು (೩೬-೩೭). ಆಗ ಭರದ್ವಾಜರು "ರಾಮ, ನಾನು ಹೇಳಿದಂತೆ ಚಿತ್ರಕೂಟಕ್ಕೆ ಹೋಗು. ಅಲ್ಲಿ ಜೇನು, ಗಡ್ಡೆಗೆಣಸು, ಹಣ್ಣುಗಳು ಬೇಕಾದಷ್ಟು ದೊರಕುತ್ತವೆ. ನೀನು ವಾಸವಾಗಿರಲು ಅದು ಯೋಗ್ಯಸ್ಥಳವೆಂದು ನನ್ನ ಅಭಿಪ್ರಾಯ. ವಿವಿಧವೃಕ್ಷಗಳು ಅಲ್ಲಿ ಹೇರಳವಾಗಿವೆ. ಅದು ಕಿನ್ನರೋರಗರೂ ಪ್ರೀತಿಸುವ ಸ್ಥಳ (೩೮-೩೯). ನವಿಲುಗಳ ಕೇಕಾರವದಿಂದಲೂ ಆನೆಗಳ ಸಂಚಾರದಿಂದಲೂ ಮನೋಜ್ಞವಾದ ಆ ಚಿತ್ರಕೂಟ ಪರ್ವತಕ್ಕೆ ನೀನು ಹೋಗು ಅದು ಪುಣ್ಯಸ್ಥಳವಲ್ಲದೆ ಫಲಮೂಲ ಗಳಿಂದ ರಮಣೀಯವಾಗಿದೆ. ಆನೆಗಳೂ ಜಿಂಕೆಗಳೂ ಹಿಂಡುಹಿಂಡಾಗಿ ಸಂಚರಿಸು

ವಿಚರಂತಿ ವನಾಂತೇಽಸ್ಮಿಂಸ್ತಾನಿ ದ್ರಕ್ಷ್ಯಸಿ ರಾಘವ ।
ಸರಿತ್ಪ್ರಸ್ರವಣಪ್ರಸ್ಥಾನ್ ದರೀಕಂದರನಿರ್ಝರಾನ್ ॥ ೪೨
ಚರತಃ ಸೀತಯಾ ಸಾರ್ಧಂ ನಂದಿಷ್ಯತಿ ಮನಸ್ತವ ॥

ಪ್ರಹೃಷ್ಟಕೋಯಷ್ಟಿಕಕೋಕಿಲಸ್ವನೈಃ
ವಿನಾದಿತಂ ತಂ ವಸುಧಾಧರಂ ಶಿವಮ್ ।
ಮೃಗೈಶ್ಚ ಮತ್ತೈರ್ಬಹುಭಿಶ್ಚ ಕುಂಜರೈಃ
ಸುರಮ್ಯಮಾಸಾದ್ಯ ಸಮಾವಸಾಶ್ರಮಮ್ ॥ ೪೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಃಪಂಚಾಶಃ ಸರ್ಗಃ

ತ್ತವೆ (೪೦-೪೧). ಅವೆಲ್ಲವನ್ನೂ ನೋಡುತ್ತ ಆನಂದಿಸಬಹುದು. ಆ ಪರ್ವತಶ್ರೇಣಿಯಲ್ಲಿ ಹರಿಯುವ ನದಿಗಳು, ಜಲಪಾತಗಳು, ತಪ್ಪಲುಪ್ರದೇಶಗಳು, ಬಂಡೆಗಳಿಂದ ರಚಿತವಾದ ಸಂದುಗಳು, ಗುಹೆಗಳು ಮತ್ತು ನೀರಿನ ಚಿಲುಮೆಗಳು ಬಹಳ ಸುಂದರವಾಗಿ ತೋರುತ್ತವೆ. ಅಲ್ಲಿ ಸೀತೆಯೊಡನೆ ಸಂಚರಿಸುತ್ತಿದ್ದರೆ ನಿನ್ನ ಮನಸ್ಸಿಗೆ ಹರ್ಷವಾಗುವುದು (೪೨). ಶುಭಕರವಾದ ಆ ಪರ್ವತದಲ್ಲಿ ಟಿಟ್ಟಿಭಗಳೂ ಕೋಗಿಲೆಗಳೂ ಇಂಪಾಗಿ ಧ್ವನಿಗೈಯುತ್ತ ಹಾರಾಡುವವು. ಜಿಂಕೆಗಳೂ ಮದ್ದಾನೆಗಳೂ ವಿಲಾಸದಿಂದ ಸಂಚರಿಸುತ್ತವೆ. ಮನೋಹರವಾದ ಆ ಗಿರಿಯಲ್ಲಿ ಆಶ್ರಮವನ್ನು ರಚಿಸಿಕೊಂಡು ವಾಸವಾಗಿರು" ಎಂದು ನುಡಿದರು (೪೩).

ಅಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತುನಾಲ್ಕನೆಯ ಸರ್ಗ

## ಪಂಚಪಂಚಾಶಃ ಸರ್ಗಃ

### ಯಮುನಾತರಣಮ್

ಉಷಿತ್ವಾ ರಜನೀಂ ತತ್ರ ರಾಜಪುತ್ರಾವರಿಂದಮೌ ।
ಮಹರ್ಷಿಮಭಿವಾದ್ಯಾಥ ಜಗ್ಮತುಸ್ತಂ ಗಿರಿಂ ಪ್ರತಿ ॥ ೧
ತೇಷಾಂ ಸ್ವಸ್ತ್ಯಯನಂ ಚೈವ ಮಹರ್ಷಿಃ ಸ ಚಕಾರ ಹ ।
ಪ್ರಸ್ಥಿತಾಂಶ್ಚೈವ ತಾನ್ ಪ್ರೇಕ್ಷ್ಯ ಪಿತಾ ಪುತ್ರಾನಿವಾನ್ವಗಾತ್ ॥ ೨
ತತಃ ಪ್ರಚಕ್ರಮೇ ವಕ್ತುಂ ವಚನಂ ಸ ಮಹಾಮುನಿಃ ।
ಭರದ್ವಾಜೋ ಮಹಾತೇಜಾ ರಾಮಂ ಸತ್ಯಪರಾಕ್ರಮಮ್ ॥ ೩
ಗಂಗಾಯಮುನಯೋಃ ಸಂಧಿಮಾಸಾದ್ಯ ಮನುಜರ್ಷಭೌ ।
ಕಾಲಿಂದೀಮನುಗಚ್ಛೇತಾಂ ನದೀಂ ಪಶ್ಚಾನ್ಮುಖಾಶ್ರಿತಾಮ್ ॥ ೪
ಅಥಾಸಾದ್ಯ ತು ಕಾಲಿಂದೀಂ ಶೀಘ್ರಸ್ರೋತಸಮಾಪಗಾಮ್ ।
ತಸ್ಯಾಸ್ತೀರ್ಥಂ ಪ್ರಚರಿತಂ ಪುರಾಣಂ ಪ್ರೇಕ್ಷ್ಯ ರಾಘವೌ ॥ ೫

## ಸರ್ಗ ೫೫

**ಭರದ್ವಾಜರು ಚಿತ್ರಕೂಟಕ್ಕೆ ಹೋಗುವ ದಾರಿಯನ್ನು ಹೇಳಲು, ಶ್ರೀರಾಮನು ಸೀತಾಲಕ್ಷ್ಮಣರೊಡನೆ ಯಮುನಾನದಿಯನ್ನು ದಾಟುವುದು.**

ಹೀಗೆ ರಾಮಲಕ್ಷ್ಮಣರು ಭರದ್ವಾಜಾಶ್ರಮದಲ್ಲಿ ಆ ರಾತ್ರಿಯನ್ನು ಕಳೆದು, ಆ ಮಹರ್ಷಿಗಳಿಗೆ ವಂದಿಸಿ ಚಿತ್ರಕೂಟ ಪರ್ವತದ ಕಡೆಗೆ ಹೊರಟರು. ಭರದ್ವಾಜಮುನಿಗಳು ಆ ಮೂವರಿಗೂ ಆಶೀರ್ವಾದವನ್ನು ಮಾಡಿ, ತಂದೆಯು ಮಕ್ಕಳನ್ನು ಕಳಿಸಿಕೊಡುವಂತೆ ವಾತ್ಸಲ್ಯದಿಂದ ಅವರನ್ನು ಕಳಿಸುತ್ತ ಹೋದರು (೧-೨). ಮಹಾತೇಜಸ್ವಿಗಳಾದ ಆ ಋಷಿಶ್ರೇಷ್ಠರು ಸತ್ಯಸಂಧನಾದ ಶ್ರೀರಾಮನನ್ನು ನೋಡಿ ಹೀಗೆ ನುಡಿದರು: "ರಾಮ, ಲಕ್ಷ್ಮಣ, ಪುರುಷಶ್ರೇಷ್ಠರಾದ ನೀವು ಗಂಗಾಯಮುನಾ ಸಂಗಮಸ್ಥಳದಿಂದ ಪಶ್ಚಿಮಾಭಿಮುಖರಾಗಿ ಯಮುನಾನದಿಯ ಉತ್ತರತೀರವನ್ನು ಹಿಡಿದು ಹೋಗಿರಿ (೩-೪). ಆನದಿಯು ಗಂಗಾನದಿಯ ವೇಗದಿಂದ ಪ್ರತಿಹತವಾಗಿ ಸ್ವಲ್ಪ ಮೇಲ್ಮುಖವಾಗಿ ಹೀಂದಕ್ಕೆ ಹರಿಯುತ್ತಿದ್ದರೂ ನೀವು ಮುಂದೆಹೋಗುತ್ತ

ತತ್ರ ಯೂಯಂ ಪ್ಲವಂ ಕೃತ್ವಾ ತರತಾಂಶುಮತೀಂ ನದೀಮ್ ।
ತತೋ ನ್ಯಗ್ರೋಧಮಾಸಾದ್ಯ ಮಹಾಂತಂ ಹರಿತಚ್ಛದಮ್ ॥ ೬

ಪರೀತಂ ಬಹುಭಿರ್ವೃಕ್ಷೈಃ ಶ್ಯಾಮಂ ಸಿದ್ಧೋಪಸೇವಿತಮ್ ।
ತಸ್ಯ ಸೀತಾಂಜಲಿಂ ಕೃತ್ವಾ ಪ್ರಯುಂಜೀತಾಶಿಷಃ ಶಿವಾಃ ॥ ೭

ಸಮಾಸಾದ್ಯ ತು ತಂ ವೃಕ್ಷಂ ವಸೇದ್ವಾತಿಕ್ರಮೇತ ವಾ।
ಕ್ರೋಶಮಾತ್ರಂ ತತೋ ಗತ್ವಾ ನೀಲಂ ದ್ರಕ್ಷ್ಯಥ ಕಾನನಮ್ ॥ ೮

ಸಲ್ಲಕೀಬದರೀಮಿಶ್ರಂ ರಮ್ಯಂ ವಂಶೈಶ್ಚ ಯಾಮುನೈಃ ।
ಸ ಪಂಥಾಶ್ಚಿತ್ರಕೂಟಸ್ಯ ಗತಃ ಸುಬಹುಶೋ ಮಯಾ ॥ ೯

ರಮ್ಯೋ ಮಾರ್ದವಯುಕ್ತಶ್ಚ ದಾವೈಶ್ಚೈವ ವಿವರ್ಜಿತಃ ।
ಇತಿ ಪಂಥಾನಮಾದಿಶ್ಯ ಮಹರ್ಷಿಃ ಸಂನ್ಯವರ್ತತ ॥ ೧೦

---

ಮಹಾವೇಗದಿಂದ ಹರಿದುಬರುವ ಆ ನದಿಯನ್ನು ನೋಡುವಿರಿ. ಹಾಗೆಯೇ ಹೋಗುತ್ತಿದ್ದರೆ ನದಿಯನ್ನು ಇಳಿಯುವ ಹಳೆಯ ಘಟ್ಟವು ಗೋಚರಿಸುತ್ತದೆ. ಜನರ ತಿರುಗಾಟದಿಂದ ಅದು ಸವೆದಿದೆ (೫)ಅಲ್ಲಿ ನೀವು ಒಂದು ತೆಪ್ಪವನ್ನು ಮಾಡಿಕೊಂಡು ಯಮುನಾನದಿಯನ್ನು ದಾಟಿ ದಕ್ಷಿಣತೀರಕ್ಕೆ ಹೋಗಬೇಕು. ಆಗ ನಿಮಗೆ ಹಸುರೆಲೆಗಳಿಂದ ದಟ್ಟವಾದ ಒಂದು ದೊಡ್ಡ ಆಲದಮರವು ಕಾಣುತ್ತದೆ (೬). ಅದು ಅನೇಕ ವೃಕ್ಷಗಳಿಂದ ಪರಿವೃತವಾಗಿ ಕಪ್ಪಗೆ ತೋರುತ್ತದೆ. ಅದು ಸಿದ್ಧ ಪುರುಷರಿಂದ ಸೇವಿತವಾದ ವೃಕ್ಷ. ಸೀತೆಯು ಆ ವೃಕ್ಷಕ್ಕೆ ಕೈಮುಗಿದು ನಿಮ್ಮೆಲ್ಲರಿಗೂ ಒಳ್ಳೆಯದಾಗಲೆಂದು ಪ್ರಾರ್ಥನೆಯನ್ನು ಸಲ್ಲಿಸಲಿ. ಬೇಕಾದರೆ ಈ ದಿನ ನೀವು ಅಲ್ಲಿ ಉಳಿದು ವಿಶ್ರಾಂತಿಯನ್ನು ಪಡೆಯಬಹುದು. ಇಲ್ಲವಾದರೆ ಮುಂದಕ್ಕೆ ಪ್ರಯಾಣ ಮಾಡಿರಿ. ಅಲ್ಲಿಂದ ಒಂದು ಹರದಾರಿ ಹೋದರೆ ಶ್ಯಾಮಲವರ್ಣದ ಒಂದು ಅರಣ್ಯವು ಗೋಚರಿಸುತ್ತದೆ (೭-೮). ಅದು ಸಲ್ಲಕಿ ಮತ್ತು ಬದರೀ ವೃಕ್ಷ ಗಳಿಂದಲೂ ಯಮುನಾತೀರದಲ್ಲಿ ಬೆಳೆದ ಬಿದಿರುಮೆಳೆಗಳಿಂದಲೂ ಮನೋಹರ ವಾಗಿದೆ. ಅದೇ ಚಿತ್ರಕೂಟಕ್ಕೆ ಹೋಗುವ ಮಾರ್ಗ. ನಾನು ಆ ಮಾರ್ಗದಲ್ಲಿ ಬಹಳ ಸಲ ತಿರುಗಾಡಿದ್ದೇನೆ. ದಾರಿ ಚೆನ್ನಾಗಿದೆ. (ಕಲ್ಲು ಮುಳ್ಳುಗಳಿಲ್ಲದೆ) ಮೃದುವಾಗಿದೆ. ಅಲ್ಲಿ ಕಾಳ್ಗಿಚ್ಚಿನ ಕಾಟವಿಲ್ಲ" ಎಂಬುದಾಗಿ ಆ ಮಹರ್ಷಿಗಳು

ಅಭಿವಾದ್ಯ ತಥೇತ್ಯುಕ್ತ್ವಾ ರಾಮೇಣ ವಿನಿವರ್ತಿತಃ ।
ಉಪಾವೃತ್ತೇ ಮುನೌ ತಸ್ಮಿನ್ ರಾಮೋ ಲಕ್ಷ್ಮಣಮಬ್ರವೀತ್ ॥ ೧೧

ಕೃತಪುಣ್ಯಾಃ ಸ್ಮ ಸೌಮಿತ್ರೇ ಮುನಿರ್ಯನ್ನೋಽನುಕಂಪತೇ ।
ಇತಿ ತೌ ಪುರುಷವ್ಯಾಘ್ರೌ ಮಂತ್ರಯಿತ್ವಾ ಮನಸ್ವಿನೌ ॥ ೧೨

ಸೀತಾಮೇವಾಗ್ರತಃ ಕೃತ್ವಾ ಕಾಲಿಂದೀಂ ಜಗ್ಮತುರ್ನದೀಮ್ ।
ಅಥಾಸಾದ್ಯ ತು ಕಾಲಿಂದೀಂ ಶೀಘ್ರಸ್ರೋತೋವಹಾಂ ನದೀಮ್ ॥

ಚಿಂತಾಮಾಪೇದಿರೇ ಸದ್ಯೋ ನದೀಜಲತಿತೀರ್ಷವಃ ।
ತೌ ಕಾಷ್ಠ ಸಂಘಾಟಮತೋ ಚಕ್ರತುಸ್ತು ಮಹಾಪ್ಲವಮ್ ॥ ೧೪

ಶುಷ್ಕೈರ್ವಂಶೈಃ ಸಮಾಸ್ತೀರ್ಣಮುಶೀರೈಶ್ಚ ಸಮಾವೃತಮ್ ।
ತತೋ ವೇತಸಶಾಖಾಶ್ಚ ಜಂಬೂಶಾಖಾಶ್ಚ ವೀರ್ಯವಾನ್ ॥ ೧೫

ಚಕಾರ ಲಕ್ಷ್ಮಣಶ್ಚಿತ್ರಾಂ ಸೀತಾಯಾಃ ಸುಖಮಾಸನಮ್ ।
ತತ್ರ ಶ್ರಿಯಮಿವಾಚಿಂತ್ಯಾಂ ರಾಮೋ ದಾಶರಥಿಃ ಪ್ರಿಯಾಮ್ ॥ ೧೬

---

ದಾರಿಯನ್ನು ತಿಳಿಸಿ ಹೇಳಿದರು (೯-೧೦). ಶ್ರೀರಾಮನು ಆ ದಾರಿಯಲ್ಲಿಯೇ ಹೋಗುತ್ತೇವೆಂದು ಹೇಳಿ ಭರದ್ವಾಜರಿಗೆ ಅಭಿವಂದಿಸಿ ಹಿಂದಕ್ಕೆ ಕಳಿಸಿಕೊಟ್ಟನು. ಆ ಋಷಿಗಳು ಆಶ್ರಮಕ್ಕೆ ಹಿಂದಿರುಗಲು, ಶ್ರೀರಾಮನು ಲಕ್ಷ್ಮಣನನ್ನು ನೋಡಿ "ಲಕ್ಷ್ಮಣ, ಈ ಮುನಿಗಳು ನಮ್ಮನ್ನು ಎಷ್ಟು ಅನುಕಂಪೆಯಿಂದ ನೋಡುತ್ತಿದ್ದಾರೆ! ನಾವು ಪುಣ್ಯವಂತರು" ಎಂದನು (೧೧-೧೨). ಹೀಗೆ ಆ ವೀರರು ಮಾತನಾಡಿಕೊಳ್ಳುತ್ತ, ಸೀತಾದೇವಿಯನ್ನು ಮುಂದಿಟ್ಟು ನಡೆಯುತ್ತ ಯಮುನಾನದಿಯ ಘಟ್ಟಪ್ರದೇಶಕ್ಕೆ ಬಂದರು. ನದಿಯು ಮಹಾವೇಗದಿಂದ ಪ್ರವಹಿಸುವುದನ್ನು ನೋಡಿ ನದಿಯನ್ನು ದಾಟುವುದು ಹೇಗೆಂದು ಚಿಂತೆಗೊಳಗಾದರು. ಅನಂತರ ಒಣಕಟ್ಟಿಗೆಗಳಿಂದ ಒಂದು ದೊಡ್ಡ ತೆಪ್ಪವನ್ನು ನಿರ್ಮಿಸಿದರು (೧೩-೧೪). ಅದರ ಮಧ್ಯದಲ್ಲಿ ಒಣಗಿದ ಬಿದಿರುಗಳನ್ನು ಹಾಸಿ ಕಟ್ಟಿದರು. ಆಮೇಲೆ ಲಕ್ಷ್ಮಣನು ಲಾವಂಚ, ಮೆದೆಹುಲ್ಲು ಮತ್ತು ನೇರಿಳೆಗಿಡದ ಕೊಂಬೆಗಳನ್ನು ತಂದು ತೆಪ್ಪದಲ್ಲಿ ಸೀತೆಯು ಕುಳಿತುಕೊಳ್ಳಲು ಸುಖಾಸನವನ್ನು ಸಿದ್ಧಪಡಿಸಿದನು(೧೫). ಆಗ ಶ್ರೀರಾಮನು ಸಾಕ್ಷಾಲ್ಲಕ್ಷ್ಮೀದೇವಿಯಂತೆ ಪರಮ

ಈಷತ್ಸಂಲಜ್ಜಮಾನಾಂ ತಾಮಧ್ಯಾರೋಪಯತ ಪ್ಲವಮ್ ।
ಪಾರ್ಶ್ವೇ ತತ್ರ ಚ ವೈದೇಹ್ಯಾ ವಸನೇ ಭೂಷಣಾನಿ ಚ ॥ ೧೭

ಪ್ಲವೇ ಕಠಿನಕಾಜಂ ಚ ರಾಮಶ್ಚಕ್ರೇ ಸಹಾಯುಧೈಃ ।
ಆರೋಪ್ಯ ಪ್ರಥಮಂ ಸೀತಾಂ ಸಂಘಾಟಂ ಪರಿಗೃಹ್ಯ ಚ ॥ ೧೮

ತತಃ ಪ್ರತೇರತುರ್ಯುಕ್ತೌ ಪ್ರೀತೌ ದಶರಥಾತ್ಮಜಾ ।
ಕಾಲಿಂದೀಮಧ್ಯಮಾಯಾತಾ ಸೀತಾ ತ್ವೇನಾಮವಂದತ ॥ ೧೯

ಸ್ವಸ್ತಿ ದೇವಿ ತರಾಮಿ ತ್ವಾಂ ಪಾರಯೇನ್ಮೇ ಪತಿರ್ವ್ರತಮ್ ।
ಯಕ್ಷ್ಯೇ ತ್ವಾಂ ಗೋಸಹಸ್ರೇಣ ಸುರಾಘಟಶತೇನ ಚ ॥ ೨೦

ಸ್ವಸ್ತಿ ಪ್ರತ್ಯಾಗತೇ ರಾಮೇ ಪುರೀಮಿಕ್ಷ್ವಾ ಕುಪಾಲಿತಾಮ್।
ಕಾಲಿಂದೀಮಥ ಸೀತಾ ತು ಯಾಚಮಾನಾ ಕೃತಾಂಜಲಿಃ ॥ ೨೧

ತೀರಮೇವಾಭಿಸಂಪ್ರಾಪ್ತಾ ದಕ್ಷಿಣಂ ವರವರ್ಣಿನೀ ।
ತತಃ ಪ್ಲವೇನಾಂಶುಮತೀಂ ಶೀಘ್ರಗಾಮೂರ್ಮಿಮಾಲಿನೀಮ್ ॥ ೨೨

---

ಸುಂದರಿಯಾದ ತನ್ನ ಕಾಂತೆಯನ್ನು ತೆಪ್ಪವನ್ನು ಹತ್ತುವುದಕ್ಕೆ ಕರೆದು ಕೊಂಡುಹೋಗಲು, ಅವಳು ನಾಚುತ್ತ ಹೋಗಿ ಅದರಲ್ಲಿ ಕುಳಿತಳು (೧೬). ಶ್ರೀರಾಮನು ಅವಳ ವಸ್ತ್ರಾಭರಣಗಳನ್ನೂ ಹಾರೆಬುಟ್ಟಿಗಳನ್ನೂ ಆಯುಧಗಳನ್ನೂ ತೆಗೆದುಕೊಂಡುಹೋಗಿ ಸೀತೆಯ ಪಕ್ಕದಲ್ಲಿ ತೆಪ್ಪದಲ್ಲಿಟ್ಟನು. ಸೀತೆಯು ಕುಳಿತಮೇಲೆ ರಾಮಲಕ್ಷ್ಮಣರು ಸಂತುಷ್ಟರಾಗಿ ತೆಪ್ಪವನ್ನು ಹಿಡಿದು ನದಿಯನ್ನು ದಾಟಿಸುತ್ತ ಹೋದರು. ಯಮುನಾನದಿಯ ಮಧ್ಯಕ್ಕೆ ಬಂದಾಗ ಸೀತೆಯು ಯಮುನೆಯನ್ನು ವಂದಿಸುತ್ತ ಹೀಗೆ ಪ್ರಾರ್ಥಿಸಿದಳು (೧೭-೧೯). : "ಹೇ ದೇವಿ, ನಿನ್ನನ್ನು ದಾಟಿಹೋಗುತ್ತಿದ್ದೇನೆ. ನನ್ನಪತಿಯು ವನವಾಸವ್ರತವನ್ನು ಸುಖವಾಗಿ ಪೂರೈಸುವಂತೆ ಅನುಗ್ರಹಿಸು. ಇವನು ಇಕ್ಷ್ವಾಕುರಾಜರಿಂದ ಪಾಲಿತವಾದ ಅಯೋಧ್ಯೆಗೆ ಕ್ಷೇಮವಾಗಿ ಪುನಃ ಬಂದಮೇಲೆ, ನಿನ್ನ ಪ್ರೀತ್ಯರ್ಥವಾಗಿ ಸಾವಿರ ಗೋದಾನಗಳನ್ನು ಮಾಡುವೆನು; ಒಂದು ನೂರು ಮದ್ಯಘಟಗಳಿಂದ ನಿನ್ನನ್ನು ಆರಾಧಿಸುವೆನು" ಎಂದು ಕೈಮುಗಿದು ಬೇಡಿಕೊಂಡಳು(೨೦-೨೧). ಅಷ್ಟರಲ್ಲಿ ಸೀತೆಯು ತೆಪ್ಪದ ಮೂಲಕ ಯಮುನೆಯ ದಕ್ಷಿಣತೀರವನ್ನು ಸೇರಿದಳು. ಹೀಗೆ.

ತೀರಜೈರ್ಬಹುಭಿರ್ವೃಕ್ಷೈಃ ಸಂತೇರುರ್ಯಮುನಾಂ ನದೀಮ್ ।
ತೇ ತೀರ್ಣಾಃ ಪ್ಲವಮುತ್ಸೃಜ್ಯ ಪ್ರಸ್ಥಾಯ ಯಮುನಾವನಾತ್ ॥

ಶ್ಯಾಮಂ ನ್ಯಗ್ರೋಧಮಾಸೇದುಃ ಶೀತಲಂ ಹರಿತಚ್ಛದಮ್ ।
ನ್ಯಗ್ರೋಧಂ ತಮುಪಾಗಮ್ಯ ವೈದೇಹೀ ವಾಕ್ಯಮಬ್ರವೀತ್ ॥ ೨೪

ನಮಸ್ತೇಽಸ್ತು ಮಹಾವೃಕ್ಷ ಪಾರಯೇನ್ಮೇ ಪತಿರ್ವ್ರತಮ್ ।
ಕೌಸಲ್ಯಾಂ ಚೈವ ಪಶ್ಯೇಯಂ ಸುಮಿತ್ರಾಂ ಚ ಯಶಸ್ವಿನೀಮ್ ॥

ಇತಿ ಸೀತಾಂಜಲಿಂ ಕೃತ್ವಾ ಪರ್ಯಗಚ್ಛದ್ವನಸ್ಪತಿಮ್ ।
ಅವಲೋಕ್ಯ ತತಃ ಸೀತಾಮಾಯಾಚಂತೀಮನಿಂದಿತಾಮ್ ॥ ೨೬

ದಯಿತಾಂ ಚ ವಿಧೇಯಾಂ ಚ ರಾಮೋ ಲಕ್ಷ್ಮಣಮಬ್ರವೀತ್ ।
ಸೀತಾಮಾದಾಯ ಗಚ್ಛ ತ್ವಮಗ್ರತೋ ಭರತಾನುಜ ॥ ೨೭

ಪೃಷ್ಠತೋಽಹಂ ಗಮಿಷ್ಯಾಮಿ ಸಾಯುಧೋ ದ್ವಿಪದಾಂ ವರ ।
ಯದ್ಯತ್ಫಲಂ ಪ್ರಾರ್ಥಯತೇ ಪುಷ್ಪಂ ವಾ ಜನಕಾತ್ಮಜಾ॥ ೨೮

---

ಆ ಮೂವರೂ ತೀರವೃಕ್ಷಗಳಿಂದ ಮನೋಹರವಾಗಿದ್ದ ಯಮುನೆಯ ದಂಡೆಯನ್ನು ಸೇರಿ ತೆಪ್ಪವನ್ನು ಬಿಟ್ಟು ಮುಂದೆ ಹೊರಟರು(೨೨-೨೩). ಮುಂದೆ ಹೋಗುತ್ತ ಭರದ್ವಾಜಮುನಿಗಳು ಹೇಳಿದ್ದ ಆಲದಮರದ ಬಳಿಗೆ ಬಂದರು. ಆ ಮರವು ಹಸಿರೆಲೆಗಳಿಂದ ದಟ್ಟವಾಗಿ ದೂರದಲ್ಲಿ ಕಪ್ಪಗೆ ಕಾಣಿಸುತ್ತಿತ್ತು. ತಂಪಾದ ನೆರಳನ್ನು ಕೊಡುತ್ತಿತ್ತು. ಆಗ ಸೀತೆಯು ಕೈಮುಗಿದು " ಎಲೈ ಮಹಾವೃಕ್ಷವೆ, ನಿನಗೆ ನಮಸ್ಕಾರ. ನನ್ನ ಪತಿಯು ವನವಾಸವ್ರತವನ್ನು ಕ್ಷೇಮದಿಂದ ಪೂರೈಸುವಂತಾಗಲಿ! ಕೀರ್ತಿಶಾಲಿನಿಯರಾದ ಕೌಸಲ್ಯಾದೇವಿಯನ್ನೂ ಸುಮಿತ್ರಾ ದೇವಿಯನ್ನೂ ಪುನಃ ನಾನು ನೋಡುವಂತಾಗಲಿ!" ಎಂದು ಪ್ರಾರ್ಥಿಸುತ್ತ ಆಲದಮರಕ್ಕೆ ಪ್ರದಕ್ಷಿಣೆಮಾಡಿ ನಮಸ್ಕರಿಸಿದಳು (೨೪-೨೬). ಆಗ ಶ್ರೀರಾಮನು ತನ್ನ ಪ್ರಾಣಕಾಂತೆಯೂ ವಿನಯ ಸಂಪನ್ನಳೂ ಆದ ಸೀತೆಯನ್ನು ನೋಡಿ, ಲಕ್ಷ್ಮಣನನ್ನು ಕುರಿತು "ಲಕ್ಷ್ಮಣ, ಸೀತೆಗೆ ದಾರಿತೋರಿಸುತ್ತ ನೀನು ಮುಂದುಗಡೆ ಹೋಗು. ನಾನು ನಿಮ್ಮಿಬ್ಬರ ಹಿಂದೆ ಆಯುಧಗಳನ್ನು ಸಜ್ಜುಪಡಿಸಿಕೊಂಡು ಬೆಂಗಾವಲಾಗಿ ಬರುತ್ತೇನೆ. ಜಾನಕಿಯು ಯಾವುದಾದರೂ ಹಣ್ಣನ್ನೊ ಹೂವನ್ನೊ ನೋಡಿ

ತತ್ತತ್ ಪ್ರದದ್ಯಾ ವೈದೇಹ್ಯಾ ಯತ್ರಾಸ್ಯಾ ರಮತೇ ಮನಃ ।
ಗಚ್ಛತೋಸ್ತು ತಯೋರ್ಮಧ್ಯೇ ಬಭೂವ ಜನಕಾತ್ಮಜಾ ॥ ೨೯

ಮಾತಂಗಯೋರ್ಮಧ್ಯಗತಾ ಶುಭಾ ನಾಗವಧೂರಿವ ।
ಏಕೈಕಂ ಪಾದಪಂ ಗುಲ್ಮಂ ಲತಾಂ ವಾ ಪುಷ್ಪಶಾಲಿನೀಮ್ ॥ ೩೦

ಅದೃಷ್ಟಪೂರ್ವಾಂ ಪಶ್ಯಂತೀ ರಾಮಂ ಪಪ್ರಚ್ಛ ಸಾಽಬಲಾ ।
ರಮಣೀಯಾನ್ ಬಹುವಿಧಾನ್ ಪಾದಪಾನ್ ಕುಸುಮೋತ್ಕರಾನ್ ॥ ೩೧

ಸೀತಾವಚನಸಂರಬ್ಧ ಆನಯಾಮಾಸ ಲಕ್ಷ್ಮಣಃ ।
ವಿಚಿತ್ರವಾಲುಕಾಂ ನೀಲಾಂ ಹಂಸಸಾರಸನಾದಿತಾಮ್ ॥ ೩೨

ರೇಮೇ ಜನಕರಾಜಸ್ಯ ಸುತಾ ಪ್ರೇಕ್ಷ್ಯ ತದಾ ನದೀಮ್ ।
ಕ್ರೋಶಮಾತ್ರಂ ತತೋ ಗತ್ವಾ ಭ್ರಾತರೌ ರಾಮಲಕ್ಷ್ಮಣೌ ॥ ೩೩

ಬಹೂನ್ ಮೇಧ್ಯಾನ್ ಮೃಗಾನ್ ಹತ್ವಾ ಚೇರತುರ್ಯಮುನಾವನೇ ॥

---

ಬಯಸಿದರೆ ಅದನ್ನು ತಂದುಕೊಡು; ಅವಳು ಹರ್ಷಪಡುವಳು" ಎಂದನು (೨೭-೨೮). ಅನಂತರ ಅವರ ನಡುವೆ, ಎರಡು ಮದ್ದಾನೆಗಳ ಮಧ್ಯದಲ್ಲಿ ಹೋಗುವ ಹೆಣ್ಣಾನೆಯಂತೆ ಶೋಭಿಸುತ್ತ, ಸೀತೆಯು ನಡೆದಳು. ದಾರಿಯಲ್ಲಿ ಆ ದೇವಿಯು ತಾನು ಹಿಂದೆ ನೋಡದ ಯಾವುದಾದರೂ ಮರವನ್ನೊ ಪೊದೆಯನ್ನೊ ಪುಷ್ಪಗಳಿಂದ ಒಪ್ಪುವ ಲತೆಯನ್ನೊ ಕಂಡರೆ ಅದು ಯಾವುದೆಂದು ಶ್ರೀರಾಮನನ್ನು ಕೇಳುತ್ತಿದ್ದಳು (೨೯-೩೦). ಸೀತೆಯ ಮಾತನ್ನು ಕೇಳಿ ಅವಳ ಕುತೂಹಲವನ್ನರಿತು ಲಕ್ಷ್ಮಣನು ಆ ಮರಗಳಿಂದ ನಾನಾಬಗೆಯ ಸುಂದರಕುಸುಮಗಳನ್ನು ತಂದುಕೊಡುತ್ತಿದ್ದನು. ಬಳಿಯಲ್ಲಿ ಹರಿಯುತ್ತಿದ್ದ ನೀಲವರ್ಣದ ಯಮುನೆಯು ಬಣ್ಣಬಣ್ಣದ ವಿಚಿತ್ರವಾದ ಮರಳು ರಾಶಿಯಿಂದಲೂ ಹಂಸ ಸಾರಸಪಕ್ಷಿಗಳ ಇಂಚರದಿಂದಲೂ ರಮಣೀಯ ವಾಗಿತ್ತು (೩೧-೩೨). ಅದನ್ನು ನೋಡುತ್ತ ಜಾನಕಿಯು ಆನಂದಿಸುತ್ತಿದ್ದಳು. ಹೀಗೆ ಅಣ್ಣತಮ್ಮಂದಿರಾದ ರಾಮಲಕ್ಷ್ಮಣರು ಯಮುನಾತಟದಲ್ಲಿ ಒಂದು ಹರದಾರಿಯವರೆಗೆ ಪ್ರಯಾಣಮಾಡಿ, ಆಹಾರಯೋಗ್ಯವಾದ ಕೆಲವು ಮೃಗಗಳನ್ನು ಸಂಹರಿಸಿ ಭಕ್ಷಿಸಿದರು (೩೩). ಈ ರೀತಿಯಲ್ಲಿ ಆ ಮೂವರೂ ಯಮುನಾನದಿಯ ದಕ್ಷಿಣತೀರದಲ್ಲಿ ಹೋಗುತ್ತ ಒಂದು ವನವನ್ನು

ವಿಹೃತ್ಯ ತೇ ಬರ್ಹಿಣಪೂಗನಾದಿತೇ
ಶುಭೇ ವನೇ ವಾನರವಾರಣಾಯುತೇ ।
ಸಮಂ ನದೀವಪ್ರಮುಪೇತ್ಯ ಸಂಮತಂ
ನಿವಾಸಮಾಜಗ್ಮುರದೀನದರ್ಶನಾಃ ॥ ೩೪

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಪಂಚಾಶಃ ಸರ್ಗಃ

## ಷಟ್‌ಪಂಚಾಶಃ ಸರ್ಗಃ

### ಚಿತ್ರಕೂಟನಿವಾಸಃ

ಅಥ ರಾತ್ರ್ಯಾಂ ವ್ಯತೀತಾಯಾಮವಸುಪ್ತಮನಂತರಮ್ ।
ಪ್ರಬೋಧಯಾಮಾಸ ಶನೈರ್ಲಕ್ಷ್ಮಣಂ ರಘುನಂದನಃ ॥ ೧

ಸೌಮಿತ್ರೇ ಶೃಣು ವನ್ಯಾನಾಂ ವಲ್ಗು ವ್ಯಾಹರತಾಂ ಸ್ವನಮ್ ।
ಸಂಪ್ರತಿಷ್ಠಾಮಹೇ ಕಾಲಃ ಪ್ರಸ್ಥಾನಸ್ಯ ಪರಂತಪ ॥ ೨

---

ಸೇರಿದರು. ಆ ವನವು ನವಿಲು ಹಿಂಡುಗಳ ಕೇಕಾರವದಿಂದ ತುಂಬಿತ್ತು. ಕಪಿಗಳೂ ಆನೆಗಳೂ ಸಂಚರಿಸುತ್ತಿದ್ದವು. ಸೀತಾರಾಮಲಕ್ಷ್ಮಣರು ಉತ್ಸಾಹದಿಂದಲೇ ಇದ್ದರು. ಕಾಡುಪಾಲಾದೆವೆಂದು ಅವರಲ್ಲಿ ಯಾವ ದೈನ್ಯವೂ ತೋರುತ್ತಿರಲಿಲ್ಲ. ವಾಸಯೋಗ್ಯವೆಂದು ಕಂಡ ಒಂದು ಸ್ಥಳದಲ್ಲಿ ಆ ಸಾಯಂಕಾಲ ಇಳಿದುಕೊಂಡರು (೩೪).

ಅಲ್ಲಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತೈದನೆಯ ಸರ್ಗ

---

## ಸರ್ಗ ೫೬

ಚಿತ್ರಕೂಟಕ್ಕೆ ಶ್ರೀರಾಮನ ಪ್ರಯಾಣ. ವಾಲ್ಮೀಕಿಮುನಿಗಳ ದರ್ಶನ. ಪರ್ಣಶಾಲೆಯನ್ನು ರಚಿಸಿ ವಾಸವಾಗಿರುವುದು.

ರಾತ್ರಿ ಕಳೆಯಿತು. ಸಮೀಪದಲ್ಲಿ ಮಲಗಿದ್ದ ಲಕ್ಷ್ಮಣನನ್ನು ರಾಘವನು ಮೆಲ್ಲಗೆ ಎಬ್ಬಿಸಿದನು: "ಲಕ್ಷ್ಮಣ, ಕಾಡಿನಲ್ಲಿರುವ ಹಕ್ಕಿಗಳು ಚಿಲಿಪಿಲಿ ಗುಟ್ಟುತ್ತವೆ. ಅವುಗಳ ಮಂಜುಳಧ್ವನಿಯನ್ನು ಕೇಳು; ನಾವು ಹೊರಡಲು

ಸ ಸುಪ್ತಃ ಸಮಯೇ ಭ್ರಾತ್ರಾ ಲಕ್ಷ್ಮಣಃ ಪ್ರತಿಬೋಧಿತಃ ।
ಜಹೌ ನಿದ್ರಾಂ ಚ ತಂದ್ರೀಂ ಚ ಪ್ರಸಕ್ತಂ ಚ ಪಥಿ ಶ್ರಮಮ್ ॥ ೩

ತತ ಉತ್ಥಾಯ ತೇ ಸರ್ವೇ ಸ್ಪೃಷ್ಟ್ವಾ ನದ್ಯಾಃ ಶಿವಂ ಜಲಮ್ ।
ಪಂಥಾನಮೃಷಿಣಾದಿಷ್ಟಂ ಚಿತ್ರಕೂಟಸ್ಯ ತಂ ಯಯುಃ ॥ ೪

ತತಃ ಸಂಪ್ರಸ್ಥಿತಃ ಕಾಲೇ ರಾಮಃ ಸೌಮಿತ್ರಿಣಾ ಸಹ ।
ಸೀತಾಂ ಕಮಲಪತ್ರಾಕ್ಷೀಮಿದಂ ವಚನಮಬ್ರವೀತ್ ॥ ೫

ಆದೀಪ್ತಾಮಿವ ವೈದೇಹಿ ಸರ್ವತಃ ಪುಷ್ಪಿತಾನ್ನಗಾನ್ ।
ಸ್ವೈಃ ಪುಷ್ಪೈಃ ಕಿಂಶುಕಾನ್ ಪಶ್ಯ ಮಾಲಿನಃ ಶಿಶಿರಾತ್ಯಯೇ ॥ ೬

ಪಶ್ಯ ಭಲ್ಲಾತಕಾನ್ ಬಿಲ್ವಾನ್ ವಾನರೈರುಪಸೇವಿತಾನ್ ।
ಫಲಪುಷ್ಪೈರವನತಾನ್ ನೂನಂ ಶಕ್ಷ್ಯಾಮ ಜೀವಿತುಮ್ ॥ ೭

ಪಶ್ಯ ದ್ರೋಣಪ್ರಮಾಣಾನಿ ಲಂಬಮಾನಾನಿ ಲಕ್ಷ್ಮಣ ।
ಮಧೂನಿ ಮಧುಕಾರೀಭಿಃ ಸಂಭೃತಾನಿ ನಗೇ ನಗೇ ॥ ೮

---

ಯೋಗ್ಯಕಾಲವಾಗಿದೆ, ಹೊರಡೋಣ" ಎಂದನು (೧-೨). ಏಳುವ ಸಮಯವಾದ್ದರಿಂದ ಅಣ್ಣನು ಹೀಗೆ ಹೇಳುತ್ತಿದ್ದಂತೆ ಲಕ್ಷ್ಮಣನಿಗೆ ಎಚ್ಚರವಾಯಿತು. ನಿದ್ರೆಯು ಕಳೆದು ಆಲಸ್ಯವೂ ಪ್ರಯಾಣಶ್ರಮವೂ ಅವನಿಗೆ ಪರಿಹಾರವಾಗಿತ್ತು. ಅವರೆಲ್ಲರೂ ಎದ್ದು ಯಮುನಾನದಿಯ ಪವಿತ್ರಜಲದಲ್ಲಿ ಸ್ನಾನಾದಿ ಪ್ರಾತಃಕೃತ್ಯಗಳನ್ನು ಮುಗಿಸಿ, ಭಾರದ್ವಾಜಮುನಿಗಳು ತಿಳಿಸಿದ ಚಿತ್ರಕೂಟ ಪರ್ವತದ ದಾರಿಯನ್ನು ಹಿಡಿದರು (೩-೪). ಹೋಗುವಾಗ ದಾರಿಯಲ್ಲಿ ಶ್ರೀರಾಮನು ಲಕ್ಷ್ಮಣನೊಡನೆಯೂ ಪದ್ಮನೇತ್ರೆಯಾದ ಸೀತೆಯೊಡನೆಯೂ ಸಂಭಾಷಿಸುತ್ತ ಹೀಗೆಂದನು: "ವೈದೇಹಿ, ವಸಂತಕಾಲವಾದ್ದರಿಂದ ಅರಳಿ ನಿಂತಿರುವ ಈ ಮುತ್ತುಗದ ಮರಗಳನ್ನು ನೋಡು. ಬೆಂಕಿಯಿಂದ ಉರಿಯುತ್ತಿರುವಂತೆ ಕಾಣುತ್ತಿವೆ! ಮಾಲೆಮಾಲೆಗಳಾಗಿ ಹೂಬಿಟ್ಟಿವೆ (೫-೬). ಆ ಗೇರುಮರಗಳೂ ಬಿಲ್ವವೃಕ್ಷಗಳೂ ಹಣ್ಣುಹೂಗಳಿಂದ ಬಳುಕುತ್ತಿವೆ. ಆ ಮರಗಳಿಗೆ ಕೋತಿಗಳು ಮುತ್ತಿಕೊಂಡಿರುವುದನ್ನು ನೋಡು! ನಿಶ್ಚಯವಾಗಿಯೂ ನಾವು ಇಲ್ಲಿ ಜೀವಿಸಿರಬಹುದು(೭). ಲಕ್ಷ್ಮಣ, ಮರಮರಗಳಲ್ಲಿಯೂ ಜೇನುಹುಳುಗಳು ಕಟ್ಟಿರುವ ಜೇನುಗೂಡುಗಳನ್ನು ನೋಡು!

ಏಷ ಕ್ರೋಶತಿ ನತ್ಯೂಹಸ್ತಂ ಶಿಖೀ ಪ್ರತಿಕೂಜತಿ ।
ರಮಣೀಯೇ ವನೋದ್ದೇಶೇ ಪುಷ್ಪಸಂಸ್ತರಸಂಕಟೇ ॥ ೯

ಮಾತಂಗಯೂಥಾನುಸೃತಂ ಪಕ್ಷಿಸಂಘಾನುನಾದಿತಮ್ ।
ಚಿತ್ರಕೂಟಮಿಮಂ ಪಶ್ಯ ಪ್ರವೃದ್ಧಶಿಖರಂ ಗಿರಿಮ್ ॥ ೧೦

ಸಮಭೂಮಿತಲೇ ರಮ್ಯೇ ದ್ರುಮೈರ್ಬಹುಭಿರಾವೃತೇ ।
ಪುಣ್ಯೇ ರಂಸ್ಯಾಮಹೇ ತಾತ ಚಿತ್ರಕೂಟಸ್ಯ ಕಾನನೇ ॥ ೧೧

ತತಸ್ತೌ ಪಾದಚಾರೇಣ ಗಚ್ಛಂತೌ ಸಹ ಸೀತಯಾ।
ರಮ್ಯಮಾಸೇದತುಃ ಶೈಲಂ ಚಿತ್ರಕೂಟಂ ಮನೋರಮಮ್ ॥ ೧೨

ತಂ ತು ಪರ್ವತಮಾಸಾದ್ಯ ನಾನಾಪಕ್ಷಿಗಣಾಯುತಮ್ ।
ಬಹುಮೂಲಫಲಂ ರಮ್ಯಂ ಸಂಪನ್ನಂ ಸರಸೋದಕಮ್ ॥ ೧೩

ಮನೋಜ್ಞೋಽಯಂ ಗಿರಿಃ ಸೌಮ್ಯ ನಾನಾದ್ರುಮಲತಾಯುತಃ ।
ಬಹುಮೂಲಫಲೋ ರಮ್ಯಃ ಸ್ವಾಜೀವಃ ಪ್ರತಿಭಾತಿ ಮೇ ॥ ೧೪

---

ಒಂದೊಂದರಲ್ಲಿ ಒಂದು ದ್ರೋಣದಷ್ಟು* ಜೇನುತುಪ್ಪ ಇರಬಹುದು!(೮). ದಾತ್ಯೂಹಪಕ್ಷಿ ಕೂಗಿದರೆ ಪ್ರತ್ಯುತ್ತರಕೊಡುವಂತೆ ನವಿಲು ಕೇಕೆಹಾಕುತ್ತಿದೆ. ರಾಶಿರಾಶಿಯಾಗಿ ಉದುರಿದ ಹೂಗಳಿಂದ ರಮಣೀಯವಾದ ವನಪ್ರದೇಶದಲ್ಲಿ ಇವು ತಿರುಗಾಡುವುದನ್ನು ನೋಡು (೯). ಉನ್ನತವಾದ ಶಿಖರದಿಂದ ವಿರಾಜಿಸುವ ಈ ಪರ್ವತವೇ ಚಿತ್ರಕೂಟ. ಆನೆಗಳು ಹಿಂಡಾಗಿ ಸಂಚರಿಸುವುದನ್ನೂ ಹಕ್ಕಿಗಳು ಗುಂಪಾಗಿ ಕೂಗುವುದನ್ನೂ ಗಮನಿಸು. ಈ ಚಿತ್ರಕೂಟ ಪರ್ವತದ ಅರಣ್ಯವು ಸಮಭೂಮಿಯಾಗಿದೆ. ವೃಕ್ಷಗಳಿಂದ ತುಂಬಿ ಮನೋಹರವಾಗಿದೆ. ಲಕ್ಷ್ಮಣ, ಈ ಪುಣ್ಯಾರಣ್ಯದಲ್ಲಿ ನಾವು ಸಂತೋಷದಿಂದಿರಬಹುದು" ಎಂದನು (೧೦-೧೧). ಹೀಗೆ ಮಾತನಾಡುತ್ತ ಸೀತೆಯೊಡನೆ ಕಾಲ್ನಡಿಗೆಯಿಂದ ಹೋಗುತ್ತಿದ್ದ ರಾಮಲಕ್ಷ್ಮಣರು ರಮ್ಯವಾದ ಚಿತ್ರಕೂಟಗಿರಿಯನ್ನು ಸೇರಿದರು. ಆ ಗಿರಿಯಲ್ಲಿ ಹಕ್ಕಿಗಳ ಹಿಂಡು ನಲಿಯುತ್ತಿತ್ತು. ಫಲಮೂಲಗಳು ಯಥೇಚ್ಛವಾಗಿದ್ದವು. ಸಿಹಿನೀರು ಪುಷ್ಕಳವಾಗಿ ದೊರೆಯುತ್ತಿತ್ತು (೧೨-೧೩). ಆಗ ಶ್ರೀರಾಮನು "ಲಕ್ಷ್ಮಣ, ಆ ಬೆಟ್ಟ

---

* ದ್ರೋಣ-೪ ಆಢಕ ; ಸುಮಾರು ೨೯ ಪೌಂಡು.

ಮುನಯಶ್ಚ ಮಹಾತ್ಮಾನೋ ವಸಂತ್ಯಸ್ಮಿನ್ ಶಿಲೋಚ್ಚಯೇ ।
ಅಯಂ ವಾಸೋ ಭವೇತ್ತಾವದತ್ರ ಸೌಮ್ಯ ರಮೇಮಹಿ ॥ ೧೫

ಇತಿ ಸೀತಾ ಚ ರಾಮಶ್ಚ ಲಕ್ಷ್ಮಣಶ್ಚ ಕೃತಾಂಜಲಿಃ ।
ಅಭಿಗಮ್ಯಾಶ್ರಮಂ ಸರ್ವೇ ವಾಲ್ಮೀಕಿಮಭಿವಾದಯನ್ ॥ ೧೬

ತಾನ್ ಮಹರ್ಷಿಃ ಪ್ರಮುದಿತಃ ಪೂಜಯಾಮಾಸ ಧರ್ಮವಿತ್ ।
ಆಸ್ಯತಾಮಿತಿ ಚೋವಾಚ ಸ್ವಾಗತಂ ತು ನಿವೇದ್ಯ ಚ ॥ ೧೭

ತತೋಽಬ್ರವೀನ್ಮಹಾಬಾಹುರ್ಲಕ್ಷ್ಮಣಂ ಲಕ್ಷ್ಮಣಾಗ್ರಜಃ ।
ಸಂನಿವೇದ್ಯ ಯಥಾನ್ಯಾಯಮಾತ್ಮಾನಮೃಷಯೇ ಪ್ರಭುಃ ॥ ೧೮

ಲಕ್ಷ್ಮಣಾನಯ ದಾರೂಣಿ ದೃಢಾನಿ ಚ ವರಾಣಿ ಚ ।
ಕುರುಷ್ವಾವಸಥಂ ಸೌಮ್ಯ ವಾಸೇ ಮೇಽಭಿರತಂ ಮನಃ ॥ ೧೯

ತಸ್ಯ ತದ್ವಚನಂ ಶ್ರುತ್ವಾ ಸೌಮಿತ್ರಿರ್ವಿವಿಧಾನ್ ದ್ರುಮಾನ್ ।
ಆಜಹಾರ ತತಶ್ಚಕ್ರೇ ಪರ್ಣಶಾಲಾಮರಿಂದಮಃ ॥ ೨೦

---

ಸುಂದರವಾಗಿದೆ. ಮರಬಳ್ಳಿಗಳು ತುಂಬಿವೆ. ಫಲಮೂಲಗಳು ಹೇರಳವಾಗಿವೆ. ಇಲ್ಲಿ ನಾವು ಸುಖವಾಗಿ ಜೀವಿಸಬಹುದೆಂದು ತೋರುತ್ತದೆ. ಮಹಾತ್ಮರಾದ ತಪಸ್ವಿಗಳು ಇಲ್ಲಿ ವಾಸವಾಗಿದ್ದಾರೆ. ವತ್ಸ, ಇದು ವಾಸಯೋಗ್ಯವಾದ ಸ್ಥಳ. ಇಲ್ಲಿ ಇರೋಣ" ಎಂದು ನುಡಿದನು (೧೪-೧೫). ಅನಂತರ ಸೀತಾರಾಮ ಲಕ್ಷ್ಮಣರು ಅಲ್ಲಿದ್ದ ವಾಲ್ಮೀಕಿಮುನಿಗಳ ಆಶ್ರಮಕ್ಕೆ ಹೋಗಿ ಆ ಮುನಿಗಳಿಗೆ ಅಭಿವಾದನೆ ಮಾಡಿದರು. ಆಗ ಧರ್ಮಜ್ಞರಾದ ವಾಲ್ಮೀಕಿಮಹರ್ಷಿಗಳು ಸಂತೋಷದಿಂದ ಅವರನ್ನು ಸ್ವಾಗತಿಸಿ, ಕುಳಿತುಕೊಳ್ಳುವಂತೆ ತಿಳಿಸಿ ಸತ್ಕರಿಸಿದರು (೧೬-೧೭). ಅನಂತರ ಶ್ರೀರಾಮನು ಆ ಋಷಿಗಳಿಗೆ ಕ್ರಮವಾಗಿ ತನ್ನ ವೃತ್ತಾಂತವನ್ನರುಹಿ, ಲಕ್ಷ್ಮಣನನ್ನು ಕುರಿತು "ಲಕ್ಷ್ಮಣ, ಇಲ್ಲಿ ವಾಸಮಾಡಲು ನನ್ನ ಮನಸ್ಸು ಒಪ್ಪಿತು. ಗಟ್ಟಿಯಾದ ಒಳ್ಳೆಯ ಮರದ ದಿಮ್ಮಿಗಳನ್ನು ತಂದು ಒಂದು ಗುಡಿಸಲನ್ನು ನಿರ್ಮಿಸು" ಎಂದು ಹೇಳಿದನು (೧೮-೧೯) ಆ ಮಾತನ್ನು ಕೇಳಿ ವೀರನಾದ ಸುಮಿತ್ರಾತನಯನು ಅನೇಕ ಬಗೆಯ ಮರದ ತುಂಡುಗಳನ್ನು ತಂದು ಒಂದು ಪರ್ಣ

ತಾಂ ನಿಷ್ಠಿತಾಂ ಬದ್ಧಕಟಾಂ ದೃಷ್ಟ್ವಾ ರಾಮಃ ಸುದರ್ಶನಾಮ್ ।
ಶುಶ್ರೂಷಮಾಣಮೇಕಾಗ್ರಮಿದಂ ವಚನಮಬ್ರವೀತ್ ॥ ೨೧

ಐಣೇಯಂ ಮಾಂಸಮಾಹೃತ್ಯ ಶಾಲಾಂ ಯಕ್ಷ್ಯಾಮಹೇ ವಯಮ್ ।
ಕರ್ತವ್ಯಂ ವಾಸ್ತುಶಮನಂ ಸೌಮಿತ್ರೇ ಚಿರಜೀವಿಭಿಃ ॥ ೨೨

ಮೃಗಂ ಹತ್ವಾನಯ ಕ್ಷಿಪ್ರಂ ಲಕ್ಷ್ಮಣೇಹ ಶುಭೇಕ್ಷಣ ।
ಕರ್ತವ್ಯಃ ಶಾಸ್ತ್ರದೃಷ್ಟೋ ಹಿ ವಿಧಿರ್ಧರ್ಮಮನುಸ್ಮರ ॥ ೨೩

ಭ್ರಾತುರ್ವಚನಮಾಜ್ಞಾಯ ಲಕ್ಷ್ಮಣಃ ಪರವೀರಹಾ ।
ಚಕಾರ ಸ ಯಥೋಕ್ತಂ ಚ ತಂ ರಾಮಃ ಪುನರಬ್ರವೀತ್ ॥ ೨೪

ಐಣೇಯಂ ಶ್ರಪಯಸ್ವೈತಚ್ಛಾಲಾಂ ಯಕ್ಷ್ಯಾಮಹೇ ವಯಮ್ ।
ತ್ವರ ಸೌಮ್ಯ ಮುಹೂರ್ತೋಽಯಂ ಧ್ರುವಶ್ಚ ದಿವಸೋಽಪ್ಯಯಮ್ ॥

ಸ ಲಕ್ಷ್ಮಣಃ ಕೃಷ್ಣಮೃಗಂ ಹತ್ವಾ ಮೇಧ್ಯಂ ಪ್ರತಾಪವಾನ್ ।
ಅಥ ಚಿಕ್ಷೇಪ ಸೌಮಿತ್ರಿಃ ಸಮಿದ್ಧೇ ಜಾತವೇದಸಿ ॥ ೨೬

---

ಶಾಲೆಯನ್ನು ಕಟ್ಟಿದನು. ಆ ಪರ್ಣಶಾಲೆಯು ಗಟ್ಟಿಮುಟ್ಟಾಗಿಯೂ ಸುಂದರವಾಗಿಯೂ ಇತ್ತು. (ಗೋಡೆಗಳಂತೆ) ತಡಿಕೆಗಳನ್ನು ಕಟ್ಟಿದ್ದರಿಂದ ಸುತ್ತಲೂ ಮರೆಯಾಗಿತ್ತು (೨೦-೨೧). ಶ್ರೀರಾಮನು ಅದನ್ನು ನೋಡಿ, ಒಂದೇ ಮನಸ್ಸಿನಿಂದ ಶುಶ್ರೂಷೆಮಾಡುತ್ತಿದ್ದ ಲಕ್ಷ್ಮಣನನ್ನು ಕುರಿತು "ವತ್ಸ, ಜಿಂಕೆಯ ಮಾಂಸವನ್ನು ತಂದು ಈ ಪರ್ಣಶಾಲೆಗೆ ಬಲಿಕರ್ಮವನ್ನು ನೆರವೇರಿಸೋಣ. ಆಯುಷ್ಕಾಮರಾದವರು ವಾಸ್ತುಶಾಂತಿಯನ್ನು ಮಾಡಬೇಕು. ಆದ್ದರಿಂದ ಒಂದು ಜಿಂಕೆಯನ್ನು ಸಂಹರಿಸಿ ತೆಗೆದುಕೊಂಡುಬಾ. ಶಾಸ್ತ್ರವಿಹಿತವಾದ ಕರ್ಮವನ್ನು ಮಾಡಲೇಬೇಕಲ್ಲವೆ? ಧರ್ಮಶಾಸ್ತ್ರವನ್ನು ಗಮನಿಸು" ಎಂದನು (೨೨-೨೩). ಅಣ್ಣನ ಮಾತಿನಂತೆ ಹೋಗಿ ಲಕ್ಷ್ಮಣನು ಕೃಷ್ಣಮೃಗವನ್ನು ತರಲು ಶ್ರೀರಾಮನು "ವತ್ಸ, ಇದನ್ನು ಬೇಯಿಸು. ಪರ್ಣಶಾಲಾಧಿದೇವತೆಗಳನ್ನು ಪೂಜಿಸೋಣ. ಈ ದಿನ ಗೃಹಪ್ರವೇಶಕ್ಕೆ ಉತ್ತಮವಾಗಿದೆ. ಧ್ರುವ ಎಂಬ ಈ ಮುಹೂರ್ತವೂ ಚೆನ್ನಾಗಿದೆ, ತ್ವರೆ ಮಾಡು" ಎಂದನು (೨೪-೨೫). ಆಗ ಲಕ್ಷ್ಮಣನು ಪವಿತ್ರವಾದ ಆ ಕೃಷ್ಣಮೃಗವನ್ನು ಕೊಂದು ಜ್ವಲಿಸುವ ಅಗ್ನಿಯಲ್ಲಿ ಹಾಕಿ ಬೇಯಿಸಿದನು.

ತಂ ತು ಪಕ್ವಂ ಸಮಾಜ್ಞಾಯ ನಿಷ್ಟಪ್ತಂ ಛಿನ್ನಶೋಣಿತಮ್ ।
ಲಕ್ಷ್ಮಣಃ ಪುರುಷವ್ಯಾಘ್ರಮಥ ರಾಘವಮಬ್ರವೀತ್ ॥ ೨೭

ಅಯಂ ಕೃಷ್ಣಃ ಸಮಾಪ್ತಾಂಗಃ ಶೃತಃ ಕೃಷ್ಣಮೃಗೋ ಯಥಾ ।
ದೇವತಾಂ ದೇವಸಂಕಾಶ ಯಜಸ್ವ ಕುಶಲೋಹ್ಯಸಿ ॥ ೨೮

ರಾಮಃ ಸ್ನಾತ್ವಾ ತು ನಿಯತೋ ಗುಣವಾನ್ ಜಪ್ಯಕೋವಿದಃ ।
ಸಂಗ್ರಹೇಣಾಕರೋತ್ಸರ್ವಾನ್ ಮಂತ್ರಾನ್ ಸತ್ರಾವಸಾನಿಕಾನ್ ॥

ಇಷ್ಟ್ವಾ ದೇವಗಣಾನ್ ಸರ್ವಾನ್ ವಿವೇಶ ಸದನಂ ಶುಚಿಃ ।
ಬಭೂವ ಚ ಮನೋಹ್ಲಾದೋ ರಾಮಸ್ಯಾಮಿತತೇಜಸಃ ॥ ೩೦

ವೈಶ್ವದೇವಬಲಿಂ ಕೃತ್ವಾ ರೌದ್ರಂ ವೈಷ್ಣವಮೇವ ಚ ।
ವಾಸ್ತು ಸಂಶಮನೀಯಾನಿ ಮಂಗಲಾನಿ ಪ್ರವರ್ತಯನ್ ॥ ೩೧

ಜಪಂ ಚ ನ್ಯಾಯತಃ ಕೃತ್ವಾ ಸ್ನಾತ್ವಾ ನದ್ಯಾಂ ತಥಾವಿಧಿ ।
ಪಾಪಸಂಶಮನಂ ರಾಮಶ್ಚಕಾರ ಬಲಿಮುತ್ತಮಮ್ ॥

---

ರಕ್ತವು ಶೋಷಿಸಿ ಮಾಂಸವು ಚೆನ್ನಾಗಿ ಬೆಂದಮೇಲೆ ಲಕ್ಷ್ಮಣನು ಶ್ರೀರಾಮನನ್ನು ಕರೆದು, "ಅಣ್ಣ, ಸರ್ವಾಂಗಗಳಿಂದಲೂ ಯುಕ್ತವಾದ ಈ ಜಿಂಕೆಯನ್ನು ಯಥಾವಿಧಿಯಾಗಿ ಪಕ್ವಮಾಡಿದ್ದೇನೆ. ದೇವತೋದ್ದೇಶವಾಗಿ ಇದನ್ನು ಅರ್ಪಿಸು. ಅದರ ವಿಧಾನವನ್ನು ನೀನು ಚೆನ್ನಾಗಿ ಬಲ್ಲೆ" ಎಂದು ಹೇಳಿದನು (೨೬-೨೮). ಆಗ ಮಂತ್ರಜ್ಞನಾದ ಶ್ರೀರಾಮನು ಸ್ನಾನಮಾಡಿ ಶುದ್ಧನಾಗಿ ವಾಸ್ತುಶಾಂತಿ ಮಂತ್ರಗಳನ್ನು ಪಠಿಸುತ್ತ ಅಲ್ಲಿ ಮಾಡಬೇಕಾದ ವಿಧಾನಗಳೆಲ್ಲವನ್ನೂ ಸಂಕ್ಷೇಪ ವಾಗಿ ನೆರವೇರಿಸಿದನು (೨೯). ವಾಸ್ತುದೇವತೆಗಳೆಲ್ಲವನ್ನೂ ಪೂಜಿಸಿ ಶುಚಿಭೂತ ನಾಗಿ ಪರ್ಣಶಾಲೆಯನ್ನು ಪ್ರವೇಶಿಸಿದನು. ಆಗ ಮಹಾತೇಜಸ್ವಿಯಾದ ಶ್ರೀರಾಮನ ಚಿತ್ತವು ಪ್ರಸನ್ನವಾಯಿತು (೩೦). ಅವನು ನದಿಯಲ್ಲಿ ವಿಧಿವತ್ತಾಗಿ ಪುನಃ ಸ್ನಾನ ಮಾಡಿ ವೈಶ್ವದೇವ ಬಲಿಹರಣಗಳನ್ನು ಮಾಡಿ, ರುದ್ರದೇವತಾಕವೂ ವಿಷ್ಣುದೇವತಾಕವೂ ಆದ ಬಲಿಗಳನ್ನರ್ಪಿಸಿ ವಾಸ್ತುಪೀಡೆಗಳನ್ನು ಪರಿಹರಿಸುವ ಮಂಗಲಸೂಕ್ತಗಳನ್ನು ಪಠಿಸಿ ಮಂತ್ರವನ್ನು ಜಪಿಸಿ ಕ್ರೂರದೇವತೆಗಳನ್ನು ಶಾಂತಿಗೊಳಿಸುವ ಕಾರ್ಯವನ್ನು ಪೂರೈಸಿದನು (೩೧-೩೨)

# ಅನುಬಂಧ

## ೧

**ದೇವರ್ಷಿಪಿತೃವಿಪ್ರಾಣಾಮನೃಣೋಽಸ್ಮಿ ತಥಾತ್ಮನಃ**

— -ಪುಟ ೩೩

ಮನುಷ್ಯನು ಜನಿಸುವಾಗಲೇ ಮೂರು ಋಣಗಳನ್ನು ಕಟ್ಟಿಕೊಂಡು ಬಂದಿರುತ್ತಾನೆಂದೂ ಅವುಗಳನ್ನು ಅವಶ್ಯವಾಗಿ ತೀರಿಸಬೇಕೆಂದೂ ಶ್ರುತಿಸ್ಮೃತಿಸಿದ್ಧವಾಗಿದೆ. 'ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿಃ ಋಣ್ಯೈಃ ಋಣವಾನ್ ಜಾಯತೇ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ ಸ್ವಾಧ್ಯಾಯೇನ ಋಷಿಭ್ಯಃ ಎಂದು ಶ್ರುತಿಯು ಹೇಳುತ್ತದೆ. ಮನುಸ್ಮೃತಿಯಲ್ಲಿ—

**ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್ ।**
**ಅನಪಾಕೃತ್ಯ ಮೋಕ್ಷಂ ತು ಸೇವಮಾನೋ ವ್ರಜತ್ಯಧಃ ॥**

— ಅ.೩-ಶ್ಲೋ. ೩೫

ಎಂದು ಹೇಳಿದೆ. ಹೀಗೆ ಮೂರು ಋಣಗಳು ಮಾತ್ರ ಪ್ರಸಿದ್ಧವಾಗಿರುವಾಗ ಇಲ್ಲಿ ಐದು ಋಣಗಳನ್ನು ಹೇಳಿದ್ದು ಹೇಗೆ ಎಂಬ ಶಂಕೆಯಾಗಬಹುದು. ಇದಕ್ಕೆ ಸಮಾಧಾನವೇನೆಂದರೆ, ಮೇಲೆ ಹೇಳಿದ ಮೂರು ಋಣಗಳು ಬ್ರಾಹ್ಮಣಋಣ ಮತ್ತು ಆತ್ಮಋಣಗಳಿಗೆ ಉಪಲಕ್ಷಣ. ಮೂರೇ ಋಣಗಳೆಂದು ನಿಯಮ ವನ್ನೇನೂ ಮಾಡಬೇಕಾಗಿಲ್ಲ. ಅಥವಾ ಋಷಿಋಣದಲ್ಲಿ ಬ್ರಾಹ್ಮಣ ಋಣವನ್ನೂ ದೇವಋಣದಲ್ಲಿ ಆತ್ಮಋಣವನ್ನೂ ಅಂತರ್ಭಾವ ಮಾಡಿ ಮೂರುಋಣಗಳನ್ನು ಹೇಳಿದ್ದಾರೆಂದು ತಿಳಿಯಬೇಕು.

೧. ದೇವಋಣ :- ಸುವೃಷ್ಟಿ, ಸುಭಿಕ್ಷ, ಗಾಳಿ, ಬಿಸಿಲು ಮೊದಲಾದವು ದೇವತೆಗಳಿಂದ ಆಗಿರುವ ಉಪಕಾರ. ಯಜ್ಞಗಳಿಂದಲೂ ದೇವತಾ ರ್ಚನೆಗಳಿಂದಲೂ ಇದನ್ನು ತೀರಿಸಬೇಕು.

ವನೋತ್ತಮೇ ವ್ಯಾಲಮೃಗಾನುನಾದಿತೇ
ತದಾ ವಿಜಹ್ರುಃ ಸುಸುಖಂ ಜಿತೇಂದ್ರಿಯಾಃ ॥ ೩೭

ಸುರಮ್ಯಮಾಸಾದ್ಯ ತು ಚಿತ್ರಕೂಟಂ
ನದೀಂ ಚ ತಾಂ ಮಾಲ್ಯವತೀಂ ಸುತೀರ್ಥಾಮ್।
ನನಂದ ರಾಮೋ ಮೃಗಪಕ್ಷಿಜುಷ್ಟಾಂ
ಜಹೌ ಚ ದುಃಖಂ ಪುರವಿಪ್ರವಾಸಾತ್ ॥ ೩೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್‌ಪಂಚಾಶಃ ಸರ್ಗಃ

ಕಾಡುಮೃಗಗಳ ಕೂಗು ಪ್ರತಿಧ್ವನಿಸುತ್ತಿತ್ತು. ಅಂಥ ಅರಣ್ಯದಲ್ಲಿ ಜಿತೇಂದ್ರಿಯರಾದ ಆ ಮೂವರೂ ಸುಖವಾಗಿಸಂಚರಿಸುತ್ತಿದ್ದರು (೩೭). ರಮ್ಯವಾದ ಆ ಚಿತ್ರಕೂಟ ಪರ್ವತವನ್ನೂ ಅಲ್ಲಿ ಹರಿಯುತ್ತಿದ್ದ ಜಲಸಮೃದ್ಧವಾದ ಮಾಲ್ಯವತೀನದಿಯನ್ನೂ ಮೃಗಪಕ್ಷಿಗಳ ಹಿಂಡನ್ನೂ ಕಂಡು ಶ್ರೀರಾಮನು ಆನಂದಪಟ್ಟನು. ಅಯೋಧ್ಯೆಯನ್ನು ಬಿಟ್ಟುಬಂದ ದುಃಖವು ಸುಳಿಯಲಿಲ್ಲ (೩೮).

ಇಲ್ಲಿಗೆ ಶ್ರೀರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತಾರನೆಯ ಸರ್ಗ

## ೨

## ದಶ ಸಪ್ತ ಚ ವರ್ಷಾಣಿ ತವ ಜಾತಸ್ಯ ರಾಘವ

— ಪುಟ ೧೭೫

ಶ್ರೀರಾಮನು ವನವಾಸಕ್ಕೆ ಹೊರಡುವಾಗ ಕೌಸಲ್ಯೆಯು ಅವನೊಡನೆ "ರಾಮ, ನೀನು ಹುಟ್ಟಿದಮೇಲೆ, ನನ್ನ ದುಃಖವು ಪರಿಹಾರವಾದೀತೆಂದು ಹದಿನೇಳು ವರ್ಷಗಳಿಂದ ಕಾದಿದ್ದೆನು" ಎಂದು ಹೇಳುತ್ತಾಳೆ. ಆ ಸಮಯದಲ್ಲಿ ಶ್ರೀರಾಮನಿಗೆ ಇಪ್ಪತ್ತೇಳು ವರ್ಷಗಳಾಗಿರಬೇಕೆಂದು ತಿಳಿದುಬರುತ್ತದೆ. ಏಕೆಂದರೆ, ಬಾಲಕಾಂಡದಲ್ಲಿ ದಶರಥನು ವಿಶ್ವಾಮಿತ್ರರೊಂದಿಗೆ 'ಊನಷೋಡಶ ವರ್ಷೋಮೇ ರಾಮೋ ರಾಜೀವಲೋಚನಃ' ಎಂದು ಹೇಳಿ, ಆಗ ಶ್ರೀರಾಮನಿಗೆ ಹದಿನೈದು ವರ್ಷಗಳೆಂದು ಸೂಚಿಸಿದ್ದಾನೆ. ಅನಂತರ ಸ್ವಲ್ಪದಿನಗಳಲ್ಲಿ ಸೀತಾವಿವಾಹವಾಯಿತು. ಸೀತೆಯು ಅಯೋಧ್ಯೆಯಲ್ಲಿ ಹನ್ನೆರಡು ವರ್ಷಗಳವರೆಗೆ ಶ್ರೀರಾಮನೊಡನೆ ಇದ್ದಳೆಂದೂ ಅನಂತರ ವನವಾಸವು ಪ್ರಾಪ್ತವಾಯಿತೆಂದೂ ಅರಣ್ಯಕಾಂಡದ ನಲವತ್ತೇಳನೆಯ ಸರ್ಗದಲ್ಲಿ ರಾವಣ!ಸಂನ್ಯಾಸಿಯೊಡನೆ ಹೇಳುವುದರಿಂದ ಗೊತ್ತಾಗುತ್ತದೆ. ಹೀಗಿರುವಾಗ ಹದಿನೇಳು ವರ್ಷಗಳೆಂಬ ಕೌಸಲ್ಯೆಯ ಮಾತು ಹೇಗೆ ಸಂಗತವಾಗುತ್ತದೆಯೆಂದು ಶಂಕೆಯಾಗಬಹುದು. ಇದಕ್ಕೆ ಸಮಾಧಾನ ವೇನೆಂದರೆ,

೧. ಜಾತಸ್ಯ- ಉಪನಯನವಾದಮೇಲೆ ಎಂದರ್ಥ, ಕ್ಷತ್ರಿಯನಿಗೆ 'ಏಕಾದಶೇ ವಾ ರಾಜನ್ಯಮ್' ಎಂಬ ಶಾಸ್ತ್ರದಂತೆ ಗರ್ಭೈಕಾದಶವರ್ಷದಲ್ಲಿ ಉಪನಯನ. ಎಂದರೆ ಹುಟ್ಟಿದ ಹತ್ತನೆಯ ವರ್ಷದಲ್ಲಿ ಉಪನಯನ. ದ್ವಿಜನಾದ ಕ್ಷತ್ರಿಯನಿಗೆ ಉಪನಯನವೇ ಮುಖ್ಯಜನ್ಮ. ಆದ್ದರಿಂದ 'ನಿನಗೆ ಉಪನಯನವಾದಮೇಲೆ ಹದಿನೇಳು ವರ್ಷಗಳು' ಎಂದು ಕೌಸಲ್ಯೆಯ ಅಭಿಪ್ರಾಯ. ಉಪನಯನದ ಹೊತ್ತಿಗೆ ರಾಮನು ಪ್ರಬುದ್ಧನಾಗಿರುತ್ತಾನೆ ಎಂಬ ಆಶಯವನ್ನಿಟ್ಟುಕೊಂಡು 'ಆ ಸಮಯದಿಂದ ನಾನು ಆಸೆಯನ್ನಿಟ್ಟುಕೊಂಡಿದ್ದೆ' ಎಂದು ಕೌಸಲ್ಯೆಯು ಹೇಳಿದ್ದಾಳೆ.

೨. ಋಷಿಋಣ:- ವೇದವನ್ನು ಅಧ್ಯಯನಪರಂಪರೆಯಿಂದ ಉಳಿಸಿ ಮಹಾಗ್ರಂಥಗಳನ್ನು ರಚಿಸಿ ಜ್ಞಾನಪ್ರಸಾರವನ್ನು ಋಷಿಗಳು ಮಾಡಿದ್ದಾರೆ. ಇವುಗಳನ್ನು ಅಭ್ಯಾಸಮಾಡಿ ಶಿಷ್ಯರಿಗೆ ಬೋಧಿಸುತ್ತ ಈ ಪರಂಪರೆಯನ್ನು ಉಳಿಸುವುದರಿಂದ ಋಷಿಗಳ ಉಪಕಾರವನ್ನು ತೀರಿಸಬೇಕು.

೩. ಪಿತೃಋಣ:- ಪಿತೃಗಳು ಪುಣ್ಯಸಾಧನವಾದ ಈ ಶರೀರವನ್ನು ಕೊಟ್ಟು ಪೋಷಿಸಿ ಕುಲಸಂಪ್ರದಾಯವನ್ನೂ ಕುಲವಿದ್ಯೆಯನ್ನೂ ಉಳಿಸಲು ಸಹಾಯಮಾಡಿದ್ದಾರೆ. ಉತ್ತಮವಾದ ಸಂತಾನವನ್ನು ಪಡೆದುಪೋಷಿಸಿ ವಂಶದ ಪೀಳಿಗೆಯನ್ನು ರಕ್ಷಿಸುವುದರಿಂದ ಪಿತೃಋಣವನ್ನು ತೀರಿಸಬೇಕು.

೪. ಬ್ರಾಹ್ಮಣಋಣ:- ಶಾಸ್ತ್ರಮರ್ಯಾದೆಯನ್ನು ತಿಳಿದು ಚೌಲ ಉಪನಯನಾದಿ ಸಂಸ್ಕಾರಗಳನ್ನು ಮಾಡಿಸುವುದರಿಂದಲೂ, ಲೋಕಕಲ್ಯಾಣಾರ್ಥ ವಾಗಿ ಯಜ್ಞಾದಿಗಳನ್ನು ನಡೆಸುವುದರಿಂದಲೂ, ಧರ್ಮಮಾರ್ಗವನ್ನು ಬೋಧಿಸಿ ಜ್ಞಾನಪ್ರಸಾರವನ್ನು ಮಾಡುವುದರಿಂದಲೂ, ರಾಜ್ಯನಿರ್ವಾಹಕರು ಧರ್ಮಮಾರ್ಗ ದಿಂದ ಪ್ರಜಾರಕ್ಷಣೆ ಮಾಡುವಂತೆ ಸೂಚನೆ ಕೊಡುವುದರಿಂದಲೂ ಬ್ರಾಹ್ಮಣವರ್ಗ ದಿಂದ ಜನರಿಗೆ ಉಪಕಾರವಾಗುತ್ತದೆ. ದಾನಮಾನಗಳಿಂದ ಈ ಉಪಕಾರವನ್ನು ತೀರಿಸಬೇಕು.

೫. ಆತ್ಮಋಣ:- ಆತ್ಮನೆಂದರೆ ಶರೀರೇಂದ್ರಿಯಗಳಿಂದ ವಿಶಿಷ್ಟನಾದ ಜೀವ. ಶರೀರವೂ ಇಂದ್ರಿಯಗಳೂ ಜೀವನ ಉನ್ನತಿಗೆ ಸಾಧನವಾಗಿವೆ. 'ಶರೀರಮಾದ್ಯಂ ಖಲು ಧರ್ಮಸಾಧನಮ್' ಇಂದ್ರಿಯಗಳೆಲ್ಲವೂ ಜ್ಞಾನಾರ್ಜನೆಗೂ ಪುಣ್ಯಕರ್ಮಗಳಿಗೂ ಸಾಧನವಾಗಿದೆ. ಆರೋಗ್ಯವನ್ನು ಕಾಪಾಡಿಕೊಂಡು ಭೋಗವಸ್ತುಗಳಿಂದ ಶರೀರೇಂದ್ರಿಯಗಳನ್ನೂ ಜೀವಾತ್ಮನನ್ನೂ ತೃಪ್ತಿಪಡಿಸು ವುದರಿಂದ -ಸುಖಪಡುವುದರಿಂದ ಆತ್ಮಋಣವು ತೀರುತ್ತದೆ.

ಸುಖಪಡುವುದು ತಪ್ಪಲ್ಲ. ಅದು ಆವಶ್ಯಕವೂ ಹೌದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ದುರ್ಮಾರ್ಗದಿಂದ ಸುಖವನ್ನು ಬಯಸಬಾರದು. 'ಅನಿಷಿದ್ಧಸುಖತ್ಯಾಗೀ ಪಶುರೇವ ನ ಸಂಶಯಃ.'

೨. 'ವಾಕ್ಯೇ ವಾಕ್ಯೈಕದೇಶಪ್ರಯೋಗಃ' ಎಂಬ ಒಂದು ನ್ಯಾಯವಿದೆ. ಪೂರ್ಣವಾದ ಒಂದು ವಾಕ್ಯವನ್ನೊ ಶಬ್ದವನ್ನೊ ಹೇಳುವುದಕ್ಕೆ ಬದಲಾಗಿ ಅರ್ಧವಾಕ್ಯವನ್ನೊ ಶಬ್ದದ ಏಕದೇಶವನ್ನೊ ಹೇಳುತ್ತಾರೆ. 'ನೀನು ಮನೆಗೆಹೋಗು' ಎನ್ನುವಾಗ "ಹೋಗು" ಎಂದಿಷ್ಟೇ ಹೇಳಬಹುದು. 'ಭೀಮಸೇನ'ಎನ್ನುವಾಗ 'ಭೀಮ'ಎಂದಿಷ್ಟೇ ಹೇಳಬಹುದು. ಹಾಗೆ ಪ್ರಕೃತದಲ್ಲಿ 'ದ್ವಿರ್ದಶ ಸಪ್ತ ಚ ವರ್ಷಾಣಿ' ಎನ್ನುವುದಕ್ಕೆ ಬದಲೀಗಿ 'ದಶಸಪ್ತ ಚ ವರ್ಷಾಣಿ' ಎಂದು ಕೌಸಲ್ಯೆ ಹೇಳಿದ್ದಾಳೆ. ದ್ವಿರ್ದಶ ಎಂದರೆ ಇಪ್ಪತ್ತು. ದ್ವಿರ್ದಶ+ಸಪ್ತ=ಇಪ್ಪತ್ತೇಳು. ದುಃಖಾರ್ತಳಾದ ಕೌಸಲ್ಯೆಯು ಹೀಗೆ ಅಪೂರ್ಣವಾಗಿ ಮಾತನಾಡುವುದು ಕಾವ್ಯದಲ್ಲಿ ಒಂದು ಗುಣ.

೩. ಮಕ್ಕಳು ಸ್ವಲ್ಪ ದೊಡ್ಡವರಾದಮೇಲೆ ಅವರ ವಿಷಯದಲ್ಲಿ ಭವಿಷ್ಯದ ಆಸೆಯನ್ನು ಕಲ್ಪಿಸಿಕೊಳ್ಳುವುದು ತಂದೆತಾಯಿಗಳಿಂದ ಸಹಜ. ಆದ್ದರಿಂದ ಕಳೆದ ಎಂಟು ಹತ್ತು ವರ್ಷಗಳಿಂದ ನನ್ನ ದುಃಖ ಪರಿಹಾರವಾದೀತೆಂದು ಆಸೆಯನ್ನಿಟ್ಟುಕೊಂಡಿದ್ದೆನು' ಎಂದು ಕೌಸಲ್ಯೆಯ ಅಭಿಪ್ರಾಯ. 'ದಶ ಸಪ್ತ ಚ' ಎಂಬುದಕ್ಕೆ ಇದೇ ತಾತ್ಪರ್ಯ. ಹದಿನೇಳು ಎಂಬ ಒಟ್ಟು ಸಂಖ್ಯೆ ವಿವಕ್ಷಿತವಲ್ಲ.

ಬಾಲಕಾಂಡದ ಅನುಬಂಧದಲ್ಲಿ ೪೩೧ನೆಯ ಪುಟದಲ್ಲಿ ಹೆಚ್ಚಿನ ವಿಚಾರವಿದೆ. ನೋಡಿಕೊಳ್ಳಬಹುದು.

---